ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ನಂ—೧೦

ಶ್ರೀ ವ್ಯಾಸಮಹರ್ಷಿಪ್ರಣೀತಂ

ಶ್ರೀ ಕಾಲಿಕಾಪುರಾಣಂ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದವಿವರಣೆಗಳೊಡನೆ)

ಮೂರನೆಯ ಭಾಗ

(೫೩—೭೫ ಅಧ್ಯಾಯಗಳು)

ಅನುವಾದಕ:

ಹಾಸನದ ಪಂಡಿತ್ ವೆಂಕಟರಾವ್

ಮೈಸೂರು

ಶ್ರೀ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್

೧೯೪೪

॥ ಶ್ರೀ ಕಾಳಿಕಾಂಬಾಯೈನಮಃ ॥

ನುಮಃ ಕಾಮೇಶ್ವರೀಂ ದೇವೀಂ ಮಹಾಮಾಯಾಂ ಜಗನ್ಮಯಿಾಂ ।
ಯಾ ಭೂತ್ವಾ ಪ್ರಕೃತಿರ್ನಿತ್ಯಂ ತನೋತಿ ಜಗದಾದ್ಯತಾಂ ॥
ಪ್ರಸೀದ ತ್ವಂ ಮಹಾದೇವಿ ಪ್ರಸನ್ನಾಯಾಂ ಶುಭೇ ತ್ವಯಿ ।
ದೇವಾಃ ಸರ್ವೇ ಪ್ರಸೀದಂತಿ ಚತುರ್ವರ್ಗಪ್ರದೇಽನಘೇ ॥

ಪೀಠಿಕೆ

॥ ಶ್ರೀ ಕಾಲಿಕಾಂಬಾಯೈ ನಮಃ ॥

ಪುರಾಣಗಳಲ್ಲಿ ಪ್ರತಿಪಾದ್ಯವಾಗಿರುವ ವಿಷಯಗಳನ್ನು ಕಥಾನಿರೂಪಣ, ದೇವತೋಪಾಸನ, ತತ್ತ್ವಬೋಧನ ಎಂದು ಮೂರು ವಿಧವಾಗಿ ವಿಭಾಗ ಮಾಡಬಹುದು. ಮೊದಲಿನ ಎರಡು ಭಾಗಗಳೂ ಮೂರನೆಯದಾದ ತತ್ತ್ವವಿವರಣೆಗೆ ಸಾಧನಭೂತಗಳು. ಕೇವಲ ತತ್ತ್ವವನ್ನೇ ಬೋಧಿಸುವ ಉಪನಿಷದಾದಿಗ್ರಂಥಗಳು ವಿಶೇಷವಾಗಿದ್ದರೂ ಅವುಗಳು ಸಾಮಾನ್ಯಜನರಿಗೆ ಸುಲಭವಾಗಿ ತಿಳಿಯಲು ಶಕ್ಯವಲ್ಲ. ಆದರೆ ಪುರಾಣಗಳಲ್ಲಿ ರಸಭರಿತವಾದ ಕಥೆಗಳನ್ನೂ, ಯುಕ್ತಿಯುಕ್ತವಾದ ಉದಾಹರಣೆಗಳನ್ನೂ, ಸಂದರ್ಭಾನುಸಾರ ಉಪಯೋಗಿಸಿ, ಮನಸ್ಸಿನಮೇಲೆ ಪರಿಣಾಮವಾಗುವಂತೆ ಬಹುಚೆನ್ನಾಗಿ ತತ್ತ್ವವಿವರಣೆಯು ಮಾಡಲ್ಪಟ್ಟಿರುವುದಲ್ಲದೆ, ಮನಸ್ಸಿಗೆ ಚೆನ್ನಾಗಿ ಮುಂದಟ್ಟಾಗಲೆಂದು ಒಂದುಬಾರಿ ಹೇಳಿದ ವಿಷಯವನ್ನೇ ಪ್ರಕಾರಾಂತರಗಳಿಂದಲೂ, ಬೇರೆ ಬೇರೆ ಕಥೆಗಳಿಂದಲೂ, ಸಂವಾದಗಳಿಂದಲೂ ಪುನಃ ಪುನಃ ವಿವರಿಸಿರುವುದು, ಪುರಾಣಗಳ ಒಂದು ವಿಶೇಷಗುಣವಾಗಿದೆ. ಈ ಪುರಾಣಗಳಲ್ಲಿ ಹೇಳಿರುವ ಕಥೆಗಳು ಉದಾಹರಣೆಗಾಗಿ ಕಲ್ಪಿತವಾದವುಗಳೆಂದು ಭಾವಿಸಬಾರದು. ಆ ಕಥಾಭಾಗಗಳು ವೇದಗಳಲ್ಲಿ ಸಂಕ್ಷೇಪರೂಪದಲ್ಲಿ ಉಕ್ತವಾಗಿರುವವು. ಅವುಗಳೇ ಪುರಾಣಗಳಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿರುವವು.

ಇನ್ನು ಉಪಾಸನಾಭಾಗದ ವಿಚಾರದಲ್ಲಿ, ಪ್ರತಿಯೊಂದು ಪುರಾಣದಲ್ಲಿಯೂ ಆಯಾ ದೇವತೆಯ ಪೂಜಾವಿಧಾನವೇ ಮೊದಲಾದ ಕ್ರಮಗಳು ವಿಶೇಷರೀತಿಯಲ್ಲಿಯೂ, ಇತರ ದೇವತೆಗಳ ಆರಾಧನೆಯು ಸಾಮಾನ್ಯ ರೀತಿಯಲ್ಲಿಯೂ, ವರ್ಣಿತವಾಗಿರುವವು. ವ್ಯಾಸಮಹರ್ಷಿಪ್ರಣೀತವಾದ ಹದಿನೆಂಟು ಮಹಾಪುರಾಣಗಳಲ್ಲಿ ದೇವೀಭಾಗವತವೂ, ಉಪಪುರಾಣಗಳಲ್ಲಿ ಕಾಲಿಕಾಪುರಾಣವೂ, ಪರದೇವತೆಯಾದ ದೇವಿಯ ಮಹಿಮೆಯನ್ನು ವಿಶದಗೊಳಿಸುವವು. ದೇವೀಭಾಗವತದಲ್ಲಿ ಜಗತ್ಕಲ್ಯಾಣಕ್ಕಾಗಿ ದೇವಿಯು ಅನೇಕ ರೂಪಗಳನ್ನು ಧರಿಸಿ, ನಡೆಸಿದ ಅದ್ಭುತ ಚರಿತ್ರೆಗಳೂ, ಸಮಯಾನುಸಾರ ತತ್ತ್ವನಿರೂಪಣೆಗಳೂ ವರ್ಣಿತವಾಗಿವೆ. ಕಾಲಿಕಾ

ಪುರಾಣದಲ್ಲಿ ಮೊದಲಿನ ೫೨ ಅಧ್ಯಾಯಗಳಲ್ಲಿ, ಈ ಪುರಾಣಕ್ಕೆ ಪೀಠಿಕಾರೂಪದಂತೆ ಜಗನ್ಮಾತೆಯ ಅವತಾರ ಕಥನವೂ, ೫೩ನೇ ಅಧ್ಯಾಯದಿಂದ ೮೦ನೇ ಅಧ್ಯಾಯದ ವರೆಗೆ ದೇವಿಯ ಉಪಾಸನಾಕ್ರಮಗಳೂ ವಿಶೇಷರೀತಿಯಲ್ಲಿ ಬಹು ವಿಸ್ತಾರವಾಗಿ ನಿರೂಪಿಸಲ್ಪಟ್ಟಿರುವುವು. ದೇವಿಯ ಪೂಜಾಕ್ರಮದಲ್ಲಿ ಅನುಸರಿಸಬೇಕಾದ ವಿಧಿನಿಯಮಗಳನ್ನೂ, ಪೂಜೋಪಕರಣಗಳ ಸ್ವರೂಪವನ್ನೂ ಇಷ್ಟು ವಿಸ್ತಾರವಾಗಿ ಯಾವ ಗ್ರಂಥದಲ್ಲಿಯೂ ವಿವರಿಸಿರುವುದಿಲ್ಲ. ಆದುದರಿಂದ ದೇವಿಯ ಆರಾಧಕರಿಗೆ ಈ ಗ್ರಂಥದಿಂದ ಬಹು ಸಹಾಯವಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ದೇವಿಯ ನಾನಾರೂಪಗಳಲ್ಲಿ, ಕಾಮಾಖ್ಯಾ, ತ್ರಿಪುರಾ, ಕಾಮೇಶ್ವರೀ, ಕಾಲೀ, ಚಂಡಿಕಾ, ದುರ್ಗಾ, ಶಾರದಾ, ಮೊದಲಾದ ಪ್ರತಿಯೊಂದು ಮೂರ್ತಿಯ ಪೂಜಾನಿಯಮಗಳನ್ನೂ ವಿವರಿಸಿರುವುದಲ್ಲದೆ, ಕಾಳಿಕಾದೇವಿಯ ಉಪಾಸನೆಯಲ್ಲಿ ಅನುಸರಿಸಬೇಕಾದ ಕ್ರಮಗಳು ವಿಶೇಷರೀತಿಯಿಂದ ಹೇಳಲ್ಪಟ್ಟಿರುವವು. ಆದರೂ ಈ ನಿಯಮಗಳಲ್ಲಿ ಸಾಮಾನ್ಯವಾದವುಗಳನ್ನು ಮಹಾಮಾಯಾಕಲ್ಪತಂತ್ರ, ದುರ್ಗಾತಂತ್ರ, ವೈಷ್ಣವೀ ತಂತ್ರವೆಂಬ ಗ್ರಂಥಗಳಲ್ಲಿ ಹೇಳಿರುವುದನ್ನು ಬಿಟ್ಟು ವಿಶೇಷವಾದ ನಿಯಮಗಳನ್ನು ಮಾತ್ರ ಹೇಳಿರುವುದು. ಆದುದರಿಂದ ಆ ಗ್ರಂಥಗಳಲ್ಲಿ--ಅದರಲ್ಲಿಯೂ ವೈಷ್ಣವೀ ತಂತ್ರದಲ್ಲಿ—ಹೇಳಿರುವುದನ್ನೇ ಆಚರಿಸಬೇಕೆಂದು ನಿರೂಪಿಸಿರುವುದರಿಂದ ವೈಷ್ಣವೀ ತಂತ್ರವೂ ಸಾಧಕರಿಗೆ ಅವಶ್ಯಕವಾಗಿರುವುದು. ಈ ಗ್ರಂಥಗಳು ಈಗ ಎಲ್ಲಿಯೂ ದೊರಕುವುದಿಲ್ಲ. ಆದುದರಿಂದ ಈ ಗ್ರಂಥದ ಪರಿವರ್ತನೆಯಲ್ಲಿ ಶ್ರೀ ವಿದ್ಯಾರ್ಣವತಂತ್ರ, ಕಾಲೀವಿಲಾಸತಂತ್ರ, ದುರ್ಗಾತಂತ್ರ, ಕುಲಾರ್ಣವತಂತ್ರ, ಶಾರದಾತಿಲಕ, ಮಂತ್ರಾಭಿದಾನ, ಮಂತ್ರಮಹೌದಧಿ, ಮೊದಲಾದ ಗ್ರಂಥಗಳನ್ನು ಸಹಾಯಗ್ರಂಥಗಳನ್ನಾಗಿ ಉಪಯೋಗಿಸಿರುತ್ತೇನೆ.

ಮಾತೃಕೆಗಾಗಿ ಉಪಯೋಗಿಸಿರುವ ಈ ಕಾಲಿಕಾಪುರಾಣವು, ಬೊಂಬಾಯಿನ ವೆಂಕಟೇಶ್ವರ ಸ್ಟೀಮ್ ಪ್ರೆಸ್ಸಿನಲ್ಲಿ ದೇವನಾಗರಿಯ ಅಕ್ಷರದಲ್ಲಿ ಮುದ್ರಿತವಾಗಿರುವುದು. ಇದರಲ್ಲಿ ಲೆಕ್ಕವಿಲ್ಲದಷ್ಟು ತಪ್ಪುಗಳೂ, ಮುದ್ರಣಸ್ಖಾಲಿತ್ಯಗಳೂ ಇರುವುವು. ಈ ಪುಸ್ತಕವನ್ನು ಬಿಟ್ಟರೆ ಬೇರೆ ಪುಸ್ತಕವಾಗಲಿ, ಲಿಖಿತಪ್ರತಿಯಾಗಲಿ, ವ್ಯಾಖ್ಯಾನ ಮುಂತಾದ ಸಹಾಯವಾಗಲೀ ಯಾವುದೂ ದೊರೆಯುವುದಿಲ್ಲ. ತಂತ್ರಶಾಸ್ತ್ರವನ್ನು ಬಲ್ಲವರೂ ಸಹ ಕೇವಲ ವಿರಳವಾಗಿರುವುದರಿಂದ ಈ ಗ್ರಂಥರಚನೆಗೆ ತಕ್ಕಷ್ಟು ಅನು

ಕೂಲಗಳು ಒದಗಲಿಲ್ಲ. ಆದರೂ ಸಾಧ್ಯವಾದಮಟ್ಟಿಗೂ ಗ್ರಂಥವನ್ನು ತಪ್ಪಿಲ್ಲದಂತೆ ಶೋಧಿಸಿ, ಮಂತ್ರಶಾಸ್ತ್ರಜ್ಞರಿಂದ ವಿಷಯಸಂಗ್ರಹಮಾಡಿ, ಬರೆದಿರುತ್ತೇನೆ. ಇತರ ಮಂತ್ರಶಾಸ್ತ್ರಗಳ ಬೀಜಕೋಶಕ್ಕೂ ಈ ವೈಷ್ಣವೀತಂತ್ರದ ಬೀಜನಿಘಂಟಿಗೂ ಬಹಳ ವ್ಯತ್ಯಾಸವಿರುವುದರಿಂದಲೂ, ಆ ಬೀಜಕೋಶವು ದೊರಕದೇ ಇರುವುದರಿಂದಲೂ, ಬೀಜಾಕ್ಷರಗಳಿಂದ ಕೂಡಿದ ಮಂತ್ರೋದ್ಧಾರಕ್ರಮವನ್ನು ವಿಸ್ತಾರವಾಗಿ ವಿವರಿಸಲು ಸಾಧ್ಯವಾಗಲಿಲ್ಲ. ಮಂತ್ರಗಳನ್ನು ಜಪಮಾಡತಕ್ಕವರು ಆಯಾ ಮಂತ್ರಗಳನ್ನು ಗುರುಮುಖದಿಂದ ಚೆನ್ನಾಗಿ ತಿಳಿದೇ ಜಪ ಮಾಡಬೇಕು.

ಮುದ್ರಾಸ್ವರೂಪವನ್ನು ಚಿತ್ರಸಮೇತವಾಗಿ ವಿವರಿಸಬೇಕೆಂದು ಉದ್ದೇಶವಿದ್ದರೂ, ಕಾರಣಾಂತರದಿಂದ ಚಿತ್ರಗಳನ್ನು ಈ ಗ್ರಂಥದಲ್ಲಿ ಸೇರಿಸಲು ಅವಕಾಶವಾಗಲಿಲ್ಲ. ಈ ಗ್ರಂಥದಲ್ಲಿ ೫೫ ಮುದ್ರೆಗಳ ಲಕ್ಷಣವನ್ನು ಮಾತ್ರ ವಿವರಿಸಿರುತ್ತೆ. ಬಾಕಿ ೫೩ ಮುದ್ರೆಗಳು ದೇವತಾಕಾರ್ಯಗಳಲ್ಲಿ ಉಪಯೋಗವಿಲ್ಲದ್ದರಿಂದ ಅವುಗಳ ವಿವರಣೆಯನ್ನು ಇಲ್ಲಿ ಹೇಳಿರುವುದಿಲ್ಲ. ಈ ಕಾರಣಕ್ಕಾಗಿ ಎಲ್ಲ ಮುದ್ರೆಗಳ ಲಕ್ಷಣವನ್ನೂ, ಅವುಗಳ ಚಿತ್ರಗಳನ್ನೂ, ಉಪಯೋಗವನ್ನೂ, ಭೇದಪ್ರಭೇದಗಳನ್ನೂ ವಿಶದವಾಗಿ ವಿವರಿಸಿ, ಅದನ್ನೇ ಒಂದು ಪ್ರತ್ಯೇಕ ಗ್ರಂಥವನ್ನಾಗಿ ಪ್ರಕಟಿಸಬೇಕೆಂದು ಉದ್ದೇಶವಿರುತ್ತೆ. ಈ ವಿಧವಾದ ಗ್ರಂಥವನ್ನು ಬರೆಯಲು ಶಾಸ್ತ್ರಜ್ಞಾನವೂ, ಚಿತ್ರಕಲೆಯಲ್ಲಿ ಕುಶಲತೆಯೂ, ಶಿಲ್ಪಶಾಸ್ತ್ರಪಾಂಡಿತ್ಯವೂ, ತಂತ್ರಶಾಸ್ತ್ರಪರಿಚಯವೂ ಅವಶ್ಯಕವಾಗಿ ಬೇಕಾಗಿರುವವು. ಈ ವಿಷಯದಲ್ಲಿ ಮೈಸೂರು ರಾಜಧಾನಿಯಲ್ಲಿರುವ ಶ್ರೀ ಜಗದ್ಗುರು ನಾಗಲಿಂಗ ಮಠಾಧಿಪತಿಗಳಾದ ಶಿಲ್ಪಿಸಿದ್ಧಾಂತಿ ಶ್ರೀ ಶ್ರೀ ಸಿದ್ಧಲಿಂಗಸ್ವಾಮಿಗಳವರನ್ನು ಬಿಟ್ಟರೆ ಮತ್ತೊಬ್ಬರು ಈ ದೇಶದಲ್ಲಿಯೇ ಇಲ್ಲವೆಂದರೆ ಅತಿಶಯೋಕ್ತಿಯಲ್ಲ. ಈ ಮಹನೀಯರು ಈ ಗ್ರಂಥರಚನೆಯ ಕಾರ್ಯದಲ್ಲಿ ನನಗೆ ಬಹುವಿಧವಾದ ಸಹಾಯವನ್ನು ಮಾಡಿರುವುದಲ್ಲದೆ, ಲೋಕೋಪಕಾರಕ್ಕಾಗಿ ಈ ಮುದ್ರಾಲಕ್ಷಣವೆಂಬ ಗ್ರಂಥರಚನೆಯನ್ನೂ ಕೈಗೊಂಡು, ಸಾಧಕವೃಂದಕ್ಕೆ ಮಹದುಪಕಾರವನ್ನು ಮಾಡಿರುವರು. ಇಷ್ಟರಲ್ಲೇ ಆ ಗ್ರಂಥವು ಅಂದವಾಗಿ ಮುದ್ರಿತವಾಗಿ, ಸಾಧಕರ ಹಸ್ತಗತವಾಗುವುದರಲ್ಲಿ ಸಂದೇಹವಿಲ್ಲ.

ಮೂಲಗ್ರಂಥವನ್ನು ಸ್ವಲ್ಪವೂ ಬಿಡದಂತೆ ಕನ್ನಡ ಅನುವಾದ ಸಹಿತವಾಗಿ ಯಾವ ಪುರಾಣವೂ (ಭಾಗವತ ಒಂದನ್ನು ಬಿಟ್ಟರೆ) ಇಮಟಿರೆಗೆ ಕನ್ನಡದಲ್ಲಿ ಮುದ್ರಿತ

ವಾಗಿಲ್ಲ. ಸಂಸ್ಕೃತಭಾಷೆಯಲ್ಲಿ ಪರಿಚಯವಿಲ್ಲದ ಪ್ರಜಾಕೋಟಿಗಳಿಗೆ ಉಪಕಾರವಾಗಲೆಂದು, ದಯಾಳುಗಳೂ, ಪ್ರಜಾವತ್ಸಲರೂ, ವಿದ್ವದ್ಜ್ಞಾನಪೂರ್ಣರೂ, ದೈವಭಕ್ತಿಯುತರೂ, ಆಗಿರುವ ನಮ್ಮನ್ನಾಳುವ **ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು** ಅಪ್ಪಣೆಮಾಡಿರುವ ಮೇರೆಗೆ ಈ ಗ್ರಂಥವನ್ನು ಯಥಾಮತಿ ಬರೆದಿರುತ್ತೇನೆ. ಇದರಲ್ಲಿರಬಹುದಾದ ಲೋಪದೋಷಗಳನ್ನು ಪ್ರಾಜ್ಞರಾದವರು ಮನ್ನಿಸಬೇಕಾಗಿ ವಿನಯದಿಂದ ಬೇಡುತ್ತೇನೆ.

ಜಗನ್ಮಾತೆಯಾದ ಶ್ರೀ ಚಾಮುಂಡಾಂಬಿಕೆಯು, ಈಗ ಯುದ್ಧದಿಂದ ಜಗತ್ತಿಗೊದಗಿರುವ ವಿಪತ್ಪರಂಪರೆಯನ್ನು ತಪ್ಪಿಸಿ, ರಾಜವರ್ಗದಿಂದ ಕೂಡಿದ ನಮ್ಮನ್ನಾಳುವ ಮಹಾಪ್ರಭುಗಳವರಿಗೂ, ಅವರ ಪ್ರಜಾವರ್ಗಕ್ಕೂ, ರಾಷ್ಟ್ರಕ್ಕೂ ಸಹ ಶಾಂತಿಸಮಾಧಾನಗಳು ಉಂಟಾಗಿ, ಸುಖದಿಂದಿರುವಂತೆ ಅನುಗ್ರಹಿಸಲೆಂದು ಜಗದಂಬಿಕೆಯನ್ನು ಅನನ್ಯ ಭಾವದಿಂದ ಪ್ರಾರ್ಥಿಸುತ್ತೇನೆ.

ಮೈಸೂರು,
ತಾರಣ ಸಂವತ್ಸರ ವೈಶಾಖ ಬ|| ದಶಮಿ
೧೭-೫-೧೯೪೪.

ಹಾಸನದ ಪಂಡಿತ್ ವೆಂಕಟರಾವ್.

ಶ್ರೀ ಕಾಲಿಕಾಪುರಾಣದಲ್ಲಿ ಮೂರನೆಯ ಭಾಗದ
ವಿಷಯಾನುಕ್ರಮಣಿಕೆ

ಪುಟ ಸಂಖ್ಯೆ

ಐವತ್ತಮೂರನೆಯ ಅಧ್ಯಾಯ—

ತಂದೆತಾಯಿಗಳ ಅನಾದರಣೆಯಿಂದ ಜಿಗುಪ್ಸೆಯನ್ನು ಹೊಂದಿ ವೇತಾಲಭೈರವರು ತಪಸ್ಸಿಗಾಗಿ ವನಕ್ಕೆ ಹೋಗುವುದು—ಕಾಪೋತಮುನಿಯು ತನ್ನ ಪುತ್ರರನ್ನೂ ಪತ್ನಿಯಾದ ಚಿತ್ರಾಂಗದೆಯನ್ನೂ ಕಾಪಾಡುವಂತೆ ಚಂದ್ರಶೇಖರರಾಜನಿಗೆ ಒಪ್ಪಿಸಿ ತಪಸ್ಸಿಗಾಗಿ ವನಕ್ಕೆ ಹೋಗುವುದು. ವನದಲ್ಲಿ ವೇತಾಲಭೈರವರು ವಸಿಷ್ಠಮುನಿಯನ್ನು ಸಂಧಿಸಿ, ಆ ಮುನಿಯಿಂದ ಪರಶಿವನನ್ನು ಆರಾಧಿಸುವ ಕ್ರಮಗಳ ಉಪದೇಶವನ್ನು ಪಡೆಯುವುದು—ಪರಮೇಶ್ವರನ ಪಂಚವಕ್ತ್ರಗಳ ಸ್ವರೂಪನಿರೂಪಣೆಯು—ವಸಿಷ್ಠಮುನಿಯಿಂದ ಮಂತ್ರೋಪದೇಶವನ್ನು ಹೊಂದಿ ವೇತಾಲಭೈರವರು ನಾಟಕಾಚಲಕ್ಕೆ ತೆರಳಿ, ಅಲ್ಲಿ ಶಂಕರನನ್ನು ಆರಾಧಿಸುವುದು—ಶಂಕರನು ವೇತಾಲಭೈರವರಿಗೆ ಪ್ರತ್ಯಕ್ಷನಾಗಿ, ಜಗನ್ಮಾತೆಯಾದ ದೇವಿಯನ್ನು ಕಲ್ಪೋಕ್ತಕ್ರಮಗಳಿಂದ ಆರಾಧಿಸುವಂತೆ ಹೇಳುವುದು. 1-45

ಐವತ್ತನಾಲ್ಕನೆಯ ಅಧ್ಯಾಯ—

ಶಂಕರನು ವೇತಾಲಭೈರವರಿಗೆ ಆದಿಮಾಯೆಯನ್ನು ಆರಾಧಿಸುವ ಕ್ರಮವನ್ನು ಉಪದೇಶಿಸುವುದು—ವೈಷ್ಣವೀದೇವಿಯ ಅಷ್ಟಾಕ್ಷರೀಮಂತ್ರವಿವರಣೆಯು—ಮಂಡಲರಚನೆಯ ಕ್ರಮವು 46-53

ಐವತ್ತೈದನೆಯ ಅಧ್ಯಾಯ—

ಕಲಶಸ್ಥಾಪನಕ್ರಮ — ದೇಹಶುದ್ಧಿ — ದೇವಿಯ ಧ್ಯಾನಕ್ರಮ—ಅಷ್ಟಾಕ್ಷರೀ ಮಂತ್ರದಿಂದ ಅಂಗನ್ಯಾಸಕರನ್ಯಾಸಗಳು. 54-62

ಪುಟ ಸಂಖ್ಯೆ

ಐವತ್ತಾರನೆಯ ಅಧ್ಯಾಯ—

ದ್ವಾರಪಾಲಪೂಜೆ — ಪೀಠಪೂಜೆ — ಷೋಡಶೋಪಚಾರ ಪೂಜೆ ಚತುಷ್ಷಷ್ಟಿಯೋಗಿನಿಯರ ಪೂಜೆ—ಅಂಗಪೂಜೆ ಇತ್ಯಾದಿ. 63-72

ಐವತ್ತೇಳನೆಯ ಅಧ್ಯಾಯ—

ಬಲಿದಾನನಿರೂಪಣ — ಖಡ್ಗಪೂಜೆ — ಬಲಿದಾನ—ಜಪಕ್ರಮ—ಜಪಮಾಲೆಯ ಲಕ್ಷಣ—ನಿರ್ಮಾಲ್ಯ ವಿಸರ್ಜನ—ಹೋಮ—ಪುರಶ್ಚರಣ ಫಲ—ಜಪಪೂಜಾಕಾಲಗಳಲ್ಲಿ ಅನುಸರಿಸಬೇಕಾದ ಕೆಲವು ನಿಯಮಗಳು 72-95

ಐವತ್ತೆಂಟನೆಯ ಅಧ್ಯಾಯ—

ಮಹಾಮಾಯಾಮಂತ್ರಕವಚನಿರೂಪಣ–ಕವಚಪಠನದ ಫಲಶ್ರುತಿ 96-113

ಐವತ್ತೊಂಭತ್ತನೆಯ ಅಧ್ಯಾಯ –

ಅಂಗಮಂತ್ರನಿರೂಪಣ — ಪೂಜಾಸಾಮಗ್ರಿಗಳ ಶುದ್ಧಿ — ಆಧಾರ ಮಂತ್ರಸ್ವರೂಪ — ಮಾತೃಕಾನ್ಯಾಸ—ಹಸ್ತಶುದ್ಧಿ —ಪ್ರಾಸಾದ ಮಂತ್ರ—ಅಮೃತೀಕರಣ—ದಹನಪ್ಲವನ ಮೊದಲಾದ ಭೂತ ಶುದ್ಧಿ—ಭೂಶುದ್ಧಿ—ಅಸ್ತ್ರಮಂತ್ರ—ಭೂತಾಪಸರಣ—ಅಜಪಾ ಮಂತ್ರಧ್ಯಾನ—ಆದಿತ್ಯಬೀಜ—ಯೋಗಪೀಠಧ್ಯಾನ—ಹೇರಂಬ ಬೀಜ—ಜಪಮಾಲಾ ಪ್ರಾರ್ಥನ—ದರ್ಪಣಾದಿ ಉಪಕರಣಗಳ ಬೀಜಮಂತ್ರ—ತಾರಾಬೀಜ—ಪೂಜಾನ್ಯೂನತೆಗಳಿಗಾಗಿ ದೇವಿಯನ್ನು ಕ್ಷಮಾಪಣೆ ಬೇಡುವುದು—ಮಂಡಲಪ್ರತಿಪತ್ತಿಯಿಂದ ದೇವಿಯ ವಿಸರ್ಜನೆ ಇತ್ಯಾದಿ. 114-153

ಅರವತ್ತನೆಯ ಅಧ್ಯಾಯ—

ದೇವಿಯ ಪೂಜಾಕ್ರಮದಲ್ಲಿ ಆಚರಿಸಬೇಕಾದ ಕೆಲವು ವಿಶೇಷ

ಪುಟ ಸಂಖ್ಯೆ

ನಿಯಮಗಳು — ಕಾಮಾಖ್ಯಾ ದೇವಿಯು, ಮಹಾಮಾಯೆಯ ಮೂಲಮೂರ್ತಿಯು — ಪೀಠಭೇದಗಳಿಂದ ದೇವಿಯ ಮೂರ್ತಿ ಭೇದಗಳು. ದೇವಿಯು ಒಬ್ಬಳೇ ಆದಾಗ್ಯೂ ಬೇರೆ ಬೇರೆ ರೂಪ ಗಳನ್ನು ಧರಿಸಿ ಪ್ರತ್ಯೇಕ ಮೂರ್ತಿಯಾಗಿರುವಂತೆ ಧ್ಯಾನವನ್ನೂ, ಪೂಜೆಯನ್ನೂ ಬೇರೆ ಬೇರೆ ಕ್ರಮಗಳಿಂದ ಮಾಡಬಹುದು. 154-169

ಅರವತ್ತೊಂದನೆಯ ಅಧ್ಯಾಯ—

ಮಹಾದೇವಿಯ ಅಂಗಮಂತ್ರನಿರೂಪಣೆಯು — ಮಹಿಷ ಮರ್ದಿನಿಯ ಧ್ಯಾನಕ್ರಮವು — ಪವಿತ್ರಾರೋಪಣಕ್ರಮವು — ನಾಗಹಾರ, ವನಮಾಲೆ ಮೊದಲಾದ ಪವಿತ್ರಭೇದಗಳು, ಅವುಗಳನ್ನು ರಚಿಸುವಕ್ರಮ — ಪವಿತ್ರಸಮರ್ಪಣ, ಪೂಜಾ, ಬಲಿದಾನ, ಹೋಮ—ವಿಸರ್ಜನ ಇತ್ಯಾದಿ. 170-188

ಅರವತ್ತೆರಡನೆಯ ಅಧ್ಯಾಯ—

ಶರನ್ನವರಾತ್ರಿಯಲ್ಲಿ ದೇವಿಯನ್ನು ಆರಾಧಿಸುವ ಕ್ರಮವು— ಪ್ರತಿಕಲ್ಪದಲ್ಲಿಯೂ ದೇವಿಯು ಲೋಕೋದ್ಧಾರಕ್ಕಾಗಿ ಅವತರಿಸುವಳು— ನೀರಾಜನವಿಧಿ — ಕಾತ್ಯಾಯನೀದೇವಿಯ ಪ್ರಾದುರ್ಭಾವ — ಮಹಿಷಾಸುರನ ಪೂರ್ವವೃತ್ತಾಂತ — ಮಹಿಷಾಸುರನು ದೇವಿಯನ್ನು ಪ್ರಾರ್ಥಿಸಿ ವರವನ್ನು ಬೇಡುವುದು— ದೇವಿಯ ವರಪ್ರದಾನ,—ಉಗ್ರಚಂಡಾ, ಭದ್ರಕಾಲೀ, ದುರ್ಗಾ ಎಂಬ ಮೂರು ರೂಪಗಳಿಂದ ಮೂರುಕಲ್ಪಗಳಲ್ಲಿ ಮಹಿಷಾಸುರನನ್ನು ಸಂಹರಿಸಿದ ಕ್ರಮ— ಮಹಿಷಾಸುರನ ಜನ್ಮವೃತ್ತಾಂತ— ರಂಭಾಸುರನ ತಪಸ್ಸು, ರಂಭಾಸುರನು ಮಹಿಷಿಯನ್ನು ಮೋಹಿಸಿ ಮಹಿಷಾಸುರನನ್ನು ಪುತ್ರನನ್ನಾಗಿಪಡೆದುದು—ಮಹಿಷಾಸುರನು ಸಂಹೃತನಾಗಿರುವಾಗ ದೇವಿಯ ಪಾವತಲದಲ್ಲಿದ್ದು ಜಗತ್ಪೂಜ್ಯನಾಗುವ್ರದು. 189-221

ಪುಟ ಸಂಖ್ಯೆ

ಅರವತ್ತಮೂರನೆಯ ಅಧ್ಯಾಯ-

ದಕ್ಷಯಜ್ಞವಿಧ್ವಂಸನಕ್ಕಾಗಿ ದೇವಿಯು ಉಗ್ರಚಂಡಾಮೂರ್ತಿಯ ರೂಪವನ್ನು ಕೈಗೊಳ್ಳುವುದು -- ಆ ದೇವಿಯ ಉಪಾಸನಾ ಕ್ರಮವು — ಉಗ್ರತಾರಾದೇವಿಯ ಧ್ಯಾನಕ್ರಮವು — ಕೌಶಿಕೀ ದೇವಿಯ ಧ್ಯಾನಕ್ರಮ—ಕಾಲಿಕಾಮೂರ್ತಿಯ ಧ್ಯಾನ—ಶಿವದೂತಿಯ ಧ್ಯಾನ ಇತ್ಯಾದಿ. 222-244

ಅರವತ್ತನಾಲ್ಕನೆಯ ಅಧ್ಯಾಯ—

ಕಾಮಾಖ್ಯಾ ದೇವಿಯ ಮಹಾತ್ಮ್ಯಕಥನವು — ಮಧುಕೈಟಭರ ಉತ್ಪತ್ತಿ ಮತ್ತು ಅವರ ಸಂಹಾರ—ಈ ದೈತ್ಯರ ಮೇದಸ್ಸಿನಿಂದ ಭೂಮಿಯು ದೃಢವಾಗಿ ಮೇದಿನೀ ಎಂದು ಪ್ರಸಿದ್ಧವಾಯಿತು— ಮಹಾಮಾಯೆಯು ದಕ್ಷಬ್ರಹ್ಮನ ಮಗಳಾಗಿ ಸತೀ ಎಂದು ಅವತರಿಸಿ ಶಂಕರನಿಗೆ ಪತ್ನಿಯಾಗಿ ದಕ್ಷನಮೇಲಿನ ಕೋಪದಿಂದ ಪ್ರಾಣತ್ಯಾಗಮಾಡಿದಮೇಲೆ, ಶಂಕರನು ಮೃತಶರೀರವನ್ನು ಹೊತ್ತುಕೊಂಡು ಅಲೆಯುತ್ತಿದ್ದಾಗ ಸತಿಯ ಅಂಗಗಳು ಬಿದ್ದ ಸ್ಥಳಗಳು ಪುಣ್ಯಕರಗಳಾದ ಕ್ಷೇತ್ರಗಳಾಗಿ ಪರಿಣಮಿಸಿದವು— ಅದರಂತೆ ಕುಬ್ಜಿಕಾಪೀಠ, ನೀಲಶೈಲ ಮೊದಲಾದ ಪರ್ವತಗಳ ಉತ್ಪತ್ತಿ—ಚಿತ್ರಪರ್ವತ, ಮಣಿಪರ್ವತ, ಗಂಧಮಾದನ ಪಾಂಡುನಾಥ, ಭಸ್ಮಾಚಲ ಮೊದಲಾದ ಪರ್ವತಗಳು—ನೀಲಕೂಟಗಿರಿಯಲ್ಲಿ ಕಾಮಾಖ್ಯಾದೇವಿಯು ನೆಲಸಿರುವುದು—ದೇವಿಯ ಪಂಚ ರೂಪಗಳು --- ನೀಲಕೂಟಪರ್ವತದಲ್ಲಿರುವ ಸಿದ್ಧಗಣಪತಿ, ತಿಂತಿಡೀ, ಅಪರಾಜಿತಾ, ಪಾಂಡುನಾಥ, ಸಿದ್ಧೇಶ್ವರ, ಸಿದ್ಧಕುಂಡ, ವಾರಾಣಸೀ, ಕಾಮೇಶ್ವರ, ಕೇದಾರ, ಗುಪ್ತಕಾಮಾ, ಕಾಲರಾತ್ರೀ ಪ್ರಚಂಡೀ, ಕೂಷ್ಮಾಂಡೀ, ಕೋಟೇಶ್ವರೀ, ಭೈರವೀ, ಆಮ್ರಾತಕೇಶ್ವರ, ಸಿದ್ಧಕಾಮೇಶ್ವರೀ, ಸಿದ್ಧಗಂಗಾ, ಭುವನೇಶ್ವರಪೀಠ,

ಪುಟ ಸಂಖ್ಯೆ

ಚಂಡಘಂಟಾ, ಪಾದದುರ್ಗಾ, ನಂದಿಕೇಶ್ವರ ಇವರೆಲ್ಲರೂ ಆ ನೀಲ ಕೂಟಪರ್ವತದ ಬೇರೆ ಬೇರೆ ಸ್ಥಳಗಳಲ್ಲಿ ನೆಲಸಿರುವರು. 245-269

ಅರವತ್ತೈದನೆಯ ಅಧ್ಯಾಯ—

ಕಾಮಾಖ್ಯಾದೇವಿಯ ಪಂಚಮೂರ್ತಿಗಳ ತಂತ್ರನಿರೂಪಣವು— ಕಾಮಾಖ್ಯಾದೇವಿಯ ಧ್ಯಾನ ಮತ್ತು ಬೀಜಾಕ್ಷರಮಂತ್ರ— 270-274

ಅರವತ್ತಾರನೆಯ ಅಧ್ಯಾಯ—

ದೇವಿಯ ಪೀಠಮಂಡಲದಲ್ಲಿರುವ ದೇವತೆಗಳ ವಿವರಣೆಯು ಮತ್ತು ಅವರ ಪೂಜಾಪ್ರಕಾರವು, ಕಾಮಾಖ್ಯಾಗಾಯತ್ರೀಮಂತ್ರ ಟಳ ಜ ನ ಯೋಗಿನಿಯರು, ಇತರ ಅಂಗದೇವತೆಗಳು ಮತ್ತು ಅವರನ್ನು ಪೂಜಿಸುವ ಕ್ರಮ — ತ್ರಿಪುರಾದೇವಿಯ ಪೂಜಾಕ್ರಮ — ತ್ರಿಪುರಾದೇವಿಯ ಧ್ಯಾನ — ಪೂಜಾವಿಧಾನ ಇತ್ಯಾದಿ. 275-293

ಅರವತ್ತೇಳನೆಯ ಅಧ್ಯಾಯ—

ತ್ರಿಪುರಾದೇವಿಯ ವಿಶೇಷ ಪೂಜಾಕ್ರಮಗಳು — ತ್ರಿಪುರಾ ದೇವಿಯ ಎರಡನೆಯ ರೂಪದ ಧ್ಯಾನಕ್ರಮ — ಮೂರನೆಯ ರೂಪದ ಧ್ಯಾನಕ್ರಮ—ತ್ರಿಪುರಾಗಾಯತ್ರೀಮಂತ್ರ—ಚಂಡಿಕಾ ಗಾಯತ್ರೀ — ಮಹಾಮಾಯಾಗಾಯತ್ರೀ — ಜಪ ಮತ್ತು ಪೂಜಾಸಮಾಪನ. 294-312

ಅರವತ್ತೆಂಟನೆಯ ಅಧ್ಯಾಯ—

ಕಾಮೇಶ್ವರೀ ದೇವಿಯ ಧ್ಯಾನ ಮತ್ತು ಪೂಜಾಕ್ರಮಗಳು— ಕಾಮೇಶ್ವರೀಗಾಯತ್ರೀ — ಸ್ತೋತ್ರ, ಬಲಿದಾನ, ಇತ್ಯಾದಿ ಪೂಜೆಗಳು. 313-328

ಅರವತ್ತೊಂಭತ್ತನೆಯ ಅಧ್ಯಾಯ—

ಶರನ್ನವರಾತ್ರೆಯಲ್ಲಿ ದುರ್ಗಾದೇವಿಯನ್ನು ಪೂಜಿಸುವ ವಿಶೇಷ ಕ್ರಮ — ಆವಾಹನಾದಿ ಪೂಜೆ — ಶಾರದಾಗಾಯತ್ರೀ — ಅಂಗ ಪೂಜೆ—ಅಧಿದೇವತೆ ಮತ್ತು ಪ್ರತ್ಯಧಿದೇವತೆಯರ ಪೂಜೆ— ಜಪ—ಅರ್ಘ್ಯಪ್ರದಾನ—ಪೂಜಾಫಲನಿರೂಪಣ. 329-341

ಎಪ್ಪತ್ತನೆಯ ಅಧ್ಯಾಯ—

ಸಪ್ತವಿಧ ನಮಸ್ಕಾರಕ್ರಮ — ಮುದ್ರಾಲಕ್ಷಣ ವಿವರಣೆ ೧೦೮ ಮುದ್ರೆಗಳು, ಅವುಗಳಲ್ಲಿ ದೇವತಾಪೂಜೆಯಲ್ಲಿ ಪ್ರಯೋಗಿಸುವ ೫೫ ಮುದ್ರೆಗಳು — ಧೇನುಮುದ್ರೆ ಮೊದಲಾದ ಪ್ರತಿಮುದ್ರೆಯ ವಿವರಣೆಯು — ಮುದ್ರೆಗಳನ್ನು ಪ್ರಯೋಗಮಾಡುವುದರಿಂದ ದೇವತೆಗಳಿಗೆ ಸಂತೋಷವುಂಟಾಗುವುದು. ಮುದ್ರಾಪ್ರಯೋಗ ವಿಲ್ಲದಿದ್ದರೆ ಪೂಜೆಯು ನಿಷ್ಫಲವು. 342-364

ಎಪ್ಪತ್ತೊಂದನೆಯ ಅಧ್ಯಾಯ—

ಬಲಿದಾನಕ್ರಮ ನಿರೂಪಣ — ಬಲಿಗೆ ಯೋಗ್ಯವಾದ ನಾನಾ ವಿಧ ಮೃಗಗಳು — ಬೇರೆ ಬೇರೆ ಮೃಗಗಳ ಬಲಿಯಿಂದ ದೇವಿಯು ಹೆಚ್ಚುಕಾಲ ಸಂತುಷ್ಟಳಾಗುವಳು — ಬಲಿಕೊಡಲು ಯೋಗ್ಯವಾದ ಆಯುಧಗಳು — ಖಡ್ಗಪೂಜಾಮಂತ್ರ — ಕಾಲ ರಾತ್ರಿಮಂತ್ರ — ಬಲಿಪ್ರದಾನಕ್ರಮ — ರಕ್ತಪ್ರದಾನಕ್ರಮ— ಯಾವ ಯಾವ ಕ್ರಮಗಳಲ್ಲಿ ಯಾವಯಾವಪ್ರಾಣಿಯನ್ನು ಬಲಿಕೊಡಬೇಕು ? — ಬಲಿಪ್ರದಾನವಿಚಾರದಲ್ಲಿ ಬ್ರಾಹ್ಮಣನು ಅನುಸರಿಸಬೇಕಾದ ನಿಯಮಗಳು, ಬಲಿಪಶುವಿನ ಪ್ರಾರ್ಥನೆ— ಖಡ್ಗಪ್ರಾರ್ಥನೆ—ಶರಭಾದಿಮೃಗಗಳ ಪ್ರಾರ್ಥನೆ — ನರಬಲಿ ಪ್ರದಾನಕ್ರಮ — ಬಲಿಮನುಷ್ಯನ ಅವಯವಗಳಲ್ಲಿ ದೇವತೆ ಗಳನ್ನು ಆಹ್ವಾನಿಸಿ ಪೂಜೆಮಾಡಬೇಕು — ಬಲಿಮನುಷ್ಯನನ್ನು

ಪ್ರಾರ್ಥಿಸುವುದು—ಬಲಿಕೊಡುವಾಗ ಬಲಿಪ್ರಾಣಿಯನ್ನು ವಿಧ್ಯುಕ್ತವಾಗಿ ಪೂಜಿಸಿಯೇ ಬಲಿಕೊಡಬೇಕು — ಎಂತಹವರನ್ನು ಬಲಿಕೊಡಬಾರದು ?—ಪಶು ಪಕ್ಷಿಗಳಲ್ಲಿ ಬಲಿಕೊಡಲು ಅಯೋಗ್ಯವಾದ ಪ್ರಾಣಿಗಳು — ಬಲಿಪ್ರಾಣಿಯ ಶಿರಸ್ಸನ್ನೂ ರಕ್ತವನ್ನೂ ದೇವಿಗೆ ಅರ್ಪಿಸುವ ಕ್ರಮ — ರಾಜನು ನರಬಲಿಯನ್ನು ಕೊಡಬಹುದು — ಇತರರು ರಾಜನ ಅನುಮತಿಯಿಂದ ಕೊಡಬೇಕು — ನರಬಲಿಯನ್ನು ಕೊಡುವಾಗ ಪಠಿಸುವ ಮಂತ್ರಗಳು ಮತ್ತು ಆಚರಿಸಬೇಕಾದ ವಿಧಿನಿಯಮಗಳು--ಬಲಿಕೊಟ್ಟನಂತರ ಶಿರಃಪತನದಿಂದ ಶುಭಾಶುಭಫಲಗಳನ್ನು ತಿಳಿಯುವಬಗೆ—ಬಲಿಯನ್ನು ಕೊಡುವಾಗ ಪಶುವಿನಲ್ಲಿ ಶತ್ರುವನ್ನು ಆವಾಹನೆಮಾಡಿ ಪ್ರಾಣಪ್ರತಿಷ್ಠಾಪನೆಯನ್ನೂ ಮಾಡಿ ಬಲಿಕೊಟ್ಟರೆ ಶತ್ರುನಾಶವಾಗುವುದು—ಬಲಿಪಶುವಿನ ಶರೀರದಿಂದ ದೇವಿಗೆ ಸಮರ್ಪಿಸಲು ರಕ್ತವನ್ನು ತೆಗೆಯುವಕ್ರಮ—ದೇವಿಗೆ ಸಾಧಕನು ತನ್ನ ಶರೀರದ ರಕ್ತ ಮತ್ತು ಮಾಂಸವನ್ನು ಸಮರ್ಪಿಸುವ ವಿಧಾನ ಮತ್ತು ಮಂತ್ರಗಳು — ದೀಪಸಮರ್ಪಣಮಂತ್ರ — ಕತ್ತಿಯನ್ನು ಅಭಿಮಂತ್ರಿಸುವ ಮಂತ್ರ — ಬಲಿಚ್ಛೇದನ—ಕೃತ್ರಿಮಬಲಿಪ್ರದಾನ ಕ್ರಮ—ಸ್ಕಂಧವಿಶಾಖಮಂತ್ರಗಳು ಇತ್ಯಾದಿ. 364--402

ಎಪ್ಪತ್ತೆರಡನೆಯ ಅಧ್ಯಾಯ--

ಷೋಡಶೋಪಚಾರಪೂಜಾಕ್ರಮ — ನಾನಾವಿಧ ಆಸನಗಳು—ಪಾದ್ಯ, ಅರ್ಘ್ಯ, ಆಚಮನ—ಮಧುಪರ್ಕ—ಸ್ನಾನದ್ರವ್ಯಗಳು ಸ್ನಾನಕ್ರಮ. 403-416

ಎಪ್ಪತ್ತಮೂರನೆಯ ಅಧ್ಯಾಯ—

ವಸ್ತ್ರಪ್ರಭೇದಗಳು ಮತ್ತು ವಸ್ತ್ರಲಕ್ಷಣ — ನಲವತ್ತುವಿಧವಾದ ಆಭರಣಗಳು — ಉಪಕರಣಗಳು—ಐದುವಿಧವಾದ ಗಂಧಗಳು

ಪುಟ ಸಂಖ್ಯೆ

ಗಂಧವನ್ನು ಮಾಡುವ ಕ್ರಮ— ಪುಷ್ಪಸಮರ್ಪಣ—ನಾನಾವಿಧ
ವಾದ ಪುಷ್ಪಗಳು—ವಿಧವಿಧ ಪತ್ರೆಗಳು—ಪುಷ್ಪಹಾರ—ಪುರಶ್ಚ
ರಣವಿಧಿ— ಅಂಗದೇವತಾಪೂಜೆ--ದೀಪಲಕ್ಷಣ — ದೀಪಸ್ತಂಭ
ಬತ್ತಿ—ಉತ್ತಮಮಧ್ಯಮಾಧಮ ದೀಪಗಳು—ಧೂಪಲಕ್ಷಣ—
ಧೂಪದ್ರವ್ಯಗಳು—ಧೂಪದ್ರವ್ಯಗಳಲ್ಲಿ ನಿಷದ್ಧವಾದವುಗಳು—
ಆರು ವಿಧವಾದ ಅಂಜನಗಳು—ಅಂಜನಲಕ್ಷಣ ಮತ್ತು ಆದನ್ನು
ಮಾಡುವಕ್ರಮ. 417-448

ಎಪ್ಪತ್ತನಾಲ್ಕನೆಯ ಅಧ್ಯಾಯ—

ನೈವೇದ್ಯಕ್ರಮ — ನೈವೇದ್ಯಕ್ಕೆ ಯೋಗ್ಯವಾದ ಪದಾರ್ಥಗಳು
ಭಕ್ಷ್ಯಭೋಜ್ಯಾದಿಗಳು — ನಾನಾವಿಧ ಫಲಗಳು — ನೈವೇದ್ಯ
ಯೋಗ್ಯ ಮಾಂಸಗಳು—ವಿಧವಿಧ ಪಾನೀಯಗಳು—ನೈವೇದ್ಯ
ಪಾತ್ರೆಗಳು—ತಾಂಬೂಲ ಸಮರ್ಪಣ— 449-459

ಎಪ್ಪತ್ತೈದನೆಯ ಅಧ್ಯಾಯ—

ಪ್ರದಕ್ಷಿಣಕ್ರಮ — ಕಾಯಿಕ, ವಾಚಿಕ, ಮಾನಸಗಳೆಂಬ ಮೂರು
ವಿಧ ನಮಸ್ಕಾರಗಳು—ಅವುಗಳಲ್ಲಿ ಉತ್ತಮಮಧ್ಯಮಾಧಮ
ಭೇದಗಳು—ಷೋಡಶೋಪಚಾರ ಪೂಜಾಫಲ. 460-464

॥ ಶ್ರೀಃ ॥

ಅಥ ಶ್ರೀಕಾಲಿಕಾಪುರಾಣೇ ತ್ರಿಪಂಚಾಶತ್ತಮೋऽಧ್ಯಾಯಃ

॥ ಔರ್ವ ಉವಾಚ ॥

ಅಥ ಕಾಲಕ್ರಮೇಣೈವ ಪ್ರವೃದ್ಧಾಸ್ತೇ ಮಹಾಬಲಾಃ ।
ಶಸ್ತ್ರಾಸ್ತ್ರಜ್ಞಾನಕುಶಲಾಃ ಶಾಸ್ತ್ರಾರ್ಥಪರಿನಿಷ್ಠಿತಾಃ ॥ ೧ ॥

ಸಂಪ್ರಾಪ್ತಯೌವನಾ ದೀಪ್ತಾ ದುರ್ಧರ್ಷಾಃ ಪರಿಪಂಥಿಭಿಃ ।
ಧರ್ಮಾರ್ಥಜ್ಞಾನಕುಶಲಾ ಬ್ರಹ್ಮಣ್ಯಾಃ ಸತ್ಯವಾದಿನಃ ॥ ೨ ॥

ಸದಾ ಸಹಚರೌ ತತ್ರ ಪ್ರೀತ್ಯಾ ವೇತಾಲಭೈರವೌ ।
ಅಲರ್ಕೋ ದಮನಶ್ಚೈವ ತಥೋಪರಿಚರಸ್ತ್ರಯಃ ॥ ೩ ॥

॥ ಐವತ್ತಮೂರನೆಯ ಅಧ್ಯಾಯವು ॥

೧. ಔರ್ವಮುನಿಯು ಹೇಳಿದನು:—ಆಮೇಲೆ ಆ ಐವರು ಕುಮಾರರೂ ಸಹ ಕಾಲಕ್ರಮದಂತೆ ಬೆಳೆಯುತ್ತಾ, ತುಂಬಾ ಬಲಶಾಲಿಗಳೂ, ಆಯುಧ ಮತ್ತು ಮಂತ್ರಾಸ್ತ್ರಗಳ ಜ್ಞಾನದಲ್ಲಿ ನಿಪುಣರೂ, ಶಾಸ್ತ್ರಾರ್ಥ ಪಂಡಿತರೂ ಆದರು.

೨. ಅಲ್ಲದೆ, ಅವರು ಯೌವನವನ್ನು ಪಡೆದು, ತೇಜಸ್ವಿಗಳೂ, ಎದುರಾಳಿಗಳಿಗೆ ನಿಲುಕದವರೂ, ಧರ್ಮ, ಅರ್ಥಗಳ ವಿಷಯದಲ್ಲಿ ಸರಿಯಾದ ತಿಳಿವಳಿಕೆಯುಳ್ಳವರೂ, ಬ್ರಾಹ್ಮಣಹಿತರೂ, ಸತ್ಯವಾದಿಗಳೂ ಆಗಿದ್ದರು.

೩. ವೇತಾಲ ಮತ್ತು ಭೈರವರು ಸದಾ ಜೊತೆಯಾಗಿಯೇ ಸ್ನೇಹದಿಂದ ವರ್ತಿಸುತ್ತಿದ್ದರು. ಹಾಗೆಯೇ ಅಲರ್ಕ, ದಮನ, ಮತ್ತು ಉಪರಿಚರ ಈ ಮೂವರೂ ಸಹ ಪರಸ್ಪರ ಸ್ನೇಹದಿಂದ ವರ್ತಿಸುತ್ತಲಿದ್ದರು. ಮತ್ತು ಸದಾ ಮೂವರೂ ಸಹ ಜೊತೆಯಾಗಿಯೇ ವಿಹರಿಸುತ್ತಲಿದ್ದರು.

ಸದಾ ಸಹಚರಾ ನಿತ್ಯಂ ಭ್ರಾತರಶ್ಚಾಂದ್ರಶೇಖರಾಃ ।
ತ್ರಿಷ್ವಾತ್ಮಜೇಷು ನೃಪತೇಃ ಸದೋಪರಿಚರಾದಿಷು ॥ ೪ ॥

ಮಮತ್ವಮಧಿಕಂ ನಿತ್ಯಂ ಪ್ರೀತಿಸ್ನೇಹೌ ತಥಾಧಿಕೌ ।
ವೇತಾಲೇ ಭೈರವೇ ಚಾಪಿ ಚಂದ್ರಶೇಖರಭೂಭೃತಃ ॥ ೫ ॥

ನಾಸ್ತ್ಯೇವ ತಾದೃಶೀ ಪ್ರೀತಿಃ ಯಾದೃಶೀ ತೇಷು ಜಾಯತೆ ।
ನ ತೌ ದೃಷ್ಟ್ವಾ ಸ ನೃಪತಿಃ ಕದಾಚಿಚ್ಚಂದ್ರಶೇಖರಃ ॥ ೬ ॥

ಅತ್ಯಾಹ್ಲಾದಯತೇsಜಸ್ರಂ ಪುತ್ರಬುದ್ಧ್ಯೇಷ್ಯತೇsಥವಾ ।
ತೌ ವೀರೌ ಧರ್ಮಕುಶಲೌ ಮಹಾಬಲಪರಾಕ್ರಮೌ ॥ ೭ ॥

ತ್ರೈಲೋಕ್ಯವಿಜಯೇ ದಕ್ಷೌ ಶಸ್ತ್ರಾಸ್ತ್ರಗ್ರಾಮಪಾರಗೌ ।
ತಾಭ್ಯಾಂ ಬಿಭೇತಿ ಚ ನೃಪಃ ಕದೌ ಕಿಂ ವಾ ಕರಿಷ್ಯತಃ ॥ ೮॥

ವೇತಾಲಭೈರವಾವೇತೌ ಮಾಂ ಸುತಾ೯ ರಾಜ್ಯಮೇವ ವಾ ।
ಇತಿ ಚಿಂತಾಪರೋ ರಾಜಾ ನಿತ್ಯಮೇವ ನಿರೀಕ್ಷತೇ ॥ ೯ ॥

---

೪. ಆ ಚಂದ್ರಶೇಖರನಿಗೆ ಉಪಚರನೇ ಮೊದಲಾದ ತನ್ನ ಮೂವರು ಕುಮಾರರಲ್ಲಿಯೇ ಹೆಚ್ಚಾಗಿ ಮಮತೆಯೂ, ಪ್ರೀತಿಯೂ, ಮತ್ತು ವಾತ್ಸಲ್ಯವೂ ಇದ್ದವು.

೫. ಆದರೆ ಆ ಚಂದ್ರಶೇಖರರಾಜನಿಗೆ ತನ್ನ ಮೂವರು ಪುತ್ರರಲ್ಲಿರುವಂತೆ ಪ್ರೀತಿಯು ವೇತಾಲ ಮತ್ತು ಭೈರವರಲ್ಲಿ ಇರಲಿಲ್ಲವು.

೬. ಆ ವೇತಾಲ ಭೈರವರನ್ನು ನೋಡಿ ಆ ರಾಜನು ಅಷ್ಟೊಂದು ಸಂತೋಷಗೊಳ್ಳುತ್ತಲೂ ಇರಲಿಲ್ಲವು. ಪುತ್ರರೆಂಬ ಬುದ್ಧಿಯುಳ್ಳವನೂ ಆಗುತ್ತಿರಲಿಲ್ಲವು.

೭. ಆ ಶಂಕರಪುತ್ರರು, ವೀರರೂ, ಧರ್ಮನಿರತರೂ, ತುಂಬಾ ಬಲಿಷ್ಠರೂ, ಪರಾಕ್ರಮಿಗಳೂ, ಮೂರುಲೋಕಗಳನ್ನೂ ಜಯಿಸಬಲ್ಲವರೂ, ಶಸ್ತ್ರ ಮತ್ತು ಮಂತ್ರಾಸ್ತ್ರಗಳಲ್ಲಿ ಪಂಡಿತರೂ ಆದವರು.

೮. ಇಂತಹ ಆ ವೇತಾಲ ಭೈರವರಿಂದ ಚಂದ್ರಶೇಖರರಾಜನು ಭಯಗೊಳುವನು. ಮತ್ತು ಈ ವೇತಾಲಭೈರವರು ನನ್ನನ್ನೂ, ನನ್ನ ಪುತ್ರರನ್ನೂ, ರಾಜ್ಯವನ್ನೂ ಏನುಮಾಡುವರೋ ?

೯. ಹೀಗೆಂದು ಚಿಂತಿಸುತ್ತಾ ಆ ರಾಜನು, ಆ ಶಂಕರಪುತ್ರರು ತನ್ನನ್ನು ನಮ್ಮನ್ನು ಸ್ಮರಿಸುವಾಗಲೂ ಅವರನ್ನು ನೋಡುತ್ತಿರಲಿಲ್ಲವು.

ಪ್ರಣತಾವಪಿ ತತ್ಪುತ್ರೌ ಸಮ್ಯಗ್ವೇತಾಲಭೈರವೌ ।
ಅಥೋಪರಿಚರಂ ರಾಜಾ ಯೌವರಾಜ್ಯೇಽಭ್ಯಷೇಚಯತ್ ॥೧೦ ॥

ಜ್ಯಾಯಾಂಸಮೌರಸಂ ಪುತ್ರಂ ಸರ್ವರಾಜಗುಣೈರ್ಯುತಂ ।
ಯಃ ಪಶ್ಚಾತ್ಸರ್ವಭೂಪಾಲಾನ್ಯೋಜಯಿಷ್ಯತಿ ನೀತಿಭಿಃ ॥ ೧೧ ॥

ರಾಜೋಪರಿಚರೋ ನಾಮ ಸರ್ವಶಾಸ್ತ್ರಾರ್ಥಪಾರಗಃ ।
ದಮನಾಯ ದದೌ ದಾಯಂ ತಥಾಲರ್ಕಾಯ ಭೂಮಿಭೃತ್ ॥ ೧೨ ॥

ಪ್ರಭೂತಧನರತ್ನಾನಿ ತಥಾಸನರಥಾ ಬಹೂ ।
ತಾವಂತಿ ನ ದದೌ ತಾಭ್ಯಾಂ ದಾಯವಿತ್ತಾನಿ ಭಾಗಶಃ ॥ ೧೩ ॥

ವೇತಾಲಭೈರವಾಭ್ಯಾಂ ತು ತತಸ್ತೌ ಮನ್ಯುರಾವಿಶತ್ ।
ಮನ್ಯುನಾಭಿಪರೀತೌ ತೌ ವಿಚರಂತಾವಿತಸ್ತತಃ ॥ ೧೪॥

ನ ಭೋಗಮಾಪ್ಸತಾಂ ವೀರೌ ತಪಸೇ ಚ ಕೃತೋದ್ಯಮೌ ।
ಅನೂಢಭಾರ್ಯೌ ಸತತಂ ನಿರ್ಜನೇ ವಸತಃ ಸದಾ ॥ ೧೫ ॥

---

೧೦. ಅನಂತರ ಆ ರಾಜನು ಸಕಲ ರಾಜಗುಣಗಳಿಂದ ಕೂಡಿರುವ ತನ್ನ ಒರಿಯ ಔರಸಪುತ್ರನಾದ ಉ ಪ ರಿ ಚ ರ ನ ನ್ನು ಯುವರಾಜನನ್ನಾಗಿ ಅಭಿಷೇಕ ಮಾಡಿದನು.

೧೧. ಸಕಲಶಾಸ್ತ್ರಪಂಡಿತನಾದ ಉಪರಿಚರನೆಂಬ ಆ ರಾಜನು ಮುಂದೆ ರಾಜರುಗಳೆಲ್ಲರನ್ನೂ ನೀತಿಯಿಂದ ಆಳುವನು.

೧೨. ಅಲ್ಲದೆ ಆರಾಜನು ದಮನನಿಗೂ, ಅಲರ್ಕನಿಗೂ, ಆಸನ, ರಥ ಮಾನನ. ಹೆಚ್ಚಾದಧನ, ಮತ್ತು ರತ್ನಗಳನ್ನು ದಾಯವಾಗಿ ಕೊಟ್ಟನು.

೧೩. ಆದರೆ ವೇತಾಲಭೈರವರಿಗೆ ತನ್ನ ಧನವನ್ನು ಭಾಗವಾಗಿ ಕೊಡಲೇಇಲ್ಲವು. ಆದ್ದರಿಂದ ಆ ವೇತಾಲಭೈರವರಿಗೆ ವ್ಯಥೆಯುಂಟಾಯಿತು.

೧೪. ವ್ಯಥೆಯಿಂದ ಬಳಲಿ ಅವರು ಅಲ್ಲಲ್ಲಿ ಸಂಚರಿಸುತ್ತಾ ಭೋಗವನ್ನು ಆಸಕ್ತಿಯನ್ನು ಬಿಟ್ಟು ತಪಸ್ಸುಮಾಡಲು ಉದ್ಯುಕ್ತರಾದರು.

೧೫. ಮದುವೆಯನ್ನು ಮಾಡಿಕೊಳ್ಳದೆ ಆ ವೇತಾಲಭೈರವರು ನಿರ್ಜನವಾದ ವನದಲ್ಲಿ ತಪಸ್ಸನ್ನಾಚರಿಸುತ್ತಲಿದ್ದರು.

ತಥಾಭೂತೌ ತದಾ ಪುತ್ರೌ ದೇವೌ ವೇತಾಲಭೈರವೌ ।
ಬುಬುಧೇ ಚಿಂತಯಾಕ್ರಾಂತಾ ದೇವೀ ತಾರಾವತೀ ತದಾ ॥ ೧೬ ॥

ರಾಜೋಪರಿಚರಾದ್ಭೀತಾ ಪತ್ಯುಶ್ಚ ಚಂದ್ರಶೇಖರಾತ್ ।
ನೋವಾಚ ಕಿಂಚಿತ್ಸುದತೀ ಛನ್ನಂ ತೌ ಬೋಧಯತ್ಯಪಿ ॥ ೧೭ ॥

ಏತಸ್ಮಿನ್ನಂತರೇ ವಿದ್ವಾನ್ ಕಾಪೋತೋ ಮುನಿಸತ್ತಮಃ ।
ಚಿತ್ರಾಂಗದಾಸಂಗಭೋಗೀ ಸಂತುಷ್ಟಃ ಸುರತೋತ್ಸವೈಃ ॥ ೧೮ ॥

ಚಿತ್ರಾಂಗದಾಂ ಪರಿತ್ಯಜ್ಯ ಸಪುತ್ರಾಂ ಸಹಚಾರಿಣೀಂ ।
ಇಯೇಷ ಗಂತುಂ ತಪಸೇ ಪ್ರೋವಚೇ ಚಿತ್ರಾಂಗದಾಂ ಚ ಸಃ ॥ ೧೯ ॥

॥ ಮುನಿರುವಾಚ ॥

ಚಿತ್ರಾಂಗದೆ ತಪಸ್ತಪ್ತುಂ ಗಮಿಷ್ಯಾಮಿ ತಪೋವನಂ ।
ಕಾಂತೇ ಪ್ರಿಯಂ ಕರೋಮೀಹ ತನ್ಮೇ ವದ ಮನೋಹರೇ ॥ ೨೦ ॥

---

೧೬. ದೇವಾಂಶ ಸಂಭೂತರೂ, ತನ್ನ ಪುತ್ರರೂ ಆದ ಆ ವೇತಾಲಭೈರವರು ಆರೀತಿಯಾಗಿರುವುದನ್ನು ತಿಳಿದು ತಾರಾವತೀದೇವಿಯು ತುಂಬಾ ಚಿಂತೆಗೊಳಗಾದಳು.

೧೭. ಆದರೆ ರಾಜನಾದ ಉಪರಿಚರನಿಗೂ, ಪತಿಯಾದ ಚಂದ್ರಶೇಖರನಿಗೂ ಹೆದರಿ ಆ ತಾರಾವತಿಯು ಏನನ್ನೂ ಹೇಳಲಿಲ್ಲವು. ರಹಸ್ಯವಾಗಿ ಆ ವೇತಾಲಭೈರವರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದಳು.

೧೮-೧೯ ಇದೇ ಸಮಯದಲ್ಲಿ ವಿದ್ವಾಂಸನಾದ ಕಾಪೋತನೆಂಬ ಮುನಿಶ್ರೇಷ್ಠನು ಚಿತ್ರಾಂಗದೆಯೊಡನೆ ಕಾಮಕ್ರೀಡೆಗಳಿಂದ ಸಂತುಷ್ಟನಾದವನಾಗಿ ತನ್ನ ಪತ್ನಿಯಾದ ಆ ಚಿತ್ರಾಂಗದೆಯನ್ನೂ ಪುತ್ರರನ್ನೂ ಬಿಟ್ಟು ತಪಸ್ಸಿಗೆ ಹೊರಡಲಾ ಇಚ್ಛೆಯುಳ್ಳವನಾದನು. ಆಗ ಅವನು ಅವಳನ್ನು ಕುರಿತು ಹೀಗೆ ಹೇಳಿದನು.

೨೦. ಕಾಪೋತಮುನಿಯು ಹೇಳಿದನು:---ಎಲೌ ಚಿತ್ರಾಂಗದೇ, ತಪಸ್ಸನ್ನಾಚರಿಸಲು ತಪೋವನಕ್ಕೆ ಹೋಗುವೆನು. ಎಲೌ ಕಾಂತೇ, ನಿನಗೆ ಪ್ರಿಯವಾದುದೇನೆಂಬುವುದನ್ನು ನನಗೆ ಹೇಳು.

॥ ಚಿತ್ರಾಂಗದೋವಾಚ ॥

ತುಂಬುರುಶ್ಚ ಸುವರ್ಚಾಶ್ಚ ತನಯೌ ತವ ಸುವ್ರತ ।
ಏತಯೋಸ್ತ್ವಂ ಮುನಿಶ್ರೇಷ್ಠ ಪ್ರಿಯಂ ಕುರು ಯಥೋಚಿತಂ ॥ ೨೧ ॥

ಮಾಂ ಚಾಪಿ ಭಗಿನೀಗೇಹೇ ಸಂಸ್ಥಾಪ್ಯ ದ್ವಿಜಸತ್ತಮ ।
ತದಾ ತಪೋವನಂ ಗಚ್ಛ ಯದಿ ತೇ ರೋಚತೇಽನಘ ॥ ೨೨ ॥

ಇತಿ ಶ್ರುತ್ವಾ ವಚಸ್ತಸ್ಯಾಃ ಕಾಪೋತೋ ಮುನಿಸತ್ತಮಃ ।
ಹಿರಣ್ಯಾರ್ಥಾಂ ತಾಮಾಲೋಚ್ಯ ಕುಬೇರಸದನಂ ಯಯೌ ॥ ೨೩ ॥

ಪ್ರಾರ್ಥಯಿತ್ವಾ ಕುಬೇರಂ ತು ಸುವರ್ಣಾನಾಂ ಶತಾನಿ ಷಟ್ ।
ನಿಷ್ಕಾಣಾಂ ತು ಸಹಸ್ರಾಣಿ ಸ ಲೇಭೆ ಮುನಿಸತ್ತಮಃ ॥ ೨೪ ॥

ಶತಂ ಭಾರಾಂಶ್ಚ ರತ್ನಾನಾಮಾನೀಯ ಚ ಸವೀವಧ್ಯೈಃ ।
ಪುತ್ರಾಭ್ಯಾಂ ಪ್ರದದೌ ವಿಪ್ರೋ ಭಾರ್ಯಾಯೈ ಚ ವಿಶೇಷತಃ ॥ ೨೫ ॥

---

೨೧. ಚಿತ್ರಾಂಗದೆಯು ಹೇಳಿದಳು:—ತಪಸ್ವಿಯಾದ ಓ ಕಾಪೋತಮುನಿ ಶ್ರೇಷ್ಠನೇ, ಈ ತುಂಬುರು ಮತ್ತು ಸುವರ್ಚಸ್ಸುಗಳು ನಿನ್ನ ಪುತ್ರರು. ಇವರಿಗೆ ಹಿತವಾಗುವಂತೆ, ಸಾಧ್ಯವಾದಮಟ್ಟಿಗೆ ಏನಾದರೂ ಪ್ರಿಯವಾದುದನ್ನು ಮಾಡುವವನಾಗು.

೨೨. ಓ ಪುಣ್ಯವಂತನಾದ ವಿಪ್ರೋತ್ತಮನೇ, ನನ್ನನ್ನೂ ಸಹ ನನ್ನ ಅಕ್ಕ ತಾರಾವತಿಯ ಮನೆಯಲ್ಲಿರಿಸಿ ಆಮೇಲೆ ನಿನ್ನಿಷ್ಟದಂತೆ ತಪೋವನಕ್ಕೆ ತೆರಳು.

೨೩. ಹೀಗೆ ಚಿತ್ರಾಂಗದೆಯು ಹೇಳಿದ ಮಾತನ್ನು ಕೇಳಿ ಕಾಪೋತಮುನಿಶ್ರೇಷ್ಠನು, ತನ್ನ ಪುತ್ರರಿಗಾಗಿ ಅವಳು ಧನವನ್ನು ಅಪೇಕ್ಷಿಸುವಳೆಂದು ತಿಳಿದು ಅದಕ್ಕಾಗಿ ಕುಬೇರನಮನೆಗೆ ಹೋದನು.

೨೪. ಅಲ್ಲಿ ಕುಬೇರನನ್ನು ಅತುಲಲಕ್ಷ ಚಿನ್ನದ ವರಹಗಳನ್ನು ಪ್ರಾರ್ಥಿಸಿ, ಆ ಕುಬೇರನಿಂದ ಅಪ್ಪಟಧನವನ್ನು ಕಾಪೋತಮುನಿಶ್ರೇಷ್ಠನು ಪಡೆದನು.

೨೫. ಅಲ್ಲದೆ ನೂರುಭಾರ (ಇಪ್ಪತ್ತುತೋಲ) ರತ್ನಗಳನ್ನೂ ಸಹ ಆಮುನಿಯು ಕಾವಡಿಗಳಿಂದ ತೆಗೆದುಕೊಂಡು ಬಂದು ತನ್ನ ಪುತ್ರರಿಗೂ ಪತ್ನಿಗೂ ಹಂಚಿಕೊಟ್ಟನು.

ತತಸ್ತಾಂ ಸಹ ಪುತ್ರಾಭ್ಯಾಂ ತೈರ್ಧನೈರಪಿ ಭೂರಿಭಿಃ ।
ಚಿತ್ರಾಂಗದಾಮತೇನಾಽಥ ಪುತ್ರಯೋರಪಿ ಸಂಮತೇ ॥ ೨೬ ॥

ಸುವರ್ಚಸಂ ತುಂಬುರಂ ಚ ತಥಾ ಚಿತ್ರಾಂಗದಾಮಪಿ ।
ಆಮಂತ್ರ್ಯ ಮುನಿಶಾರ್ದೂಲಃ ಕರವೀರಪುರಂ ಯಯೌ ॥ ೨೭ ॥

ತತ್ರ ಗತ್ವಾ ಸ ಕಾಪೋತೋ ರಾಜಾನಂ ಚಂದ್ರಶೇಖರಂ ।
ರಾಜೋಪರಿಚರಂ ಚೈವ ವಾಕ್ಯಮೇತದುವಾಚ ಹ ॥ ೨೮ ॥

ಇಯಂ ಕಕುತ್ಸ್ಥಜಾ ಭೂಪ ತವೈವ ವಿದಿತಾ ಪುರಾ ।
ಸದ್ಯೋ ಜಾತೌ ತಥೈವಾಸ್ಯಾಮೇತೌ ಮೇ ತನಯೌ ಶುಚೀ ॥ ೨೯ ॥

ಏಭಿರ್ವಿತ್ತೈಃ ಸಮಂ ಪುತ್ರೌ ಮಮ ತ್ವಂ ಪ್ರತಿಪಾಲಯ ।
ರಾಜೋಪರಿಚರಶ್ಚಾಪಿ ಪಾಲಯತ್ವಿಹ ಮೇ ಸುತೌ ॥ ೩೦ ॥

ಅಪುತ್ರಸ್ಯ ನೃಪಃ ಪುತ್ರೋ ಅಧನಸ್ಯ ಧನಂ ನೃಪಃ ।
ಅಮಾತುರ್ಜನನೀ ರಾಜಾ ಹ್ಯತಾತಸ್ಯ ಪಿತಾ ನೃಪಃ ॥ ೩೧ ॥

೨೬-೨೭. ಅನಂತರ ಆಕಾಪೋತಮುನಿಯು, ಆ ಧನಗಳೊಡನೆ ಸುವರ್ಚಸ್ಸು ಮತ್ತು ತುಂಬುರುಗಳನ್ನೂ ಸಹ ಕರೆದುಕೊಂಡು ಕರವೀರಪುರಕ್ಕೆ ತೆರಳಿದನು.

೨೮. ಅಲ್ಲಿಗೆ ಹೋಗಿ ಆ ಕಾಪೋತಮುನಿಯು ಚಂದ್ರಶೇಖರರಾಜನನ್ನೂ ಯುವರಾಜನಾದ ಉಪರಿಚರನನ್ನೂ ಕುರಿತು ಈವಾಕ್ಯವನ್ನು ಹೇಳಿದನು.

೨೯. ಇವಳು ಕಕುತ್ಸ್ಥರಾಜನ ಪುತ್ರಿಯು. ಇವಳ ಪರಿಚಯವು ನಿನಗೆ ತಿಳಿದಿರುವುದು. ಮತ್ತು ಈ ಸುವರ್ಚಸ್ಸು ಮತ್ತು ತುಂಬುರರುಗಳೆಂಬುವರು ಇವಳಲ್ಲಿ ಕಾಮಕ್ರೀಡೆಯಿಂದ ಆಗಲೇ ಜನಿಸಿದ ನನ್ನ ಶುದ್ಧರಾದಪುತ್ರರು.

೩೦. ಈ ನನ್ನ ಪುತ್ರರನ್ನು ಈ ಧನಗಳಿಂದ ನೀನು ಸಲಹುವವನಾಗು. ರಾಜನಾದ ಉಪರಿಚರನೂ ಸಹ ಈ ನನ್ನ ಪುತ್ರರನ್ನು ಸಲಹಬೇಕು.

೩೧-೩೨. ಪುತ್ರನಿಲ್ಲದವನಿಗೆ ರಾಜನೇ ಪುತ್ರನು. ಧನವಿಲ್ಲದವನಿಗೆ ರಾಜನೇ **ಧನವು** ಅವನೇ ಧನವನ್ನು ಕೊಟ್ಟುಸಲಹುವವನು. ತಾಯಿಯಿಲ್ಲದ ತಬ್ಬಲಿಗೆ ರಾಜನೇ

ಅನಾಥಸ್ಯ ನೃಪೋ ನಾಥೋ ಹ್ಯಭರ್ತುಃ ಪ್ರಾರ್ಥಿವಃ ಪತಿಃ ।
ಅಭೃತ್ಯಸ್ಯ ನೃಪೋ ಭೃತ್ಯೋ ನೃಪ ಏವ ನೃಣಾಂ ಸಖಾ ॥ ೩೨ ॥

ಸರ್ವದೇವಮಯೋ ರಾಜಾ ತಸ್ಮಾತ್ತ್ವಾಮರ್ಥಯೇ ನೃಪ ।

॥ ಔರ್ವಉವಾಚ ॥

ತತಃ ಸ ರಾಜಾ ತಂ ಪ್ರಾಹ ಮುನಿಮೇವಂ ದ್ವಿಜೋತ್ತಮಂ ॥ ೩೩ ॥

ಕರಿಷ್ಯೆ ತ್ವದ್ವಚಶ್ಚಾಹಂ ರಾಜೋಪರಿಚರಶ್ಚ ಸಃ ॥

ಅಥಾ ಚಿತ್ರಾಂಗದಾಂ ರಾಜಾ ಜಗ್ರಾಹ ಮುನಿಸಂಮತೆ ।
ಸುತೌ ಚ ತಸ್ಯ ಸಧನೌ ಜ್ಯಾಯಸೇ ಸೂನವೇ ದದೌ ॥ ೩೪ ॥

ಸ ಚೋಪರಿಚರಃ ಪ್ರಾದಾದ್ರಾಜ್ಯಮರ್ಧಂ ಸುವರ್ಚಸೇ ।
ತಥೈವ ಸಚಿವಾಧ್ಯಕ್ಷಮಕರೋತ್ತುಂಬುರುಂ ತದಾ ॥೩೫ ॥

ತಾಯಿಯು. ತಂದೆಯಿಲ್ಲದವನಿಗೆ ರಾಜನೇ ತಂದೆಯು. ಗತಿಯಿಲ್ಲದವನಿಗೆ ರಾಜನೇ ಗತಿಯು. ಪತಿಯಿಲ್ಲದವನಿಗೆ ರಾಜನೇ ರಕ್ಷಕನು. ಸೇವಕನಿಲ್ಲದ ಅಶಕ್ತನಿಗೆ ರಾಜನೇ ಸೇವಕನು. ರಾಜನೇ ಮನುಷ್ಯರಿಗೆ ಸ್ನೇಹಿತನು. ರಾಜನೇ ಸಕಲ ದೇವಾಂಶಸಂಭೂತನು. ಆಮದರಿಂದ ಎಲೈ ರಾಜನೇ ನಿನ್ನನ್ನು ಪ್ರಾರ್ಥಿಸುತ್ತಿರುವೆನು.

೩೩. ಔರ್ವ ಮುನಿಯು ಹೇಳಿದನು:—ಅನಂತರ ಆ ಚಂದ್ರಶೇಖರರಾಜನು ಬ್ರಾಹ್ಮಣೋತ್ತಮನಾದ ಮುನಿಯನ್ನು ಕುರಿತು ಓ, ಮುನಿಯೇ, ನಿನ್ನ ಮಾತನ್ನು ನಾನೂ, ರಾಜನಾದ ಉಪರಿಚರನೂ ನಡೆಸುವೆವು ಎಂದು ಹೇಳಿದನು.

೩೪. ಅನಂತರ ಚಂದ್ರಶೇಖರನು ಕಾಪೋತನ ಹೇಳಿಕೆಯಂತೆ ಚಿತ್ರಾಂಗದೆಯನ್ನು ಸಲಹಲು ಸ್ವೀಕರಿಸಿದನು. ಆ ಮುನಿಯ ಪುತ್ರರನ್ನು ಅವರ ಧನಮೊಂದಿಗೆ ತನ್ನ ಹಿರಿಯ ಮಗನಾದ ಉಪರಿಚರನ ವಶಕ್ಕೆ ಕೊಟ್ಟನು.

೩೫. ಆ ಉಪರಿಚರರಾಜನು ಸುವರ್ಚನಿಗೆ ಅರ್ಧರಾಜ್ಯವನ್ನು ಕೊಟ್ಟನು. ತುಂಬುರುವನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದನು.

ಕಾಪೋತಶ್ಚಾಪಿ ಸುಪ್ರೀತಃ ಪುತ್ರರ್ಧಿಂ ಸಮವೇಕ್ಷ್ಯ ಚ ॥ ೩೬ ॥

ಜಗಾಮಾಮಂತ್ರ್ಯ ನೃಪತಿಂ ತಪಸೇ ಚ ತಪೋವನಂ ।
ಪಥಿ ಗಚ್ಛಂ ಸ ಕಾಪೋತಃ ಶಂಭುಪುತ್ರೌ ಮನೋಹರೌ ॥ ೩೭ ॥

ಏಕಾಕಿನೌ ಚರಂತೌ ತು ಸೂರ್ಯಾಚಂದ್ರಮಸಾವಿವ ।
ತಯೋರ್ದದರ್ಶ ಚ ತಥಾ ವದನೇ ವಾನರಾಕೃತೀ ॥ ೩೮ ॥

ಸ್ಮೃತ್ವಾ ಪೂರ್ವಕಥಾಂ ದೃಷ್ಟ್ವಾ ತಾವಪೃಚ್ಛತ್ತಪೋಧನಃ ।
ಕೌ ಯುವಾಂ ದೇವಗರ್ಭಾಭೌ ಚರಂತೌ ವಿಜನೇ ಪಥಿ ॥ ೩೯ ॥

ಏಕಾಕಿನೌ ನರಶ್ರೇಷ್ಠೌ ತನ್ಮೇ ವದತಮಾರಿತಂ ।
ಅಥ ತೌ ಪ್ರಣಿಪತ್ಯೈನಂ ಸಂಭಾಷ್ಯ ಚ ಸಮಂಜಸಂ ॥ ೪೦ ॥

---

೩೬. ಆಗ ಕಾಪೋತಮುನಿಯು ತನ್ನ ಪುತ್ರರ ಸಂಪತ್ತನ್ನು ನೋಡಿ ತುಂಬಾ ಸಂತುಷ್ಟನಾಗಿ ರಾಜನನ್ನು ಬೀಳ್ಕೊಂಡು ತಪಸ್ಸಿಗಾಗಿ ತಪೋವನಕ್ಕೆ ತೆರಳಿದನು.

೩೭-೩೮. ಮಾರ್ಗದಲ್ಲಿ ಹೋಗುತ್ತ ಆಕಾಪೋತಮುನಿಯು ಸೂರ್ಯಚಂದ್ರರಂತೆ ತೇಜಸ್ವಿಗಳೂ, ಮನೋಹರರೂ ಆದ ಶಂಕರಪುತ್ರರು, ಏಕಾಂಗಿಗಳಾಗಿ ಸಂಚರಿಸುವುದನ್ನೂ, ಅವರ ಮುಖವಲ್ಲಿ ಕಪಿಯಂತೆ ಆಕಾರವಿರುವುದನ್ನೂ ನೋಡಿದನು. ಆಗ ಹಿಂದೆ ನಡೆದ ವೃತ್ತಾಂತವನ್ನು ಸ್ಮರಣೆಗೆ ತಂದುಕೊಂಡು ಆ ಶಂಕರಪುತ್ರರನ್ನು ಕುರಿತು ಮುನಿಯು ಹೀಗೆ ಪ್ರಶ್ನಿಸಿದನು.

೩೯. ದೇವಕುಮಾರರಂತಿರುವವರೂ ಪುರುಷಶ್ರೇಷ್ಠರೂ ಆಗಿದ್ದರೂ ಈ ಜನರ ಹಿತವಾದ ವನದಲ್ಲಿ ಏಕಾಂಗಿಗಳಾಗಿ ಸಂಚರಿಸುವ ನೀವು ಯಾರು? ಇವನ್ನು ನನಗೆ ಹೇಳಿರಿ.

೪೦. ಅನಂತರ ಆ ಶಂಕರಪುತ್ರರು ಮುನಿಶ್ರೇಷ್ಠನಾದ ಕಾಪೋತನನ್ನು ನಮಸ್ಕರಿಸಿ ಯೋಗ್ಯವಾಗಿ ಸಂಭಾಷಿಸಿ ಅವನನ್ನು ಕುರಿತು ಹೀಗೆ ಹೇಳಿದರು.

ಕಾಪೋತಾಖ್ಯಂ ಮುನಿಶ್ರೇಷ್ಠಮೂತುಃ ಶಂಚಕರಾತ್ಮಜೌ ।
ಚಂದ್ರಶೇಖರಪುತ್ರೌ ಚ ತಾರಾವತ್ಯಾಂ ಸಮುದ್ಭವೌ ॥ ೪೧ ॥

ವಿದ್ಧಿ ತ್ವಂ ಮುನಿಶಾರ್ದೂಲ ಪ್ರಣಮಾವಃ ಪದಂ ತವ ।
ಅವಜ್ಞಾಂ ವೀಕ್ಷ್ಯ ನೃಪತೇರಾವಯೋಃ ಸತತಂ ಮುನೇ ॥ ೪೨ ॥

ಏಕಾಕಿನೌ ನಿರ್ಜನೇಷು ಭ್ರಮಾವೋ ಮನ್ಯುನಾ ಸದಾ ।
ಕಿಮರ್ಥಮಾತ್ಮಜೌ ಪುತ್ರೌ ಪ್ರಣತೌ ಸತತಂ ನೃಪಃ ॥ ೪೩ ॥

ಅವಜ್ಞಾಯ ಮಹಾಭಾಗ ದಾಯಭಾಗಂ ನ ದಿತ್ಸತಿ ।
ತಸ್ಮಾದಾವಾಂ ತಪಸ್ತಪ್ತುಮಿಚ್ಛಾವೋ ದ್ವಿಜಸತ್ತಮ ॥ ೪೪ ॥

ಉಪದೇಶಪ್ರದಾನೇನ ಚಾನುಗೃಹ್ಣಾತಿ ಚೇದ್ಭವಾನ್ ।
ತತಸ್ತಯೋರ್ವಚಃ ಶ್ರುತ್ವಾ ಪ್ರಹಸ್ಯ ಮುನಿಸತ್ತಮಃ ॥ ೪೫ ॥

---

೪೧. ಓ ಮುನಿಶ್ರೇಷ್ಠನೇ, ನಾವು ತಾರಾವತಿಯಲ್ಲಿ ಜನಿಸಿದ ಚಂದ್ರಶೇಖರ ರಾಜನ ಪುತ್ರರು, ನಿನ್ನ ಪಾದಕ್ಕೆರಗುವೆವು.

೪೨. ನಮ್ಮ ತಂದೆಯು ಸದಾ ನಮ್ಮಲ್ಲಿ ತೋರುತ್ತಿರುವ ಅನಾದರವನ್ನು ನೋಡಿ ನಾವು ವ್ಯಥೆಗೊಂಡು ನಿರ್ಜನವಾದ ಸ್ಥಳಗಳಲ್ಲಿ ಸಂಚರಿಸುತ್ತಿರುವೆವು.

೪೩. ತನ್ನಿಂದಲೇ ಜನಿಸಿದವರೂ ವಿನೀತರೂ ಆದ ನಮ್ಮನ್ನು ಆ ರಾಜನು ತಿರಸ್ಕರಿಸಿ ದಾಯಭಾಗವನ್ನೂ ಕೊಡಲಿಲ್ಲವು. ಇದಕ್ಕೆ ಕಾರಣವೇನು ?

೪೪. ಓ ವಿಪ್ರೋತ್ತಮನೇ, ಆದಕಾರಣ ನೀನು ನಮಗೆ ಉಪದೇಶವನ್ನು ಕೊಟ್ಟು ಅನುಗ್ರಹಿಸಿದರೆ ತಪಸ್ಸನ್ನು ಆಚರಿಸಲಪೇಕ್ಷೆಯುಳ್ಳವರಾಗಿರುವೆವು.

೪೫. ಅನಂತರ ಆ ವೇತಾಲಭೈರವರ ಮಾತನ್ನು ಕೇಳಿ ಕಾಪೋತವೆಂಬ ಶ್ರೇಷ್ಠನು ನಕ್ಕು ಆಮೇಲೆ ಹಿಂದೆ ನಡೆದ, ಈಗ ನಡೆಯುತ್ತಿರುವ ಮತ್ತು ಮುಂದೆ ನಡೆಯುವಂತಹ ಎಲ್ಲಾ ವೃತ್ತಾಂತವನ್ನೂ ತಿಳಿದ ಆ ಮುನಿಯು ಹೀಗೆಹೇಳಿದನು.

ಭೂತಭವ್ಯಭವಜ್ಜ್ಞಾನಸ್ತಾವಿದಂ ಮುನಿರಬ್ರವೀತ್ ।

॥ ಮುನಿರುವಾಚ ॥

ನ ಯುವಾಂ ತನಯೌ ತಸ್ಯ ಚಂದ್ರಶೇಖರಭೂಪತೇಃ ॥ ೪೬ ॥

ತಾರಾವತ್ಯಾಂ ಸಮುತ್ಪನ್ನೌ ಭವಂತೌ ಶಂಕರಾತ್ಮಜೌ ।
ಸದ್ಯೋ ಜಾತೌ ಮಹಾವೀರ್ಯೌ ವೇತಾಲತ್ವೇ ಚ ಸಂಸ್ಥಿತೌ ॥ ೪೭ ॥

ಭೃಂಗಿಮಹಾಕಾಲಸಂಜ್ಞೌ ಶಾಪಾದ್ಧರಣಿಮಾಗತೌ ।
ಯುವಯೋರತ್ರ ತೇನೈವ ನ ದಾಯಂ ದಿತ್ಸತಿ ಪ್ರಿಯಂ ॥ ೪೮ ॥

ಗಚ್ಛ ತಂ ಶರಣಂ ತಾತಂ ಶಂಕರಂ ವೃಷಭಧ್ವಜಂ ।
ಸ ಏವ ಯುವಯೋಃ ಸರ್ವಂ ಕರಿಷ್ಯತಿ ಮಹೇಶ್ವರಃ ॥ ೪೯ ॥

ಕಿಂ ವಾತ್ಯುಗ್ರೇಣ ತಪಸಾ ಚಿರಕಾಲಫಲೇನ ವೈ ।
ಇತ್ಯುಕ್ತ್ವಾ ಮುನಿಶಾರ್ದೂಲಃ ಕಾಪೋತಃ ಪರಮಾತ್ಮಧೃಕ್ ॥ ೫೦ ॥

---

೪೬. ಕಾಪೋತಮುನಿಯು ಹೇಳಿದನು:—ಎಲೈ ಕುಮಾರರೇ, ನೀವು ಚಂದ್ರಶೇಖರರಾಜನ ಪುತ್ರರಲ್ಲವು. ನೀವು ತಾರಾವತಿಯಲ್ಲಿ ಉತ್ಪನ್ನರಾದ ಶಂಕರನ ಪುತ್ರರು.

೪೭. ಕಾಮಕ್ರೀಡೆಯಾದೊಡನೆಯೇ ನೀವು ಜನಿಸಿದವರು. ಮಹಾ ವೀರರಾದ ನೀವು ಹಿಂದೆ ಶಂಕರನ ಭೂತಗಣದಲ್ಲಿ ಭೃಂಗಿ ಮತ್ತು ಮಹಾಕಾಲರೆಂಬುವರಾಗಿದ್ದು ಈಗ ಶಾಪದಿಂದ ಭೂಮಿಯಲ್ಲಿ ಜನಿಸಿರುವಿರಿ.

೪೮. ಆ ಕಾರಣದಿಂದಲೇ ಚಂದ್ರಶೇಖರನು ನಿಮಗೆ ದಾಯಭಾಗವನ್ನು ಕೊಡಲಾರದವನಾಗಿರುವನು. ವೃಷಭವಾಹನನಾದ ನಿಮ್ಮ ತಂದೆ ಶಂಕರನನ್ನು ಶರಣು ಹೊಂದುವವರಾಗಿರಿ.

೪೯. ಆ ಮಹೇಶ್ವರನೇ ನಿಮಗೆ ಎಲ್ಲವನ್ನೂ ಅನುಗ್ರಹಿಸುವನು. ಬಹಳ ಕಾಲದಮೇಲೆ ಫಲವನ್ನುಕೊಡುವ ಈ ಉಗ್ರವಾದ ತಪಸ್ಸಿನಿಂದೇನು ಪ್ರಯೋಜನ?

೫೦. ಹೀಗೆ ಹೇಳಿ ಪರಮಾತ್ಮ ದೃಷ್ಟಿಯುಳ್ಳವನೂ, ಭೂತ, ಭವಿಷ್ಯದ್ವರ್ತಮಾನಗಳ ಜ್ಞಾನವುಳ್ಳವನೂ ಆದ ಕಾಪೋತಮುನಿಯು ಆ ವೇತಾಲಭೈರವರಿಗೆ ಮುಂದೆ ನಡೆದುದೆಲ್ಲವನ್ನೂ ಹೇಳಿದನು.

ಭೂತಭವ್ಯಭವಜ್ಜ್ಞಾನಃ ತಾಭ್ಯಾಂ ಸರ್ವಮುಥೋಚಿವಾ ।
ಯಥಾ ಭೃಂಗಿಮಹಾಕಾಲೌ ಶಪ್ತಾವವನಿಮಾಗತೌ ॥ ೫೧ ॥

ಯಥಾ ಹರಶ್ಚ ಗೌರೀ ಚ ಪೃಥಿವೀಮಾಗತೌ ನೃಪ ।
ತಾರಾವತೀ ಯಥಾ ಶಪ್ತಾ ತೇನೈವ ಮುನಿನಾ ಪುರಾ ॥ ೫೨ ॥

ಯಥಾ ತೌ ಚ ಸಮುತ್ಪನ್ನೌ ತಾರಾವತ್ಯುದರೆ ಪುರಾ ।
ಯಥಾ ವಾ ನಾರದೇನೈವ ಸಂಶಯಚ್ಛೇದನಂ ನೃಪೇ ॥ ೫೩ ॥

ತತ್ಸರ್ವಂ ಕಥಯಾಮಾಸ ಪುತ್ರಾಭ್ಯಾಂ ಗಿರಿಶಸ್ಯ ತು ।
ತಚ್ಛ್ರುತ್ವಾ ತೌ ಮಹಾತ್ಮಾನೌ ತದಾ ವೇತಾಲಭೈರವೌ ॥ ೫೪ ॥

ಮುದಾ ಪರಮಯಾ ಯುಕ್ತಾ ಬಭೂವತುರನಿಂದಿತೌ ।
ಮೋದಪೂರ್ಣೌ ತದಾ ಭೂತ್ವಾ ಸಿಕ್ತಾವಿವ ಸುಧಾರಸೈಃ ॥೫೫ ॥

---

೫೧. ಎಲೈ ನಗರರಾಜನೇ, ಭೃಂಗೀ ಮಹಾಕಾಲರು ಪಾರ್ವತಿಯ ಶಾಪದಿಂದ ಭೂಮಿಯಲ್ಲಿ ಜನಿಸಿದುದನ್ನೂ ಮತ್ತು ಶಂಕರಪಾರ್ವತಿಯರೂ ಸಹ ಭೂಮಿಯಲ್ಲಿ ಜನಿಸಿದುದನ್ನೂ ಹೇಳಿದನು.

೫೨. ತಾರಾವತಿಯನ್ನು ತಾನೇ (ಕಾಪ್ಯೋತಮುನಿಯೇ) ಶಪಿಸಿದುದನ್ನೂ ಆ ತಾರಾವತಿಯ ಗರ್ಭದಲ್ಲಿ (ಶಂಕರನಿಂದ) ಆ ವೇತಾಲಭೈರವರು ಜನಿಸಿದುದನ್ನೂ ಹೇಳಿದನು.

೫೩. ನಾರದಮುನಿಯು ಚಂದ್ರಶೇಖರನಿಗೆ ಸಂಶಯವನ್ನು ಹೋಗಲಾಡಿಸಿದುದೇ ಮುಂತಾದ ಎಲ್ಲಾ ವೃತ್ತಾಂತವನ್ನೂ ಆ ಶಂಕರಪುತ್ರರಿಗೆ ಕಾಪ್ಯೋತ ಮುನಿಯು ಹೇಳಿದನು.

೫೪. ಅವೆಲ್ಲವನ್ನೂ ಕೇಳಿ ಮಹಾತ್ಮರೂ ಸತ್ಪುರುಷರೂ ಆದ ಆ ವೇತಾಲಭೈರವರು ಆಗ ತುಂಬಾ ಹರ್ಷಗೊಂಡರು.

೫೫. ಅಮೃತರಸದಿಂದ ತೇಜಿಸಲ್ಪಟ್ಟವರಂತೆ ಸಂತೋಷಗೊಂಡವರಾಗಿ ಆ ವೇತಾಲಭೈರವರು ತಿರುಗಿ ಕಾಪ್ಯೋತಮುನಿಯನ್ನು ಹೀಗೆ ಪ್ರಶ್ನಿಸಿದರು.

ಮುನಿಃ ಪಪ್ರಚ್ಛ ಕಾಪೋತಂ ವೇತಾಲೋ ಭೈರವೋಽಪಿ ಚ ।
ಪಿತಾ ಽ ವಂಯೋರ್ಮಹಾದೇವಸ್ತ್ವಯಾ ಸತ್ಯಮಿತೀರಿತಂ ॥ ೫೬ ॥

ಸೋರ್ಚನೀಯೋ ಯಥಾ ಽಸ್ಮಾಭಿಃ ಸಿದ್ಧಯೇ ಮುನಿಸತ್ತಮ ।
ಸ ಚಾವಾಭ್ಯಾಂ ಯಥಾ ಽಽರಾಧ್ಯೋ ಯತ್ರ ವಾ ಽಽರಾಧಿತೋ ಹರಃ ॥೫೭॥

ಪ್ರಸಾದಮೇಷ್ಯತ್ಯಚಿರಾತ್ತನ್ನೋ ವದ ಮಹಾಮತೇ ।
ಧನ್ಯಾವನುಗೃಹೀತೌ ನೌ ಯಸ್ತ್ವಯಾ ಮುನಿಸತ್ತಮ ॥ ೫೮ ॥

ವಿಜ್ಞಾಪಿತಮಿದಂ ಸರ್ವಂ ಹೃಚ್ಛಲ್ಯಂ ಚೋದ್ಧೃತಂ ಚ ನೌ ।
ಪುನರಾವಾಂ ದಯಸ್ವ ತ್ವಂ ಕೃಪಾಮಯ ಮುನೀಶ್ವರ ॥ ೫೯ ॥

ಪ್ರಾಪ್ಸ್ಯಾವೋ ನ ಚಿರಾದ್ಭರ್ಗಂ ಯಥಾ ವದ ತಥೈವ ನೌ ।
॥ ಮುನಿರುವಾಚ ॥
ಶೃಣುತಂ ಕಥಯಾಮ್ಯದ್ಯ ಯತ್ರ ಚಾ ಽಽರಾಧಿತೋ ಹರಃ ॥ ೬೦ ॥

---

೫೬. ಓ ಮುನಿಶ್ರೇಷ್ಠನೇ, ನಮ್ಮ ತಂದೆಯು ಮಹಾದೇವನೆಂದು ನೀನು ನಿಜವಾದುದನ್ನು ತಿಳಿಸಿರುವೆ. ಆ ಶಂಕರನನ್ನು ನಮ್ಮಿಷ್ಟಸಿದ್ಧಿಗಾಗಿ ಹೇಗೆ ಅರ್ಚಿಸಬೇಕು ?

೫೭. ನಾವು ಆ ಶಂಕರನನ್ನು ಹೇಗೆ ಆರಾಧಿಸಬೇಕು ? ಎಲ್ಲಿ ಆರಾಧಿಸಿದರೆ ಆ ಶಂಕರನು ಜಾಗ್ರತೆಯಾಗಿ ನಮಗೆ ಪ್ರಸನ್ನನಾಗುವನು ? ಓ ಬುದ್ಧಿಶಾಲಿಯೇ ಈ ವಿಷಯವನ್ನು ನಮಗೆ ಹೇಳುವವನಾಗು.

೫೮. ಓ ಮುನಿಶ್ರೇಷ್ಠನೇ, ನಿನ್ನ ಅನುಗ್ರಹಕ್ಕೆ ಪಾತ್ರರಾದ ನಾವು ಧನ್ಯರು. ನಮ್ಮ ಮನಸ್ಸಿನಲ್ಲಿ ಶಲ್ಯದಂತಿದ್ದ ವ್ಯಥೆಯನ್ನು ನೀನು ಹೋಗಲಾಡಿಸಿರುವೆ.

೫೯. ಕರುಣಾಳುವಾದ ಮುನೀಂದ್ರನೇ, ನಾವು ಶೀಘ್ರವಾಗಿ ಶಂಕರನನ್ನು ಸಡೆಯುವುದು ಹೇಗೆ ? ಎಂಬುದನ್ನು ದಯವಿಟ್ಟು ಹೇಳಿ, ನಮ್ಮನ್ನು ತಿರುಗಿ ಅನುಗ್ರಹಿಸುವವನಾಗು.

೬೦. ಕಾಪೋತಮುನಿಯು ಹೇಳಿದನು:—ಎಲೈ ವೇತಾಲ ಭೈರವನೇ, ಕೇಳಿ ಎಲ್ಲಿ ಆರಾಧಿಸಿದರೆ ಶಂಕರನು ನಿಮಗೆ ಪ್ರತ್ಯಕ್ಷನಾಗುವನೆಂಬುದನ್ನು ಹೇಳುವೆನು.

ನ ಚಿರಾದೇವ ಭವತೋರಾಯಾಸ್ಯತಿ ಸಮುತ್ಸ್ಯತಾಂ ।
ನಿತ್ಯಂ ಯತ್ರ ಮಹಾದೇವೋ ವಸ್ತ ಭವತಿ ತುಷ್ಟಯೇ ॥ ೬೧ ॥

ಯುವಾಂ ತತ್ಸಂಪ್ರವಕ್ಷ್ಯಾಮಿ ಸ್ಥಾನಂ ಗುಹ್ಯಂ ಪ್ರಕಾಶಿತಂ ।
ವಾರಾಣಸೀ ನಾಮ ಪುರೀ ಗಂಗಾತೀರೇ ಮನೋಹರೇ ॥ ೬೨ ॥

ವರಣಾಯಾಸ್ತಥಾ ಚಾಸೇರ್ಮಧ್ಯೇ ಚಾಸಾಕೃತಿಃ ಸದಾ ।
ಸ್ವಯಂ ವೃಷಧ್ವಜಸ್ತತ್ರ ನಿತ್ಯಂ ವಸತಿ ಯೋಗಿನಾಂ ॥ ೬೩ ॥

ಸದಾ ಪ್ರೀತಿಕರೋ ಯೋಗೀ ಸ್ವಯಂ ಚಾಸ್ಯಾತ್ಮಚಿಂತಕಃ ।
ವಿಯತ್ಸ್ಥಾ ಸಾ ಪುರೀ ನಿತ್ಯಂ ಭರ್ಗಯೋಗಬಲಾದ್ಧೃತಾ ॥ ೬೪ ॥

ದಿವ್ಯಜ್ಞಾನಂ ದದಾತ್ಯೇವ ತತ್ರ ಯೋ ಮ್ರಿಯತೇ ನರಃ ।
ತಸ್ಯೈ ಸ್ವಯಂ ಮಹಾದೇವಃ ಸಂಸಾರಗ್ರಂಥಿಮುಕ್ತಯೇ ॥ ೬೫ ॥

ಸ ಭೂತ್ವಾ ಪರಮೋ ಯೋಗೀ ಮೃತಸ್ತತ್ರ ಭವಾಂತರೇ ।
ಸುಲಭೇನೈವ ನಿರ್ವಾಣಮೂಹ್ನೋತಿ ಹರಸಂಮತಃ ॥ ೬೬ ॥

---

೬೧. ಯಾವಸ್ಥಳದಲ್ಲಿ ನಿತ್ಯವೂ ವಾಸಿಸುತ್ತಾ ಶಂಕರನು ನಿಮಗೆ ಸುಪ್ರೀತನಾಗಬಹುದೋ ಅಂತಹ ಅತಿರಹಸ್ಯವೂ ತೇಜಸ್ವಿಯೂ ಆದ ಸ್ಥಳವನ್ನು ನಿಮಗೆ ಹೇಳುವೆನು.

೬೨. ಗಂಗಾನದಿಯ ಮನೋಹರವಾದ ತೀರದಲ್ಲಿ, ವರಣಾ ಮತ್ತು ಅಸಿ ಎಂಬ ನದಿಗಳ ಮಧ್ಯದಲ್ಲಿ ವಾರಾಣಸೀ ಎಂಬ ಪುರಿಯು ಇರುವುದು. ಅದು ಧನುಸ್ಸಿನ ಆಕಾರವಾಗಿರುವುದು.

೬೩. ಅಲ್ಲಿ ಶಂಕರನು ಯೋಗಿಗಳಿಗೆ ಪ್ರೀತಿಯನ್ನುಂಟುಮಾಡುತ್ತಾ ನಿತ್ಯವೂ ನೆಲಸಿರುವನು. ತಾನೂ ಸಹ ಯೋಗಿಯಾಗಿ ತತ್ತ್ವವನ್ನು ಚಿಂತಿಸುತ್ತಲಿರುವನು.

೬೪-೬೫. ಆ ನಗರಿಯು ಆಕಾಶದಲ್ಲಿದ್ದು, ಶಂಕರನ ಯೋಗಬಲದಿಂದ ನಿಂತಿರುತ್ತದೆ. ಆ ವಾರಾಣಸಿಯಲ್ಲಿ ಮೃತನಾದವನಿಗೆ ಶಂಕರನೇ ಸಂಸಾರ ಬಂಧನದ ನಿವೃತ್ತಿಗಾಗಿ ದಿವ್ಯಜ್ಞಾನವನ್ನು ಕರುಣಿಸುವನು.

೬೬. ಅಲ್ಲದೆ ಆ ವಾರಾಣಸಿಯಲ್ಲಿ ಮೃತನಾದವನು ಜನ್ಮಾಂತರದಲ್ಲಿ ಶಂಕರ ಪ್ರಿಯನಾಗಿಯೂ ಪರಮ ಯೋಗಿಯೂ ಆಗಿ ಸುಲಭದಿಂದಲೇ ಮುಕ್ತಿಯನ್ನು ಹೊಂದುವನು.

ಯೋಗಯುಕ್ತೋ ಮಹಾದೇವಃ ಪಾರ್ವತ್ಯಾ ಸಹಿತಸ್ಸದಾ ।
ದೇವಗಂಧರ್ವಯಕ್ಷಾಣಾಂ ಮಾನುಷಾಣಾಂ ಚ ನಿತ್ಯಶಃ ॥ ೬೭ ॥

ಧ್ಯೇಯೋ ಪರಃ ಪ್ರಕಾಶಶ್ಚ ಕ್ಷೇತ್ರಂ ತಚ್ಚ ಪ್ರಕೀರ್ತಿತಂ ।
ನ ತತ್ರ ಕಾಮದೋ ದೇವೋ ನ ಚಿರಾಚ್ಚ ಪ್ರಸೀದತಿ ॥ ೬೮ ॥

ಆರಾಧಿತಶ್ಚಿರಂ ಪ್ರೀತ್ಯಾ ನಿರ್ವಾಣಾಯ ಪ್ರಸೀದತಿ ।
ಗೌರ್ಯಾ ವಿಸರ್ಜಿತಾ ಸಾ ತು ಪುರೀ ತತ್ರ ನ ಗಚ್ಛತಿ ॥ ೬೯ ॥

ಯೋಗಸ್ಥಾನಂ ಮಹಾಕ್ಷೇತ್ರಂ ಕದಾಚಿದಪಿ ಶಾಂಕರೀ ।
ಆಸನ್ನಂ ಯುವಯೋಃ ಕ್ಷೇತ್ರಮಿದಂ ವಾರಾಣಸೀ ತು ಯತ್ ॥ ೭೦ ॥

ಕಥಿತಂ ನಾತಿದೂರೇ ಚ ವರ್ತತೇ ಸರಸತ್ತಮೌ ।
ಅಪರಂ ತು ಪ್ರವಕ್ಷ್ಯಾಮಿ ಗುಹ್ಯಂ ಪೀಠಂ ಸದಾರ್ಚಿತಂ ॥ ೭೧ ॥

---

೬೭. ಪಾರ್ವತೀ ಸಹಿತನಾದ ಮತ್ತು ಯೋಗಿಯಾದ ಮಹಾದೇವನನ್ನು ಅಲ್ಲಿ ದೇವತೆಗಳೂ, ಗಂಧರ್ವರೂ, ಯಕ್ಷರೂ. ಮನುಷ್ಯರೂ ಸಹ ನಿತ್ಯವೂ ಧ್ಯಾನಿಸುತ್ತಿರುವರು. ಅದು ಮಹಾಕ್ಷೇತ್ರವು.

೬೮. ಆ ಕ್ಷೇತ್ರದಲ್ಲಿ ಇಷ್ಟಾರ್ಥವನ್ನು ಕೊಡುವ ಆ ಮಹಾದೇವನು ಜಾಗ್ರತೆಯಾಗಿ ಪ್ರಸನ್ನನಾಗುವುದಿಲ್ಲವು. ಬಹಳಕಾಲ ಭಕ್ತಿಯಿಂದ ಆರಾಧಿಸಿದರೆ ಮಾತ್ರ ಅವನು ಪ್ರಸನ್ನನಾಗಿ ಮುಕ್ತಿಯನ್ನೀಯುವನು.

೬೯. ಯೋಗಕ್ಕೆ ನಿವಾಸವೂ, ಮಹಾಕ್ಷೇತ್ರವೂ ಆದ ಆ ವಾರಾಣಸೀಸ್ಥಿತಿಯನ್ನು ಬಿಟ್ಟು ಪಾರ್ವತಿಯು ಯಾವಾಗಲೂ ಎಲ್ಲಿಗೂ ಹೋಗುವುದಿಲ್ಲ.

೭೦. ಎಲೈ ಪುರುಷಶ್ರೇಷ್ಠರೆ ನಾನು ಹೇಳಿದ ಈ ವಾರಾಣಸೀ ಕ್ಷೇತ್ರವು ನಿಮಗೆ ಹೆಚ್ಚಿಗೆ ದೂರದಲ್ಲಿರುವುದಿಲ್ಲವು. ಸಮೀಪದಲ್ಲಿಯೇ ಇರುವುದು.

೭೧. ಅತಿ ರಹಸ್ಯವೂ, ದೇವತೆಗಳಿಂದ ಸದಾ ಆರಾಧಿಸಲ್ಪಡುವುದೂ, ಶಂಕರ ಪಾರ್ವತಿಯರ ಸಾನ್ನಿಧ್ಯವಿರುವಂತಹುದೂ, ಧರ್ಮ, ಅರ್ಥ ಮತ್ತು ಕಾಮಗಳನ್ನು ಕೊಡುವಂತಹುದೂ ಆದ ಇನ್ನೂ ಒಂದು ಉತ್ಕೃಷ್ಟವಾದ ಪೀಠ (ಸ್ಥಾನ)ವನ್ನು ನಿಮಗೆ ಹೇಳುವೆನು.

ಹರಗೌರೀಸಮಾಯುಕ್ತಂ ಪರಂ ಧರ್ಮಾರ್ಥಕಾಮದಂ ।
ತಪಸಾ ಚಾತಿತೀವ್ರೇಣ ಚಿರಾದ್ಭವತಿ ಮೋಕ್ಷದಂ ॥ ೭೨ ॥

ನ ಚಿರಾತ್ಕಾಮದಂ ಪುಣ್ಯಂ ಕ್ಷೇತ್ರಂ ಪೀಠಂ ನಿಗದ್ಯತೆ ।
ಚಿರಾತ್ತು ಕಾಮದೋ ದೇವೋ ನ ಚಿರಾದ್ಯತ್ರ ಜ್ಞಾನದಃ ॥ ೭೩ ॥

ತತ್ಕ್ಷೇತ್ರಮಿತಿ ಲೋಕೇಷು ಗದ್ಯತೆ ಪೂರ್ವಸೂರಿಭಿಃ ।
ಕಾಮರೂಪಂ ಮಹಾಪೀಠಂ ಗುಹ್ಯಾದ್ಗುಹ್ಯತರಂ ಪರಂ ॥ ೭೪ ॥

ಸದಾ ಸನ್ನಿಹಿತಸ್ತತ್ರ ಪಾರ್ವತ್ಯಾ ಸಹ ಶಂಕರಃ ।
ನ ಚಿರಾತ್ಪೂಜಿತೋ ದೇವಸ್ತಸ್ಮಿ ಪೀಠೇ ಪ್ರಸೀದತಿ ॥ ೭೫ ॥

ಪಾರ್ವತೀ ಚಾನುಗೃಹ್ಣಾತಿ ಭರ್ಗಭಕ್ತಂ ತು ತತ್ರ ವೈ ।
ದದಾತಿ ನ ಚಿರಾತ್ಕಾಮಂ ಭಕ್ತಾಯ ಪರಮೇಶ್ವರಃ ॥ ೭೬ ॥

---

೭೨. ಮಿಕ್ಕಕ್ಷೇತ್ರಗಳು ಉಗ್ರವಾದ ತಪಸ್ಸಿನಿಂದಲಾದರೆ ಬಹಳಕಾಲ ಗಳಮೇಲೆ ಮುಕ್ತಿಯನ್ನು ಕೊಡುವುದು. ಆದರೆ ಈ ಪುಣ್ಯಕ್ಷೇತ್ರವಾದ ಪೀಠವು ಸ್ವಲ್ಪಕಾಲದಲ್ಲಿಯೇ ನಮ್ಮ ಇಷ್ಟಾರ್ಥವನ್ನೀಯುವುದು.

೭೩. ಯಾವಸ್ಥಾನದಲ್ಲಿ ದೇವನು ಬಹಳಕಾಲದನಂತರ ಇಷ್ಟಾರ್ಥವನ್ನು ಸಲ್ಲಿಸುವನೋ ಮತ್ತು ಸ್ವಲ್ಪಕಾಲದಲ್ಲಿಯೇ ಜ್ಞಾನವನ್ನು ಕೊಡುವನೋ ಅಂತಹ ಸ್ಥಾನಕ್ಕೆ ಕ್ಷೇತ್ರವೆಂದು ಹಿಂದಿನವರಾದ ವಿದ್ವಾಂಸರು ಹೇಳಿರುವರು.

೭೪. ಕಾಮರೂಪವೆಂಬ ನಾನು ಹೇಳುವ ಈ ಪೀಠವು ಅತಿ ರಹಸ್ಯವಾದುದು. ಅಲ್ಲಿ ಶಂಕರನು ಪಾರ್ವತಿಯೊಡನೆ ಸದಾ ಸನ್ನಿಹಿತನಾಗಿರುವನು.

೭೫. ಆ ಸ್ಥಾನದಲ್ಲಿ ಶಂಕರನನ್ನು ಅರ್ಚಿಸಿದರೆ ಸ್ವಲ್ಪಕಾಲದಲ್ಲಿಯೇ ಅವನು ಪ್ರಸನ್ನನಾಗುವನು. ಪಾರ್ವತಿಯೂ ಸಹ ಅಲ್ಲಿ ಆ ಶಂಕರನ ಭಕ್ತನನ್ನು ಅನುಗ್ರಹಿಸುವಳು.

೭೬. ಪರಮೇಶ್ವರನು ಜಾಗ್ರತೆ ಅಲ್ಲಿ ತನ್ನ ಭಕ್ತನಿಗೆ ಇಷ್ಟಾರ್ಥವನ್ನು ಕೊಡುವನು. ಇಂತಹ ಆ ಪೀಠವನ್ನು ನಿಮಗೆ ಹೇಳುವೆನು ಕೇಳಿರಿ.

ತಂ ತು ಪೀಠಂ ಪ್ರವಕ್ಷ್ಯಾಮಿ ಶೃಣುತಂ ಸಾಂಪ್ರತಂ ಯುವಾಂ ।
ಕರತೋಯಾ ನದೀ ಪೂರ್ವಂ ಯಾವದ್ದಿಕ್ಕರವಾಸಿನೀಂ ॥ ೭೭ ॥

ತ್ರಿಂಶದ್ಯೋಜನವಿಸ್ತೀರ್ಣಂ ಯೋಜನೈಕಶತಾಯತಂ ।
ತ್ರಿಕೋಣಂ ಕೃಷ್ಣವರ್ಣಂ ಚ ಪ್ರಭೂತಾಚಲಪೂರಿತಂ ॥ ೭೮ ॥

ನದೀಶತಸಮಾಯುಕ್ತಂ ಕಾಮರೂಪಂ ಪ್ರಕೀರ್ತಿತಂ ।
ಶಂಭುನೇತ್ರಾಗ್ನಿನಿರ್ದಗ್ಧಃ ಕಾಮಃ ಶಂಭೋರನುಗ್ರಹಾತ್ ॥ ೭೯ ॥

ತತ್ರ ರೂಪಂ ಯತಃ ಪ್ರಾಪ ಕಾಮರೂಪಂ ತತೋಽಭವತ್ ।
ತಸ್ಯ ಪೀಠಸ್ಯ ವಾಯವ್ಯಾಂ ನೈರ್ಋತ್ಯಾಂ ಮಧ್ಯಭಾಗತಃ ॥ ೮೦ ॥

ಐಶಾನ್ಯಾಂ ಚ ತಥಾಗ್ನೇಯ್ಯಾಂ ಮಧ್ಯಪಾರ್ಶ್ವೇ ಚ ಶಂಕರಃ ।
ಸ್ವಮಾಶ್ರಮಪದಂ ಕೃತ್ವಾ ಷಟ್ಸು ಸ್ಥಾನೇಷು ಶೋಭನಂ ॥ ೮೧ ॥

೭೭-೭೮. ಕರತೋಯಾ ನದಿಯಿಂದ ಮೊದಲುಗೊಂಡು ಪೂರ್ವದಿಕ್ಕಿನಲ್ಲಿ ದಿಕ್ಕರವಾಸಿನೀ ದೇವಿಯಿರುವವರೆಗೂ, ಮಧ್ಯದಲ್ಲಿ ಮೂವತ್ತು ಯೋಜನ ವಿಸ್ತೀರ್ಣವಾಗಿಯೂ, ನೂರುಯೋಜನ ವಿಶಾಲವಾಗಿಯೂ ಕಾಮರೂಪವೆಂಬ ದೇಶವಿರುವುದು. ಅದು ತ್ರಿಕೋಣದ ಆಕಾರವಾಗಿರುವುದು. ಕಪ್ಪುವರ್ಣವುಳ್ಳದುದು. ಅನೇಕ ಬೆಟ್ಟುಗಳಿಂದ ಕೂಡಿದೆ. ನೂರು ನದಿಗಳು ಅಲ್ಲಿ ಹರಿಯುತ್ತವೆ.

೭೯. ಶಂಕರನ ನೇತ್ರಾಗ್ನಿಯಿಂದ ಸುಡಲ್ಪಟ್ಟ ಕಾಮನು ತಿರುಗಿ ಶಂಕರನ ಅನುಗ್ರಹದಿಂದ ಅಲ್ಲಿ ಶರೀರವನ್ನು ಪಡೆದುದರಿಂದ ಆ ದೇಶಕ್ಕೆ ಕಾಮರೂಪವೆಂಬ ಹೆಸರಾಯಿತು.

೮೦-೮೧. ಆ ಪೀಠದ ವಾಯವ್ಯ ದಿಕ್ಕು, ನೈರ್ಋತ್ಯ ದಿಕ್ಕು, ಮಧ್ಯಭಾಗ, ಈಶಾನ್ಯ ದಿಕ್ಕು, ಆಗ್ನೇಯ ದಿಕ್ಕು, ಮಧ್ಯದ ಒಂದುಪಾರ್ಶ್ವ ಈ ಆರು ಸ್ಥಳಗಳಲ್ಲಿ ಶಂಕರನು ಮನೋಹರಗಳಾದ ಆಶ್ರಮಗಳನ್ನು ಮಾಡಿಕೊಂಡು ಅವುಗಳಲ್ಲಿ ನಿತ್ಯವೂ ಪಾರ್ವತಿಯೊಡನೆ ವಿಹರಿಸುವನು.

ನಿತ್ಯಂ ವಸತಿ ತತ್ರಾಪಿ ಪಾರ್ವತ್ಯಾ ಸಹ ನರ್ಮಭಿಃ ।
ಮಧ್ಯೇ ದೇವೀ ಗೃಹಂ ತತ್ರ ತದಧೀನಸ್ತು ಶಂಕರಃ ॥ ೮೨ ॥

ನೀಲಾಖ್ಯೇ ಪರ್ವತಶ್ರೇಷ್ಠೇ ಪಾರ್ವತೀ ತತ್ರ ತಿಷ್ಠತಿ ।
ಐಶಾನ್ಯಾಂ ನಾಟಕೇ ಶೈಲೇ ಶಂಕರಸ್ಯ ಮಹಾಶ್ರಮಂ ॥ ೮೩ ॥

ನಿತ್ಯಂ ವಸತಿ ತತ್ರೇಶಸ್ತದಧೀನಾ ಚ ಪಾರ್ವತೀ ।
ಅಪರೇ ಚಾಶ್ರಮಾಃ ಸಂತಿ ಹರಗೌರ್ಯೋಃ ಸದಾತನಾಃ ॥ ೮೪ ॥

ನೈತಯೋಃ ಸದೃಶಃ ಕೋಽಪಿ ವಿದ್ಯತೆ ಶಂಕರಾಶ್ರಮಃ ।
ಯತ್ರಾರಾಧ್ಯೋ ಮಹಾದೇವೋ ಭವದ್ಭ್ಯಾಂ ನರಸತ್ತಮೌ ॥ ೮೫ ॥

ತತ್ಸ್ಥಾನಂ ಮನಸಾದಾಯ ಪ್ರಸಾದಯ ವೃಷಧ್ವಜಂ ।
॥ ವೇತಾಲಭೈರವಾವೂಚತುಃ ॥
ತಾಮರೂಪಂ ಗಮಿಷ್ಯಾವೋ ರಹಸ್ಯಂ ನಾಟಕಾಚಲಂ ॥ ೮೬ ॥

---

೮೨. ಆ ಮಧ್ಯದೇಶದಲ್ಲಿ, ನೀಲವೆಂಬುದೊಂದು ಪರ್ವತೋತ್ತಮವಿರುವುದು. ಅದರಲ್ಲಿ ಪಾರ್ವತಿಯ ಮಂದಿರವು ಇರುವುದು. ಅಲ್ಲಿ ಪಾರ್ವತಿ ಇರುವಳು. ಶಂಕರನೂ ಅವಳ ಅಧೀನನಾಗಿರುವನು.

೮೩. ಈಶಾನ್ಯ ದಿಕ್ಕಿನಲ್ಲಿರುವ ನಾಟಕವೆಂಬ ಬೆಟ್ಟದಲ್ಲಿ ಶಂಕರನ ಮಹಾಶ್ರಮವು ಇರುವುದು. ಅಲ್ಲಿ ಶಂಕರನು ನಿತ್ಯವೂ ನೆಲಸಿರುವನು. ಅವನ ಅಧೀನಳಾಗಿ ಪಾರ್ವತಿಯೂ ನೆಲಸಿರುವಳು.

೮೪. ಇನ್ನೂ ಬೇರೆ, ಶಂಕರಪಾರ್ವತಿಯರು ನಿತ್ಯವೂ ನೆಲಸಿರುವಂತಹ ಅನೇಕ ಆಶ್ರಮಗಳಿರುವುವು. ಆದರೆ ಈ ನೀಲಪರ್ವತದ ಆಶ್ರಮ ಮತ್ತು ನಾಟಕ ಪರ್ವತಗಳಲ್ಲಿರುವ ಆಶ್ರಮಗಳಂತಹ ಆಶ್ರಮವು ಇನ್ನಾವುದೂ ಇರುವುದಿಲ್ಲವು.

೮೫. ಎಲೈ ನರಶ್ರೇಷ್ಠರಾದ ವೇತಾಲ ಭೈರವರೇ, ಮಹಾದೇವನನ್ನು ಎಲ್ಲಿ ನೀವು ಆರಾಧಿಸಬೇಕೆಂದಿರುವಿರೋ ಆ ಆಶ್ರಮವನ್ನು ಮನಸ್ಸಿನಲ್ಲಿ ನಿಶ್ಚಯಿಸಿ ಶಂಕರನನ್ನು ಪ್ರಸನ್ನಗೊಳಿಸಿರಿ.

೮೬. ವೇತಾಲ ಮತ್ತು ಭೈರವರು ಹೇಳಿದರು:—ಓ ಕಾಶ್ಯಪಮುನಿಯೇ ಕಾಮರೂಪದೇಶದಲ್ಲಿರುವ, ಪಾರ್ವತೀಪರಮೇಶ್ವರರು ನಿತ್ಯವೂ ಸನ್ನಿಹಿತವಾಗಿರುವಂತಹ ನಾಟಕಾಚಲಕ್ಕೆ ನಾವು ಹೋಗುವೆವು.

ಗೌರೀಹರೌ ಸ್ಥಿತೌ ಯತ್ರ ನಿತ್ಯಂ ಸನ್ನಿಹಿತೌ ಮುನೇ ।
ಆರಾಧನೀಯೋ ಭೂತೇಶೋ ಹ್ಯವಶ್ಯಮಿಹ ಚಾವಯೋಃ ॥ ೮೭ ॥

ಯಥೈವಾರಾಧಯಿಷ್ಯಾವಸ್ತಥಾಽಜಕ್ಷ್ವ ತ್ವಿಜೋತ್ತಮ ।
ಯೇನ ಮಂತ್ರೇಣ ವಾ ದೇವೋ ನ ಚಿರಾತ್ತು ಪ್ರಸೀದತಿ ॥ ೮೮ ॥

ತತ್ತ್ವಂ ವದ ಮಹಾಭಾಗಾಽನುಗ್ರಹೋಽಸ್ತ್ಯಾವಯೋರ್ಯದಿ ।

॥ ಋಷಿರುವಾಚ ॥

ನಾಟಕಂ ಪರ್ವತಶ್ರೇಷ್ಠಂ ಗಚ್ಛತಂ ನರಸತ್ತಮೌ ॥ ೮೯ ॥

ತತ್ರ ನಿತ್ಯಂ ಮಹಾದೇವೋ ರಮತೇಽಪರ್ಣಯಾ ಸಹ ।
ಸಂಧ್ಯಾಚಲೇ ತತ್ರ ಮುನಿರಾರಾಧಯತಿ ಶಂಕರಂ ॥ ೯೦ ॥

ವಸಿಷ್ಠೋ ಬ್ರಹ್ಮಣಃ ಪುತ್ರಸ್ತಂ ಯುವಾಮನುಗಚ್ಛತಂ ।
ಸ ಚ ಮಂತ್ರಂ ಸತಂತ್ರಂ ಚ ಹರಾರಾಧನಕರ್ಮಣಿ ॥ ೯೧ ॥

---

೮೭. ಶಂಕರನನ್ನು ನಾವು ಅವಶ್ಯವಾಗಿ ಆರಾಧಿಸಬೇಕು. ಓ ವಿಪ್ರೋತ್ತಮನೇ ಶಂಕರನನ್ನು ಆರಾಧಿಸುವ ಕ್ರಮವನ್ನು ನಮಗೆ ಹೇಳುವವನಾಗು.

೮೮. ಯಾವ ಮಂತ್ರದಿಂದ ಶಂಕರನು ಜಾಗ್ರತೆ ಪ್ರಸನ್ನನಾಗುವನು ? ಓ ಭಾಗ್ಯಶಾಲಿಯೇ ನಮ್ಮಲ್ಲಿ ನಿನಗೆ ದಯೆಯಿದ್ದರೆ ಆ ಮಂತ್ರವನ್ನು ನಮಗೆ ಉಪದೇಶಿಸುವವನಾಗು.

೮೯. ಕಾಪೋತಮುನಿಯು ಹೇಳಿದನು:—ಎಲೈ ನರಶ್ರೇಷ್ಠರೇ, ನಾಟಕ ಪರ್ವತಶ್ರೇಷ್ಠವನ್ನು ಕುರಿತು ತೆರಳಿರಿ. ಅಲ್ಲಿ ನಿತ್ಯವೂ ಪಾರ್ವತಿಯೊಡನೆ ಶಂಕರನು ವಿಹರಿಸುವನು.

೯೦. ಅಲ್ಲಿಯೇ ಸಂಧ್ಯಾಚಲದಲ್ಲಿ ಬ್ರಹ್ಮಪುತ್ರನಾದ ವಸಿಷ್ಠಮುನಿಯು ಶಂಕರನನ್ನು ಆರಾಧಿಸುತ್ತಲಿರುವನು. ನೀವು ಅವನಬಳಿಗೆ ಹೋಗುವವರಾಗಿರಿ.

೯೧. ಎಲೈ ವೇತಾಲ ಭೈರವರೇ, ಆ ಮುನಿಯನ್ನು ನೀವು ಪ್ರಶ್ನಿಸಿದರೆ ಅವನು ನಿಮಗೆ ಶಂಕರನನ್ನಾರಾಧಿಸುವ ಮಂತ್ರವನ್ನೂ, ಅದರ ತಂತ್ರವನ್ನೂ ನಿಮಗೆ ಉಪದೇಶಿಸುವನು.

ಜ್ಞಾಪಯಿಷ್ಯತಿ ವಾಂ ಪೃಷ್ಟಃ ಕಿಲ ವೇತಾಲಭೈರವೌ ।
ತಪಸೇ ಗಂತುಮಿಚ್ಛಾಮಿ ನೇದಾನೀಂ ಕಾಲಯಾಪನಾ ॥ ೯೨ ॥

ಯುಜ್ಯತೆ ಮಮ ತಸ್ಮಾನ್ಮಾಂ ತ್ಯಜ್ಯತಾಂ ವೀರಸತ್ತಮೌ ।
ಏವಮುಕ್ತ್ವಾ ಮುನಿಶ್ರೇಷ್ಠಃ ಕಾಪೋತಃ ಪ್ರಯಯೌ ವನಂ ॥ ೯೩ ॥

ತೌ ತಂ ಮುನಿಂ ನಮಸ್ಕೃತ್ಯ ಜಗ್ಮತುರ್ಭವನಂ ನಿಜಂ ।
ಅಥ ತೌ ಸಮಯಂ ಕೃತ್ವಾ ವೀಕ್ಷಿತೌ ತಪಸೇ ತದಾ ॥ ೯೪ ॥

ಪಿತರಾವಪ್ಯನುಜ್ಞಾಪ್ಯ ಭ್ರಾತೄನನ್ಯಾಂಶ್ಚ ಬಾಂಧವಾನ್ ।
ಪ್ರಸ್ಥಾನಂ ಕಾಮರೂಪಾಯ ಚಕ್ರತುಸ್ತೌ ಮುಹಾಮತೀ ॥ ೯೫ ॥

ತೌ ಗಚ್ಛಂತೌ ಪರಿಜ್ಞಾಯ ಶಂಕರೋಽಪಿ ಸಹೋಮಯಾ ।
ದೇವಾನ್ ಸರ್ವಾನುವಾಚೇದಂ ಸಾಂತ್ವಯನ್ನಿವ ಸೇಂದ್ರಕಾನ್ ॥ ೯೬ ॥

---

೯೨. ನಾನು ತಪಸ್ಸಿಗೆ ಹೋಗಲುದ್ಯುಕ್ತನಾಗಿರುವೆನು. ಈಗ ನಾನು ಕಾಲ ವಿಳಂಬವನ್ನು ಮಾಡುವ್ದು ಸರಿಯಲ್ಲವು. ಆದಕಾರಣ ಎಲ್ಲೆ ವೀರಶ್ರೇಷ್ಠರೇ ನನ್ನನ್ನು ಬೀಳ್ಕೊಡುವರಾಗಿರಿ.

೯೩. ಹೀಗೆ ಹೇಳಿ ಕಾಪೋತಮುನೀಂದ್ರನು ತಪೋವನಕ್ಕೆ ತೆರಳಿದನು. ಆ ವೇತಾಲಭೈರವರು ಮುನಿಯನ್ನು ನಮಸ್ಕರಿಸಿ ತಮ್ಮ ಮನೆಗೆ ಹೊರಟುಹೋದರು.

೯೪-೯೫. ಅನಂತರ ಬುದ್ಧಿಶಾಲಿಗಳಾದ ಆ ವೇತಾಲಭೈರವರು ತಪಸ್ಸಿಗೆ ದೀಕ್ಷಾಬದ್ಧರಾಗಿ ಪ್ರತಿಜ್ಞೆಯನ್ನು ಮಾಡಿಕೊಂಡು ತಮ್ಮ ತಂದೆಯಾದ ಚಂದ್ರ ಶೇಖರ, ತಾಯಿಯಾದ ತಾರಾವತಿ, ಸಹೋದರ, ಬಂಧುಗಳು ಇವರುಗಳ ಅನುಮತಿಯನ್ನು ಪಡೆದು, ಕಾಮರೂಪದೇಶಕ್ಕೆ ತೆರಳಿದರು.

೯೬. ಹೀಗೆ ಆ ವೇತಾಲಭೈರವರು ತಪಸ್ಸಿಗೆ ಹೊರಟಿರುವುದನ್ನು ತಿಳಿದು ಶಂಕರನು ಪಾರ್ವತಿಯೊಡನೆ, ಇಂದ್ರನೇ ಮೊದಲಾದ ದೇವತೆಗಳನ್ನು ಕುರಿತು ಸಮಾಧಾನದಿಂದ ಹೀಗೆ ಹೇಳಿದನು.

॥ ಈಶ್ವರ ಉವಾಚ ॥

ಪುತ್ರೌ ಮೇ ತಪಸೇ ಯಾತಃ ಸಾಂಪ್ರತಂ ಸುರಸತ್ತಮಾಃ ।
ಮಮಾರಾಧನಚಿತ್ತೌ ತು ತೌ ದಯಧ್ವಂ ಸುರೇಶ್ವರಾಃ ॥ ೯೭ ॥

ಸಂಸ್ಕೃತ್ಯ ತಪಸಾ ಚೇಮೌ ಪುತ್ರೌ ವೇತಾಲಭೈರವೌ ।
ಗಾಣಪತ್ಯೇ ನಿಯೋಕ್ಷ್ಯಾಮಿ ತೌ ಸಂಸ್ಕುರ್ವಂತು ಚ ನಿರ್ಜರಾಃ ॥ ೯೮ ॥

ಅನೇನೈವ ಶರೀರೇಣ ಗಣೇಶತ್ವಮವಾಪ್ನುತಃ ।
ತಪಸಾ ತು ತಯೋಃ ಕಾಯೌ ಭಾವಂ ತ್ಯಕ್ತ್ವಾ ತು ಮಾನುಷಂ ॥ ೯೯ ॥

ಯಥಾಪ್ನುತಃ ಸೌರಭಾವಂ ವಿಧಾಸ್ಯಾಮಿ ಹ್ಯಹಂ ತಥಾ ।
ಇತ್ಯುಕ್ತ್ವಾ ವಾಮದೇವೋಽಪಿ ಪಾರ್ವತ್ಯಾ ಸಹ ಪುತ್ರಕೌ ॥ ೧೦೦ ॥

ಗಚ್ಛಂತೌ ವಿಯತಾ ಸ್ನೇಹಾತ್ಪಶ್ಚಾದನುಯಯೌ ಶಿವಃ ।
ಶಕ್ರಾದ್ಯಾಸ್ತ್ರಿದಶಾಃ ಸರ್ವೇ ದಿಕ್ಪಾಲಾಶ್ಚ ತಥಾ ಪರೇ ॥ ೧೦೧ ॥

---

೯೭. ಈಶ್ವರನು ಹೇಳಿದನು:—ಎಲೈ ದೇವಶ್ರೇಷ್ಠರೇ, ಈ ನನ್ನ ಪುತ್ರರು ಈಗ ತಪಸ್ಸಿಗೆ ಹೊರಟಿರುವರು. ನನ್ನನ್ನಾರಾಧಿಸಬೇಕೆಂದಿರುವ ಇವರಲ್ಲಿ ದಯೆಯನ್ನು ತೋರುವವರಾಗಿರಿ.

೯೮. ನನ್ನ ಪುತ್ರರಾದ ಈ ವೇತಾಲ ಭೈರವರನ್ನು ತಪಸ್ಸಿನಿಂದ ಸಂಸ್ಕರಿಸಿ ನನ್ನ ಗಣಗಳ ಪತಿಗಳನ್ನಾಗಿ ಮಾಡುವೆನು. ಆದಕಾರಣ ಎಲೈ ದೇವತೆಗಳೇ ಅವರು ಸಂಸ್ಕಾರವನ್ನು ಹೊಂದುವಂತೆ ಮಾಡಿರಿ.

೯೯. ಅವರು ಈಗಿನ ತಮ್ಮ ಶರೀರದಿಂದಲೇ ಗಣಾಧಿಪತಿಗಳಾಗುವರು. ತಪಸ್ಸಿನಿಂದ ಅವರ ಶರೀರಗಳು ಮನುಷ್ಯಸ್ವಭಾವವನ್ನು ಬಿಟ್ಟು ದೇವಸ್ವಭಾವವನ್ನು ಹೊಂದುವಂತೆ ಮಾಡುವೆನು.

೧೦೦. ಹೀಗೆ ಹೇಳಿ ಶಂಕರನು, ಕೂಗಳತೆ ಭೂಮಿಯಲ್ಲಿ ಹೋಗುತ್ತಲಿರುವ ತನ್ನ ಪುತ್ರರಾದ ಆ ವೇತಾಲಭೈರವರನ್ನು ತಾನೂ ಸಹ ಪ್ರೀತಿಯಿಂದ ಪಾರ್ವತಿಯೊಡನೆ ಆಕಾಶಮಾರ್ಗದಿಂದ ಅನುಸರಿಸಿ ಹೊರಟನು.

೧೦೧. ಆಗ ಇಂದ್ರನೇ ಮೊದಲಾದ ದೇವತೆಗಳೂ, ದಿಕ್ಪಾಲರೂ ಸಹ ಪುತ್ರರನ್ನು ಹಿಂಬಾಲಿಸಿ ಹೋಗುತ್ತಿರುವ ಶಂಕರನನ್ನು ತಾವೂ ಹಿಂಬಾಲಿಸಿ ಹೊರಟರು.

ಸರ್ವೇ ಹರಂ ಚಾನುಜಗ್ಮುರನುಗಚ್ಛಂತಮಾತ್ಮಜೌ ।
ಅಥ ತೌ ತು ನದೀಂ ಪ್ರಾಪ್ಯ ಕೃಷ್ಣಾಜಿನಧರೌ ತದಾ ॥೧೦೨ ॥

ಆದದೇ ತಾಪಸಂ ಭಾವಂ ಗಂಗಾತುಲ್ಯಾಂ ದೃಷದ್ವತೀಂ ।
ತಪಸ್ವಿನೌ ತೌ ದೇವೇನ ತ್ರ್ಯಂಬಕೇನಾಥ ಪಾಲಿತೌ ॥ ೧೦೩ ॥

ದೇವೈಃ ಸಹ ತದಾ ಯಾತೌ ಕಾಮರೂಪಾಹ್ವಯಾಶ್ರಮಂ ।
ಆಸಾದ್ಯ ಕಾಮರೂಪಂ ತು ಕರತೋಯಾನದೀಜಲೇ ॥ ೧೦೪ ॥

ಉಪಸ್ಪೃಶ್ಯ ತತಸ್ತೌ ತು ನಂದಿಕುಂಡಂ ನೃಪೋತ್ತಮ ।
ತತ್ರ ಸ್ನಾತ್ವಾ ಚೋಪಸ್ಪೃಶ್ಯ ನದೀಂ ಗತ್ವಾ ಜಟೋದ್ಭವಾಂ ॥ ೧೦೫ ॥

ತತ್ರಾಪ್ಯುಪಸ್ಪೃಶ್ಯ ಚ ತೌ ನಂದಿನಂ ತಪಸಾ ಧೃತಂ ।
ಪ್ರಣಮ್ಯ ಜಲ್ಪಿಷಂ ದೇವಂ ಜಗ್ಮತುರ್ನಾಟಕಾಚಲಂ ॥ ೧೦೬ ॥

---

೧೦೨. ಬಳಿಕ ಆ ವೇತಾಲಭೈರವರು ಗಂಗೆಗೆ ಸಮಾನವಾದ ದೃಷದ್ವತೀ ನದಿಯನ್ನು ಸೇರಿ ಅಲ್ಲಿ ಕೃಷ್ಣಾಜಿನವನ್ನು ಧರಿಸಿ ತಪಸ್ವಿಗಳ ವೇಷವನ್ನು ತಾಳಿದರು.

೧೦೩. ಅನಂತರ ತಪಸ್ವಿಗಳಾದ ಅವರು ಶಂಕರನಿಂದ ರಕ್ಷಿತರಾಗಿ ದೇವತೆಗಳೊಡನೆ ಕಾಮರೂಪವೆಂಬ ಆಶ್ರಮಕ್ಕೆ ಬಂದರು.

೧೦೪. ಎಲ್ಲೆ ರಾಜೇಂದ್ರನೇ, ಕಾಮರೂಪಕ್ಕೆ ಬಂದು ಅಲ್ಲಿ ಕರತೋಯಾ ನದಿಯ ನೀರನ್ನು ಸ್ಪರ್ಶಿಸಿ (ಆಚಮನ ಮಾಡಿ) ಅನಂತರ ನಂದಿಕುಂಡವೆಂಬ ತೀರ್ಥಕ್ಕೆ ತೆರಳಿದರು.

೧೦೫-೧೦೬. ಆ ತೀರ್ಥದಲ್ಲಿ ಸ್ನಾನಾಚಮನಾದಿಗಳನ್ನು ಮಾಡಿ, ಮುಂದೆ ಜಟೋದ್ಭವಾನದಿಯನ್ನು ಸೇರಿ ಅಲ್ಲಿಯೂ ಆಚಮನಾದಿಗಳನ್ನು ಮಾಡಿ ತಪಸ್ವಿಯಾಗಿ ಕುಳಿತಿರುವ ನಂದಿಯನ್ನೂ, ಜಲ್ಪಿಷನೆಂಬ ದೇವರನ್ನೂ ನಮಸ್ಕರಿಸಿ ಆ ವೇತಾಲ ಭೈರವರು ಮುಂದೆ ನಾಟಕಾಚಲಕ್ಕೆ ತೆರಳಿದರು.

ನಾಟಕಾಚಲಮಾಸಾದ್ಯ ಪ್ರಣಮ್ಯ ವೃಷಭಧ್ವಜಂ ।
ಆರಾಧನೋಪದೇಶಾಯ ಕಾಪೋತಸ್ಯ ವಚಃ ಸ್ಮರ್ಪ ॥ ೧೦೭ ॥

ಜಗ್ಮತುರ್ದಕ್ಷಿಣಾಂ ಕಾಷ್ಠಾಂ ಯತ್ರ ಸಂಧ್ಯಾಚಲಃ ಸ್ಥಿತಃ ।
ಕಾಂತಾ ದಾಮ ನದೀ ತತ್ರ ವಸಿಷ್ಠೇನಾವತಾರಿತಾ ॥ ೧೦೮ ॥

ತಸ್ಯಾಸ್ತೀರೇ ಮಹಾಶೈಲಃ ಸ್ನಿಗ್ಧಚ್ಛಾಯಾಲತಾತರುಃ ।
ಸಂಧ್ಯಾಂ ವಸಿಷ್ಠಃ ಕೃತವಾ೯ ತತ್ರ ಯಸ್ಮಾದ್ವಿಧೇಃ ಸುತಃ ॥ ೧೦೯ ॥

ಅತಃ ಸಂಧ್ಯಾಚಲಂ ನಾಮ ತಸ್ಯ ಗಾಯಂತಿ ದೇವತಾಃ ।
ತತ್ರಾಸಾದ್ಯ ವಸಿಷ್ಠಂ ತು ಸಾಕ್ಷಾದಿವ ಹುತಾಶನಂ ॥ ೧೧೦ ॥

ಆರಾಧಯಂತಂ ಗಿರಿಶಂ ಧ್ಯಾನಸಂಯುಕ್ತಮಾನಸಂ ।
ತಪಃಶ್ರಿಯಾ ದೀಪ್ಯಮಾನಂ ದ್ವಿತೀಯಮಿವ ಭಾಸ್ಕರಂ ॥ ೧೧೧ ॥

---

೧೦೭. ನಾಟಕಾಚಲಕ್ಕೆ ಹೋಗಿ ಅಲ್ಲಿ ನೆಲಸಿರುವ ಶಂಕರನನ್ನು ನಮಸ್ಕರಿಸಿ ಅವನಾರಾಧನೆಯ ಕ್ರಮವನ್ನು ಪದೇಶಿಸಿಕೊಳ್ಳಲು ಕಾಪೋತಮುನಿಯ ಮಾತಿನಂತೆ ಸಂಧ್ಯಾಚಲನಿರುವ ದಕ್ಷಿಣದಿಕ್ಕಿಗೆ ಹೋದರು.

೧೦೮. ಆ ದಿಕ್ಕಿನಲ್ಲಿ ವಸಿಷ್ಠನಿಂದ ಸೃಷ್ಟಿಸಲ್ಪಟ್ಟ ಕಾಂತಾ ಎಂಬ ನದಿಯು ಇರುವುದು. ಆ ನದಿಯ ತೀರದಲ್ಲಿ ನಿಬಿಡವಾದ ನೆರಳನ್ನು ಕೊಡುವಂತಹ ಮರಗಳುಳ್ಳದೂ, ಲತಾಗೃಹಗಳುಳ್ಳದೂ ಆದಂತಹ ಒಂದು ಬೆಟ್ಟವು ಇರುವುದು

೧೦೯. ಆ ಬೆಟ್ಟದಲ್ಲಿ ಬ್ರಹ್ಮಪುತ್ರನಾದ ವಸಿಷ್ಠಮುನಿಯು ಮೊದಲು ಸಂಧ್ಯಾವಂದನೆಯನ್ನು ಆಚರಿಸಿದುದರಿಂದ ಆ ಬೆಟ್ಟವನ್ನು " ಸಂಧ್ಯಾಚಲ " ವೆಂದು ದೇವತೆಗಳು ಕರೆಯುತ್ತಲಿರುವರು.

೧೧೦-೧೧೧. ಅಲ್ಲಿ ಪ್ರತ್ಯಕ್ಷ ಅಗ್ನಿಯಂತೆ ತೇಜಸ್ವಿಯೂ, ಧ್ಯಾನಮಗ್ನನೂ, ತಪಸ್ಸಿನ ಪ್ರಕಾಶದಿಂದ ಎರಡನೇ ಸೂರ್ಯನಂತೆ ರಾಜಿಸುವವನೂ, ಶಂಕರನನ್ನು ಆರಾಧಿಸುತ್ತಲಿರುವವನೂ ಆದ ವಸಿಷ್ಠಮುನಿಯನ್ನು ನಮಸ್ಕರಿಸಿ ಆ ವೇತಾಲಭೈರವರು

ಪ್ರಣಮ್ಯ ಪುರತಸ್ತಸ್ಯ ತವಾ ವೇತಾಲಭೈರವೌ ।
ಸ್ಸಾಂಜಲೀ ತಸ್ಥತುರ್ಭೂಪ ವಿನಯಾನತಕಂಧರೌ ॥ ೧೧೨ ॥

ಇದಂ ಚಾಪ್ಯೂಚತುಸ್ತಾ ತು ಪ್ರಣಮಂತೌ ವಿಧೇಃ ಸುತಂ ।
ತಾರಾವತ್ಯಾಂ ಸಮುತ್ಪನ್ನೌ ಚಂದ್ರಶೇಖರಭೂಭೃತಃ ॥ ೧೧೩ ॥

ಕ್ಷೇತ್ರೇ ಭರ್ಗಸ್ಯ ತನಯಾವಾವಾಂ ಜಾನೀಹಿ ಮಾನುಷೌ ।
ಆರಾಧಯಿತುಮಿಚ್ಛಾವೋ ಹರಂ ಕಾರ್ಯಸ್ಯ ಸಿದ್ಧಯೇ ॥೧೧೪ ॥

ವಾಂಛಿತಸ್ಯ ಯದಿ ತ್ವಂ ನಾವನುಗೃಹ್ಣಾಸಿ ಸುವ್ರತ ।
ತಯೊಂಸ್ತದ್ವಚನಂ ಶ್ರುತ್ವಾ ವಸಿಷ್ಠೋ ಮುನಿಸತ್ತಮಃ ॥ ೧೧೫ ॥

ಉವಾಚೇತಿ ಯುವಾಂ ಜ್ಞಾತೌ ಮಯಾ ಸತ್ಯಂ ಹರಾತ್ಮಜೌ ।
ಹರಸ್ಯಾರಾಧನಂ ಕಾರ್ಯಂ ಯುವಯೋರ್ನರಸತ್ತಮೌ ॥ ೧೧೬ ॥

ನಮ್ರತೆಯಿಂದ ಕತ್ತನ್ನು ಬಗ್ಗಿಸಿ ಕೈಗಳನ್ನು ಮುಗಿಮುಕೊಂಡು ಆಮುನಿಯ ಎಮುರಿಗೆ ನಿಂತರು.

೧೧೩. ಆಮೇಲೆ ಆ ವೇತಾಲಭೈರವರು ಬ್ರಹ್ಮಪುತ್ರನಾದ ವಸಿಷ್ಠಮುನಿಯನ್ನು ನಮಸ್ಕರಿಸಿ ಹೀಗೆ ಹೇಳಿದರು:—ಓ ಮುನಿಯೇ ನಾವು ಚಂದ್ರಶೇಖರ ರಾಜನ ಪತ್ನಿಯಾದ ತಾರಾವತಿಯಲ್ಲಿ ಶಂಕರನಿಂದ ಜನಿಸಿದ ಮನುಷ್ಯಪುತ್ರರು.

೧೧೪. ಓ ತಪಸ್ವಿಯೇ, ನೀನು ನಮ್ಮನ್ನು ಅನುಗ್ರಹಿಸಿದರೆ ನಮ್ಮ ಇಷ್ಟಾರ್ಥಸಿದ್ಧಿಗಾಗಿ ನಾವು ಶಂಕರನನ್ನು ಆರಾಧಿಸಬೇಕೆಂದಿರುವೆವು.

೧೧೫. ವೇತಾಲಭೈರವರ ಈ ಮಾತನ್ನು ಕೇಳಿ ಮುನಿಶ್ರೇಷ್ಠನಾದ ವಸಿಷ್ಠನು ಹೀಗೆ ಹೇಳಿದನು:—ಎಲೈ ಕುಮಾರರೇ, ನೀವು ಶಂಕರಪುತ್ರರೆಂಬ ನಿಜಾಂಶವು ತಿಳಿಯಿತು.

೧೧೬. ಎಲೈ ಸತ್ಪುರುಷರೇ, ನೀವು ಮಾಡಬೇಕೆಂದಿರುವ ಶಂಕರನ ಆರಾಧನೆಯಲ್ಲಿ ನಾನೇನಾದರೂ ಸಹಾಯ ಮಾಡಬೇಕಾಗಿದ್ದರೆ ಹೇಳಿರಿ.

ತತ್ರಾಸ್ತಿ ಮನು ಕೃತ್ಯಂ ಕಿಂ ತದ್ಭಾಷತಮನಿಂದಿತೌ ।
ವೃಷಧ್ವಜಾರಾಧನಾಯ ಯುವಯೋಸ್ತು ಪ್ರಯೋಜನಂ ॥ ೧೧೬ ॥

ವಿದ್ಯತೆ ತನ್ನಿಮಿತ್ತಂ ಯತ್ತತ್ಸಿದ್ಧಮವಧಾರಯ ।
॥ ವೇತಾಲಭೈರವಾವೂಚತುಃ ॥
ಯೇನ ಮಂತ್ರೇಣ ನ ಚಿರಾತ್ಸಮ್ಯಗಾರಾಧಿತೋ ಹರಃ ॥ ೧೧೪ ॥

ಪ್ರಸಾದನೋಷ್ಯತ್ಯವನೌ ತನ್ನೌ ವದ ಮಹಾಮುನೇ ।
ಯಥಾ ಚಾರಾಧಯಿಷ್ಯಾವಸ್ತಂತ್ರಂ ಯದ್ಯಾದೃಶಃ ಕ್ರಮಃ ॥ ೧೧೯ ॥

ತತ್ಸರ್ವಂ ಮುನಿಶಾರ್ದೂಲ ವಕ್ತುಮರ್ಹಸಿ ಚೋತ್ತರಂ ।
ಯಥಾ ತ್ವದುಪದೇಶೇನ ಪ್ರಾಪ್ನ್ಯಾವೋ ನ ಚಿರಾದ್ಧರಂ ॥೧೨೦ ॥

ತಥಾ ಚಾವಾಂ ಮುನಿಶ್ರೇಷ್ಠ ಹ್ಯನುಶಾಧಿ ನತೌ ತ್ವಯಿ ।
॥ ವಸಿಷ್ಠ ಉವಾಚ ॥
ಪ್ರಸನ್ನ ಏವ ಭವತೋ ವೃಷಕೇತುಃ ಸಹೋಮಯಾ ॥ ೧೨೧ ॥

---

೧೧೬. ನೀವುಯಾವ ಪ್ರಯೋಜನಕ್ಕಾಗಿ ಶಂಕರನನ್ನು ಆರಾಧಿಸಬೇಕೆಂದಿರುವಿರೋ ಆ ಪ್ರಯೋಜನವು ಸಿದ್ಧವಾಯಿತೆಂದು ತಿಳಿಯಿರಿ.

೧೧೪. ವೇತಾಲಭೈರವರು ಹೇಳಿದರು:—ಓ ಮಹಾಮುನಿಯೇ, ಯಾವ ಮಂತ್ರದಿಂದ ಆರಾಧಿಸಿದರೆ ಆ ಶಂಕರನು ಭೂಲೋಕದಲ್ಲಿ ಜಾಗ್ರತೆ ಪ್ರಸನ್ನನಾಗುವನೋ ಅಂತಹ ಮಂತ್ರವನ್ನು ನಮಗೆ ಉಪದೇಶಿಸು.

೧೧೯. ಓ ಮುನಿಶ್ರೇಷ್ಠನೇ, ಆರಾಧಿಸುವ ಕ್ರಮವನ್ನೂ ಅದರ ರಹಸ್ಯವನ್ನೂ ನಮಗೆ ಉಪದೇಶಿಸುವವನಾಗು.

೧೨೦. ಓ ಮುನಿಶ್ರೇಷ್ಠನೇ, ನಿನ್ನ ಉಪದೇಶದಿಂದ ಜಾಗ್ರತೆ ನಾವು ಶಂಕರನನ್ನು ಪಡೆಯುವಂತೆ ನಿನ್ನಲ್ಲಿ ವಿನೀತರಾದ ನಮ್ಮನ್ನು ಶಿಕ್ಷಿಸುವವನಾಗು.

೧೨೧. ವಸಿಷ್ಠಮುನಿಯು ಹೇಳಿದನು–ಶಂಕರನು ಪಾರ್ವತಿಯೊಡನೆ ನಿಮ್ಮಲ್ಲಿ ಪ್ರಸನ್ನನಾಗಿಯೇ ಇರುವನು. ಸ್ವಲ್ಪಕಾಲದಲ್ಲಿ ಆ ಶಂಕರನು ತಾನೇ ಇಲ್ಲಿ ನಿಮಗೆ ಪ್ರಸನ್ನನಾಗುವನು.

ನ ಚಿರಾತ್ಸ್ವಯಮೇವಾತ್ರ ಪ್ರಸಾದಂ ಚ ಸಮೇಷ್ಯತಿ ।
ಸರ್ವೈರ್ದೇವಗಣೈಃ ಸಾರ್ಧಂ ಸಭಾರ್ಯೋ ವೃಷಭಧ್ವಜಃ ॥ ೧೨೨ ॥

ಆಕಾಶಮಾರ್ಗೇಣಾಯಾತಃ ಪಾಲಯನ್ಸ್ವಸುತೌ ಗೃಹಾತ್ ।
ಕಿಂತು ಮಾನುಷದೇಹೌ ವಾಮಧಿವಾಸ್ಯ ತಪೋವ್ರತೈಃ ॥ ೧೨೩ ॥

ಸ್ವಯಂ ನೇಷ್ಯತಿ ಕೈಲಾಸಂ ಗಾಣಾಪತ್ಯೇ ನಿಯೋಜ್ಯ ವಾಂ ।
ಅಹಂ ಚಾಪ್ಯುಪದೇಕ್ಷ್ಯಾಮಿ ಯಥಾ ಭರ್ಗಂ ಯುವಾಂ ದ್ರುತಂ ॥ ೧೨೪ ॥

ಪ್ರಾಪ್ಸ್ಯಥಃ ಪಾರ್ವತೀಪುತ್ರಾವೇಕಾಗ್ರಂ ಶೃಣುತಂ ತು ತತ್ ।
ಚಿರಾತ್ಪ್ರಸೀದತಿ ಧ್ಯಾನಾನ್ನ ಚಿರಾದ್ಧ್ಯಾನಪೂಜನಾತ್ ॥ ೧೨೫ ॥

ತಸ್ಮಾದ್ಧ್ಯಾನಂ ಪೂಜನಂ ಚ ಕಥಾಯಾಮ್ಯದ್ಯ ತತ್ತ್ವತಃ ।
ತೇಜೋಮಯಃ ಸದಾ ಶುದ್ಧೋ ಜ್ಞಾನಾಮೃತವಿವರ್ಧಿತಃ ॥ ೧೨೬ ॥

---

೧೨೨. ಆ ಶಂಕರನು ದೇವತೆಗಳೊಡನೆಯೂ, ಪಾರ್ವತಿಯೊಡನೆಯೂ ಸಹ ಆಕಾಶಮಾರ್ಗದಿಂದ ತನ್ನ ಪುತ್ರರಾದ ನಿಮ್ಮನ್ನು ರಕ್ಷಿಸುತ್ತಾ ಬಂದಿರುವನು.

೧೨೩. ಆದರೆ ಮನುಷ್ಯದೇಹವುಳ್ಳ ನಿಮ್ಮನ್ನು ತಪಸ್ಸುಗಳಿಂದ ಸಂಸ್ಕಾರ ಹೊಂದಿಸಿ ಆ ಶಂಕರನು ತಾನೇ ನಿಮ್ಮನ್ನು ಗಣಗಳಿಗೆ ನಾಯಕರನ್ನು ಮಾಡಿ ಕೈಲಾಸಕ್ಕೆ ಕರೆದುಕೊಂಡು ಹೋಗುವನು.

೧೨೪. ನಾನೂ ಸಹ, ನೀವು ಶಂಕರನನ್ನು ಜಾಗ್ರತೆ ಪಡೆಯುವಂತೆ ನಿಮಗೆ ಉಪದೇಶಿಸುವೆನು. ಎಲ್ಲೆ ಪಾರ್ವತಿಯ ಪ್ರಿಯಪುತ್ರರೇ, ನನ್ನ ಉಪದೇಶವನ್ನು ಕೇಳುವವರಾಗಿರಿ.

೧೨೫. ಧ್ಯಾನದಿಂದ ಬಹುಕಾಲದನಂತರ ಶಂಕರನು ಪ್ರಸನ್ನನಾಗುವನು. ಧ್ಯಾನ ಮತ್ತು ಪೂಜೆಗಳಿಂದ ಜಾಗ್ರತೆ ಪ್ರಸನ್ನನಾಗುವನು. ಆದಕಾರಣ ಧ್ಯಾನ ಮತ್ತು ಪೂಜೆಗಳನ್ನು ವಿಶದವಾಗಿ ನಿಮಗೆ ಹೇಳುವೆನು.

೧೨೬-೧೨೭. ಆ ಶಂಕರನು ತೇಜಃಸ್ವರೂಪನು, ನಿರ್ಮಲನು, ಜ್ಞಾನವೆಂಬ ವೃದ್ಧಿಯುಳ್ಳವನು. ಅಂದರೆ ಸರ್ವಜ್ಞನು. ಜಗದ್ರೂಪನು. ಜ್ಞಾನಸ್ವರೂಪನು

ಜಗನ್ಮಯಶ್ಚಿದಾನಂದಃ ಶೌರಿಬ್ರಹ್ಮಸ್ವರೂಪಧೃಕ್ ।
ಮಹಾದೇವೋ ಮಹಾಮೂರ್ತಿರ್ಮಹಾಯೋಗಯುತಃ ಸದಾ ॥ ೧೨೭ ॥

ಜಗಂತಿ ತಸ್ಯ ರೂಪಾಣಿ ತಾನಿ ಕೋ ಗದಿತುಂ ಕ್ಷಮಃ ।
ಕಂತು ಯೈರಿಹ ರೂಪೈಸ್ತು ವಿಚರತ್ಯೇಷ ಶಂಕರಃ ॥ ೧೨೮ ॥

ತೇಷಾಂ ಯನ್ಮೇ ಜ್ಞಾನಗಮ್ಯಂ ಶಶ್ರೇಷ್ಠಂ ನಿಗದಾಮಿ ವಾಂ ।
ಪ್ರಥಮಂ ಶೃಣುತಂ ಮಂತ್ರಂ ತತೋಽನುಧ್ಯಾನಗೋಚರಂ ॥ ೧೨೯ ॥

ತತಃ ಕ್ರಮಂ ತು ಪೂಜಾಯಾಃ ಕ್ರಮಾದ್ವೃತ್ತಂ ನರರ್ಷಭೌ ।
ಸಮಸ್ತಾನಾಂ ಸ್ವರಾಣಾಂ ತು ದೀರ್ಘಾಃ ಶೇಷಾಃ ಸಬಿಂದುಕಾಃ ॥ ೧೩೦ ॥

ಋಲೃ ಶೂನ್ಯಾಃ ಸಾರ್ಧಚಂದ್ರಾ ಉಪಾಂತೇನಾಭಿಸಂಹಿತಾಃ
ಏಭಿಃ ಪಂಚಾಕ್ಷರೈರ್ಮಂತ್ರಂ ಪಂಚವಕ್ತ್ರಸ್ಯ ಕೀರ್ತಿತಂ ॥ ೧೩೧ ॥

ಮತ್ತು ಆನಂದರೂಪನು. ಸ್ಥಿತಿ ಮತ್ತು ಸೃಷ್ಟಿಗಳಿಗಾಗಿ, ವಿಷ್ಣು ಮತ್ತು ಬ್ರಹ್ಮನ ಕೆಂಬ ರೂಪಗಳನ್ನು ಧರಿಸಿದವನು. ದೇವದೇವನು. ಮಹತ್ತಾದ ಆಕಾರವುಳ್ಳವನು. ಮಹಾಯೋಗಿಯು.

೧೨೮. ಜಗತ್ತಿನಲ್ಲಿ ಶಂಕರನ ಅನೇಕ ರೂಪಗಳು ಸಂಚರಿಸುತ್ತಿವೆ. ಆದರೆ ಯಾವರೂಪಗಳಿಂದ ಶಂಕರನು ಅಸಾಧಾರಣವಾಗಿ ಸಂಚರಿಸುವನೋ ಅವುಗಳಲ್ಲಿ ನನ್ನ ಬುದ್ಧಿಯಲ್ಲಿ ಯಾವುದು ಇಷ್ಟವಾಗಿ ನೆಲಸಿರುವುದೋ ಆ ರೂಪವನ್ನು ನಿಮಗೆ ಹೇಳುವೆನು.

೧೨೯. ಎಲೈ ನರಶ್ರೇಷ್ಠರೇ, ಮೊದಲು ಮಂತ್ರವನ್ನು ಕೇಳಿರಿ, ಆನಂತರ ಧ್ಯಾನವನ್ನೂ ಪೂಜೆಯ ಕ್ರಮವನ್ನೂ ಹೇಳುವೆನು.

೧೩೦-೧೩೧. ಸ್ವರಗಳಲ್ಲಿ ಋ ಲೃ ಗಳನ್ನು ಬಿಟ್ಟು ಉಳಿದ ಸ್ವರಗಳಲ್ಲಿ ದೀರ್ಘ ಸ್ವರಗಳಾದ ಆ ಈ ಊ ಐ ಔ ಎಂಬ ಐದು ಸ್ವರಗಳಿಗೆ ಅರ್ಧಚಂದ್ರ ಮತ್ತು ಬಿಂದು ಗಳನ್ನು ಸೇರಿಸಿದರೆ ಎಂದರೆ ಆಁ ಈಁ ಊಁ ಐಁ ಔಁ ಎಂದು ಉಚ್ಚರಿಸಿದರೆ ಈ ಐದು ಅಕ್ಷರಗಳಿಂದ ಕೂಡಿದ ಮಂತ್ರವು ಶಂಕರನನ್ನು ಆರಾಧಿಸುವ ಮಂತ್ರವಾಗುವುದು. (ಆ, ಈ, ಊ, ಐ, ಔ ಎಂಬ ಬೀಜಾಕ್ಷರಗಳಿಗೆ ಕ್ರಮವಾಗಿ ರುದ್ರ,

ಕ್ರಮಾತ್ಸಂಮುದಸಂದೋಹನಾದಗೌರವಸಂಜ್ಞಕಾಃ ।
ಪ್ರಾಸಾದಸ್ತು ಭವೇಚ್ಛೈಷಃ ಪಂಚಮುಂತ್ರಾಃ ಪ್ರಕೀರ್ತಿತಾಃ ॥ ೧೩೨ ॥

ಏಕೈಕೇನ ತಥೈಕೈಕಂ ವಕ್ತ್ರಂ ಮುಂತ್ರೇಣ ಪೂಜಯೇತ್ ।
ಏಕಂ ಸಮುದಿತಂ ಕೃತ್ವಾ ಪಂಚಭಿರ್ವಾ ಪ್ರಪೂಜಯೇತ್ ॥ ೧೩೩ ॥

ಪ್ರಾಸಾದೇನಾಥ ನಾ ಪಂಚವಕ್ತ್ರಂ ದೇವಂ ಪ್ರಪೂಜಯೆತ್ ।
ಸಂಮುದಾದಿಷು ಮುಂತ್ರೇಷು ಪ್ರಾಸಾದಸ್ತು ಪ್ರಶಸ್ಯತೇ ॥ ೧೩೪ ॥

ಶಂಭೋಃ ಪ್ರಸಾದನೇನೈಷ ಯಸ್ಮಾದ್ವೃತ್ತಸ್ತು ಮುಂತ್ರಕಃ ।
ತೇನ ಪ್ರಾಸಾದಸಂಜ್ಞೋಽಯಂ ಕಥ್ಯತೇ ಮುನಿಸತ್ತಮೈಃ ॥ ೧೩೫ ॥

ತಸ್ಮಾತ್ಸರ್ವೇಷು ಮುಂತ್ರೇಷು ಪ್ರಾಸಾದಃ ಪ್ರೀತಿದಃ ಪರಃ ।
ಆಮೋದಕಾರಕಃ ಶಂಭೋರ್ಮುಂತ್ರಃ ಸಂಮುದ ಉಚ್ಯತೇ ॥ ೧೩೬ ॥

ಶಿವ, ಮಹೇಶ, ಮಹೇಶ್ವರ, ಸದಾಶಿವ ಎಂಬ ಈಶ್ವರನ ರೂಪಗಳು ದೇವತೆಗಳೆಂದು ಮುಂತ್ರಾಭಿಧಾನವೆಂಬ ತಂತ್ರಗ್ರಂಥವಲ್ಲಿ ಹೇಳಿರುತ್ತದೆ.)

೧೩೨. ಆ ಐದು ಅಕ್ಷರಗಳಿಗೆ ಕ್ರಮವಾಗಿ ಸಂಮುದ, ಸಂಮೋಹ, ನಾದ, ಗೌರವ, ಪ್ರಾಸಾದ ಎಂಬ ಐದು ಹೆಸರುಗಳು. ಹೀಗೆ ಐದು ಮುಂತ್ರಗಳು ಪ್ರಸಿದ್ಧವಾಗಿವೆ.

೧೩೩. ಒಂದೊಂದು ಮುಂತ್ರವಿಂದ ಶಂಕರನ ಐದು ಮುಖಗಳಲ್ಲಿ ಒಂದೊಂದು ಮುಖವನ್ನು ಪೂಜಿಸಬೇಕು. ಅಥವಾ ಐದು ಮುಂತ್ರಗಳಿಂದ ಒಟ್ಟಾಗಿ ಪೂಜಿಸಿದರೂ ಆಗಬಹುದು.

೧೩೪-೧೩೫. ಪ್ರಾಸಾದ ಮುಂತ್ರದಿಂದಾಗಲಿ ಪಂಚಮುಖನಾದ ದೇವನನ್ನು ಪೂಜಿಸಬೇಕು. ಸಂಮುದವೇ ಮೊದಲಾದ ಐದು ಮುಂತ್ರಗಳಲ್ಲಿ ಪ್ರಾಸಾದ ಮುಂತ್ರವೇ ಶ್ರೇಷ್ಠವಾಮದು. ಅದು ಶಂಕರನ ಪ್ರಸಾದದಿಂದಲೇ ಜನಿಸಿದುದರಿಂದ ಅದನ್ನು ಪ್ರಾಸಾದವೆಂಬುದಾಗಿ ಮುನಿಶ್ರೇಷ್ಠರು ಹೇಳುವರು.

೧೩೬. ಆದಕಾರಣ ಮುಂತ್ರಗಳಲ್ಲಿ ಪ್ರಾಸಾದಮುಂತ್ರವೇ ಶಂಕರನಿಗೆ ತುಂಬಾ ಪ್ರೀತಿಕರವಾದುದು. ಸಂಮೋದವೆಂಬ ಮುಂತ್ರವು ಶಂಕರನಿಗೆ ಆಮೋದ (ಹರ್ಷ) ವನ್ನುಂಟುಮಾಡುವುದು.

ಮನಃ ಪ್ರಪೂರಣಾಚ್ಚಾಪಿ ಸಂದೋಹಃ ಪರೀಕೀರ್ತಿತಃ ।
ಆಕರ್ಷಕೋ ಭವೇನ್ನಾದೋ ಗುರುತ್ವಾದ್ಗೌರವಾಹ್ವಯಃ ॥ ೧೩೭ ॥

ಏತದ್ವ್ಯಸ್ತಂ ಸಮಸ್ತಂ ಚ ಮಂತ್ರಂ ಶಂಭೋಃ ಪ್ರಕೀರ್ತಿತಂ ।
ಪಂಚಾಕ್ಷರಂ ತು ಯನ್ಮಂತ್ರಂ ಪಂಚವಕ್ತ್ರಸ್ಯ ಕೀರ್ತಿತಂ ॥ ೧೩೮ ॥

ಯುವಾಂ ತೇನೈವ ಮಂತ್ರೇಣ ಆರಾಧಯತಮೀಶ್ವರಂ ।
ಧ್ಯಾನಂ ವಕ್ಷ್ಯಾಮಿ ಶೃಣುತಂ ಸಮ್ಯಗ್ವೇತಾಲಭೈರವೌ ॥ ೧೩೯ ॥

ಪಂಚವಕ್ತ್ರಂ ಮಹಾಕಾಯಂ ಜಟಾಜೂಟವಿಭೂಷಿತಂ ।
ಚಾರುಚಂದ್ರಕಲಾಯುಕ್ತಂ ಮೂರ್ಧ್ನಿ ವ್ಯಾಲೌಘಭೂಷಿತಂ ॥ ೧೪೦ ॥

ಬಾಹುಭಿರ್ದಶಭಿರ್ಯುಕ್ತಂ ವ್ಯಾಘ್ರಚರ್ಮವರಾಂಬರಂ ।
ಕಾಲಕೂಟಧರಂ ಕಂಠೇ ನಾಗಹಾರೋಪಶೋಭಿತಂ ॥ ೧೪೧ ॥

---

೧೩೭. ಸಂದೋಹ ಮಂತ್ರವು ಶಂಕರನ ಮನಸ್ಸನ್ನು ಸಂತೋಷಗೊಳಿಸುವುದು. ನಾದ ಮಂತ್ರವು ಶಂಕರನನ್ನು ಆಕರ್ಷಿಸುವುದು. ಗೌರವ ಮಂತ್ರಕ್ಕೆ ತುಂಬಾ ಗೌರವ (ಬೆಲೆ) ವಿರುವುದರಿಂದ ಆ ಹೆಸರು ಬಂದಿರುವುದು.

೧೩೮. ಪಂಚಮುಖವುಳ್ಳ ಪರಮೇಶ್ವರನ ಐದು ಅಕ್ಷರಗಳುಳ್ಳ ಈ ಮಂತ್ರದಲ್ಲಿ ಒಂದೊಂದು ಅಕ್ಷರವೂ ಒಂದೊಂದು ಮಂತ್ರವಾಗುವುದು. ಐದು ಅಕ್ಷರಗಳೂ ಸೇರಿಯೂ ಒಂದು ಮಂತ್ರವಾಗುವುದು.

೧೩೯. ಎಲೈ ವೇತಾಲಭೈರವರೇ, ನೀವು ಆ ಮಂತ್ರದಿಂದಲೇ ಶಂಕರನನ್ನು ಆರಾಧಿಸಿರಿ. ಧ್ಯಾನಕ್ರಮವನ್ನೂ ಹೇಳುವೆನು ಕೇಳುವವರಾಗಿರಿ.

೧೪೦. ಆ ಶಂಕರನು ಐದು ಮುಖಗಳುಳ್ಳವನು. ದೊಡ್ಡ (ವ್ಯಾಪಕ) ದಾದ ಶರೀರವುಳ್ಳವನು. ಜಟೆಗಳನ್ನು ಧರಿಸಿರುವನು. ಶಿರಸ್ಸಿನಲ್ಲಿರುವ ಸುಂದರವಾದ ಚಂದ್ರಕಲೆಯಿಂದ ಶೋಭಿಸುವವನು. ಸರ್ಪಗಳೇ ಅಲಂಕಾರವಾಗಿ ಉಳ್ಳವನು.

೧೪೧. ಅವನಿಗೆ ಹತ್ತು ಬಾಹುಗಳು ಇರುವುವು. ಹುಲಿಯ ಚರ್ಮವೇ ಅವನಿಗೆ ಬಟ್ಟೆಯು. ಕತ್ತಿನಲ್ಲಿ ವಿಷವನ್ನು ಧರಿಸಿರುವವನು. ಸರ್ಪವೇ ಅವನಿಗೆ ಹಾರವಾಗಿರವುದು.

ಕಿರೀಟಬಂಧನಂ ಬಾಹುಭೂಷಣಂ ಚ ಭುಜಂಗಮೈಃ ।
ಬಿಭ್ರತಂ ಸರ್ವಗಾತ್ರೇಷು ಜ್ಯೋತ್ಸ್ನಾರ್ಪಿತಸುರೋಚಿಷಂ ॥ ೧೪೨ ॥

ಭೂತಿಸಂಲಿಪ್ತಸರ್ವಾಂಗಮೇಕೈಕತ್ರ ತ್ರಿಭಿಸ್ತ್ರಿಭಿಃ ।
ನೇತ್ರೈಸ್ತು ಪಂಚದಶಭಿ ರ್ಜ್ಯೋತಿಷ್ಮದ್ಭಿರ್ವಿರಾಜಿತಂ ॥ ೧೪೩ ॥

ವೃಷಭೋಪರಿ ಸಂಸ್ಥಂ ತು ಗಜಕೃತ್ತಿಪರಿಚ್ಛದಂ ।
ಸದ್ಯೋಜಾತಂ ವಾಮದೇವಮಘೋರ ಚ ತತಃ ಪರಂ ॥ ೧೪೪ ॥

ತತ್ಪುರುಷಂ ಚ ತಥೇಶಾನಂ ಪಂಚವಕ್ತ್ರಂ ಪ್ರಕೀರ್ತಿತಂ ।
ಸದ್ಯೋಜಾತಂ ಭವೇಚ್ಛುಕ್ಲಂ ಶುದ್ಧಸ್ಫಟಿಕಸನ್ನಿಭಂ ॥ ೧೪೫ ॥

---

೧೪೨. ಕಿರೀಟದ ಬಂಧನವಾಗಿಯೂ, ಬಾಹುಗಳ ಅಲಂಕಾರವಾಗಿಯೂ, ಸರ್ಪಗಳನ್ನು ಅಂಗಗಳಲೆಲ್ಲಾ ಧರಿಸಿರುವನು. ಶಿರಸ್ಸಿನಲ್ಲಿ ಚಂದ್ರಕಲೆಯ ಚಂದ್ರಿಕೆ (ಬೆಳದಿಂಗಳು) ಯಿಂದ ಇಮ್ಮಡಿಯಾದ ಕಾಂತಿಯುಳ್ಳವನು.

೧೪೩. ಅವನ ಶರೀರವೆಲ್ಲಾ ಭಸ್ಮನಿಂದ ಲೇಪಿಸಿರುವುದು, ಒಂದೊಂದು ಮುಖದಲ್ಲಿ ಮೂರು ಮೂರು ಕಣ್ಣುಗಳು ಇರುವುವು. ಹೀಗೆ ಪ್ರಕಾಶಮಾನವಾದ ಹದಿನೈದು ಕಣ್ಣುಗಳುಳ್ಳವನು. ನಂದಿಯಮೇಲೆ ಕುಳಿತಿರುವನು. ಗಜ ಚರ್ಮವನ್ನು ಹೊದೆದಿರುವನು. ಇಂತಹ ಶಂಕರನನ್ನು ಧ್ಯಾನಿಸಬೇಕು.

೧೪೪. (೧) ಸದ್ಯೋಜಾತ, (೨) ವಾಮದೇವ, (೩) ಅಘೋರ, (೪) ತತ್ಪುರುಷ, (೫) ಈಶಾನ, ಗಳೆಂಬ ಹೆಸರಿನಿಂದ ಅವನ ಐದು ಮುಖಗಳು ಪ್ರಸಿದ್ಧವಾಗಿರುವುವು. (ತೈತ್ತಿರೀಯ ಉಪನಿಷತ್ತಿನಲ್ಲಿ (೧) ಸದ್ಯೋಜಾತಂ ಪ್ರಪದ್ಯಾಮಿ—" (೨) "ವಾಮದೇವಾಯ ನಮೋ—" (೩) " ಅಘೋರೇಭ್ಯೋ ಥಘೋರೇಭ್ಯಃ—" (೪) " ತತ್ಪುರುಷಾಯ ವಿದ್ಮಹೇ—" (೫) " ಈಶಾನಸ್ಸರ್ವ ವಿದ್ಯಾನಾಂ—" ಎಂಬ ಐದು ಮಂತ್ರಗಳು ಪರಮೇಶ್ವರನ ಐದು ರೂಪಗಳನ್ನು ಘೋಷಿಸುತ್ತವೆ.)

೧೪೫. ಸದ್ಯೋಜಾತವೆಂಬ ಮುಖವು ಶುದ್ಧವಾದ ಸ್ಫಟಿಕದಂತೆ ನಿರ್ಮಲವೂ, ಬಿಳೀ ಬಣ್ಣವುಳ್ಳದೂ ಆಗಿರುವುದು. ವಾಮದೇವವೆಂಬ ಮುಖವು, ಹಳದಿಯವರ್ಣ ವುಳ್ಳದ್ದು ಮತ್ತು ಶಾಂತವಾದ ಭಾವವುಳ್ಳದ್ದು.

ಪೀತವರ್ಣಂ ತಥಾ ಸೌಮ್ಯಂ ವಾಮದೇವಂ ಮನೋಹರಂ ।
ನೀಲವರ್ಣಮಘೋರಂ ತು ದಂಷ್ಟ್ರಾಭೀತಿವಿವರ್ಧನಂ ॥ ೧೪೬ ॥

ರಕ್ತಂ ತತ್ಪುರುಷಂ ದೇವಂ ದಿವ್ಯಮೂರ್ತಿಂ ಮನೋಹರಂ ।
ಶ್ಯಾಮಲಂ ಚ ತಥೇಶಾನಂ ಸರ್ವದೈವ ಶಿವಾತ್ಮಕಂ ॥ ೧೪೭ ॥

ಚಿಂತಯೇತ್ಪಶ್ಚಿಮೇ ತ್ವಾದ್ಯಂ ದ್ವಿತೀಯಂ ತು ತಥೋತ್ತರೇ ॥
ಆಘೋರಂ ದಕ್ಷಿಣೇ ದೇವಂ ಪೂರ್ವೇ ತತ್ಪುರುಷಂ ತಥಾ ॥ ೧೪೮ ॥

ಈಶಾನಂ ಮಧ್ಯತೋ ಜ್ಞೇಯಂ ಚಿಂತಯೇದ್ಭಕ್ತಿತತ್ಪರಃ ।
ಶಕ್ತಿತ್ರಿಶೂಲಖಟ್ವಾಂಗವರದಾಭಯದಂ ಶಿವಂ ॥ ೧೪೯ ॥

ದಕ್ಷಿಣೇಷ್ವಥ ಹಸ್ತೇಷು ವಾಮೇಷ್ವಪಿ ತತಃ ಶೃಣು ।
ಅಕ್ಷಸೂತ್ರಂ ಬೀಜಪೂರಂ ಭುಜಗಂ ಡಮರೂತ್ಪಲಂ ॥ ೧೫೦ ॥

೧೪೬-೧೪೭. ಅಘೋರವೆಂಬುದು ನೀಲವರ್ಣವುಳ್ಳದದು. ಕೋರೆದಾಡೆಗಳಿಂದ ಭಯಂಕರವಾಗಿ ತೋರುವುದು. ತತ್ಪುರುಷವೆಂಬುದು ಕೆಂಬಣ್ಣವಾದುದು. ಸುಂದರವಾದ ಆಕಾರದಿಂದ ಮನೋಹರವಾಗಿರುವುದು. ಈಶಾನವೆಂಬುದು ಕಪ್ಪು ಬಣ್ಣವುಳ್ಳದುದು. ಸದಾ ಮಂಗಳರೂಪವಾದುದು.

೧೪೮. ಪಶ್ಚಿಮ ದಿಕ್ಕಿನಲ್ಲಿ ಸದ್ಯೋಜಾತನನ್ನು ಧ್ಯಾನಿಸಬೇಕು. ಉತ್ತರದಲ್ಲಿ ವಾಮದೇವನನ್ನೂ, ದಕ್ಷಿಣದಲ್ಲಿ ಅಘೋರನನ್ನೂ, ಪೂರ್ವದಲ್ಲಿ ತತ್ಪುರುಷನನ್ನೂ ಧ್ಯಾನಿಸಬೇಕು. ಈಶಾನನನ್ನು ಮಧ್ಯಭಾಗದಲ್ಲಿ ಭಕ್ತಿಯಿಂದ ಧ್ಯಾನಿಸಬೇಕು.

೧೪೯. ಶಕ್ತ್ಯಾಯುಧ, ತ್ರಿಶೂಲ, ಖಟ್ವಾಂಗ, ವರದಮುದ್ರೆ, ಮತ್ತೂ ಅಭಯಮುದ್ರೆ ಇವುಗಳನ್ನು ದಕ್ಷಿಣ ಹಸ್ತಗಳಲ್ಲಿ ಧರಿಸುವಂತೆ ಶಿವನನ್ನು ಧ್ಯಾನಿಸಬೇಕು. ವಾಮ (ಎಡ) ಹಸ್ತಗಳಲ್ಲಿ ಧರಿಸಿರುವುದನ್ನು ಹೇಳುವೆನು ಕೇಳು.

೧೫೦. ಜಪಮಾಲೆ, ಸೀಬೆಫಲ, ಕಪಾಲ, ಕನ್ನೈದಿಲೆ ಇವುಗಳನ್ನು ಎಡದ ಕೈಗಳಲ್ಲಿ ಧರಿಸಿರುವವನೂ, ಅಣಿಮವೇ ಮೊದಲಾದ ಎಂಟು ಐಶ್ವರ್ಯ (ಸಿದ್ಧಿ) ಗಳುಳ್ಳವನೂ ಆದ ಶಂಕರನನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು.

ಅಷ್ಟೈಶ್ವರ್ಯಸಮಾಯುಕ್ತಂ ಧ್ಯಾಯೇತ್ತು ಹೃದ್ಗತಂ ಶಿವಂ ।
ಏವಂವಿಚಿಂತಯೇದ್ಧ್ಯಾನೆ ಮಹಾದೇವಂ ಜಗತ್ಪತಿಂ ॥ ೧೫೧ ॥

ಚಿಂತಯಿತ್ವಾ ದ್ವಾರಪಾಲಾ ಗಣೇಶಾದೀಂಶ್ಚ ಪೂಜಯೇತ್ ।
ವಿಶುದ್ಧಿಂ ಪಂಚಭೂತಾನಾಂ ಚಿಂತಯಿತ್ವಾ ತತೋ ಮುಹುಃ ॥ ೧೫೨ ॥

ಅಷ್ಟಮೂರ್ತೀಸ್ತತಃ ಪಶ್ಚಾತ್ಪೂಜಯೇದಷ್ಟನಾಮಭಿಃ ।
ಆಸನಾನಿ ಚ ತಸ್ಯಾಥ ಪೂಜಯೇತ್ಸಕಲಾನಿ ತು ॥ ೧೫೩ ॥

ಭಾವಾದೀನ್ಯಷ್ಟಪುಷ್ಪಾಣಿ ಹೃದೈವ ವಿನಿಯೋಜಯೇತ್ ।
ನಾರಾಚಮುದ್ರಯಾ ತಸ್ಯ ತಾಡನಂ ಪರಿಕೀರ್ತಿತಂ ॥ ೧೫೪ ॥

ವಿಸರ್ಜನಂ ಧೇನುಮುದ್ರಾಂ ದರ್ಶಯಿತ್ವಾ ವಿಧಾನತಃ ।
ನಿರ್ಮಾಲ್ಯಧಾರಿಣಂ ಕುರ್ಯಾತ್ ಸದಾ ಚಂಡೇಶ್ವರಂ ಧಿಯಾ ॥ ೧೫೫ ॥

ಪ್ರತ್ಯೇಕಂ ಪಂಚಭಿರ್ಮಂತ್ರೈರಂಗಾದೀನಿ ಪ್ರಮಾರ್ಜಯೇತ್ ।
ಸಂಮುದಾದಿಭಿರೇತಸ್ಯ ಪೂರ್ವೋಕ್ತೈರ್ನರಸತ್ತಮ ॥ ೧೫೬ ॥

೧೫೧-೧೫೨. ಹೀಗೆ ಜಗದೊಡೆಯನಾದ ಮಹಾದೇವನನ್ನು ಧ್ಯಾನಮಾಡಿ ಆಮೇಲೆ ದ್ವಾರಪಾಲಕರನ್ನೂ ಗಣಪತಿಯನ್ನೂ ಪೂಜಿಸಬೇಕು. ಅನಂತರ ಪಂಚ-ಭೂತಶುದ್ಧಿಯನ್ನು ಚಿಂತಿಸಿ ಶಂಕರನ ಎಂಟು ಮೂರ್ತಿಗಳನ್ನು ಆಯಾಯ ಎಂಟು ನಾಮಗಳಿಂದ ಪೂಜಿಸಬೇಕು.

೧೫೩. ಅವನ ಆಸನಗಳನ್ನೆಲ್ಲಾ ಪೂಜಿಸಬೇಕು. ಪೀಠಪೂಜೆಯನ್ನು ಮನಸಾ ಮಾಡಬೇಕು ಸಂಕಲ್ಪಮಯವಾದ ಪುಷ್ಪಗಳನ್ನು ಮನಸ್ಸಿನಿಂದಲೇ ಸಮರ್ಪಿಸಬೇಕು.

೧೫೪. ಬಾಣಮುದ್ರೆಯಿಂದಲೂ, ಧೇನುಮುದ್ರೆಯಿಂದಲೂ, ವಿಧಿಯಂತೆ ಪ್ರದರ್ಶಿಸಿ ಮತ್ತು ಅವುಗಳನ್ನು ತೋರಿಸಿ ವಿಸರ್ಜನೆಯನ್ನು ಮಾಡಬೇಕು. (ಮುದ್ರೆಗಳ ಸ್ವರೂಪವು ೭೦ನೇ ಅಧ್ಯಾಯದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದು.)

೧೫೫.-೧೫೬. ನಿರ್ಮಾಲ್ಯಗಳನ್ನು ಮನಸ್ಸಿನಿಂದಲೇ ಚಂಡೀಶ್ವರನಿಗೆ ಸಮ ರ್ಪಿಸಬೇಕು, ಮತ್ತೂ ಎಲೈ ನರಶ್ರೇಷ್ಠರೇ, ಹಿಂದೆ ಹೇಳಿದ ಸಂಮುದವೇ ಮೊದಲಾದ ಐದು ಮಂತ್ರಗಳಿಂದ ಪ್ರತ್ಯೇಕವಾಗಿ ಮನಸ್ಸಿನಿಂದಲೇ ಶಂಕರನ ಅಂಗಗಳನ್ನು ಮಾರ್ಜನೆಯಿಂದ ಶುದ್ಧಗೊಳಿಸಬೇಕು.

ಬಾಲಾಂ ಜ್ಯೇಷ್ಠಾಂ ತಥಾ ರೌದ್ರೀಂ ಕಾಲೀಂ ಚ ತದನಂತರಂ ।
ಕಲವಿಕ್ಕರಿಣೀಂ ದೇವೀಂ ಬಲಪ್ರಮಥಿನೀಂ ತಥಾ ॥ ೧೫೭ ॥

ದಮನೀಂ ಸರ್ವಭೂತಾನಾಂ ಮನೋನ್ಮಥಿನೀಂ ತಥೈವ ಚ ।
ಅಷ್ಟೌತಾಃ ಪೂಜಯೇದ್ದೇವೀಃ ಕ್ರಮಾಚ್ಛಂಭೋಶ್ಚ ಪ್ರೀತಯೇ ॥ ೧೫೮ ॥

ಏವಂ ಶಿವಂ ಪೂಜಯಿತ್ವಾ ಧ್ಯಾನತತ್ಪರಮಾನಸಃ ।
ಜಪೇನ್ಮಾಲಾಂ ಸಮಾದಾಯ ಮಂತ್ರಂ ಧ್ಯಾತ್ವಾ ತಥಾ ಗುರುಂ ॥ ೧೫೯ ॥

ಏಕಂ ಪಂಚಾಕ್ಷರಂ ಮಂತ್ರ ಏಕಂ ಪ್ರಾಸಾದಮೇವ ವಾ ।
ತತ್ಸಕ್ತಮನಸೌ ಜಪ್ತ್ವಾ ಶೀಘ್ರಂ ಸಿದ್ಧಿಮವಾಪ್ಸ್ಯಥ ॥ ೧೬೦ ॥

ಇತಿ ವಾಂ ಕಥಿತಂ ಮಂತ್ರಂ ಧ್ಯಾನಪೂಜಾಕ್ರಮಂ ತಥಾ ।
ಗಚ್ಛತಂ ನಾಟಕಂ ಶೈಲಂ ತತ್ರಾರಾಧಯತಂ ಹರಂ ॥ ೧೬೧ ॥

೧೫೭-೧೫೮. ಬಾಲಾದೇವಿ, ಜ್ಯೇಷ್ಠಾ, ರೌದ್ರೀ, ಕಾಲೀ, ಕಲವಿಕ್ಕರಿಣೀದೇವಿ, ಬಲಪ್ರಮಥಿನೀದೇವಿ, ಸರ್ವಭೂತದಮನೀ, ಮನೋನ್ಮಥಿನೀ ಎಂಬ ಎಂಟುಜನ ದೇವಿಯರನ್ನು ಶಂಕರನ ಪ್ರೀತಿಗಾಗಿ ಕ್ರಮವಾಗಿ ಪೂಜಿಸಬೇಕು.

೧೫೯. ಹೀಗೆ ಶಂಕರನನ್ನು ಪೂಜಿಸಿ, ಧ್ಯಾನಾಸಕ್ತನಾಗಿ ಜಪಮಾಲೆಯನ್ನು ತೆಗೆದುಕೊಂಡು, ಮಂತ್ರವನ್ನೂ ಗುರುವನ್ನೂ ಧ್ಯಾನಿಸಿ ಜಪವನ್ನು ಮಾಡಬೇಕು.

೧೬೦. ಆ ಐದು ಅಕ್ಷರಗಳುಳ್ಳ ಒಂದು ಮಂತ್ರವನ್ನಾಗಲೀ, ಅಥವಾ ಒಂದೇ ಪ್ರಾಸಾದಾಕ್ಷರ ಮಂತ್ರವನ್ನಾಗಲೀ ಶಂಕರನಲ್ಲಿ ನೆಟ್ಟ ಮನಸ್ಸುಳ್ಳವರಾಗಿ ಜಪಿಸುತ್ತಾ ಜಾಗ್ರತೆಯಾಗಿ ಸಿದ್ಧಿಯನ್ನು ಪಡೆಯಿರಿ.

೧೬೧. ಎಲೈ ವೇತಾಲಭೈರವರೇ, ಈರೀತಿಯಾಗಿ ನಿಮಗೆ ಮಂತ್ರ, ಧ್ಯಾನ, ಮತ್ತು ಪೂಜಾಕ್ರಮ ಇವುಗಳೆಲ್ಲವನ್ನೂ ಹೇಳಿರುವೆನು. ಇನ್ನು ಮುಂದೆ ನೀವು ನಾಟಕಾಚಲಕ್ಕೆ ತೆರಳಿ, ಅಲ್ಲಿ ಶಂಕರನನ್ನು ಆರಾಧಿಸುವವರಾಗಿರಿ.

॥ ವೇತಾಲಭೈರವಾವೂಚತುಃ ॥

ಪಂಚಾಕ್ಷರಂ ತು ಮುಂತ್ರೋಽಯಂ ಧೃತಸ್ತ್ವತ್ಸಂಮತೇ ಮುನೇ ।
ಅನೇನೈವ ಹರಂ ದೇವಂ ಪೂಜಯಿಷ್ಯಾವಹೇ ಮುದಾ ॥ ೧೬೨ ॥

ಇತ್ಯುಕ್ತ್ವಾ ತಂ ನಮಸ್ಕೃತ್ಯ ತದಾ ವೇತಾಲಭೈರವೌ ।
ಜಗ್ಮತುರ್ನಾಟಕಂ ಶೈಲಂ ವಸಿಷ್ಠಾನುಮತೇ ತದಾ ॥ ೧೬೩ ॥

ತತ್ರಾಸ್ತಿ ಸರಸೀ ರಮ್ಯಾ ಸುಸಂಪೂರ್ಣಾ ಮನೋಹರಾ ।
ಸರ್ವದಾ ಸ್ವಚ್ಛಸಲಿಲಾ ಪ್ರಫುಲ್ಲಕಮಲೋತ್ಪಲಾ ॥ ೧೬೪ ॥

ತಸ್ಯಾಸ್ತೀರೇ ತು ವಿಪುಲಃ ಸುಮನೋಜ್ಞೋ ಹರಾಶ್ರಮಃ ।
ಸರ್ವದಾ ದಾನವೈರ್ದೇವೈಃ ಕಿನ್ನರೈಃ ಪ್ರಮಥೈಸ್ತಥಾ ॥ ೧೬೫ ॥

ರಕ್ಷ್ಯತೇ ನೃಪಶಾರ್ದೂಲ ನೃತ್ಯವಾದನತತ್ಪರೈಃ ।
ಯಸ್ಮಾನ್ನಟತಿ ತತ್ರೇಶೋ ನಿತ್ಯಂ ಕೌತುಕತತ್ಪರಃ ॥ ೧೬೬ ॥

---

೧೬೨. ವೇತಾಲಭೈರವರು ಹೇಳಿದರು:—ಓ ವಸಿಷ್ಠಮುನಿಯೇ, ನಿನ್ನ ಅಪ್ಪಣೆಯಂತೆ ಈ ಪಂಚಾಕ್ಷರೀ ಮಂತ್ರವನ್ನು ನಾವು ಧರಿಸಿದೆವು. ಈ ಮಂತ್ರ ದಿಂದಲೇ ಶಂಕರನನ್ನು ಪ್ರೀತಿಯಿಂದ ಪೂಜಿಸುವೆವು.

೧೬೩. ಹೀಗೆ ಹೇಳಿ ಆ ವೇತಾಲಭೈರವರು ಆ ವಸಿಷ್ಠಮುನಿಯನ್ನು ನಮಸ್ಕರಿಸಿ ಅವನ ಅನುಮತಿಯನ್ನು ಪಡೆದು ನಾಟಕಾಚಲಕ್ಕೆ ತೆರಳಿದರು.

೧೬೪. ಆ ಬೆಟ್ಟದಲ್ಲಿ ಒಂದು ಸರೋವರವಿರುವುದು. ಅದು ಸದಾ ನಿರ್ಮಲವಾದ ನೀರಿನಿಂದ ತುಂಬಿ ಮನೋಹರವಾಗಿಯೂ, ಅರಳಿದ ಕಮಲ ಮತ್ತು ಕನ್ನೈದಿಲೆಗಳಿಂದ ಕಂಗೊಳಿಸುತ್ತಿರುವುದು.

೧೬೫. ಆ ಸರಸ್ಸಿನ ತೀರದಲ್ಲಿ ವಿಶಾಲವೂ ಸುಂದರವೂ ಆದ ಶಂಕರಾಶ್ರಮ ವಿರುವುದು. ಆ ಆಶ್ರಮವನ್ನು ದೇವತೆಗಳೂ, ರಾಕ್ಷಸರೂ, ಕಿನ್ನರರೂ, ಪ್ರಮಥ ಗಣಗಳೂ ಸಹ ನರ್ತನ ಮಾಡುತ್ತಲೂ, ವಾದ್ಯಗಳನ್ನು ಬಾರಿಸುತ್ತಲೂ ಸದಾ ರಕ್ಷಿಸುತ್ತಿರುವರು.

೧೬೬. ಆ ಬೆಟ್ಟದಲ್ಲಿ ಶಂಕರನು ಸಂತೋಷದಿಂದ ನಿತ್ಯವೂ ನರ್ತನವನ್ನು ಮಾಡುವುದರಿಂದ ಆ ಬೆಟ್ಟಕ್ಕೆ ನಾಟಕಾಚಲವೆಂದು ಹೆಸರು ಬಂದಿತು.

ತಸ್ಮಾನ್ನಾಟಕನಾಮ್ನಾ ಸೌ ಶೈಲರಾಜಃ ಪ್ರಗೀಯತೆ ।
ಭತ್ರಾಕಾರಂ ತು ತಂ ಶೈಲಂ ಮನೋಜ್ಞಂ ಶಂಕರಪ್ರಿಯಂ ॥೧೬೭ ॥

ಆಸಾದ್ಯ ಯತ್ರ ಸರಸೀ ತತ್ರ ಗತ್ವಾ ತು ತೌ ತದಾ ।
ನ ಚೈವಾಪಶ್ಯತಾಂ ತತ್ರ ಹರಾಶ್ರಮಮನುತ್ತಮಂ ॥ ೧೬೮ ॥

ಗಂತುಂ ಚೈವಾಶ್ರಮಸ್ಥಾನಂ ತೌ ನೈವಾಶಕತಾಂ ನೃಪ ।
ತತೋ ಹರಂ ಪ್ರಣಮ್ಯಾಶು ತಸ್ಯೈವ ಸರಸಸ್ತಟೇ ॥ ೧೬೯ ॥

ನಿರ್ಮಾಯ ಸ್ಥಂಡಿಲಂ ಚಾರು ವಸಿಷ್ಠೋಕ್ತಕ್ರಮೇಣ ತು ।
ಹರಮಾರಾದ್ಧುಮಾರೇಭೇ ವೇತಾಲೋ ಭೈರವೋಽಪಿ ಚ ॥ ೧೭೦ ॥

ದೃಷ್ಟ್ವಾ ಹರೋ ದೇವಗಣೈಃ ಸಾರ್ಧಂ ತಸ್ಮಿಂಸ್ತು ಪರ್ವತೆ ।
ಆರಾಧಯಂತೌ ಭೂತೇಶಂ ತೌ ತದಾ ಶಂಕರಾತ್ಮಜೌ ॥ ೧೭೧ ॥

ಅಧಿತ್ಯಕಾಯಾಂ ನ್ಯವಸತ್ಸಾಶ್ರಮೇಽಪರ್ಣಯಾ ಸಹ ।
ಅಧೋಭಾಗೇ ಸರಸ್ತೀರೇ ತಪಸ್ಯಂತೌ ಹರಾತ್ಮಜೌ ॥ ೧೭೨ ॥

೧೬೭-೧೬೯. ಭತ್ರಿಯ ಆಕಾರವಾಗಿ ಸುಂದರವೂ ಶಂಕರನಿಗೆ ಪ್ರಿಯವೂ ಆದ ಆ ನಾಟಕಶೈಲವನ್ನು ಸೇರಿ ಆ ವೇತಾಲಭೈರವರು ಹಿಂದೆ ಹೇಳಿದ ಸರಸ್ಸಿನಬಳಿಗೆ ಬಂದರು. ಆದರೆ ಅದರ ತೀರದಲ್ಲಿರುವ ಅತ್ಯುತ್ತಮವಾದ ಶಂಕರಾಶ್ರಮವು ಗೋಚರಿಸಲೇ ಇಲ್ಲವು.

೧೬೯-೧೭೦. ಶಂಕರನ ಆಶ್ರಮದ ಬಳಿಗೆ ಅವರು ಹೋಗಲು ಅಸಮರ್ಥರಾದರು. ಅನಂತರ ಆ ವೇತಾಲಭೈರವರು ಸ್ಥಂಡಿಲವೆಂಬ ಚೌಕವಾದ ವೇದಿಕೆಯನ್ನು ಮಾಡಿ ವಸಿಷ್ಠಮುನಿಯು ಹೇಳಿದಂತೆ ಶಂಕರನನ್ನು ಆರಾಧಿಸಲು ಪ್ರಾರಂಭಿಸಿದರು.

೧೭೧.ಹೀಗೆ ಶಂಕರನನ್ನು ಆರಾಧಿಸುತ್ತಲಿರುವ ಆ ವೇತಾಲಭೈರವರನ್ನು ನೋಡುತ್ತಾ ಶಂಕರನು ಅದೇ ಬೆಟ್ಟದ ತಪ್ಪಲಲ್ಲಿರುವ ತನ್ನ ಆಶ್ರಮದಲ್ಲಿ ಪಾರ್ವತಿಯೊಡನೆಯೂ, ದೇವತೆಗಳೊಡನೆಯೂ ಕೂಡ ಇದ್ದನು.

೧೭೨. ಸರೋವರದ ಕೆಳದಡದಲ್ಲಿ ತಪಸ್ಸನ್ನು ಆಚರಿಸುತ್ತಲಿರುವ ಆ ತನ್ನ ಪುತ್ರರನ್ನು ನೋಡುತ್ತಾ ದೇವತೆಗಳೊಡನೆ ಶಂಕರನು ಅಲ್ಲಿಯೇ ವಾಸಿಸುತ್ತಿದ್ದನು.

ಸ್ಥಿತೌ ದೃಷ್ಟ್ವಾ ದೇವಗಣೈಃ ಸಹಿತಃ ಶಂಕರಃ ಸ್ಥಿತಃ ।
ನೃತ್ಯಮರ್ದಲಶಬ್ದೋ ಯೋ ಹರಸ್ಯ ಸತತಂ ಭವೇತ್ ॥ ೧೭೩ ॥

ಶೃಣುತಶ್ಚ ತದಾ ಶಬ್ದಂ ಗಂತುಂ ದ್ರಷ್ಟುಂ ನ ಲಭ್ಯತೆ ।
ಹರೇಣಾಧಿಷ್ಠಿತಃ ಶೈಲಃ ಸರ್ವದೇವಗಣೈಃ ಸಹ ॥ ೧೭೪ ॥

ರಾಜತೇ ಸ್ಮ ತದಾ ಭೂಪ ಸುಧರ್ಮಾ ವಾಸವೀ ಯಥಾ ।
ಧ್ಯಾಯತೋಸ್ತು ತದಾ ತತ್ರ ಭಗವಾನ್ ವೃಷಭಧ್ವಜಃ ॥ ೧೭೫ ॥

ನ ಚಿರಾದೇವ ತಸ್ಯಾಭೂದ್ಧ್ಯಾನಮಾರ್ಗೇಷು ನಿಶ್ಚಲಃ ।
ತೌ ಪೂಜಯಂತೌ ಗಚ್ಛಂತೌ ಸ್ಥಿತೌ ವಾ ಚಂದ್ರಶೇಖರಂ ॥ ೧೭೬ ॥

ನೈವ ತತ್ಯಜತುಶ್ಚಿತ್ತೈಃ ಕದಾಚಿದಪಿ ಭೂಮಿಪ ।
ಪಂಚಾಕ್ಷರೇಣ ಮಂತ್ರೇಣ ಪೂಜಯಂತೌ ವೃಷಧ್ವಜಂ ॥ ೧೭೭ ॥

---

೧೭೩. ಆ ಶಂಕರನ ನರ್ತನದ ಮದ್ದಳೆಯ ಶಬ್ದವು ಆಗುತ್ತಿರುವುದನ್ನು ವೇತಾಲಭೈರವರು ಕೇಳುವರು. ಆದರೆ ಆ ಸ್ಥಳಕ್ಕೆ ಹೋಗುವುದಕ್ಕಾಗಲೀ ನೋಡುವುದಕ್ಕಾಗಲೀ ಅವರಿಗೆ ಸಾಧ್ಯವಾಗುತ್ತಿರಲಿಲ್ಲವು.

೧೭೪. ಶಂಕರನಿಂದಲೂ, ದೇವತೆಗಳಿಂದಲೂ ಕೂಡಿ ಶೋಭಿಸುತ್ತಲಿರುವ ಆ ನಾಟಕಾಚಲವು ಇಂದ್ರನ ಅರಮನೆಯಾದ ಸುಧರ್ಮದಂತೆ ಶೋಭಿಸುತ್ತಲಿದ್ದಿತು.

೧೭೫. ಧ್ಯಾನಮಾಡುತ್ತಲಿರುವ ಆ ವೇತಾಲಭೈರವರ ಧ್ಯಾನಮಾರ್ಗದಲ್ಲಿ ಭಗವಂತನಾದ ಶಂಕರನು, ಸ್ಥಿರವಾಗಿ ಗೋಚರನಾದವನಾಗಿ ಅವರ ಧ್ಯಾನಕ್ಕೆ ವಿಷಯನಾದನು ಎಂದರೆ ನಿಶ್ಚಲ ಮನಸ್ಸಿನಿಂದ ಅವರು ಶಂಕರನನ್ನು ಧ್ಯಾನಿಸಲು ಸಮರ್ಥರಾದರು.

೧೭೬. ಎಲೈ ಸಗರರಾಜನೇ, ಆ ವೇತಾಲಭೈರವರು ಹೋಗುತ್ತಿರುವಾಗಲೂ, ನಿಂತಿರುವಾಗಲೂ ಸಹ ಶಂಕರನನ್ನು ಮನಸ್ಸಿನಲ್ಲಿಯೇ ಪೂಜಿಸುತ್ತಲಿರುತ್ತಾ ಒಂದು ಕ್ಷಣವೂ ಅವನ ಧ್ಯಾನವಿಲ್ಲದೆ ಇರುತ್ತಿರಲಿಲ್ಲವು.

೧೭೭. ಹಿಂದೆ ಹೇಳಿದ ಪಂಚಾಕ್ಷರ ಮಂತ್ರದಿಂದ ಶಂಕರನನ್ನು ಸದಾ ಪೂಜಿಸುತ್ತಾ ಅವರು ಸಾವಿರ ವರ್ಷಗಳನ್ನು ಕಳೆದರು.

ವ್ಯಪಿಚಕ್ರೇಮತುಃ ತು ಸಹಸ್ರಂ ಪರಿವತ್ಸರಾ ।
ನಿರಾಹಾರೌ ಮಿತಾಹಾರೌ ಪರಸಂಸಕ್ತಮಾನಸೌ ॥ ೧೭೪ ॥

ತಪಸಾ ನಿನ್ಯತುರ್ವರ್ಷಾಣಿ ಸಹಸ್ರಂ ಚೈಕವರ್ಷವತ್ ।
ಗತೇ ವರ್ಷಸಹಸ್ರೇ ತು ಸ್ವಯಮೇವ ವೃಷಧ್ವಜಃ ॥ ೧೭೯ ॥

ಪ್ರಸನ್ನಸ್ತು ತಯೋರ್ಭೂತ್ವಾ ಪ್ರತ್ಯಕ್ಷತ್ವಮುಪಾಗತಃ ।
ತಂ ತು ಪ್ರತ್ಯಕ್ಷತೋ ದೃಷ್ಟ್ವಾ, ತದಾ ವೇತಾಲಭೈರವೌ ॥ ೧೮೦ ॥

ವೃಷಧ್ವಜಂ ತುಷ್ಟವತುರ್ಧ್ಯಾನಗಮ್ಯಂ ಪುರಃ ಸ್ಥಿತಂ ।
ಹರರೂಪಂ ಯಥಾ ಧ್ಯಾತಂ ಹೃದ್ಗತಂ ತೇಜಸೋಜ್ಜ್ವಲಂ ॥ ೧೮೧ ॥

ತಥಾ ದೃಷ್ಟ್ವಾ, ತತಸ್ತಾಭ್ಯಾಂ ವಸಿಷ್ಠೋ ಮುನಸಾ ನುತಃ
॥ ವೇತಾಲಭೈರವಾವೂಚತುಃ ॥
ಪಂಚವಕ್ತ್ರಂ ಮಹಾಕಾಯಂ ಸರ್ವಜ್ಞಾನಮಯಂ ಪರಂ ॥ ೧೮೨ ॥

---

೧೭೪. ಕೆಲವೊಮ್ಮೆ ಮಿತವಾದ ಆಹಾರವನ್ನು ಭುಂಜಿಸುತ್ತಲೂ ಕೆಲವೊಮ್ಮೆ ಆಹಾರವನ್ನೇ ಸೇವಿಸದೆಯೂ ಇರುತ್ತಾ ಶಂಕರನಲ್ಲಿಯೇ ನೆಟ್ಟ ಮನಸ್ಸುಳ್ಳವರಾಗಿ ತಪಸ್ಸನ್ನಾಚರಿಸುತ್ತಾ ಒಂದುಸಾವಿರ ವರ್ಷಗಳನ್ನು ಒಂದುವರ್ಷದಂತೆ ಕಳೆದರು.

೧೭೯- ಹೀಗೆ ಸಾವಿರ ವರ್ಷಗಳು ಕಳೆಯಲು ಶಂಕರನು ಪ್ರಸನ್ನನಾಗಿ ತಾನೇ ಅವರಿಗೆ ಪ್ರತ್ಯಕ್ಷನಾದನು.

೧೮೦. ಆಗ ವೇತಾಲಭೈರವರು ತಮ್ಮ ಎದುರಿಗೆ ಪ್ರತ್ಯಕ್ಷನಾಗಿ ನಿಂತಿರುವ, ಧ್ಯಾನಗೋಚರನಾದ ಶಂಕರನನ್ನು ನೋಡಿ ಅವನನ್ನು ಹೀಗೆ ಸ್ತುತಿಸಿದರು.

೧೮೧. ವಸಿಷ್ಠಮುನಿಯು ಉಪದೇಶಿಸಿದಂತೆ ಯಾವರೂಪದಿಂದ ಶಂಕರನನ್ನು ಮನಸ್ಸಿನಲ್ಲಿ ಧ್ಯಾನಿಸಿದ್ದರೋ ಈಗ ತೇಜಸ್ವಿಯಾದ ಆದೇರೂಪದಿಂದಲೇ ಪ್ರತ್ಯಕ್ಷನಾದ ಶಂಕರನನ್ನು ನೋಡಿ, ತಮ್ಮ ಉಪದೇಶಕನಾದ ವಸಿಷ್ಠಮುನಿಯನ್ನು ಮನಸ್ಸಿನಿಂದ ನಮಸ್ಕರಿಸಿದರು.

೧೮೨. ವೇತಾಲಭೈರವರು ಹೇಳಿದರು:—ಐದು ಮುಖಗಳುಳ್ಳವನೂ, ಸರ್ವವ್ಯಾಪಕವಾದ ಶರೀರವುಳ್ಳವನೂ, ಸರ್ವಜ್ಞನೂ, ಜ್ಞಾನರೂಪನೂ, ಸರ್ವೋತ್ಕೃಷ್ಟನೂ ಸಂಸಾರವೆಂಬ ಸಮುದ್ರವನ್ನು ದಾಟಿಸುವವನೂ ಆದ ಎಲೈ ಶಂಕರನೇ ನಿನಗೆ ನಮಸ್ಕರಿಸುವೆವು.

ಸಂಸಾರಸಾಗರತ್ರಾಣಂ ಪ್ರಣಮಾವೋ ವೃಷಧ್ವಜಂ ।
ತ್ವಂ ಪರಃ ಪರಮಾತ್ಮಾ ಚ ಪರೇಶಃ ಪುರುಷೋತ್ತಮಃ ॥ ೧೪೩ ॥

ತ್ವಂ ಕೂಟಸ್ಥೋ ಜಗದ್ವ್ಯಾಪೀ ಪ್ರಧಾನಃ ಪರಮೇಶ್ವರಃ ।
ರೂಪಾತ್ಮಾ ತ್ವಂ ಮಹಾತತ್ತ್ವಂ ತತ್ವಜ್ಞಾನಾಲಯಃ ಪ್ರಭುಃ ॥ ೧೪೪ ॥

ಸಾಂಖ್ಯಯೋಗಾಲಯಃ ಶುದ್ಧೋ ಗುಣತ್ರಯವಿಭಾಗವಿತ್ ।
ತ್ವಂ ನಿತ್ಯಸ್ತ್ವಮನಿತ್ಯಶ್ಚ ಜಗತ್ಕರ್ತಾ ಲಯಃ ಸ್ಮೃತಃ ॥ ೧೪೫ ॥

ಏಕೋಽನೇಕಸ್ವರೂಪಶ್ಚ ಶಾಂತಚೇಷ್ಟೋ ಜಗನ್ಮಯಃ ।
ನಿರ್ವಿಕಾರೋ ನಿರಾಧಾರೋ ನಿತ್ಯಾನಂದಃ ಸನಾತನಃ ॥ ೧೪೬ ॥

ತಂ ವಿಷ್ಣುಸ್ತ್ವಂ ಮಹೇಂದ್ರಶ್ಚ ಬ್ರಹ್ಮಾ ತ್ವಂ ಜಗತಾಂ ಪತಿಃ ॥

---

೧೪೩. ನೀನು ಅಜ್ಞಾನಸಂಬಂಧವಿಲ್ಲದವನು, ಪರಮಾತ್ಮನು, ಸರ್ವೋತ್ಕೃಷ್ಟನು, ಪುರುಷ ಶ್ರೇಷ್ಠನು. ಅಲ್ಲದೆ ನೀನು ಜನ್ಮವೇ ಮೊದಲಾದ ವಿಕಾರಗಳಿಲ್ಲದವನು. ಜಗತ್ತಿನಲ್ಲೆಡೆಯಲ್ಲಿಯೂ ವ್ಯಾಪಿಸಿ ಇರುವವನು. ಆ ಜಗತ್ತಿಗೆ ಆದಿಕಾರಣನು, ಪರಮೇಶ್ವರನು.

೧೪೪. ನೀನು ನಾಮರೂಪಾದಿ ಭೇದಗಳಿಂದತೋರುವ ವಸ್ತುಗಳ ಸ್ವರೂಪನು. ನೀನು ಜಗತ್ತಿನಲ್ಲಿ ಶ್ರೇಷ್ಠವಾದ ತತ್ವವು. ನೀನು ತತ್ವಜ್ಞಾನಕ್ಕೆ ಆಶ್ರಯವು. ನೀನು ಜಗದೊಡೆಯನು. ಸಾಂಖ್ಯ ಮತ್ತು ಯೋಗಗಳಿಗೆ ಮನೆಯು. ನಿರ್ಮಲನು. ನೀನು ಸತ್ತ್ವರಜಸ್ತಮೋಗುಣಗಳ ವಿಭಾಗವನ್ನು ತಿಳಿದಿರುವೆ.

೧೪೫. ನೀನು ನಿತ್ಯನು. ಆದರೂ ಅನಿತ್ಯವಾದ ವಸ್ತುಗಳ ಸ್ವರೂಪನು. ಜಗತ್ತಿಗೆ ಕರ್ತೃವು ಮತ್ತು ಜಗತ್ತಿನ ಪ್ರಳಯಸ್ವರೂಪನು. ನೀನೊರ್ವನೇ ಅನೇಕ ಸ್ವರೂಪನಾಗಿ ಆಗುವೆ. ಶಾಂತವಾದ ವ್ಯಾಪಾರವುಳ್ಳವನು. ಜಗದ್ರೂಪನು.

೧೪೬. ನೀನು ಜನ್ಮ, ಸ್ಥಿತಿ, ನಾಶ, ಅಪಕ್ಷಯ, ವೃದ್ಧಿ ಪರಿಣಾಮಗಳೆಂಬ ಆರು ವಸ್ತುಗಳ ವಿಕಾರವಿಲ್ಲದವನು. ಮತ್ತು ನಿನಗೆ ಆಧಾರವಿಲ್ಲವು. ನಿತ್ಯವಾದ ಆನಂದಸ್ವರೂಪನು. ಅನಾದಿಯು, ನೀನೇ ವಿಷ್ಣುವೂ, ಮಹೇಂದ್ರನೂ, ಜಗದೊಡೆಯನಾದ ಬ್ರಹ್ಮನೂ ಆಗಿರುವೆ.

ಯೋ ರೂಪರೂಪೇಶ್ವರರತ್ನಮಾಲಃ ।
ಸಂಭೂತಿಭೂತೋ ನಿರವಗ್ರಹಶ್ಚ ॥ ೧೪೭ ॥

ಕಾಂಕ್ಷ್ಯವತೀರ್ಣಾವಗತಪ್ರಮಾಥೀ ।
ಯೋಗೇಶ್ವರೋ ಜ್ಞಾನಗತಿಸ್ತ್ವಗಮ್ಯಃ ॥
ಪ್ರಮೇಯರೂಪಾತ್ಮ ಧರಾಧರಾಭೋ ।
ಭೋಗೀಂದ್ರಬದ್ಧಾಮೃತಭೋಗತಂತ್ರಃ ॥ ೧೪೪ ॥

ಸೂಕ್ಷ್ಮಾಕ್ಷರಸ್ತತ್ತ್ವವಿದಪ್ರಮಾಥೀ ।
ತ್ವಂ ದೇವದೇವಃ ಶರಣಂ ಸುರಾಣಾಂ ॥
ವಿಕಲ್ಪಮಾನಾಪರಿಹೀನದೇಹಃ ।
ಶುದ್ಧಾಂತಧರ್ಮಾನುಗತೈಕವಿದ್ಯಃ ॥ ೧೪೯ ॥

ವರ್ಧಿಷ್ಣುರುಗ್ರಃ ಪುರುಷಃ ಪರಾತ್ಮಾ ।
ತ್ವಮಿಂದ್ರಿಯೌಘಸ್ಯ ವಿಚಾರ ಬುದ್ಧಿಃ ॥

೧೪೭-೧೪೪. ಅಲ್ಲದೆ ನೀನು ರೂಪ ಮತ್ತು ರೂಪೇಶ್ವರಗಳೆಂಬ ರತ್ನಮಾಲೆಯುಳ್ಳವನು. ಅನೇಕ ರೂಪಗಳನ್ನು ಧರಿಸಿರುವವನು ಎಂದು ಅಭಿಪ್ರಾಯ. ಜಗತ್ತಿನ ಉತ್ಪತ್ತಿಸ್ವರೂಪನು. ಅಪ್ರತಿಹತನಾದವನು. ದುರಾಶೆಯಿಂದ ಕೂಡಿದ ವರನ್ನು ನಾಶಮಾಡುವವನು. ಪ್ರಮೇಯರೂಪನು. ಗಿರಿಶ್ರೇಷ್ಠದಂತೆ ಉನ್ನತನಾದವನು. ಸರ್ಪಶ್ರೇಷ್ಠರಿಂದ ರಕ್ಷಿಸಲ್ಪಟ್ಟ ಅಮೃತವನ್ನು ಭೋಗಿಸುವವನು.

೧೪೯. ನೀನು ತಿಳಿಯಲು ಅಸಾಧ್ಯನು. ತತ್ತ್ವಜ್ಞಾನಗಳನ್ನು ಸಂರಕ್ಷಿಸತಕ್ಕವನು. ಮತ್ತು ನೀನು ದೇವದೇವನು. ದೇವತೆಗಳನ್ನು ಸಲಹುವವನು. ನೀನು ಊಹಿಸುವುದಕ್ಕೂ ಸಾಧ್ಯವಾಗದ ದೇಹ ಎಂದರೆ ಸ್ವರೂಪವುಳ್ಳವನು; ನಿರ್ಮಲವಾದ ಧರ್ಮಾಚರಣೆಯಿಂದ ಮಾತ್ರವೇ ತಿಳಿಯಲ್ಪಡತಕ್ಕವನು.

೧೫೦. ಅಲ್ಲದೆ ನೀನು ವೃದ್ಧಿಹೊಂದುವ ಸ್ವಭಾವವುಳ್ಳವನು. ಉಗ್ರನು. ಜನಗಳ ಹೃದಯದಲ್ಲಿ ವಾಸಿಸುವವನು. ಇಂದ್ರಿಯಗಳಿಗೂ ನಿಯಾಮಕನಾದ ಪರಮಾತ್ಮನು, ವಿಚಾರಶೀಲನು, ಪಾಲಕರಿಗೂ ನೀನು ಪಾಲಕನು, ಎಲ್ಲರನ್ನೂ

ತ್ವಂ ನಾಥನಾಥಃ ಪ್ರಭವಃ ಪರೇಷಾಂ ।
ಗತಿರ್ಮುನೀನಾಂ ಪರಯೋಗಿಗಮ್ಯಃ ॥ ೧೯೦ ॥

ತ್ವಂ ಭೂಧರೋ ಭಾಗಧರೋ ಹ್ಯನಂತೋ ।
ವಿಶ್ವಾತ್ಮನಸ್ತೇ ಬಹವಃ ಪ್ರಪಂಚಾಃ ॥
ಜ್ಞಾನಾಮೃತಸ್ಯಂದಕಪೂರ್ಣಚಂದ್ರೋ ।
ಮೋಹಾಂಧಕಾರಸ್ಯ ಪರಃ ಪ್ರದೀಪಃ ॥ ೧೯೧ ॥

ಭಕ್ತಾತ್ಮಜಾನಾಂ ಪರಮಃ ಪಿತಾ ತ್ವಂ ।
ಕಾಮೇ ಚ ಪಂಚಾನನರೂಪಧಾರೀ ॥
ಶಾಸ್ತಾಽಖಿಲಾನಾಂ ಪ್ರಥಮೋ ವಿವಸ್ವಾ ।
ತನೂನಪಾತ್ತ್ವಂ ತನುಷೇ ಗುಣೌಘಾನ್ ॥ ೧೯೨ ॥

ತ್ವಂ ಬ್ರಹ್ಮರೂಪೇಣ ಕರೋಷಿ ಸೃಷ್ಟಿಂ ।
ವಿಷ್ಣುಸ್ವರೂಪೈಸ್ಸತತಂ ಸ್ಥಿತಿಂ ಚ ॥

ಸೃಷ್ಟಿಸುವವನು. ಮುನಿಗಳಿಗೆ ನೀನೇ ಗತಿಯು. ಉತ್ಕೃಷ್ಟವಾದ ಯೋಗದಿಂದ ನೀನು ಪಡೆಯಲ್ಪಡತಕ್ಕವನು.

೧೯೧. ನೀನು ಭೂಮಿಯನ್ನು ಧರಿಸಿರುವೆ. ಭೂಮಿಯ ಭಾಗಗಳಾದ ಪರ್ವತಾದಿಗಳನ್ನೂ ಧರಿಸಿರುವೆ. ನಾಶವಿಲ್ಲದವನು. ಜಗದ್ರೂಪನಾದ ನಿನ್ನಿಂದ ಅನೇಕ ಪ್ರಪಂಚಗಳು ಜನಿಸುವುವು. ಜ್ಞಾನವೆಂಬ ಅಮೃತವನ್ನು ಸುರಿಸುವ ಪೂರ್ಣಚಂದ್ರನು ನೀನು. ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸುವ ಶ್ರೇಷ್ಠವಾದ ದೀಪವು ನೀನು.

೧೯೨. ನಿನ್ನ ಭಕ್ತರೆಂಬ ಪುತ್ರರ ಇಷ್ಟಾರ್ಥಗಳನ್ನು ಸಲ್ಲಿಸುವ ಶ್ರೇಷ್ಠನಾದ ತಂದೆಯು. ಐದು ಮುಖಗಳುಳ್ಳ ನೀನು ಸಮಸ್ತರನ್ನೂ ಆಳುವವನು. ನೀನು ದ್ವಾದಶಾದಿತ್ಯರಲ್ಲಿ ಜಗತ್ತನ್ನು ಬೆಳಗುವ ಮೊದಲನೆಯ ಸೂರ್ಯನು. ನೀನು ಅಗ್ನಿರೂಪನು. ಅನೇಕ ಗುಣಗಳನ್ನು ನೀನು ವಿಸ್ತರಿಸುವೆ.

೧೯೩. ಬ್ರಹ್ಮನ ಸ್ವರೂಪದಿಂದ ನೀನು ಜಗತ್ತಿನ ಸೃಷ್ಟಿಯನ್ನೂ, ವಿಷ್ಣುವಿನ ರೂಪದಿಂದ ಪಾಲನೆಯನ್ನೂ, ರುದ್ರರೂಪದಿಂದ ಸಂಹಾರವನ್ನೂ ನೀನು ಮಾಡುವೆ.

ತ್ವಂ ರುದ್ರರೂಪೀ ಕುರುಷೇ ತಥಾಂತಂ ।
ತ್ವತ್ತೋ ನ ಚಾನ್ಯಜ್ಜಗತೀಹ ವಸ್ತು ॥ ೧೯೩ ॥

ತ್ವಂ ರಾತ್ರಿನಾಥೋ ದಿವಸೇಶ್ವರಶ್ಚ ।
ತ್ವಮಗ್ನಿರಾಪಃ ಪವನೋ ಧರಿತ್ರೀ ॥
ನಭಸ್ತಥಾ ತ್ವಂ ಕ್ರತುತಂತ್ರಹೋತಾ ।
ತ್ವಮಷ್ಟಮೂರ್ತಿರ್ಭವತೋ ನ ಚಾನ್ಯತ್ ॥ ೧೯೪ ॥

ಅನಂತಮೂರ್ತಿಸ್ತ್ವಿಹ ಮುಖ್ಯಭಾವಾ ।
ನ್ನಿಗದ್ಯತೆ ಚಾಷ್ಟಮಯೀ ತ್ರಿಮೂರ್ತಿಃ ॥
ಅನಂತಮೂರ್ತೇರ್ಮಮ ಕಥಮನ್ಯಥಾ ತೇ ।
ಸಂಖ್ಯಾಸ್ತಿ ರೂಪಸ್ಯ ಯದಷ್ಟಮೂರ್ತಿಃ ॥ ೧೯೫ ॥

ತ್ವಂ ತ್ರ್ಯಂಬಕಸ್ತ್ವಂ ತ್ರಿಪುರಾಂತಕಶ್ಚ ।
ತ್ವಂ ಶಂಭುರೀಶಃ ಶಮನೋ ವಿಧಾತಾ ॥

ನಿನಗಿಂತಲೂ ಬೇರೆಯಾಗಿ ಜಗತ್ತಿನಲ್ಲಿ ಯಾವುದೊಂದು ವಸ್ತುವೂ ಇರುವುದಿಲ್ಲವು, ಎಲ್ಲವೂ ನಿನ್ನ ಸ್ವರೂಪವೇ ಆಗಿರುವುದು.

೧೯೪. ಚಂದ್ರ, ಸೂರ್ಯ, ಅಗ್ನಿ, ಜಲ, ವಾಯು, ಭೂಮಿ, ಆಕಾಶ ಮತ್ತು ಯಜಮಾನ ಇವರೆಲ್ಲರೂ ನಿನ್ನ ಸ್ವರೂಪಗಳೇ. ಹೀಗೆ ಅಷ್ಟಮೂರ್ತಿ ಸ್ವರೂಪಿಯಾದ ನಿನ್ನಹೊರತು ಬೇರೆ ಯಾವವಸ್ತುವೂ ಇರುವುದಿಲ್ಲವು.

೧೯೫. ಅನೇಕ ರೂಪಗಳುಳ್ಳ ನಿನ್ನನ್ನು ಮುಖ್ಯವಾಗಿ ಅಷ್ಟಮೂರ್ತಿ, ತ್ರಿಮೂರ್ತಿ, ಎಂದು ಮೊದಲಾಗಿ ಹೇಳುವರು. ಹಾಗಿಲ್ಲದಿದ್ದರೆ ಅನೇಕ ಮೂರ್ತಿಗಳುಳ್ಳ ನಿನ್ನರೂಪಕ್ಕೆ ಅಷ್ಟಮೂರ್ತಿಯೆಂದು ಪರಿಮಿತಿಯುಂಟೆ? ನಿನ್ನ ರೂಪಗಳಿಗೆ ಇಷ್ಟೇ ಎಂದು ಮಿತಿಯೇ ಇರುವುದಿಲ್ಲ. ಆದರೆ ನೀನು ತೋರುವ ಭಾವಗಳಿಗನುಸಾರವಾಗಿ ನಿನ್ನ ರೂಪವನ್ನು ತ್ರಿಮೂರ್ತಿ, ಅಷ್ಟಮೂರ್ತಿ ಎಂದು ಪ್ರತ್ಯೇಕಿಸಿ ಆರಾಧಿಸುವರು.

೧೯೬. ಅಲ್ಲದೆ ನೀನು ತ್ರ್ಯಂಬಕನು. ತ್ರಿಪುರಗಳನ್ನು ಸಂಹರಿಸಿದವನು. (" ತೇಷಾಮಸುರಾಣಾಂ ತಿಸ್ರಃ ಪುರ ಆಸನ್ " ಎಂದು ತ್ರಿಪುರಗಳ ಸಂಹಾರ ವಿಚಾರವು ಯಜುರ್ವೇದದಲ್ಲಿ ಹೇಳಿರುವುದು.) ಸುಖವನ್ನು ಕೊಡುವವನು. ಜಗದೊಡೆಯನು.

ಸಹಸ್ರಬಾಹುಶ್ಚ ಹಿರಣ್ಯಬಾಹುಃ ।
ಸಹಸ್ರಮೂರ್ತಿಸ್ತ್ವಿಹ ಪಂಚವಕ್ತ್ರಃ ॥ ೧೯೬ ॥

ಪ್ರಭೂತನೇತ್ರಸ್ತು ಷಡರ್ಧನೇತ್ರಃ ।
ಪ್ರಭೂತಬಾಹುರ್ದಶಬಾಹುರೀಶಃ ॥
ಪ್ರಭೂತಭೋಗೀ ಮಿತಭೋಗಯುಕ್ತಃ ।
ಭೋಗ್ಯಾನುಸಾರೋ ನಿರವಗ್ರಹಶ್ಚ ॥ ೧೯೭ ॥

ನಿತ್ಯಾನಿತ್ಯಾಸ್ವರೂಪಾಯ ನಿತ್ಯಧಾಮಸ್ವರೂಪಿಣೇ ।
ಪರತತ್ತ್ವಸ್ವರೂಪಾಯ ನಮಸ್ತುಭ್ಯಂ ಶಿವಾತ್ಮನೇ ॥ ೧೯೮ ॥

ನಾಂತಂ ಲಿಂಗಸ್ಯ ಯಸ್ಯಾಪ್ತಂ ವಿಷ್ಣುನಾ ಬ್ರಹ್ಮಣಾ ತವ ।
ತಸ್ಯಾವಾಂ ಕಂ ವಿಧಾಸ್ಯಾವಃ ಸ್ತುತಿವಾಕ್ಯಂ ವೃಷಧ್ವಜ ॥ ೧೯೯ ॥

ಕಾಲಾಂತಕನು. ಸೃಷ್ಟಿಕರ್ತೃವು ಸಾವಿರಾರು ಬಾಹುಗಳುಳ್ಳ ಮತ್ತು ಸಾವಿರಾರು ರೂಪಗಳುಳ್ಳ ವಿರಾಟ್ಪುರುಷನು. ಸುವರ್ಣಮಯವಾದ ಬಾಹುಗಳುಳ್ಳವನು. ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನಗಳೆಂಬ ಐದು ಮುಖಗಳುಳ್ಳವನು.

೧೯೭. ಅನೇಕ ಕಣ್ಣುಗಳುಳ್ಳವನಾದರೂ ಈಗ ಇಲ್ಲಿ ಮೂರು ಕಣ್ಣುಗಳುಳ್ಳವನು. ಅನೇಕ ಬಾಹುಗಳುಳ್ಳವನಾದರೂ ಹತ್ತು ಬಾಹುಗಳುಳ್ಳವನು. ಹೆಚ್ಚಾದ ಭೋಗವುಳ್ಳವನಾದರೂ ಮಿತವಾದ ಭೋಗವುಳ್ಳವನು. ಸುಖವಸ್ತುವನ್ನನುಸರಿಸಿ ಹೋಗುವವನು. ಆದರೂ ತಡೆಯಿಲ್ಲದ ಸ್ವಾತಂತ್ರ್ಯವುಳ್ಳವನು.

೧೯೮. ನಿತ್ಯಾನಿತ್ಯವಸ್ತುಗಳ ಸ್ವರೂಪನೂ, ನಿತ್ಯವಾದ ಸ್ಥಾನವುಳ್ಳವನೂ, ಪರಬ್ರಹ್ಮ ಸ್ವರೂಪನೂ, ಮಂಗಳ ರೂಪನೂ ಆದ ನಿನಗೆ ನಮಸ್ಕಾರವು. ಜಗತ್ತಿನಲ್ಲಿ ನಿತ್ಯಾನಿತ್ಯಗಳೆಂದು ವಸ್ತುಗಳು ಎರಡು ವಿಧವಾಗಿರುವವು. ನಾವು ನೋಡುವ ಚರಾಚರಾತ್ಮಕವಾದ ವಸ್ತುಗಳೆಲ್ಲವೂ ಅನಿತ್ಯ ವಸ್ತುಗಳು. ಎಂದರೆ ಕೆಲವುಕಾಲವಿದ್ದು ನಾಶವಾಗತಕ್ಕವು. ಸೂಕ್ಷ್ಮರೂಪವಾದ ಮತ್ತು ವಾಙ್ಮನಗಳಿಗೆ ಅಗೋಚರವಾದ ಪರಬ್ರಹ್ಮ ವಸ್ತುವೇ ನಿತ್ಯವಾದ ವಸ್ತುವು.

೧೯೯. ಓ ಶಂಕರನೇ, ನಿನ್ನ ಲಿಂಗ (ಮಹಾಕಾಲ ಲಿಂಗ) ದ ಕೊನೆಯನ್ನು ಬ್ರಹ್ಮನೂ ವಿಷ್ಣುವೂ ಪಡೆಯಲಾರದವರಾದರು. ಇಂತಹ ನಿನ್ನನ್ನು ನಾವು ಹೇಗೆ ಸ್ತುತಿಸಲು ಸಮರ್ಥರು ?

ಸ್ವರೂಪಂ ಯಸ್ಯ ಜಾನಂತಿ ನ ದೇವಾ ನಾಪಿ ದಾನವಾಃ ।
ಬಾಲಾವಾವಾಂ ಕಥಂ ತು ತ್ವಾಂ ಸ್ತೋಷ್ಯಾವಃ ಪರಮೇಶ್ವರ ॥ ೨೦೦ ॥

ಭಕ್ತಿಮಾತ್ರೇಣ ದೇವೇಶ ತವಾವಾಂ ವೃಷಭಧ್ವಜ ।
ಕುರ್ವಃ ಪ್ರಣಾಮಂ ಗೌರೀಶ ಭೂಯಸ್ತುಭ್ಯಂ ನಮೋ ನಮಃ ॥೨೦೧ ॥

॥ ಔರ್ವ ಉವಾಚ ॥

ಇತಿ ಸ್ತುತೋ ಮಹಾದೇವೋ ವೇತಾಲೇನ ಮಹಾತ್ಮನಾ ।
ಭೈರವೇಣಾಪಿ ರಾಜೇಂದ್ರ ಪ್ರಸನ್ನಃ ಪ್ರಾಹ ತೌ ತದಾ ॥ ೨೦೨ ॥

॥ ಶ್ರೀ ಭಗವಾನುವಾಚ ॥

ತುಷ್ಟೋಽಸ್ಮಿ ಯುವಯೋಃ ಪುತ್ರೌ ವೃಣುತಂ ವಾಂಛಿತಂ ವರಂ ।
ದಾಸ್ಯಾಮಿ ಯುವಯೋರಿಷ್ಟಂ ಪ್ರಸನ್ನೋಽಹಂ ತಪೋವ್ರತೈಃ ॥ ೨೦೩ ॥

ಸ್ತುತಿಭಿಶ್ಚ ದಮೈಶ್ಚಾಪಿ ತಥೈಕಾಂತಾನುಚಿಂತನೈಃ ।
ಮುಹುರ್ಮುಹುಃ ಸುಪ್ರಸನ್ನ ಇಷ್ಟಂ ದಾಸ್ಯಾಮಿ ವಾಂ ಸುತೌ ॥ ೨೦೪ ॥

---

೨೦೦. ಓ ಪರಮೇಶ್ವರ, ನಿನ್ನ ಸ್ವರೂಪವನ್ನು ದೇವತೆಗಳೂ, ರಾಕ್ಷಸರೂ ಸಹ ತಿಳಿಯಲಾರರು. ಇಂತಹ ನಿನ್ನನ್ನು ಬಾಲಕರಾದ ನಾವು ಹೇಗೆ ತಿಳಿದು ಸ್ತುತಿಸುವೆವು ?

೨೦೧. ದೇವದೇವನಾದ ಶಂಕರನೇ, ಕೇವಲ ಭಕ್ತಿಯಿಂದ ನಿನಗೆ ನಾವು ಪ್ರಣಾಮವನ್ನು ಮಾಡುವೆವು. ಓ ಗೌರೀಪತಿಯೇ, ನಿನಗೆ ಮತ್ತೆ ಮತ್ತೆ ನಮಿಸುವೆವು.

೨೦೨. ಔರ್ವಮುನಿಯು ಹೇಳಿದನು:—ಎಲೈ ಸಗರರಾಜನೇ, ಹೀಗೆ ವೇತಾಲ ಭೈರವರು ಸ್ತೋತ್ರಮಾಡಲು, ಶಂಕರನು ಪ್ರಸನ್ನನಾಗಿ ಅವರನ್ನು ಕುರಿತು ಹೀಗೆ ಹೇಳಿದನು.

೨೦೩. ಭಗವಂತನಾದ ಶಂಕರನು ಹೇಳಿದನು:—ಎಲೈ ಕುಮಾರರೇ ನಿಮ್ಮ ತಪಸ್ಸುಗಳಿಂದ ನಾನು ಸಂತೋಷಗೊಂಡು ನಿಮಗೆ ಪ್ರಸನ್ನನಾಗಿರುವೆನು. ಬೇಕಾದ ವರವನ್ನು ಕೇಳಿಕೊಳ್ಳಿರಿ, ಕೊಡುವೆನು.

೨೦೪. ಮತ್ತೂ ನಿಮ್ಮ ಸ್ತೋತ್ರಗಳಿಂದಲೂ, ಇಂದ್ರಿಯನಿಗ್ರಹದಿಂದಲೂ, ಏಕಾಂತವಾದ ಧ್ಯಾನಗಳಿಂದಲೂ ಸಹ ತುಂಬಾ ಪ್ರಸನ್ನನಾಗಿರುವೆನು. ಎಲೈ ನನ್ನ ಪ್ರಿಯಪುತ್ರರೇ, ನಿಮಗೆ ಇಷ್ಟವಾದ ವರವನ್ನು ನೀಡುವೆನು ಕೇಳಿಕೊಳ್ಳಿರಿ.

॥ ವೇತಾಲಭೈರವಾವೂಚತುಃ ॥

ತುಷ್ಟೋಽಸಿ ಯದಿ ಸತ್ಯಂ ನೌ ಸತ್ಯಮಾವಾಂ ಸುತೌ ಯದಿ ।
ವೃಷಧ್ವಜ ತವೈವೇಹ ತದೇಷ್ಟಂ ದೇಹಿ ನೌ ವರಂ ॥ ೨೦೫ ॥

ಸುತಭಾವೇನ ಪಿತರಂ ಭವಂತಂ ಜಗತಾಂ ಪತಿಂ ।
ನಿತ್ಯಂ ಯಥಾವಗಚ್ಛಾವಸ್ತಥಾ ದೇಹಿ ವರಂ ತು ನೌ ॥ ೨೦೬ ॥

ನ ರಾಜ್ಯಮಭಿಕಾಂಕ್ಷಾವೋ ನ ಧನಂ ನಾನ್ಯದೇವತಾಂ ।
ತ್ವದ್ಭಕ್ತ್ಯಾ ಸೇವನಂ ಕರ್ತುಂ ತವೇಚ್ಛಾವೋ ವೃಷಧ್ವಜ ॥ ೨೦೭ ॥

ತ್ವತ್ಪಾದಪಂಕಜದ್ವಂದ್ವೇ ನಿತ್ಯಂ ಮಧುಕರಾತ್ಮತಾಂ ।
ತ್ವಯಿ ಪ್ರಸನ್ನೇ ನೇತ್ರಾಣಾಂ ಯುಗಲೇ ಪ್ರಾಪ್ನುತಾಂ ಸದಾ ॥ ೨೦೮ ॥

ಇತೋಽನ್ಯಥಾ ತ್ವಚ್ಚಿಂತಾಭಿಃ ತ್ವದ್ಧ್ಯಾನೈಸ್ತ್ವತ್ಪೂಜನೈಃ ।
ಕಲ್ಪಕೋಟಿಸಹಸ್ರಾಣಿ ಯಾಂತು ಸಮ್ಯಕ್ತಥಾವಯೋಃ ॥ ೨೦೯ ॥

---

೨೦೫. ವೇತಾಲಭೈರವರು ಹೇಳಿದರು:—ಓ ಶಂಕರನೇ, ನೀನು ನಮ್ಮಲ್ಲಿ ಸತ್ಯವಾಗಿಯೂ ಸಂತುಷ್ಟನಾಗಿದ್ದರೆ ಮತ್ತು ನಾವು ನಿನ್ನ ಪುತ್ರರಾಗಿರುವುದು ಸತ್ಯವಾದುದಾದರೆ ನಿನಗೇ ಇಷ್ಟವಾದಂತಹ ವರವನ್ನು ನಮಗೆ ಅನುಗ್ರಹಿಸುವವನಾಗು.

೨೦೬. ಜಗದೊಡೆಯನಾದ ನಿನ್ನನ್ನು ನಾವು ನಿತ್ಯವೂ ಪುತ್ರಭಾವದಿಂದ ತಂದೆಯಾಗಿ ತಿಳಿಯುವಂತೆ ವರವನ್ನು ನಮಗೆ ಕೊಡುವವನಾಗು.

೨೦೭. ನಮಗೆ ರಾಜ್ಯವು ಬೇಕಿಲ್ಲವು. ಧನವೂ ಬೇಕಿಲ್ಲವು. ಇನ್ನೊಂದು ದೇವತೆಯೂ ನಮಗೆ ಬೇಡವು. ಆದಕಾರಣ ಓ, ಶಂಕರನೇ, ಭಕ್ತಿಯಿಂದ ನಿತ್ಯವೂ ನಿನ್ನನ್ನು ಸೇವಿಸಲಿಚ್ಛಿಸುವೆವು.

೨೦೮. ನೀನು ಪ್ರಸನ್ನನಾಗಿದ್ದರೆ, ನಿನ್ನ ಪಾದಕಮಲಗಳಲ್ಲಿ ನಮ್ಮ ಕಣ್ಣುಗಳು ಸದಾ ದುಂಬಿಯಭಾವವನ್ನು ಹೊಂದಲಿ. ಎಂದರೆ ನಿನ್ನ ಪಾದಗಳಲ್ಲಿ ನಮ್ಮ ಮನಸ್ಸು ನೆಲಸಿರಲಿ.

೨೦೯. ಅಲ್ಲದೆ ನಿನ್ನ ಧ್ಯಾನ, ಚಿಂತನೆ, ಪೂಜೆ, ಇವುಗಳಿಂದಲೇ ನಮಗೆ ಕೋಟಿಸಹಸ್ರ ಕಲ್ಪಗಳೂ ಕಳೆಯಲಿ.

ತತಸ್ತದ್ವಚನಂ ಶ್ರುತ್ವಾ ಮಹಾದೇವೋ ಹಸನ್ನಿವ
ಸರ್ವದೇವಗಣೈಃ ಸಾರ್ಧಂ ದೇವತ್ವಮಕರೋತ್ತಯೋಃ ॥ ೨೧೦ ॥

ದೇವೇಂದ್ರಸಂಮತೇನೈವ ಸುಧಾಮಾನೀಯ ನಾಕತಃ ।
ವೇತಾಲಭೈರವೌ ತಾಂ ತು ಪಾಯಯಾಮಾಸ ಶಂಕರಃ ॥ ೨೧೧ ॥

ಪೀತೇಽಮೃತೇ ತತಸ್ತೌತು ಮರ್ತ್ಯತಾಂ ನರಸತ್ತಮೌ ।
ಅಮರ್ತ್ಯತಾಂ ಪರಿತ್ಯಜ್ಯ ಪ್ರಾಪತುಃ ತಿವಶಕ್ತಿತಃ ॥ ೨೧೨ ॥

ತಸ್ಮಿನ್ ಕಾಲೇ ಸ್ವಪಂತೌ ತು ದಿವ್ಯಜ್ಞಾನಬಲಾನ್ವಿತೌ ।
ದಿವ್ಯರೂಪೋಪಸಂಪನ್ನೌ ಬಭೂವತುರರಿಂದಮೌ ॥ ೨೧೩ ॥

ಅಭಿನ್ನೇನೈವ ದೇಹೇನ ದೇವತ್ವಂ ಗತಯೋಸ್ತಯೋಃ ।
ಪ್ರಾಹ ಶಂಭುಸ್ತದಾ ತೌ ತು ಸುತೌ ಪರಮಹರ್ಷಿತೌ ॥ ೨೧೪ ॥

---

೨೧೦. ಆಮೇಲೆ ಅವರ ಮಾತನ್ನು ಕೇಳಿ ಮಹಾದೇವನು ಮಂದಹಾಸವನ್ನು ಸೂಸುತ್ತಾ ದೇವತೆಗಳೊಡನೆ ಸರಿಸಮನಾಗಿ ಆ ವೇತಾಲಭೈರವರಿಗೆ ದೇವತ್ವವನ್ನು ಅನುಗ್ರಹಿಸಿದನು.

೨೧೧. ಆಮೇಲೆ ಶಂಕರನು ದೇವೇಂದ್ರನ ಅನುಮತಿಯಿಂದಲೇ ಸ್ವರ್ಗದಿಂದ ಅಮೃತವನ್ನು ತರಿಸಿ ಆ ವೇತಾಲಭೈರವರಿಗೆ ಪಾನಮಾಡಿಸಿದನು.

೨೧೨. ಅಮೃತವನ್ನು ಕುಡಿದಮೇಲೆ ಆ ಶಂಕರ ಪುತ್ರರು ಮನುಷ್ಯಭಾವವನ್ನು ತ್ಯಜಿಸಿ ಶಂಕರನ ಶಕ್ತಿಯಿಂದ ದೇವಭಾವವನ್ನು ಹೊಂದಿದರು.

೨೧೩. ಆ ಸಮಯದಲ್ಲಿ ದೇವತೆಗಳಾದ ಆ ವೇತಾಲಭೈರವರು, ಶ್ರೇಷ್ಠವಾವ ಜ್ಞಾನ, ಮತ್ತು ಬಲಗಳುಳ್ಳವರೂ, ದಿವ್ಯವಾದ ರೂಪವುಳ್ಳವರೂ, ಎದುರಾಳಿಗಳನ್ನು ಶಿಕ್ಷಿಸುವಂತಹರೂ ಆದರು.

೨೧೪. ಒಂದೇ ಶರೀರದಿಂದ ದೇವಭಾವವನ್ನು ಹೊಂದಿ ತುಂಬಾ ಹರ್ಷಗೊಂಡು ಆ ತನ್ನ ಪುತ್ರರನ್ನು ಕುರಿತು ಆಗ ಶಂಕರನು ಹೀಗೆ ಹೇಳಿದನು.

॥ ಭಗವಾನುವಾಚ ॥

ಅಹಂ ತುಷ್ಟಸ್ತು ಯುವಯೋಃ ಪಾರ್ವತೀಂ ದಯಿತಾಂ ಮಮ ।
ಮದ್ದತ್ತಂ ಕಾಮಮಿಚ್ಛಂತಾವಾರಾಧಯತಮೀಶ್ವರೀಂ ॥ ೨೧೫ ॥

ತಾಮೃತೇ ತು ನ ಶಕ್ನೋಮಿ ದಾತುಮಿಷ್ಟಂ ಸನಾತನಂ ।
ಸೇವಿತುಂ ಚ ಸುತೌ ನಿತ್ಯಂ ಶರಣಂ ವ್ರಜತಂ ಶಿವಾಂ ॥ ೨೧೬ ॥

ಅಚಿರಾದ್ಯೇನ ಭಾವೇನ ಪ್ರೀತಿಂ ದೇವೀ ಗಮಿಷ್ಯತಿ ।
ಅತ್ರ ವಾ ತತ್ರ ವಾ ಗತ್ವಾ ತೇನ ಭಾವೇನ ಚಾರ್ಚ್ಯತಾಂ ॥ ೨೧೭ ॥

॥ ಇತಿ ಶ್ರೀ ಕಾಲಿಕಾ ಪುರಾಣೇ ತ್ರಿಪಂಚಾಶತ್ತಮೋಽಧ್ಯಾಯಃ ॥

---

೨೧೫. ಎಲೈ ಪ್ರಿಯಪುತ್ರರೇ, ನಿಮ್ಮಲ್ಲಿ ನಾನು ಸಂತುಷ್ಟನಾಗಿರುವೆನು. ನಾನು ಕೊಟ್ಟ ವರವನ್ನು ಪಡೆಯಲಿಚ್ಛೆಯಿಂದ ನನ್ನ ಪ್ರಿಯೆಯಾದ ಪಾರ್ವತಿಯನ್ನು ಆರಾಧಿಸಿರಿ.

೨೧೬. ಆ ಪಾರ್ವತಿಯ ಹೊರತು ನಾನು ಸ್ಥಿರವಾದ ವರವನ್ನು ನಿಮಗೆ ಕೊಡಲಾರೆನು. ಆದಕಾರಣ ಎಲೈ ಪುತ್ರರೇ, ನಿತ್ಯವೂ ಆ ಪಾರ್ವತಿಯನ್ನು ಸೇವಿಸುತ್ತಾ ಅವಳನ್ನು ಮರೆಹೋಗಿರಿ.

೨೧೭. ಯಾವ ಭಾವದಿಂದ ದೇವಿಯು ಜಾಗ್ರತೆ ಪ್ರಸನ್ನವಾಗುವಳೋ ಆ ಭಾವದಿಂದ ಇಲ್ಲಿಯಾಗಲೀ, ಎಲ್ಲಿಯೇ ಆಗಲಿ ಹೋಗಿ ಪಾರ್ವತೀ ದೇವಿಯನ್ನು ಆರಾಧಿಸಿರಿ.

ಐವತ್ತಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

ಶ್ರೀ ಕಾಲಿಕಾಪುರಾಣೇ ಚತುಃಪಂಚಾಶತ್ತಮೋಽಧ್ಯಾಯಃ

॥ ಔರ್ವ ಉವಾಚ ॥

ಏವಂ ವದತಿ ಭೂತೇಶೇ ತದಾ ವೇತಾಲಭೈರವೌ ।
ಪ್ರಾಹತುರ್ಮ್ಯೋರ್ಮುಕೇಶಂ ತೌ ಹರ್ಷೋತ್ಫುಲ್ಲವಿಲೋಚತೌ ॥ ೧ ॥

॥ ವೇತಾಲಭೈರವಾವೂಚತುಃ ॥

ಪಾರ್ವತ್ಯಾ ನ ಹಿ ಜಾನಿಮೋ ಧ್ಯಾನಂ ಮಂತ್ರಂ ವಿಧಿಂ ತಥಾ ।
ಕಥಮಾರಾಧಯಿಷ್ಯಾಮೋ ಭಗವನ್ ಸಮ್ಯಗುಚ್ಯತಾಂ ॥ ೨ ॥

॥ ಶ್ರೀ ಭಗವಾನುವಾಚ ॥

ಮಹಾಮಾಯಾವಿಧಿಂ ಮಂತ್ರಂ ಕಲ್ಪಂ ಚ ಭವತೋಃ ಸುತೌ ।
ಉಪದೇಕ್ಷ್ಯಾಮಿ ತತ್ತ್ವೇನ ಯೇನ ಸರ್ವಂ ಭವಿಷ್ಯತಿ ॥ ೩ ॥

॥ ಐವತ್ತನಾಲ್ಕನೆಯ ಅಧ್ಯಾಯವು ॥

೧. ಔರ್ವ ಮುನಿಯು ಹೇಳಿದನು:—ಹೀಗೆ ಶಂಕರನು ಹೇಳಲು ಆಗ ವೇತಾಲಭೈರವರು ಸಂತೋಷದಿಂದ ಅರಳಿದ ಕಣ್ಣುಗಳುಳ್ಳವರಾಗಿ ಶಂಕರನನ್ನು ಕುರಿತು ಹೀಗೆ ಹೇಳಿದರು.

೨. ವೇತಾಲಭೈರವರು ಹೇಳಿದರು:—ಓ ಭಗವಂತನೇ, ಪಾರ್ವತಿಯ ಧ್ಯಾನವನ್ನೂ ಮಂತ್ರವನ್ನೂ ಪೂಜಾವಿಧಿಯನ್ನೂ ನಾವು ತಿಳಿದಿರುವುದಿಲ್ಲವು. ಆದುದರಿಂದ ಆ ದೇವಿಯನ್ನು ಹೇಗೆ ಆರಾಧಿಸಬೇಕೆಂಬುದನ್ನು ಚೆನ್ನಾಗಿ ಹೇಳುವವನಾಗು.

೩. ಭಗವಂತನು ಹೇಳಿದನು:—ಎಲೈ ಪ್ರಿಯಪುತ್ರರೇ, ಆದಿಮಾಯೆಯಾದ ಪಾರ್ವತಿಯ ಧ್ಯಾನವನ್ನೂ, ಪೂಜಾವಿಧಿಯನ್ನೂ, ಕಲ್ಪವನ್ನೂ ಸಹ ವಿಸ್ತಾರವಾಗಿ ನಿಮಗೆ ನಾನು ಉಪದೇಶಿಸುವೆನು. ಅದರಿಂದ ನಿಮಗೆ ಸಕಲವೂ ಸಿದ್ಧಿಸುವುದು.

॥ ಔರ್ವ ಉವಾಚ ॥

ಇತ್ಯುಕ್ತ್ವಾ ಸ ಮಹಾಮಾಯಾಧ್ಯಾನಂ ಮಂತ್ರಂ ವಿಧಿಂ ತಥಾ ।
ಕಥಯಾಮಾಸ ಗಿರಿಶಸ್ತಂಯೋಃ ಸಮ್ಯಙ್ನೃಪೋತ್ತಮ ॥ ೪ ॥

ಯದಷ್ಟಾದಶಭಿಃ ಪಶ್ಚಾತ್ಪಟಲೈಶ್ಚ ಸ ಭೈರವಃ ।
ಸ ನಿರ್ಣಯವಿಧಿಂ ಕಲ್ಪಂ ನಿಬಬಂಧ ಶಿವಾಮೃತೇ ॥ ೫ ॥

॥ ಸಗರ ಉವಾಚ ॥

ಕೀದೃಙ್ಮಂತ್ರಂ ಪುರಾ ಶಂಭುರವೋಚದುಭಯೋಸ್ತಯೋಃ ।
ಯೇನಾರಾಧ್ಯ ಮಹಾಮಾಯಾಂ ತೌ ಗಣೇಶತ್ವಮಾಪತುಃ ॥ ೬ ॥

ಸಕಲ್ಪಂ ಸರಹಸ್ಯಂ ಚ ಸಾಂಗಂ ತಚ್ಛ್ರೋತುಮುತ್ಸಹೇ ।

॥ ಔರ್ವ ಉವಾಚ ॥

ದಶಾಷ್ಟಪಟಲೈರ್ಯತ್ತು ನಿಬಬಂಧ ಸ ಭೈರವಃ ॥ ೭ ॥

---

೪. ಔರ್ವ ಮುನಿಯು ಹೇಳಿದನು:—ಎಲೈ ರಾಜಶ್ರೇಷ್ಠನೇ, ಹೀಗೆ ಹೇಳಿ ಶಂಕರನು ಆ ವೇತಾಲಭೈರವರಿಗೆ ಆದಿಮಾಯೆಯಾದ ಪಾರ್ವತಿಯ ಧ್ಯಾನವನ್ನೂ, ಮಂತ್ರವನ್ನೂ, ಪೂಜಾವಿಧಿಯನ್ನೂ ಹೇಳಿದನು.

೫. ಅಲ್ಲದೆ ಶಂಕರನು, ತಾನೇ ರಚಿಸಿದ ಹದಿನೆಂಟು ಪಟಲಗಳುಳ್ಳ ದೇವೀ ಕಲ್ಪವನ್ನೂ, ಆದರ ವಿಧಿಯನ್ನೂ ವೇತಾಲ ಮತ್ತು ಭೈರವರಿಗೆ ಉಪದೇಶಿಸಿದನು.

೬. ಸಗರರಾಜನು ಪ್ರಶ್ನಿಸಿದನು:—ಓ ಮುನಿಯೇ, ಶಂಕರನು ಉಪದೇಶಿಸಿದ ಮಂತ್ರದಿಂದ ಆದಿಮಾಯೆಯಾದ ಪಾರ್ವತಿಯನ್ನು ಆರಾಧಿಸಿ ಆ ವೇತಾಲ ಭೈರವರು ಗಣನಾಯಕತ್ವವನ್ನು ಹೊಂದಿದರಷ್ಟೆ. ಆ ಮಂತ್ರವು ಯಾವುದು ? ಆ ಮಂತ್ರದ ಕ್ರಮವನ್ನೂ, ರಹಸ್ಯವನ್ನೂ ಅದರ ಮಿಕ್ಕ ಅಂಗಗಳನ್ನೂ ಸಹ ಕೇಳಲೇ ಷ್ಟಿಸುವೆನು.

೭. ಔರ್ವ ಮುನಿಯು ಹೇಳಿದನು:—ಎಲೈ ರಾಜನೇ ಶಂಕರನು ರಚಿಸಿದ ಹದಿನೆಂಟು ಪಟಲಗಳಿಂದ ಕೂಡಿದ ಆ ಕಲ್ಪವು ತುಂಬಾ ದೊಡ್ಡದಾದುದರಿಂದ ಹೇಳಲು ಬಹುಕಾಲವು ಬೇಕಾಗುವುದು.

ಬಹುತ್ವಾದ್ವಕ್ತುಮಿತುಂ ತಸ್ಯ ಚಿರೇಣೈವ ತು ಶಕ್ಯತೇ ।
ತಸ್ಮಾತ್ತಸ್ಯೈಃ ಸಮುದ್ಧೃತ್ಯ ಯನ್ಮಹಾದೇವಭಾಷಿತಂ ॥ ೮ ॥

ಸಂಕ್ಷೇಪಾತ್ಕಥಯೇ ತತ್ತ್ವಂ ತಚ್ಛೃಣುಷ್ವ ನೃಪೋತ್ತಮ ।
ಪೃಚ್ಛಂತೌ ಪಾರ್ವತೀ ಮಂತ್ರಂತದಾ ವೇತಾಲಭೈರವೌ ॥ ೯ ॥

ಜಗಾದ ಸ ಮಹಾದೇವಃ ಶೃಣುತಂ ಮಂತ್ರಕಲ್ಪಕೌ ।
॥ ಶ್ರೀ ಭಗವಾನುವಾಚ ॥

ಶೃಣು ಮಂತ್ರಂ ಪ್ರವಕ್ಷ್ಯಾಮಿ ಗುಹ್ಯಾದ್ಗುಹ್ಯತರಂ ಪರಂ ॥ ೧೦ ॥

ಅಷ್ಟಾಕ್ಷರಂ ತು ವೈಷ್ಣವ್ಯಾ ಮಹಾಮಾಯಾಮಷೋತ್ಸವಂ ।
"ಅಸ್ಯ ಶ್ರೀ ವೈಷ್ಣವೀಮಹಾಮಂತ್ರಸ್ಯ । ನಾರದಋಷಿಃ । ಶಂಭುರ್ದೇವತಾ ।
ಅನಿಷ್ಟುಪ್ ಛಂದಃ, । ಸರ್ವಾರ್ಥಸಾಧನೇ ವಿನಿಯೋಗಃ" ॥ ೧೧ ॥

ಹಾಂತಾಂತಪೂರ್ವೋ ರಾಂತಶ್ಚ ನಾಂತೋ ಣಾಂತಸ್ತಥೈವ ಚ ।।

---

೮. ಆದುದರಿಂದ ಶಂಕರನು ಹೇಳಿದ ಆ ದೊಡ್ಡದನ್ನೇ ಸಂಗ್ರಹಿಸಿ ಈಗ ನಿನಗೆ ಅದರ ತತ್ತ್ವವನ್ನು ಹೇಳುವೆನು. ಎಲೈ ರಾಜೇಂದ್ರನೇ ಕೇಳುವವನಾಗು.

೯. ಅನಂತರ ಮಹಾದೇವನು ತನ್ನನ್ನು ಪ್ರಶ್ನಿಸುತ್ತಲಿರುವ ಆ ವೇತಾಲ ಭೈರವರಿಗೆ ಆಗ ಪಾರ್ವತೀ ಮಂತ್ರವನ್ನೂ ಅದರ ಕಲ್ಪವನ್ನೂ ಉಪದೇಶಿಸಿದನು. ಅದನ್ನು ಹೇಳುವೆನು ಕೇಳು.

೧೦. ಭಗವಾ೯ ಶಂಕರನು ಹೇಳಿದನು:—ಎಲೈ ವೇತಾಲಭೈರವರೇ. ಅತಿ ರಹಸ್ಯವಾದುದೂ, ವಿಷ್ಣು ಮಾಯೆಯಾದ ಪಾರ್ವತಿಗೆ ತುಂಬಾ ಪ್ರಿಯಕರವಾದುದೂ ಆದ ದೇವಿಯ ಅಷ್ಟಾಕ್ಷರ ಮಂತ್ರವನ್ನು ಹೇಳುವೆನು ಕೇಳಿರಿ.

೧೧. ಈ ವಿಷ್ಣು ಮಾಯೆಯ ಮಹಾಮಂತ್ರಕ್ಕೆ ಋಷಿಯು, ನಾರದಮುನಿಯು ದೇವತೆಯು ಶಂಕರನು. ಅನುಷ್ಟುಪ್ ಛಂದೋಬದ್ಧವಾಗಿರುವುದು. ಈ ಮಂತ್ರ ಗಳಿಂದ ಸಕಲ ಇಷ್ಟಾರ್ಥಗಳನ್ನೂ ಪಡೆಯಬಹುದು.

೧೨-೧೩. ಹಕಾರವುಳ್ಳ ಸಮುದಾಯದ ಆದಿವರ್ಣವಾದ ಯಕಾರ, ರಕಾರ, ನಕಾರ, ಣಕಾರ, ಕಕಾರದಿಂದ ಹನ್ನೊಂದನೆಯ ಅಕ್ಷರವಾದ ಟಕಾರ, ಎಂಟನೆಯದಾದ

ಕೈಕಾದಶಾಷ್ಟಾದಿಷಷ್ಠಃ ಖಾಂತೋ ಬಿಂದುಪುರಸ್ಸರಃ ।
ವಿಭಿರಷ್ಟಾಕ್ಷರೈರ್ಮಂತ್ರಂ ಶೋಣಪತ್ರಸಮಪ್ರಭಂ ॥ ೧೨ ॥

ಓಂಕಾರಂ ಪೂರ್ವತಃ ಕೃತ್ವಾ ಜಪ್ಯಂ ಸರ್ವೈಸ್ತು ಸಾಧಕೈಃ ।
ಮಹಾಮಂತ್ರಮಿದಂ ಗುಹ್ಯಂ ವೈಷ್ಣವೀಮಂತ್ರಸಂಜ್ಞಕಂ ॥ ೧೩ ॥

ಮಂತ್ರಂ ಕಲೇವರಗತಂ ತಸ್ಮಾದಂಗಂ ಪ್ರಕೀರ್ತಿತಂ ।
ಮಹಾದೇವಸ್ಯೋರ್ಧ್ವಮುಖಂ ಬೀಜಮೇತತ್ಪ್ರಕೀರ್ತಿತಂ ॥ ೧೪ ॥

ಓಂಕಾರಾಕ್ಷರಬೀಜಂ ಚ ಯುಕಾರಃ ಶಕ್ತಿರುಚ್ಯತೆ ।
ಸಬೀಜಂ ಕಥಿತಂ ಮಂತ್ರಂ ಕಲ್ಪಂಚ ಶೃಣು ಭೈರವ ॥ ೧೫ ॥

ತೀರ್ಥೇ ನದ್ಯಾಂ ದೇವಖಾತೇ ಗರ್ತಪ್ರಸ್ರವಣಾದಿಕೇ ।
ಪರಕೀಯೇತರೆ ತೋಯೇ ಸ್ನಾನಂ ಪೂರ್ವಂ ಸಮಾಚರೇತ್ ॥ ೧೬ ॥

ಝುಕಾರವೂ, ಆರನೆಯದಾದ ಚಕಾರ ಈ ಅಕ್ಷರಗಳು ಕೊನೆಯಲ್ಲಿ ಸೊನ್ನೆಯಿಂದ ಕೂಡಿಮದೇ ಆದರೆ ದೇವಿಯ ಮಂತ್ರವಾಗುವುದು. (ಓಂ, ಯಂ, ರಂ, ನಂ, ಣಂ, ಟಂ,ಝುಂ, ಚಂ, ಖಂ) ಈ ಎಂಟು ಅಕ್ಷರಗಳಿಂದ ಕೂಡಿದ ದೇವೀ ಮಂತ್ರವು ಎಂಟು ದಳಗಳಿಂದ ಕೂಡಿದ ರಕ್ತಕಮಲದಂತೆ ಪ್ರಕಾಶಮಾನವಾಗಿರುವುದು ಈ ಮಂತ್ರವನ್ನು ಓಂಕಾರ ಪೂರ್ವಕವಾಗಿ ಸಾಧಕರು ಜಪಿಸಬೇಕು. ಅತಿ ರಹಸ್ಯವಾದ ಈ ಮಹಾ ಮಂತ್ರಕ್ಕೆ ವೈಷ್ಣವೀಮಂತ್ರವೆಂದು ಹೆಸರು.

೧೪. ಈ ಮಂತ್ರವು ಶಂಕರನ ಹೃದಯದಲ್ಲಿರುವುದರಿಂದ ಅಂಗಮಂತ್ರವೆಂದು ಇದಕ್ಕೆ ಹೆಸರು. ಇದು ಮಹಾದೇವನ ಊರ್ಧ್ವಮುಖವಾದ ಬೀಜಮಂತ್ರವು.

೧೫. ಎಲೈ ಭೈರವನೇ, ಈ ಮಂತ್ರಕ್ಕೆ ಓಂಕಾರವೇ ಬೀಜವು. ಯಕಾರವು ಶಕ್ತಿಯು. ಈರೀತಿಯಾಗಿ ನಿನಗೆ ಬೀಜದೊಡನೆ ಮಂತ್ರವನ್ನು ಹೇಳಿದಾಯಿತು. ಇನ್ನು ಕಲ್ಪವನ್ನು ಕೇಳು.

೧೬. ತೀರ್ಥ, ನದಿ, ಸರೋವರ, ಭಾವಿ, ಗಿರಿನದಿ, ಮುಂತಾದುವುಗಳಲ್ಲಿ ಯಾಗಲೀ ಇನ್ನೊಬ್ಬರ ಅಧಿಕಾರಕ್ಕೊಳಪಡದ ಜಲದಲ್ಲಿಯಾಗಲಿ ಮೊದಲು ಸ್ನಾನವನ್ನು ಮಾಡಬೇಕು.

ಆಚಾಂತಃ ಶುಚಿತಾಂ ಪ್ರಾಪ್ತಃ ಕೃತಾಸನಪರಿಗ್ರಹಃ ।
ಉತ್ತರಾಭಿಮುಖೋ ಭೂತ್ವಾ ಸ್ಥಂಡಿಲಂ ಮಾರ್ಜಯೇತ್ತತಃ ॥ ೧೭ ॥

ಕರೇಣಾನೇನ ಮಂತ್ರೇಣ ಯೂಂ ಸಃ ಕ್ಷಿತ್ಯೈ ಇತಿ ಸ್ವಯಂ ।
ಓಂ ಯೂಂ ಸ ಇತಿ ಮಂತ್ರೇಣ ಆಶಾಪೂರಣಕೇನ ಚ ॥ ೧೮ ॥

ತೋಯೈರಭ್ಯುಕ್ಷಯೇತ್ಸ್ಥಾನಂ ಭೂತಾನಾಮಪಸಾರಣೇ ।
ತತಃ ಸವ್ಯೇನ ಹಸ್ತೇನ ಗೃಹೀತ್ವಾ ಸ್ಥಂಡಿಲಂ ಶುಚಿಃ ॥ ೧೯ ॥

ಮಂತ್ರಂ ಲಿಖೇತ್ಸುವರ್ಣೇನ ಯಾಜ್ಞಿಕೇನ ಕುಶೇನವಾ ।
ಓಂ ವೈಷ್ಣವೈ ನಮ ಇತಿ ಅಸ್ತ್ರರಾಜಮಥಾಪಿ ವಾ ॥ ೨೦ ॥

ತತಸ್ತ್ರಿಮಂಡಲಂ ಕುರ್ಯಾತ್ತೇನೈವ ಸಮರೇಖಯಾ ।
ನಿತ್ಯಾಸು ನ ಹಿ ಪೂಜಾಸು ರಜೋಭಿರ್ಮಂಡಲಂ ಲಿಖೇತ್ ॥ ೨೧ ॥

---

೧೭. ಆಮೇಲೆ ಆಚಮನವನ್ನು ಮಾಡಿ ಶುದ್ಧನಾಗಿ ಉತ್ತರಾಭಿಮುಖವಾಗಿ ಆಸನವನ್ನು ಹಾಕಿ ಕುಳಿತು, ಸ್ಥಂಡಿಲವನ್ನು ಎಂದರೆ ಪೂಜೆಗಾಗಿ ನಿರ್ಮಿಸಿರುವ ಚೌಕವಾದ ಜಗುಲಿಯನ್ನು " ಯೂಂಸಃ ಕ್ಷಿತ್ಯೈ " ಎಂಬ ಮಂತ್ರವನ್ನು ಹೇಳಿ (ಜಲದಿಂದ) ಕೈಯಲ್ಲಿ ಪ್ರೋಕ್ಷಿಸಬೇಕು.

೧೮. ಆಮೇಲೆ ಭೂತಗಳನ್ನು ಓಡಿಸಲು " ಓಂ ಯೂಂ ಸಃ" ಎಂಬ ಮಂತ್ರವನ್ನು ದಿಕ್ಕುಗಳು ತುಂಬುವಂತೆ ಗಟ್ಟಿಯಾಗಿ ಉಚ್ಚರಿಸಿ ಆ ಸ್ಥಳವನ್ನು ಜಲದಿಂದ ಪ್ರೋಕ್ಷಿಸಬೇಕು. ಹಾಗೆ ಮಾಡಿದರೆ ಭೂತಗಳು ಪಲಾಯನ ಮಾಡುವುವು.

೧೯-೨೦. ಅನಂತರ ಬಲಗೈಯಿಂದ ಶುಚಿಯಾಗಿ ಆ ಸ್ಥಂಡಿಲದಲ್ಲಿ ಸುವರ್ಣ ಶಲಾಕದಿಂದಾಗಲೀ ಯಜ್ಞದ ದರ್ಭೆಗಳಿಂದಾಗಲೀ ಹಿಂದೆ ಹೇಳಿದ ಅಷ್ಟಾಕ್ಷರೀ ಮಂತ್ರವನ್ನು ಬರೆಯಬೇಕು. ಅಥವಾ " ಓಂ ವೈಷ್ಣವ್ಯೈ ನಮಃ " ಎಂಬ ಅಸ್ತ್ರರಾಜ ಮಂತ್ರವನ್ನಾಗಲೀ ಬರಯಬೇಕು.

೨೧-೨೨. ಅನಂತರ ಸಮವಾದ ರೇಖೆಗಳಿಂದ ಮೂರು ಮಂಡಲಗಳನ್ನು ಬರೆಯಬೇಕು. ನಿತ್ಯವಾದ ಪೂಜೆಯಲ್ಲಿ ರಜಸ್ಸು (ರಂಗವಲ್ಲಿ, ಕುಂಕುಮ, ಅರಶಿನ,)

ಪುರಶ್ಚರಣಕಾರ್ಯೇಷು ತತ್ಕಾರ್ಯೇಷು ಪ್ರಯೋಜಯೇತ್ ।
ರೇಖಾಮುದೀಚ್ಯಾಂ ಪ್ರಥಮಂ ಪಶ್ಚಿಮೇ ತದನಂತರಂ ॥ ೨೨ ॥

ದಕ್ಷಿಣೇ ತು ತತಃ ಪಶ್ಚಾತ್ತತ್ಪೂರ್ವಭಾಗೇ ತು ಶೇಷತಃ ।
ವರ್ಣಾನಾಂ ಚ ಸಹದ್ವಾರೈರೇವಮೇವ ಕ್ರಮೋ ಭವೇತ್ ॥ ೨೩ ॥

ಓಂ ಹ್ರೀಂ ಶ್ರೀಂ ಸ ಇತಿ ಮಂತ್ರೇಣ ಮಂಡಲಂ ಪೂಜಯೇತ್ತತಃ ।
ಹಸ್ತೇನ ಮಂಡಲಂ ಕೃತ್ವಾ ಕುರ್ಯಾದ್ದಿಗ್ಬಂಧನಂ ತತಃ ॥ ೨೪ ॥

ಆಶಾಬಂಧನಮಂತ್ರೇಣ ಪೂರ್ವೋಕ್ತೇನ ಯಥಾಕ್ರಮಂ ।
ಷಂಡಂತೇನಾತ್ಮನಾಪ್ಯತ್ರ ಕರೇಣೈವ ನಿಬಂಧಯೇತ್ ॥ ೨೫ ॥

ಯುವಾನಾಂ ತಂಡುಲೈರೇಕಮಂಗುಲಂ ಚಾಷ್ಟಭಿರ್ಭವೇತ್ ।
ಅದೀರ್ಘಯೋಜಿತೈರ್ಹಸ್ತೈಶ್ಚತುರ್ವಿಂಶತಿರಂಗುಲೈಃ ॥ ೨೬ ॥

ಮುಂತಾದವುಗಳಿಂದ ಮಂಡಲವನ್ನು ಬರೆಯಕೂಡದು. ಪುರಶ್ಚರಣಗಳಲ್ಲಿಯೂ, ಕಾಮ್ಯವಾದ ಪೂಜೆಗಳಲ್ಲಿಯೂ ರಜಸ್ಸುಗಳಿಂದ ಮಂಡಲಗಳನ್ನು ಬರೆಯಬೇಕು.

೨೩. ಮೊದಲು ಉತ್ತರದಲ್ಲಿ ರೇಖೆಯನ್ನು ಬರೆಯಬೇಕು ಅನಂತರ ಪಶ್ಚಿಮ ದಿಕ್ಕಿನಲ್ಲಿ ರೇಖೆಯನ್ನು ಬರಿಯಬೇಕು ಆಮೇಲೆ ದಕ್ಷಿಣಲ್ಲಿ ಬರೆಯಬೇಕು ಕೊನೆಗೆ ಪೂರ್ವದಿಕ್ಕಿನಲ್ಲಿ ಬರೆಯಬೇಕು ಮಂತ್ರ ವರ್ಣಗಳನ್ನೂ ದ್ವಾರಗಳೊಡನೆ ಹೀಗೆಯೇ ಬರೆಯಬೇಕು.

೨೪. ಓಂ, ಹ್ರೀಂ, ಶ್ರೀಂ, ಸ ಎಂಬ ಮಂತ್ರದಿಂದ ಆ ಮಂಡಲವನ್ನು ಪೂಜಿಸಬೇಕು. ಆಮೇಲೆ ಮಂಡಲವನ್ನು ಕೈಯಲ್ಲಿ ಸ್ಪರ್ಶಿಸಿಕೊಂಡು ದಿಗ್ಬಂಧನವನ್ನು ಮಾಡಬೇಕು.

೨೫. ಹಿಂದೆ ಹೇಳಿದ ಓಂ, ಶ್ರೀಂ, ಹ್ರೀಂ ಸ ಎಂಬ ಮಂತ್ರದ ಕೊನೆಗೆ ಫಟ್ಕಾರವನ್ನು ಸೇರಿಸಿ ಮಂಡಲವನ್ನು ಸ್ಪರ್ಶಿಸಿಕೊಂಡೇ ದಿಗ್ಬಂಧನವನ್ನು ಮಾಡಬೇಕು. (ಓಂ, ಹ್ರೀಂ, ಶ್ರೀಂ, ಸಃ ಫಟ್)

೨೬ಭತ್ತದ ಎಂಟು ಅಕ್ಕಿಗಳನ್ನು ಸಾಲಾಗಿ ಇರಿಸಿದರೆ ಒಂದು ಅಂಗುಲವಾಗುವುದು. ಇಂತಹ ಇಪ್ಪತ್ತು ಅಂಗುಲಗಳನ್ನು ಸೇರಿಸಿದರೆ ಒಂದು ಹಸ್ತವಾಗುವುದು.

ತತ್ಪ್ರಮಾಣೇನ ಹಸ್ತೇನ ಹಸ್ತೈಕಂ ತಸ್ಯ ಮಂಡಲಂ ।
ಪದ್ಮಂ ವಿತಸ್ತಿಮಾತ್ರಂ ಸ್ಯಾತ್ಕರ್ಣಿಕಾರಂ ತದರ್ಧಕಂ ॥ ೨೭

ದಲಾನ್ಯನ್ಯೋನ್ಯಸಕ್ತಾನಿ ಹ್ಯಾಯತಾನಿ ನಿಯೋಜಯೇತ್ ।
ನ ನ್ಯೂನಾಧಿಕಭಾಗಾನಿ ಸಬಹಿರ್ವೇಷ್ಟಿತಾನಿ ಚ ॥ ೨೮ ॥

ಮಧ್ಯಭಾಗೇ ನ್ಯಸೇದ್ದ್ವಾರಂ ನ ನ್ಯೂನೇ ನಾಧಿಕೇ ತಥಾ ।
ಸುಬದ್ಧಂ ಮಂಡಲಂ ತಚ್ಚ ರಕ್ತವರ್ಣಂ ವಿಚಿಂತಯೇತ್ ॥ ೨೯ ॥

ಇತೋಽನ್ಯಥಾಮಂಡಲಮುಗ್ರಮಸ್ಯಾಃ ।
ಕರೋತಿ ಯೋ ಲಕ್ಷಣಭಾಗಹೀನಂ ॥

---

೨೭. ಈ ಪ್ರಮಾಣದ ಹಸ್ತದಿಂದ ಪದ್ಮಾಕಾರವಾದ ಒಂದು ಮಂಡಲವನ್ನು ಬರೆಯಬೇಕು. ಅದರರ್ಧಪ್ರಮಾಣವಾಗಿ ಒಂದುಗೇಣು ಉದ್ದ ಮತ್ತು ಅಗಲವಾಗಿ ಸಮ್ಮದ ಕರ್ಣಿಕಾರವನ್ನು ಮಾಡಬೇಕು.

೨೮. ಆ ಪದ್ಮ ದಳಗಳನ್ನು ಒಂದಕ್ಕೊಂದು ಸೇರಿಕೊಂಡಿರುವಂತೆಯೂ, ಏರುಪೇರಾಗಿರದೆ ಒಂದೇಸಮನಾಗಿರುವಂತೆಯೂ, ಹೊರಗೆ ರೇಖೆಯಿಂದ ಸುತ್ತಿಕೊಂಡಿರುವಂತೆಯೂ ಬರೆಯಬೇಕು.

೨೯. ಮಧ್ಯದಲ್ಲಿ ಸರಿಯಾಗಿ ದ್ವಾರ (ಬಾಗಿಲ) ವನ್ನು ಬಿಡಬೇಕು. ಹೆಚ್ಚು ಕಡಿಮೆ ಇರಕೂಡದು. ನಾಲ್ಕುಕಡೆಯಿಂದಲೂ, ಮಂಡಲವನ್ನು ಬಂಧಿಸಬೇಕು. ಮತ್ತು ಅದನ್ನು ರಕ್ತವರ್ಣವಾಗಿ ಚಿಂತಿಸಬೇಕು.

೩೦. ಹೀಗೆಯೇ ಮಂಡಲವನ್ನು ಬರೆಯಬೇಕು. ಅದಲ್ಲದೆ ಬೇರೆರೀತಿಯಿಂದ ಉಗ್ರವಾಗಿ ದೇವಿಯ ಮಂಡಲವನ್ನು ಲಕ್ಷಣವಿಲ್ಲದೆ ಬರೆದರೆ ಅದರಿಂದ

ಫಲಂ ನ ಚಾಪ್ನೋತಿ ನ ಕಾಮಮಿಷ್ಟಂ।
ತಸ್ಮಾದಿದಂ ಮಂಡಲಮತ್ರ ಲೇಖ್ಯಂ ॥ ೩೦ ॥

ಇತಿ ಶ್ರೀ ಕಾಲಿಕಾಪುರಾಣೇ

(ಮಹಾಮಾಯಾಕಲ್ಪೇ ಅಷ್ಟಾದಶಪಟಲೇ)

॥ ಚತುಃ ಪಂಚಾಶತ್ತಮೋಽಧ್ಯಾಯಃ ॥

ಇಷ್ಟಾರ್ಥವು ಸಿದ್ಧಿಸಲಾರದು. ಆದುದರಿಂದ ಇದೇಕ್ರಮದಿಂದಲೇ ಈ ಮಂಡಲವನ್ನು ಬರೆಯಬೇಕು.

ಇತಿ ಶ್ರೀ ಕಾಲಿಕಾಪುರಾಣೇ

(ಮಹಾಮಾಯಾಕಲ್ಪದ ಹದಿನೆಂಟನೆಯ ಪಟಲದಲ್ಲಿ)

ಐವತ್ತನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

— —

ಅಥ

ಶ್ರೀ ಕಾಲಿಕಾಪುರಾಣೇ ಪಂಚಪಂಚಾಶತ್ತಮೋಽಧ್ಯಾಯಃ

ಐವತ್ತೈದನೆಯ ಅಧ್ಯಾಯವು

॥ ಶ್ರೀ ಭಗವಾನುವಾಚ ॥

ತತೋ ಲಮಿತಿ ಮುಂತ್ರೇಣ ಅರ್ಘ್ಯಪಾತ್ರಸ್ಯ ಮುಂಡಲಂ ।
ಚತುಷ್ಕೋಣಂ ವಿಧಾಯಾಶು ದ್ವಾರಪದ್ಮವಿವರ್ಜಿತಂ ॥ ೧ ॥

ಓಂ ಹ್ರೀಂ ಶ್ರೀಮಿತಿ ಮುಂತ್ರೇಣ ಅರ್ಘ್ಯಪಾತ್ರಂ ತು ಮುಂಡಲೇ ।
ವಿನ್ಯಸೇತ್ಪ್ರಥಮಂ ತತ್ರ ಪೂಜಯಿತ್ವಾ ಸಮಿಧ್ಯತಿ ॥ ೨ ॥

ಓಂ ಹ್ರೀಂ ಕ್ರೋಮಿತಿ ಮುಂತ್ರೇಣ ಗಂಧಪುಷ್ಪೇ ತಥಾ ಜಲಂ ।
ಅರ್ಘ್ಯಪಾತ್ರೇ ಕ್ಷಿಪೇತ್ತತ್ರ ಮುಂಡಲಂ ವಿನ್ಯಸೇತ್ತತಃ ॥ ೩ ॥

॥ ಐವತ್ತೈದನೆಯ ಅಧ್ಯಾಯವು. ॥

೧-೨. ಭಗವಾ ಶಂಕರನು ಹೇಳಿದನು:—ಎಲೈ, ಭೈರವನೇ, ಆಮೇಲೆ ನಾಲ್ಕು ಮೂಲೆಗಳುಳ್ಳ ಚಚ್ಚೌಕವಾದ ಮಂಡಲವೊಂದನ್ನು ಬರೆಯಬೇಕು. ಅದರ ಮಧ್ಯೆ ಪದ್ಮವಾಗಲೀ, ದ್ವಾರವಾಗಲೀ ಇರಕೂಡದು. ಇಂತಹ ಮಂಡಲವನ್ನು "ಲಂ" ಎಂಬ ಮಂತ್ರದಿಂದ ಪೂಜಿಸಿ ಅದರಲ್ಲಿ ಓಂ, ಹ್ರೀಂ, ಶ್ರೀಂ, ಎಂಬ ಮಂತ್ರದಿಂದ ಪೂಜಾಪಾತ್ರವನ್ನಿಡಬೇಕು.

೧-೨ ಶ್ಲೋಕಗಳವರೆಗೆ ವರ್ಧನೀ ಕಲಶಸ್ಥಾಪನೆ ಮತ್ತು ಪೂಜಾಕ್ರಮವು ಹೇಳಲ್ಪಡುವುದು.

೩. ಓಂ, ಹ್ರೀಂ, ಕ್ರೋಂ, ಎಂಬ ಮಂತ್ರದಿಂದ ಆ ಪೂಜಾಪಾತ್ರೆಯಲ್ಲಿ ಗಂಧ, ಪುಷ್ಪ, ಜಲಗಳನ್ನು ಹಾಕಬೇಕು. ಅಮೇಲಾಪಾತ್ರೆಯಲ್ಲಿ ಮಂಡಲವನ್ನು ಬರೆಯಬೇಕು.

ಪೂರ್ವವನ್ಮಂಡಲಂ ಕೃತ್ವಾ ಅಘ್ರ್ಯಪಾತ್ರೇ ತತೋ ಜಲೈಃ।
ತ್ರಿಭಾಗೈಃ ಪೂರಯೇತ್ಪಾತ್ರಂ ಪುಷ್ಪಂ ತತ್ರ ವಿನಿಕ್ಷಿಪೇತ್ ॥ ೪ ॥

ತತೋ ಹ್ರೀಮಿತಿ ಮಂತ್ರೇಣ ಆಸನಂ ಪೂಜಯೇತ್ಸ್ವಕಂ।
ತತಃ ಕ್ಷ್ವಾಮಿತಿ ಮಂತ್ರೇಣ ಆತ್ಮಾನಂ ಪೂಜಯೇದ್ಬುಧಃ ॥ ೫ ॥

ಗಂಧೈಃ ಪುಷ್ಪೈಃ ಶಿರೋದೇಶೇ ತತಃ ಪೂಜಾಂ ಸಮಾಚರೇತ್।
ಓಂ ಕ್ರೀಂ ಸ ಇತಿ ಮಂತ್ರೇಣ ಪುಷ್ಪಂಹಸ್ತತಲಸ್ಥಿತಂ ॥ ೬ ॥

ಸಂಮೃಜ್ಯ ಸವ್ಯಹಸ್ತೇನ ಘ್ರಾತ್ವಾ ವಾಮಕರೇಣ ತು।
ಐಶಾನ್ಯಾಂ ನಿಕ್ಷಿಪೇದೇತತ್ಪೂರ್ವಮಂತ್ರೇಣ ಕೋವಿದಃ ॥ ೭ ॥

ರಕ್ತಪುಷ್ಪಂ ಗೃಹೀತ್ವಾ ತು ಕರಾಭ್ಯಾಂ ಪಾಣಿಕಚ್ಛಪಂ।
ಬದ್ಧ್ವಾ ಕುರ್ಯಾತ್ತತಃ ಪಶ್ಚಾದ್ದಹನಪ್ಲವನಾದಿಕಂ ॥ ೮ ॥

---

೪. ಹಿಂದಿನಂತೆಯೇ ನಾಲ್ಕು ಮೂಲೆಗಳುಳ್ಳ ಚಚ್ಚೌಕವಾದ ಮಂಡಲವನ್ನು ಪೂಜಾಪಾತ್ರೆಯಲ್ಲಿ ಬರೆದು, ಅದರಲ್ಲಿ ಮುಕ್ಕಾಲುಭಾಗ ನೀರನ್ನು ತುಂಬಬೇಕು ಮತ್ತು ಹೂವುಗಳನ್ನು ಆ ಪಾತ್ರೆಯಲ್ಲಿ ಹಾಕಬೇಕು.

೫. ಆಮೇಲೆ "ಹ್ರೀಂ" ಎಂಬ ಮಂತ್ರದಿಂದ ತನ್ನ ಆಸನವನ್ನೂ "ಕ್ಷ್ವಾಂ" ಎಂಬ ಮಂತ್ರದಿಂದ ಸಾಧಕನು ಗಂಧ ಮತ್ತು ಹೂಗಳಿಂದ ಶಿರಸ್ಸಿನಲ್ಲಿ ತನ್ನನ್ನೂ ಪೂಜಿಸಿಕೊಳ್ಳಬೇಕು.

೬-೭. ಓಂ, ಕ್ರೀಂ, ಸಃ, ಎಂಬ ಮಂತ್ರದಿಂದ ಕೈಯ್ಯಲ್ಲಿ ಹೂವನ್ನು ಇರಿಸಿಕೊಂಡು ವಾಮ ಹಸ್ತದಿಂದ ನೇವರಿಸಿ ವಾಸನೆಯನ್ನು ಮೂಸಿ ಆ ಕೈಯ್ಯಿಂದಲೇ ಹಿಂದಿನ ಓಂ, ಕ್ರೀಂ, ಸಃ, ಎಂಬ ಮಂತ್ರವನ್ನು ಚ್ಚರಿಸುತ್ತಾ ಈಶಾನ್ಯ ದಿಕ್ಕಿಗೆ ಎಸೆಯಬೇಕು.

೮. ಕೆಂಪು ಹೂವನ್ನು ಹಿಡಿದುಕೊಂಡು ಕೈಯ್ಯಲ್ಲಿ ಕೂರ್ಮಮುದ್ರೆಯನ್ನು ಮಾಡಬೇಕು. ಆಮೇಲೆ ದಹನ, ಪ್ಲವನ, ಮೊದಲಾದವುಗಳನ್ನು ಮಾಡಬೇಕು.

ಇನ್ನು ೯ರಿಂದ೧೬ ಶ್ಲೋಕಗಳಲ್ಲಿ ಕೂರ್ಮಮುದ್ರೆಯ ವಿಧಾನವು ಹೇಳಲ್ಪಡುವುದು.

ವಾಮಹಸ್ತಸ್ಯ ತರ್ಜನ್ಯಾಂ ದಕ್ಷಿಣಸ್ಯ ಕನಿಷ್ಠಿಕಾಂ ।
ತಥಾ ದಕ್ಷಿಣತರ್ಜನ್ಯಾಂ ವಾಮಾಂಗುಷ್ಠಂ ನಿಯೋಜಯೇತ್ ॥ ೯ ॥

ಉನ್ನತಂ ದಕ್ಷಿಣಾಂಗುಷ್ಠಂ ವಾಮಸ್ಯ ಮಧ್ಯಮಾದಿಕಾಃ ।
ಅಂಗುಲೀಯೋರ್ನಯೇತ್ಪೃಷ್ಠೇ ದಕ್ಷಿಣಸ್ಯ ಕರಸ್ಯ ಚ ॥ ೧೦ ॥

ವಾಮಸ್ಯ ಪಿತೃತೀರ್ಥೇನ ಮಧ್ಯಮಾನಾಮಿಕೆ ತಥಾ ।
ಅಧೋಮುಖೇ ತು ತೇ ಕುರ್ಯಾದ್ದಕ್ಷಿಣಸ್ಯ ಕರಸ್ಯ ಚ ॥ ೧೧ ॥

ಕೂರ್ಮಪೃಷ್ಠಸಮಂ ಪೃಷ್ಠಂ ಕುರ್ಯಾದ್ದಕ್ಷಿಣಪಸ್ತತಃ ।
ಏವಂ ಬದ್ಧಃ ಸರ್ವಸಿದ್ಧಿಂ ದದಾತಿ ಪಾಣಿಕಚ್ಛಪಃ ॥ ೧೨ ॥

ಕುರ್ಯಾತ್ತದ್ಧೃದಯಾಸನ್ನಂ ನಿಮೀಲ್ಯ ನಯನದ್ವಯಂ ।
ಸಮಂ ಕಾಯಶಿರೋಗ್ರೀವಂ ಕೃತ್ವಾ ಸ್ಥಿರಮನಾ ಬುಧಃ ॥ ೧೩ ॥

೯-೧೨. ಎಡಗೈಯ ತರ್ಜನಿ (ಎರಡನೆಯ ಬೆರಳು) ಯಲ್ಲಿ, ಬಲಗೈಯಿಯ ಕನಿಷ್ಠಿಕೆ (ಕಿರುಬೆರಳು) ಯನ್ನು ಸೇರಿಸಬೇಕು. ಹಾಗೆಯೇ ಬಲಗೈಯಿಯ ತರ್ಜನಿಯಲ್ಲಿ ಎಡಗೈಯಿಯ ಹೆಬ್ಬೆರಳನ್ನು ಸೇರಿಸಬೇಕು. ಬಲಗೈ ಹೆಬ್ಬೆರಳನ್ನು ಎತ್ತರಿಸಿ ಎಡಗೈಯಿಯ ಮಧ್ಯಮವೇ ಮೊದಲಾದ ಮೂರು ಬೆರಳುಗಳೊಡನೆಯೂ, ಬಲಗೈಯ ಪೃಷ್ಠಭಾಗದೊಡನೆಯೂ ಸೇರಿಸಬೇಕು. ಎಡಗೈಯಿಯ ತರ್ಜನಿಯೊಡನೆ ಮಧ್ಯಮ (ಮೂರನೇ ಬೆರಳು) ಅನಾಮಿಕೆ (ನಾಲ್ಕನೆಯ ಬೆರಳು) ಗಳನ್ನು ಸೇರಿಸಬೇಕು. ಮತ್ತು ಆಗ ಆ ದಕ್ಷಿಣಾನಾಮಿಕೆಗಳನ್ನು ಬಲಗೈಯಿಂದ ಕೆಳಮುಖವಾಗಿ ಮಾಡಬೇಕು. ಬಲಗೈಯಿಯ ಮೇಲ್ಭಾಗವನ್ನು ಕೂರ್ಮ (ಆಮೆ) ದ ಮೇಲ್ಭಾಗ (ಬೆನ್ನು) ದಂತೆ ಮಾಡಬೇಕು. ಹೀಗೆ ಮಾಡಿದರೆ ಕೂರ್ಮಮುದ್ರೆಯಾಗುವುದು. ಈ ಮುದ್ರೆಯು ಸಕಲ ಸಿದ್ಧಿಯನ್ನೂ ಕೊಡುವುದು.

೧೩. ಈ ಕೂರ್ಮಮುದ್ರೆಯನ್ನು ಹೃದಯದ ಸಮೀಪದಲ್ಲಿ ಮಾಡಬೇಕು. ಆಮೇಲೆ, ಶರೀರ, ತಲೆ, ಕತ್ತು ಇವುಗಳನ್ನು ಸಮವಾಗಿರಿಸಿಕೊಂಡು, ಕಣ್ಣುಗಳನ್ನು ಮುಚ್ಚಿಕೊಂಡು ದಾಪ, ಪ್ಲವನ, ಪೂರ್ವಕವಾಗಿ ಸ್ಥಿರವಾದ ಮನಸ್ಸಿನಿಂದ ದೇವಿಯ ಧ್ಯಾನವನ್ನು ಪ್ರಾರಂಭಿಸಬೇಕು.

ಧ್ಯಾನಂ ಸಮಾರಭೇದ್ದೇವ್ಯಾ ದಾಹಪ್ಲವನಪೂರ್ವಕಂ ।
ಅಗ್ನಿಂ ವಾಯೌ ವಿನಿಕ್ಷಿಪ್ಯ ವಾಯುಂ ತೋಯೇ ಜಲಂ ಹೃದಿ ॥ ೧೪ ॥

ಹೃದಯಂ ನಿಶ್ಚಲೇ ದತ್ವಾ ಆಕಾಶೇ ನಿಕ್ಷಿಪೇತ್ಸ್ವನಂ
ಓಂ ಹುಂ ಫಡಿತಿ ಮಂತ್ರೇಣ ಭಿತ್ವಾ ರಂಧ್ರಂ ತು ಮಸ್ತಕೇ । ॥ ೧೫ ॥

ಶಬ್ದೇನ ಸಹಿತಂ ಜೀವಮಾಕಾಶೇ ಸ್ಥಾಪಯೇತ್ತತಃ ।
ವಾಯ್ವಗ್ನಿಯಮಶಕ್ರಾಣಾಂ ಬೀಜೇನ ವರುಣಸ್ಯ ಚ ॥ ೧೬ ॥

ಪರಾಸ್ಥಾನಪರಾಶ್ಚೈತೈಃ ಸಾರ್ಧಚಂದ್ರೈಃ ಸಬಿಂದುಕೈಃ ।
ಶೋಷಂ ದಾಹಂ ತಥೋತ್ಪಾದಂ ಪೀಯೂಷಾಸೇಚನಂ ಪರಂ ॥ ೧೭ ॥

ಯಥಾಕ್ರಮೇಣ ಕರ್ತವ್ಯಂ ಚಿಂತಾಮಾತ್ರಂ ವಿಶುದ್ಧಯೇ ।
ತತಸ್ತು ದೇವ್ಯಾ ಬೀಜಂ ತು ಶುದ್ಧಜಾಂಬೂನದಾಕೃತಿ ॥ ೧೮ ॥

---

೧೪. ಅಗ್ನಿಯನ್ನು ವಾಯುವಿನಲ್ಲಿ ಸೇರಿಸಬೇಕು. ಹಾಗೆಯೇ ವಾಯುವನ್ನು ಜಲದಲ್ಲಿಯೂ, ಜಲವನ್ನು ಹೃದಯದಲ್ಲಿಯೂ, ಹೃದಯವನ್ನು ನಿಶ್ಚಲತೆ (ಸ್ಥಿರತೆ) ಯಲ್ಲಿಯೂ, ಶಬ್ದವನ್ನು ಆಕಾಶದಲ್ಲಿಯೂ, ಸೇರಿಸಬೇಕು.

೧೫. ಆಮೇಲೆ "ಓಂ ಹುಂಫಟ್" ಎಂಬ ಮಂತ್ರದಿಂದ ಶಿರಸ್ಸಿನಲ್ಲಿರುವ ಬ್ರಹ್ಮರಂಧ್ರವನ್ನು ಭೇದಿಸಿ, ಶಬ್ದದೊಡನೆ, ಜೀವನನ್ನು ಆಕಾಶದಲ್ಲಿ ಸ್ಥಾಪಿಸಬೇಕು.

ಮುಂದಿನ ೨ ಶ್ಲೋಕಗಳಲ್ಲಿ ಭೂತಶುದ್ಧಿಯ ಕ್ರಮವು ಹೇಳಲ್ಪಟ್ಟಿರುವುದು.

೧೬-೧೭. ವಾಯು, ಅಗ್ನಿ, ಯಮ, ಇಂದ್ರ, ವರುಣ, ಈ ದೇವತೆಗಳ ಬೀಜಾಕ್ಷರಗಳಾದ ಯ, ರ, ವ, ಲ, ಇವುಗಳಿಗೆ ಅರ್ಧಚಂದ್ರದಿಂದ ಕೂಡಿದ ಬಿಂದುವನ್ನು ಸೇರಿಸಿ ಎಂದರೆ ಯಂ ರಂ ವಂ ಲಂ ಎಂದು ಉಚ್ಚರಿಸುತ್ತಾ ಕ್ರಮವಾಗಿ ಶೋಷಣ (ವಣಗುವಿಕೆ) ದಾಹ (ಸುಡುವಿಕೆ) ಉತ್ಪಾದ (ನಾಶ) ಅಮೃತವರ್ಷಣ ಇವುಗಳನ್ನು ಮಾಡಿದಂತೆ ಚಿಂತಿಸಬೇಕು. ಕೇವಲ ಮನಸ್ಸಿನಿಂದ ಕಲ್ಪಿಸಬೇಕು. ಹಾಗೆ ಮಾಡಿದರೆ ಶರೀರಶುದ್ಧಿಯಾಗುವುದು.

೧೮. ಆಮೇಲೆ ದೇವಿಯ ಬೀಜಾಕ್ಷರವನ್ನು ಶುದ್ಧವಾದ ಸುವರ್ಣಾಕಾರವಾದ ಅಂಡವನ್ನಾಗಿ ಭಾವಿಸಿ ಅದನ್ನು ಓಂ, ಹ್ರೀಂ, ಕ್ರೀಂ, ಶ್ರೀಂ ಎಂಬ ಮಂತ್ರಗಳಿಂದ ಎರಡು ಭಾಗವಾಗಿ ಮಾಡಬೇಕು.

ತತ್ರಾಸಾದ್ಯ ದ್ವಿಧಾ ಕುರ್ಯಾತ್ ಹ್ರೀಂ ಕ್ರೀಂ ಶ್ರೀಮಿತಿ ಮಂತ್ರಕೈಃ।
ತದೂರ್ಧ್ವಭಾಗೇ ವಿಧಿನಾ ಲೋಕಂ ಸ್ವರ್ಗಂ ಚ ಖಂ ತಥಾ ॥ ೧೯ ॥

ನಿಷ್ಪಾದ್ಯ ಶೇಷಭಾಗೇ ತು ಭುವಂ ಪಾತಾಳಧಾರಿಣೀಂ।
ಚಿಂತಯೇತ್ತತ್ರ ಸರ್ವಾಣಿ ಸಪ್ತದ್ವೀಪಾಂ ಚ ಮೇದಿನೀಂ ॥ ೨೦ ॥

ತತ್ರೇಕ್ಷುಸಾಗರಾಂತಸ್ಥಂ ಸ್ವರ್ಣದ್ವೀಪಂ ವಿಚಿಂತಯೇತ್।
ತನ್ಮಧ್ಯೇ ರತ್ನಪರ್ಯಂಕಂ ರತ್ನಮಂಡಲಸಂಸ್ಥಿತಂ ॥ ೨೧ ॥

ಆಕಾಶಗಂಗಾತೋಯೌಘೈಃ ಸದೈವಾಸೇವಿತಂ ಶುಭಂ।
ತತ್ಪರ್ಯಂಕೇ ರತ್ನಪದ್ಮಂ ಪ್ರಸನ್ನಂ ಸರ್ವದಾ ಶಿವಂ ॥ ೨೨ ॥

ಚಿಂತಯೇತ್ಸ್ವರ್ಣಮಾಲಾಂಕಂ ಸಪ್ತಪಾತಾಲನಾಲಕಂ।
ಆಬ್ರಹ್ಮಭುವನಸ್ಪರ್ಶಿ ಸ್ವರ್ಣವರ್ಣಕಕರ್ಣಿಕಂ ॥ ೨೩ ॥

---

೧೯. ಆ ಮಂತ್ರದ ಮೊದಲನೆಯ ಭಾಗದಲ್ಲಿ ವಿಧಿಪೂರ್ವಕವಾಗಿ ಭೂಲೋಕ, ಸ್ವರ್ಗ, ಆಕಾಶ, ಇವುಗಳನ್ನು ಭಾವಿಸಬೇಕು. ಎರಡನೆಯ ಭಾಗದಲ್ಲಿ ಪಾತಾಳಾದಿ ಅಧೋಲೋಕಗಳನ್ನು ಭಾವಿಸಬೇಕು.

೨೦. ಅಲ್ಲದೆ ಆ ಸುವರ್ಣಾಂಡದಲ್ಲಿ ಸಕಲ ಪ್ರಪಂಚವನ್ನೂ, ಸಪ್ತದ್ವೀಪಗಳನ್ನೂ, ಭೂಮಿಯನ್ನೂ ಭಾವಿಸಬೇಕು. ಮತ್ತು ಅಲ್ಲಿ ಇಕ್ಷುಸಮುದ್ರವನ್ನೂ ಅದರಲ್ಲಿ ಒಂದು ಸುವರ್ಣ ದ್ವೀಪವನ್ನೂ ಭಾವಿಸಬೇಕು.

೨೧. ಆ ದ್ವೀಪದ ಮಧ್ಯದಲ್ಲಿ ರತ್ನಮಯವಾದ ಮಂಡಲದಲ್ಲಿರುವ ರತ್ನಮಯ ಪೀಠವೊಂದನ್ನು ಆಕಾಶಗಂಗೆಯ ಜಲಗಳಿಂದ ಸದಾ ಕೂಡಿರುವಂತೆ ಚಿಂತಿಸಬೇಕು.

೨೨. ಆ ಪೀಠದಲ್ಲಿ ಸದಾ ಮಂಗಳಕರವೂ, ನಿರ್ಮಲವೂ, ಸುವರ್ಣಮಾಲೆಯಿಂದಲಂಕೃತವೂ, ಸಪ್ತಪಾತಾಳ ಲೋಕಗಳಲ್ಲಿ ವ್ಯಾಪಿಸಿದ ನಾಳವುಳ್ಳದೂ ಆದಂತಹ ರತ್ನಪದ್ಮವನ್ನು ಧ್ಯಾನಿಸಬೇಕು.

೨೩. ಆ ಪದ್ಮವು ಸುವರ್ಣಮಯವಾದ ದಳಗಳಿಂದ ಕೂಡಿ ಬ್ರಹ್ಮಲೋಕದವರಿಗೂ ವ್ಯಾಪಿಸಿರುವಂತೆ ಭಾವಿಸಬೇಕು. ಇಂತಹ ಆ ಪದ್ಮದಲ್ಲಿ ಇರುವಂತಹ ವಿಷ್ಣುಮಾಯೆಯನ್ನು ನಿಶ್ಚಲವಾದ ಮನಸ್ಸಿನಿಂದ ಧ್ಯಾನಿಸಬೇಕು.

ಮುಂದಿನ ಹನ್ನೊಂದು ಶ್ಲೋಕಗಳಲ್ಲಿ ದೇವಿಯ ಧ್ಯಾನಕ್ರಮವು ಹೇಳಲ್ಪಟ್ಟಿರುವುದು

ತತ್ರ ಸ್ಥಿತಾಂ ಮಹಾಮಾಯಾಂ ಧ್ಯಾಯೇದೇಕಾಗ್ರಮಾನಸಃ ।
ಶೋಣಪದ್ಮಪ್ರತೀಕಾಶಾಂ ಮುಕ್ತಮೂರ್ಧಜಲಂಬಿನೀಂ ॥ ೨೪ ॥

ಚಲತ್ಕಾಂಚನಸಂಬದ್ಧಕುಂಡಲೋಜ್ಜ್ವಲಶಾಲಿನೀಂ ।
ಸುವರ್ಣರತ್ನಸಂಬದ್ಧಕಿರೀಟತ್ರಯಧಾರಿಣೀಂ ॥ ೨೫ ॥

ಶುಕ್ಲಕೃಷ್ಣಾರುಣೈರ್ನೇತ್ರೈಸ್ತ್ರಿಭಿಶ್ಚಾರುವಿಭೂಷಿತಾಂ ।
ಸಂಧ್ಯಾಚಂದ್ರಸಮಪ್ರಖ್ಯಕಪೋಲಾಂ ಲೋಲಲೋಚನಾಂ ॥ ೨೬ ॥

ವಿಪಕ್ವದಾಡಿಮೀಬೀಜದಂತಾಂ ಸುಭ್ರೂಯುಗೋಜ್ಜ್ವಲಾಂ ।
ಬಂಧೂಕಕಾಂತನಸನಾಂ ಶಿರೀಷಪ್ರಭನಾಸಿಕಾಂ ॥ ೨೭ ॥

ಕಂಬುಗ್ರೀವಾಂ ವಿಶಾಲಾಕ್ಷೀಂ ಸೂರ್ಯಕೋಟಿಸಮಪ್ರಭಾಂ ।
ಚತುರ್ಭುಜಾಂ ವಿವಸನಾಂ ಪೀನೋನ್ನತಪಯೋಧರಾಂ ॥ ೨೮ ॥

೨೪-೩೪. ಆ ದೇವಿಯು ಕೆಂದಾವರೆಯಂತೆ ಸುಂದರವಾದ ಶರೀರಕಾಂತಿಯಿಂದ ಶೋಭಿಸುತ್ತಿರುವಳು. ನೀಳವೂ, ಕಪ್ಪುಬಣ್ಣವುಳ್ಳದೂ ಆದ ಅವಳ ಕೇಶಪಾಶವು ಬಿಚ್ಚಿಕೊಂಡು ಅಲುಗಾಡುತ್ತಾ ಹೊಳೆಯುತ್ತಿರುವುದು. ಕಿವಿಯಲ್ಲಿರುವ ಚಿನ್ನದ ಕುಂಡಲಗಳು ತೂಗಾಡುತ್ತಾ ಕಪೋಲಗಳಿಗೆ ಅಪೂರ್ವ ಕಾಂತಿಯನ್ನು ಉಂಟುಮಾಡುತ್ತಿರುವವು. ಆ ದೇವಿಯು.ತನ್ನ ಶಿರಸ್ಸಿನಲ್ಲಿ ರತ್ನಖಚಿತವಾದ ಚಿನ್ನದ ಮೂರು ಕಿರೀಟಗಳನ್ನು ಧರಿಸಿರುವಳು. ಬಿಳಿ, ಕಪ್ಪು, ಕೆಂಪು, ಈ ಬಣ್ಣಗಳಿಂದ ಕೂಡಿರುವ ಮೂರು ಕಣ್ಣುಗಳಿಂದ ಶೋಭಿಸುತ್ತಿರುವಳು. ಆಗತಾನೇ ಉದಯಿಸುತ್ತಿರುವ ಚಂದ್ರನಂತೆ ನಸುಗೆಂಪಿನಿಂದ ಕಂಗೊಳಿಸುವ ಕಪೋಲ, ದಾಡಿಮ ಬೀಜದಂತೆ ಶುಭ್ರವಾದ ದಂತಪಂಕ್ತಿ, ಮನೋಹರವಾದ ಹುಬ್ಬುಗಳು, ಮೊಗ್ಗಿನಂತಿರುವ ನಾಸಿಕೆಯು, ಶಂಖದಂತೆ ನುಣುಪಾದ ಕತ್ತು, ವಿಶಾಲವಾದ ನೇತ್ರಗಳು ಇವುಗಳಿಂದ ಆ ದೇವಿಯು ಪ್ರಕಾಶಿಸುತ್ತಿರುವಳು. ಕೆಂಪು ವಸ್ತ್ರವನ್ನುಟ್ಟು ಇಂತಹ ಸುಂದರಾಕೃತಿಯಿಂದ ಶೋಭಿಸುತ್ತಲಿರುವ ಆ ದೇವಿಯನ್ನು ಧ್ಯಾನಿಸಬೇಕು. ಮತ್ತು ಆ ದೇವಿಗೆ ನಾಲ್ಕು ಭುಜಗಳಿರುವುವು. ಎತ್ತರವಾಗಿ ಮುಂದಕ್ಕೆ ಚಾಚಿ ದುಂಡಾಗಿರುವ ಸ್ತನಗಳಿಂದ ಒಪ್ಪುತ್ತಿರುವಳು ಎಲಭಾಗದ ಮೇಲಿನ ಕೈಯಲ್ಲಿ ಖಡ್ಗವನ್ನೂ, ಕೆಳಕೈಯಲ್ಲಿ ಸಿದ್ಧಸೂತ್ರವನ್ನೂ, ಎಡ

ದಕ್ಷಿಣೋರ್ಧ್ವೇನ ನಿಸ್ತ್ರಿಂಸಂ ಪರೇಣ ಸಿಧ್ಧಸೂತ್ರಕೆಂ ।
ಬಿಭ್ರತೀಂ ವಾಮುಪಸ್ತಾಭ್ಯಾಮಭೀತಿವರದಾಯಿನೀಂ ॥ ೨೯ ॥

ನಿಮ್ನನಾಭಿಂ ಕ್ರಮಾಯಾತಕ್ಷೀಣಮಧ್ಯಾಂ ಮನೋಹರಾಂ ।
ಆನಮ್ರನಾಗನಾಸೋರುಂ ಗುಪ್ತಗುಲ್ಫಾಂ ಸುಪಾರ್ಷ್ಣಿಕಾಂ ॥ ೩೦ ॥

ಬದ್ಧಪರ್ಯಂಕಸಂಕಲ್ಪನಿಬಿಡಾಸನರಾಜಿತಾಂ ।
ಗಾತ್ರೇಣ ರತ್ನಸ್ತಂಬಂ ಚ ಸಮ್ಯಗಾಲಂಭ್ಯ ಸಂಸ್ಥಿತಾಂ ॥ ೩೧ ॥

ಕಿಮಿಚ್ಛಸೀತಿ ವಚನಂ ನ್ಯಾಹರಂತೀಂ ಮುಹುರ್ಮುಹುಃ ।
ಪಂಚಾನನಂ ಪುರಸ್ಸಂಸ್ಥಂ ನಿರೀಕ್ಷಂತೀಂ ಸ್ವವಾಹನಂ ॥ ೩೨ ॥

ಮುಕ್ತಾವಳೀಸ್ವರ್ಣರತ್ನಕೇಯೂರಕಂಕಣಾದಿಭಿಃ ।
ಸರ್ವೈರಲಂಕಾರಗಣೈರುಜ್ಜ್ವಲಾಂ ಸಸ್ಮಿತಾನನಾಂ ॥ ೩೩ ॥

ಸೂರ್ಯಕೋಟಿಪ್ರತೀಕಾಶಾಂ ಸರ್ವಲಕ್ಷಣಸಂಯುತಾಂ ।
ನವಯೌವನಸಂಪನ್ನಾಂ ತಥಾ ಸರ್ವಾಂಗಸುಂದರೀಂ ॥ ೩೪ ॥

ಭಾಗದ ಕೈಗಳಲ್ಲಿ ಅಭಯ ಮತ್ತು ವರದಮುದ್ರೆಗಳನ್ನೂ ಧರಿಸಿರುವಳು. ಅವಳ ನಾಭಿ ಪ್ರದೇಶವು ಗಂಭೀರವಾಗಿರುವುದು. ಅವಳ ನಡುವು ಕ್ರಮಕ್ರಮವಾಗಿ ಕೆರಿವಾಗುತ್ತಾ ಬಂದು ಮಧ್ಯಭಾಗದಲ್ಲಿ ಅತಿ ಸಣ್ಣನಾಗಿರುವುದು. ಅವಳ ನಾಸಿಕೆಯೂ, ತೊಡೆಗಳೂ ಸ್ವಲ್ಪ ಬಗ್ಗಿದ ಹಾವಿನಂತೆ ಮನೋಹರವಾಗಿ ಕಾಣುತ್ತಿರುವವು. ಮೃದುವಾದ ಹಿಮ್ಮಡಿ ಮೊಳಕಾಲು ಇವುಗಳಿಂದ ಕತ್ತರಿಯಾಕಾರವಾಗಿ ಕಾಲುಗಳನ್ನು ಒಂದರಮೇಲೊಂದನ್ನು ಸೇರಿಸಿ ಪದ್ಮಾಸನಾಸೀನೆಯಾಗಿ ರತ್ನಸ್ತಂಭವನ್ನು ಒರಗಿಕೊಂಡು ಕುಳಿತಿರುವಳು. ಮುತ್ತಿನಹಾರ, ರತ್ನಮಯವಾದ ಭುಜಕೀರ್ತಿ, ಬಳೆಗಳು ಮೊದಲಾದ ದಿವ್ಯಾಭರಣಗಳನ್ನು ಧರಿಸಿ ಮುಖದಲ್ಲಿ ಮಂದಹಾಸವನ್ನು ಸೂಸುತ್ತಾ ಸಮಸ್ತ ಲಕ್ಷಣಗಳಿಂದ ಕೂಡಿ ನವಯೌವನದಿಂದ ಸರ್ವಾಂಗಸುಂದರಿಯಾಗಿಯೂ ಕೋಟಿಸೂರ್ಯಪ್ರಕಾಶಮಾನಳಾಗಿಯೂ ಇರುವಳು. ಮತ್ತು ಆ ದೇವಿಯು ತನ್ನ ವಾಹನವಾದ ಎದುರಿಗಿರುವ ಸಿಂಹವನ್ನು ನೋಡಿ ನಿನಗೇನುಬೇಕೆಂದು ಅದನ್ನು ಪುನಃಪುನ ಕೇಳುತ್ತಿರುವಳು. ಇಂತಹ ದೇವಿಯನ್ನು ಏಕಾಗ್ರಮನಸ್ಸಿನಿಂದ ಧ್ಯಾನಿಸಬೇಕು.

ಈದೃಶೀಮಂಬಿಕಾಂ ಧ್ಯಾತ್ವೋಂನಮಃ ಫಡಿತಿ ಮಸ್ತಕೇ ।
ಸ್ವಕೀಯೇ ಸುಮನೋ ದದ್ಯಾತ್ತ್ವಾಪನಮೇವಂ ವಿಚಿಂತಯೇತ್ ॥ ೩೫ ॥

ಅಂಗನ್ಯಾಸಕರನ್ಯಾಸೌ ತತಃ ಕುರ್ಯಾತ್ಕ್ರಮೇಣ ತು ।
ವಿಭಿರ್ಮಂತ್ರೈಃ ಸ್ವರೈಃ ಸಂಘೈರಾಶೀಭೂತೈಃ ಕ್ರಮೋನ್ವಿತೈಃ ॥ ೩೬ ॥

ಓಮಿತ್ಯೇವಂ ಸಪ್ರಣವಾಂ ರಕ್ತವರ್ಣಾಂ ಮನೋಹರಾಂ ।
ಅಂಗುಷ್ಠಾದಿಕನಿಷ್ಠಾಂತಂ ಮಂತ್ರಸಂವೇಷ್ಟನಂ ಚ ಫಟ್ ॥ ೩೭ ॥

ಪ್ರಾಂತೇನ ಕುರ್ಯಾದ್ವಿನ್ಯಾಸಂ ಪೂರ್ವಂ ಕರತಲದ್ವಯೋಃ ।
ಹೃಚ್ಛಿರಃಶಿಖಾಕವಚನೇತ್ರೇಷು ತತ್ಕ್ರಮಾನ್ನ್ಯಸೇತ್ ॥ ೩೮ ॥

ತತಸ್ತು ಮೂಲಮಂತ್ರಸ್ಯ ವಕ್ತ್ರೇ ಪೃಷ್ಠೇ ತಥೋದರೇ ॥ ೩೯ ॥
ಬಾಹ್ವೋರ್ಗುಹ್ಯೇ ಪಾದಯೋಶ್ಚ ಜಂಘಯೋರ್ಜಘನೇ ಕ್ರಮಾತ್ ।

---

೩೫. ಈರೀತಿಯಾಗಿರುವ ದೇವಿಯನ್ನು ಧ್ಯಾನಿಸಿ "ಓಂನಮಃ ಫಟ್" ಎಂದು ಹೇಳಿ ಆ ದೇವಿಯೇ ತಾನೆಂದು ಭಾವಿಸಿಕೊಂಡು ಕೈಯಲ್ಲಿರುವ ಪೂವನ್ನು ಶಿರಸ್ಸಿನಲ್ಲಿಟ್ಟುಕೊಳ್ಳಬೇಕು.

೩೬. ಹಿಂದೆ ಹೇಳಿದ ಎಂಟು ಅಕ್ಷರಗಳುಳ್ಳ ಮಂತ್ರಗಳನ್ನು ಒಟ್ಟು ಉಚ್ಚರಿಸಿ ಕ್ರಮವಾಗಿ ಸುಸ್ವರದಿಂದ ಅಂಗನ್ಯಾಸ ಮತ್ತು ಕರನ್ಯಾಸಗಳನ್ನು ಮಾಡಬೇಕು.

೩೭-೩೮. ರಕ್ತವರ್ಣವಾಗಿ ಮನೋಹರವಾಗಿರುವ ಆ ಮಂತ್ರವನ್ನು ಓಂಕಾರ ಪೂರ್ವಕವಾಗಿ ಉಚ್ಚರಿಸಬೇಕು. ಅಂಗುಷ್ಠ ಮೊದಲುಗೊಂಡು ಕನಿಷ್ಠಿಕೆಯವರಿವಿಗೆ ಕರನ್ಯಾಸವನ್ನು ಮಾಡಬೇಕು. ಅಂಗನ್ಯಾಸದ ಕೊನೆಯಲ್ಲಿ "ಫಟ್" ಎಂದು ಉಚ್ಚರಿಸಿ ನ್ಯಾಸಮಾಡಬೇಕು. ಆಮೇಲೆ ಹೃದಯ, ಶಿರಸ್ಸು, ಶಿಖೆ, ಕವಚ, ನೇತ್ರ ಇವುಗಳಲ್ಲಿ ಅಂಗನ್ಯಾಸವನ್ನು ಮಾಡಬೇಕು.

೩೯-೪೦. ಆಮೇಲೆ ಮೂಲಮಂತ್ರದ ಎಂಟು ಅಕ್ಷರಗಳನ್ನೂ, ಓಂಕಾರವನ್ನೂ ಸ್ಮರಿಸುತ್ತಾ, ಮುಖ, ಬೆನ್ನು, ಹೊಟ್ಟೆ, ಬಾಹು, ಗುಹ್ಯಸ್ಥಾನ, ಕಾಲುಗಳು,

ವಿನ್ಯಸೇದಕ್ಷರಾಣ್ಯಷ್ಟೌ ಓಂಕಾರಂ ಚ ತಥಾ ಸ್ಮರೇತ್ ॥ ೪೦ ॥

ಏಭಿಃ ಪ್ರಕಾರೈರಭಿಶುದ್ಧದೇಹಃ
ಪೂಜಾಂ ಸದೈವಾರ್ಹತಿ ನಾನ್ಯಥಾ ಹಿ ।
ಶರೀರಶುದ್ಧಿಂ ಮನಸೋ ನಿವೇಶಂ
ಭೂತಪ್ರಸಾದಂ ಕುರುತೇ ನೃಣಾಂ ತತ್ ॥ ೪೧ ॥

ಇತಿ ಶ್ರೀ ಕಾಲಿಕಾಪುರಾಣೇ ಪಂಚಪಂಚಾಶತ್ತಮೋಧ್ಯಾಯಃ

ತೊಡೆಗಳು, ಜಘನಪ್ರದೇಶ ಇವುಗಳ ಸ್ಥಾನಗಳಲ್ಲಿ ಕ್ರಮವಾಗಿ, ನ್ಯಾಸವನ್ನು ಮಾಡಬೇಕು.

೪೧. ಈರೀತಿಯಾಗಿ ಅನುಷ್ಠಾನದಿಂದ ಶುದ್ಧವಾದ ಶರೀರವುಳ್ಳವನೇ ದೇವೀ ಪೂಜೆಯನ್ನು ಮಾಡಲು ಯೋಗ್ಯನು. ಇಲ್ಲದಿದ್ದರೆ ಇಲ್ಲವು. ಈ ನ್ಯಾಸ ಮುಂತಾದವುಗಳಿಂದ, ಶರೀರ ಶುದ್ಧಿ, ಮನಶ್ಶುದ್ಧಿ, ಚಿತ್ತೈಕಾಗ್ರತೇ, ಪಂಚಭೂತಪ್ರಸನ್ನತೆ, ಇವೆಲ್ಲವೂ ಆಗುವುವು.

ಇಲ್ಲಿಗೆ ಐವತ್ತೈದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ
ಶ್ರೀ ಕಾಲಿಕಾಪುರಾಣೇ ಷಟ್‌ಪಂಚಾಶತ್ತಮೋಽಧ್ಯಾಯಃ

॥ ಶ್ರೀ ಭಗವಾನುವಾಚ ॥

ತತೋಽರ್ಘ್ಯಪಾತ್ರೇ ತನ್ಮಂತ್ರಮಷ್ಟಧಾವೃತ್ಯ ಸಂಜಪೇತ್ ।
ತೇನ ತೋಯೇನ ಪುಷ್ಪಾಣಿ ಸ್ವಮಂಡಲಮಥಾಸನಂ ॥ ೧ ॥

ಆಸೇಚಯೇತ್ತತಃ ಪಶ್ಚಾತ್ತ್ವಪಜೋಪಕರಣಂ ಸಮಂ ।
ಓಂ ಐಂ ಕ್ರೀಂ ಶ್ರೀಮಿತಿ ಮಂತ್ರೇಣ ಶಬ್ದಸ್ಯಾಂಶುವಿವರ್ಜಿತಂ ॥ ೨ ॥

ದ್ವಾರಪಾಲಾ೯ ತತೋ ದೇವ್ಯಾ ಆಸನಾನಿ ಚ ಪೂಜಯೇತ್ ।
ನಂದಿಭೃಂಗಿಮಹಾಕಾಲಗಣೇಶಾ ದ್ವಾರಪಾಲಕಾಃ ॥ ೩॥

ಐವತ್ತಾರನೆಯ ಅಧ್ಯಾಯವು.

೧. ಆಮೇಲೆ ಪೂಜಾಪಾತ್ರೆಯನ್ನು ಸ್ಪರ್ಶಿಸುತ್ತಾ ಆ ಮೂಲಮಂತ್ರವನ್ನು ಎಂಟುಸಾರಿ ಜಪಿಸಬೇಕು. ಅನಂತರ ಆ ಪಾತ್ರೆಯಲ್ಲಿರುವ ಜಲದಿಂದ ಮಂಡಲವನ್ನೂ ತನ್ನ ಆಸನವನ್ನೂ, ಪೂಜಾಸಾಮಗ್ರಿಗಳನ್ನೂ ಪ್ರೋಕ್ಷಿಸಬೇಕು.

೨. ಅನಂತರ " ಓಂ, ಐಂ, ಕ್ರೀಂ, ಶ್ರೀಂ " ಎಂಬ ಮಂತ್ರವನ್ನು ಫಟ್ಟಿಯಾಗಿ ಉಚ್ಚರಿಸುತ್ತಾ ದೇವಿಯ ದ್ವಾರಪಾಲಪೂಜೆ, ಮತ್ತು ಪೀಠಪೂಜೆಗಳನ್ನು ಮಾಡಬೇಕು.

೩-೪. ನಂದಿ, ಭೃಂಗಿ, ಮಹಾಕಾಲ, ಗಣೇಶ, ಇವರು ದೇವಿಯ ದ್ವಾರಪಾಲಕರು. ಇವರನ್ನು ಉತ್ತರದಿಕ್ಕು ಮೊದಲುಗೊಂಡು ಕ್ರಮವಾಗಿ ಪೂಜಿಸಬೇಕು.

ಉತ್ತರಾದಿಕ್ರಮಾತ್ಪೂರ್ವ್ಯಾ ಆಸನಾನಿ ಚ ಮಧ್ಯತಃ ।
ಆಧಾರಶಕ್ತಿಪ್ರಭೃತಿ ಹೇಮಾಪ್ರ್ಯಂತಂ ಪ್ರಪೂಜಯೇತ್ ॥ ೪ ॥

ಪ್ರಸಿದ್ಧಾ ಸರ್ವತಂತ್ರೇಷು ಪೂಜಾಕಲ್ಪೇಷು ಭೈರವ ।
ದಶದಿಕ್ಪಾಲಸಹಿತಾ ಧರ್ಮಾಧರ್ಮಾದಿಕಾಂಸ್ತಥಾ ॥ ೫ ॥

ಮಂಡಲಾಗ್ನ್ಯಾದಿಕೋಣೇಷು ಪೂಜಯೇತ್ಪೂರ್ವದೇಶತಃ ।
ಸೂರ್ಯಾಗ್ನಿಸೋಮಮರುತಾಂ ಮಂಡಲಾನಿ ಚ ಪದ್ಮಕಂ ॥ ೬ ॥

ರಜಸ್ತಥಾತಮಸ್ಸತ್ತ್ವಂ ಯೋಗಪೀಠಂ ಗುರೋಃ ಪದಂ ।
ಸಾರಾದೀ ಭದ್ರಪೀಠಾಂತಾ ಸಾಂಗೋಪಾಂಗಾ ಪ್ರಪೂಜಯೇತ್ ॥ ೭ ॥

ಬ್ರಹ್ಮಾಂಡಂ ಸ್ವರ್ಣಡಿಂಬಂ ಚ ಬ್ರಹ್ಮವಿಷ್ಣುಮಹೇಶ್ವರಾ ।
ಸ ಸಾಗರಾ ಸಪ್ತದ್ವೀಪಾ ಸ್ವರ್ಣದೀಪಂ ಸಮಂಟಪಂ ॥ ೮ ॥

ಆಸನ (ಪೀಠ) ಗಳನ್ನು ಮಧ್ಯದಲ್ಲಿ ಪೂಜಿಸಬೇಕು. ಆಧಾರಶಕ್ತಿ ಮೊದಲಾಗಿ, ಹೇಮಾಪ್ರ್ಯಂತವಾಗಿಯೂ ಆಸನಗಳನ್ನು ಪೂಜಿಸಬೇಕು.

೫. ಎಲೈ ಭೈರವನೇ. ಎಲ್ಲ ತಂತ್ರಗಳಲ್ಲಿಯೂ ಪೂಜಾಕಲ್ಪಗಳಲ್ಲಿಯೂ ಪ್ರಸಿದ್ಧವಾಗಿರುವಂತಹ, ಹತ್ತು ಜನ ದಿಕ್ಪಾಲಕರು, ಧರ್ಮ ಮತ್ತು ಅಧರ್ಮ ಮುಂತಾದವರನ್ನೂ ಸಹ ಮಂಡಲದ ಆಗ್ನೇಯಾದಿ ಮೂಲೆಯಲ್ಲಿ ಪೂಜಿಸಬೇಕು.

೬-೭. ಸೂರ್ಯ, ಅಗ್ನಿ, ಚಂದ್ರ, ವಾಯು, ಇವರ ಮಂಡಲಗಳನ್ನೂ, ಪದ್ಮವನ್ನೂ ರಜೋಗುಣ, ತಮೋಗುಣ, ಸತ್ತ್ವಗುಣ, ಯೋಗಪೀಠ, ಗುರುಪದ ಇವುಗಳನ್ನೂ, ಸಾರವೇ ಮೊದಲಾಗಿ ಭದ್ರಪೀಠದವರೆವಿಗೆ ಇರುವುವುಗಳನ್ನೂ ಸಾಂಗವಾಗಿ ಪೂಜಿಸಬೇಕು.

೮. ಬ್ರಹ್ಮಾಂಡ, ಸ್ವರ್ಣಡಿಂಬ, ಬ್ರಹ್ಮ, ವಿಷ್ಣು, ಮತ್ತು ಮಹೇಶ್ವರರು, ಸಮುದ್ರಗಳು, ಏಳು ದ್ವೀಪಗಳು, ಸುವರ್ಣದ್ವೀಪ, ರತ್ನಮಂಟಪ ಇವುಗಳನ್ನೂ ಪೂಜಿಸಬೇಕು.

ರತ್ನಪದ್ಮಂ ಸಪರ್ಯಂಕಂ ರತ್ನಸ್ತಂಭಂ ತಥೈವ ಚ ।
ಪಂಚಾನನಂ ಮಂಡಲಸ್ಯ ಮಧ್ಯೇಽವಶ್ಯಂ ಪ್ರಪೂಜಯೇತ್ ॥ ೯ ॥

ಕ್ರೀಂ ಮಂತ್ರೇಣ ತತಃ ಕೂರ್ಮಪೃಷ್ಠಂ ಪಾಣ್ಯೋರ್ನಿಬದ್ಧ್ಯ ಚ ।
ಧ್ಯಾಯೇಚ್ಚ ಪೂರ್ವವದ್ದೇವೀಮಾಸಾದ್ಯಾಸನಮುತ್ತಮಂ ॥ ೧೦ ॥

ಹೃನ್ಮಧ್ಯೇ ಚಿಂತಯೇತ್ಸ್ವರ್ಣದ್ವೀಪಂ ಪದ್ಮಂಕಸಂಭೃತಂ ।
ಪಶ್ಯನ್ನಿವ ತತೋ ದೇವೀಮೇಕಾಗ್ರಮನಸಾ ಸ್ಮರೇತ್ ॥ ೧೧ ॥

ಪ್ರತ್ಯಕ್ಷೀಕೃತ್ಯ ಹೃದಯೇ ಮಾನಸೈರುಪಚಾರಕೈಃ ।
ಷೋಡಶಾನಾಂ ಪ್ರಕಾರೈಸ್ತು ಹೃದಿಸ್ಥಾಂ ಪೂಜಯೇಚ್ಛಿವಾಂ ॥ ೧೨ ॥

ತತಸ್ತು ವಾಯುಬೀಜೇನ ದಕ್ಷಿಣೇನ ಪುಟೇನ ಚ ।
ನಾಸಿಕಾಯಾ ವಿನಿಸ್ಸಾರ್ಯ ಕ್ರೀಂ ಮಂತ್ರೇಣ ಚ ಭೈರವ ॥ ೧೩ ॥

---

೯. ರತ್ನಪದ್ಮವನ್ನೂ, ರತ್ನಮಂಚವನ್ನೂ, ರತ್ನಕಂಭವನ್ನೂ, ಪಾಪರಹಿತವಾದ ಪಂಚವನ್ನೂ ಸಹ ಮಂಡಲದ ಮಧ್ಯದಲ್ಲಿ ಅವಶ್ಯವಾಗಿ ಪೂಜಿಸಬೇಕು.

೧೦. ಕ್ರೀಂ ಎಂಬ ಮಂತ್ರದಿಂದ ಹಿಂದೆ ಹೇಳಿದಂತೆ ಕೂರ್ಮಮುದ್ರೆಯನ್ನು ಎರಡು ಕೈಗಳಿಂದಮಾಡಿ ಧೃಡವಾದ ಆಸನದಲ್ಲಿ ಕುಳಿತು ಹಿಂದಿನಂತೆ ದೇವಿಯನ್ನು ಧ್ಯಾನಿಸಬೇಕು.

೧೧. ಹೃದಯದ ಮಧ್ಯದಲ್ಲಿ, ರತ್ನಪೀಠದೊಡನಿರುವ ಸ್ವರ್ಣದ್ವೀಪವನ್ನು ನೋಡುತ್ತಿರುವನಂತೆ ಧ್ಯಾನಿಸಬೇಕು. ಆಮೇಲೆ ನಿಶ್ಚಲವಾದ ಮನಸ್ಸಿನಿಂದ ದೇವಿಯನ್ನು ಸ್ಮರಿಸಬೇಕು.

೧೨. ಹಾಗೆ ಪ್ರತ್ಯಕ್ಷವಾಗಿ, ಹೃದಯದಲ್ಲಿ ಪಾರ್ವತಿಯನ್ನು ನೋಡಿ ಧ್ಯಾನಿಸಿ, ಮೊದಲಾದ ಹದಿನಾರು ಮಾನಸೋಪಚಾರಗಳಿಂದ ದೇವಿಯನ್ನು ಮನಸ್ಸಿನಲ್ಲಿಯೇ ಪೂಜಿಸಬೇಕು.

೧೩-೧೪. ಅನಂತರ ನಾಸಿಕೆಯನ್ನು ಕೈಯಿಂದ ಒಡಿದುಕೊಂಡು, ವಾಯು ದೇವತೆಯ ಬೀಜಮಂತ್ರವನ್ನೂ "ಓಂಕ್ರೀಂ" ಎಂಬ ಮಂತ್ರವನ್ನೂ ಉಚ್ಚರಿಸುತ್ತಾ

ಸ್ಥಾಪಯೇತ್ಪದ್ಮಮಧ್ಯೇ ತು ತದ್ಧಸ್ತಂ ನ ವಿಯೋಜಯೇತ್ ।
ಕೈತೇ ವಿಯೋಗೇ ಹಸ್ತಸ್ಯ ಪುಷ್ಪಾತ್ತಸ್ಮಾಚ್ಚ ಭೈರವ ॥ ೧೪ ॥

ಗಂಧರ್ವೈಃ ಪೂಜ್ಯತೇ ದೇವೀ ಪೂಜಕೈರ್ನಾಪ್ಯತೇ ಫಲಂ ।
ಆವಾಹನಂ ತತಃ ಕುರ್ಯಾದ್ಗಾಯತ್ರ್ಯಾ ಶಿರಸಾ ಸಹ ॥ ೧೫ ॥

ಮಹಾಮಾಯಾಯೈ ವಿದ್ಮಹೇ ತ್ವಾಂ ಚಂಡಿಕಾಖ್ಯಾಂ ಧೀಮಹಿ ।
ಏತದುಕ್ತ್ವಾ ತತಃ ಪಶ್ಚಾದ್ಧಿಯೋ ಯೋ ನಃ ಪ್ರಚೋದಯಾತ್ ॥ ೧೬ ॥

ಸ್ನಾನೀಯಂ ದೇವಿ ತೇ ತುಭ್ಯಂ ಓಂ ಕ್ರೀಂ ಶ್ರೀಂ ನಮ ಇತ್ಯತಃ ।
ಸ್ನಾನೀಯಂ ಚ ತತೋ ದೇವ್ಯೈ ದದ್ಯಾಲ್ಲಕ್ಷಣಲಕ್ಷಿತಂ ॥ ೧೭ ॥

ವಾಯುವನ್ನು ಮೇಲಕ್ಕೆ ಎಳೆದುಕೊಂಡು, ದಕ್ಷಿಣನಾಸಾಪುಟದಿಂದ ಬಿಡಬೇಕು. ಆಮೇಲೆ ಆ ಹಸ್ತವನ್ನು ಪದ್ಮ (ದೇವಿಯ ಆಸನ ಅಥವಾ ಹೃದಯಕಮಲ)ದ ಮಧ್ಯದಲ್ಲಿ ಇರಿಸಬೇಕು. ಅದರಿಂದ ಬೇರ್ಪಡಿಸಬಾರದು.

೧೫. ಅವಲ್ಲದೆ ಆ ಪದ್ಮದಿಂದ ಹಸ್ತವನ್ನು ಬೇರ್ಪಡಿಸಿದರೆ, ಗಂಧರ್ವರು ದೇವಿಯನ್ನು ಪೂಜಿಸುವರು. ಆದರಿಂದ ಪೂಜಾಫಲವು ಲಭಿಸುವುದಿಲ್ಲವು. ಓಂಕಾರ ಮೊಡನೆ ಗಾಯತ್ರೀಮಂತ್ರವನ್ನು ಜಪಿಸಿ ದೇವಿಯನ್ನು ಆವಾಹಿಸಬೇಕು.

೧೬. " ಮಹಾಮಾಯಾಯೈ ವಿದ್ಮಹೇತ್ವಾಂ ಚಂಡಿಕಾಖ್ಯಾಂಚ ಧೀಮಹಿ ಧೀಯೋ ಯೋ ನಃ ಪ್ರಚೋದಯಾತ್ " ವಿಷ್ಣುಮಾಯೆಯಾದ ನಿನ್ನನ್ನು ಉಪಾಸಿಸಿ ಪ್ರೀತಿಗೊಳಿಸುವೆನು. ಓ ದೇವಿಯೇ, ನೀನು ನಮ್ಮ ಬುದ್ಧಿಯನ್ನು ಪ್ರೇರಿಸುವವಳಾಗು ಎಂದು ಹೇಳಿ ಅರ್ಘ್ಯವನ್ನು ದೇವಿಗೆ ಕೊಡಬೇಕು.

೧೭. ಓ ದೇವಿಯೇ, ನಿನಗೆ ಸ್ನಾನವನ್ನು ಮಾಡಿಸುವೆನು ಎಂದು ಹೇಳಿ " ಓಂ, ಕ್ರೀಂ, ಶ್ರೀಂ, " ಎಂಬ ಮಂತ್ರದಿಂದ ವಿಧ್ಯುಕ್ತವಾಗಿ ದೇವಿಗೆ ಸ್ನಾನವನ್ನು ಮಾಡಿಸಬೇಕು.

ತತಸ್ತು ಮೂಲಮಂತ್ರೇಣ ಗಂಧಪುಷ್ಪಂ ಸದೀಪಕಂ ।
ಧೂಪಾದಿಕಂ ಪ್ರದದ್ಯಾತ್ತು ಮೋದಕಂ ಪಾಯಸಂ ತಥಾ ॥ ೧೮ ॥

ಸಿತಾಂ ಗುಡಂ ದಧಿ ಕ್ಷೀರಂ ಸರ್ಪಿರ್ನಾನಾವಿಧೈಃ ಫಲೈಃ ।
ರಕ್ತೈಃಪುಷ್ಪಂ ಪುಷ್ಪಮಾಲಾಂ ಸುವರ್ಣರಜತಾದಿಕಂ ॥ ೧೯ ॥

ನೈವೇದ್ಯಮುತ್ತಮಂ ದೇವ್ಯಾ ಲಾಂಗಲಂ ಮೋದಕಂ ಸಿತಾಂ ।
ಶಾಂಡಿಲ್ಯಕರತಾಮ್ರಾಖ್ಯಕೂಷ್ಮಾಂಡಾನಾಂ ಫಲಾನಿ ಚ ॥ ೨೦ ॥

ಪರೀತಕೀಫಲಂ ಚಾಪಿ ನಾಗರಂಗಕಮೇಲಕಾಂ ।
ಬಾಲಪ್ರಿಯಂ ಚ ಯದ್ದ್ರವ್ಯಂ ಕಸೇರುಕ ಬಿಸಾದಿಕಂ ॥ ೨೧ ॥

ತೋಯಂ ಚ ನಾರಿಕೇಳಸ್ಯ ದೈವ್ಯೈ ದೇಯಂ ಪ್ರಯತ್ನತಃ ।
ರಕ್ತಕೌಶೇಯವಸ್ತ್ರಂಚ ದೇಯಂ ನೀಲಂ ಕದಾಪಿ ನ ॥ ೨೨ ॥

ದೇವ್ಯಾಃ ಪ್ರಿಯಾಣಿ ಪುಷ್ಪಾಣಿ ವಕುಲಂ ಕೇಶರಂ ತಥಾ ।
ಮಾಷ್ಯಂ ಕಲ್ಹಾರವಜ್ರಾಣಿ ಕರವೀರಕುರಂಟಕಾ ॥ ೨೩ ॥

---

೧೮. ಆಮೇಲೆ ಮೂಲಮಂತ್ರದಿಂದ, ಪುಷ್ಪ, ಗಂಧ, ಧೂಪ, ಮತ್ತು ದೀಪ, ಮೋದಕ, ಪಾಯಸ ಮೊದಲಾದ ನೈವೇದ್ಯ, ಇವುಗಳನ್ನೂ ದೇವಿಗೆ ಅರ್ಪಿಸಬೇಕು.

೧೯. ಅಲ್ಲದೆ, ಸಕ್ಕರೆ, ಬೆಲ್ಲ, ಹಾಲು ಮೊಸರು, ತುಪ್ಪ, ಅನೇಕಬಗೆಯ ಹಣ್ಣುಗಳು ಮುಂತಾದ ನೈವೇದ್ಯಗಳನ್ನೂ, ಕೆಂಪುಹೂವು, ಪುಷ್ಪಮಾಲೆ, ಚಿನ್ನ. ಬೆಳ್ಳಿ, ಮುಂತಾದ ಅಲಂಕಾರಗಳನ್ನೂ ದೇವಿಗೆ ಅರ್ಪಿಸಬೇಕು.

೨೦.-೨೨. ಅನ್ನದ ಮಹಾನೈವೇದ್ಯವನ್ನೂ, ಮೋದಕ, ಸಕ್ಕರೆ, ಪಾಕಂಬು, ಬಿಲ್ವಫಲ, ಮಾವಿನಹಣ್ಣು, ಕುಂಬಳಕಾಯಿ, ಅಳಲೆಕಾಯಿ, ಹೇರಳೆ, ಯಾಲಕ್ಕಿ, ಬಾಲಕರಿಗಿಷ್ಟವಾದ ಮಿಕ್ಕ ಭಕ್ಷ್ಯವಸ್ತುಗಳು, ಕಸೇರು, ತಾವರೆದಂಟು, ಮುಂತಾದವುಗಳನ್ನೂ, ಎಳನೀರನ್ನೂ ದೇವಿಗೆ ಅರ್ಪಿಸಬೇಕು.

೨೩-೨೫. ಕೆಂಪುವಸ್ತ್ರಗಳೆರಡನ್ನು ದೇವಿಗೆ ಅರ್ಪಿಸಬೇಕು. ಕಪ್ಪುಬಣ್ಣದ ವಸ್ತ್ರಗಳನ್ನು ಎಂದಿಗೂ ಅರ್ಪಿಸಬಾರದು. ಮತ್ತು ದೇವಿಗೆ ಪ್ರಿಯವಾದ, ಅಶೋಕ

ಅರ್ಕಪುಷ್ಪಂ ಶಾಲ್ಮಲಕಂ ದೂರ್ವಾಂಕುರಂ ಸುಕೋಮಲಂ ।
ಕುಶಮಂಜರಿಕಾದರ್ಭಾ ಬಂಧೂಕಕಮಲೇ ತಥಾ ॥ ೨೪ ॥

ಮಾಲೂರಪತ್ರಂ ಪುಷ್ಪಂ ಚ ತ್ರಿಸಂಧ್ಯಾರಕ್ತಪರ್ಣಕೇ ।
ಸುಮನಸಾಂಚ ಪ್ರಿಯಾಣ್ಯೇತಾನ್ಯಂಬಿಕಾಯಾಶ್ಚ ಭೈರವ ॥ ೨೫ ॥

ಬಂಧೂಕಮುಕುಲಂ ಮಧ್ಯಂ ಬಿಲ್ವಪತ್ರಾಣಿ ಸಂಧ್ಯಕಂ ।
ಉತ್ತಮಂ ಸರ್ವಪುಷ್ಪೇಷು ದ್ರವ್ಯೇ ಷಾಯಸನೋದಕೌ ॥ ೨೬ ॥

ಮಾಲ್ಯಂ ಬಂಧೂಕಪುಷ್ಪಸ್ಯ ಶಿವಾಯೈ ಬಕುಲಸ್ಯ ವಾ ।
ಕರವೀರಸ್ಯ ಮಾಘ್ಯಸ್ಯ ಸರಸ್ರಾಣಾಂ ದದಾತಿ ಯಃ ॥ ೨೭ ॥

ಸ ಕಾಮಾನ್ ಪ್ರಾಪ್ಯ ಚಾಭೀಷ್ಟಾನ್ಮಮಲೋಕೇ ಪ್ರಮೋದತೇ ।
ಚಂದನಂ ಶೀತಲಂ ಚೈವ ಕಾಲೀಯಕಸಮನ್ವಿತಂ ॥ ೨೮ ॥

ಪುಷ್ಪ, ನಾಗಕೇಸರ, ಗಿರಿಮಲ್ಲಿಗೆ, ನಸುಗೆಂಪಾದ ಸೈದಿಲೆ, ವಜ್ರಪುಷ್ಪ, ಗನ್ನೇರಿಕೆ, ಗೋರಂಟಿಗೆ, ಅರ್ಕಪುಷ್ಪ, ಶಾಲ್ಮಲೀಪುಷ್ಪ, ಕೋಮಲವಾದ ಗರಿಕೆಯ ಅಂಕುರ, ದರ್ಭೆಗಳು, ಕೆಂಪುರೋಜಾ, ಕನಲು, ಬಿಲ್ವಪತ್ರ, ಮತ್ತು ಹೂ, ತ್ರಿಸಂಧ್ಯಾಹೂವ, ಕೆಂಪುದಾಸವಾಳ, ಇವುಗಳನ್ನು ದೇವಿಗೆ ಅರ್ಪಿಸಬೇಕು. ಎಲೈ ಭೈರವನೇ ಈ ಎರಡು ಶ್ಲೋಕಗಳಲ್ಲಿ ಹೇಳಿದ ಪತ್ರಪುಷ್ಪಗಳು ದೇವಿಗೆ ಪ್ರಿಯವಾದವುಗಳು.

೨೬. ಪುಷ್ಪಗಳಲ್ಲಿ ಬಂಧೂಕಹೂ (ಕೆಂಪುರೋಜಾ) ವಿನ ಮೊಗ್ಗು ಮಧ್ಯಮವಾದುದು. ಬಿಲ್ವಪತ್ರ, ನಸುಗೆಂಪುವರ್ಣದ ಸೈದಿಲೆ, ಇವುಗಳು ಉತ್ತಮವಾದುವುಗಳು. ದ್ರವ್ಯಗಳಲ್ಲಿ ಪಾಯಸ, ಮತ್ತು ಮೋದಕಗಳು ದೇವಿಯ ಅರ್ಪಣೆಗೆ ಉತ್ತಮವಾದವುಗಳು.

೨೭. ಅಲ್ಲದೆ ಎಲೈ ಭೈರವನೇ, ಸಾವಿರ ಕೆಂಪು ರೋಜಾಹೂವುಗಳಿಂದಾಗಲೀ ಅಶೋಕಪುಷ್ಪಗಳಿಂದಲಾಗಲೀ, ಕರವೀರಪುಷ್ಪಗಳಿಂದಲಾಗಲೀ, ಕುಂದಪುಷ್ಪಗಳಿಂದಲಾಗಲೀ, ರಚಿಸಿರುವ ಮಾಲಿಕೆಯನ್ನು ಯಾವನು ದೇವಿಗೆ ಅರ್ಪಿಸುವನೋ ಅವನು ಅನೇಕ ಇಷ್ಟಾರ್ಥಗಳನ್ನು ಪಡೆದು ಕೊನೆಗೆ ನನ್ನ ಲೋಕದಲ್ಲಿ(ಶಿವನ) ಸುಖಿಸುವನು.

೨೮. ಬಳಿಕ ಕಸ್ತೂರಿಯಿಂದ ಮಿಶ್ರಿತವಾಗಿ ಶೀತಲವಾಗಿರುವ ಶ್ರೇಷ್ಠವಾದ ಗಂಧವನ್ನು ಭಕ್ತಿಯಿಂದ ದೇವಿಗೆ ಅರ್ಪಿಸಬೇಕು.

ಅನುಲೇಪನಮುಖ್ಯಂ ತು ದೇವ್ಯೈ ವಜ್ಯಾಪ್ರಯತ್ನತಃ ।
ಕರ್ಪೂರಂ ಕುಂಕುಮಂ ಕೂರ್ಚಂ ಮೃಗನಾಭಿಃ ಸುಗಂಧಿಕಂ ॥ ೨೯ ॥

ಕಾಲೀಯಕಂ ಸುಗಂಧೇಷು ದೇವ್ಯಾಃ ಪ್ರೀತಿಕರಂ ಪರಂ ।
ಯಕ್ಷಧೂಪಃ ಪ್ರತೀವಾಪಃ ಪಿಂಡಧೂಪಶ್ಚ ಸಗೋಲಕಃ ॥ ೩೦ ॥

ಅಗರುಃ ಸಿಂಧುವಾರಶ್ಚ ಧೂಪಾಃ ಪ್ರೀತಿಕರಾಃ ಸ್ಮೃತಾಃ ।
ಅಂಗರಾಗೇಷು ಸಿಂಧೂರಂ ದೇವ್ಯಾಃ ಪ್ರೀತಿಕರಂ ಪರಂ ॥ ೩೧ ॥

ಸುಗಂಧಿಶಾಲಿಜಂ ಚಾನ್ನಂ ಮಧುಮಾಂಸಸಮನ್ವಿತಂ ।
ಅಪೂಪಂ ಪಾಯಸಂ ಕ್ಷೀರಮನ್ನಂ ದೇವ್ಯಾಃ ಪ್ರಶಸ್ಯತೇ ॥ ೩೨ ॥

ರತ್ನೋದಕಂ ಸಕರ್ಪೂರಂ ಪಿಂಡೀಲಕಕುಮಾರಕೌ ।
ರೋಚನಂ ಪುಷ್ಪಕಂ ದೇವ್ಯಾಃ ಸ್ನಾನೀಯಂ ಪರಿಕೀರ್ತಿತಂ ॥ ೩೩ ॥

ಘೃತಪ್ರದೀಪೋ ದೀಪೇಷು ಪ್ರಶಸ್ತಃ ಪರಿಕೀರ್ತಿತಃ ।

---

೨೯. ಸುಗಂಧವುಳ್ಳ ವಸ್ತುಗಳಲ್ಲಿ, ಕರ್ಪೂರ, ಕುಂಕುಮ, ಕಸ್ತೂರಿ, ಸುರಸುರಕಿ-ಕಾಲೀಯಕಂ (ಮರದರಸಿನ) ಇವುಗಳು ದೇವಿಗೆ ಪ್ರಿಯವಾದುವುಗಳು.

೩೦-೩೧. ಸಜ್ಜರಸ, ಮಡ್ಡಿಧೂಪ, ಅಗರು, ಪ್ರತೀವಾಪ, ಸಿಂಧುವಾರಧೂಪ, ಈ ಧೂಪಗಳು ದೇವಿಗೆ ಪ್ರಿಯವಾದುವುಗಳು. ಅಂಗರಾಗಗಳಲ್ಲಿ ಸಿಂಧೂರವು ದೇವಿಗೆ ಪ್ರಿಯವಾದುದು.

೩೨. ಸುವಾಸನೆಯುಳ್ಳ ಅಕ್ಕಿಯ ಅನ್ನ, ಮದ್ಯ ಮತ್ತು ಮಾಂಸಗಳು, ಮೋದಕ, ಕರಿಗಡುಬು ಮುಂತಾದವುಗಳು, ಪಾಯಸ, ಕ್ಷೀರಾನ್ನ, ಇವುಗಳು ದೇವಿಗೆ ಪ್ರಿಯವಾದ ನೈವೇದ್ಯಗಳು.

೩೩. ರತ್ನೋದಕ, ಕರ್ಪೂರಮಿಶ್ರಿತವಾದ ಜಲ, ತಪಸೀದ್ರವ್ಯ, ಪಲಸೀಗಿಪದ ದ್ರವ್ಯ, ಗೋರೋಚನ, ಪುಷ್ಪಾಂಜನ, ಇವುಗಳು ದೇವಿಗೆ ಪ್ರಿಯವಾದ ಸ್ನಾನ ದ್ರವ್ಯಗಳು,

೩೪. ದೀಪಗಳಲ್ಲಿ ತುಪ್ಪದದೀಪವು ಪ್ರಶಸ್ತವಾದುದು. ಮತ್ತು ಮೂಲಮಂತ್ರ ದಿಂದ ಮೂರುಸಲ ಪುಷ್ಪಾಂಜಲಿಗಳನ್ನು ದೇವಿಗೆ ಅರ್ಪಿಸಬೇಕು.

ಪುಷ್ಪಾಂಜಲಿತ್ರಯಂ ದದ್ಯಾನ್ಮೂಲಮಂತ್ರೇಣ ಶೋಭನಂ ॥ ೩೪ ॥

ದಶೋಪಚಾರಾನಖಿಲಾನ್ಮಧ್ಯೇ ಚೈತಾಃ ಪ್ರಪೂಜಯೇತ್ ।
ಕಾಮೇಶ್ವರೀಂ ಗುಪ್ತದುರ್ಗಾಂ ವಿಂಧ್ಯಕಂದರವಾಸಿನೀಂ ॥ ೩೫ ॥

ಆಕಾಶಗಂಗಾಂ ಕಾಮೂಪ್ಯಾಂ ತಥಾ ದಿಕ್ಕರವಾಸಿನೀಂ ।
ಮಾತಂಗೀಂ ಲಲಿತಾಂ ದುರ್ಗಾಂ ಭೈರವೀಂ ಸಿದ್ಧಿದಾಂ ತಥಾ ॥ ೩೬ ॥

ಕೋಟೀಶ್ವರೀಂ ದೀರ್ಘಿಕಾಖ್ಯಾಂ ಪ್ರಕಟೀಂ ಭುವನೇಶ್ವರೀಂ ।
ಬಲಪ್ರಮಥಿನೀಂ ಚಂಡೀಂ ಚಂಡೋಗ್ರಾಂ ಚಂಡನಾಯಿಕಾಂ ॥ ೩೭ ॥

ಉಗ್ರಾಂ ಭೀಮಾಂ ಶಿವಾಂ ಶಾಂತಾಂ ಜಯಂತೀಂ ಕಾಲಿಕಾಂ ತಥಾ ।
ಮಂಗಳಾಂ ಭದ್ರಕಾಳೀಂ ಚ ಶಿವಾಂ ಧಾತ್ರೀಂ ಕಪಾಲಿನೀಂ ॥ ೩೮ ॥

ಸ್ವಾಹಾಂ ಸ್ವಧಾಮಪರ್ಣಾಂ ಚ ಪಂಚಪುಷ್ಕರಿಣೀಂ ತಥಾ ।
ದಮನೀಂ ಸರ್ವಭೂತಾನಾಂ ಮನಃ ಪ್ರೋತ್ಸಾಹಕಾರಿಣೀಂ ॥ ೩೯ ॥

ದಮನೀಂ ಸರ್ವಭೂತಾನಾಂ ಚತುಃಷಷ್ಟಿಂಚ ಯೋಗಿನೀಃ ।

೩೫-೩೯. ಹೀಗೆ ದೇವಿಯನ್ನು ಅರ್ಚಿಸಿ ಮಧ್ಯದಲ್ಲಿ ಮುಂದೆಹೇಳುವ ಪರಿವಾರದೇವತೆಗಳನ್ನು ಸರ್ವೋಪಚಾರಗಳಿಂದ ಪೂಜಿಸಬೇಕು. ಆ ದೇವತೆಗಳು ಯಾವೆಂದರೆ, ಕಾಮೇಶ್ವರೀ, ಗುಪ್ತದುರ್ಗಾ, ವಿಂಧ್ಯವಾಸಿನೀ, ಆಕಾಶಗಂಗಾ, ಕಾಮರೂಪಾ, ದಿಕ್ಕರವಾಸಿನೀ, ಮಾತಂಗೀ, ದುರ್ಗಾ, ಭೈರವಿ, ಸಿದ್ಧಿದಾದೇವಿ, ಕೋಟೀಶ್ವರೀದೇವಿ, ದೀರ್ಘಿಕಾದೇವಿ, ಪ್ರಕಟೀದೇವಿ, ಭುವನೇಶ್ವರೀ, ಬಲಪ್ರಮಥಿನೀದೇವಿ, ಚಂಡೀ, ಚಂಡೋಗ್ರಾದೇವಿ, ಚಂಡನಾಯಿಕಾದೇವಿ, ಇವರನ್ನೂ ಅರ್ಚಿಸಬೇಕು, ಹಾಗೆಯೇ ಉಗ್ರಾದೇವಿ, ಭೀಮಾದೇವಿ, ಶಾಂತಾ, ಶಿವಾ, ಜಯಂತೀ, ಕಾಲಿಕಾ, ಮಂಗಳೆ, ಭದ್ರಕಾಳಿ, ಶಿವಧಾತ್ರೀ, ಕಪಾಲಿನೀ ಇವರುಗಳನ್ನೂ, ಸ್ವಾಹಾದೇವಿ ಸ್ವಧಾದೇವಿ, ಅಪರ್ಣಾ, ಪಂಚಪುಷ್ಕರಣೀದೇವಿ, ಸರ್ವಭೂತದಮಿನೀದೇವಿ, ಮನಃಪ್ರೋತ್ಸಾಹಕಾರಿಣೀದೇವಿ, ಅರವತ್ತನಾಲ್ಕು (೬೪) ಯೋಗಿನಿಯರು, ಇವರನ್ನೂ ಪೂಜಿಸಬೇಕು.

೪೦. ಈ ಎಲ್ಲಾ ಪರಿವಾರದೇವತೆಗಳನ್ನೂ ಪೂಜಿಸಿ, ಆಮೇಲೆ ಮೂಲಮಂತ್ರದಿಂದ ಹೃದಯ, ಶಿರಸ್ಸು, ಶಿಖಾ, ವರ್ಮ, (ಸಂಧಿಸ್ಥಾನ) ನೇತ್ರ, ಬಾಹು, ಪಾದ, ಈ ದೇವಿಯ ಅಂಗಗಳನ್ನು ಪೂಜಿಸಬೇಕು.

ಏತಾಃ ಸಂಪೂಜ್ಯ ಮಧ್ಯೇ ತು ಮೂಲಮಂತ್ರೇಣಾಂಗಾನಿ ಪೂಜಯೇತ್ ॥ ೪೦ ॥
ಬೃಚ್ಛೈರಸ್ತು ಶಿಖಾವರ್ಮನೇತ್ರಾಣಾಮಪಿ ಚ ।
ಮೂಲಮಂತ್ರಾದ್ಯಕ್ಷರೈಸ್ತು ತ್ರಿಭಿರಾದ್ಯಂತು ಪೂಜನಂ ॥ ೪೧ ॥

ಏಕೈಕಂ ವರ್ಧಯೇತ್ಪಶ್ಚಾನ್ಮಂತ್ರಾಣ್ಯಂಗಾನಿ ಪೂಜನೇ ।
ಸಿದ್ಧಸೂತ್ರಂ ಚ ಖಡ್ಗಂ ಚ ಖಡ್ಗಮುದ್ದಿಶ್ಯ ಪೂಜಯೇತ್ ॥ ೪೨ ॥

ತತೋಽಷ್ಟಪತ್ರಮಧ್ಯೇತು ಪೂಜಯೇದಷ್ಟಯೋಗಿನೀಃ ।
ಶೈಲಪುತ್ರೀಂ ಚಂಡಘಂಟಾಂ ಸ್ಕಂದಮಾತರಮೇವ ಚ ॥ ೪೩ ॥

ಕಾಲರಾತ್ರಿಂ ಚ ಪೂರ್ವಾದಿಚತುರ್ದಿಕ್ಷು ಪ್ರಪೂಜಯೇತ್ ।
ಚಂಡಿಕಾಮಥ ಕೂಷ್ಮಾಂಡೀಂ ತಥಾ ಕಾತ್ಯಾಯನೀಂ ಶುಭಾಂ ॥ ೪೪ ॥

ಮಹಾಗೌರೀಂ ಚಾಗ್ನಿಕೋಣೇ ನೈಋತ್ಯಾದಿಷು ಪೂಜಯೇತ್ ।
ಮಹಾಮಾಯೇ ಕ್ಷಮಸ್ವೇತಿ ಮೂಲಮಂತ್ರೇಣ ಚಾಷ್ಟಧಾ ।
ಪೂಜಯೇತ್ಪದ್ಮಮಧ್ಯೇ ತು ಬಲಿದಾನಂ ತತಃ ಪರಂ ॥ ೪೫ ॥

೪೦-೪೬. ಮೂಲಮಂತ್ರದ ಮೊದಲನೆಯ ಮೂರು ಅಕ್ಷರಗಳಿಂದ ಸೊದಲನೆಯ ಅಂಗದಪೂಜೆಯು ಮಾಡಲ್ಪಡತಕ್ಕದ್ದು. ಆಮೇಲೆ ಒಂದೊಂದು ಅಂಗಗಳ ಪೂಜೆಗೆ ಒಂದೊಂದು ಅಕ್ಷರಗಳನ್ನು ಹೆಚ್ಚಾಗಿ ಸೇರಿಸಿ ಉಚ್ಚರಿಸಬೇಕು. ದೇವಿಯ ಸಿದ್ಧಸೂತ್ರವನ್ನೂ, ಖಡ್ಗವನ್ನೂ, ಹಿಂದೆಹೇಳಿದ ಖಡ್ಗಮಂತ್ರದಿಂದ ಪೂಜಿಸಬೇಕು.

೪೩. ಆಮೇಲೆ ಎಂಟು ಪತ್ರಗಳುಳ್ಳ ಕಮಲದ ಮಧ್ಯದಲ್ಲಿ ಎಂಟುಜನ ಯೋಗಿನಿಯರನ್ನು ಪೂಜಿಸಬೇಕು. ಅವರಲ್ಲಿ ಶೈಲಪುತ್ರಿ, ಚಂಡಘಂಟಾ, ಸ್ಕಂದ ಮಾತೃದೇವಿ, ಕಾಲರಾತ್ರಿ ಈ ನಾಲ್ವರನ್ನು ಪೂರ್ವವೇ ಮೊದಲಾದ ನಾಲ್ಕು ದಿಕ್ಕುಗಳಲ್ಲಿ ಪೂಜಿಸಬೇಕು.

೪೪. ಹಾಗೆಯೇ ಚಂಡಿಕೆ, ಕೂಷ್ಮಾಂಡೀ, ಕಾತ್ಯಾಯನೀ, ಮಹಾಗೌರೀ ಈ ನಾಲ್ವರನ್ನು ಆಗ್ನೇಯ, ನೈಋತ್ಯ, ವಾಯವ್ಯ, ಈಶಾನ್ಯ ಈ ನಾಲ್ಕುದಿಕ್ಕು ಮೂಲೆಗಳಲ್ಲಿ ಕ್ರಮವಾಗಿ ಪೂಜಿಸಬೇಕು.

೪೫. ಓ ಮಹಾಮಾಯೆಯೇ, ಕ್ಷಮಿಸು ಎಂದುಹೇಳಿ ಪದ್ಮದ ಮಧ್ಯದಲ್ಲಿ ದೇವಿಯನ್ನು ಎಂಟುಬಾರಿ ಪೂಜಿಸಬೇಕು. ಆಮೇಲೆ ಬಲಿದಾನವನ್ನು ಮಾಡಬೇಕು.

ಏವಂ ಯದಾ ಕಲ್ಪವಿಧಾನಮಾನೈಃ ।
ಸಂಪೂಜ್ಯತೆ ಭೈರವ ಕಾಮದೇವೀ ॥
ತದಾ ಸ್ವಯಂ ಮಂಡಲಮೇತ್ಯ ದೇಯಂ ।
ಗೃಹ್ಣಾತಿ ಕಾಮಂ ಚ ದದಾತಿ ಸಮ್ಯಕ್ ॥ ೪೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಷಟ್‌ಪಂಚಾಶತ್ತಮೋಽಧ್ಯಾಯಃ ॥

---

೪೬. ಹೀಗೆ, ಕಲ್ಪ, ವಿಧಿ, ಮಾನ (ಕ್ರಮ) ಗಳಿಂದ ದೇವಿಯನ್ನು ಪೂಜಿಸಿದಾದರೆ ಆ ದೇವಿಯು ತಾನೇ ಪೂಜಾಮಂಡಲಕ್ಕೆ ಬಂದು ಪೂಜೆಯನ್ನು ಸ್ವೀಕರಿಸುವಳು. ಸಕಲ ಇಷ್ಟಾರ್ಥಗಳನ್ನೂ ಕೊಡುವಳು.

ಐವತ್ತಾರನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

ಶ್ರೀ ಕಾಲಿಕಾಪುರಾಣೇ ಸಪ್ತಪಂಚಾಶತ್ತಮೋಽಧ್ಯಾಯಃ

॥ ಶ್ರೀ ಭಗವಾನುವಾಚ ॥

ಬಲಿದಾನಂ ತತಃ ಪಶ್ಚಾತ್ಕುರ್ಯಾದ್ದೇವ್ಯಾಃ ಪ್ರಮೋದಕಂ ।
ಮೋದಕೈರ್ಗಜವಕ್ತ್ರಂ ಚ ಹವಿಷಾ ತೋಷಯೇದ್ರವಿಂ ॥ ೧ ॥

ತ್ರ್ಯೈಕೈಶ್ಚ ನಿಯಮೈಶ್ಶಂಕರಂ ತೋಷಯೇದ್ಧರಿಂ ।
ಚಂಡಿಕಾಂ ಬಲಿದಾನೇನ ತೋಷಯೇತ್ಸಾಧಕಃ ತಥಾ ॥ ೨ ॥

ಪಕ್ಷಿಣಃ ಕಚ್ಛಪಾ ಗ್ರಾಹಾಶ್ಛಾಗಲಾಶ್ಚ ವರಾಹಕಾಃ ।
ಮಹಿಷಾ ಗೋಧಿಕಾಶೋಷಾ ತಥಾ ನವವಿಧಾ ಮೃಗಾಃ ॥ ೩ ॥

ಐವತ್ತೇಳನೆಯ ಅಧ್ಯಾಯವು.

೧-೨. ಶಂಕರನು ಹೇಳಿದನು:—ಹೀಗೆ ಮೇಲೆಹೇಳಿ ಕ್ರಮದಂತೆ ದೇವಿಯನ್ನು ಪೂಜಿಸಿದನಂತರ ದೇವಿಯ ಮನಸ್ಸಂತೋಷವನ್ನುಂಟುಮಾಡುವ ಬಲಿಪ್ರದಾನವನ್ನು ಮಾಡಬೇಕು. ಗಣಪತಿಯನ್ನು ಕಡಬುಗಳಿಂದಲೂ, ಸೂರ್ಯನನ್ನು ಹವಿಸ್ಸುಗಳಿಂದಲೂ ಶಿವ ವಿಷ್ಣು ಇವರನ್ನೂ, ನಿಯಮ, ನೃತ್ತ ಗೀತ ವಾದ್ಯಗಳಿಂದಲೂ, ಕೂಡ ಸಂತೋಷ ಪಡಿಸಬೇಕು. ಚತುರಾಯತನ ದೇವತೆಗಳನ್ನು ಹೀಗೆ ತೃಪ್ತಿಪಡಿಸಿದನಂತರ ಸಾಧಕನಾದವನು ಯಾವಾಗಲೂ ಚಂಡಿಕಾದೇವಿಯನ್ನು ಬಲಿಪ್ರದಾನದಿಂದ ಸಂತೋಷಗೊಳಿಸಬೇಕು.

೩-೪. ಪಕ್ಷಿಗಳು, ಆಮೆಗಳು, ಜಲಜಂತುಗಳು, ಆಡುಗಳು, ಹಂದಿಗಳು, ಎಮ್ಮೆಕೋಣಗಳು, ಹೆಚ್ಚಿಯಗೊವ್ವ ಮೊದಲಾದುವುಗಳೂ, ಒಂಭತ್ತು ವಿಧವಾದ

ಚಾಮರಃ ಕೃಷ್ಣಸಾರಶ್ಚ ಶಶಃ ಪಂಚಾನನಸ್ತಥಾ ।
ಮತ್ಸ್ಯಃ ಸ್ವಗಾತ್ರರುಧಿರೈಶ್ಚಾಷ್ಟಧಾ ಬಲಯೋ ಮತಾಃ ॥ ೪ ॥

ಅಭಾವೇ ಚ ತಥೈವೇಷಾಂ ಕದಾಚಿದ್ಭಯಹಸ್ತಿನೌ ।
ಭಾಗಲಾಶ್ವರಭಾಶ್ಚೈವ ನರಶ್ಚೈವ ಯಥಾಕ್ರಮಂ ॥ ೫ ॥

ಬಲಿರ್ಮಹಾಬಲಿರಿತಿ ಬಲಯಃ ಪರಿಕೀರ್ತಿತಾಃ ।
ಸ್ನಾಪಯಿತ್ವಾ ಬಲಿಂ ತತ್ರ ಪುಷ್ಪಚಂದನಧೂಪಕೈಃ ॥ ೬ ॥

ಪೂಜಯೇತ್ಸಾಧಕೋ ದೇವೀಂ ಬಲಿಮಂತ್ರೈರ್ಮಹಾಬಲಿರ್ಮಹಾಃ ।
ಉತ್ತರಾಭಿಮುಖೋ ಭೂತ್ವಾ ಬಲಿಂ ಪೂರ್ವಮುಖಂ ತಥಾ ॥ ೭ ॥

ನಿರೀಕ್ಷ್ಯ ಸಾಧಕಃ ಪಶ್ಚಾದಿದಂ ಮಂತ್ರಮುದೀರಯೇತ್ ।
ವರಸ್ತ್ವಂ ಬಲಿರೂಪೇಣ ಮಮ ಭಾಗ್ಯಾದುಪಸ್ಥಿತಃ ॥ ೮ ॥

ಮೃಗಗಳೂ, ಚಮರೀಮೃಗ, ಜಿಂಕೆ, ಮೊಲ, ಸಿಂಹ, ಮೀನು, ತನ್ನ ಶರೀರದ ರಕ್ತ ಇವುಗಳಿಂದ ಎಂಟುವಿಧವಾಗಿ ಬಲಿಯನ್ನು ಕೊಡಲು ಯೋಗ್ಯವಾದ ವಸ್ತುಗಳು ಎಂದು ನಿಶ್ಚಯಿಸಲ್ಪಟ್ಟಿರುತ್ತವೆ.

೫. ಹಿಂದೆಹೇಳಿದ ಪ್ರಾಣಿಗಳು ಸಿಕ್ಕದಿರುವಾಗ ಒಂದುಸಮಯದಲ್ಲಿ ಕುದುರೆಯನ್ನೂ, ಆನೆಯನ್ನೂ, ಆಡುಗಳನ್ನೂ, ಶರಭಮೃಗಗಳನ್ನೂ, ಮನುಷ್ಯನನ್ನೂ ಸಹ ಕ್ರಮವಾಗಿ ಬಲಿಯನ್ನು ಕೊಡಬಹುದು. ಇವುಗಳಲ್ಲಿ ಹಿಂದೆ ಹೇಳಿರುವುದು ಇಲ್ಲವಿದ್ದರೆ ಮುಂದಿನ ಪದಾರ್ಥವು ಬಲಿಗೆ ಉತ್ತಮವು.

೬-೭. ಬಲಿ, ಮಹಾಬಲಿ, ಎಂಬುದಾಗಿ ಬಲಿಯು ಎರಡುವಿಧವಾಗಿರುವುದು. ಸಾಧಕನಾದವನು ಬಲಿಯಪ್ರಾಣಿಯನ್ನು ನೀರಿನಿಂದ ಚೆನ್ನಾಗಿ ತೊಳೆದನಂತರ ಹೂವು ಗಂಧ, ಧೂಪ, ಇವುಗಳಿಂದಲೂ, ಬಲಿಯನ್ನುಕೊಡುವ ಮಂತ್ರಗಳಿಂದಲೂ ಸಹ ದೇವಿಯನ್ನು ಮತ್ತೆ ಮತ್ತೆ ಪೂಜಿಸಬೇಕು.

೮. ಸಾಧಕನಾದವನು ಉತ್ತರಾಭಿಮುಖನಾಗಿದ್ದುಕೊಂಡು, ಪೂರ್ವಮುಖನಾಗಿರುವ ಬಲಿಯನ್ನು ನೋಡುತ್ತಾ ಮುಂದೆಹೇಳುವ ಮಂತ್ರವನ್ನು ಹೇಳಬೇಕು.

ಪ್ರಣಮಾಮಿ ತತಸ್ಸರ್ವರೂಪಿಣಂ ಬಲಿರೂಪಿಣಂ ।
ಚಂಡಿಕಾಪ್ರೀತಿದಾನೇನ ದಾತುರಾಪದ್ವಿನಾಶನ ॥ ೯ ॥

ವೈಷ್ಣವೀಬಲಿರೂಪಾಯ ಬಲೇ ತುಭ್ಯಂ ನಮೋನಮಃ ।
ಯಜ್ಞಾರ್ಥೇ ಪಶವಃ ಸೃಷ್ಟಾಃ ಸ್ವಯಮೇವ ಸ್ವಯಂಭುವಾ ॥ ೧೦ ॥

ಅತಸ್ತ್ವಾಂ ಘಾತಯಾಮ್ಯದ್ಯ ತಸ್ಮಾದ್ಯಜ್ಞೇ ವಧೋಽವಧಃ । ॥ ೧೧ ॥
ಐಂ ಕ್ರೀಂ ಶ್ರೀಂ ಇತಿಮಂತ್ರೇಣ ತಂ ಬಲಿಂ ಕಾಮರೂಪಿಣಂ

ಚಿಂತಯಿತ್ವಾ ನ್ಯಸೇತ್ಪುಷ್ಪಂ ಮೂರ್ಧ್ನಿ ತಸ್ಯ ಚ ಭೈರವ । ॥ ೧೨ ॥

ತತೋ ದೇವೀಂ ಸಮುದ್ದಿಶ್ಯ ಕಾಮಮುದ್ದಿಶ್ಯ ಚಾತ್ಮನಃ ।
ಅಭಿಷಿಚ್ಯ ಬಲಿಂ ಪಶ್ಚಾತ್ಕರವಾಲಂ ಪ್ರಪೂಜಯೇತ್ ॥ ೧೩ ॥

---

೯. ಎಲೈ ಬಲಿಪ್ರಾಣಿಯೇ, ನೀನು ಉತ್ತಮನಾಗಿರುವೆ. ನನ್ನ ಅದೃಷ್ಟದಿಂದ ಬಲಿರೂಪದಿಂದ ಬಂದಿರುವೆ. ಸರ್ವವಸ್ತುರೂಪದಿಂದ ಇರುವ ಬಲಿರೂಪಿಯಾದ ನಿನಗೆ ನಮಸ್ಕಾರವು. ನೀನು ವೈಷ್ಣವೀದೇವಿಗಾಗಿ ಅರ್ಪಿಸುವ ಬಲಿರೂಪದಿಂದಿರುವೆ. ಚಂಡಿಕಾದೇವಿಗೆ ಬಲಿಪ್ರದಾನಮಾಡುವ ನನ್ನ ವಿಪತ್ತುಗಳನ್ನು ನಾಶಮಾಡುವೆ. ಇಂತಹ ನಿನ್ನನ್ನು ನಮಸ್ಕರಿಸುವೆನು.

೧೦-೧೧. ಮೊದಲು ಯಜ್ಞಕ್ಕೋಸ್ಕರವಾಗಿ ಬ್ರಹ್ಮನೇ ಪಶುಗಳನ್ನು ಸೃಷ್ಟಿ ಮಾಡಿದನು. ಆದುದರಿಂದ ನಾನು ಈಗ ನಿನ್ನನ್ನು ಕೊಲ್ಲುವೆನು. ಯಜ್ಞದಲ್ಲಿ ಆಗುವ ಪ್ರಾಣಿವಧೆಯು ಹಿಂಸೆಯಲ್ಲವು.

೧೨. ಎಲೈ ಭೈರವನೇ ಐಂ, ಕ್ರೀಂ, ಶ್ರೀಂ ಎಂಬ ಮಂತ್ರದಿಂದ ಕಾಮರೂಪಿಯಾದ ಆ ಬಲಿಯನ್ನು ಧ್ಯಾನಮಾಡಿ ಆ ಪಶುವಿನ ತಲೆಯಮೇಲೆ ಹೂವನ್ನು ಇರಿಸಬೇಕು.

೧೩. ಅನಂತರ ದೇವಿಯನ್ನು ಉದ್ದೇಶಿಸಿ ಸಾಧಕನಾದವನು ತನ್ನ ಅಭಿಲಾಷೆಯನ್ನು ಸಾಧಿಸುವ ನಿಮಿತ್ತವಾಗಿ ಬಲಿಯನ್ನು ಪ್ರೋಕ್ಷಿಸಿ ಅನಂತರ ಕತ್ತಿಯನ್ನು ಪೂಜಿಸಬೇಕು.

ರಸನಾ ತ್ವಂ ಚಂಡಿಕಾಯಾಃ ಸುರಲೋಕಪ್ರಸಾಧಕ ।
ಐಂ ಶ್ರೀಂ ಕ್ರೀಂ ಇತಿ ಮಂತ್ರೇಣ ಧ್ಯಾತ್ವಾ ಖಡ್ಗಂ ಪ್ರಪೂಜಯೇತ್ ॥೧೪॥

ಕೃಷ್ಣಂ ಪಿನಾಕಪಾಣಿಂ ಚ ಕಾಲರಾತ್ರಿಸ್ವರೂಪಿಣಂ ।
ಉಗ್ರಂ ರಕ್ತಾಸ್ಯನಯನಂ ರಕ್ತಪುಷ್ಪಾನುಲೇಪನಂ ॥ ೧೫ ॥

ರಕ್ತಾಂಬರಧರಂ ಚೈಕಪಾಶಹಸ್ತಂ ಕುಟುಂಬಿನಂ ।
ಪೀಯಮಾನಂ ಚ ರುಧಿರಂ ಭುಂಜಾನಂ ಕ್ರವ್ಯಸಂಹತಿಂ ॥ ೧೬ ॥

ಅಸಿರ್ವಿಶಸನಃ ಖಡ್ಗಸ್ತೀಕ್ಷ್ಣಧಾರೋ ದುರಾಸದಃ ।
ಶ್ರೀಗವ್ರೋ ವಿಜಯಶ್ಚೈವ ಧರ್ಮಪಾಲ ನಮೋಸ್ತು ತೇ ॥ ೧೭ ॥

---

೧೪. "ಎಲೈ ಕತ್ತಿಯೇ, ನೀನು ಚಂಡಿಕಾದೇವಿಯ ನಾಲಿಗೆಯಾಗಿರುತ್ತೀಯೆ ದೇವಲೋಕವನ್ನು ಸಾಧನೆಮಾಡಿಕೊಡುವ ಶಕ್ತಿಯು ನಿನ್ನಲ್ಲಿದೆ" ಎಂದು ಪ್ರಾರ್ಥಿಸಿ ಐಂ, ಶ್ರೀಂ, ಕ್ರೀಂ ಎಂಬ ಮಂತ್ರದಿಂದಲೂ, ಹಿಂದೆಜೇಳಿದ ಕ್ರಮದಿಂದಲೂ ಕತ್ತಿಯನ್ನು ಧ್ಯಾನಮಾಡಿ ಪೂಜಿಸಬೇಕು.

೧೫-೧೬. ಕಪ್ಪುಬಣ್ಣನುಳ್ಳವನಾಗಿಯೂ, ಕಾಲರಾತ್ರಿಯ ಆಕಾರದಿಂದಲೂ, ಕೆಂಪಾದ ಬಾಯಿ ಮತ್ತು ಕಣ್ಣುಗಳಿಂದ ಭಯಂಕರನಾಗಿಯೂ, ಕೆಂಪಾದ ಹೂವಿನ ಹಾರವನ್ನೂ, ಗಂಧವನ್ನೂ, ಧರಿಸಿ, ಕೆಂಪುಬಟ್ಟೆಯನ್ನುಟ್ಟುಕೊಂಡು ಒಂದುಕೈಯಲ್ಲಿ ಪಾಶವನ್ನು ಹಿಡಿದುಕೊಂಡು, ರಕ್ತಪಾನವನ್ನು ಮಾಡುತ್ತಾ ಮಾಂಸದ ರಾಸಿಯನ್ನು ತಿನ್ನುತ್ತಿರುವ ಮತ್ತು ಪಿನಾಕವೆಂಬ ಧನುಸ್ಸನ್ನು ಹಿಡಿದಿರುವ ಈಶ್ವರನನ್ನು ಪರಿವಾರ ಸಹಿತ ಪೂಜಿಸಬೇಕು.

೧೭. ಎಲೈ ಕತ್ತಿಯೇ, ನೀನು ಎಲ್ಲರನ್ನೂ ಕೊನೆಗಾಣಿಸುವವನು, ಶೀಘ್ರವಾಗಿ ಬರುವವನು, ತುಂಡುಮಾಡುವವನು, ಹರಿತವಾದ ಅಲಗುಳ್ಳವನು, ಯಾರಿಂದಲೂ ಸಹಿಸಲಶಕ್ಯನು, ಐಶ್ವರ್ಯವನ್ನು ಕೊಡುವವನು, ಜಯವನ್ನು ಉಂಟುಮಾಡುವವನು, ಧರ್ಮವನ್ನು ರಕ್ಷಿಸುವವನು, ಇಂತಹ ನಿನಗೆ ನಮಸ್ಕಾರವು.

ಪೂಜಯಿತ್ವಾ ತತಃ ಖಡ್ಗಂ ಓಂ ಕ್ರೀಂ ಫಡಿತಿ ಮಂತ್ರಕೈಃ ।
ಗೃಹೀತ್ವಾ ವಿಮಲಂ ಖಡ್ಗಂ ಛೇದಯೇದ್ಬಲಿಮುತ್ತಮಂ ॥ ೧೮ ॥

ತತೋ ಬಲೀನಾಂ ರುಧಿರಂ ತೋಯಸೈಂಧವಸತ್ಫಲೈಃ ।
ಮಧುಭಿರ್ಗಂಧಪುಷ್ಪೈಶ್ಚ ಅಧಿವಾಸ್ಯ ಪ್ರಯತ್ನತಃ ॥ ೧೯ ॥

ಓಂ ಐಂ ಕ್ರೀಂ ಶ್ರೀಂ ಕೌಶಿಕೀತಿ ರುಧಿರಂ ದಾಪಯಾಮಿ ತೇ ।
ಸ್ಥಾನೇ ನಿಯೋಜಯೇದ್ರಕ್ತಂ ಶಿರಶ್ಚ ಸಪ್ರದೀಪಕಂ ॥ ೨೦ ॥

ಏವಂ ದತ್ವಾ ಬಲಿಂ ಪೂರ್ಣಂ ಫಲಂ ಪ್ರಾಪ್ನೋತಿ ಸಾಧಕಃ ।
ಹೀನಂ ಸ್ಯಾದ್ಧೀನತಾ ಮೂಲಂ ನಿಷ್ಫಲಂ ಸ್ಯಾದ್ವಿಪರ್ಯಯಾತ್ ॥ ೨೧ ॥

ಬಲಿದಾನೇ ತು ದುರ್ಗಾಯಾ ಅನ್ಯತ್ರಾಪಿ ವಿಧಿಸ್ಸದಾ ।
ಅಯಮೇವ ಪ್ರಯೋಕ್ತವ್ಯಃ ಸದ್ಭಿರ್ವೇತಾಲಭೈರವೌ ॥ ೨೨ ॥

---

೧೮. ಕತ್ತಿಯನ್ನು ಪೂಜಿಸಿದನಂತರ, ಓಂ ಕ್ರೀಂ ಫಟ್ ಎಂಬ ಮಂತ್ರದಿಂದ ಕತ್ತಿಯನ್ನು ತೆಗೆದುಕೊಂಡು ನಿರ್ಮಲವಾಗಿ ಹೊಳೆಯುತ್ತಲಿರುವ ಆ ಕತ್ತಿಯಿಂದ ಬಲಿಯನ್ನು ಕತ್ತರಿಸಬೇಕು.

೧೯-೨೦. ಆಮೇಲೆ ಬಲಿಯನ್ನು ಕೊಟ್ಟಿರುವ ಪ್ರಾಣಿಯ ರಕ್ತವನ್ನು ನೀರು, ಉಪ್ಪು, ಮದ್ಯ, ಗಂಧ, ಹೂವು, ಮತ್ತು ಇತರಪದಾರ್ಥಗಳೊಡನೆ ಸೇರಿಸಿ, ಭಕ್ತಿ ಪೂರ್ವಕವಾಗಿ ಓಂ, ಐಂ, ಕ್ರೀಂ, ಶ್ರೀಂ, ಕೌಶಿಕೀ ನಿನಗೆ ರಕ್ತವನ್ನು ಕೊಡುತ್ತೀನೆ ಎಂದು ಹೇಳಿ ಆ ರಕ್ತವನ್ನು ಸರಿಯಾದ ಸ್ಥಳದಲ್ಲಿ ಇರಿಸಬೇಕು. ಕತ್ತರಿಸಿದ ತಲೆಯನ್ನು ಇರಿಸಿ ಅದರಮೇಲೆ ದೀಪವನ್ನು ಇರಿಸಬೇಕು.

೨೧. ಮಂತ್ರಸಾಧನೆ ಮಾಡುವವನು ಹೀಗೆ ಬಲಿಯನ್ನು ಕೊಟ್ಟಲ್ಲಿ ಸಂಪೂರ್ಣವಾದ ಫಲವನ್ನು ಹೊಂದುವನು. ಕಡಿಮೆಮಾಡಿದರೆ ಫಲವು ಕಡಿಮೆಯಾಗುವುದು. ವ್ಯತ್ಯಾಸ ಮಾಡಿದರೆ ಪ್ರಯೋಜನವಿಲ್ಲದೆ ಹೋಗುವುದು.

೨೨. ದುರ್ಗಾದೇವಿಗೆ ಬಲಿಯನ್ನು ಕೊಡುವಾಗಲೂ, ಇತರ ದೇವತೆಗಳಿಗೆ ಬಲಿಯನ್ನು ಕೊಡುವಕಡೆಯಲ್ಲಿಯೂ ಸಹ ಈ ನಿಯಮದಿಂದಿರುವ ಶಾಸ್ತ್ರವನ್ನು ಸತ್ಪುರುಷರಾದವರು ಯಾವಾಗಲೂ ಅನುಸರಿಸಬೇಕು.

ಜಪಂ ಸಮಾರಭೇತ್ಪಶ್ಚಾತ್ಪೂರ್ವವದ್ಧ್ಯಾನಮಾಶ್ರಿತಃ ।
ದಸ್ತೇನ ಸ್ರಜಮಾದಾಯ ಚಿಂತಯೇನ್ಮನಸಾ ಶಿವಾಂ ॥ ೨೩ ॥

ಚಿಂತಯಿತ್ವಾ ಗುರುಂ ಮೂರ್ಧ್ನಿ ಯಥಾ ವರ್ಣಾದಿಕಂ ಭವೇತ್ ।
ಮಂತ್ರಂ ಚ ಕೇಂಚಿತ್ತೋ ಧ್ಯಾತ್ವಾ ಸಿತವರ್ಣಂ ಹಿರಣ್ಮಯಂ ॥ ೨೪ ॥

ಮಹಾಮಾಯಾಂ ಚ ಹೃದಯೇ ಚಾತ್ಮಾನಂ ಗುರುಪಾದಯೋಃ ।
ಆಚಕ್ಷೀತ ತತಃ ಪಶ್ಚಾದ್ಗುರೂರ್ಮಂತ್ರಸ್ಯ ಚಾತ್ಮನಃ ॥ ೨೫ ॥

ದೇವ್ಯಾಶ್ಚಾಪ್ಯೇಕತಾಂ ಧ್ಯಾತ್ವಾ ಸುಷುಮ್ನಾವರ್ತ್ಮನಾ ತತಃ ।
ತತ್ತ್ವಸ್ವರೂಪಮೇಕಂ ತು ಷಟ್ಚಕ್ರಂ ಪ್ರತಿಲಂಬಯೇತ್ ॥ ೨೬ ॥

ಷಟ್ಚಕ್ರೇಽಪಿ ಮಹಾಮಾಯಾಂ ಕ್ಷಣಂ ಧ್ಯಾತ್ವಾ ಪ್ರಯತ್ನತಃ ।
ಲಂಬಯೇನ್ಮೂಲಮಂತ್ರೇಣ ವಾದಿಶೋಡಷಚಕ್ರಕಂ ॥ ೨೭ ॥

---

೨೩. ಅನಂತರದಲ್ಲಿ ಮೊದಲಿನಂತೆಯೇ ಧ್ಯಾನಮಾಡುತ್ತಾ ಕೈಯಲ್ಲಿ ಹೂವಿನ ಹಾರವನ್ನು ಹಿಡಿದುಕೊಂಡು ದೇವಿಯನ್ನು ಮನಸ್ಸಿನಿಂದ ಧ್ಯಾನಮಾಡುತ್ತಾ ಜಪವನ್ನು ಮಾಡಲು ಪ್ರಾರಂಭಿಸಬೇಕು.

೨೪-೨೫. ತನ್ನ ಗುರುವನ್ನು ಚಿತ್ತದಲ್ಲಿ ಧ್ಯಾನಮಾಡಿ ಮಂತ್ರದ ಅಕ್ಷರಗಳು ಎಷ್ಟಿರುವವೋ ಅವುಗಳಿಲ್ಲದರಿಂದಲೂ, ಕೂಡಿರುವ ಮಂತ್ರವನ್ನು ಶುಭ್ರವರ್ಣವುಳ್ಳದ್ದನ್ನಾಗಿಯೂ, ಸುವರ್ಣಮಯವಾಗಿರುವಂತೆಯೂ ಧ್ಯಾನಮಾಡಬೇಕು. ಮಹಾಮಾಯೆಯನ್ನು ತನ್ನ ಹೃದಯದಲ್ಲಿಯೂ ತನ್ನನ್ನು ಗುರುವಿನ ಪಾದದಲ್ಲಿರುವಂತೆಯೂ ಭಾವನೆಯನ್ನು ಮಾಡಬೇಕು.

೨೬. ಅನಂತರದಲ್ಲಿ ಗುರುವೂ, ತಾನೂ, ದೇವಿಯೂ ಸಹ ಒಂದೇ ಎಂದು ಧ್ಯಾನಮಾಡಿ ಸುಷುಮ್ನಾಮಾರ್ಗದಿಂದ ತತ್ತ್ವಸ್ವರೂಪವು ಇರುವುದೆಂದು ತಿಳಿದು ಅವನ್ನು ಷಟ್ಚಕ್ರದಲ್ಲಿ ಧ್ಯಾನಮಾಡಬೇಕು.

೨೭. ಆರು ಚಕ್ರದಲ್ಲಿಯೂ ಮಹಾಮಾಯಾಸ್ವರೂಪದಿಂದಿರುವ ದೇವಿಯನ್ನು ಭಕ್ತಿಪೂರ್ವಕವಾಗಿ ಧ್ಯಾನಮಾಡಿ ಅಕಾರಾದಿ ವರ್ಣಗಳಿಂದ ಕೂಡಿರುವ ಹದಿನಾರು ದಳಗಳುಳ್ಳ ಚಕ್ರವನ್ನೂ ಮೂಲಮಂತ್ರದಿಂದ ಭಾವನೆ ಮಾಡಬೇಕು.

ಆದಿಷೋಡಶಚಕ್ರಸ್ಥಾಂ ಸಾಧಕಾನಂದಕಾರಿಣೀಂ ।
ಚಿಂತಯೇತ್ ಸಾಧಕೋ ದೇವೀಂ ಜಪಕರ್ಮ ಸಮಾರಭೇತ್ ॥ ೨೮ ॥

ಭ್ರುವೋರುಪರಿ ನಾಡೀನಾಂ ತ್ರಯಾಣಾಂ ಪ್ರಾಂತ ಉಚ್ಯತೇ ।
ತತ್ಪ್ರಾಂತಂ ತ್ರಿಪಥಸ್ಥಾನಂ ಷಟ್ಕೋಣಂ ಚತುರಂಗುಲಂ ॥ ೨೯ ॥

ರಕ್ತವರ್ಣಂತು ಯೋಗಜ್ಞೈರಾಜ್ಞಾಚಕ್ರಮಿತೀರ್ಯತೇ ।
ಕಂಠೇ ತ್ರಯಾಣಾಂ ನಾಡೀನಾಂ ವೇಷ್ಟನಂ ವಿದ್ಯತೇ ನೃಣಾಂ ॥ ೩೦ ॥

ಸುಷುಮ್ನೇಡಾಪಿಂಗಳಾನಾಂ ಷಟ್ಕೋಣಂ ತತ್ ಷಡಂಗುಲಂ ।
ತತ್ ಷಟ್ಚಕ್ರಮಿತಿ ಪ್ರೋಕ್ತಂ ಶುಕ್ಲಂ ಕಂಠಸ್ಯ ಮಧ್ಯಗಂ ॥ ೩೧ ॥

---

೨೮. ಅಕಾರಾದಿ ಸ್ವರಾತ್ಮಕವಾದ ಷೋಡಶದಳವುಳ್ಳ ಚಕ್ರದಲ್ಲಿ ಸಾಧಕರ ಸಂತೋಷದಾಯಿನಿಯಾದ ದೇವಿಯನ್ನು ಸಾಧಕನು ಮನಸ್ಸಿನಿಂದ ಧ್ಯಾನಮಾಡುತ್ತಾ ಜಪವನ್ನು ಪ್ರಾರಂಭಿಸಬೇಕು.

೨೯. ಹುಬ್ಬುಗಳ ಮೇಲ್ಭಾಗವು ಮೂರು ನಾಡಿಗಳಿಗೂ ಸ್ಥಾನವಾಗಿರುವುದು. ಅದನ್ನು ತ್ರಿಪಥ ಎಂದರೆ ಮೂರು ದಾರಿಯುಳ್ಳದ್ದೆಂದು ಹೇಳುವರು. ಅದು ಆರು ಕೋಣಗಳುಳ್ಳದ್ದಾಗಿ ನಾಲ್ಕು ಅಂಗುಲ ವಿಸ್ತಾರವಾಗಿ ಕೆಂಪುಬಣ್ಣದಿಂದ ಕೂಡಿಕೊಂಡು ಆಜ್ಞಾಚಕ್ರವೆಂಬ ಹೆಸರಿನಿಂದ ಪ್ರಸಿದ್ಧವಾಗಿರುವುದೆಂದು ಯೋಗವನ್ನು ತಿಳಿದವರು ಹೇಳುವರು.

೩೦. ಮನುಷ್ಯರ ಕಂಠಮಧ್ಯದಲ್ಲಿ ಇಡಾ, ಪಿಂಗಳಾ, ಸುಷುಮ್ನಾ ಎಂಬ ಮೂರು ನಾಡಿಗಳು ಸುತ್ತಿಕೊಂಡು ಇರುತ್ತವೆ. ಆ ವೇಷ್ಟನವು ಆರು ಕೋಣವುಳ್ಳದ್ದಾಗಿ ಆರು ಅಂಗುಲ ವಿಸ್ತಾರವಾಗಿರುವುದು.

೩೧-೩೨. ಆ ಪ್ರದೇಶವು ಷಟ್ಚಕ್ರವೆನ್ನಿಸಿಕೊಳ್ಳುವುದು. ಇದು ಶುಭ್ರವಾದ ಕಂಠದ ಮಧ್ಯದಲ್ಲಿರುವುದು. ಮೂರು ನಾಡಿಗಳೂ ಹೃದಯದಲ್ಲಿ ಒಂದಾಗಿ ಸೇರುವುದು. ಆ ಪ್ರದೇಶವು ಎಂಟಿನಾರು ಕೋಣವುಳ್ಳದ್ದಾಗಿ ಏಳು ಅಂಗುಲ ಅಗಲತೆಯುಳ್ಳದ್ದಾಗಿರುವುದು.

ತ್ರಯಾಣಾಮಥ ನಾಡೀನಾಂ ಹೃದಯೇ ಚೈಕತಾ ಭವೇತ್ ।
ತತ್ಸ್ಥಾನಂ ಷೋಡಶಾರಂ ಸ್ಯಾತ್ಸಪ್ತಾಂಗುಲಪ್ರಮಾಣತಃ ॥ ೩೨ ॥

ತತ್ಪ್ರಯುಕ್ತಂ ತು ಯೋಗಜ್ಞೈರಾದಿಷೋಡಶಚಕ್ರಕಂ ।
ಧ್ಯಾನಾನಾಮಥ ಮಂತ್ರಾಣಾಂ ಚಿಂತನಸ್ಯ ಜಪಸ್ಯ ಚ ॥ ೩೩ ॥

ಯಸ್ಮಾದಾದ್ಯಂ ತು ಹೃದಯಂ ತಸ್ಮಾದಾದೀತಿ ಕಥ್ಯತೇ ।
ಜಪಾದೌ ಪೂಜಯೇನ್ಮಾಲಾಂ ತೋಯೈರಭ್ಯುಕ್ಷ್ಯ ಯತ್ನತಃ ॥ ೩೪ ॥

ನಿಧಾಯ ಮಂಡಲಸ್ಯಾಂತಃ ಸವ್ಯಹಸ್ತಗತಾಂ ಚ ವಾ ।
ಓಂ ಮಾಲೇ ಮಾಲೇ ಮಹಾಮಾಯೇ ಸರ್ವಶಕ್ತಿಸ್ವರೂಪಿಣೀ ॥ ೩೫ ॥

ಚತುರ್ವರ್ಗಸ್ತ್ವಯಿ ನ್ಯಸ್ತಸ್ತಸ್ಮಾನ್ಮೇ ಸಿದ್ಧಿದಾ ಭವ ।
ಪೂಜಯಿತ್ವಾ ತತೋ ಮಾಲಾಂ ಗೃಹ್ಣೀಯಾದ್ದಕ್ಷಿಣೇ ಕರೇ ॥ ೩೬ ॥

ಆಪ್ರಕಾರವಾಗಿರುವ ಪ್ರದೇಶವನ್ನು ಆನಿಚಕ್ರವೆಂತಲೂ, ಷೋಡಶಚಕ್ರವೆಂತಲೂ ಯೋಗಶಾಸ್ತ್ರವನ್ನು ಬಲ್ಲವರು ಕರೆಯುವರು.

೩೩. ಧ್ಯಾನಮಾಡುವುದಕ್ಕೂ ಮತ್ತು ಮಂತ್ರಗಳನ್ನು ಜಪನಾಡುವುದಕ್ಕೂ ಸಹ ಈ ಹೃದಯವು ಮುಖ್ಯವಾಗಿರುವುದರಿಂದ ಇದಕ್ಕೆ ಆನಿಚಕ್ರವೆಂದು ಹೆಸರು ಬಂದಿರುತ್ತದೆ.

೩೪. ಜಪವನ್ನು ಮಾಡುವುದಕ್ಕೆ ಮೊದಲು ಪ್ರಯತ್ನಪೂರ್ವಕವಾಗಿ ಮಾಲಿಕೆಯನ್ನು ನೀರಿನಿಂದ ಪ್ರೋಕ್ಷಿಸಿ ಮಂಡಲದ ಒಳಗಡೆಯಲ್ಲಿ ಇಟ್ಟಾಗಲೀ ಅಥವಾ ತನ್ನ ಎಡಗೈಯಲ್ಲಿ ಹಿಡಿದುಕೊಂಡಾಗಲೀ ಅದನ್ನು ಪೂಜೆಮಾಡಬೇಕು.

೩೫-೩೬. ಎಲ್ಲಿ ಮಾಲೆಯೇ ನೀನು ಮಹಾಮಾಯೆಯಾಗಿಯೂ, ಸರ್ವಶಕ್ತಿ ಸ್ವರೂಪಿಣಿಯಾಗಿಯೂ ಇರುವೆ. ನಿನ್ನಲ್ಲಿ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳು ಇರುವುವು. ಆದುದರಿಂದ ನೀನು ನನಗೆ ಸಿದ್ಧಿಯನ್ನು ಕೊಡು. ಹೀಗೆಂದು ಹೇಳುವ ಓಂಕಾರಪೂರ್ವಕವಾದ ಮಂತ್ರದಿಂದ ಮಾಲಿಕೆಯನ್ನು ಪೂಜಿಸಿ ಬಲಗೈಯಲ್ಲಿ ಹಿಡಿದುಕೊಳ್ಳಬೇಕು.

ಮಧ್ಯಮಾಯಾ ಮಧ್ಯಭಾಗೇ ವರ್ಜಯಿತ್ವಾಥ ತರ್ಜನೀಂ ।
ಅನಾಮಿಕಾಕನಿಷ್ಠಾಭ್ಯಾಂ ಯುತಾಯಾ ನಮ್ರಭಾಗತಃ ॥ ೩೭ ॥

ಸ್ಥಾಪಯಿತ್ವಾ ತತ್ರ ಮೂಲಾಮಂಗುಷ್ಠಾಗ್ರೇಣ ತದ್ಗತಂ ।
ಪ್ರತ್ಯೇಕಂ ಬೀಜಮಾದಾಯ ಜಪ್ಯಾದೂರ್ಧ್ವೇನ ಭೈರವ ॥ ೩೮ ॥

ಪ್ರತಿವಾರಂ ಪಠೇನ್ಮಂತ್ರಂ ಶನೈರೋಷ್ಠಂ ಚ ಚಾಲಯೇತ್ ।
ಮೂಲಾಬೀಜಂ ತು ಜಪ್ತವ್ಯಂ ಸ್ಪೃಶೇನ್ನ ಹಿ ಪರಸ್ಪರಂ ॥ ೩೯ ॥

ಪೂರ್ವಜಾಪಪ್ರಯುಕ್ತೇನ ನೈವಾಂಗುಷ್ಠೇನ ಭೈರವ ।
ಪೂರ್ವಬೀಜಂ ಜಪನ್ ಯಸ್ತು ಪರಬೀಜಂ ಚ ಸಂಸ್ಪೃಶೇತ್ ॥ ೪೦ ॥

ಅಂಗುಷ್ಠೇನ ಭವೇತ್ತಸ್ಯ ನಿಷ್ಫಲಸ್ತಸ್ಯ ತಜ್ಜಪಃ ।
ಮೂಲಾಂ ಸ್ವಹೃದಯಾಸನ್ನೇ ಧೃತ್ವಾ ದಕ್ಷಿಣಪಾಣಿನಾ ॥ ೪೧ ॥

೩೭-೩೮. ಎಲೈ ಭೈರವನೇ, ಮಧ್ಯದ ಬೆರಳಿನ ಮಧ್ಯಭಾಗದಲ್ಲಿ ತರ್ಜನೀ ಬೆರಳನ್ನು ಬಿಟ್ಟು, ಅನಾಮಿಕಾ ಕನಿಷ್ಠಿಕಾ ಈ ಎರಡು ಬೆರಳುಗಳನ್ನೂ ಸೇರಿಸಿ ಸ್ವಲ್ಪ ಬಗ್ಗಿರುವಂತೆ ಆ ಮೂಲೆಯನ್ನು ಅಂಗುಷ್ಠದ ತುದಿಯಲ್ಲಿ ಹಿಡಿದುಕೊಂಡು ಅದರಲ್ಲಿರುವ ಬೀಜಗಳನ್ನು ಬೇರೆಬೇರೆಯಾಗಿ ಎಣಿಸುತ್ತಾ ಊರ್ಧ್ವಮುಖವಾಗಿ ಜಪವನ್ನು ಮಾಡಬೇಕು.

೩೯. ಪ್ರತಿಯೊಂದುಸಾರಿಯೂ ತುಟಿಗಳನ್ನು ಮೆಲ್ಲಗೆ ಅಲ್ಲಾಡಿಸುತ್ತಾ ಮಂತ್ರವನ್ನು ಉಚ್ಚರಿಸಬೇಕು. ಮೂಲೆಯ ಬೀಜಗಳು ಒಂದಕ್ಕೊಂದು ತಗಲದಂತೆ ಇರಬೇಕು.

೪೦. ಹಿಂದಿನಸಾರಿ ಜಪಮಾಡಿದ ಬೀಜವನ್ನು ಅಂಗುಷ್ಠದಿಂದ ಪುನಃ ಮುಟ್ಟಬಾರದು. ಎಲೈ ಭೈರವನೇ, ಯಾವ ಮನುಷ್ಯನು ಅಂಗುಷ್ಠದಿಂದ ಹಿಂದಿನ ಬೀಜವನ್ನು ಮುಟ್ಟಿ ಜಪನಾಡುವನೋ ಅವನ ಜಪವು ನಿಷ್ಪ್ರಯೋಜನವಾಗುವುದು.

೪೧. ಮೂಲೆಯನ್ನು ತನ್ನ ಹೃದಯದ ಸಮೀಪಪ್ರದೇಶದಲ್ಲಿ ಇರಿಸಿಕೊಂಡು ಬಲಗೈಯಿಂದ ಜಪವನ್ನು ಮಾಡಬೇಕು. ಜಪವನ್ನು ಮಾಡುವಾಗ ದೇವಿಯನ್ನು ಧ್ಯಾನಮಾಡಬೇಕು. ಎಡಗೈಯಿಂದ ಜಪಸರವನ್ನು ಮುಟ್ಟಬಾರದು.

ದೇವೀಂ ವಿಚಿಂತಯನ್ ಜಪ್ಯಂ ಕುರ್ಯಾದ್ವಾಮೇನ ನ ಸ್ಪೃಶೇತ್ ।
ಸ್ಫಟಿಕೇಂದ್ರಾಕ್ಷರುದ್ರಾಕ್ಷೈಃ ಪುತ್ರಜೀವಸಮುದ್ಭವೈಃ ॥ ೪೨ ॥

ಸುವರ್ಣಮಣಿಭಿಃ ಸಮ್ಯಕ್ಪ್ರವಾಳೈರಥವಾಬ್ಜಜೈಃ ।
ಅಕ್ಷಮಾಲಾ ತು ಕರ್ತವ್ಯಾ ದೇವೀಪ್ರೀತಿಕರಾ ಪರಾ ॥ ೪೩ ॥

ಜಪೇದುಪಾಂಶು ಸತತಂ ಕುಶಗ್ರಂಥ್ಯಾಥ ಪಾಣಿನಾ ।
ಮಾಲಾಬೀಜೇಷು ಸರ್ವೇಷು ರುದ್ರಾಕ್ಷೋ ಮತ್ಪ್ರಿಯಾಪ್ರಿಯಃ ॥ ೪೪ ॥

ರುದ್ರಪ್ರೀತಿಕರೀ ಯಸ್ಮಾತ್ತೇನ ರುದ್ರಾಕ್ಷರೋಚಿನೀ ।
ಪ್ರವಾಳೈರಥವಾ ಕುರ್ಯಾದಷ್ಟಾವಿಂಶತಿಬೀಜಕೈಃ ॥ ೪೫ ॥

ಪಂಚಪಂಚಾಶತಾ ವಾಪಿ ನ ನ್ಯೂನೈರಧಿಕೈಶ್ಚ ಯಾ ।
ರುದ್ರಾಕ್ಷೈರ್ಯದಿ ಜಪ್ಯೇತ ಇಂದ್ರಾಕ್ಷೈಃ ಸ್ಫಾಟಿಕೈಸ್ತಥಾ ॥ ೪೬ ॥

೩೨-೪೩. ಸ್ಫಟಿಕ, ಇಂದ್ರಾಕ್ಷ, ರುದ್ರಾಕ್ಷ, ಪುತ್ರಜೀವಿಮಣಿ, ಚಿನ್ನದಮಣಿ, ಹವಳ, ತಾವರೆಮಣಿ, ಇವುಗಳಿಂದ ಜಪಸರವನ್ನು ಮಾಡಬೇಕ. ಹೀಗೆ ಮಾಡಿದ ಜಪಸರವು ದೇವಿಗೆ ಪ್ರೀತಿಯನ್ನುಂಟುಮಾಡುವುದಾಗಿಯೂ, ಮಂಗಳಕರವಾಗಿಯೂ ಇರುವುದು.

೪೪. ದರ್ಭೆಯಿಂದ ಮಾಡಿದ ಪವಿತ್ರವನ್ನು ಧರಿಸಿಗೊಂಡು ಕೈಯಿಂದ ಯಾವಾಗಲೂ ಮೆಲ್ಲಗೆ ಎಂದರೆ ಘಟ್ಟಿಯಾಗಿ ಉಚ್ಚರಿಸದೆ ಜಪವನ್ನು ಮಾಡಬೇಕು ಎಲ್ಲಾವಿಧವಾದ ಜಪಸರಗಳಲ್ಲಿ ರುದ್ರಾಕ್ಷಿಯೇ ನನ್ನ ಪ್ರೀತಿಪಾತ್ರಳಾದ ದೇವಿಗೆ ಪ್ರೀತಿಯನ್ನುಂಟುಮಾಡುವುದು.

೪೫. ರುದ್ರನಿಗೆ ಪ್ರೀತಿಯನ್ನುಂಟುಮಾಡುವ ಕಾರಣ ರುದ್ರಾಕ್ಷವೆಂದೇ ಪ್ರಸಿದ್ಧಿಹೊಂದಿತು. ಇಪ್ಪತ್ತೆಂಟು ಹವಳದ ಮಣಿಗಳಿಂದಲಾದರೂ ಜಪಸರವನ್ನು ಮಾಡಬಹುದು.

೪೬-೪೭. ಜಪಸರವು ಐವತ್ತೈದು ಮಣಿಗಳಿಂದ ಕೂಡಿರಬೇಕು, ಹೆಚ್ಚಾಗಿಯೂ ಇರಕೂಡದು, ಕಮ್ಮಿಯಾಗಿಯೂ ಇರಕೂಡದು. ಆ ಸರವನ್ನು ರುದ್ರಾಕ್ಷ ಬೀಜಗಳಿಂದಾಗಲೀ, ಇಂದ್ರಾಕ್ಷಿ, ಸ್ಫಟಿಕಮಣಿ ಇವುಗಳಿಂದಾಗಲೀ ಮಾಡಿರಬೇಕು. ಈ ಸರದ

ನಾನ್ಯನ್ಮಧ್ಯೇ ಪ್ರಯೋಕ್ತವ್ಯಂ ಪುತ್ರಜೀವಾದಿಕಂ ಚ ಯತ್ ।
ಯದ್ಯನ್ಯತ್ತು ಪ್ರಯುಜ್ಯೇತ ಮಾಲಾಯಾಂ ಜಪಕರ್ಮಣಿ ॥ ೪೭ ॥

ತಸ್ಯ ಕಾಮಂ ಚ ಮೋಕ್ಷಂ ಚ ನ ದದಾತಿ ಪ್ರಿಯಂಕರೀ ।
ವಿಶ್ರೀಭಾವಂ ತತೋ ಯಾತಿ ಚಂಡಾಲೈಃ ಪಾಪಕರ್ಮಭಿಃ ।
ಜನ್ಮಾಂತರೇ ಜಾಯತೇ ನ ವೇದವೇದಾಂಗಪಾರಗಃ ॥ ೪೮ ॥

ಏಕೊ ಮೇರುಸ್ತತ್ರ ದೇಯಃ ಸರ್ವೇಭ್ಯಃ ಸ್ಥೂಲಸಂಭವಃ ।
ಆದ್ಯಂ ಸ್ಥೂಲಂ ತತಸ್ತಸ್ಮಾನ್ನ್ಯೂನಂ ನ್ಯೂನತರಂ ತಥಾ ॥ ೪೯ ॥

ವಿನ್ಯಸೇತ್ಕ್ರಮತಸ್ತಸ್ಮಾತ್ಸರ್ವಾಕಾರಾ ಹಿ ಸಾ ಯತಃ ।
ಬ್ರಹ್ಮಗ್ರಂಥಿಯುತಂ ಕುರ್ಯಾತ್ಪ್ರತಿಬೀಜಂ ಯಥಾಸ್ಥಿತಂ ॥ ೫೦ ॥

ಮಧ್ಯದಲ್ಲಿ ಪುತ್ರಜೀವ ಮೊದಲಾದ ಬೇರೆ ಯಾವಮಣಿಯೂ ಇರಕೂಡದು. ಹಾಗೇ ನಾದರೂ ಜಪಸರದಲ್ಲಿ ಬೇರೆಮಣಿ ಇದ್ದರೆ ದೇವಿಯು ಆ ಸಾಧಕನಿಗೆ ಇಷ್ಟಾರ್ಥವನ್ನೂ ಮೋಕ್ಷವನ್ನೂ ಕೊಡುವುದಿಲ್ಲ.

೪೮. ಸರಿಯಾದ ಜಪಸರದಿಂದ ಜಪಮಾಡದಿದ್ದರೆ ಅವನು ಮುಂದಿನ ಜನ್ಮದಲ್ಲಿ ಕೆಟ್ಟಕೆಲಸವನ್ನುಮಾಡುವ ಚಂಡಾಲರೊಡನೆ ಸೇರುವನು. ಮತ್ತು ನೇವ ವೇದಾಂಗಗಳಲ್ಲಿ ಜ್ಞಾನವನ್ನು ಪಡೆಯುವುದಿಲ್ಲ.

೪೯. ಜಪಮಾಲೆಯಲ್ಲಿ ಎಲ್ಲಾಮಣಿಗಳಿಗಿಂತಲೂ ದಪ್ಪನಾದ ಒಂದುಮಣಿಯನ್ನು ಒಂದು ಮೇರುವಿನಂತೆ ಸೇರಿಸಬೇಕು. ಮೊದಲನೆಯದು ದಪ್ಪದು. ಎರಡನೆಯದು ಮೂರನೆಯದು ಮೊದಲಾಗಿ ಮಿಕ್ಕವುಗಳು ಅವುಗಳಿಗಿಂತ ಚಿಕ್ಕಚಿಕ್ಕವಾಗಿರಬೇಕು.

೫೦. ಆ ಜಪಮಾಲೆಯಲ್ಲಿ ಹಿಂದೆಹೇಳಿದ ಕ್ರಮದಿಂದ ಮಣಿಗಳನ್ನು ಸೇರಿಸಬೇಕು. ಆ ಜಪಮಾಲೆಯು ಎಲ್ಲಾ ದೇವತೆಗಳ ಆಕಾರವುಳ್ಳದ್ದಾಗಿರುವದು. ಆದುದರಿಂದ ಪ್ರತಿಯೊಂದು ಬೀಜವನ್ನೂ ಬ್ರಹ್ಮಗ್ರಂಥಿಯಿಂದ ಕೂಡಿರುವದನ್ನಾಗಿ ಮಾಡಬೇಕು.

ಅಥವಾ ಗ್ರಂಥಿರಹಿತಂ ದೃಢರಜ್ಜುಸಮನ್ವಿತಂ ।
ದ್ವಿರಾವೃತ್ತ್ಯಾಥ ಮಧ್ಯೇನ ಚಾರ್ಧಾ ವೃತ್ತ್ಯಾಂತದೇಶತಃ ॥ ೫೧ ॥

ಗ್ರಂಥಿಃ ಪ್ರದಕ್ಷಿಣಾವರ್ತಃ ಸ ಬ್ರಹ್ಮಗ್ರಂಥಿಸಂಜ್ಞಕಃ ।
ಆತ್ಮನಾ ಯೋಜಯೇನ್ಮಾಲಾಂ ನಾಮುಂತ್ರೋ ಯೋಜಯೇನ್ನರಃ ॥ ೫೨ ॥

ದೃಢಂ ಸೂತ್ರಂ ನಿಯುಂಜೀತ ಜಪೇ ತ್ರುಟ್ಯತಿ ನೋ ಯಥಾ ।
ಯಥಾ ಹಸ್ತಾನ್ನ ಚ್ಯವೇತ ಜಪತಃ ಸ್ರಕ್ ತಥಾ ಚರೇತ್ ॥ ೫೩ ॥

ಹಸ್ತಚ್ಯುತಾಯಾಂ ವಿಘ್ನಂ ಸ್ಯಾಚ್ಛಿನ್ನಾಯಾಂ ಮರಣಂ ಭವೇತ್ ।
ಏವಂ ಯಃ ಕುರುತೇ ಮಾಲಾಂ ಜಪಂ ಚ ಜಪಕೋವಿದಃ ॥ ೫೪ ॥

---

೫೧. ಜಪಮಾಲೆಯು ಗಟ್ಟಿಯಾದ ಹುರಿಯಿಂದ ಕಟ್ಟಿದ್ದಾಗಿರಬೇಕು. ಮಧ್ಯದಲ್ಲಿ ಗಂಟುಹಾಕಿರಬಾರದು. ದಾರವು ಎರಡು ಎಳೆಯುಳ್ಳದ್ದಾಗಿಯಾಗಲೀ ಮಧ್ಯಭಾಗದಿಂದ ಕೊನೆಯವರಿಗೆ ಎರಡು ಎಳೆಯುಳ್ಳದ್ದಾಗಿಯಾಗಲೀ ಇರಬೇಕು.

೫೨. ಪ್ರದಕ್ಷಿಣಾಕಾರವಾಗಿ ಸುತ್ತಿಕೊಂಡಿರುವ ಗ್ರಂಥಿಯು ಬ್ರಹ್ಮಗ್ರಂಥಿಯೆನಿಸಿಕೊಳ್ಳುವುದು. ಜಪಮಾಲೆಯನ್ನು ತನ್ನಲ್ಲಿಯೇ ಲೀನವೆಂದು ಭಾವನೆಮಾಡಬೇಕು. ಮಂತ್ರ ಉಪದೇಶವಿಲ್ಲದವನು ತನ್ನಂತೆ ಜಪಮಾಲೆಯನ್ನು ಭಾವನೆ ಮಾಡಬಾರದು.

೫೩. ಜಪಸರದಲ್ಲಿ ಪ್ರತಿಯೊಂದು ಮಣಿಗೂ ಕಟ್ಟಿರುವ ದಾರವೋ ಅಥವಾ ತಂತಿಯೋ ಜಪಮಾಡುವಾಗ ಕೀಳದಿರುವಂತೆ ಗಟ್ಟಿಯಾಗಿರುವುದನ್ನು ನೋಡಿಕೊಂಡು ಅಂಥಾ ಜಪಮಾಲೆಯನ್ನು ಜಪಕ್ಕೆ ಇರಿಸಿಕೊಳ್ಳಬೇಕು. ಜಪಮಾಡುವ ಕಾಲದಲ್ಲಿ ಕೈಯಿನಿಂದ ಜಪಮಾಲೆಯು ಬೀಳದಿರುವಂತೆ ನೋಡಿಕೊಳ್ಳಬೇಕು.

೫೪. ಜಪಮಾಡುವ ಕಾಲದಲ್ಲಿ ಜಪಸರವು ಕೈಯಿಂದ ಬಿದ್ದರೆ ವಿಘ್ನವು ಉಂಟಾಗುವುದು. ಜಪಮಾಲೆಯು ಕೆತ್ತುಹೋದರೆ ಮರಣವು ಆಗುವುದು. ಆದುದರಿಂದ ಹಾಗೆ ಆಗದಂತೆ ನೋಡಿಕೊಳ್ಳಬೇಕು. ಯಾವನು ಮೇಲೆಹೇಳಿದ ಕ್ರಮವಂತೆ ಇರುವ ಜಪಸರವನ್ನು ಮಾಡಿಕೊಂಡು ಅದರಿಂದ ಜಪವನ್ನು ಮಾಡುವನೋ ಅವನು ಜಪಮಾಡುವುದರಲ್ಲಿ ಬುದ್ಧಿವಂತನಾದವನು. ಆವನು ಜಪಮಾಡಿದ್ದರಿಂದ ಇಷ್ಟವಾದ ಫಲವನ್ನು ಹೊಂದುವನು. ಕಡಿಮೆಯಾದಲ್ಲಿ ಎಂದರೆ ನಾನು ಹೇಳುವ ಕ್ರಮದಿಂದ ಜಪಮಾಲೆಯೂ, ಜಪಮಾಡುವುದೂ ಎರಡೂ ಇಲ್ಲದಿದ್ದರೆ, ಎಲ್ಲವೂ ವ್ಯತ್ಯಾಸವಾಗುವುದು.

ಸ ಪ್ರಾಪ್ನೋತೀಪ್ಸಿತಂ ಕಾಮಂ ಹೀನೇ ಸ್ಯಾತ್ತು ವಿಪರ್ಯಯಃ ।
ಅನ್ಯತ್ರಾಪಿ ಜಪೇನ್ಮಾಲಾಂ ಜಪ್ಯಂ ದೇವಮನೋಹರಂ ॥ ೫೫ ॥

ತಾದೃಶಸ್ಸಾಧಕಃ ಕುರ್ಯಾನ್ನಾನ್ಯಥಾ ತು ಕದಾಚನ ।
ಯಥಾಶಕ್ತಿ ಜಪಂ ಕುರ್ಯಾತ್ಸಂಖ್ಯಯೈವ ಪ್ರಯತ್ನತಃ ।
ಅಸಂಖ್ಯಾತಂ ಚ ಯಜ್ಜಪ್ತಂ ತಸ್ಯ ತನ್ನಿಷ್ಫಲಂ ಭವೇತ್ ॥ ೫೬ ॥

ಜಪ್ತ್ವಾ ಮಾಲಾಂ ಶಿರೋದೇಶೆ ಪ್ರಾಂಶುಸ್ಥಾನೇಽಥವಾ ನ್ಯಸೇತ್ ।
ಸ್ತುತಿಪಾಠಂ ತತಃ ಕುರ್ಯಾದಿಷ್ಟಂ ಕಾಮಂ ನಿವೇದ್ಯ ಚ ॥ ೫೭ ॥

ಸ್ತುತಿಶ್ಚಾಪಿ ಮಹಾಮಂತ್ರಂ ಸಾಧನಂ ಸರ್ವಕರ್ಮಣಾಂ ।
ವಕ್ಷ್ಯೇ ಯುವಾಂ ಮಹಾಭಾಗೌ ಸರ್ವಸಿದ್ಧಿಪ್ರದಾಯಕಂ ॥ ೫೮ ॥

---

೫೫. ಯಾವನು ಸರಿಯಾದ ಜಪಸರವನ್ನು ತನ್ನ ಇಷ್ಟವಾದ ದೇವರಿಗೆ ಪ್ರೀತಿಯುಂಟಾಗುವಹಾಗೆ ಯಾವವಿಧದಿಂದಲಾದರೂ ಜಪಮಾಡುವನೋ ಅಂಥವನನ್ನು ಮಂತ್ರಶಾಸ್ತ್ರಜ್ಞರು ಸಾಧಕನೆಂದೆನ್ನುವರು. ಇದಕ್ಕೆ ಪ್ರತಿಕೂಲನಾದವನು ಸಾಧಕನಲ್ಲವು. ಅಂಥವನಿಗೆ ಏನನ್ನೂ ಹೇಳಕೂಡದು.

೫೬. ಸಾಧಕನಾದವನು ಪ್ರಯತ್ನಪೂರ್ವಕವಾಗಿ ಯಾವುದಾದರೂ ಒಂದು ಸಂಖ್ಯೆಯನ್ನು ಕ್ಲಿಪ್ತಮಾಡಿಕೊಂಡು ತನ್ನ ಶಕ್ತಿಯು ಮಿಾರದಂತೆ ಜಪವನ್ನು ಮಾಡಬೇಕು. ಯಾವನು ಲೆಕ್ಕವಿಲ್ಲದ ಜಪವನ್ನು ಮಾಡುವನೋ ಅವನ ಆ ಜಪವು ಪ್ರಯೋಜನವಿಲ್ಲದ್ದಾಗುವುದು.

೫೭. ಜಪವನ್ನು ಮಾಡಿದನಂತರ ಜಪಮಾಲೆಯನ್ನು ತಲೆಯಮೇಲೆ ಇಟ್ಟುಕೊಳ್ಳಬೇಕು. ಅಥವಾ ರಹಸ್ಯವಾದ ಸ್ಥಳದಲ್ಲಿ ಇರಿಸಬೇಕು. ಬಳಿಕ ತನ್ನ ಅಪೇಕ್ಷೆಯನ್ನು ದೇವಿಯಹತ್ತಿರ ಹೇಳಿ ದೇವಿಯ ಸ್ತೋತ್ರವನ್ನು ಪಾಠಮಾಡಬೇಕು.

೫೮. ದೇವಿಯ ಸ್ತುತಿ ಎಂಬುವದು ಎಲ್ಲಾ ಕೆಲಸಗಳನ್ನೂ ಸಾಧನೆಮಾಡಿಕೊಡುವ ಮಹಾಮಂತ್ರವಾಗಿರುವುದು. ಇಂತಹ ಮಹಾಮಂತ್ರವನ್ನು ಅದೃಷ್ಟಶಾಲಿಗಳಾದ ನಿಮ್ಮಿಬ್ಬರಿಗೂ ನಾನು ಹೇಳುವೆನು.

ಸರ್ವಮಂಗಳಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಽಸ್ತು ತೇ ॥ ೫೯ ॥

ಸಪ್ತಧಾ ವರ್ತನಂ ಕೃತ್ವಾ ಸ್ತುತಿಮೇನಾಂ ಚ ಸಾಧಕಃ ।
ಪಂಚ ಪ್ರಣಾಮಾ೯ ಕೃತ್ವಾಥ ಐಂ ಹ್ರೀಂ ಶ್ರೀಮಿತಿ ಮಂತ್ರಕೈಃ ॥ ೬೦ ॥

ಅನ್ಯೇಷಾಂ ಪುರತಶ್ಚೈವ ಅಧಿಕಂ ವಾ ಯಥೇಚ್ಛಯಾ ।
ಯೋನಿಮುದ್ರಾಂ ತತಃ ಪಶ್ಚಾದ್ದರ್ಶಯಿತ್ವಾ ವಿಸರ್ಜಯೇತ್ ॥ ೬೧ ॥

ದ್ವೌ ಪಾಣೀ ಪ್ರಸೃತೀಕೃತ್ಯ ಕೃತ್ವಾ ಚೋತ್ತಾನಮಂಜಲಿಂ ।
ಅಂಗುಷ್ಠಾಗ್ರದ್ವಯಂ ನ್ಯಸ್ಯ ಕನಿಷ್ಠಾಗ್ರದ್ವಯೋಸ್ತತಃ ॥ ೬೨ ॥

ಅನಾಮಿಕಾಯಾಂ ವಾಮಸ್ಯ ತತ್ಕನಿಷ್ಠಾಂ ಪುರೋ ನ್ಯಸೇತ್ ।
ದಕ್ಷಿಣಸ್ಯಾನಾಮಿಕಾಯಾಂ ಕನಿಷ್ಠಾಂ ದಕ್ಷಿಣಸ್ಯ ಚ ॥ ೬೩ ॥

೫೯, ಎಲ್ಲಾವಿಧವಾದ ಮಂಗಳಗಳಿಗೂ ಮಂಗಳರೂಪಿಯಾಗಿಯೂ, ಎಲ್ಲಾ ವಿಧವಾದ ಕಾರ್ಯವನ್ನೂ ಸಾಧನೆಮಾಡಿಕೊಡುವವಳಾಗಿಯೂ, ಎಲ್ಲಾ ಪ್ರಾಣಿಗಳಿಗೂ ರಕ್ಷಕಳಾಗಿಯೂ, ಮೂರು ಕಣ್ಣುಗಳುಳ್ಳವಳಾಗಿಯೂ, ನಾರಾಯಿಣಿ ಎಂಬ ಹೆಸರಿನಿಂದ ಪ್ರಸಿದ್ಧಿಯನ್ನು ಹೊಂದಿರುವ ಶ್ರೀ ಗೌರಿಯ ರೂಪಿಣಿಯಾದ ನಿನಗೆ ನಮಸ್ಕಾರವು.

೬೦-೬೧. ಸರ್ವಮಂಗಳ ಮಾಂಗಲ್ಯೇ ಎಂಬ ಈ ಸ್ತೋತ್ರವನ್ನು ಸಾಧಕನಾದವನು ಏಳುಸಾರಿ ಆವೃತ್ತಿ ಮಾಡಬೇಕು. ಐಂ, ಹ್ರೀಂ, ಶ್ರೀಂ ಎಂಬ ಮಂತ್ರಗಳಿಂದ ಐದು ನಮಸ್ಕಾರಗಳನ್ನು ಮಾಡಬೇಕು. ಇತರ ದೇವತೆಗಳನ್ನೂ ಉದ್ದೇಶಮಾಡಿಕೊಂಡಾಗಲಿ ಇದಕ್ಕಿಂತ ಹೆಚ್ಚಾಗಿ ತನ್ನ ಇಷ್ಟಬಂದಷ್ಟು ನಮಸ್ಕಾರಗಳನ್ನು ಮಾಡಿ ಅನಂತರ ಯೋನಿಮುದ್ರೆಯನ್ನು ತೋರಿಸಿ ವಿಸರ್ಜನೆಯನ್ನು ಮಾಡಬೇಕು.

೬೨-೬೩. ಎರಡು ಕೈಗಳನ್ನೂ ಅಗಲಿಸಿ ಅಂಗೈಯಿನಿಂದ ಬೊಗಸೆಯನ್ನು ಮಾಡಿಕೊಳ್ಳಬೇಕು. ಎರಡು ಹೆಬ್ಬೆರಳಿನ ತುದಿಗಳನ್ನೂ ಎರಡು ಕಿರುಬೆರಳಿನ ತುದಿಗಳಿಗೆ ಸೇರಿಸಬೇಕು. ಎಡಗಡೆಯ ಅನಾಮಿಕ ಎಂಬ ಬೆಟ್ಟಿನ ಮುಂದುಗಡೆಯಲ್ಲಿ ಆ ಎಡಗಡೆಯ ಕೈಯಿಯ ಕಿರುಬೆರಳನ್ನು ಇಡಬೇಕು. ಅದರಂತೆ ಬಲಗೈಯಿಯ ಅನಾಮಿಕಾ ಎಂಬ ಬೆಟ್ಟಿನ ಮುಂದುಗಡೆ ಬಲಗೈಯಿನ ಕನಿಷ್ಠಿಕೆಯನ್ನು ಇರಿಸಬೇಕು.

ಅನಾಮಿಕಾಯಾಃ ಪೃಷ್ಠೇ ತು ಮಧ್ಯಮೇ ದ್ವೇ ನಿವೇಶಯೇತ್ ।
ದ್ವೇ ತರ್ಜನ್ಯಾ ಕನಿಷ್ಠಾಗ್ರೇ ತದಗ್ರೇಣೈವ ಯೋಜಯೇತ್ ॥ ೬೪ ॥

ಯೋನಿಮುದ್ರಾ ಸಮಾಖ್ಯಾತಾ ದೇವ್ಯಾಃ ಪ್ರೀತಿಕರೀ ಮತಾ ॥ ೬೫ ॥
ತ್ರಿವಾರಂ ದರ್ಶಯೇತ್ತಾಂ ತು ಮೂಲಮಂತ್ರೇಣ ಸಾಧಕಃ ।

ತಾಂ ಮುದ್ರಾಂ ಶಿರಸಿ ನ್ಯಸ್ಯ ಮಂಡಲಂ ವಿನ್ಯಸೇತ್ತತಃ ॥ ೬೬ ॥

ಐಶಾನ್ಯಾಮಗ್ರಹಸ್ತೇನ ದ್ವಾರಪದ್ಮವಿವರ್ಜಿತಂ ।
ತತ್ರ ನತ್ವಾ ರಕ್ತಚಂಡಾಂ ಹ್ರಾಂ ಹ್ರೀಂ ಮಂತ್ರೇಣ ಸಾಧಕಃ ॥ ೬೭ ॥

ರಕ್ತಚಂಡಾಯೈ ನಮ ಇತಿ ನಿರ್ಮಾಲ್ಯಂ ತತ್ರ ನಿಕ್ಷಿಪೇತ್ ।
ಉದಕೇ ತರುಮೂಲೇ ವಾ ನಿರ್ಮಾಲ್ಯಂ ತತ್ರ ಸಂತ್ಯಜೇತ್ ॥ ೬೮ ॥

ಆಯಾಯ ಅನಾಮಿಕಾಬೆಟ್ಟಿನ ಹಿಂದುಗಡೆ ಆಯಾಯ ಮಧ್ಯದ ಬೆರಳುಗಳನ್ನು ಇರಿಸಬೇಕು. ಆಯಾಯ ತರ್ಜನಿ ಬೆರಳುಗಳನ್ನು ಕಿರುಬೆರಳಿನ ತುದಿಗೆ ಸರಿಯಾಗಿ ತುದಿಯನ್ನು ಸೇರಿಸಬೇಕು. ಹೀಗೆ ನ್ಯಾಸಮಾಡಿದ ಮುದ್ರೆಯು ಯೋನಿಮುದ್ರೆ ಎಂದು ಎನ್ನಿಸಿಕೊಳ್ಳುವುದು. ಇದು ದೇವಿಗೆ ಬಹಳ ಪ್ರೀತಿಯನ್ನುಂಟುಮಾಡುವುದು

೬೬. ಸಾಧಕನಾದವನು ಮೂಲಮಂತ್ರದಿಂದ ಯೋನಿಮುದ್ರೆಯನ್ನು ಮೂರು ಆವರ್ತಿ ತೋರಿಸಬೇಕು. ಅನಂತರ ಆ ಮುದ್ರೆಯನ್ನು ತನ್ನ ತಲೆಯಲ್ಲಿರಿಸಿಕೊಂಡು ಮಂಡಲವನ್ನು ರಚಿಸಬೇಕು.

೬೭. ಸಾಧಕನಾದವನು ಆ ಮಂಡಲವನ್ನು ಈಶಾನ್ಯ ದಿಕ್ಕಿನಲ್ಲಿ ತನ್ನ ಕೈಯಿನ ತುದಿಯಿಂದ, ದ್ವಾರ ಪದ್ಮವೆರಡೂ ಇಲ್ಲದಿರುವಂತೆ ಬರೆದು ಅಲ್ಲಿ ಹ್ರಾಂ ಹ್ರೀಂ ಎಂಬ ಮಂತ್ರಗಳಿಂದ ರಕ್ತಚಂಡಿಕಾಯೈ ನಮಃ ಎಂದು ಹೇಳಿ ನಿರ್ಮಾಲ್ಯವನ್ನು ತ[illegible] ಪಾಕಬೇಕು.

೬೮-೬೯. ಸಾಧಕನಾದವನು ನಿರ್ಮಾಲ್ಯವನ್ನು ನೀರಿನಲ್ಲಿಯಾಗಲೀ, ಗಿಡದ ಬುಡದಲ್ಲಿಯಾಗಲಿ ಪಾಕಬೇಕು. ದೇವಿಯನ್ನು ಈಪ್ರಕಾರ ವಿಧಿಯಿಂದ ಯಾವನು

ಏವಂ ಯಃ ಪೂಜಯೇದ್ದೇವೀಂ ವಿಧಾನೇನ ಶಿವಾಂ ನರಃ ।
ಸೋಽಚಿರೇಣ ಲಭೇತ್ಕಾಮಾ ಸರ್ವಾನೇವ ಮನೋಗತಾನ್ ॥ ೬೯ ॥

ಅರ್ಧಲಕ್ಷಜಪಂ ಜಪ್ತ್ವಾ ಪ್ರಥಮಂ ಚೈವ ಸಾಧಕಃ ।
ಪುರಶ್ಚರೇದ್ವಿಶೇಷೇಣ ನಾನಾನೈವೇದ್ಯವೇದನೈಃ ॥ ೭೦ ॥

ಕುಂಡಂ ಮುಂಡಲವತ್ಕೃತ್ವಾ ಚಾಷ್ಟಮ್ಯಾಂ ಸಮುಪೋಷಿತಃ ।
ನವಮ್ಯಾಂ ಶುಕ್ಲೇಪಕ್ಷಸ್ಯ ರಜೋಭಿಃ ಪಂಚಭಿರ್ನರಃ ॥ ೭೧ ॥

ಪೂರ್ವವನ್ಮಂಡಲಂ ಕೃತ್ವಾ ಗುರುಪಿತ್ರೋಶ್ಚ ಸನ್ನಿಧೌ ।
ಅನೇನೈವ ವಿಧಾನೇನ ಪೂಜಯಿತ್ವಾ ತು ಚಂಡಿಕಾಂ ॥ ೭೨ ॥

ಸಹಿತೈರ್ಬಿಲ್ವಪತ್ರೈಶ್ಚ ಅಷ್ಟೋತ್ತರಶತತ್ರಯಂ ।
ತಿಲೈರ್ಹೋಮಂ ಚರೇತ್ತಸ್ಯಾಂ ಸಹಸ್ರತ್ರಿತಯಂ ಜಪೇತ್ ॥ ೭೩ ॥

ಪೂಜಿಸುವನೋ ಅವನು ಬೇಗನೆ ತನ್ನ ಮನಸ್ಸಿನಲ್ಲಿರುವ ಎಲ್ಲಾವಿಧವಾದ ಇಷ್ಟಾರ್ಥಗಳನ್ನೂ ಹೊಂದುವನು.

೭೦. ಸಾಧಕನಾದವನು ಮೊದಲು ಐವತ್ತುಸಾವಿರ ಜಪವನ್ನು ಮಾಡಿ ಬಳಿಕ ಅನೇಕ ವಿಧವಾದ ನೈವೇದ್ಯಗಳನ್ನು ದೇವಿಗೆ ಸಮರ್ಪಿಸಿ ಪುರಶ್ಚರಣವಿಧಿಯಿಂದ ಇನ್ನೂ ಹೆಚ್ಚಾಗಿ ಜಪವನ್ನು ಮಾಡಬೇಕು.

೭೧-೭೨. ಸಾಧಕನಾದವನು ಶುಕ್ಲಪಕ್ಷದ ಅಷ್ಟಮಿಯದಿನ ಉಪವಾಸಮಾಡಿ ಮಂಡಲಾಕಾರವಾಗಿ ಕುಂಡವನ್ನು ಮಾಡಿ ನವಮಿಯದಿನ ಐದುವಿಧವಾದ ರಜಸ್ಸಿನಿಂದ (ಪಂಚವರ್ಣದ ರಂಗವಲ್ಲಿ) ಮಂಡಲವನ್ನು ಮಾಡಿ ತನ್ನ ಗುರು ಮತ್ತು ತಂದೆ ಇವರ ಸನ್ನಿಧಿಯಲ್ಲಿ ಈ ವಿಧಿಯಿಂದ ಚಂಡಿಕಾದೇವಿಯ ಪೂಜೆಯನ್ನು ಮಾಡಬೇಕು.

೭೩. ಅನಂತರ ಆ ಕುಂಡದಲ್ಲಿ ಬಿಲ್ವ ಮತ್ತು ಎಳ್ಳಿನಿಂದ ನೂರೆಂಟು ಹೋಮಗಳನ್ನು ಮೂರುಸಾರಿ ಮಾಡಿ ಮೂರುಸಾವಿರ ಜಪವನ್ನು ಮಾಡಬೇಕು.

ನೈವೇದ್ಯಂ ಗಂಧಪುಷ್ಪೈಶ್ಚ ವಸ್ತ್ರಂ ದದ್ಯಾಚ್ಚ ಯತ್ಪ್ರಿಯಂ ।
ಪೂರ್ವೋಕ್ತಂ ಚಾನ್ಯದಪ್ಯಸ್ಯೈ ಪ್ರದದ್ಯಾತ್ಪಾಯಸಂ ತಥಾ ॥ ೭೪ ॥

ಪೂಜಾವಸಾನೇ ದೇಯಂ ಸ್ಯಾತ್ತಜ್ಜಾತೀಯಂ ಬಲಿತ್ರಯಂ ।
ಸಿಂಧೂರಂ ಸ್ವರ್ಣರತ್ನಾನಿ ಯದ್ಯತ್ಸ್ತ್ರೀಣಾಂ ವಿಭೂಷಣಂ ॥ ೭೫ ॥

ನಿವೇದಯೇದ್ಯಥಾಶಕ್ತ್ಯಾ ಪುಷ್ಪಮಾಲಾಂ ಚ ಭೂರಿಶಃ ।
ಮಹಾಶುಲ್ಕಂ ಸಶಾಲ್ಯನ್ನಂ ಗವ್ಯಂ ವ್ಯಂಜನಸಂಯುತಂ ॥ ೭೬ ॥

ದೇವ್ಯೈ ನವಮ್ಯಾಂ ಸಂಪೂರ್ಣಂ ಬಲಿಂ ದದ್ಯಾದ್ಘೃತಾದಿಭಿಃ ।
ದಕ್ಷಿಣಾಂ ಗುರುವೇ ದದ್ಯಾತ್ಸುವರ್ಣಂ ಗಾಂ ತಥಾ ತಿಲಂ ॥ ೭೭ ॥

ಅಭಿಶಪ್ತಮಪುತ್ರಂ ಚ ಸಾವದ್ಯಂ ಕಿತವಂ ತಥಾ ।
ಕ್ರಿಯಾಹೀನಮಕಲ್ಪಜ್ಞಂ ವಾಮನಂ ಗುರುನಿಂದಕಂ ॥ ೭೮ ॥

---

೭೪. ಮೊದಲು ಹೇಳಿದಪ್ರಕಾರ ನೈವೇದ್ಯವನ್ನೂ, ಗಂಧ ಹೂವುಗಳನ್ನೂ, ವಸ್ತ್ರವನ್ನೂ ಮತ್ತು ಇಷ್ಟವಸ್ತುಗಳನ್ನೂ, ಪಾಯಸವನ್ನೂ ಮತ್ತು ಇತರ ಪದಾರ್ಥವನ್ನೂ ಸಹ ಸಮರ್ಪಿಸಬೇಕು.

೭೫-೭೬. ಪೂಜೆಯ ಕೊನೆಯಲ್ಲಿ ಹಿಂದೆಹೇಳಿದ ಪ್ರಾಣಿಗಳ ಮೂರು ಬಲಿಯನ್ನು ಕೊಡಬೇಕು. ಚಂದ್ರ, ಚಿನ್ನ, ಮತ್ತು ರತ್ನಗಳು ಮತ್ತು ಹೆಂಗಸರಿಗೆ ಇಷ್ಟವಾದ ಆಭರಣಗಳು, ಪುಷ್ಪಗಳು, ಅನ್ನ ದಕ್ಷಿಣೆ, ತುಪ್ಪ, ಹಾಲು, ಮೊಸರು ಮತ್ತು ವ್ಯಂಜನ ಪದಾರ್ಥಗಳು ಇವುಗಳನ್ನು ಶಕ್ತ್ಯಾನುಸಾರವಾಗಿ ದಾನಮಾಡಬೇಕು.

೭೭. ನವಮಿಯದಿನ ತುಪ್ಪವೇ ಮೊದಲಾದವುಗಳಿಂದ ಮಹಾಬಲಿಯನ್ನು ದೇವಿಯನ್ನುದ್ದೇಶಿಸಿ ಕೊಡಬೇಕು. ಗುರುವಿಗೆ ಚಿನ್ನ, ಹಸು, ಎಳ್ಳು ಮತ್ತು ದಕ್ಷಿಣೆ ಇವುಗಳನ್ನು ಕೊಡಬೇಕು.

೭೮. ಇನ್ನೊಬ್ಬರಿಂದ ಶಾಪವನ್ನು ಹೊಂದಿದವನು, ಮಕ್ಕಳಿಲ್ಲದವನು, ದೋಷದಿಂದ ಕೂಡಿರುವವನು, ಧೂರ್ತನಾದವನು, ಕ್ರಿಯಾಹೀನನು, ಕಲ್ಪವನ್ನು (ಮಂತ್ರವಿಧಿ) ತಿಳಿಯದುವನು, ಕುಳ್ಳನು, ಗುರುವನ್ನು ನಿಂದೆಮಾಡುವವನು, ಯಾವಾಗಲೂ ದ್ವೇಷದಿಂದ ಕೂಡಿದವನು, ಇದೇ ಮೊದಲಾದ ದೋಷವುಳ್ಳ ಜನರು ಗುರುವಾಗಲು ಅರ್ಹರಲ್ಲ ಅಂತಹ ಗುರುವನ್ನು ಯಾವಾಗಲೂ ಬಿಡಬೇಕು.

ಸದಾ ಮತ್ಸರಸಂಯುಕ್ತಂ ಗುರುಂ ಮಂತ್ರೇಷು ವರ್ಜಯೇತ್ ।
ಗುರುರ್ಮಂತ್ರಸ್ಯ ಮೂಲಂ ಸ್ಯಾನ್ಮೂಲಶುದ್ಧೌ ತದುದ್ಗತಂ ॥ ೭೯ ॥

ಸಫಲಂ ಜಾಯತೇ ತಸ್ಮಾನ್ಮಂತ್ರಂ ಯತ್ನಾತ್ಪರೀಕ್ಷಯೇತ್ ।
ಶಾಸ್ತ್ರಾತ್ಕ್ರೋಧಾತ್ತು ಮೋಹಾದ್ವಾ ನಾಸಂಮತ್ಯಾ ಗುರೋರ್ಮುಖಾತ್ ॥ ೮೦ ॥

ಕಲ್ಪೇಷು ದೃಷ್ಟ್ವಾ ವಾ ಮಂತ್ರಂ ಗೃಹ್ಣೀಯಾಚ್ಛುದ್ಧನಾಥವಾ ।
ಸ ಬ್ರಹ್ಮಸ್ತೇಯಪಾಪೇನ ತಾವಿಸ್ರೇ ನರಕೇ ನರಃ ॥ ೮೧ ॥

ಮನ್ವಂತರತ್ರಯಂ ಸ್ಥಿತ್ವಾ ಪಾಪಯೋನಿಷು ಜಾಯತೇ ।
ಶಠೇ ಕ್ರೂರೇ ಚ ಮೂರ್ಖೇ ಚ ಛದ್ಮಕಾರಿಣ್ಯಭಕ್ತಿಕೇ ॥ ೮೨ ॥

---

೭೯. ಗುರುವಾದವನು ಮಂತ್ರವನ್ನು ಉಪದೇಶಿಸುವುದರಿಂದ ದೇವಿಯ ಆರಾಧನ ಕಾರ್ಯಕ್ಕೆ ಅವನೇ ಮೂಲವು. ಮೂಲವು ಸರಿಯಾಗಿದ್ದರೆ ಮುಂದಿನ ಕ್ರಮ ವೆಲ್ಲವೂ ತಾನಾಗಿಯೇ ಸಫಲವಾಗುವುದು. ಆದುದರಿಂದ ಸಾಧಕನಾದವನು ಮಂತ್ರ ವನ್ನು ಸರಿಯಾದ ಗುರುವಿನಿಂದ ಉಪದೇಶವನ್ನು ಪಡೆಯಬೇಕು.

೮೦. ಅಯೋಗ್ಯನಿಂದಾಗಲೀ, ಕೋಪವುಳ್ಳವನಿಂದಾಗಲಿ ಗುರುವಿನ ಸಮ್ಮತಿ ಪಡೆಯದೆಯಾಗಲಿ, ಪುಸ್ತಕಗಳಲ್ಲಿ ಬರೆದಿರುವುದನ್ನು ಉಪದೇಶವಿಲ್ಲದೆ ನೋಡಿ ಯಾಗಲಿ, ಮೋಸದಿಂದಾಗಲೀ ಮಂತ್ರವನ್ನು ಪಡೆಯಬಾರದು.

೮೧. ಯಾವನು ಈ ನಿಷಿದ್ಧರೀತಿಯಿಂದ ಮಂತ್ರವನ್ನು ಅಭ್ಯಾಸಮಾಡು ವನೋ ಅವನು ಬ್ರಹ್ಮಸ್ವವನ್ನು ಕಳ್ಳತನಮಾಡಿದ ಪಾತಕದಿಂದ ಕೂಡಿ ನರಕದಲ್ಲಿ ಮೂರು ಮನ್ವಂತರಗಳವರೆಗೂ ಇದ್ದು ಅನಂತರ ಕೆಟ್ಟ ಯೋನಿಗಳಲ್ಲಿ ಜನ್ಮವನ್ನು ಹೊಂದುವನು.

೮೨. ದುಷ್ಟನಾದವನಿಗೂ, ಕ್ರೂರನಾದವನಿಗೂ, ಮೂರ್ಖನಿಗೂ, ಮೋಸ ಗಾರನಿಗೂ, ಭಕ್ತಿಯಿಲ್ಲದವನಿಗೂ, ಲೋಕದಲ್ಲಿ ನಿಂದೆಯನ್ನು ಹೊತ್ತಿರುವವನಿಗೂ, ಸಹ ಕಾಡಿನಲ್ಲಿಯಾದರೂ, ಬೀಜಮಂತ್ರದಿಂದ ಕೂಡಿದ ಈ ಮಹಾಮಂತ್ರವನ್ನು ಉಪದೇಶಿಸಬಾರದು.

ಮಂತ್ರಂ ನ ದೂಷಿತೇ ದದ್ಯಾತ್ಸುಬೀಜಂ ವಿಪಿನೇ ತಥಾ ।
ಲಕ್ಷೇಣ ಸಾಧಯೇತ್ಕಾಮಂ ಪುರಶ್ಚರಣಪೂರ್ವಕಂ ॥ ೮೩ ॥

ಪಾಪಕ್ಷಯೋ ಭವೇದ್ಯಸ್ಮಾತ್ಪುರಶ್ಚರಣಕರ್ಮಣಾಂ ।
ಲಕ್ಷದ್ವಯೇನ ಮಂತ್ರಸ್ಯ ಜಪೇನ ನರಸತ್ತಮೌ ॥ ೮೪ ॥

ತ್ರಿಸಂಧ್ಯಾಸು ಪ್ರತಿದಿನಂ ಬೀಜಸಂಘಾತಕೇನ ಚ ।
ಕವಿರ್ವಾಗ್ಮೀ ಪಂಡಿತಶ್ಚ ಯಶಸ್ವೀ ಚ ಪ್ರಜಾಯತೆ ॥ ೮೫ ॥

ಸಾಧಕಃ ಸಾಧಕಶ್ರೇಷ್ಠ ಪೂಜಾಸ್ಥಾನಂ ತತಃ ಶೃಣು ।
ಯತ್ರ ಯತ್ರ ನರಃ ಪೂಜಾಂ ನಿರ್ಜನೇ ಕುರುತೇ ಚ ಯಃ ॥
ತಸ್ಯಾದತ್ತೇ ಸ್ವಯಂ ದೇವೀ ಪತ್ರಂ ಪುಷ್ಪಂ ಫಲಂ ಜಲಂ ॥ ೮೬ ॥

ಶಿಲಾ ಪ್ರಶಸ್ತಾ ಪೂಜಾಯಾಂ ಸ್ಥಂಡಿಲಂ ನಿರ್ಜನಂ ತಥಾ ।
ಜಪಂ ಚೋಪಾಂಶು ಸರ್ವೇಷಾಮುತ್ತಮಃ ಪರಿಕೀರ್ತಿತಃ ॥ ೮೭ ॥

---

೮೩. ಪುರಶ್ಚರಣ ವಿಧಿಯಿಂದ ಮಂತ್ರವನ್ನು ಜಪಮಾಡಿದರೆ ಪಾಪವು ನಾಶವಾಗುವುದು. ಲಕ್ಷಸಂಖ್ಯೆಯುಳ್ಳ ಜಪವನ್ನು ಮಾಡಿದರೆ ತನ್ನ ಇಷ್ಟಸಿದ್ಧಿಯಾಗುವುದು.

೮೪-೮೫. ಎಲೈ ಪುರುಷಶ್ರೇಷ್ಠರೇ ಕೇಳಿರಿ, ಮಂತ್ರವನ್ನು ಪ್ರತಿದಿನವೂ ಮೂರು ಸಂಧ್ಯಾಕಾಲದಲ್ಲಿಯೂ, ಬೀಜಾಕ್ಷರಗಳೊಡನೆ ಎರಡುಲಕ್ಷ ಜಪವನ್ನು ಮಾಡಿದರೆ ಅವನು ಕವಿಯೂ, ವಾಚಾಳಿಯೂ, ಪಂಡಿತನೂ, ಮತ್ತು ಕೀರ್ತಿಯುಳ್ಳವನೂ ಸಹ ಆಗುವನು.

೮೬. ಎಲೈ ಸಾಧಕಶ್ರೇಷ್ಠನೇ, ಕೇಳು ಪೂಜೆಯನ್ನು ಮಾಡುವ ಸ್ಥಳವನ್ನು ಹೇಳುವೆನು. ಸಾಧಕನಾದ ಯಾವ ಮನುಷ್ಯನು ಜನಸಂಚಾರವಿಲ್ಲದಿರುವ ಪ್ರದೇಶದಲ್ಲಿ ದೇವಿಯ ಪೂಜೆಯನ್ನು ಮಾಡುವನೋ ಅವನ ಪೂಜೆಗೆ ಉಪಯೋಗಿಸಿದ ಪತ್ರ, ಹೂವು, ಹಣ್ಣು, ನೀರು ಇವುಗಳೇ ಮೊದಲಾದ ವಸ್ತುಗಳನ್ನು ದೇವಿಯು ತಾನಾಗಿಯೇ ಸ್ವೀಕರಿಸುವಳು.

೮೭. ದೇವಿಯನ್ನು ಪೂಜೆಮಾಡಲು ಶಿಲೆಯೂ, ವೇದಿಕೆಯೂ, ವಿಜನವಾದ ಪ್ರದೇಶವೂ, ಸಹ ಉತ್ತಮವಾದುವುಗಳು. ರಹಸ್ಯವಾಗಿ ಮಾಡುವ ಜಪವು ಎಲ್ಲಕ್ಕೂ ಉತ್ತಮವಾದುದು.

ಅಶುಚಿರ್ನ ಮಹಾಮಾಯಾಂ ಪೂಜಯೇತ್ತು ಕದಾಚ ನ।
ಅವಶ್ಯಂ ತು ಸ್ಮರೇನ್ಮಂತ್ರಂ ಯೋಽತಿಭಕ್ತಿಯುತೋ ನರಃ ॥ ೮೮ ॥

ದಂತರಕ್ತೇ ಸಮುತ್ಪನ್ನೇ ಸ್ಮರಣಂ ಚ ನ ವಿದ್ಯತೇ ।
ಸರ್ವೇಷಾಮೇವ ಮಂತ್ರಾಣಾಂ ಸ್ಮರಣಾನ್ನರಕಂ ವ್ರಜೇತ್ ॥ ೮೯ ॥

ಜಾನೂರ್ಧ್ವೇ ಕ್ಷತಜೇ ಜಾತೇ ನಿತ್ಯಂ ಕರ್ಮ ನ ಚಾಚರೇತ್ ।
ನೈಮಿತ್ತಿಕಂ ಚ ತದಧಃಸ್ರವದ್ರಕ್ತೇ ನ ಚಾಚರೇತ್ ॥ ೯೦ ॥

ಸೂತಕೇ ಚ ಸಮುತ್ಪನ್ನೇ ಕ್ಷುರಕರ್ಮಣಿ ಮೈಥುನೇ ।
ಧೂಮಪೋದ್ಗಾರೆ ತಥಾ ವಾಂತೇ ನಿತ್ಯಕರ್ಮಾಣಿ ಸಂತ್ಯಜೇತ್ ॥ ೯೧ ॥

ದ್ರವ್ಯೇ ಭುಕ್ತೇ ತ್ವಜೀರ್ಣೇ ಚ ನೈವ ಭುಕ್ತ್ವಾ ಚ ಕಿಂಚನ ।
ಕರ್ಮ ಕುರ್ಯಾನ್ನರೋ ನಿತ್ಯಂ ಸೂತಕೇ ಮೃತಕೇ ತಥಾ ॥ ೯೨ ॥

---

೮೮. ಅಶುದ್ಧನಾಗಿರುವಕಾಲದಲ್ಲಿ ದೇವಿಯನ್ನು ಪೂಜಿಸಬಾರದು. ಯಾವನು ದೇವಿಯ ವಿಷಯದಲ್ಲಿ ತುಂಬಾ ಭಕ್ತಿಯುಳ್ಳವನೋ ಅವನು ದೇವಿಯ ಮಂತ್ರವನ್ನು ಅವಶ್ಯವಾಗಿ ಸ್ಮರಿಸುತ್ತಿರಬೇಕು.

೮೯. ಹಲ್ಲಿನಲ್ಲಿ ರಕ್ತವು ಸುರಿಯಲು ಪ್ರಾರಂಭವಾದರೆ ಯಾವ ಮಂತ್ರವನ್ನೂ ಸ್ಮರಿಸಕೂಡದು. ಸ್ಮರಿಸಿದರೆ ನರಕವನ್ನು ಹೊಂದುವನು.

೯೦. ಮಂಡಿಯ ಮೇಲುಗಡೆಯಲ್ಲಿ ಗಾಯವು ಉಂಟಾದರೆ ನಿತ್ಯಕರ್ಮವನ್ನು ಮಾಡಬಾರದು. ಮಂಡಿಯ ಕೆಳಭಾಗದಲ್ಲಿ ರಕ್ತವು ಸುರಿಯುವಂತೆ ಗಾಯವಿರುವಾಗ ನೈಮಿತ್ತಿಕ ಕರ್ಮಗಳನ್ನು ಮಾಡಬಾರದು.

೯೧. ಆಶೌಚ ಬಂದಾಗಲೂ, ತಾನು ಕ್ಷೌರ ಮಾಡಿಸಿಕೊಂಡಿರುವಾಗಲೂ, ಸ್ತ್ರೀ ಸಂಭೋಗವನ್ನು ಮಾಡಿದ ದಿನವೂ, ಹೊಗೆಯು ತುಂಬಿಕೊಂಡಿರುವಾಗಲೂ, ವಾಂತಿಯನ್ನು ಮಾಡಿದಾಗಲೂ, ಸಹ ನಿತ್ಯಕರ್ಮಗಳನ್ನು ಮಾಡಬಾರದು.

೯೨. ಹೆಚ್ಚಾಗಿ ಆಹಾರವನ್ನು ತಿಂದಾಗಲೀ, ಬೇರೆ ಯಾವಕಾರಣದಿಂದಾಗಲಿ ಅಜೀರ್ಣವಾಗಿರುವಾಗಲೂ, ಮತ್ತು ಜನನ ಪ್ರಯುಕ್ತವಾದ ಸೂತಕದಲ್ಲಿಯೂ, ಮರಣ ಪ್ರಯುಕ್ತವಾದ ಸೂತಕದಲ್ಲಿಯೂ ಸಹ ಕರ್ಮವನ್ನು ಮಾಡಬಾರದು.

ಪತ್ರಂ ಪುಷ್ಪಂ ಚ ತಾಂಬೂಲಂ ಭೇಷಜತ್ವೇನ ಕಲ್ಪಿತಂ ।
ಕಣಾದಿಪಿಪ್ಪಲ್ಯಂತಂ ಚ ಫಲಂ ಭುಕ್ತ್ವಾ ನ ಚಾಚರೇತ್ ॥ ೯೩ ॥

ಜಲಸ್ಯಾಪಿ ನರಶ್ರೇಷ್ಠ ಭೋಜನಾದ್ಭೇಷಜಾದೃತೇ ।
ನಿತ್ಯಕ್ರಿಯಾ ನಿವರ್ತೇತ ಸಹ ನೈಮಿತ್ತಿಕೈಃ ಸದಾ ॥ ೯೪ ॥

ಜಲೌಕಾಂ ಗೂಢಪಾದಂ ಚ ಕ್ರಿಮಿಗಂಡೂಪದಾದಿಕಂ ।
ಕಾಮಾದ್ಧಸ್ತೇನ ಸಂಸ್ಪೃಶ್ಯ ನಿತ್ಯಕರ್ಮಾಣಿ ಸಂತ್ಯಜೇತ್ ॥ ೯೫ ॥

ವಿಶೇಷತಃ ಶಿವಾಪೂಜಾಂ ಪ್ರಮಿತಪಿತೃಕೋ ನರಃ ।
ಯಾವದ್ವತ್ಸರಪರ್ಯಂತಂ ಮನಸಾಪಿ ನ ಚಾಚರೇತ್ ॥ ೯೬ ॥

ಮಹಾಗುರುನಿಪಾತೇ ತು ಕಾಮ್ಯಂ ಕಿಂಚಿನ್ನ ಚಾಚರೇತ್ ।
ಆರ್ತ್ವಿಜ್ಯಂ ಬ್ರಹ್ಮಯಜ್ಞಂ ಚ ಶ್ರಾದ್ಧಂ ದೇವಯಜಂ ಚ ಯತ್ ॥ ೯೭ ॥

---

೯೩. ಪತ್ರ, ಹೂವು, ತಾಂಬೂಲ, ಇವುಗಳನ್ನು ಔಷಧಿಯಂತೆ ಸೇವಿಸಿದರೂ ಕರ್ಮವನ್ನು ಮಾಡಬಾರದು. ಜೀರಿಗೆಯೇ ಮೊದಲಾಗಿ ಹಿಪ್ಪಲಿಯವರೆಗೂ ಇರುವ ವನ್ನೂ, ಹಣ್ಣುಗಳನ್ನೂ ಸಹ ತಿಂದಿದ್ದರೆ ಕರ್ಮಗಳನ್ನು ಮಾಡಬಾರದು.

೯೪. ಔಷಧಿ ಮತ್ತು ಊಟಮಾಡುವುದು ಇವೆರಡುಕಾಲ ಹೊರತು ಬೇರೆಯ ಕಾಲದಲ್ಲಿ ನೀರನ್ನು ಕುಡಿದನಂತರ ನಿತ್ಯಕರ್ಮವನ್ನು ಮತ್ತು ನೈಮಿತ್ತಿಕಕರ್ಮಗಳನ್ನು ಮಾಡಬಾರದು.

೯೫. ಜಿಗಣೆ, ಹಾವು, ನೀರಿನಲ್ಲಿಯೂ, ಭೂಮಿಯಲ್ಲಿಯೂ ಇರುವ ಕ್ರಿಮಿಗಳು ಹೆಂಟೆಯಗೊದ್ದ ಮೊದಲಾದದ್ದನ್ನೂ ಇಚ್ಛಾಪೂರ್ವಕವಾಗಿ ತನ್ನಕೈಯಿಂದ ಮುಟ್ಟಿದರೆ ನಿತ್ಯಕರ್ಮಗಳನ್ನು ಮಾಡಬಾರದು.

೯೬. ತಂದೆಯು ಮೃತನಾಗಿರುವಾಗ ಒಂದುವರ್ಷ ಕಳೆಯುವವರೆಗೂ ದೇವಿಯ ಪೂಜೆಯನ್ನು ಮನಸ್ಸಿನಿಂದಲೂ ಸಹ ಮಾಡಕೂಡದು.

೯೭. ತನ್ನ ಮಹಾ ಗುರುವು ಮೃತಿಯನ್ನು ಹೊಂದಿರುವಾಗ ಕಾಮ್ಯಕರ್ಮ, ಯಜ್ಞಯಾಗಾದಿಗಳಲ್ಲಿ ಋತ್ವಿಕ್ಕಾಗುವುದು, ಬ್ರಹ್ಮಯಜ್ಞ, ಶ್ರಾದ್ಧ, ದೇವರಪೂಜೆ ಇವುಗಳನ್ನು ಮಾಡಬಾರದು.

ಗುರುಮಾಕ್ಷಿಪ್ಯ ವಿಪ್ರಂ ಚ ಪ್ರಹೃತ್ಯೈನ ಚ ಪಾಣಿನಾ ।
ನ ಕುರ್ಯಾನ್ನಿತ್ಯಕರ್ಮಾಣಿ ರೇತಃ ಪಾತೇ ಚ ಭೈರವ ॥ ೯೮ ॥

ಆಸನಂ ಚಾರ್ಘ್ಯಪಾತ್ರಂ ಚ ಭಗ್ನಮಾಸಾದಯೇನ್ನತು ।
ಊಷರೆ ಕ್ರಿಮಿಸಂಯುಕ್ತೇ ಸ್ಥಾನೇ ವ್ಯಷ್ಟೇಽಪಿ ನಾರ್ಚಯೇತ್ ॥ ೯೯ ॥

ನೀಚೈರಾಸನಮಾಸಾದ್ಯ ಶುಚಿಃ ಪ್ರಯತಮಾನಸಃ ।
ಅರ್ಚಯೇಚ್ಚಂಡಿಕಾಂ ದೇವೀಂ ದೇವಮನ್ಯಚ್ಚ ಭೈರವ ॥ ೧೦೦ ॥

ದಿಗ್ವಿಭಾಗೇ ತು ಕೌಬೇರೀ ದಿಕ್ಪ್ರೀತಿದಾಯಿನೀ ।
ತಸ್ಮಾತ್ತನ್ಮುಖ ಆಸೀನಃ ಪೂಜಯೇಚ್ಚಂಡಿಕಾಂ ಸದಾ ॥ ೧೦೧ ॥

ಪುಷ್ಪಂ ಚ ಕ್ರಿಮಿಸಂಮಿಶ್ರಂ ವಿಶೀರ್ಣಂ ಭಗ್ನಮೃದ್ಗತೇ ।
ಸಕೇಶಂ ಮೂಷಿಕೋದ್ಧೂತಂ ಯತ್ನೇನ ಪರಿವರ್ಜಯೇತ್ ॥ ೧೦೨ ॥

---

೯೮. ಎಲೈ ಭೈರವನೇ, ಕೇಳು ಗುರುವನ್ನೂ, ಬ್ರಾಹ್ಮಣನನ್ನೂ ನಿಂದೆಮಾಡಿ ತನ್ನ ಕೈಯಿಂದ ಜೊಡೆದು ಬಳಿಕ ನಿತ್ಯಕರ್ಮಗಳನ್ನು ಮಾಡಬಾರದು. ರೇತಸ್ಸನ್ನು ವಿಸರ್ಜನೆ ಮಾಡಿಯೂ ನಿತ್ಯಕರ್ಮಗಳನ್ನು ಮಾಡಬಾರದು.

೯೯. ಆಸನವನ್ನೂ, ಅರ್ಘ್ಯಪಾತ್ರೆಯನ್ನೂ, ಸಹ ಹರಕುಮುರುಕಾದದ್ದನ್ನೂ ಕರ್ಮಕ್ಕೆ ಪುನಃ ಉಪಯೋಗಿಸಕೂಡದು. ಕ್ರಿಮಿಗಳಿಂದ ಕೂಡಿರುವುದಾಗಲೀ, ಚೌಳುಭೂಮಿಯಲ್ಲಾಗಲೀ, ಅಪರಿಶುದ್ಧವಾದ ಸ್ಥಳಗಳಲ್ಲಿಯಾಗಲೀ ಪೂಜೆಯನ್ನು ಮಾಡಕೂಡದು.

೧೦೦. ಎಲೈ ಭೈರವನೇ, ಸಾಧಕನಾದವನು ಶುಚಿರ್ಭೂತನಾಗಿ ಭಕ್ತಿಯಿಂದ ದೇವಿಯ ಪೀಠಕ್ಕಿಂತಲೂ ತಗ್ಗಾಗಿರುವ ಆಸನವನ್ನು ಪಾಕಿಕೊಂಡು ಚಂಡಿಕಾ ದೇವಿಯನ್ನೂ ,ಜೇರೆ ದೇವರನ್ನೂ ಸಹ ಪೂಜಿಸಬೇಕು.

೧೦೧. ನಾಲ್ಕು ದಿಕ್ಕುಗಳಲ್ಲಿ ಕುಬೇರನಿಗೆ ಸಂಬಂಧಪಟ್ಟ ಉತ್ತರದಿಕ್ಕುಮಾತ್ರ ದೇವಿಗೆ ಪ್ರೀತಿಕರವಾದುದು. ಆದುದರಿಂದ ಆ ಮುಖವಾಗಿ ಕುಳಿತುಕೊಂಡು ಯಾವಾಗಲೂ ಚಂಡಿಕಾದೇವಿಯನ್ನು ಪೂಜಿಸಬೇಕು.

೧೦೨-೧೦೩. ಚಂಡಿಕಾದೇವಿಯನ್ನು ಪೂಜಿಸುವಾಗ ಉಪಯೋಗಿಸುವ ಪುಷ್ಪಗಳು ಹುಳುಗಳಿಲ್ಲದಿರಬೇಕು, ಛಿದ್ರವಾಗಿರಕೂಡದು, ಮಣ್ಣು ಮುಂತಾವ ಕೊಳೆ

ಯಾಚಿತಂ ಪರಕೀಯಂ ಚ ತಥಾ ಪರ್ಯುಷಿತಂ ಚ ಯತ್ ।
ಅನ್ಯತ್ಸಂಸ್ಪೃಷ್ಟಂ ಪದಾ ಸ್ಪೃಷ್ಟಂ ಯತ್ನೇನ ಪರಿವರ್ಜಯೇತ್ ॥ ೧೦೩ ॥

ಇದಂ ಶಿವಾಯಾಃ ಪರಮಂ ಮನೋಹರಂ ।
ಕರೋತಿ ಯೋಽನೇನ ತದೀಯಪೂಜನಂ ॥
ಸ ವಾಂಛಿತಾರ್ಥಂ ಸಮವಾಪ್ಯ ಚಂಡಿಕಾ- ।
ಗೃಹಂ ಪ್ರಯಾತಾ ನ ಚಿರೇಣ ಭೈರವ ॥ ೧೦೪ ॥

ಇತಿ ಶ್ರೀ ಕಾಲಿಕಾಪುರಾಣೇ ಔರ್ವಸಗರ ಸಂವಾದೇ
ಸಪ್ತಪಂಚಾಶತ್ತಮೋಽಧ್ಯಾಯಃ

ಕೂದಲು ಇವುಗಳಿಲ್ಲದಿರಬೇಕು, ಇಲಿಗಳು ಮುಟ್ಟಿರಕೂಡದು, ಇಂತಹ ಹೂವುಗಳನ್ನು ಮಾತ್ರ ಉಪಯೋಗಿಸಬೇಕು. ಹಾಗಿಲ್ಲದಿದ್ದರೆ ಆವುಗಳನ್ನು ತ್ಯಜಿಸಬೇಕು. ಅಲ್ಲದೆ ಭಿಕ್ಷಬೇಡಿತಂದ ಹೂವು, ಇನ್ನೊಬ್ಬರ ಹೂವು, ಉಪಯೋಗಿಸಿದ ಅಥವಾ ಹಳೆಯದಾದ ಹೂವು, ಕಾಲು ತಗಲಿದ ಹೂವು ಇವುಗಳನ್ನು ದೇವಿಯ ಪೂಜೆಗೆ ಉಪಯೋಗಿಸಬಾರದು.

೧೦೪. ಎಲೈ ಭೈರವನೇ ಕೇಳು:—ಈಗ ನಾನು ಹೇಳಿದ ಪೂಜಾಕ್ರಮವು ದೇವಿಗೆ ಬಹಳ ಹಿತಕರವಾದದ್ದು. ಯಾವನು ಈಕ್ರಮದಿಂದ ದೇವಿಯ ಪೂಜೆಯನ್ನು ಮಾಡುವನೋ, ಅವನು ತನ್ನ ಇಷ್ಟವೆಲ್ಲವನ್ನೂ ಈ ಲೋಕದಲ್ಲಿ ಹೊಂದಿ ಬೇಗನೆ ಚಂಡಿಕಾದೇವಿಯ ಉತ್ತಮ ಲೋಕವನ್ನು ಸೇರುವನು.

ಇಲ್ಲಿಗೆ ಐವತ್ತೇಳನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇಽಷ್ಟಪಂಚಾಶತ್ತಮೋಽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ಅಸ್ಯ ಮಂತ್ರಸ್ಯ ಕವಚಂ ಶೃಣು ವೇತಾಲಭೈರವ ।
ವೈಷ್ಣವೀತಂತ್ರಸಂಜ್ಞಸ್ಯ ವೈಷ್ಣವ್ಯಾಶ್ಚ ವಿಶೇಷತಃ ॥ ೧ ॥

ತತ್ರ ಮಂತ್ರಾದ್ಯಕ್ಷರಂ ತು ವಾಸುದೇವಸ್ವರೂಪಧೃಕ್ ।
ವರ್ಣೋ ದ್ವಿತೀಯೋ ಬ್ರಹ್ಮೈವ ತೃತೀಯಶ್ಚಂದ್ರಶೇಖರಃ ॥ ೨ ॥

ಚತುರ್ಥೋ ಗಜವಕ್ತ್ರಶ್ಚ ಪಂಚಮಸ್ತು ದಿವಾಕರಃ ।
ಶಕ್ತಿಃ ಸ್ವಯಂ ಪಕಾರಶ್ಚ ಮಹಾಮಾಯಾ ಜಗನ್ಮಯೀ ॥ ೩ ॥

ಐವತ್ತೆಂಟನೆಯ ಅಧ್ಯಾಯವು.

೧. ಮಹಾದೇವನು ಹೇಳಿದನು:—ಎಲೈ ವೇತಾಲ ಭೈರವನೇ ಕೇಳು—ವೈಷ್ಣವೀತಂತ್ರವೆಂದು ಪ್ರಸಿದ್ಧವಾದ ಈ ತಂತ್ರದಲ್ಲಿ ಹೇಳಲ್ಪಟ್ಟಿರುವ ಈ ಮಂತ್ರದ ಕವಚವನ್ನೂ ವೈಷ್ಣವೀದೇವಿಯ ಕವಚವನ್ನೂ ಸಹ ಪ್ರತ್ಯೇಕವಾಗಿ ಹೇಳುವೆನು.

೨-೪. ಆ ಮಂತ್ರದಲ್ಲಿ ಮೊದಲನೆಯ ಅಕ್ಷರವು ವಾಸುದೇವನ (ಅ) ಸ್ವರೂಪವನ್ನುಳ್ಳದ್ದು ಎಂದರೆ ವಾಸುದೇವ ಬೀಜಾಕ್ಷರವು. ಎರಡನೇ ಅಕ್ಷರವು ಬ್ರಹ್ಮನ (ಕ) ಬೀಜಾಕ್ಷರವು. ಮೂರನೆಯ ಅಕ್ಷರವು ಈಶ್ವರನ (ಚ) ಬೀಜಾಕ್ಷರವು. ನಾಲ್ಕನೆಯ ಅಕ್ಷರವು ಗಣಪತಿಯ (ಟ) ಬೀಜಾಕ್ಷರವು. ಐದನೆಯ ಅಕ್ಷರವು ಸೂರ್ಯದೇವನ (ತ) ಬೀಜಾಕ್ಷರವು. ಮಹಾಮಾಯಾ ಎಂದು ಪ್ರಸಿದ್ಧವಾದ ಜಗನ್ಮಾಪಡಿಂದಿರುವ ಶಕ್ತಿ ಸ್ವರೂಪಿಯಾದ ದೇವಿಯೇ ಪಕಾರವೆಂಬ ಬೀಜಾಕ್ಷರವಾಗಿ ಆ ಮಂತ್ರ

ಯಕಾರಸ್ತು ಮಹಾಲಕ್ಷ್ಮ್ಯೀಃ ಶೇಷವರ್ಣಃ ಸರಸ್ವತೀ ।
ಯೋಗಿನೀ ಪೂರ್ವವರ್ಣಸ್ಯ ಶೈಲಪುತ್ರೀ ಪ್ರಕೀರ್ತಿತಾ ॥ ೪ ॥

ದ್ವಿತೀಯಸ್ಯ ತು ವರ್ಣಸ್ಯ ಚಂಡಿಕಾ ಯೋಗಿನೀ ಮತಾ ।
ಚಂಡಘಂಟಾ ತೃತೀಯಸ್ಯ ಕೂಷ್ಮಾಂಡೀ ತತ್ಪರಸ್ಯ ಚ ॥ ೫ ॥

ಸ್ಕಂದಮಾತಾ ತಕಾರಸ್ಯ ಪಸ್ಯ ಕಾತ್ಯಾಯಿನೀ ಸ್ವಯಂ ।
ಕಾಳರಾತ್ರಿಃ ಸಪ್ತಮಸ್ಯ ಮಹಾದೇವೀತಿ ಸಂಸ್ಥಿತಾ ॥ ೬ ॥

ಪ್ರಥಮಂ ವರ್ಣಕವಚಂ ಯೋಗಿನೀಕವಚಂ ತಥಾ ।
ದೇವೌಘಕವಚಂ ಪಶ್ಚಾದ್ದೇವೀದಿಕ್ಕವಚಂ ತಥಾ ॥ ೭ ॥

ತತಸ್ತು ಪಾರ್ಶ್ವಕವಚಂ ದ್ವಿತೀಯಾಂತಾವ್ಯಯಸ್ಯ ಚ ।
ಕವಚಂ ತು ತತಃ ಪಶ್ಚಾತ್ ಷಡ್ವರ್ಣಕವಚಂ ತಥಾ ॥ ೮ ॥

ದಲ್ಲಿ ಇರುವಳು. ಯಕಾರವು ಮಹಾಲಕ್ಷ್ಮ್ಯೀಸ್ವರೂಪದಿಂದ ಇರುವುದು. ಉಳಿದ ಅಕ್ಷರವು (ಶ) ಸರಸ್ವತಿಯ ಸ್ವರೂಪದಿಂದಿರುವುದು.

೫-೬. ಮೊದಲನೆಯ ಅಕ್ಷರಕ್ಕೆ ಪಾರ್ವತಿಯು ಯೋಗಿನಿಯಾಗಿರುವಳು. ಎರಡನೆಯ ಅಕ್ಷರಕ್ಕೆ ಚಂಡಿಕಾದೇವಿಯೂ, ಮೂರನೆಯ ಅಕ್ಷರಕ್ಕೆ ಚಂಡಘಂಟಾ ದೇವಿಯೂ, ನಾಲ್ಕನೆಯ ಅಕ್ಷರಕ್ಕೆ ಕೂಷ್ಮಾಂಡೀ ಎಂಬ ದೇವಿಯೂ, ತಕಾರಕ್ಕೆ ಷಣ್ಮುಖನ ತಾಯಿಯೂ, ಪಕಾರಕ್ಕೆ ಕಾತ್ಯಾಯಿನೀ ದೇವಿಯೂ, ಏಳನೆಯ ಅಕ್ಷರಕ್ಕೆ ಮಹಾದೇವಿಯಾಗಿರುವ ಕಾಳರಾತ್ರಿಯೂ, ಎಂಟನೆಯ ಅಕ್ಷರಕ್ಕೆ ಮಹಾದೇವಿಯೂ (ಅಥವಾ ಮಹಾಗೌರಿ) ಯೋಗಿನಿಯರಾಗಿ ಇರುವರು.

೭-೯. ಮಂತ್ರದ ಎಂಟು ಅಕ್ಷರಗಳಿಗೂ ಎಂಟು ಪ್ರತ್ಯೇಕವಾದ ಕವಚಗಳ ಹೆಸರುಗಳು ಇರುವುವು. ಅವುಗಳಲ್ಲಿ ಮೊದಲನೆಯದು ವರ್ಣಕವಚ, ಎರಡನೆಯದು ಯೋಗಿನೀ ಕವಚ, ಮೂರನೆಯದು ದೇವೌಘ ಕವಚ, ನಾಲ್ಕನೆಯದು ದೇವೀ ದಿಕ್ಕವಚ, ಐದನೆಯದು ಪಾರ್ಶ್ವ ಕವಚ, ಆರನೆಯದು ದ್ವಿತೀಯಾಂತಾವ್ಯಯ ಕವಚ ಏಳನೆಯದು ಷಡ್ವರ್ಣ ಕವಚ, ಎಂಟನೆಯದು ಎಲ್ಲಾ ವಿಪತ್ತುಗಳನ್ನೂ ಕಾಪಾಡುವ ಅಭೇದ್ಯ ಕವಚ ಎಂದು ಎಂಟು ಕವಚಗಳು ಪ್ರಸಿದ್ಧವಾಗಿರುವುವು. ಈ ಎಂಟು

ಅಭೇದ್ಯಕವಚಂ ಚೇತಿ ಸರ್ವತ್ರಾಣಪರಾಯಣಂ ।
ಇಮಾನಿ ಕವಚಾನ್ಯಷ್ಟೌ ಯೋ ಜಾನಾತಿ ನರೋತ್ತಮಃ ॥ ೯ ॥

ಸೋಽಹಮೇವ ಮಹಾದೇವೋ ದೇವೀರೂಪಶ್ಚ ಶಕ್ತಿಮಾನ್ ।

" ಅಸ್ಯ ವೈಷ್ಣವೀತಂತ್ರಕವಚಸ್ಯ ನಾರಾಯಣ ಋಷಿಃ ।
ಈಶ್ವರೋ ದೇವತಾ । ಅನುಷ್ಟುಪ್ ಛಂದಃ । ಕಾತ್ಯಾಯನೀ-
ದೇವೀ ಸರ್ವಕಾಮಾರ್ಥಸಾಧನೇ ವಿನಿಯೋಗಃ " ॥

ಅಃ ಪಾತು ಪೂರ್ವಕಾಷ್ಠಾಯಾಮಾಗ್ನೇಯ್ಯಾಂ ಪಾತು ಕಃ ಸದಾ ॥ ೧೦ ॥

ಪಾತು ಚೋ ಯಮಕಾಷ್ಠಾಯಾಂ ಟೋ ನೈರುತ್ಯಾಂ ಚ ಸರ್ವದಾ ।
ಮಾಂ ಪಾತು ತೋಽಸೌ ಪಾಶ್ಚಾತ್ಯೇ ಶಕ್ತಿರ್ವಾಯವ್ಯದಿಗ್ಗತಾ ॥ ೧೧ ॥

ಯಃ ಪಾತು ಮಾಂ ಚೋತ್ತರಸ್ಯಾಮೈಶಾನ್ಯಾಂ ಶಸ್ತಥಾವತು ।
ಮೂರ್ಧ್ನಿ ರಕ್ಷತು ಮಾಂ ಸೋಽಸೌ ಬಾಹೌ ಮಾಂ ದಕ್ಷಿಣೇ ತು ಕಃ ॥ ೧೨ ॥

ಕವಚಗಳನ್ನು ಯಾವ ಪುರುಷಶ್ರೇಷ್ಠನು ತಿಳಿಯುವನೋ ಅವನು ಮಹಾದೇವನಾದ ನಾನೇ ಆಗಿರುವನು. ದೇವೀರೂಪವನ್ನು ಧರಿಸಿಕೊಂಡು ಸಮಸ್ತ ಶಕ್ತಿಯುಳ್ಳವನಾಗಿರುವನು.

ಈ ವೈಷ್ಣವೀ ತಂತ್ರಕವಚಕ್ಕೆ ನಾರಾಯಣನೇ ಋಷಿಯು, ಈಶ್ವರನೇ ದೇವತೆಯು, ಅನುಷ್ಟುಪ್ ಛಂದಸ್ಸು ಆಗಿರುವುದು. ಕಾತ್ಯಾಯಿನೀ ದೇವಿಯು ಮಂತ್ರಾಭಿಮಾನಿ ದೇವತೆಯಾಗಿರುವಳು. ಎಲ್ಲಾವಿಧವಾದ ಇಷ್ಟಾರ್ಥಗಳ ಸಾಧನೆ ಮಾಡುವುದಕ್ಕೆ ಇದನ್ನು ಉಪಯೋಗಿಸತಕ್ಕದ್ದು.

೧೦-೧೧. ಅಕಾರವು ಪೂರ್ವದಿಕ್ಕಿನಲ್ಲಿ ಕಾಪಾಡಲಿ, ಆಗ್ನೇಯ ದಿಕ್ಕಿನಲ್ಲಿ ಕ ಕಾರವು ಯಾವಾಗಲೂ ರಕ್ಷಿಸಲಿ, ಚಕಾರವು ಯಮನದಿಕ್ಕಾದ ದಕ್ಷಿಣ ದಿಕ್ಕಿನಲ್ಲಿ ಕಾಪಾಡಲಿ, ಟಕಾರವು ನೈಋತ್ಯ ದಿಕ್ಕಿನಲ್ಲಿ ಯಾವಾಗಲೂ ರಕ್ಷಿಸಲಿ, ಪಶ್ಚಿಮ ದಿಕ್ಕಿನಲ್ಲಿ ತಕಾರವು ನನ್ನನ್ನು ಕಾಪಾಡಲಿ, ವಾಯವ್ಯ ದಿಕ್ಕಿನಲ್ಲಿ ಶಕ್ತಿಯು (ಪ) ರಕ್ಷಿಸಲಿ, ಯಕಾರವು ನನ್ನನ್ನು ಉತ್ತರ ದಿಕ್ಕಿನಲ್ಲಿ ಕಾಪಾಡಲಿ, ಈಶಾನ್ಯ ದಿಕ್ಕಿನಲ್ಲಿ ಶಕಾರವು ಕಾಪಾಡಲಿ.

೧೨-೧೪. ಮತ್ತೆ ಅಕಾರವು ನನ್ನನ್ನು ತಲೆಯಲ್ಲಿ ರಕ್ಷಿಸಲಿ. ಬಲಗಡೆಯ ತೋಳಿನಲ್ಲಿ ಕಕಾರವು ನನ್ನನ್ನು ಕಾಪಾಡಲಿ, ನನ್ನನ್ನು ಎಡಗಡೆಯ ತೋಳಿನಲ್ಲಿ

ಮಾಂ ನಾಮಬಾಹೌ ಚಃ ಪಾತು ಹೃದಿ ಟೋ ಮಾಂ ಸದಾವತು ।
ತಃ ಪಾತು ಕಂಠದೇಶೇ ಮಾಂ ಕಟ್ಯೋಃ ಶಕ್ತಿಸ್ತಥಾವತು ॥ ೧೩ ॥

ಯಃ ಪಾತು ದಕ್ಷಿಣೇ ಪಾದೇ ಶೋ ಮಾಂ ವಾಮಪದೇ ತಥಾ ।
ಶೈಲಪುತ್ರೀ ತು ಪೂರ್ವಸ್ಯಾಮಾಗ್ನೇಯ್ಯಾಂ ಪಾತು ಚಂಡಿಕಾ ॥ ೧೪ ॥

ಚಂಡಘಂಟಾ ಪಾತು ಯಾಮ್ಯಾಂ ಯಮಭೀತಿವಿವರ್ಧಿನೀ ।
ನೈಋತ್ಯೇ ತ್ವಥ ಕೂಷ್ಮಾಂಡೀ ಪಾತು ಮಾಂ ಜಗತಾಂ ಪ್ರಸೂಃ ॥ ೧೫ ॥

ಸ್ಕಂದಮಾತಾ ಪಶ್ಚಿಮಾಯಾಂ ಮಾಂ ರಕ್ಷತು ಸದೈವ ಹಿ ।
ಕಾತ್ಯಾಯನೀ ಮಾಂ ವಾಯವ್ಯೇ ಪಾತು ಲೋಕೇಶ್ವರೀ ಸದಾ ॥ ೧೬ ॥

ಕಾಳರಾತ್ರೀ ತು ಕೌಬೇರ್ಯಾಂ ಸಖಾ ರಕ್ಷತು ಮಾಂ ಸ್ವಯಂ ।
ಮಹಾಗೌರೀ ತಥೇಶಾನ್ಯಾಂ ಸತತಂ ಪಾತು ಪಾವನೀ ॥ ೧೭ ॥

ಚಕಾರವು ರಕ್ಷಿಸಲಿ, ಹೃದಯದಲ್ಲಿ ಟಕಾರವು ಯಾವಾಗಲೂ ನನ್ನನ್ನು ಕಾಪಾಡಲಿ, ನನ್ನನ್ನು ಕುತ್ತಿಗೆಯಲ್ಲಿ ತಕಾರವು ರಕ್ಷಿಸಲಿ, ಕಟಿಪ್ರದೇಶದಲ್ಲಿ ಶಕ್ತಿಯು (ಪ) ಕಾಪಾಡಲಿ ಯಕಾರವು ಬಲಗಡೆಯ ಪಾದದಲ್ಲಿ ಕಾಪಾಡಲಿ, ಶಕಾರವು ಎಡಗಡೆಯ ಪಾದವನ್ನು ರಕ್ಷಿಸಲಿ.

೧೪-೧೭. ಪೂರ್ವದಿಕ್ಕಿನಲ್ಲಿ ಶೈಲಪುತ್ರಿಯೂ, ಆಗ್ನೇಯದಿಕ್ಕಿನಲ್ಲಿ ಚಂಡಿಕಾ ದೇವಿಯೂ, ರಕ್ಷಿಸಲಿ. ಯಮನ ಭಯವನ್ನು ಹೆಚ್ಚಿಸುವವಳಾದ ಚಂಡಘಂಟಾ ದೇವಿಯು ದಕ್ಷಿಣ ದಿಕ್ಕಿನಲ್ಲಿ ಕಾಪಾಡಲಿ, ಜಗತ್ತನ್ನು ಸೃಷ್ಟಿ ಮಾಡುವವಳಾದ ಕೂಷ್ಮಾಂಡೀ ದೇವಿಯು ನೈಋತ್ಯ ದಿಕ್ಕಿನಲ್ಲಿ ರಕ್ಷಿಸಲಿ, ಸ್ಕಂದಮಾತಾ ಎಂಬ ಶಕ್ತಿಯು ನನ್ನನ್ನು ಯಾವಾಗಲೂ ಪಶ್ಚಿಮದಿಕ್ಕಿನಲ್ಲಿ ರಕ್ಷಿಸಲಿ, ಲೋಕಗಳಿಗೆ ಅಧಿಪತಿಯಾಗಿರುವ ಕಾತ್ಯಾಯಿನೀ ದೇವಿಯು ನನ್ನನ್ನು ವಾಯವ್ಯ ದಿಕ್ಕಿನಲ್ಲಿ ಕಾಪಾಡಲಿ, ಉತ್ತರ ದಿಕ್ಕಿನಲ್ಲಿ ಕಾಳರಾತ್ರಿಯು ತಾನೇ ಯಾವಾಗಲೂ ನನ್ನನ್ನು ರಕ್ಷಿಸಲಿ, ಪರಿಶುದ್ಧಳಾದ ಮಹಾಗೌರಿಯು ಈಶಾನ್ಯ ದಿಕ್ಕಿನಲ್ಲಿ ಯಾವಾಗಲೂ ರಕ್ಷಿಸಲಿ.

ನೇತ್ರಯೋರ್ವಾಸುದೇವೋ ಮಾಂ ಪಾತು ನಿತ್ಯಂ ಸನಾತನಃ ।
ಬ್ರಹ್ಮಾ ಮಾಂ ಪಾತು ವದನೇ ಪದ್ಮಯೋನಿರಯೋನಿಜಃ ॥ ೧೮ ॥

ನಾಸಾಭಾಗೇ ರಕ್ಷತು ಮಾಂ ಸರ್ವದಾ ಚಂದ್ರಶೇಖರಃ ।
ಗಜವಕ್ತ್ರಃ ಸ್ತನಯುಗ್ಮೇ ಪಾತು ನಿತ್ಯಂ ಪರಾತ್ಮಜಃ ॥ ೧೯ ॥

ವಾಮುದಕ್ಷಿಣಪಾರ್ಶ್ವೋರ್ಮಾಂ ನಿತ್ಯಂ ಪಾತು ದಿವಾಕರಃ ।
ಮಹಾಮಾಯಾ ಸ್ವಯಂ ನಾಭೌ ಮಾಂ ಪಾತು ಪರಮೇಶ್ವರೀ ॥ ೨೦ ॥

ಮಹಾಲಕ್ಷ್ಮೀಃ ಪಾತು ಗುಹ್ಯೇ ಜಾನುನೋಶ್ಚ ಸರಸ್ವತೀ ।
ಮಹಾಮಾಯಾ ಪೂರ್ವಭಾಗೇ ನಿತ್ಯಂ ರಕ್ಷತು ಮಾಂ ಶುಭಾ ॥ ೨೧ ॥

ಅಗ್ನಿಜ್ವಾಲಾ ತಥಾಗ್ನೇಯ್ಯಾಂ ಪಾಯಾನ್ನಿತ್ಯಂ ವರಾಸಿನೀ ।
ರುದ್ರಾಣೀ ಪಾತು ಮಾಂ ಯಾಮ್ಯಾಂ ನೈಋತ್ಯಾಂ ಚಂಡನಾಯಿಕಾ ॥ ೨೨ ॥

೧೮-೨೦. ಆದಿದೇವನಾದ ವಾಸುದೇವನು ನನ್ನನ್ನು ಯಾವಾಗಲೂ ಕಣ್ಣಿನ ವಿಷಯದಲ್ಲಿ ರಕ್ಷಿಸಲಿ, ಸ್ವಯಂ ಉದ್ಭವಿಸಿದ ಪದ್ಮಗರ್ಭನಾದ ಬ್ರಹ್ಮನು ನನ್ನ ಮುಖವನ್ನು ಕಾಪಾಡಲಿ, ಚಂದ್ರನೇ ಆಭರಣವಾಗುಳ್ಳ ಶಿವನು ಯಾವಾಗಲೂ ನನ್ನ ಮೂಗನ್ನು ರಕ್ಷಿಸಲಿ, ಈಶ್ವರನ ಮಗನಾದ ಗಣಪತಿಯು ನನ್ನ ಎರಡು ಸ್ತನಗಳನ್ನೂ ಯಾವಾಗಲೂ ರಕ್ಷಿಸಲಿ, ಸೂರ್ಯನು ನನ್ನ ಎಡಗಡೆಯ ಮತ್ತು ಬಲಗಡೆಯ ಕೈಗಳನ್ನು ರಕ್ಷಿಸಲಿ, ಪರಮೇಶ್ವರಿಯಾದ ಮಹಾಮಾಯೆಯು ತಾನೇ ನನ್ನ ನಾಭಿಯನ್ನು ರಕ್ಷಿಸಲಿ, ಮಹಾಲಕ್ಷ್ಮಿಯು ನನ್ನ ಗುಹ್ಯಪ್ರದೇಶವನ್ನು ರಕ್ಷಿಸಲಿ, ಸರಸ್ವತಿಯು ನನ್ನ ಎರಡು ಮೊಣಕಾಲುಗಳನ್ನು ರಕ್ಷಿಸಲಿ.

೨೧-೨೪. ಮಂಗಳಕರಳಾದ ಮಹಾಮಾಯೆಯು ಯಾವಾಗಲೂ ನನ್ನನ್ನು ಪೂರ್ವದಿಕ್ಕಿನಲ್ಲಿ ಕಾಪಾಡಲಿ, ಶ್ರೇಷ್ಠವಾದ ಆಸನವುಳ್ಳವಳಾದ ಅಗ್ನಿಜ್ವಾಲಾದೇವಿಯು ಯಾವಾಗಲೂ ನನ್ನನ್ನು ಆಗ್ನೇಯ ದಿಕ್ಕಿನಲ್ಲಿ ಕಾಪಾಡಲಿ, ರುದ್ರಾಣೀ ದೇವಿಯು ನನ್ನನ್ನು ದಕ್ಷಿಣ ದಿಕ್ಕಿನಲ್ಲಿ ರಕ್ಷಿಸಲಿ, ನೈಋತ್ಯ ದಿಕ್ಕಿನಲ್ಲಿ ಚಂಡನಾಯಿಕಾ ದೇವಿಯು ರಕ್ಷಿಸಲಿ, ಉಗ್ರಚಂಡಾ ದೇವಿಯು ಪಶ್ಚಿಮದಲ್ಲೂ, ಮಹೇಶ್ವರಿಯಾವ ಪ್ರಚಂಡಾ ದೇವಿಯು ವಾಯವ್ಯ ದಿಕ್ಕಿನಲ್ಲಿಯೂ, ಘೋರರೂಪಿಣೀ ಎಂಬ ದೇವಿಯು ಉತ್ತರ

ಉಗ್ರಚಂಡಾ ಪಶ್ಚಿಮಾಯಾಂ ಪಾತು ನಿತ್ಯಂ ಮಮೇಶ್ವರೀ।
ಪ್ರಚಂಡಾ ಪಾತು ವಾಯವ್ಯೇ ಕೌಬೇರ್ಯಾಂ ಘೋರರೂಪಿಣೀ ॥ ೨೩ ॥

ಈಶ್ವರೀ ಚ ತಥೈಶಾನ್ಯಾಂ ಪಾತು ನಿತ್ಯಂ ಸನಾತನೀ।
ಊರ್ಧ್ವೇ ಪಾತು ಮಹಾಮಾಯಾ ಪಾತ್ವಧಃ ಪರಮೇಶ್ವರೀ ॥ ೨೪ ॥

ಅಗ್ರತಃ ಪಾತು ಮಾಮುಗ್ರಾ ಪೃಷ್ಠತೋ ವೈಷ್ಣವೀ ತಥಾ।
ಬ್ರಹ್ಮಾಣೀ ದಕ್ಷಿಣೇ ಪಾರ್ಶ್ವೇ ನಿತ್ಯಂ ರಕ್ಷತು ಶೋಭನಾ ॥ ೨೫ ॥

ಕೌಮಾರೀ ಪರ್ವತೇ ಪಾತು ವಾರಾಹೀ ಸಲಿಲೇ ಚ ಮಾಂ।
ನಾರಸಿಂಹೀ ದಂಷ್ಟ್ರಿಭಯೇ ಪಾತು ಮಾಂ ವಿಪಿನೇಷು ಚ ॥ ೨೬ ॥

ಐಂದ್ರೀ ಮಾಂ ಪಾತು ಚಾಕಾಶೇ ತಥಾ ಸರ್ವಜಲೇ ಸ್ಥಲೇ।
ಸೇತುಃ ಸರ್ವಾಂಗುಲೀಃ ಪಾತು ದೇವಾದಿಃ ಪಾತು ಕರ್ಣಯೋಃ ॥ ೨೭ ॥

ದೇವಾಂತಶ್ಚಿಬುಕೇ ಪಾತು ಪಾರ್ಶ್ವಯೋಃ ಶಕ್ತಿಪಂಚಮಃ।
ಹಾ ಪಾತು ಮಾಂ ತಥೈವೋರ್ವೋರ್ಮಾಯಾ ರಕ್ಷತು ಜಂಘಯೋಃ ॥೨೮॥

ದಿಕ್ಕಿನಲ್ಲಿಯೂ ರಕ್ಷಿಸಲಿ, ನಿತ್ಯಳಾಗಿರುವ ಈಶ್ವರೀ ದೇವಿಯು ಈಶಾನ್ಯ ದಿಕ್ಕಿನಲ್ಲಿ ಯಾವಾಗಲೂ ರಕ್ಷಿಸಲಿ, ಮಹಾಮಾಯೆಯು (ಮೇಲುಗಡೆಯಲ್ಲಿಯೂ) ಊರ್ಧ್ವ ದಿಕ್ಕಿನಲ್ಲಿಯೂ, ಪರಮೇಶ್ವರಿಯು ಕೆಳಗಡೆಯೂ ರಕ್ಷಿಸಲಿ.

೨೫. ಉಗ್ರಾ ದೇವಿಯು ನನ್ನ ಮುಂದುಗಡೆಯಲ್ಲಿಯೂ, ವೈಷ್ಣವೀದೇವಿಯು ಹಿಂಭಾಗದಲ್ಲಿಯೂ, ಮಂಗಳಕರಳಾದ ಬ್ರಹ್ಮಾಣೀ ದೇವಿಯು ಯಾವಾಗಲೂ ಬಲಪಾರ್ಶ್ವದಲ್ಲಿಯೂ ಕಾಪಾಡಲಿ.

೨೬-೨೭. ಕೌಮಾರೀದೇವಿಯು ಕ್ರೂರವಾದ ಮೃಗಗಳ ಭಯದಿಂದಲೂ, ಮತ್ತು ಕಾಡುಗಳಲ್ಲಿಯೂ ನನ್ನನ್ನು ರಕ್ಷಿಸಲಿ, ಇಂದ್ರಾಣೀದೇವಿಯು ಆಕಾಶದಲ್ಲಿಯೂ, ಜಲ, ಸ್ಥಲಪ್ರದೇಶಗಳಲ್ಲಿಯೂ ನನ್ನನ್ನು ರಕ್ಷಿಸಲಿ.

೨೮-೩೦. ಸೇತುವು (ಓಂಕಾರವು) ಎಲ್ಲಾ ಬೆಟ್ಟುಗಳನ್ನೂ, ದೇವಾದಿಯು ನನ್ನ ಕಿವಿಗಳನ್ನೂ ರಕ್ಷಿಸಲಿ, ದೇವಾಂತನೆಂಬ ಶಕ್ತಿಯು ನನ್ನ ಗಡ್ಡವನ್ನೂ, ಪಂಚಮ

ಸರ್ವೇಂದ್ರಿಯಾಣಿ ಮೇ ಪಾತು ರೋಮಕೂಪೇಷು ಸರ್ವದಾ ।
ತ್ವಚಿ ಮಾಂ ವೈ ಸದಾ ಪಾತು ಮಾಂ ಶಂಭುಃ ಪಾತು ಸರ್ವದಾ ॥ ೨೯ ॥

ನಖದಂತಕರೋಷ್ಠಾದೌ ರೋ ಮಾಂ ಪಾತು ಸದೈವ ಹಿ ।
ದೇವಾದಿಃ ಪಾತು ಮಾಂ ಬಸ್ತೌ ದೇವಾಂತಃ ಸ್ತನಕಕ್ಷಯೋಃ ॥ ೩೦ ॥

ಏತದಾದೌ ತು ಯಃ ಸೇತುರ್ಬಾಹ್ಯೇ ಮಾಂ ಪಾತು ದೇಹತಃ ।
ಆಜ್ಞಾಚಕ್ರೇ ಸಷುಮ್ನಾಯಾಂ ಷಟ್ಚಕ್ರೇ ಹೃದಿಸಂಧಿಷು ॥ ೩೧ ॥

ಆದಿಷೋಡಶಚಕ್ರೇ ಚ ಲಲಾಟಾಕಾಶ ಏವ ಚ ।
ವೈಷ್ಣವೀತಂತ್ರಮಂತ್ರೋ ಮಾಂ ನಿತ್ಯಂ ರಕ್ಷಂಶ್ಚ ತಿಷ್ಠತು ॥ ೩೨ ॥

ಕರ್ಣನಾಡೀಷು ಸರ್ವಾಸು ಪಾರ್ಶ್ವಕಕ್ಷಶಿಖಾಸು ಚ ।
ರುಧಿರಸ್ನಾಯುಮಜ್ಜಾಸು ಮುಸ್ತಿಷ್ಕೇಷು ಚ ಪರ್ವಸು ॥ ೩೩ ॥

ಶಕ್ತಿಯು ನನ್ನ ಪಾರ್ಶ್ವಗಳನ್ನೂ, ಹಾ ಎಂಬ ಶಕ್ತಿಯು ನನ್ನ ತೊಡೆಗಳನ್ನೂ, ಮಾಯಾ ಎಂಬ ಶಕ್ತಿಯು ನನ್ನ ಕಣಕಾಲುಗಳನ್ನೂ ಕಾಪಾಡಲಿ. ಶಂಭುವು ನನ್ನ ಎಲ್ಲಾ ಇಂದ್ರಿಯಗಳನ್ನೂ, ರೋಮಕೂಪಗಳನ್ನೂ, ಚರ್ಮವನ್ನೂ ಸಹ ಯಾವಾಗಲೂ ರಕ್ಷಿಸಲಿ. " ರ " ಎಂಬ ಶಕ್ತಿಯು ಉಗುರು, ಹಲ್ಲು, ಕೈಯಿ, ತುಟಿ ಇವೇ ಮೊದಲಾದ ಪ್ರದೇಶಗಳಲ್ಲಿ ಯಾವಾಗಲೂ ರಕ್ಷಿಸಲಿ. " ದೇವಾದಿ " ಎಂಬ ಶಕ್ತಿಯು ನನ್ನ ವಸ್ತಿಯನ್ನೂ, " ದೇವಾಂತ " ಎಂಬ ಶಕ್ತಿಯು ನನ್ನ ಸ್ತನ ಪಾರ್ಶ್ವಗಳನ್ನೂ ಸಹ ರಕ್ಷಿಸಲಿ. ಈ ಮಂತ್ರದ ಆದಿಯಲ್ಲಿರುವ ಯಕಾರವು ನನ್ನ ದೇಹದ ಹೊರಭಾಗವೆಲ್ಲವನ್ನೂ ರಕ್ಷಿಸಲಿ.

೩೧-೩೨. ಆಜ್ಞಾಚಕ್ರ, ಸುಷುಮ್ನಾನಾಡಿ, ಷಟ್ಚಕ್ರ, ಹೃದಯಸಂಧಿ, ಆದಿ ಷೋಡಶಚಕ್ರ, ಹುಬ್ಬಿನ ಆಕಾಶ, ಇವೇ ಮೊದಲಾದವುಗಳನ್ನೂ, ನನ್ನನ್ನೂ ವೈಷ್ಣವೀತಂತ್ರೋಕ್ತವಾದ ಮಂತ್ರವು ಯಾವಾಗಲೂ ಕಾಪಾಡುತ್ತ ಇರಲಿ.

೩೩. ಎಲ್ಲಾ ವಿಧವಾದ ಕಿವಿಯ ನಾಡಿಗಳಲ್ಲಿಯೂ, ಪಾರ್ಶ್ವ, ಭುಜಸಂಧಿ, ತಲೆಯ ಕೂದಲು, ರಕ್ತನಾಳ, ಮಜ್ಜಾ ಎಂಬ ಧಾತು, ಮುಸ್ತಿಷ್ಕ ಎಂಬ ಮೂಳೆಯ ಜಿಡ್ಡು, ಗಿಣ್ಣುಗಳು, ಈ ಎಲ್ಲಾ ಪ್ರದೇಶಗಳನ್ನೂ, ಅಷ್ಟಾಕ್ಷರಮಂತ್ರ ಕವಚದ ಒಂದೆರಡನೆಯ ಅಕ್ಷರಗಳು (ಅ ಕ) ಕಾಪಾಡಲಿ.

ದ್ವಿತೀಯಾಷ್ಟಾಕ್ಷರೋ ಮಂತ್ರಃ ಕವಚಂ ಪಾತು ಸರ್ವತಃ ।
ರೇತೋವಾಯೌ ನಾಭಿರಂಧ್ರೇ ಪೃಷ್ಠಸಂಧಿಷು ಸರ್ವತಃ ।
ಷಡಕ್ಷರಸ್ತೃತೀಯೋಽಯಂ ಮಂತ್ರೋ ಮಾಂ ಪಾತು ಸರ್ವದಾ ॥ ೩೪ ॥

ನಾಸಾರಂಧ್ರೇ ಮಹಾಮಾಯಾ ಕಂಠರಂಧ್ರೇ ತು ವೈಷ್ಣವೀ ।
ಸರ್ವಸಂಧಿಷು ಮಾಂ ಪಾತು ದುರ್ಗಾ ದುರ್ಗಾರ್ತಿಹಾರಿಣೀ ॥ ೩೫ ॥

ಶ್ರೋತ್ರಯೋರ್ಮುಂ ಫಡಿತ್ಯೇವಂ ನಿತ್ಯಂ ರಕ್ಷತು ಕಾಳಿಕಾ ।
ನೇತ್ರಬೀಜತ್ರಯಂ ನೇತ್ರೇ ಸದಾ ತಿಷ್ಠತು ರಕ್ಷಿತುಂ ॥ ೩೬ ॥

ಓಂ ಐಂ ಹ್ರೀಂ ಹ್ರೌಂ ನಾಸಿಕಾಯಾಂ ರಕ್ಷಂತೀ ಚಾಸ್ತು ಚಂಡಿಕಾ ।
ಓಂ ಹ್ರೀಂ ಹ್ರೂಂ ಮಾಂ ಸದಾ ತಾರಾ ಜಿಹ್ವಾಮೂಲೇ ತು ತಿಷ್ಠತು ॥ ೩೭ ॥

ಹೃದಿ ತಿಷ್ಠತು ಮೇ ಸೇತುರ್ಜ್ಞಾನಂ ರಕ್ಷತುಮುತ್ತಮಂ ।
ಓಂ ಕ್ಲೌಂ ಫಟ್ ಚ ಮಹಾಮಾರೀ ಪಾತು ಮಾಂ ಸರ್ವತಃ ಸದಾ ॥೩೮ ॥

---

೩೪. ರೇತಸ್ಸು, ವಾಯು, ನಾಭಿರಂಧ್ರ, ಪೃಷ್ಠಸಂಧಿ ಮೊದಲಾದ ದೇಹದ ಈ ಭಾಗಗಳನ್ನು ಈ ಮಂತ್ರದ ಮೂರನೆಯ ಅಕ್ಷರದಿಂದ ಕೊನೆಯವರೆಗೂ ಇರುವ ಆರು ಅಕ್ಷರಗಳು(ಎಂದರೆ ಚ, ಟ, ತ, ಪ, ಯ, ಶ,) ಯಾವಾಗಲೂ ನನ್ನನ್ನು ರಕ್ಷಿಸಲಿ.

೩೫. ಮೂಗಿನ ರಂಧ್ರಗಳನ್ನು ಮಹಾಮಾಯೆಯೂ, ಕಂಠರಂಧ್ರವನ್ನು (ಕುತ್ತಿಗೆಯ ನಾಳವನ್ನು) ವೈಷ್ಣವಿಯೂ, ಶರೀರದ ಎಲ್ಲಾ ರಂಧ್ರಗಳನ್ನೂ, ಕೀಲುಗಳನ್ನೂ, ಸಂಕಟವನ್ನೂ ನಾಶಮಾಡುವ ದುರ್ಗಾದೇವಿಯು ರಕ್ಷಿಸಲಿ.

೩೬. ಕಾಳಿಕಾದೇವಿಯು ಯಾವಾಗಲೂ ಕಿವಿಗಳನ್ನು " ಮುಂಫಟ್ " ಎಂಬ ಮಂತ್ರದಿಂದ ಕಾಪಾಡಲಿ. ಕಾಳಿಕಾದೇವಿಯು ಎರಡು ಕಣ್ಣುಗಳನ್ನು, ನೇತ್ರ ಬೀಜಗಳಾದ ಇ ಈ ಔ ಎಂಬ ಮೂರು ಬೀಜಾಕ್ಷರಗಳಿಂದ ರಕ್ಷಿಸಲಿ. (ವಕ್ಷನೇತ್ರ= ಇ, ವಾಮನೇತ್ರ= ಈ, ತೃತೀಯ ಫಾಲನೇತ್ರ= ಔ)

೩೭. ಓಂ, ಐಂ, ಹ್ರೀಂ, ಹ್ರೌಂ ಎಂಬ ಬೀಜಾಕ್ಷರಗಳಿಂದ ನನ್ನ ಮೂಗನ್ನು ಚಂಡಿಕಾದೇವಿಯು ರಕ್ಷಿಸುತ್ತಾ ಇರಲಿ. ತಾರಾದೇವಿಯು ಓಂ ಹ್ರೀಂ ಹ್ರೂಂ ಎಂಬ ಬೀಜಾಕ್ಷರಗಳಿಂದ ನಾಲಿಗೆಯ ಬುಡವನ್ನು ರಕ್ಷಿಸುತ್ತಿರಲಿ.

೩೮. ನನ್ನ ಶ್ರೇಷ್ಠವಾದ ಜ್ಞಾನವನ್ನು ರಕ್ಷಿಸುವುದಕ್ಕಾಗಿ " ಸೇತು " ಎಂಬ ಶಕ್ತಿಯು ನನ್ನ ಹೃದಯದಲ್ಲಿರಲಿ. " ಓಂ ಕ್ಲೌಂ ಫಟ್ " ಎಂಬ ಬೀಜಾಕ್ಷರಗಳಿಂದ ಮಹಾಮಾರಿಯು ನನ್ನನ್ನು ಯಾವಾಗಲೂ ಎಲ್ಲಾ ಕಡೆಗಳಲ್ಲಿಯೂ ಕಾಪಾಡಲಿ.

ಓಂ ಯೂಂ ಸಃ ಪ್ರಾಣಾನ್ಮೌಶಿಕೀ ಮಾಂ ಪ್ರಾಣಾನ್ರಕ್ಷತು ರಕ್ಷಿತಾ ।
ಓಂ ಹ್ರೀಂ ಹ್ರೂಂ ಮಾಂ ಭರ್ಗದಯಿತಾ ದೇಹಶೂನ್ಯೇಷು ಪಾತು ಮಾಂ

ಓಂ ಮಃ ಸದಾ ಶೈಲಪುತ್ರೀ ಸರ್ವಾನ್ರೋಗಾ ಪ್ರಮೃಜ್ಯತಾಂ ।
ಓಂ ಹ್ರೀಂ ಸಃ ಸ್ಫೋಂ ಕ್ಷಃ ಫಡಸ್ತ್ರಾಯ ಸಿಂಹವ್ಯಾಘ್ರಭಯಾದ್ರಣಾತ್ ॥೪೦॥

ಶಿವದೂತೀ ಪಾತು ನಿತ್ಯಂ ಹ್ರೀಂ ಸರ್ವಾಸ್ತ್ರೇಷು ತಿಷ್ಠತು ।
ಓಂ ಹ್ರಾಂ ಹ್ರೀಂ ಸಶ್ಚಂಡಘಂಟಾ ಕರ್ಣಛಿದ್ರೇಷು ಪಾತು ಮಾಂ ॥ ೪೧ ॥

ಓಂ ಹ್ರೀಂ ಸಃ ಕಾಮೇಶ್ವರೀ ಕಾಮಾನಭಿತಿಷ್ಠತು ರಕ್ಷತು ।
ಓಂ ಆಂ ಹೂಂ ಫಡುಗ್ರಚಂಡಾ ರಿಪೂರ್ ವಿಘ್ನಾನ್ ವಿಮರ್ದತಾಂ ॥ ೪೨ ॥

ಓಂ ಅಂಲಾ ಪಾತು ಮಾಂ ನಿತ್ಯಂ ವೈಷ್ಣವೀ ಜಗದೀಶ್ವರೀ ॥
ಓಂ ಕಂ ಬ್ರಹ್ಮಾಣೀ ಪಾತು ಚಕ್ರಾತ್ ಓಂ ಚಂ ರುದ್ರಾಣೀ ತು ಶಕ್ತಿತಃ

---

೩೯. ಕಾಪಾಡುವವಳಾದ ಕೌಶಿಕೀದೇವಿಯು " ಓಂ ಯೂಂ ಸಃ "" ಎಂಬ ಬೀಜಾಕ್ಷರಗಳನ್ನು ಹೇಳುತ್ತಾ ನನ್ನ ಪ್ರಾಣಗಳನ್ನು ರಕ್ಷಿಸಲಿ. ಶಿವನ ಪತ್ನಿಯು ದೇಹದ ಒಳಗಡೆಯ ನನ್ನ ಆಕಾಶಪ್ರದೇಶಗಳನ್ನು " ಓಂ ಹ್ರೀಂ ಹ್ರೂಂ" ಎಂಬ ಮಂತ್ರಗಳಿಂದ ರಕ್ಷಿಸಲಿ.

೪೦. ಶೈಲಪುತ್ರಿಯು " ಓಂ ಮಃ" ಎಂಬ ಮಂತ್ರದಿಂದ ನನ್ನ ಎಲ್ಲಾ ರೋಗಗಳನ್ನೂ ಹಾಳುಮಾಡಲಿ. " ಓಂ ಹ್ರೀಂ ಸಃ ಸ್ಫೋಂ ಕ್ಷಃ ಅಸ್ತ್ರಾಯಫಟ್ " ಎಂಬ ಅಸ್ತ್ರಮಂತ್ರವು ಸಿಂಹ, ಹುಲಿ, ಇವುಗಳ ಮತ್ತು ಯುದ್ಧದ ಭಯದಿಂದ ರಕ್ಷಿಸಲಿ. ಶಿವದೂತಿಯು ಹ್ರೀಂಕಾರರೂಪದಿಂದ ಯಾವಾಗಲೂ ನನ್ನ ಎಲ್ಲಾವಿಧವಾದ ಅಸ್ತ್ರಗಳಲ್ಲಿದ್ದುಕೊಂಡು ನನ್ನನ್ನು ಕಾಪಾಡುತ್ತಿರಲಿ.

೪೧-೪೨. ಚಂಡಘಂಟಾದೇವಿಯು " ಓಂ ಹ್ರಾಂ ಹ್ರೀಂ ಸಃ " ಎಂಬ ಬೀಜಮಂತ್ರಗಳಿಂದ ನನ್ನ ಕಿವಿಯ ರಂಧ್ರಗಳನ್ನು ರಕ್ಷಿಸಲಿ. ಕಾಮೇಶ್ವರೀದೇವಿಯು " ಓಂ ಹ್ರೀಂ ಸಃ " ಎಂಬ ಬೀಜಾಕ್ಷರಗಳಿಂದ ನನ್ನ ಇಷ್ಟಾರ್ಥಗಳನ್ನು ಕೊಡುತ್ತಾ ರಕ್ಷಿಸಲಿ. ಉಗ್ರಚಂಡಾದೇವಿಯು " ಓಂ ಆಂ ಹೂಂ ಫಟ್ " ಎಂಬ ಬೀಜಾಕ್ಷರಗಳಿಂದ ನನ್ನ ವಿಘ್ನಗಳನ್ನು ಹಾಳುಮಾಡಲಿ.

೪೩-೪೫. ಜಗನ್ಮಾತೆಯಾದ ವೈಷ್ಣವೀದೇವಿಯು ನನ್ನನ್ನು " ಓಂ ಅಂ ಲಾ" ಎಂಬ ಬೀಜಾಕ್ಷರಗಳಿಂದ ಕಾಪಾಡಲಿ. ಬ್ರಹ್ಮಾಣೀದೇವಿಯು " ಓಂ ಕಂ " ಎಂಬ

ಓಂ ಟಂ ಕೌಮಾರೀ ಪಾತು ಪಜ್ರಾತ್ ಓಂ ತಂ ವಾರಾಹೀ ತು ಕಾಂಡತಃ ।
ಓಂ ಪಂ ಪಾತು ನಾರಸಿಂಹೀ ಮಾಂ ಕ್ರವ್ಯಾದೇಭ್ಯಸ್ತಥಾಸ್ತ್ರತಃ ॥ ೪೪ ॥

ಶಸ್ತ್ರಾಸ್ತ್ರೇಭ್ಯಃ ಸಮಸ್ತೇಭ್ಯೊ ಯಂತ್ರೇಭ್ಯೋಽನಿಷ್ಟಮಂತ್ರತಃ ।
ಚಂಡಿಕಾ ಮಾಂ ಸದಾ ಪಾತು ಓಂ ಯಂ ಸಂ ದೇವ್ಯೈ ನಮೋನಮಃ ॥೪೫॥

ವಿಶ್ವಾಸಘಾತಕೇಭ್ಯೋ ಮಾಮೈಂದ್ರೀ ರಕ್ಷತು ಮನ್ಮನಃ ।
ಓಂ ನಮೋ ಮಹಾಮಾಯಾಯೈ ಓಂ ವೈಷ್ಣವ್ಯೈ ನಮೋನಮಃ ।
ರಕ್ಷ ಮಾಂ ಸರ್ವಭೂತೇಭ್ಯಃ ಸರ್ವತ್ರ ಪರಮೇಶ್ವರೀ ॥ ೪೬ ॥

ಆಧಾರೇ ವಾಯುಮಾರ್ಗೇ ಹೃದಿ ಕಮಲದಳೇ ಚಂದ್ರವತ್ಸ್ಫೋರಸೂರ್ಯೇ
ಬಸ್ತ್ರೌ ವಹ್ನೌ ಸಮಿದ್ಧೇ ವಿಶತು ವರದಯಾ ಮಂತ್ರಮಷ್ಟಾಕ್ಷರಂ ತತ್ ।

ಬೀಜಾಕ್ಷರದಿಂದ ಚಕ್ರಾಯುಧದ ಏಟಿನಿಂದ ರಕ್ಷಿಸಲಿ. ರುದ್ರಾಣೀದೇವಿಯು "ಓಂ ಚಂ" ಎಂಬ ಬೀಜಾಕ್ಷರಗಳಿಂದ ವಕ್ರಾಯುಧದಿಂದ ರಕ್ಷಿಸಲಿ. ಚಂಡಿಕಾದೇವಿಯು ಎಲ್ಲಾವಿಧವಾದ ಶಸ್ತ್ರಗಳಿಂದಲೂ, ಅಸ್ತ್ರಗಳಿಂದಲೂ, ಯಂತ್ರಗಳಿಂದಲೂ, ದುಷ್ಟವಾದ ಮಂತ್ರಗಳಿಂದಲೂ ಸಹ ಯಾವಾಗಲೂ "ಓಂ ಯಂ ಸಂ" ಎಂಬ ಬೀಜಾಕ್ಷರಗಳಿಂದ ರಕ್ಷಿಸಲಿ ಮತ್ತು ಆ ದೇವಿಗೆ ನಮಸ್ಕಾರವಿರಲಿ.

೪೬. ಇಂದ್ರಸಂಬಂಧಿಯಾದ ಶಕ್ತಿಯು ನನ್ನ ಮನಸ್ಸನ್ನು ವಿಶ್ವಾಸವಿಂದ ನಂಬಿಕೆಯನ್ನುಂಟುಮಾಡಿ ಮೋಸಮಾಡುವವರಿಂದ ರಕ್ಷಿಸಲಿ. ಮಹಾಮಾಯಾ ಸ್ವರೂಪಳಾಗಿರುವ ದೇವಿಗೂ, ವೈಷ್ಣವೀ ದೇವಿಗೂ ಸಹ ಪ್ರಣವಪೂರ್ವಕವಾಗಿ ನಮಸ್ಕರಿಸುವೆನು. ಎಲೈ ಪರಮೇಶ್ವರಿಯಾದ ದೇವಿಯೇ ನೀನು ನನ್ನನ್ನು ಎಲ್ಲಾ ಕಡೆಗಳಲ್ಲಿಯೂ ಎಲ್ಲಾ ಪ್ರಾಣಿಗಳದೆಶೆಯಿಂದಲೂ ರಕ್ಷಿಸು.

೪೭. ಯಾವ ಮಂತ್ರವನ್ನು ಬ್ರಹ್ಮನು ತಲೆಯಲ್ಲಿ ಧರಿಸಿರುವನೋ, ಹರಿಯು ಕುತ್ತಿಗೆಯಲ್ಲಿ ಧರಿಸಿರುವನೋ, ಚಂದ್ರನನ್ನು ಧರಿಸಿರುವ ಈಶ್ವರನು ಹೃದಯದಲ್ಲಿ ಧರಿಸಿರುವನೋ, ಅಂತಹ ಪದ್ಮಗರ್ಭದಂತೆ ಹೊಳೆಯುತ್ತಿರುವ ಬೀಜಾಕ್ಷರಗಳಿಂದ ದ್ವಾಗಿಯೂ, ಎಲ್ಲಾ ಮಂತ್ರಗಳಿಗಿಂತಲೂ ಅಧಿಕವಾಗಿಯೂ, ಇರುವ ಈ ಮುಖ್ಯ ಮಂತ್ರವು ನನ್ನನ್ನು ಕಾಪಾಡಲಿ. ಈಪ್ರಕಾರವಾದ ಮಹಿಮೆಯಿಂದ ಕೂಡಿರುವ ಎಂಟು ಅಕ್ಷರಗಳಿಂದ ಕೂಡಿದ ಆ ಮಂತ್ರವು ವರವನ್ನು ಕೊಡುವವಳಾದ ದೇವಿಯಿಂದ ಕೂಡಿ ನನ್ನ ಆಧಾರ ಚಕ್ರದಲ್ಲಿಯೂ, ವಾಯು ಸಂಚರಿಸುವ ಚಕ್ರದಲ್ಲಿಯೂ, ಹೃದಯ

ಯಚ್ಚಬ್ರಹ್ಮಾ ಮೂರ್ಧ್ನಿ ಧತ್ತೇ ಹರಿರವತಿ ಗಲೇ ಚಂದ್ರಚೂಡೋಹೃದಿಸ್ಥಂ
ತನ್ಮಾಂ ಪಾತು ಪ್ರಧಾನಂ ನಿಖಿಲಮತಿಶಯಂ ಪದ್ಮಗರ್ಭಾಭಬೀಜಂ ॥೪೭॥

ಆದ್ಯಾಃ ಶೇಷಾಃ ಸ್ವರೌಷ್ಠ್ಯೈರ್ನಮಯಬಲವದ್ಭಿರಸ್ತ್ರೇಣಾಪಿ ಯುಕ್ತೈಃ
ಸಾನುಸ್ವಾರಾವಿಸರ್ಗೈರ್ಹರಿಹರವಿದಿತಂ ಯತ್ಸಹಸ್ರಂ ಚ ಸಾಷ್ಟಂ ।
ಮಂತ್ರಾಣಾಂ ಸೇತುಬಂಧಂ ನಿವಸತಿ ಸತತಂ ವೈಷ್ಣವೀ ತಂತ್ರಮಂತ್ರೇ
ತನ್ಮಾಂ ಪಾಯಾತ್ಪವಿತ್ರಂ ಪರಮತರಮಜಂ ಭೂತಲವ್ಯೋಮಭಾಗೇ ॥೪೮॥

ಅಂಗಾನ್ಯಷ್ಟೌ ತಥಾಷ್ಟೌ ವಸವ ಇಹ ತಥೈವಾಷ್ಟಮೂರ್ತಿರ್ದಳಾನಿ
ಪ್ರೋಕ್ತಾನ್ಯಷ್ಟೌ ತಥಾಷ್ಟೌ ಮಧುಮತಿರಚಿತಾಃ ಸಿದ್ಧಯೋಽಷ್ಟೌ ತಥೈವ ।
ಅಷ್ಟಾವಷ್ಟಾಷ್ಟಸಂಖ್ಯಾ ಜಗತಿ ರತಿಕಲಾಃ ಕ್ಷಿಪ್ರಕಾಷ್ಠಾಂಗಯೋಗಾ
ಮಂತ್ಯಷ್ಟಾವಕ್ಷರಾಣಿ ಕ್ಷರತು ಸಹಿಗಣೋಽಯಂಹೃದೋಽಯಸ್ತ್ವಮೂಷಾಂ

ಕಮಲದಳಗಳಲ್ಲಿಯೂ, ಚಂದ್ರನಂತೆ ಹೊಳೆಯುವ ಚಕ್ರದಲ್ಲಿಯೂ, ಸೂರ್ಯನಂತೆ ಪ್ರಕಾಶಮಾನವಾಗಿರುವ ಚಕ್ರದಲ್ಲಿಯೂ, ಚೆನ್ನಾಗಿ ವ್ಯಾಪ್ತವಾದ ಅಗ್ನಿಯುಳ್ಳ ವಸ್ತಿ ಪ್ರದೇಶದಲ್ಲಿಯೂ ಸಹ ಪ್ರವೇಶಿಸಿ ರಕ್ಷಿಸಲಿ.

೪೮. ಯಾವ ಮಂತ್ರದ ಮೊದಲನೆಯ ವರ್ಣಗಳೂ, ಉಳಿದ ವರ್ಣಗಳೂ ಸಹ ಸ್ವರಸಮೂಹದಿಂದಲೂ ಸ್ವರದಿಂದ ಕೂಡಿದ ನ, ಮ, ಯ, ಬ, ಲ, ವ, ರ ಎಂಬ ಅಕ್ಷರಗಳು ಮತ್ತು ಅ ಎಂಬಸ್ವರಾಕ್ಷರ, ಅನುಸ್ವಾರ ವಿಸರ್ಗಗಳಿಂದ ಕೂಡಿದವುಗಳಾಗಿ ಹರಿಹರ ಇವರುಗಳಿಂದ ತಿಳಿಯಲ್ಪಟ್ಟಿರುತ್ತದೆಯೋ, ಯಾವಮಂತ್ರವು ಸಾವಿರದಮೇಲೆ ಎಂಟರಿಂದ ಕೂಡಿರುವ ಮಂತ್ರಗಳಿಗೆ ಓಂಕಾರರೂಪವಾಗಿ ವೈಷ್ಣವಿಯ ತಂತ್ರಮಂತ್ರದಲ್ಲಿರುವುದೋ, ಆ ಪ್ರಕಾರವಾಗಿ ಪವಿತ್ರವಾಗಿರುವ ಮತ್ತು ಉತ್ತಮಮಂತ್ರಗಳಲ್ಲಿ ಉತ್ತಮವಾದ ಮಂತ್ರವು ಭೂಮಿಯಲ್ಲಿಯೂ, ಆಕಾಶದಲ್ಲಿಯೂ ನನ್ನನ್ನು ಕಾಪಾಡಲಿ.

೪೯. ಯೋಗ ಸಂಬಂಧಿಯಾದ ಎಂಟು ಅಂಗಗಳೂ, ಅಷ್ಟಮೂರ್ತಿಗಳೂ, ಮಂತ್ರ ಸಂಬಂಧಿಯಾದ ಎಂಟು ದಳಗಳೂ, ಮಧುಮತೀ ಎಂಬ ಯೋಗಾವಸ್ಥೆಯಲ್ಲಿ ಉಂಟಾಗುವ ಎಂಟು ಸಿದ್ಧಿಗಳೂ, ಕಾಮಶಾಸ್ತ್ರದಲ್ಲಿ ಪ್ರಸಿದ್ಧವಾದ ಅರವತ್ತುನಾಲ್ಕು ಕಲೆಗಳೂ, ಬೇಗನೆ ಸಿದ್ಧಿಯನ್ನು ಕೊಡುವ ಮಂತ್ರಯೋಗಗಳೂ, ಇವುಗಳಿಂದ ಕೂಡಿದ ಅಷ್ಟಾಕ್ಷರ ಮಂತ್ರವೂ, ಮತ್ತು ಈ ಸಮೂಹಕ್ಕೆ ಕೇಂದ್ರವಾಗಿರುವ ಯಾವ ದೇವತಾಸಮೂಹವುಂಟೋ ಅದೂ ಸಹ ನನಗೆ ಸಿದ್ಧಿಯನ್ನು ಕೊಡಲಿ.

ಇತಿ ತತ್ಕವಚಂ ಪ್ರೋಕ್ತಂ ಧರ್ಮಕಾಮಾರ್ಥಸಾಧಕಂ ॥ ೫೦ ॥

ಇದಂ ರಹಸ್ಯಂ ಪರಮಮಿದಂ ಸರ್ವಾರ್ಥಸಾಧಕಂ ।
ಯಃ ಸಕೃಚ್ಛೃಣುಯಾದೇತತ್ಕವಚಂ ಮಯಕೋದಿತಂ ॥ ೫೧ ॥

ಸ ಸರ್ವಾನ್ ಲಭತೇ ಕಾಮಾ೯ ಪರತ್ರ ಶಿವರೂಪತಾಂ ।
ಸಕೃದ್ಯಸ್ತು ಪಠೇದೇತತ್ಕವಚಂ ಮಯಕೋದಿತಂ ॥ ೫೨ ॥

ಸ ಸರ್ವಯಜ್ಞಸ್ಯ ಫಲಂ ಲಭತೇ ನಾತ್ರ ಸಂಶಯಃ ।
ಸಂಗ್ರಾಮೇಷು ಜಯೇಚ್ಛತ್ರೂನ್ಮತಂಗಾನಿವ ಕೇಸರೀ ॥ ೫೩ ॥

ದಹೇತ್ಪೃಣಂ ಯಥಾವಹ್ನಿಸ್ತಥಾ ಶತ್ರೂ೯ ದಹೇತ್ಸದಾ ।
ನಾಸ್ತ್ರಾಣಿ ತಸ್ಯ ಶಸ್ತ್ರಾಣಿ ಶರೀರೇ ಪ್ರವಿಶಂತಿ ವೈ ॥ ೫೪ ॥

ನ ತಸ್ಯ ಜಾಯತೇ ವ್ಯಾಧಿರ್ನ ಚ ದುಃಖಂ ಕದಾಚನ ।
ಗುಟಿಕಾಂಜನಪಾತಾಲಪಾದಲೇಪರಸಾಂಜನಂ ॥ ೫೫ ॥

೫೦-೫೧. ಧರ್ಮ, ಕಾಮ, ಅರ್ಥ, ಇವುಗಳನ್ನು ಸಾಧನೆಮಾಡಿಕೊಡುವ ಈ ಕವಚವನ್ನು ಹೀಗೆ ನಾನು ಹೇಳಿರುವೆನು. ಇದು ಬಹಳ ರಹಸ್ಯವಾದದ್ದು. ಇದು ಎಲ್ಲಾವಿಧವಾದ ಇಷ್ಟಗಳನ್ನೂ ನೆರವೇರಿಸಿಕೊಡುವಂತಹುದು. ನನ್ನಿಂದ ಹೇಳಲ್ಪಟ್ಟ ಈ ಕವಚವನ್ನು ಯಾವನು ಒಂದುಸಾರಿಯಾದರೂ ಶ್ರವಣಮಾಡುವನೋ ಅವನು ಈ ಲೋಕದಲ್ಲಿ ಎಲ್ಲಾವಿಧವಾದ ಇಷ್ಟಾರ್ಥಗಳನ್ನೂ ಹೊಂದಿ ಪರಲೋಕದಲ್ಲಿ ಶಿವಸಾಯುಜ್ಯವನ್ನು ಹೊಂದುವನು.

೫೨-೫೩. ನಾನು ಹೇಳಿರುವ ಈ ಕವಚವನ್ನು ಒಂದುಸಾರಿಯಾದರೂ ಪಠನ ಮಾಡಿದವನು ಎಲ್ಲಾವಿಧವಾದ ಯಜ್ಞಗಳ ಫಲವನ್ನು ಹೊಂದುವನು. ಇದರಲ್ಲಿ ಸಂಶಯವಿಲ್ಲ. ಸಿಂಹವು ಆನೆಯನ್ನು ಗೆಲ್ಲುವಂತೆ ಯುದ್ಧದಲ್ಲಿ ಶತ್ರುಗಳನ್ನು ಗೆಲ್ಲುವನು.

೫೪. ಅಗ್ನಿಯು ಹಲ್ಲನ್ನು ಸುಡುವಂತೆ ಅವನು ಶತ್ರುಗಳನ್ನು ಸುಡುವನು. ಅವನ ಶರೀರದಲ್ಲಿ ಅಸ್ತ್ರಗಳೂ, ಶಸ್ತ್ರಗಳೂ ಸಹ ಯಾವುದೂ ಪ್ರವೇಶಮಾಡುವುದಿಲ್ಲ.

೫೫-೫೬. ಅವನಿಗೆ ವ್ಯಾಧಿಯೂ, ದುಃಖವೂ, ಯಾವುದೂ ಉಂಟಾಗುವುದಿಲ್ಲವು. ಗುಳಿಗೆ, ಅಂಜನ (ಕಪ್ಪು) ಪಾತಾಲಪಾದಲೇಪ, (ಕಾಲಿಗೆ ಮಾಡಿಕೊಳ್ಳುವ ಮಾವುಗೆ) ರಸಾಂಜನ (ರಸದಿಂದ ಮಾಡುವ ಅಂಜನ) ಶತ್ರುಗಳನ್ನು ಉಚ್ಚಾಟನೇ

ಉಚ್ಚಾಟೇನಾದ್ಯಾಸ್ತಾಃ ಸರ್ವಾಃ ಪ್ರಸೀದಂತಿ ಚ ಸಿದ್ಧಯಃ ।
ವಾಯೋರಿವ ಗತಿಸ್ತಸ್ಯ ಭವೇದನ್ಯೈರವಾರಿತಾ ॥ ೫೬ ॥

ದೀರ್ಘಾಯುಃ ಕಾಮುಭೋಗೀ ಚ ಧನವಾನಭಿಜಾಯತೇ ।
ಅಷ್ಟಮ್ಯಾಂ ಸಂಯತೋ ಭೂತ್ವಾ ನವಮ್ಯಾಂ ವಿಧಿವಚ್ಛಿವಾಂ ॥ ೫೭ ॥

ಪೂಜಯಿತ್ವಾ ವಿಧಾನೇನ ವಿಚಿಂತ್ಯ ಮನಸಾ ಶಿವಾಂ ।
ಯೋನ್ಯಸೇತ್ಕವಚಂ ದೇಹೇ ತಸ್ಯ ಪುಣ್ಯಫಲಂ ಶೃಣು ॥ ೫೮ ॥

ಜಿತವ್ಯಾಧಿಃ ಶತಾಯುಶ್ಚ ರೂಪವಾ೯ ಗುಣವಾ೯ ಸದಾ ।
ಧನರತ್ನೌಘಸಂಪೂರ್ಣೋ ವಿದ್ಯವಾ೯ ಸ ಚ ಜಾಯತೇ ॥ ೫೯ ॥

ನಾಗ್ನಿರ್ದಹತಿ ತತ್ಕಾಯಂ ನಾಪಃ ಸಂಕ್ಲೇದಯಂತಿ ಚ ।
ನ ಶೋಷಯತಿ ತಂ ವಾಯುಃ ಕ್ರವ್ಯಾತ್ತನ್ನ ಹಿನಸ್ತಿ ಚ ॥ ೬೦ ॥

ಮಾಡುವುದೇ ಮೊದಲಾದ ಎಲ್ಲಾ ವಿಧವಾದ ಸಿದ್ಧಿಗಳೂ ಅವನಿಗೆ ಫಲವನ್ನು ಕೊಡುವುವು. ಅವನಿಗೆ ವಾಯುವಿನ ಗತಿಯಂತೆ ಬೇರೆಯವರಿಂದ ತಡೆಯಿಲ್ಲದಿರುವ ಗಮನವು ಉಂಟಾಗುವುದು.

೫೭-೫೮. ಅವನು ತುಂಬಾ ಆಯಸ್ಸುಳ್ಳವನಾಗಿ ಭೋಗಗಳನ್ನು ಅನುಭವಿಸುವವನಾಗಿಯೂ, ಧನಿಕನಾಗಿಯೂ, ಆಗುವನು. ದೇವಿಯನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಅಷ್ಟಮಿಯದಿನ ನಿಯಮದಿಂದ ಇದ್ದು ನವಮಿಯದಿನ ಶಾಸ್ತ್ರಕ್ರಮದಿಂದ ದೇವಿಯನ್ನು ಪೂಜಿಸಿದನಂತರ ತನ್ನ ಶರೀರದಲ್ಲಿ ಮೇಲೆಹೇಳಿದ ಕವಚವನ್ನು ನ್ಯಾಸಮಾಡಿಕೊಳ್ಳುವವನ ಪುಣ್ಯಫಲವನ್ನು ಹೇಳುವೆನು ಕೇಳು.

೫೯. ಅವನು ರೋಗಗಳನ್ನು ಜಯಿಸುವವನು ಎಂದರೆ ರೋಗವಿಲ್ಲದೆ ಆರೋಗ್ಯವಂತನಾಗಿರುವನು· ನೂರುವರ್ಷ ಆಯಸ್ಸುಳ್ಳವನಾಗುವನು. ಯಾವಾಗಲೂ ರೂಪವಂತನೂ, ಗುಣವಂತನೂ, ಸಹ ಆಗುವನು. ದ್ರವ್ಯ, ರತ್ನ ಇವುಗಳನ್ನು ಹೊಂದಿ ವಿದ್ಯಾವಂತನೂ ಸಹ ಆಗುವನು.

೬೦. ಅವನ ಶರೀರವನ್ನು ಅಗ್ನಿಯು ಸುಡುವುದಿಲ್ಲ, ನೀರು ಅವನ ಶರೀರವನ್ನು ನೆನೆಯಿಸುವುದಿಲ್ಲ, ಗಾಳಿಯು ಅವನ ಶರೀರವನ್ನು ಒಣಗಿಸುವುದಿಲ್ಲ, ರಾಕ್ಷಸನು ಅವನನ್ನು ಹಿಂಸೆಮಾಡುವುದಿಲ್ಲ.

ಶಸ್ತ್ರಾಣಿ ನೈನಂ ಛಿಂದಂತಿ ನ ತಾಪಯತಿ ಭಾಸ್ಕರಃ ।
ನ ತಸ್ಯ ಜಾಯತೇ ವಿಘ್ನೋ ನಾಸ್ತಿ ತಸ್ಯ ಚ ಸಂಜ್ವರಃ ॥ ೬೧ ॥

ವೇತಾಲಾಶ್ಚ ಪಿಶಾಚಾಶ್ಚ ರಾಕ್ಷಸಾ ಗಣನಾಯಕಾಃ ।
ಸರ್ವೇ ತಸ್ಯ ವಶಂ ಯಾಂತಿ ಭೂತಗ್ರಾಮಾಶ್ಚತುರ್ವಿಧಾಃ ॥
ನಿತ್ಯಂ ಪಠತಿ ಯೋ ಭಕ್ತ್ಯಾ ಕವಚಂ ಹರನಿರ್ಮಿತಂ ॥ ೬೨ ॥

ಸೋಽಹಮೇವ ಮಹಾದೇವೋ ಮಹಾಮಾಯಾ ಚ ಮಾತೃಕಾ ।
ಧರ್ಮಾರ್ಥಕಾಮಮೋಕ್ಷಾಶ್ಚ ತಸ್ಯ ನಿತ್ಯಂ ಕರೇ ಸ್ಥಿತಾಃ ॥ ೬೩ ॥

ಅನ್ಯಸ್ಯ ವರದಃ ಸೋ ವೈ ನಿತ್ಯಂ ಭವತಿ ಪಂಡಿತಃ ।
ಕವಿತ್ವಂ ಸತ್ಯವಾದಿತ್ವಂ ಸತತಂ ತಸ್ಯ ಜಾಯತೇ ॥ ೬೪ ॥

ವದೇಚ್ಛ್ಲೋಕಸಹಸ್ರಾಣಿ ಭವೇಚ್ಛ್ರುತಿಧರಸ್ತಥಾ ।
ಲಿಖಿತಂ ಯಸ್ಯ ಗೇಹೇ ತು ಕವಚಂ ಭೈರವ ಸ್ಥಿತಂ ॥ ೬೫ ॥

೬೧-೬೨. ಆಯುಧಗಳು ಅವನ ದೇಹವನ್ನು ಕತ್ತರಿಸುವುದಿಲ್ಲ. ಸೂರ್ಯನು ಅವನ ದೇಹವನ್ನು ಸುಡುವುದಿಲ್ಲ. ಅವನಿಗೆ ಯಾವ ವಿಘ್ನವೂ ಉಂಟಾಗುವುದಿಲ್ಲ. ಅವನಿಗೆ ಮೃತ್ಯುವಿನ ಭಯವಿಲ್ಲ. ಬೇತಾಳಗಳು, ಪಿಶಾಚಿಗಳು, ರಾಕ್ಷಸರು, ಗಣಗಳಿಗೆ ಅಧಿಪತಿಗಳಾದವರು ಮತ್ತು ನಾಲ್ಕು ವಿಧವಾದ ಪ್ರಾಣಿಗಳ ಸಮೂಹವೂ ಸಹ ಅವನಿಗೆ ಅಧೀನವಾಗಿರುವುವು.

೬೩. ಯಾವನು ಶಿವನು ನಿರ್ಮಿಸಿದ ಈ ಕವಚವನ್ನು ಭಕ್ತಿಯಿಂದ ಪ್ರತಿ ದಿನವೂ ಪಠಿಸುವನೋ, ಅವನು ಮಹಾದೇವನಾದ ನಾನೇ ಆಗಿರುವೆನು. ಮಹಾ ಮಾಯಾ ಸ್ವರೂಪನೂ ಮತ್ತು ಮಾತೃಕಾ ಸ್ವರೂಪನೂ ಆಗಿರುವನು. ಧರ್ಮ ಅರ್ಥ ಕಾಮ ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳೂ ಅವನ ಕೈಯ್ಯಲ್ಲಿ ಯಾವಾಗಲೂ ಇರುವುವು.

೬೪. ಅವನು ಯಾವಾಗಲೂ ಇನ್ನೊಬ್ಬರಿಗೆ ವರವನ್ನು ಕೊಡುವ ಸಾಮರ್ಥ್ಯವುಳ್ಳವನಾಗಿಯೂ, ಪಂಡಿತನಾಗಿಯೂ, ಆಗುವನು. ಕವನ ಮಾಡುವ ಸಾಮರ್ಥ್ಯವೂ ಮತ್ತು ಯಾವಾಗಲೂ ನಿಜವನ್ನು ಹೇಳುವ ಸಾಮರ್ಥ್ಯವೂ ಅವನಿಗೆ ಉಂಟಾಗುತ್ತದೆ.

೬೫-೬೬. ಅವನು ಅನೇಕ ಶ್ಲೋಕಗಳನ್ನು ರಚಿಸಬಲ್ಲನು. ವೇದಗಳನ್ನೂ ಚೆನ್ನಾಗಿ ಪಠಿಸಬಲ್ಲನು. ಎಲೈ ಭೈರವನೇ ಬರೆದಿರುವ ಈ ಕವಚವು ಯಾವನ

ನ ತಸ್ಯ ದುರ್ಗತಿಃ ಕ್ವಾಪಿ ಜಾಯತೇ ತಸ್ಯ ದೂಷಣಂ ।
ಗ್ರಹಾಶ್ಚ ಸರ್ವೇ ತುಷ್ಯಂತಿ ವಶಂ ಗಚ್ಛಂತಿ ಭೂಮಿಪಾಃ ॥ ೬೬ ॥

ಯದ್ರಾಜ್ಯೇ ಕವಚಜ್ಞೋಽಸ್ತಿ ಜಾಯಂತೆ ತತ್ರ ನೇತಯಃ ।
ಸೇತುರ್ದೇವಃ ಶಕ್ತಿಬೀಜಂ ಪಂಚಮೋಹಾಯನೇ ನಮಃ ॥ ೬೭ ॥

ವಾಯುರ್ಬಲೇನ ಚೈತಾಯೈ ದ್ವಿತೀಯಾಷ್ಟಾಕ್ಷರಂ ತ್ವಿದಂ ।
ಸೇತುರ್ದೇವೋಽಥ ವೈಷ್ಣವ್ಯೈ ಷಡಕ್ಷರಮಿದಂ ಸ್ಮೃತಂ ॥ ೬೮ ॥

ಏತದ್ದ್ವಯಂ ತು ಜಿಹ್ವಾಗ್ರೇ ಸತತಂ ಯಸ್ಯ ವರ್ತತೇ ।
ತಸ್ಯ ದೇವೀ ಮಹಾಮಾಯಾ ಕಾಯೇ ತಿಷ್ಠತಿ ವೈ ಸದಾ ॥ ೬೯ ॥

ಮಂತ್ರಾಣಾಂ ಪ್ರಣವಸ್ಸೇತುಸ್ತತ್ಸೇತುಃ ಪ್ರಣವಃ ಸ್ಮೃತಃ ।
ಕ್ಷರತ್ಯನೋಂಕೃತಃ ಪೂರ್ವಂ ಪರಸ್ತಾಚ್ಚ ವಿಶೀರ್ಯತೇ ॥ ೭೦ ॥

ಮನೆಯಲ್ಲಿ ಇರುವುದೋ ಅವನಿಗೆ ಕೊಂಚವೂ ದುರ್ಗತಿಯು ಉಂಟಾಗುವುದಿಲ್ಲ. ಗ್ರಹಗಳೆಲ್ಲವೂ ಪ್ರಸನ್ನವಾಗಿರುವುವು. ರಾಜರೂ ಸಹ ಅವನಿಗೆ ಅಧೀನರಾಗುತ್ತಾರೆ.

೬೭. ಯಾವರಾಜ್ಯದಲ್ಲಿ ಈ ಕವಚವನ್ನು ತಿಳಿದಿರುವವನು ಇರುವನೋ ಅಲ್ಲಿ ಈತಿಬಾಧೆಗಳು ಉಂಟಾಗುವುದಿಲ್ಲವು. ಸೇತು (ಪ್ರಣವ) ದೇವತೆ, ಶಕ್ತಿಬೀಜಾಕ್ಷರ, ಐದು ವಿಧವಾದ ಮೋಹಗಳು ಇವೆಲ್ಲಕ್ಕೂ ನಮಸ್ಕಾರವು.

೬೮-೬೯. ವಾಯು ಬೀಜಾಕ್ಷರವೇ ಮೊದಲಾದ ಬೀಜಾಕ್ಷರಗಳಿಂದ ಕೂಡಿದ ಓಂ ವೈಷ್ಣವ್ಯೈ ನಮಃ ಎಂಬ ಷಡಕ್ಷರವಾದ ಮಂತ್ರವೂ ಇವೆರಡೂ ಯಾರ ನಾಲಿಗೆ ತುದಿಯಲ್ಲಿರುತ್ತದೆಯೋ ಅವರ ಶರೀರದಲ್ಲಿ ಮಹಾಮಾಯಾ ಎಂಬ ಪ್ರಸಿದ್ಧವಾದ ದೇವಿಯು ವಾಸಮಾಡುವಳು.

೭೦. ಮಂತ್ರಗಳೆಲ್ಲಕ್ಕೂ ಪ್ರಣವಾಕ್ಷರವು ಮೊದಲನೆಯದಾಗಿರುವುದು. ಪ್ರಣವಮಂತ್ರವು ಆಯಾಯಾ ದೇವತಾಕವಾದ ಮಂತ್ರಗಳಿಂದ ಕೂಡಿರುವುದು. ಮೊದಲು ಓಂಕಾರವಿಲ್ಲದಿರುವ ಮಂತ್ರವು ಕ್ರಮಕ್ರಮವಾಗಿ ನಾಶವಾಗುವುದು.

ನಮಸ್ಕಾರೋ ಮಹಾಮಂತ್ರೋ ದೇವ ಇತ್ಯುಚ್ಯತೇ ಸುರೈಃ ।
ದ್ವಿಜಾತೀನಾಮಯಂ ಮಂತ್ರಃ ಶೂದ್ರಾಣಾಂ ಸರ್ವಕರ್ಮಣಿ ॥ ೭೧ ॥

ಅಕಾರಂ ಚಾಪ್ಯುಕಾರಂ ಚ ಮಕಾರಂ ಚ ಪ್ರಜಾಪತಿಃ ।
ವೇದತ್ರಯಾತ್ಸಮುದ್ಧೃತ್ಯ ಪ್ರಣವಂ ನಿರ್ಮಮೇ ಪುರಾ ॥ ೭೨ ॥

ಸ ಉದಾತ್ತೋ ದ್ವಿಜಾತೀನಾಂ ರಾಜ್ಞಾಂ ಸ್ಯಾದನುದಾತ್ತಕಃ ।
ಪ್ರಚಿತಶ್ಚೋರುಜಾತಾನಾಂ ಮನಸಾಪಿ ತಥಾ ಸ್ಮರೇತ್ ॥ ೭೩ ॥

ಚತುರ್ದಶಸ್ವರೋ ಯೋಽಸೌ ಶೇಷ ಔಕಾರಸಂಜ್ಞಕಃ ।
ಸ ಚಾನುಸ್ವಾರಚಂದ್ರಾಭ್ಯಾಂ ಶೂದ್ರಾಣಾಂ ಸೇತುರುಚ್ಯತೇ ॥ ೭೪ ॥

---

೭೧. ದೇವತೆಗಳು "ನಮಃ" ಎಂಬುದನ್ನು ಮಹಾಮಂತ್ರವೆಂತಲೂ, ದೇವನೆಂತಲೂ, ಹೇಳುವರು. ಇದು ಬ್ರಾಹ್ಮಣರಿಗೆ ಸಂಬಂಧಪಟ್ಟ ಮಂತ್ರವು. ಶೂದ್ರರಿಗೆ ಎಲ್ಲಾ ಕೆಲಸಕ್ಕೂ ಸಾಧಕವಾದ ಮಂತ್ರವು ಇದೇ ಆಗಿರುವುದು.

೭೨. ಬ್ರಹ್ಮನು ಪೂರ್ವದಲ್ಲಿ ಅಕಾರವನ್ನೂ, ಉಕಾರವನ್ನೂ, ಮಕಾರವನ್ನೂ ಸಹ ಮೂರು ವೇದಗಳಿಂದ ಆರಿಸಿ ತೆಗೆದು ಪ್ರಣವವನ್ನು (ಓಂಕಾರವನ್ನು) ನಿರ್ಮಾಣ ಮಾಡಿದನು.

೭೩. ಈ ಓಂಕಾರ ಮಂತ್ರವನ್ನು ಬ್ರಾಹ್ಮಣರು ಉದಾತ್ತಸ್ವರದಿಂದ ಉಚ್ಚರಿಸಬೇಕು. ಕ್ಷತ್ರಿಯರು ಅನುದಾತ್ತಸ್ವರದಿಂದ ಪಠಿಸಬೇಕು. ವೈಶ್ಯರು ಪ್ರಚಯಸ್ವರ ಪೂರ್ವಕವಾಗಿ ಹೇಳಬೇಕು. ಪ್ರಣವಮಂತ್ರವನ್ನು ಎಲ್ಲರೂ ಈ ಕ್ರಮದಿಂದ ಉಚ್ಚರಿಸಬೇಕು.

ಋಗ್ವೇದ ಯಜುರ್ವೇದಗಳಿಗೆ ಉದಾತ್ತ, ಅನುದಾತ್ತ, ಸ್ವರಿತ, ಪ್ರಚಯಗಳೆಂಬ ನಾಲ್ಕು ವಿಧವಾದ ಸ್ವರಗಳುಂಟು. ಈ ನಾಲ್ಕು ಸ್ವರಗಳಿಂದ ಕೂಡಿಯೇ ವೇದ ಮಂತ್ರಗಳನ್ನು ಉಚ್ಚರಿಸಬೇಕು.

೭೪. ಹದಿನಾಲ್ಕನೆಯ ಸ್ವರವಾದ ಔ ಎಂಬ ಸ್ವರಕ್ಕೆ ಅನುಸ್ವಾರ ಮತ್ತು ಅರ್ಧಚಂದ್ರಗಳನ್ನು ಸೇರಿಸಿದರೆ ಔಂ ಎಂದು ಶೂದ್ರರಿಗೆ ಉಚ್ಚರಿಸಲು ಯುಕ್ತವಾದ ಸೇತುಮಂತ್ರವೆನಿಸುವುದು.

ನಿಃಸೇತು ಚ ಯಥಾ ಮೋಕ್ಷಂ ಕ್ಷಣಾನ್ನಿಷ್ಫಲಂ ಪ್ರಸರ್ಪತಿ ।
ಮಂತ್ರಸ್ತಥೈವ ನಿಸ್ಸೇತುಃ ಕ್ಷಣಾತ್ ಕ್ಷರತಿ ಯಜ್ಞ್ವನಾಂ ॥ ೭೫ ॥
ತಸ್ಮಾತ್ಸರ್ವತ್ರ ಮಂತ್ರೇಷು ಚತುರ್ವರ್ಣಾ ದ್ವಿಜಾತಯಃ ।
ಸಾಶ್ರ್ವಯೋಃ ಸೇತುಮಾದಾಯ ಜಪಕರ್ಮ ಸಮಾಚರೇತ್ ॥ ೭೬ ॥
ಶೂದ್ರಾಣಾಮಾದಿಸೇತುರ್ವಾ ದ್ವಿಃ ಸೇತುರ್ವಾ ಯಥೇಚ್ಛತಃ ।
ದ್ವಿಃ ಸೇತವಃ ಸಮಾಖ್ಯಾತಾಃ ಸರ್ವದೈವ ದ್ವಿಜಾತಯಃ ॥ ೭೭ ॥

॥ ಔರ್ವ ಉವಾಚ ॥

ಏತತ್ತೇ ಸರ್ವಮಾಖ್ಯಾತಂ ಕವಚಂ ತ್ರ್ಯಂಬಕೋದಿತಂ ।
ಅಭೇದ್ಯಂ ಕವಚಂ ತತ್ತು ಕವಚಾಷ್ಟಕಮುತ್ತಮಂ ॥ ೭೮ ॥
ಮಹಾಮಾಯಾಮಂತ್ರಕಲ್ಪಂ ಕವಚಂ ಮಂತ್ರಸಂಯುತಂ ।
ಷಡಕ್ಷರಸಮಾಯುಕ್ತಂ ತ್ರಿಷು ಲೋಕೇಷು ದುರ್ಲಭಂ ॥ ೭೯ ॥

---

೭೫. ಸೇತುವೆ (ಕಟ್ಟೆ) ಎಂಬ ತಡೆಯಿಲ್ಲದಿದ್ದರೆ ನೀರು ಹೇಗೆ ತಗ್ಗಾದ ಜಾಗಕ್ಕೆ ಹರಿಯವುದೋ ಹಾಗೆಯೇ ಮಂತ್ರಗಳನ್ನೂ ಸಾಧನೆ ಮಾಡುವವರಿಗೆ ಪ್ರಣವವೆಂಬ ಸೇತುವಿಲ್ಲದಿದ್ದರೆ ಮಂತ್ರವು ಆಕ್ಷಣದಲ್ಲಿ ನಾಶವಾಗುವುದು.

೭೬. ಬ್ರಾಹ್ಮಣರೇ ಮೊದಲಾದ ನಾಲ್ಕು ವರ್ಣದವರೂ, ಎಲ್ಲಾ ಮಂತ್ರಗಳ ವಿಷಯದಲ್ಲಿಯೂ, ಎಲ್ಲಾ ಮಂತ್ರಗಳಲ್ಲಿಯಾ, ಎರಡುಕಡೆಯಲ್ಲಿಯೂ ಪ್ರಣವವನ್ನು ಸೇರಿಸಿಕೊಂಡು ಜಪವನ್ನು ಮಾಡಬೆಕು.

೭೭. ಶೂದ್ರರಾದವರು ಪ್ರಣವವನ್ನು ಒಂದುಕಡೆಯಲ್ಲಿಯಾವರೂ, ಅಥವಾ ಎರಡು ಕಡೆಯಲ್ಲಿಯಾದರೂ ಅವರ ಇಚ್ಛಾನುಸಾರ ಮಂತ್ರದಲ್ಲಿ ಹೇಳಬಹುದು. ಬ್ರಾಹ್ಮಣರೇ ಮೊದಲಾದವರು ಪ್ರಣವವನ್ನು ಎರಡುಕಡೆಯಲ್ಲಿಯೂ ಸೇರಿಸಿ ಉಚ್ಚರಿಸಬೇಕು.

೭೮. ಔರ್ವ ಮುನಿಯು ಹೇಳಿದನು:—ಈಶ್ವರನಿಂದ ಹೇಳಲ್ಪಟ್ಟ ಕವಚವೆಲ್ಲವನ್ನೂ ನಿನಗೆ ಹೇಳಿರುವೆನು. ಈ ಕವಚವು ಅಭೇದ್ಯವಾದುದು. ಹೀಗೆ ಇರುವ ಎಂಟುವಿಧವಾದ ಕವಚವನ್ನೂ ನಾನು ಹೇಳಿರುವೆನು.

೭೯. ಮಹಾಮಾಯಾಮಂತ್ರಕಲ್ಪವೂ, ಮಂತ್ರದಿಂದಕೂಡಿರುವ ಕವಚವೂ, ಅದರಲ್ಲಿಯೂ, ಷಡಕ್ಷರಾತ್ಮಕವಾದ ಕವಚವು ಮೂರು ಲೋಕದಲ್ಲಿಯೂ ಅತಿ ದುರ್ಲಭವು.

ಏತತ್ತ್ವಂ ನೃಪಶಾರ್ದೂಲ ನಿತ್ಯಂ ಭಕ್ತ್ಯಾಯುತಃ ಪಠ ।
ಜಪ ಮಂತ್ರಂ ಚ ವೈಷ್ಣವ್ಯಾಃ ಸರ್ವಸಿದ್ಧಿಮವಾಪ್ಸ್ಯಸಿ ॥ ೮೦ ॥

॥ ಇತಿ ಶ್ರೀ ಕಾಲಿಕಾಪುರಾಣೇಽಷ್ಟಪಂಚಾಶತ್ತಮೋಽಧ್ಯಾಯಃ ॥



---

೮೦. ಎಲೈ ರಾಜಶ್ರೇಷ್ಠನೇ ನೀನು ವೈಷ್ಣವೀ ದೇವಿಯ ಈ ಮಂತ್ರವನ್ನು ಪ್ರತಿದಿನವೂ ಭಕ್ತಿಯಿಂದ ಕೂಡಿದವನಾಗಿ ಪಠಿಸುತ್ತಲೂ, ಜಪವನ್ನು ಮಾಡುತ್ತಲೂ ಇದ್ದರೆ ಎಲ್ಲಾವಿಧವಾದ ಸಿದ್ಧಿಯನ್ನೂ ಹೊಂದುತ್ತೀಯೆ.

ಇಲ್ಲಿಗೆ ಕಾಲಿಕಾ ಪುರಾಣದಲ್ಲಿ ಐವತ್ತೆಂಟನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಏಕೋನಷಷ್ಟಿತಮೋऽಧ್ಯಾಯಃ॥

॥ ಮಾರ್ಕಂಡೇಯ ಉವಾಚ ॥

ಶ್ರುತ್ವೈಮಂ ಸಗರೋ ರಾಜಾ ಸಂವಾದಂ ಭೈರವೇಣ ವೈ ।
ವೇತಾಲೇನಾಪಿ ಭರ್ಗಸ್ಯ ಪುನರೌರ್ವಮುಪೃಚ್ಛತ ॥ ೧ ॥

ಐವತ್ತೊಂಭತ್ತನೆಯ ಅಧ್ಯಾಯವು.

ಸೂಚನೆ:—ಈ ಅಧ್ಯಾಯದಲ್ಲಿಯೂ, ಮುಂದಿನ ಕೆಲವು ಅಧ್ಯಾಯಗಳಲ್ಲಿಯೂ ಬೀಜಾಕ್ಷರಗಳ ಸ್ವರೂಪವೂ, ಬೀಜಾಕ್ಷರಗಳಿಂದ ಕೂಡಿದ ಮಂತ್ರಗಳ ಸ್ವರೂಪವೂ ವಿವರಿಸಲ್ಪಡುವುದು. ತಂತ್ರ ಶಾಸ್ತ್ರಗಳಲ್ಲಿ ಉಕ್ತವಾಗಿರುವ ಬಿಜಾಕ್ಷರ ಕ್ರಮವು ಒಂದೊಂದು ತಂತ್ರಕ್ಕೂ ಒಂದೊಂದು ವಿಧವಾಗಿರುವುದು. ಈ ಪುರಾಣದಲ್ಲಿ ಈ ಕ್ರಮವು ಮಹಾಮಾಯಾ ಕಲ್ಪತಂತ್ರ, ವೈಷ್ಣವೀ ತಂತ್ರ, ದುರ್ಗಾ ತಂತ್ರ ಈ ಮೂರು ತಂತ್ರಗಳ ಅನುಸಾರವಾಗಿರುವುದು. ಈ ತಂತ್ರಗಳು ಈಗ' ಪೂರ್ತಿಯಾಗಿ ಎಲ್ಲಿಯೂ ದೊರಕುವುದಿಲ್ಲ. ಅಲ್ಲದೆ ಪ್ರತಿಯೊಂದು ಮಂತ್ರವೂ ಅನೇಕ ಭೇದಪ್ರಭೇದಗಳಿಂದ ಕೂಡಿರುವುದು. ಇಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ ಬೀಜಾಕ್ಷರಗಳನ್ನೂ ಮಂತ್ರಗಳನ್ನೂ-ತಂತ್ರಾಭಿಧಾನ. ಬೀಜಾಕ್ಷರ ಕೋಶ, ಮಾತೃಕಾವಿಲಾಸ, ಕಾಲೀ ವಿಲಾಸ ತಂತ್ರ, ಈ ಗ್ರಂಥಗಳಲ್ಲಿ ಹೇಳಿರುವಂತೆ-ವಿವರಿಸಿರುವುದು. ಜಪಮಾಡುವವರು ಬೀಜಾಕ್ಷರಗಳನ್ನೂ, ಮಂತ್ರಗಳನ್ನೂ, ಮೊದಲು ಗುರುಮುಖದಿಂದ ಚೆನ್ನಾಗಿ ತಿಳಿದುಕೊಂಡೇ ಜಪಮಾಡಬೇಕು.

೧. ಮಾರ್ಕಂಡೇಯ ಋಷಿಯು ಹೇಳಿದನು:—ಈಶ್ವರನಿಗೂ ವೇತಾಲಭೈರವರಿಗೂ ನಡೆದಿರುವ ಈ ಸಂವಾದವನ್ನು ಕೇಳಿ ಸಗರರಾಜನು ಮತ್ತೆ ಔರ್ವನನ್ನು ಪ್ರಶ್ನೆಮಾಡಿದನು.

॥ ಸಗರ ಉವಾಚ ॥

ಮಂತ್ರಂ ಕವೇವರಗತಂ ಸಾಂಗಂ ಪ್ರೋಕ್ತಂ ತ್ವಯಾ ದ್ವಿಜ ।
ಅಂಗಮಂತ್ರಾಣಿ ಮೇ ದೇವ್ಯಾಃ ಕಥ್ಯತಾಂ ಭೋ ದ್ವಿಜೋತ್ತಮ ॥ ೨ ॥

ತಥಾ ಮಂತ್ರಾಣಿ ಸರ್ವಾಣಿ ಪೂಜಾಸ್ಥಾನಾನಿ ಸರ್ವಶಃ ।
ತಥೈವೋತ್ತರಮಂತ್ರಾಣಿ ಕವಚಾನಿ ಪೃಥಕ್ ಪೃಥಕ್ ॥ ೩ ॥

ಕಾಮಾಖ್ಯಾಯಾಶ್ಚ ಮಹಾತ್ಮ್ಯಂ ಸರಹಸ್ಯಂ ಸಮಂತ್ರಕಂ ।
ಯಥಾ ಶಶಂಸ ಭಗವಾನ್ ಮಹಾದೇವ ಉಮಾಪತಿಃ ॥ ೪ ॥

ವೇತಾಲಭೈರವಾಭ್ಯಾಂ ತತ್ಸಮಾಚಕ್ಷ್ವ ಸವಿಸ್ತರಾತ್ ।
ಶೃಣ್ವತೋ ನ ಹಿ ಮೇ ತೃಪ್ತಿರ್ಜಾಯತೇ ಮಹದದ್ಭುತಂ ॥ ೫ ॥

ಭವತಾ ಕಥ್ಯಮಾನಂ ಹಿ ಪರಂ ಕೌತೂಹಲಂ ಮಮ ।

॥ ಔರ್ವ ಉವಾಚ ॥

ಶೃಣು ತ್ವಂ ರಾಜಶಾರ್ದೂಲ ಯತ್ಪುತ್ರಾಭ್ಯಾಮುಮಾಪತಿಃ ॥ ೬ ॥

---

೨. ಸಗರನು ಹೇಳಿದನು:—ಎಲೈ ಬ್ರಾಹ್ಮಣ ಶ್ರೇಷ್ಠನೇ, ಈಗ ನೀನು ದೇವಿಯ ಕವಚ ಮಂತ್ರವನ್ನು ಸಾಂಗವಾಗಿ ನನಗೆ ಹೇಳಿರುವೆ. ಮುಂದೆ ದೇವಿಯ ಅಂಗಮಂತ್ರಗಳನ್ನೂ ಹೇಳುವವನಾಗು.

೩-೪. ಪಾರ್ವತೀಪತಿಯಾದ ಶಿವನು ವೇತಾಲಭೈರವರಿಗೆ ಹೇಳಿದ ದೇವಿಯ ಕವಚಮಂತ್ರವನ್ನೂ, ಪೂಜಾಕ್ರಮವನ್ನೂ, ಉತ್ತರಮಂತ್ರಗಳನ್ನೂ, ಕಾಮಾಖ್ಯಾ ದೇವಿಯ ಮಾಹಾತ್ಮ್ಯವನ್ನೂ, ಆ ದೇವಿಯ ರಹಸ್ಯವಾದ ಮಂತ್ರಗಳನ್ನೂ ಸಹ ನನಗೆ ವಿಸ್ತಾರವಾಗಿ ತಿಳಿಸು.

೫. ನೀನು ಹೇಳುತ್ತಿರುವ ಬಹಳ ಆಶ್ಚರ್ಯಕರವಾದ ದೇವಿಯ ಚರಿತ್ರೆಯನ್ನು ಎಷ್ಟು ಕೇಳಿದರೂ ನನಗೆ ತೃಪ್ತಿ ಉಂಟಾಗುವುದಿಲ್ಲ. ಕೇಳಿದಷ್ಟೂ ಕುತೂಹಲವು ಹೆಚ್ಚಾಗುತ್ತಿರುವುದು.

೬. ಔರ್ವ ಮುನಿಯು ಹೇಳಿದನು:—ಎಲೈ ರಾಜಶ್ರೇಷ್ಠನೇ ಕೇಳು ಪರಮೇಶ್ವರನು ತನ್ನ ಮಕ್ಕಳಾದ ವೇತಾಲಭೈರವರಿಗೆ ಹೇಳಿದ ವಿಸ್ತಾರವಾದ ಆ ಉಪಾಖ್ಯಾನವನ್ನೇ ನಿನಗೆ ಈಗ ಹೇಳುವೆನು.

ಉವಾಚ ಮಹದಾಖ್ಯಾನಂ ತನ್ಮೇ ನಿಗದತೋಽಧುನಾ ।
ಏತದ್ರಹಸ್ಯಂ ಪರಮಂ ಪವಿತ್ರಂ ಪಾಪನಾಶನಂ ॥ ೭ ॥

ಪರಂ ಸ್ವಸ್ತ್ಯಯನಂ ಪುಂಸಾಂ ಗರ್ಭೇ ಪುಂಸವನಂ ಸ್ಮೃತಂ ।
ಕಲ್ಯಾಣಕಾರಕಂ ಭದ್ರಂ ಚತುರ್ವರ್ಗಫಲಪ್ರದಂ ॥ ೮ ॥

ಶಠಾಯ ಚಲಚಿತ್ತಾಯ ನಾಸ್ತಿಕಾಯಾಜಿತಾತ್ಮನೇ ।

ದೇವದ್ವಿಜಗುರೂಣಾಂ ಚ ಮಿಥ್ಯಾನಿರ್ಬಂಧಕಾರಿಣೇ ।
ನ ಪಾಪಾಯಾಭಿಶಸ್ತಾಯ ಖಂಜಕಾಣಾದಿರೋಗಿಣೇ ॥ ೯ ॥

ನ ಕಥ್ಯಂ ನ ಚ ವಾ ದೇಯಂ ಶ್ರದ್ಧಾವಿರಹಿತಾಯ ಚ ।
ಮಹಾಮಾಯಾಮಂತ್ರಕಲ್ಪಂ ಪ್ರೋಕ್ತ್ವಾ ತಾಭ್ಯಾಮುಮಾಪತಿಃ ॥ ೧೦ ॥

ವೇತಾಲಭೈರವಾಭ್ಯಾಂ ತು ಪುನರೇವಾಭ್ಯಭಾಷತ ।
ಅಂಗಮಂತ್ರಂ ಪ್ರವಕ್ಷ್ಯಾಮಿ ಪ್ರೋಕ್ತಂ ವಾಂ ತಂತ್ರಮುತ್ತಮಂ ॥ ೧೧ ॥

೭-೮. ಪವಿತ್ರವೂ ರಹಸ್ಯವೂ ಆದ ಈ ಉಪಾಖ್ಯಾನವನ್ನು ಕೇಳುವುದರಿಂದ ಸಮಸ್ತ ಪಾಪಗಳೂ ನಾಶವಾಗಿ ಶ್ರೇಯಸ್ಸುಂಟಾಗುವುದು. ಅಲ್ಲದೆ ಕೇಳಿದವನಿಗೆ ಪುತ್ರಪ್ರಾಪ್ತಿಯಾಗುವುದಲ್ಲದೆ ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕುವಿಧ ಪುರುಷಾರ್ಥಗಳೂ ಕೈಗೂಡುವುವು. ಆದುದರಿಂದ ಈ ಉಪಾಖ್ಯಾನ ಶ್ರವಣವು ಬಹಳ ಮಂಗಳಕರವಾದುದು.

೯-೧೦. ದುಷ್ಟನಿಗೂ, ಚಂಚಲವಾದ ಮನಸ್ಸುಳ್ಳವನಿಗೂ, ನಾಸ್ತಿಕನಿಗೂ, ಜಿತೇಂದ್ರಿಯನಲ್ಲದವನಿಗೂ, ದೇವತೆಗಳು, ಬ್ರಾಹ್ಮಣರು, ಗುರುಗಳು, ಇವರುಗಳಿಗೆ ಸುಮ್ಮನೆ ನಿರ್ಬಂಧ ಮಾಡುವವನಿಗೂ, ಪಾಪಿಷ್ಠನಿಗೂ, ಅಪವಾದವನ್ನು ಹೊಂದಿದವನಿಗೂ, ಕುಂಟ, ಕುರುಡ, ಇವರಿಗೂ, ರೋಗಿಯಾದವನಿಗೂ, ಆಸಕ್ತಿಯಿಲ್ಲದವನಿಗೂ ಇದನ್ನು ಹೇಳಬಾರದು. ಮತ್ತು ಈ ಮಂತ್ರವನ್ನು ಉಪದೇಶಿಸಬಾರದು.

೧೧. ಪಾರ್ವತೀಪತಿಯಾದ ಪರಮೇಶ್ವರನು ವೇತಾಲಭೈರವರಿಗೆ ಮಹಾ ಮಾಯಾಮಂತ್ರದ ಕಲ್ಪವನ್ನು ಹೇಳಿದನಂತರ ಪುನಃ ಅವರಿಗೆ ಈರೀತಿ ಹೇಳಿದನು.

॥ ಶ್ರೀ ಭಗವಾನುವಾಚ ॥

ತದೇವ ಪ್ರಥಮಂ ವಿದ್ಧಿ ಸರ್ವಪೂಜಾಸು ಸಂಗತಂ ।
ಆಚಾಂತಃ ಶುಚಿತಾಂ ಪ್ರಾಪ್ತಃ ಸುಸ್ನಾತೋ ದೇವಪೂಜನೇ ॥ ೧೨ ॥

ಪೂಜಾವೇದ್ಯಾಬಹಿಃ ಸ್ಥಿತ್ವಾ ಚತುರ್ಹಸ್ತಾಂತರೇ ಧಿಯಾ ।
ಗೃಹೇ ವಾ ದ್ವಾರದೇಶಸ್ಥಃ ಪ್ರಣಮ್ಯ ಶಿರಸಾ ಗುರುಂ ॥ ೧೩ ॥

ಪ್ರಣಮೇದಿಷ್ಟದೇವಂ ಸ್ವಂ ದಿಕ್ಪಾಲಾನಪಿ ಚೇತಸಾ ।
ಯತ್ಪೂರ್ವಮರ್ಜಿತಂ ಪಾಪಂ ತದ್ದಿನೇಽನ್ಯದಿನೇಪಿ ವಾ ॥ ೧೪ ॥

ಪ್ರಾಯಶ್ಚಿತ್ತೈರ್ನಾಪನುನ್ನಂ ತಚ್ಚ ಪಾಪಂ ಸ್ಮರೇದ್ಧಿಯಾ ।
ತತ್ಪಾಪಸ್ಯಾಪನೋದಾಯ ಮಂತ್ರದ್ವಯಮುದೀರಯೇತ್ ॥ ೧೫ ॥

ದೇವಿ ತ್ವಂ ಪ್ರಾಕೃತಂ ಚಿತ್ತಂ ಪಾಪಾಕ್ರಾಂತಮಭೂನ್ಮಮ ।
ತನ್ನಿಸ್ಸಾರಯ ಪಾಪಾನ್ಮೇ ಪಾಪಂ ಹುಂ ಫಟ್ ಚ ತೇ ನಮಃ ॥ ೧೬ ॥

---

೧೨. ಮಹಾದೇವನು ಹೇಳಿದನು:—ಇದುವರೆಗೂ ದೇವಿಯ ತಂತ್ರವಿಧಾನವನ್ನು ಹೇಳಿದುದಾಯಿತು. ಈಗ ಅಂಗಮಂತ್ರಗಳನ್ನು ಹೇಳುವೆನು. ಎಲ್ಲಾ ಪೂಜೆಗಳಿಗೂ ಈ ಅಂಗಮಂತ್ರಗಳೇ ಪ್ರಾರಂಭವು. ಮೊದಲು ಸಾಧಕನು ಸ್ನಾನಮಾಡಿ ಶುಚಿರ್ಭೂತನಾಗಿ ಆಚಮನವನ್ನು ಮಾಡಬೇಕು.

೧೩. ಸಾಧಕನಾದವನು ಪೂಜೆಯನ್ನು ಮಾಡುವ ವೇದಿಕೆಯ ಹೊರಗಡೆಯಲ್ಲಿ ನಾಲ್ಕುಮೊಳ ದೂರದಲ್ಲಿ ಒಳಗಾಗಲಿ ಬಾಗಿಲಿನಲ್ಲಿದ್ದುಕೊಂಡಾಗಲಿ ತನ್ನ ಗುರುವನ್ನು ಮೊದಲು ನಮಸ್ಕರಿಸಿ, ತನ್ನ ಇಷ್ಟದೇವತೆಯನ್ನೂ, ದಿಕ್ಪಾಲಕರನ್ನೂ, ಸಹ ಮನಸ್ಸಿನಿಂದಲೂ, ನಮಸ್ಕರಿಸಬೇಕು.

೧೪-೧೫. ಆದಿನ ಅಥವಾ ಹಿಂದೆ ತಾನು ಮಾಡಿದ ಪಾಪಗಳ ಪ್ರಾಯಶ್ಚಿತ್ತಕ್ಕೊಸ್ಕರ ಈ ಎರಡು ಮಂತ್ರಗಳನ್ನು ಹೇಳಬೇಕು.

೧೬-೧೭. ಎಲೈ ದೇವಿಯೇ ನನ್ನ ಮನಸ್ಸು ಪ್ರಕೃತಿಗೆ ಸಂಬಂಧಿಸಿರುವುದರಿಂದ ಪಾಪಗಳಿಂದ ತುಂಬಿರುವುದು. ಹೀಗೆ ಇರುವುದರಿಂದ ಈ ನನ್ನ ಮನಸ್ಸಿನ ಪಾಪಗಳನ್ನು

ಸೂರ್ಯಃ ಸೋಽಮೋ ಯಮಃ ಕಾಲೋ ಮಹಾಭೂತಾನಿ ಪಂಚ ವೈ ।
ಏತೇ ಶುಭಾಶುಭಸ್ಯೇಹ ಕರ್ಮಣೋ ನವ ಸಾಕ್ಷಿಣಃ ॥ ೧೭ ॥

ತತಃ ಪುನರ್ಹುಂ ಫಡಿತಿ ಪಾರ್ಶ್ವಮೂರ್ಧ್ವಮಧಸ್ತಥಾ ।
ಆತ್ಮಾನಂ ಕ್ರೋಧದೃಷ್ಟ್ಯಾಥ ನಿರೀಕ್ಷ್ಯ ಸುಮನಾ ಭವೇತ್ ॥ ೧೮ ॥

ಏವಂ ಕೃತೇ ಪ್ರಥಮತಃ ಪಾಪೋತ್ಸಾರಣಕರ್ಮಣಿ ।
ಯತ್ಪಾಪ್ಯದ್ದೃಢತರಂ ಪಾಪಂ ತದ್ದೂರೇ ಚಾವತಿಷ್ಠತಿ ॥ ೧೯ ॥

ಅತೀತೇ ಪೂಜನೇ ಸ್ಥಾನಂ ಸ್ವಂ ಪ್ರಯಾತಿ ಪುನಶ್ಚ ಯತ್ ।
ಯತ್ಪಾಪ್ಯದಲ್ಪತರಂ ಪಾಪಂ ತನ್ನಾಶಮುಪಗಚ್ಛತಿ ॥ ೨೦ ॥

ಓಂ ಅಃ ಫಡಿತಿ ಮಂತ್ರೇಣ ಪೂಜಾವೇದಿಂ ತತೋ ವಿಶೇತ್ ।
ಪೂಜನೇ ತ್ಯಕ್ತಪಾಪಸ್ಯ ಕಾಮಮಿಷ್ಟಂ ಕ್ಷಣಾದ್ಭವೇತ್ ॥ ೨೧ ॥

ನಾಶಮಾಡಿ ನನ್ನನ್ನು ರಕ್ಷಿಸು. "ಹುಂ ಫಟ್" ಎಂಬ ಬೀಜಾಕ್ಷರಗಳಿಂದ ನಿನಗೆ ನಮಸ್ಕಾರವನ್ನು ಮಾಡುವೆನು.

ಸೂರ್ಯ, ಚಂದ್ರ, ಯಮ, ಕಾಲಪುರುಷ, ಪಂಚಮಹಾಭೂತಗಳು, ಈ ಒಂಭತ್ತು ಜನಗಳೂ ನಾನು ಮಾಡುವ ಒಳ್ಳೆಯದಾದ ಅಥವಾ ಕೆಟ್ಟದಾದ ಕರ್ಮಗಳಿಗೆ ಸಾಕ್ಷಿಗಳಾಗಿರುವರು.

೧೮. ಅನಂತರದಲ್ಲಿ ಪುನಃ "ಹುಂ ಫಟ್" ಎಂಬದಾಗಿ ತನ್ನ ಪಕ್ಕಗಳೂ, ಮೇಲುಭಾಗ ಮತ್ತು ಕೆಳಭಾಗ ಈ ಕಡೆಗಳಲ್ಲಿಯೂ, ತನ್ನನ್ನು ಕ್ರೋಧದೃಷ್ಟಿಯಿಂದ ನೋಡಿಕೊಂಡು ನಂತರ ಪ್ರಸನ್ನವಾದ ಮನಸ್ಸುಳ್ಳವನಾಗಬೇಕು.

೧೯-೨೦. ಪಾಪೋತ್ಸಾರಣವೆಂಬ ಕರ್ಮವನ್ನು ಹೀಗೆ ಮೊದಲು ಮಾಡಿದರೆ ಪಾಪವು ಎಷ್ಟು ದೊಡ್ಡದಾಗಿದ್ದರೂ ಅದು ದೂರಕ್ಕೆ ಹೊರಟುಹೋಗಿ ಪೂಜೆಯು ಮುಗಿದ ನಂತರ ಪುನಃ ಅಲ್ಲಿಯೇ ಬಂದು ನೆಲಸುವುದು. ಕಡಿಮೆಯಾಗಿರುವ ಪಾಪವು ಅಲ್ಲಿಯೇ ನಾಶವನ್ನು ಹೊಂದುವುದು,

೨೧. ಅನಂತರದಲ್ಲಿ "ಓಂ ಅಃ ಫಟ್" ಎಂಬ ಮಂತ್ರದಿಂದ ಪೂಜೆಯನ್ನು ಮಾಡುವ ವೇದಿಕೆಯನ್ನು ಪ್ರವೇಶಿಸಬೇಕು. ಪಾಪರಹಿತನಾದವನಿಗೆ ಪೂಜೆಯಿಂದ ಬೇಕಾದ ಇಷ್ಟವು ಆ ಕ್ಷಣದಲ್ಲಿಯೇ ನೆರವೇರುವುದು.

ನಾರಾಚಮುದ್ರಯಾ ದೃಷ್ಟ್ವಾ ಸಮುಯಾ ಸಮುಲೋಕಯೇತ್ ।
ಪುಷ್ಪನೈವೇದ್ಯಗಂಧಾದಿ ಹ್ರಾಂ ಹ್ರೀಂ ಫಡಿತಿ ಮುಂತ್ರಕೈಃ ॥ ೨೨ ॥

ಯದಾತ್ಮನಾಽನವಜ್ಞಾತಂ ಸಮ್ಯಕ್ಪುಷ್ಪಾದಿದೂಷಣಂ ।
ಅಸ್ಪೃಶ್ಯಸ್ಪರ್ಶನಂ ವಾಪಿ ಯದನ್ಯಾಯಾರ್ಜಿತಂ ಚ ವಾ ॥೨೩ ॥

ತಥಾ ನಿರ್ಮಾಲ್ಯಸಂಸೃಷ್ಟಂ ಕೀಟಾದ್ಯಾರೋಪಣಂ ಚ ಯತ್ ।
ತತ್ಸರ್ವಂ ನಾಶಮಾಯಾತಿ ನೈವೇದ್ಯಾದ್ಯವಲೋಕನಾತ್ ॥ ೨೪ ॥

ತತೋ ರಮಿತಿ ಮುಂತ್ರೇಣ ಶಿಖಾಂ ದೀಪಸ್ಯ ಸಂಸ್ಪೃಶೇತ್ ।
ಸ ತಸ್ಯ ಸುಭಗೋ ದೀಪೋ ಭವೇತ್ಸ್ಪರ್ಶನಮಾತ್ರತಃ ॥ ೨೫ ॥

ಪತಂಗಕೀಟಕೇಶಾದಿದಾಹಾತ್ ಕ್ರವ್ಯಾದಸಂಹತಃ ।
ವಸಾಮಜ್ಜಾಸ್ಥಿಸಂಪೂತಿರ್ಯಜ್ಞಾದಾವುಪಯೋಜನಂ ॥ ೨೬ ॥

ಅಜ್ಞಾತರೂಪಂ ತತ್ಸರ್ವಂ ದೋಷಂ ಸ್ಪರ್ಶಾದ್ವಿನಾಶಯೇತ್ ॥ ೨೭ ॥

---

೨೨. ಪೂಜಾಸಾಮಗ್ರಿಗಳಾದ ಹೂವು ನೈವೇದ್ಯ ಗಂಧ ಇವೇ ಮೊದಲಾದವು ಗಳನ್ನು "ಹ್ರಾಂ ಹ್ರೀಂ ಫಟ್" ಎಂಬ ಮಂತ್ರಗಳಿಂದಲೂ, ನಾರಾಚವೆಂಬ ಮುದ್ರೆಯಿಂದಲೂ, ಸುತ್ತಲೂ ನೋಡಬೇಕು.

೨೩-೨೪. ಹೂವು ಮುಂತಾದ ಪೂಜಾದ್ರವ್ಯಗಳಲ್ಲಿದ್ದು ತನಗೆ ಗೊತ್ತಾಗದೇ ಇರುವ ಅಸ್ಪೃಶ್ಯಸ್ಪರ್ಶನ, ಎಂದರೆ ಅಶುಚಿಯಾಗಿದ್ದವರು ಮುಟ್ಟಿದ್ದು. ಅನ್ಯಾಯಾರ್ಜಿತತ್ವ, ನಿರ್ಮಾಲ್ಯಸಂಸೃಷ್ಟತಾ, ಮತ್ತು ಕೀಟಾದಿ ಸಂಬಂಧ, ಇವೇ ಮೊದಲಾದ ದೋಷಗಳು ಎಲ್ಲವೂ ನೈವೇದ್ಯಾದಿಗಳನ್ನು ಹಿಂದೆಹೇಳಿದ ರೀತಿಯಿಂದ ನೋಡಿದ ಕೂಡಲೇ ನಾಶವಾಗುವವು.

೨೫-೨೬. ಅನಂತರ "ರಂ" ಎಂಬ ಮಂತ್ರದಿಂದ ದೀಪದ ಶಿಖೆಯನ್ನು ಮುಟ್ಟಬೇಕು. ಸ್ಪರ್ಶಮಾತ್ರದಿಂದ ಆ ದೀಪವು ಶುಭಲಕ್ಷಣವುಳ್ಳದ್ದಾಗುವುದು. ಹಕ್ಕಿಯಗರಿ, ಹುಳ, ಕೂದಲು, ಇವುಗಳು ದೀಪದಲ್ಲಿ ಸುಟ್ಟಿರುವುದು, ರಾಕ್ಷಸರ ಬಾಧೆ, ತನಗೆ ತಿಳಿಯದೆ ಪೂಜೆಯಲ್ಲಿ ಉಪಯೋಗಿಸುವ ವಸಾ, ಕೊಬ್ಬು, ಮೂಳೆ, ಇವುಗಳೇ ಮೊದಲಾದ ಎಲ್ಲಾವಿಧವಾದ ದೋಷಗಳೂ ದೀಪವನ್ನು ಸ್ಪರ್ಶಮಾಡುವುದರಿಂದ ನಾಶವಾಗುವವು.

ನಾರಸಿಂಹೇನ ಮುಂತ್ರೇಣ ದೇವತೀರ್ಥೇನ ಸಂಸ್ಪೃಶೇತ್ ।
ಪಾನೀಯಂ ಘಟಮುಧ್ಯಸ್ಥಂ ವೀಕ್ಷನ್ನಭ್ಯರ್ಚ್ಯ ಯಾಜಕಃ ॥ ೨೮ ॥

ವಾಮೇನ ಪಾಣಿನಾ ಧೃತ್ವಾ ವಾಮಪಾರ್ಶ್ವೇ ಸ್ಥಿತಂ ತದಾ ।
ಪಾತ್ರಮಾಧಾರಮುಂತ್ರೇಣ ಸಂಸ್ಕುರ್ವನ್ ಸಂಸ್ಪೃಶೇಜ್ಜಲಂ ॥ ೨೯ ॥

ಯದಜ್ಞಾನಾದಪೇಯಾದಿಸಂಸೃಷ್ಟಿರಿಹ ಸಂಗತಾ ।
ಯದನ್ಯದ್ದೂಷಣಂ ಪಾತ್ರೇ ತೋಯೇ ವಾಜ್ಞಾನತೋ ಭವೇತ್ ॥ ೩೦ ॥

ಜಲಾಶಯಂ ಶವಸ್ಪರ್ಶಾಜ್ಜಲಂ ಸ್ನಾನಾಚ್ಚ ಸಂಗತಂ ।
ದೂಷಣಾನಿ ವಿನಶ್ಯಂತಿ ತಾನಿ ವೈ ದೇವಪೂಜನೇ ॥ ೩೧ ॥

ಪ್ರಜಾಪತಿಸುತೋ ಹಾಂತಪ್ರಾಂತಃ ಸ್ವರಸಮನ್ವಿತಃ ।
ಚಂದ್ರಾರ್ಧಬಿಂದುಸಹಿತೋ ಮುಂತ್ರೋಽಯಂ ನಾರಸಿಂಹಕಃ ॥ ೩೨ ॥

---

೨೮. ಪೂಜೆಮಾಡುವವನು ಕಲಶದಲ್ಲಿರುವ ನೀರನ್ನು ನೋಡುತ್ತಾ ನರಸಿಂಹ ದೇವತಾಕವಾದ ಮಂತ್ರದಿಂದ ಮುಟ್ಟಿ ಪ್ರೋಕ್ಷಿಸಿಕೊಳ್ಳಬೇಕು.

೨೯. ಆಧಾರ ಮಂತ್ರದಿಂದ ಎಡಗಡೆಪಾರ್ಶ್ವದಲ್ಲಿರುವ ಪಾತ್ರೆಯನ್ನು ಎಡದಕೈಯಿಂದ ಮುಟ್ಟಿ ಸಂಸ್ಕಾರ ಮಾಡಬೇಕು. ಸಾಧಕನು ತನ್ನ ಹೆಸರಿನ ಮೊದಲನೆಯ ಅಕ್ಷರಕ್ಕೆ ಸೊನ್ನೆಯನ್ನು ಸೇರಿಸಿದರೆ ಅದು ಆಧಾರಮಾತ್ರವೆನಿಸುವುದು.—ಉದಾಹರಣೆಗಾಗಿ ಸಾಧಕನ ಹೆಸರು ನರಸಿಂಹನೆಂದು ಇದ್ದರೆ ನಂ ಎಂಬುವುದು ಆ ಸಾಧಕನಿಗೆ ಆಧಾರಮಂತ್ರವಾಗುವುದು.

೩೦-೩೧. ಅಜ್ಞಾನದಿಂದ ಕುಡಿಯಲು ಅಯೋಗ್ಯವಾದ ನೀರನ್ನು ಪೂಜೆಗಾಗಿ ತಂದಿರುವುದು ಚಂಡಾಲ ಮುಂತಾದವರು ಮುಟ್ಟಿರುವುದು, ತೊಳೆಯದೆ ಕೊಳಕಾಗಿರುವ ಪಾತ್ರೆಯಲ್ಲಿ ಇರುವ ನೀರು, ನೀರನ್ನು ತಂದ ಕೆರೆ, ಕೊಳ, ಮೊದಲಾದ ಜಲಾಶಯದಲ್ಲಿ ಶವ ಎಂದರೆ ಹೆಣ ಮುಂತಾದುವು ಇರುವುದು, ಸ್ನಾನಮಾಡಿ ಕೊಳೆಯಾಗಿರುವ ನೀರು, ಈ ವಿಧವಾದ ನೀರಿನ ದೋಷಗಳೆಲ್ಲವೂ ಹಿಂದೆಹೇಳಿದ ಆಧಾರಮಂತ್ರ ಸಂಸ್ಕಾರದಿಂದ ನಾಶವಾಗುವವು.

೩೨. ಪ್ರಜಾಪತಿಸುತಬೀಜವಾದ ರಕಾರವೂ, ಹಕಾರವೂ, ಅಕಾರದ ಮುಂದಿನ ಅಕ್ಷರವಾದ ಆ ಕಾರವೂ ಸೇರಿ ಹ್ರಾ ಆಗುವುದು. ಇದಕ್ಕೆ ಬಿಂದುವನ್ನು ಸೇರಿಸಿದರೆ ಹ್ರಾಂ ಎಂದು ನಾರಸಿಂಹ ಮಂತ್ರವಾಗುವುದು.

ಸ್ವಸಂಜ್ಞಾದ್ಯಕ್ಷರಂ ಬಿಂದುಚಂದ್ರಾರ್ಧಪರಿಯೋಜಿತಂ ।
ಆಧಾರಮಂತ್ರಂ ಜಾನೀಯಾತ್ಸಾಧಕಃ ಕಾರ್ಯಸಿದ್ಧಯೇ ॥ ೩೩ ॥

ತತ ಆಧಾರಮಂತ್ರೇಣ ಪಾಣಿಭ್ಯಾಮಾಸನಂ ಸ್ವಕಂ ।
ಆದಾಯ ವಿನಿಧಾಯಾಶು ಪುನಃ ಸಂಸ್ಪೃಶ್ಯ ಪಾಣಿನಾ । ॥ ೩೪ ॥

ಆತ್ಮಮಂತ್ರೇಣೋಪವಿಶೇತ್ತದಾ ತಸ್ಮಿನ್ ವರಾಸನೇ ।
ದುಃಶಿಲ್ಪಿರಚಿತತ್ವಾದಿ ಯದ್ವಾನ್ಯಾಸನದೂಷಣಂ ॥ ೩೫ ॥

ಅಜ್ಞಾತಂ ವಿಲಯಂ ಯಾತಿ ಉಪವೇಶಾತ್ಸಮಂತ್ರಕಾತ್ ।
ಆಹೂಯ ಸ್ವಾಕ್ಷರಂ ಪೂರ್ವಂ ಸೋಮಸೂಮಿಸಮನ್ವಿತಂ ॥ ೩೬ ॥

ಸಬಿಂದುಕಂ ವಿಜಾನೀಯಾದಾತ್ಮಮಂತ್ರಂ ತು ಸಾಧಕಃ ।
ತತಸ್ತು ಮಾತೃಕಾನ್ಯಾಸಂ ನಾದಬಿಂದುಸಮನ್ವಿತಂ ॥ ೩೭ ॥

---

೩೩. ಸಾಧಕನಾದವನು ತನ್ನ ಹೆಸರಿನ ಮೊದಲನೆಯ ಅಕ್ಷರವನ್ನು ಬಿಂದುವಿನೊಡನೆ ಸೇರಿಸಿದರೆ ಅದು ಆಧಾರಮಂತ್ರವೆಂದು ತನ್ನ ಕಾರ್ಯಸಿದ್ಧಿಗಾಗಿ ತಿಳಿದುಕೊಳ್ಳಬೇಕು.

೩೪. ಅನಂತರದಲ್ಲಿ ಆಧಾರಮಂತ್ರದಿಂದ ತನ್ನ ಆಸನವನ್ನು ಎರಡು ಕೈಗಳಿಂದ ಹಿಡಿದು ತೆಗೆದುಕೊಂಡು ಪುನಃ ತನ್ನ ಕೈಯಿಂದ ಅದನ್ನು ಚೆನ್ನಾಗಿ ನವರಿ ಉತ್ತಮವಾದ ಆ ಪೀಠದಲ್ಲಿ ಆತ್ಮಮಂತ್ರದಿಂದ ಆಗ ಬೇಗನೆ ಕೂತುಕೊಳ್ಳಬೇಕು.

೩೫. ಶಿಲ್ಪವಿದ್ಯೆಯನ್ನು ತಿಳಿಯದಿರುವವನು ಮಾಡಿರುವ ಆಸನ ಅಶುಚಿಯಾಗಿರುವವನು ಮುಟ್ಟಿರುವುದು ಇತರರು ಕೂತುಕೊಂಡು ಕೊಳೆಯಾಗಿರುವುದು ಇವೇ ಮುಂತಾವ ತನಗೆ ತಿಳಿಯದಿರುವ ಯಾವ ದೋಷಗಳಿರುವುವೋ ಅವೆಲ್ಲವೂ ಮಂತ್ರಸಹಿತವಾಗಿ ತಾನು ಕೂತುಕೊಳ್ಳುವುದರಿಂದ ನಾಶವನ್ನು ಹೊಂದುವವು.

೩೬. ಸಾಧಕನಾದವನು ತನ್ನ ಹೆಸರಿನ ಮೊದಲನೆಯ ಅಕ್ಷರಕ್ಕೆ ಬಿಂದುವನ್ನು ಸೇರಿಸಿಕೊಂಡರೆ ಆತ್ಮಮಂತ್ರವಾಗುವುದೆಂದು ತಿಳಿಯಬೇಕು.

೩೭. ಅನಂತರದಲ್ಲಿ ಬುದ್ಧಿವಂತನಾದ ಸಾಧಕನು ಮಾತೃಕಾ ಮಂತ್ರಗಳಿಗೆ ನಾದ ಬಿಂದುಗಳನ್ನು ಸೇರಿಸಿಕೊಂಡು ತನ್ನ ಶರೀರದಲ್ಲಿ ಮಾತೃಕಾನ್ಯಾಸವನ್ನು ಮಾಡಿಕೊಳ್ಳಬೇಕು.

ಕುರ್ಯಾತ್ತು ಮಾತೃಕಾಮಂತ್ರೈಃ ಸ್ವಶರೀರೇ ವಿಚಕ್ಷಣಃ ।
ಕಲ್ಪೇಷು ಚ ಯದಜ್ಞಾತಂ ಮಂತ್ರೋಚ್ಚಾರಣಕರ್ಮಣಿ ॥ ೫೮ ॥

ಯದ್ದುಷ್ಟಂ ವಾ ತಥಾಸ್ಪೃಷ್ಟಂ ಮಾತ್ರಾಭ್ರಷ್ಟಾದಿದೂಷಣಂ ।
ತನ್ನಾಸ್ತಾ ಮಾತೃಕಾ ಮಂತ್ರಾ ನಾಶಯಂತಿ ಸದೈವ ಹಿ ॥ ೫೯ ॥

ವ್ಯಂಜನಾನಿ ಚ ಸರ್ವಾಣಿ ತಥಾ ವಿಷ್ಣ್ವಾದಯಃ ಸ್ವರಾಃ ।
ಸರ್ವೇ ತೇ ಮಾತೃಕಾಮಂತ್ರಾಶ್ಚಂದ್ರಬಿಂದುವಿಭೂಷಣಾಃ ॥ ೬೦ ॥

ಸರ್ವೇ ಯುಗಾಂತಬಂಧೇಷು ನ್ಯಸ್ತೇಷು ನ್ಯೂನಪೂರಣಂ ।
ಮಂತ್ರೇ ಕಲ್ಪೇ ಚ ಕುರ್ವಂತಿ ವಿನ್ಯಸ್ತಾ ಮಾತೃಕಾಃ ಸ್ವಯಂ ॥ ೬೧ ॥

ಏಕಮಾತ್ರೋ ಭವೇತ್ ಹ್ರಸ್ವೋ ದ್ವಿಮಾತ್ರೋ ದೀರ್ಘ ಉಚ್ಯತೆ ।
ಪ್ಲುತಸ್ತ್ರಿಮಾತ್ರೋ ವಿಜ್ಞೇಯೋ ವರ್ಣಾ ಏತೇ ವ್ಯವಸ್ಥಿತಾಃ ॥ ೬೨ ॥

೫೮-೫೯. ಮಂತ್ರಕಲ್ಪದಲ್ಲಿ ಯಾವದು ತಿಳಿಯದೇ ಇರುವುದೋ, ಮಂತ್ರವನ್ನು ಉಚ್ಚಾರಣೆ ಮಾಡುವ ಕಾಲದಲ್ಲಿ ಯಾವದು ತಪ್ಪಾಗುವುದೋ, ಯಾವದು ಮಾತ್ರೆಯೇ ಮೊದಲಾದವುಗಳಿಂದ ಹೆಚ್ಚುಕಡಿಮೆಯಾಗಿ ಸರಿಯಾದ ಉಚ್ಚಾರಣೆಯನ್ನು ಹೊಂದದೆ ಇರುವುದೋ, ಈದೋಷಗಳೆಲ್ಲವೂ ಆ ಸಾಧಕನು ತನ್ನ ಶರೀರದಲ್ಲಿ ಮಾಡಿಕೊಳ್ಳುವ ಮಾತೃಕಾನ್ಯಾಸದಿಂದ ನಾಶವಾಗುವವು.

೬೦. ಎಲ್ಲಾ ವ್ಯಂಜನಗಳೂ, ಎಂದರೆ ಕಕಾರದಿಂದ ಕ್ಷಕಾರದವರೆಗೂ ಇರುವ ಅಕ್ಷರಗಳೂ, ಅಕಾರಾದಿಯಾಗಿರುವ ಎಲ್ಲಾ ಸ್ವರಗಳೂ ಸಹ ಅನುಸ್ವಾರ ಬಿಂದುಗಳಿಂದ ಕೂಡಿದವುಗಳಾದರೆ ಮಾತೃಕಾಮಂತ್ರಗಳಾಗುತ್ತವೆ.

೬೧. ಮಂತ್ರದಲ್ಲಿಯೂ, ಮಂತ್ರಕಲ್ಪದಲ್ಲಿಯೂ, ಸಂಭವಿಸಬಹುದಾದ ದೋಷವನ್ನು ಈ ಮಾತೃಕಾನ್ಯಾಸಪೂರ್ವಕವಾಗಿ ಜೊತೆಯಾಗಿ ಇಡಲ್ಪಟ್ಟ ಮಾತೃಕಾಕ್ಷರಗಳು ನಾಶಪಡಿಸಿ ಅದನ್ನು ಸರಿಮಾಡುವುವು.

೬೨. ಹ್ರಸ್ವಾಕ್ಷರವು ಒಂದುಮಾತ್ರೆಯುಳ್ಳದ್ದಾಗಿರುವುದು. ಎರಡು ಮಾತ್ರೆಯುಳ್ಳ ಅಕ್ಷರವು ದಿರ್ಘವೆನಿಸಿಕೊಳ್ಳುವುದು. ಮೂರು ಮಾತ್ರೆಯುಳ್ಳ ಅಕ್ಷರವು ಪ್ಲುತವೆಂದೆನಿಸಿಕೊಳ್ಳುವುದು. ಅಕ್ಷರಗಳು ಹೀಗೆ ವಿಂಗಡಿಸಲ್ಪಟ್ಟಿರುತ್ತವೆ.

ಸರ್ವೇಷಾಮೇವ ವರ್ಣಾನಾಂ ಮಾತ್ರಾದೇವ್ಯಸ್ತು ಮಾತೃಕಾಃ ।
ಶಿವದೂತೀಪ್ರಭುತಯಸ್ತನ್ನ್ಯಾಸಾಸ್ತತ್ತನುಸ್ಥಿತಾಃ ॥ ೪೩ ॥

ಪೂರಯಂತಿ ಚ ತಾಂ ನ್ಯೂನಾಂ ಚತುರ್ವರ್ಗಂ ತಥಾ ಚಿರಾತ್ ।
ದದತ್ಯೇವ ಸದಾ ರಕ್ಷಾಂ ಕುರ್ವಂತಿ ಸುರಪೂಜನೇ ॥ ೪೪ ॥

ಚತುರ್ವರ್ಗಪ್ರದಶ್ಚಾಯಂ ಸರ್ವಕಾಮಫಲಪ್ರದಃ ।
ಸರ್ವದಾ ಮಾತೃಕಾನ್ಯಾಸಃ ತುಷ್ಟಿಪುಷ್ಟಿಪ್ರದಾಯಕಃ ॥ ೪೫ ॥

ಯಃ ಕುರ್ಯಾನ್ಮಾತೃಕಾನ್ಯಾಸಂ ವಿನಾಪಿ ಸುರಪೂಜನಾತ್ ।
ತಸ್ಮಾದ್ಬಿಭೇತಿ ಸತತಂ ಭೂತಗ್ರಾಮಶ್ಚತುರ್ವಿಧಃ ॥ ೪೬ ॥

---

೪೩. ಎಲ್ಲಾ ಅಕ್ಷರಗಳಿಗೂ ಶಿವದೂತಿಯೇ ಮೊದಲಾದ ದೇವಿಯರು ಮಾತೃಕೆಯರಾಗಿ ಆಯಾಯ ಅಕ್ಷರಗಳಿಗೆ ಅಭಿಮಾನ ದೇವತೆಗಳಾಗಿರುವರು. ಆಯಾಯ ಅಕ್ಷರಗಳನ್ನು ಕಲ್ಪೋಕ್ತಪ್ರಕಾರದಿಂದ ನ್ಯಾಸ ಮಾಡಿದರೆ ಆಯಾಯ ಪ್ರದೇಶದಲ್ಲಿ ಆಯಾಯ ದೇವಿಯರು ವಾಸಮಾಡುವರು.

೪೪. ಆಯಾಯ ಬೀಜಾಕ್ಷರಗಳನ್ನು ಉಚ್ಚರಿಸಿಕೊಂಡು ಮಾತೃಕಾನ್ಯಾಸ ಮಾಡಿದ ಕಾಲದಲ್ಲಿ, ಆಯಾಯ ಅಕ್ಷರಕ್ಕೆ ಸಂಬಂಧಿಸಿದ ದೇವಿಯರು ದೇವಪೂಜೆಯ ಕಾಲದಲ್ಲಿ ಯಾವಾಗಲೂ ಆ ಸಾಧಕನಿಗೆ ರಕ್ಷಣೆಯನ್ನುಂಟುಮಾಡಿ ಅವನ ಪೂಜೆಯಲ್ಲಿರುವ ನ್ಯೂನಾಧಿಕಭಾವವನ್ನು ಸರಿಪಡಿಸಿ ಅವನಿಗೆ ಬೇಕಾದ ಚತುರ್ವರ್ಗಗಳನ್ನು ಕೊಡುವರು.

೪೫. ಈ ಮಾತೃಕಾನ್ಯಾಸವು ಯಾವಾಗಲೂ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ಕೊಡುವುದು. ಎಲ್ಲಾವಿಧವಾದ ಅಭಿಲಾಷೆಯನ್ನೂ ಪೂರ್ಣಮಾಡಿಕೊಡುವುದು. ದೇಹಕ್ಕೆ ಪುಷ್ಟಿಯನ್ನೂ, ಮನಸ್ಸಿಗೆ ಸಂತೋಷವನ್ನೂ ಸಹ ಕೊಡುವುದು.

೪೬. ಯಾವನು ದೇವಪೂಜೆಯಲ್ಲಿಲ್ಲದಿದ್ದಾಗ್ಯೂ ಮಾತೃಕಾನ್ಯಾಸವನ್ನು ಮಾಡಿಕೊಳ್ಳುವನೋ ಅಂಥವನಿಗೆ ನಾಲ್ಕುವಿಧವಾದ ಪ್ರಾಣಿಗಳ ಸಮೂಹವು (ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ) ಯಾವಾಗಲೂ ಹೆದರುವುದು.

ತಂ ದ್ರಷ್ಟುಮಪಿ ದೇವಾಶ್ಚ ಸ್ಪೃಹಯಂತಿ ಮಹೌಜಸಂ ।
ಸ ಸರ್ವಂ ಚ ವಶಂ ಕುರ್ಯಾನ್ನ ಚ ಯಾತಿ ಪರಾಭವಂ ॥ ೪೭ ॥

ಕುಸುಮಂ ವಿಷ್ಣುಮಂತ್ರೇಣ ಅಂಗುಲ್ಯಗ್ರೇಣ ಸಾಧಕಃ ।
ವಿಮರ್ದನಾರ್ಥಂ ಗೃಹ್ಣೀಯಾತ್ಕರಶೋಧನಕರ್ಮಣಿ ॥ ೪೮ ॥

ಉಪಾಂತಃ ಸಾಮಿಚಂದ್ರೇಣ ರಂಜಿತಃ ಶೂನ್ಯಸಂಯುತಃ ।
ರುದ್ರಾಂತೋಪರಿ ಸಂಸೃಷ್ಟೋ ಮಂತ್ರೋಽಯಂ ವೈಷ್ಣವೋ ಮತಃ ॥೪೯॥

ಪ್ರಾಸಾದೇನ ತು ಮಂತ್ರೇಣ ಅಂಗುಲ್ಯಗ್ರೇಣ ಸಾಧಕಃ ।
ಗೃಹೀತ್ವಾ ಚ ತತಃ ಕುರ್ಯಾತ್ಕರಾಭ್ಯಾಂ ಪುಷ್ಪಮರ್ದನಂ ॥ ೫೦ ॥

ನಿರ್ಮಥೇತ್ಕಾಮಬೀಜೇನ ಜಿಘ್ರೇದ್ಬ್ರಹ್ಮೇಣ ತತ್ಪುನಃ ।
ಪ್ರಾಸಾದೇನ ಪರಿತ್ಯಾಗೋ ದಿಶ್ಯೈಶಾನ್ಯಾಂ ವಿಶೇಷತಃ ॥ ೫೧ ॥

---

೪೭. ದೇವತೆಗಳೂ ಕೂಡ ಬಹಳ ಶಕ್ತಿಯುಳ್ಳ ಅವನ ದರ್ಶನಕ್ಕಾಗಿ ಆಸೆ ಪಡುವರು. ಅವನಿಗೆ ಸಕಲವೂ ವಶವಾಗಿರುವುದು. ಮತ್ತು ಅವನು ಅಪಜಯವನ್ನು ಹೊಂದುವುದಿಲ್ಲವು.

೪೮. ಸಾಧಕನು ವಿಷ್ಣುದೇವತಾಕವಾದ ಅಂ ಎಂಬ ಬೀಜಮಂತ್ರವನ್ನು ಉಚ್ಚರಿಸುತ್ತಾ ತನ್ನ ಬೆರಳಿನ ತುದಿಯಿಂದ ಹೂವನ್ನು ಮರ್ದನೆ ಮಾಡುವುದಕ್ಕಾಗಿ ತೆಗೆದುಕೊಳ್ಳಬೇಕು. ಹೀಗೆ ಹೂವನ್ನು ಮರ್ದನೆ ಮಾಡುವುದರಿಂದ ಹಸ್ತವು ಶುದ್ಧಿಯಾಗುವುದು:

೪೯. ಅಕಾರ ಮತ್ತು ಇಕಾರಗಳು ಸೇರಿದರೆ ಏಕಾರವಾಗುವುದು. ಇದಕ್ಕೆ ಬಿಂದುವನ್ನು ಸೇರಿಸಿದರೆ ಏಂ ಎಂದು ವಿಷ್ಣುಮಂತ್ರವಾಗುವುದು.

೫೦-೫೧. ಸಾಧಕನು ಪ್ರಾಸಾದ ಮಂತ್ರದಿಂದ (ಹ್ರೌಂ) ತನ್ನ ಬೆರಳಿನ ತುದಿಯಲ್ಲಿ ಹೂವನ್ನು ಹಿಡಿದುಕೊಂಡು ಕಾಮಬೀಜದಿಂದ (ಕ್ಲೀಂ) ತಿಕ್ಕಬೇಕು. ಬಳಿಕ ಅದನ್ನು ಬ್ರಹ್ಮಬೀಜದಿಂದ (ಕ) ವಾಸನೆ ನೋಡಿ ಪುನಃ ಪ್ರಾಸಾದ ಮಂತ್ರವನ್ನು (ಹ್ರೌಂ) ಉಚ್ಚರಿಸುತ್ತಾ ಆ ಹೂವನ್ನು ಈಶಾನ್ಯ ದಿಕ್ಕಿನಲ್ಲಿ ಎಸೆಯಬೇಕು.

ಏವಂ ಕೃತೇ ತು ಕರಯೋರ್ನಿಶುದ್ಧಿರತುಲಾ ಭವೇತ್ ।
ಜಲೌಕಾಗೂಢಪಾದಾದಿಸ್ಪರ್ಶಾಚ್ಛುದ್ಧಿರ್ನಿಶೋಧನಾತ್ ॥ ೫೨ ॥

ದುರ್ಗಂಧ್ಯುಚ್ಛಿಷ್ಟಸಂಸ್ಪರ್ಶಾದ್ದೂಷಣಂ ಕರಯೋಸ್ತು ಯತ್ ।
ಅಜ್ಞಾತರೂಪಂ ತತ್ಸರ್ವಂ ನಾಶಯೇತ್ಸುವಿಧಾನತಃ ॥ ೫೩ ॥

ಅಂಗುಲ್ಯಗ್ರಾಣಿ ಶುದ್ಧಾನಿ ಪುಷ್ಪಾಣಾಂ ಗ್ರಹಣಾದ್ಭವೇತ್ ।
ತಲದ್ವಯಂ ಮರ್ದನಾತ್ತು ವಿಶುದ್ಧಮುಭಯಾಯತೇ ॥ ೫೪ ॥

ನಿರ್ಮಂಥನಾತ್ಪಾಣಿಪೃಷ್ಠಂ ಘ್ರಾಣಾನ್ನಾಸಾಗ್ರಮುತ್ತಮಂ ।
ತೀರ್ಥಾನಿ ಚ ಸಮಾಯಾಂತಿ ನಾಸಿಕಾಯಾಂ ಕರಂ ಪ್ರತಿ ॥ ೫೫ ॥

ತಸ್ಮಾದ್ಯತ್ನೇನ ಕಾರ್ಯಾಣಿ ಕರ್ಮಾಣ್ಯೇತಾನಿ ಭೈರವ ।
ಪ್ರಾಂತಾದಿರ್ವಾಸುದೇವೇನ ವರ್ಣೇನಾಪಿ ಚ ಸಂಹಿತಃ ॥ ೫೬ ॥

ಶಂಭುಚೂಡಾಬಿಂದುಯುಕ್ತಃ ಪ್ರಾಸಾದಶ್ಚ ಸ ಉಚ್ಯತೇ ।
ಕಾಮಬೀಜಂ ತು ವಿಜ್ಞೇಯಂ ವಾಸುದೇವೇಂದುಬಿಂದುಭಿಃ ॥ ೫೭ ॥

೫೨-೫೩. ಎರಡು ಕೈಗಳಿಂದಲೂ ಈರೀತಿ ಪುಷ್ಪಮರ್ದನವನ್ನು ಮಾಡಿದರೆ ಕ್ರಿಮಿಕೀಟಾದಿಗಳ ಸಂಸ್ಪರ್ಶ, ಕೆಟ್ಟವಾಸನೆ, ತನಗೆ ತಿಳಿಯದಿರುವ ಎಂಜಲಿನ ಸಂಬಂಧ, ಮುಂತಾದ ದೋಷಗಳು ನಾಶವಾಗಿ ಹಸ್ತಶುದ್ಧಿಯಾಗುವುದು.

೫೪-೫೫. ಪೂವನ್ನು ಮುಟ್ಟಿ ತೆಗೆದುಕೊಳ್ಳುವುದರಿಂದ ಬೆರಳಿನ ತುದಿಗಳು ಶುದ್ಧವಾಗುವವು. ಮರ್ದನದಿಂದ ಅಂಗೈಗಳೂ, ತಿಕ್ಕುವುದರಿಂದ ಮುಂಗೈಗಳೂ, ವಾಸನೆ ನೋಡುವುದರಿಂದ ಮೂಗಿನ ತುದಿಯೂ ಶುದ್ಧವಾಗುವವು. ನಾಸಿಕದಲ್ಲಿ ಇರುವ ತೀರ್ಥಗಳು ಕೈಯಿಗೆ ಬಂದು ಹಸ್ತಶುದ್ಧಿಯಾಗುವುದು. ಆದುದರಿಂದ ಎಚ್ಚರ ಭೈರವನೇ ಈ ಕರ್ಮಗಳನ್ನು ಅವಶ್ಯಕವಾಗಿ ಮಾಡಬೇಕು.

೫೬-೫೭. ಹಕಾರ, ಆಕಾರ, ಔಕಾರಗಳಿಗೆ ಬಿಂದುವನ್ನು ಸೇರಿಸಿದರೆ ಹ್ಸೌಂ ಎಂದು ಪ್ರಾಸಾದಮಂತ್ರವಾಗುವುದು. ವಾಸುದೇವಬೀಜವಾದ ಅಕಾರಕ್ಕೆ ಬಿಂದುವನ್ನು ಸೇರಿಸಿದರೆ ಅಂ ಎಂದು ಕಾಮಬೀಜವಾಗುವುದು ಮೊದಲನೆಯ ವ್ಯಂಜನವಾದ ಕಕಾರಕ್ಕೆ

ವ್ಯಂಜನಂ ಚಾದ್ಯದಂತಂ ಚ ಸ್ವಾಂತದಂತ್ಯಾ ತು ಪೂರ್ವಕಂ ।
ಆದ್ಯದಂತ್ಯದ್ವಯಂ ಪಶ್ಚಾದ್ವ್ಯಂಜನಂ ಪ್ರಣವೋತ್ತರಂ ॥ ೫೮ ॥

ಬ್ರಹ್ಮಬೀಜಮಿದಂ ಪ್ರೋಕ್ತಂ ಸರ್ವಪಾಪಪ್ರಣಾಶನಂ ।
ಪ್ರಣವಂ ದೀರ್ಘಮುಚ್ಚಾರ್ಯ ಪ್ರಥಮಂ ಮುಖಶುದ್ಧಯೇ ॥ ೫೯ ॥

ವಾಸುದೇವಸ್ಯ ಬೀಜೇನ ಪ್ರಾಣಾಯಾಮಂ ಸಮಾಚರೇತ್ ।
ಯಸ್ಯ ದೇವಸ್ಯ ಯದ್ರೂಪಂ ಯಥಾ ಭೂಷಣವಾಹನಂ ॥ ೬೦ ॥

ತದೇವ ಪೂಜನೇ ತಸ್ಯ ಚಿಂತಯೇತ್ಪೂರಕಾದಿಭಿಃ ।
ವೈಷ್ಣವೀತಂತ್ರಮಂತ್ರಸ್ಯ ಕಂಠಾದ್ಯಂ ಯತ್ಪುರಸ್ಸರಂ ॥ ೬೧ ॥

ಅಕಾರವನ್ನು ಸೇರಿಸಿ ಪ್ರಣವಪೂರ್ವಕವಾಗಿ ಓಂ ಕಂ ಎಂದು ಉಚ್ಚರಿಸಿದರೆ ಸರ್ವ ಪಾಪನನ್ನೂ ನಾಶಮಾಡುವ ಬ್ರಹ್ಮಬೀಜವೆನಿಸುವುದು.

೫೯. ಮೊದಲು ಓಂ ಎಂದು ಪ್ರಣವಮಂತ್ರವನ್ನು ದೀರ್ಘವಾಗಿ ಉಚ್ಚರಿಸಬೇಕು. ಇದರಿಂದ ಮುಖಶುದ್ಧಿಯಾಗುವುದು. ಬಳಿಕ ವಾಸುದೇವಬೀಜವಾದ ಅಂ ಎಂಬ ಮಂತ್ರದಿಂದ ಪ್ರಾಣಾಯಾಮವನ್ನು ಮಾಡಬೇಕು.

೬೦. ರೇಚಕ, ಪೂರಕ, ಕುಂಭಕಗಳೆಂಬ ಮೂರುವಿಧವಾದ ಪ್ರಾಣಾಯಾಮವನ್ನು ಮಾಡುವಾಗ ತಾನು ಪೂಜೆ ಮಾಡಬೇಕಾಗಿರುವ ದೇವತೆಗೆ ರೂಪ, ಅಲಂಕಾರ, ವಾಹನ ಮೊದಲಾದ ಲಕ್ಷಣಗಳು ಹೇಗೆ ಹೇಗೆ ಇರುವವೋ ಹಾಗೆಯೇ ಮನಸ್ಸಿನಲ್ಲಿ ಧ್ಯಾನಮಾಡುತ್ತಾ ಪ್ರಾಣಾಯಾಮವನ್ನು ಮಾಡಬೇಕು.

೬೧. ವೈಷ್ಣವೀತಂತ್ರದಲ್ಲಿ ಹೇಳಿರುವ ವಾಸುದೇವ ಬೀಜವು ಯಾವುದೆಂದರೆ ಕಂಠದಿಂದ ಪ್ರಾರಂಭದಲ್ಲಿ ಸುಲಭವಾಗಿ ಉಚ್ಚರಿಸುವಂತಹ ಅ ಎಂಬ ವರ್ಣವು. ಇದಕ್ಕೆ ಬಿಂದುವನ್ನು ಸೇರಿಸಿದರೆ ಪೂರ್ಣಚಂದ್ರನಂತೆ ಶೋಭಿಸುವ ದಿವ್ಯವಾದ ವಾಸುದೇವಬೀಜವಾಗುವುದು.

ತದ್ಬೀಜಂ ವಾಸುದೇವಸ್ಯ ಪೂರ್ಣಚಂದ್ರನಿಭಂ ಸದಾ ।
ಗಂಗಾವತಾರಬೀಜೇನ ಪ್ರಥಮಂ ಧೇನುಮುದ್ರಯಾ ॥ ೬೨ ॥

ಅಮೃತೀಕರಣಂ ಕುರ್ಯಾದರ್ಘ್ಯಪಾತ್ರಾಂತರೇ ಜಲೇ ।
ಶಶಿಖಂಡಯುತಃ ಕಂಠ್ಯಃ ಪಂಚಮೀ ಬಲಬೀಜಕಃ ॥ ೬೩ ॥

ಗಂಗಾವತಾರಮಂತ್ರೋಽಯಂ ಸರ್ವಪಾಪಪ್ರಣಾಶಕಃ ।
ಮಾತ್ರಾದ್ವಯಯುತೋ ವಿಷ್ಣುರ್ಬಲಬೀಜಮುದಾಹೃತಂ ॥ ೬೪ ॥

ಅಮೃತೀಕರಣೇ ವೃತ್ತೇ ಕೋಽಯಂ ಯದ್ದೀಯತೇಽಮೃತಂ ।
ಭೂತ್ವಾ ಪ್ರಯಾತಿ ದೇವಸ್ಯ ಪ್ರೀತಯೇ ಸುರಪೂಜನೇ ॥ ೬೫ ॥

ಗಂಗಾಪಿ ಸ್ವಯಮಾಯಾತಿ ಪೂಜಾಪಾತ್ರಜಲಂ ಪ್ರತಿ ।
ಅಮೃತೀಕರಣಂ ಕುರ್ಯಾದ್ಧರ್ಮಕಾಮಾರ್ಥಸಿದ್ಧಯೇ ॥ ೬೬ ॥

ಸ್ವಸ್ತಿಕಂ ಗೋಮುಖಂ ಪದ್ಮಮರ್ಧಸ್ವಸ್ತಿಕಮೇವ ಚ
ಪರ್ಯಂಕಮಾಸನಂ ಶಸ್ತಮಭೀಷ್ಟಸುರಪೂಜನೇ ॥ ೬೭ ॥

೬೨-೬೪. ಬಳಿಕ ಅರ್ಘ್ಯಪಾತ್ರೆಯಲ್ಲಿರುವ ಜಲದಲ್ಲಿ ಗಂಗಾವತಾರಮಂತ್ರದ ಬೀಜಾಕ್ಷರವನ್ನು (ಗಂ) ಉಚ್ಚರಿಸುತ್ತಾ ಧೇನುಮುದ್ರೆಯನ್ನು ತೋರಿಸಿ ಅಮೃತೀಕರಣವನ್ನು ಮಾಡಬೇಕು. ಗಕಾರ ಅಕಾರಗಳಿಗೆ ಬಿಂದುವನ್ನು ಸೇರಿಸಿದರೆ ಗಂ ಎಂದು ಆಗುವುದು. ಪುನಃ ಗಕಾರಕ್ಕೆ ಆಕಾರವನ್ನು ಸೇರಿಸಿ ಎರಡು ಮಾತ್ರೆಯುಳ್ಳದ್ದಾಗಿ ಮಾಡಿದರೆ ಗಾಂಎಂದಾಗುವುದು. ಈರೀತಿ ಗಂಗಾ ಎಂಬ ಗಂಗಾವತಾರ ಮಂತ್ರವು ಸಮಸ್ತ ಪಾಪವನ್ನೂ ನಾಶಮಾಡಲು ಸಮರ್ಥವಾದುದು.

೬೫-೬೬. ಅಮೃತೀಕರಣ ಮಾಡುವಾಗ ಕೊಡುವ ಜಲವು ಅಮೃತಸ್ವರೂಪವನ್ನು ಹೊಂದಿ ದೇವರಪೂಜೆಯಕಾಲದಲ್ಲಿ ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವುದು. ಗಂಗೆಯು ತಾನೇ ಬಂದು ಪೂಜಾಪಾತ್ರದ ಜಲದಲ್ಲಿ ಸಂನಿಹಿತಳಾಗಿರುವಳು. ಆದುದರಿಂದ ಧರ್ಮಕಾಮಾರ್ಥಗಳು ಸಿದ್ಧಿಸುವುದಕ್ಕಾಗಿ ಅಮೃತೀಕರಣವನ್ನು ಮಾಡಬೇಕು.

೬೭. ದೇವತೆಗಳನ್ನು ಪೂಜಿಸುವ ಕಾಲದಲ್ಲಿ ಸ್ವಸ್ತಿಕ, ಗೋಮುಖ, ಪದ್ಮ, ಅರ್ಧಸ್ವಸ್ತಿಕ, ಪರ್ಯಂಕ, ಎಂಬ ಆಸನಗಳು ಶ್ರೇಷ್ಠವಾದವು ಆದುದರಿಂದ ಸಾಧಕನು ತನ್ನ ಇಷ್ಟ ದೇವತೆಯನ್ನು ಪೂಜೆಮಾಡುವಾಗ ಈ ಆಸನಗಳನ್ನು ಹಾಕಿ ಕುಳಿತು ಕೊಂಡು ಪೂಜೆಮಾಡಬೇಕು.

ಪಾದನುಂತ್ರಮಿದಂ ಪ್ರೋಕ್ತಂ ಸರ್ವಮುಂತ್ರೋತ್ತಮೋತ್ತಮಂ ।
ತದ್ಗೃಹ್ಣೀಯಾದ್ವರಾಹಸ್ಯ ಬೀಜೇನ ಪ್ರಥಮಂ ಬುಧಃ ॥ ೬೮ ॥

ಮಾಯಾದಿರಗ್ನಿ ಬೀಜಸ್ಯ ಚತುರ್ಥಃ ಸಮುವಾಹ್ನಿಕಃ ।
ಷಷ್ಠಸ್ವರೋಪರಿಚರೋ ವಾರಾಹಂ ಬೀಜಮುಚ್ಯತೇ ॥ ೬೯ ॥

ವಾರಾಹಬೀಜಸಂಶುದ್ಧಂ ಮಾತ್ರಂ ಪಾದದ್ವಯೇ ಕೃತಂ ।
ಪಶ್ಯನ್ನಭೀಷ್ಟದೇವಂ ತು ಪಾದದೋಷಂ ನ ಪಶ್ಯತಿ ॥ ೭೦ ॥

ನ ಯುಕ್ತಮನ್ಯಥಾ ಪಾದದರ್ಶನಂ ಸುರಪೂಜನೇ ।
ಮುಂತ್ರೇಣ ಲಭತೇಽಭೀಷ್ಟಾನ್ ತಸ್ಮಾನ್ಮಂತ್ರಪರೋ ಭವೇತ್ ॥ ೭೧ ॥

ಪಾಣಿಕಚ್ಛಪಿಕಾಂ ಕುರ್ಯಾತ್ಕೂರ್ಮಮುಂತ್ರೇಣ ಸಾಧಕಃ ।
ತತ್ರ ಸಂಸ್ಕೃತಪುಷ್ಪೇಣ ಪೂಜಯೇದಾತ್ಮನೋ ವಪುಃ ॥ ೭೨ ॥

೬೮-೬೯. ಅಂತ್ಯಾಕ್ಷರವಾದ ಹಕಾರಕ್ಕೆ ಆರನೆಯ ಸ್ವರವಾದ ಊಂ ಎಂಬುದನ್ನು ಸೇರಿಸಿದರೆ ಹೂಂ ಎಂದಾಗುವುದು. ಇದಕ್ಕೆ ವಾರಾಹ ಬೀಜವೆಂದು ಹೆಸರು. ಪಾದನ್ಯಾಸ ಮಾಡಲು ಈ ವಾರಾಹಬೀಜವು ಬಹು ಪ್ರಶಸ್ತವಾದುದು. ಎಲ್ಲಾ ಮಂತ್ರಗಳಿಗೂ ಶ್ರೇಷ್ಠವಾದುದು. ಆದುದರಿಂದ ಬುದ್ಧಿವಂತನಾದವನು ಪಾದನ್ಯಾಸಕ್ಕಾಗಿ ಈ ವಾರಾಹ ಬೀಜವನ್ನು ಉಪಯೋಗಿಸಬೇಕು.

೭೦-೭೧. ವಾರಾಹ ಬೀಜಾಕ್ಷರದಿಂದ ಶುದ್ಧವಾದ ಮಂತ್ರವನ್ನು ತನ್ನ ಎರಡು ಪಾದಗಳಿಗೂ ನ್ಯಾಸಮಾಡಿಕೊಂಡಲ್ಲಿ ಪಾದದೋಷವು ಹೋಗಿ ತನ್ನ ಇಷ್ಟ ದೇವತೆಯು ದರ್ಶನವಾಗುವುದು. ಹೀಗೆ ವಾರಾಹ ಬೀಜವಿಂದ ಪಾದನ್ಯಾಸ ಮಾಡದೆ ದೇವತಾ ಪೂಜೆಯನ್ನು ಮಾಡುವುದು ಅನುಚಿತವು. ಆದುದರಿಂದ ಆಯಾಯ ಮಂತ್ರಗಳನ್ನು ಆಯಾಯ ಕಾಲದಲ್ಲಿ ಉಚ್ಚರಿಸುತ್ತಾ ಪೂಜೆ ಮಾಡಿದರೆ ತನ್ನ ಅಭೀಷ್ಟಸಿದ್ಧಿಯಾಗುವುದು. ಸಮಸ್ತ ಕರ್ಮವನ್ನೂ ಮಂತ್ರಪೂರ್ವಕವಾಗಿ ಮಾಡಬೇಕು.

೭೨. ಸಾಧಕನು ತನ್ನ ಕೈಗಳಿಂದ ಕೂರ್ಮ ಮಂತ್ರವನ್ನು (ಜಂ) ಉಚ್ಚರಿಸುತ್ತಾ ಕೂರ್ಮಮುದ್ರೆಯನ್ನು ಮಾಡಿ ಅದರಿಂದ ಸಂಸ್ಕಾರ ಮಾಡಿದ ಹೂವಿನಿಂದ ತನ್ನ ಶರೀರವನ್ನು ಪೂಜೆಮಾಡಿಕೊಳ್ಳಬೇಕು. ಈರೀತಿ ಆ ಹೂವಿನಿಂದ ಪೂಜೆಮಾಡಿಕೊಂಡರೆ ಸಾಧಕನಿಗೆ ತನ್ನಲ್ಲಿ ದೇವತಾಭಾವವು ಹುಟ್ಟುವುದು.

ಪೂಜಿತೇ ತೇನ ಪುಷ್ಪೇಣ ದೇವತ್ವಂ ಸ್ವಸ್ಯ ಜಾಯತೇ ।
ದ್ವಿತೀಯಂ ವೈಷ್ಣವೀತಂತ್ರಂ ಬೀಜಂ ಬಿಂದ್ವಿಂದುಸಂಯುತಂ ॥ ೭೩ ॥

ಷಷ್ಠಸ್ವರೋಪರಿಚರಂ ಕರ್ಮಬೀಜಂ ಪ್ರಕೀರ್ತಿತಂ ।
ದಹನಪ್ಲವನಸ್ಯಾದೌ ರಂಧ್ರಸ್ಯ ದಶನುಸ್ಯತು ॥ ೭೪ ॥

ಭೇದನಂ ಸಾಧಕಃ ಕುರ್ಯಾನ್ಮಂತ್ರೇಣ ಪ್ರಣವೇನ ತು ।
ಬೀಜೇನ ವಾಸುದೇವಸ್ಯ ಹ್ಯಾಕಾಶೇ ವಿನಿಧಾಪಯೇತ್ ॥ ೭೫ ॥

ಪ್ರಾಣೇನ ಸಹಿತಂ ಬೀಜಂ ತತ್ಪೂರ್ವಂ ಪ್ರತಿಪಾದಿತಂ ।
ಅಜ್ಞಾತಾಪ್ರಯತಾನಾಂ ತು ಮಂಡಲಸ್ಥಾನಮಾರ್ಜನಾತ್ ॥ ೭೬ ॥

---

೭೩. ವೈಷ್ಣವೀತಂತ್ರದಲ್ಲಿ ಕರ್ಮಬೀಜವೆಂದು ಮತ್ತೊಂದ ಶ್ರೇಷ್ಠವಾದ ಬೀಜವು ದೇವತಾಪೂಜೆಗಳಲ್ಲಿ ಉಪಯೋಗಿಸಲ್ಪಡುವುದು. ಆರನೇ ಸ್ವರವಾದ ಊ ಎಂಬ ಅಕ್ಷರಕ್ಕೆ ಅನುಸ್ವಾರವನ್ನು ಸೇರಿಸಿದರೆ ಊಂ ಎಂಬ ವರ್ಣವಾಗುವುದು. ಇದಕ್ಕೆ ಕರ್ಮಬೀಜವೆಂದು ಹೆಸರು.

೭೪. ದಹನ ಪ್ಲವನ ಮೊದಲಾದ ಭೂತಶುದ್ಧಿಯ ಕ್ರಮಗಳನ್ನು ಮಾಡುವಾಗ ಸಾಧಕನು ಓಂ ಎಂಬ ಪ್ರಣವಮಂತ್ರವನ್ನು ಉಚ್ಚರಿಸುತ್ತಾ ಹತ್ತನೆಯ ರಂಧ್ರವಾದ ಬ್ರಹ್ಮರಂಧ್ರವನ್ನು ಭೇದಿಸಿದಂತೆ ಭಾವಿಸಬೇಕು.

೭೫. ಮೊದಲು ಭೂತಶುದ್ಧಿಯನ್ನು ಆರಂಭಿಸಿ ವಾಸುದೇವಬೀಜವಾದ ಖಂ (ಅಂ) ಎಂಬ ಮಂತ್ರದಿಂದ ಆಕಾಶದಲ್ಲಿ ಇರಿಸಬೇಕು. ಈ ವಾಸುದೇವಬೀಜಾಕ್ಷರವು ಹಿಂದೆಯೇ ವಿವರಿಸಲ್ಪಟ್ಟಿರುವುದು. ಇದರಂತೆಯೇ ಇತರ ಭೂತಗಳನ್ನೂ ಆಯಾ ಬೀಜಾಕ್ಷರಗಳಿಂದ ನ್ಯಾಸಮಾಡಿ ಭೂತಶುದ್ಧಿಯನ್ನು ಮುಗಿಸಬೇಕು.

೭೬. ದೇವತೆಯ ಮಂಡಲಸ್ಥಾನವನ್ನು ಮಾರ್ಜನೆ ಮಾಡುವುದರಿಂದ ತನಗೆ ತಿಳಿಯದೆ ತಾನಾಗಿ ಬಂದು ಸೇರಿರುವ ಸಂಸರ್ಗಾದಿ ದೋಷಗಳು ಪರಿಹಾರವಾಗಿ ಪೂಜಾದ್ರವ್ಯಗಳ ಪರಿಶುದ್ಧಿಯು ಉಂಟಾಗುವುದು.

ದ್ರವ್ಯಾಣಾಂ ವಿಪ್ರಕಾರಃ ಸ್ಯಾತ್ಸಂಸರ್ಗಾಣಾಂ ತಥೈವ ಚ ।
ಮಧುಕೈಟಭಯೋರ್ಮೇದಃಸಂಘಾತೈರ್ದೃಢತಾಂ ಗತಾ ॥ ೭೭ ॥

ಮೇದಿನೀ ಸರ್ವದಾ ಶುದ್ಧಾ ಸುರಪೂಜಾಸು ಸರ್ವತಃ ।
ಅದ್ಯಾಪಿ ಸರ್ವೇ ತ್ರಿದಶಾ ನ ಸ್ಪೃಶಂತಿ ಪದಾ ಕ್ಷಿತಿಂ ॥ ೭೮ ॥

ನ ಚ ಸ್ವೀಯತನುಚ್ಛಾಯಾಂ ಯೋಜಯಂತಿ ಚ ಭೂತಲೇ ।
ತಸ್ಯ ದೋಷಸ್ಯ ಮೋಕ್ಷಾರ್ಥಂ ಮಂತ್ರರಾಜಂ ಲಿಖೇತ್ ಕ್ಷಿತೌ ॥ ೭೯ ॥

ಪ್ರೋಕ್ಷಣಾದ್ವೀಕ್ಷಣಾದ್ವಾಪಿ ಶುದ್ಧಾ ಭವತಿ ಮೇದಿನೀ ।
ವೀಕ್ಷಣಂ ಧರ್ಮಬೀಜೇನ ಸ್ಥಂಡಿಲಸ್ಯ ಸಮಾಚರೇತ್ ॥ ೮೦ ॥

೭೭-೭೯. ಸೃಷ್ಟ್ಯಾದಿಯಲ್ಲಿ ಲೋಕವೆಲ್ಲವೂ ಜಲಮಯವಾಗಿ ಘಟ್ಟಿಯಾದ ಭೂಪ್ರದೇಶವು ಎಲ್ಲಿಯೂ ಇರಲಿಲ್ಲ. ಆ ಕಾಲದಲ್ಲಿ ಮಧುಕೈಟಭರೆಂಬ ದೈತ್ಯರನ್ನು ವಿಷ್ಣುವು ಸಂಹರಿಸಿದನು. ಅವರ ಮೇದಸ್ಸೇ ಈ ಪೃಥ್ವಿಯಾಗಿ ಪರಿಣಮಿಸಿತು. ಮೇದಸ್ಸಿನಿಂದ ಉಂಟಾದ ಈ ಭೂಮಿಗೆ ಮೇದಿನೀ ಎಂದು ಹೆಸರಾಯಿತು, ಈ ಮಧುಕೈಟಭರ ವೃತ್ತಾಂತವು ದೇವೀಭಾಗವತದಲ್ಲಿ ವಿಶದವಾಗಿ ವರ್ಣಿತವಾಗಿರುವುದು. ಈರೀತಿ ಮೇದಸ್ಸಿನಿಂದ ಘಟ್ಟಿಯಾಗಿ ಆಗಿರುವ ಭೂಮಿಯು ದೇವತಾ ಸ್ತ್ರೋಜೆಗೆ ಯಾವಾಗಲೂ ಶುದ್ಧವಾಗಿರುವುದು. ಆದುದರಿಂದ ದೇವತೆಗಳು ಪೂಜ್ಯ ಬುದ್ಧಿಯಿಂದ ಈಗಲೂ ಭೂಮಿಯನ್ನು ತಮ್ಮ ಕಾಲುಗಳಿಂದ ಸ್ಪರ್ಶಮಾಡುವುದಿಲ್ಲವು. ಮತ್ತು ಭೂಮಿಯಮೇಲೆ ತಮ್ಮ ನೆರಳನ್ನೂ ಸಹ ಬೀಳಗೊಡಿಸುವುದಿಲ್ಲ. ಮನುಷ್ಯರಿಗೆ ಈರೀತಿಯಾಗಿರುವುದು ಸಾಧ್ಯವಿಲ್ಲ. ಆದುದರಿಂದ ಈ ಪಾದಸ್ಪರ್ಶಾದಿ ದೋಷಗಳ ಪರಿಹಾರಕ್ಕಾಗಿ ಸಾಧಕನು ತಾನು ಆರಾಧನೆ ಮಾಡುವ ದೇವತೆಯ ಶ್ರೇಷ್ಠವಾದ ಮಂತ್ರವನ್ನು ಭೂಮಿಯಮೇಲೆ ಬರೆಯಬೇಕು.

೮೦-೮೧. ಇದಲ್ಲದೆ ಭೂಮಿಯನ್ನು ಜಲದಿಂದ ಪ್ರೋಕ್ಷಿಸುವುದರಿಂದಲೂ ಧರ್ಮಬೀಜ (ಧಂ) ದಿಂದ ನೋಡುವುದರಿಂದಲೂ ಭೂಮಿಯು ಶುದ್ಧವಾಗುವುದು. ದಕಾರದ ಮುಂದಿನ ವರ್ಣವಾದ ಧ ಎಂಬ ಅಕ್ಷರಕ್ಕೆ ಬಿಂದುವನ್ನು ಸೇರಿಸಿದರೆ ಧಂ ಎಂದು ಆಗುವುದು. ಇದಕ್ಕೆ ಧರ್ಮಬೀಜವೆಂದು ಹೆಸರು. ಇವರ ಉಚ್ಚಾರಣೆಯಿಂದ ಧರ್ಮಕಾಮಾರ್ಥಗಳು ಸಾಧನೆಯಾಗುವವು. ಈ ಧರ್ಮಬೀಜದಿಂದ

ದಾಂತೋ ಬಲೇನ ಸಂಯುಕ್ತಶ್ಚೂಡಾಬಿಂದುಸಮನ್ವಿತಃ ।
ಧರ್ಮಬೀಜಮಿತಿ ಪ್ರೋಕ್ತಂ ಧರ್ಮಕಾಮಾರ್ಥಸಾಧನಂ ॥ ೮೧ ॥

ಆದಾನಂ ಧಾರಣಂ ಚೈವ ತಥಾ ಸಂಸ್ಥಾನಪೂಜನೇ ।
ಪೂರಣಂ ಸಲಿಲೇನೈವ ನಿಃಕ್ಷೇಪೋ ಗಂಧಪುಷ್ಪಯೋಃ ॥ ೮೨ ॥

ಮಂಡಲಸ್ಯಾಥ ವಿನ್ಯಾಸಃ ಪುನಃ ಪುಷ್ಪಸ್ಯ ಸಂಶ್ರಯಃ ।
ಅಮೃತೀಕರಣಂ ಪಾತ್ರಪ್ರತಿಪತ್ತಿರಿಯಂ ನರಃ ॥ ೮೩ ॥

ಅನಿರುದ್ಧೇನ ಚಾದಾಯ ಅಸ್ತ್ರಮಂತ್ರೇಣ ಧಾರಣಂ ।
ಪಾತ್ರೇತು ಮಂಡಲಾಭ್ಯಾಶಂ ವಾಗ್ಬೀಜಾಗ್ರೇಣ ಯೋಜಯೇತ್ ॥ ೮೪ ॥

ಅನಿರುದ್ಧಂ ಭವೇದ್ಬೀಜಮಾದ್ಯಬಿಂದುದ್ವಯೋತ್ತರಂ ।
ಫಡಂತೇನಾನಿರುದ್ಧಂ ತು ಅಸ್ತ್ರಮಂತ್ರಂ ಪ್ರಕೀರ್ತಿತಂ ॥ ೮೫ ॥

ದೇವರನ್ನು, ಪೂಜೆಮಾಡುವ ವೇದಿಕೆಯನ್ನೂ ನೋಡಬೇಕು. ಇದರಿಂದ ಆ ದೇವತಾ ಪೀಠವನ್ನು ಇಡುವ ಜಗುಲಿಯು ಶುದ್ಧವಾಗುವುದು.

೮೨-೮೫. ಮೊದಲನೆ ಸ್ವರವಾದ ಅಕಾರಕ್ಕೆ ಎರಡು ಬಿಂದುಗಳನ್ನು ಎಂದರೆ ವಿಸರ್ಗವನ್ನು ಸೇರಿಸಿ ಕಡೆಯಲ್ಲಿ ಫಟ್ ಎಂಬುದನ್ನು ಸೇರಿಸಿದರೆ ಅಃ ಫಟ್ ಎಂದು ಅನಿರುದ್ಧ ಬೀಜವೆಂದೂ ಅಸ್ತ್ರಮಂತ್ರವೆಂದೂ ಕರೆಯಲ್ಪಡುವ ಮಂತ್ರವಾಗುವುದು. ಪೂಜಾಕಾಲದಲ್ಲಿ ಸಾಧಕನು ಗಂಧಪುಷ್ಪಗಳನ್ನು ತೆಗೆದುಕೊಳ್ಳುವುದು ಧರಿಸುವುದು, ಅದನ್ನು ಇರಿಸುವುದು. ಪೂಜಿಸುವುದು, ನೀರನ್ನು ಪಾತ್ರೆಯಲ್ಲಿ ತುಂಬುವುದು, ಮಂಡಲವನ್ನು ಬರೆಯುವುದು, ಪುನಃ ಹೂವನ್ನು ಆ ಮಂಡಲದಲ್ಲಿ ಹಾಕುವುದು, ಧೇನುಮುದ್ರೆಯಿಂದ ಅಮೃತೀಕರಣ ಮಾಡುವುದು. ಪಾತ್ರಾಸಾದನ ಮಾಡುವುದು ಎಂದರೆ ಪೂಜಾಕಾಲದಲ್ಲಿ ಬೇಕುಬೇಕಾದ ಪಾತ್ರೆಗಳನ್ನು ತೆಗೆದುಕೊಂಡು ಅವುಗಳನ್ನು ಉಪಯೋಗಿಸುವುದು ಮೊದಲಾದ ಕಾರ್ಯಗಳನ್ನು ಮಾಡುವಾಗ ಮೇಲೆ ಹೇಳಿದ ಅನಿರುದ್ಧ ಮಂತ್ರವನ್ನು ಹೇಳುತ್ತಿರಬೇಕು. ಇವುಗಳನ್ನು ಮಂಡಲದಲ್ಲಿ ಇಡುವಾಗ ವಾಗ್ಬೀಜವನ್ನು ಉಚ್ಚರಿಸಬೇಕು.

ಶಂಭುರಾದ್ಯಂ ಬಲಃ ಪ್ರಾಂತಃ ಸಂಪೂರ್ಣಃ ಸಹಿತಾ ಇಮೇ ।
ಪರತಃ ಪರತಃ ಪೂರ್ವಂ ಸಮಾಪ್ತ್ಯಂತಾಃ ಸಬಿಂದುಕಾಃ ॥ ೮೬ ॥

ತೃತೀಯಂ ವಾಗ್ಭವಂ ಬೀಜಂ ಸಕಲಂ ನಿಷ್ಕಲಾಹ್ವಯಂ ।
ಸ್ವರಶ್ಚತುರ್ಥಃ ಸಕಲಃ ಸಂಸೃಷ್ಟೌ ಬಿಂದುನೇಂದುನಾ ॥ ೮೭ ॥

ವರ್ಗಾದ್ಯಾದಿರ್ದ್ವಿತೀಯಂ ತು ವಾಗ್ಭವಂ ಬೀಜಮುಚ್ಯತೇ ।
ಕಾಮರಾಜಾಹ್ವಯಂ ಚೈತದ್ಧರ್ಮಕಾಮಾರ್ಥಸಾಧನಂ ॥ ೮೮ ॥

ಮಸೋಭವಸ್ಯ ಬೀಜಂ ತು ಕುಂಡಲೀಶಕ್ತಿಸಂಯುತಂ ।
ವಾಸುದೇವೇನ ಸಂಪೃಕ್ತಮಾದ್ಯಂ ವಾಗ್ಭವಮುಚ್ಯತೇ ॥ ೮೯ ॥

ಇದಂ ಸಾರಸ್ವತಂ ನಾಮ ಯದಾದ್ಯಂ ವಾಗ್ಭವಂ ಸ್ಮೃತಂ ।
ಏಕೈಕಂ ಕಾಮಬೀಜಾದಿ ತ್ರಿಭಿಸ್ತು ತ್ರಿಪುರಾಮಹಃ ॥ ೯೦ ॥

---

೮೬. ಶಂಭು ಬೀಜಾಕ್ಷರವಾದ ಪಕಾರಕ್ಕೆ ದೀರ್ಘಸ್ವರಗಳನ್ನೂ ಬಿಂದುವನ್ನೂ ಸೇರಿಸಿ ಕೊನೆಯಲ್ಲಿ ಫಟ್ ಎಂದು ಸೇರಿಸಿದರೆ " ಹಾಂ, ಹೀಂ, ಹೂಂ, ಹೈಂ, ಹೌಂ, ಯಃ ಫಟ್ " ಎಂದು ಪ್ರಕಾರಾಂತರ ಅಸ್ತ್ರಮಂತ್ರವಾಗುವುದು.

೮೭. ವಾಗ್ಭವಬೀಜವು ಸಕಲ ನಿಷ್ಕಲವೆಂದು ಪ್ರಸಿದ್ಧವಾಗಿರುವುದು. ಸಾಲ್ಕನೇ ಸ್ವರವಾದ ಈ ಎಂಬ ವರ್ಣವು ಬಿಂದುವಿನಿಂದ ಕೂಡಿವ್ದಾದರೆ ಮೂರನೆಯ ಸಕಲವೆಂಬ ವಾಗ್ಭವಬೀಜವಾಗುವುದು.

೮೮. ವರ್ಗ ವ್ಯಂಜನಗಳ ಮೊದಲನೆಯ ಅಕ್ಷರವು ಎರಡನೆಯ ವಾಗ್ಭವಬೀಜವನ್ನೆನ್ನಿಸಿಕೊಳ್ಳುವುದು. ಇದಕ್ಕೆ ಕಾಮರಾಜಮಂತ್ರವೆಂದು ಹೆಸರು. ಇದು ಧರ್ಮ, ಕಾಮ, ಅರ್ಥ, ಇವುಗಳನ್ನು ಸಾಧಿಸಲು ಮುಖ್ಯವಾದುದು.

೮೯-೯೦. ಕಾಮಬೀಜಾಕ್ಷರಕ್ಕೆ ಕುಂಡಲೀಬೀಜ ಮತ್ತು ವಾಸುದೇವಬೀಜ ಇವುಗಳನ್ನು ಸೇರಿಸಿದರೆ ಮೊದಲನೆಯ ವಾಗ್ಭವಬೀಜವೆನಿಸಿಕೊಳ್ಳುವುದು. ಈ ಮೊದಲನೆಯ ವಾಗ್ಭವಬೀಜಕ್ಕೆ (ಐಂ) ಸಾರಸ್ವತವೆಂದೂ ಹೆಸರು. ಹಿಂದೆ ಹೇಳಿದ ಮೂರು ವಾಗ್ಭವಬೀಜಗಳಲ್ಲಿ ಒಂದೊಂದನ್ನು ಪ್ರತ್ಯೇಕವಾಗಿ ತೆಗೆದುಕೊಂಡರೆ ಕಾಮಬೀಜ ಮೊದಲಾದ ಬೀಜಾಕ್ಷರಗಳಾಗುವವು. ಮೂರನ್ನೂ ಒಟ್ಟಿಗೆ ಸೇರಿಸಿದರೆ ತ್ರಿಪುರಾಬೀಜವಾಗುವುದು (ಐಂ).

ಆದ್ಯಂ ತೃತೀಯಂ ಸಾವಿಂದುಬಿಂದುಭ್ಯಃ ಸಮುಲಂಕೃತಂ ।
ಮದನಸ್ಯ ತು ಮಂತ್ರೋಽಯಂ ಕಾಮಭೋಗಫಲಪ್ರದಃ ॥ ೯೧ ॥

ಔದೇತೋರೂಪವಿನ್ಯಸ್ತಂ ಯಸ್ತು ಭಾಸ್ಕರಸಂನಿಭಂ ।
ತದ್ವಹ್ನೀ ಕುಂಡಲೀಶಕ್ತಿಮಭೇದಾತ್ತು ನಿಗದ್ಯತೇ ॥ ೯೨ ॥

ಭೂತಾಪಸರಣಂ ಕುರ್ಯಾನ್ಮಂತ್ರೇಣಾನೇನ ಯಾಜಕಃ ।
ಯಸ್ಮಿನ್ಕೃತೇ ಸ್ಥಾನಭೂತಾ ದೂರಂ ಯಾಂತಿ ಸುರಾರ್ಚನೇ ॥ ೯೩ ॥

ಸ್ಥಿತೇಷು ತತ್ರ ಭೂತೇಷು ನೈವೇದ್ಯಂ ಮಂಡಲಂ ತಥಾ ।
ವಿಲುಂಪಂತಿ ಸದಾ ಲುಬ್ಧಾ ನ ಗೃಹ್ಣಂತಿ ಚ ದೇವತಾಃ ॥ ೯೪ ॥

ತಸ್ಮಾದ್ಯತ್ನೇನ ಕರ್ತವ್ಯಂ ಭೂತಾನಾಮಪಸಾರಣಂ ।
ಅಸ್ತ್ರಮಂತ್ರೇಣ ಸಹಿತಂ ತಸ್ಯ ಮಂತ್ರಮಿದಂ ಸ್ಮೃತಂ ॥ ೯೫ ॥

---

೯೧. ಮೊದಲನೆಯ ಅಕ್ಷರವಾದ ಅ, ಮೂರನೆಯ ಅಕ್ಷರವಾದ ಇ ಇವೆರಡನ್ನೂ ಸೇರಿಸಿದರೆ ಏ ಎಂದಾಗುವುದು. ಇದಕ್ಕೆ ಬಿಂದುವನ್ನು ಸೇರಿಸಿದರೆ ಏಂ ಎಂದು ಮದನ (ಕಾಮ) ಬೀಜಾಕ್ಷರವಾಗುವುದು. ಇದು ಕಾಮಾದಿಭೋಗಗಳನ್ನು ಕೊಡುವುದು.

೯೨. ಕುಂಡಲೀ ಮತ್ತು ಶಕ್ತಿ ಇಗವುಳ ಬೀಜಾಕ್ಷರಗಳಾದ ಔ ಏ ಎಂಬುವು ಭೇದವಿಲ್ಲದೆ ಒಟ್ಟಿಗೆ ಸೇರಿ ಸೂರ್ಯನಂತೆ ಪ್ರಕಾಶಿಸುವ ಬೀಜಾಕ್ಷರವೆಂದು ಹೇಳಲ್ಪಡುತ್ತದೆ.

೯೩. ದೇವಿಯ ಪೂಜೆಯನ್ನು ಮಾಡುವ ಯಾಜಕನು ಪೂಜೆಯಕಾಲದಲ್ಲಿ ಈ ಮಂತ್ರದಿಂದ ಭೂತಾಪಸರಣವೆಂಬ ಕರ್ಮವನ್ನು ಮಾಡಬೇಕು. ಈ ಕರ್ಮವನ್ನು ಮಾಡಿದರೆ ಅಲ್ಲಿರುವ ಭೂತಗಳು ಪೂಜೆಯ ಕಾಲದಲ್ಲಿ ದೂರವಾಗಿ ಹೋಗುವುವು.

೯೪. ಭೂತಾಪಸರಣವನ್ನು ಮಾಡದಿದ್ದರೆ ಭೂತಗಳು ಆ ಪ್ರದೇಶದಲ್ಲಿ ಇದ್ದುಕೊಂಡು ಮಂಡಲವನ್ನೂ, ನೈವೇದ್ಯವನ್ನೂ ಆಶ್ರಯಿಸಿಕೊಂಡು ಯಾವಾಗಲೂ ಅವುಗಳಲ್ಲಿಯೇ ಆಸೆಯುಳ್ಳವುಗಳಾಗಿರುವವು. ದೇವತೆಗಳು ಪೂಜೆಯನ್ನು ಸ್ವೀಕರಿಸುವುದಿಲ್ಲ.

೯೫. ಆದುದರಿಂದ ಸಾಧಕನು ಅಸ್ತ್ರಮಂತ್ರದಿಂದಲೂ, ಈ ಕೆಳಗೆ ಹೇಳುವ ಮಂತ್ರದಿಂದಲೂ ಭೂತಾಪಸರಣವನ್ನು ಅವಶ್ಯವಾಗಿ ಮಾಡಬೇಕು.

ಅಪಸರ್ಪಂತು ತೇ ಭೂತಾ ಯೇ ಭೂತಾ ಭೂಮಿಪಾಲಕಾಃ ।
ಭೂತಾನಾಮವಿರೋಧೇನ ಪೂಜಾಕರ್ಮ ಕರೋಮ್ಯಹಂ ॥ ೯೬ ॥

ಅನೇನ ಸ್ಥಂಡಿಲಾದ್ಭೂತಾನಪಸಾರ್ಯಾಥ ಸಾಧಕಃ ।
ತತೋ ದಿಗ್ಬಂಧನಂ ಕೃತ್ವಾ ದಿಗ್ಭ್ಯಸ್ತಾನಪಸಾರಯೇತ್ ॥ ೯೭ ॥

ವಿಷ್ಣುಬೀಜಂ ಫಡಂತೇ ತು ಮಂತ್ರಂ ದಿಗ್ಬಂಧನೇ ಸ್ಥಿತಂ ।
ಕರೇಣ ಛೋಟಿಕಾಪೂರ್ವಂ ವೇಷ್ಟನಂ ಬಂಧನಂ ದಿಶಃ ॥ ೯೮ ॥

ಆತ್ಮನಃ ಪೂಜನೇನಾಥ ಕರ್ಮಾರಂಭಾಧಿಕಾರಿತಾ ।
ಪೂಜಿತಂ ಚಾಸನಂ ಯೋಗಪೀಠಸ್ಯ ಸದೃಶಂ ಭವೇತ್ ॥ ೯೯ ॥

ಸ್ವಭಾವತಃ ಸದಾಽಶುದ್ಧಂ ಪಂಚಭೂತಾತ್ಮಕಂ ವಪುಃ ।
ಮಲಪೂತಿಸಮಾಯುಕ್ತಶ್ಲೇಷ್ಮವಿಣ್ಮೂತ್ರಪಿಚ್ಛಿಲಂ ॥ ೧೦೦ ॥

೯೬-೯೮. ಯಾವ ಭೂತಗಳು ಭೂಮಿಯನ್ನು ಪಾಲಿಸುತ್ತಿರುವವೋ ಆ ಭೂತಗಳು ಪೂಜೆಗೆ ವಿಘ್ನ ಮಾಡದೆ ಹೊರಟುಹೋಗಲಿ. ಭೂತಗಳಿಗೆ ವಿರೋಧವಿಲ್ಲದಂತೆ ಪೂಜೆಯ ಕೆಲಸವನ್ನು ನಾನು ಮಾಡುವೆನು ಎಂದು ಹೇಳಿ ಸಾಧಕನು ವೇದಿಕೆಯಿಂದ ಭೂತಗಳನ್ನು ಓಡಿಸಿ ಬಳಿಕ ಅಸ್ತ್ರಮಂತ್ರದಿಂದ ದಿಗ್ಬಂಧನವನ್ನು ಮಾಡಬೇಕು. ವಿಷ್ಣುಬೀಜವಾದ ಅಕಾರಕ್ಕೆ ಕೊನೆಯಲ್ಲಿ ಫಟ್ ಎಂದು ಸೇರಿಸಿದರೆ ಅಃಫಟ್ ಎಂದು ಅಸ್ತ್ರಮಂತ್ರವಾಗುವುದು. ಈ ಮಂತ್ರವನ್ನು ಉಚ್ಚರಿಸಿ ಕೈಯಿಂದ ಚಿಟಿಕೆಯನ್ನು ಹೊಡೆಯುತ್ತಾ ಪ್ರದಕ್ಷಿಣಾಕಾರವಾಗಿ ಪ್ರತಿ ದಿಕ್ಕಿನಲ್ಲಿಯೂ ಕೈಯನ್ನು ಸುತ್ತಿಸಿ ದಿಗ್ಬಂಧನವನ್ನು ಮಾಡಬೇಕು.

೯೯. ಬಳಿಕ ತನ್ನನ್ನು ಪೂಜಿಸಿಕೊಳ್ಳುವುದರಿಂದ ತನ್ನ ಇಷ್ಟದೇವತೆಯನ್ನು ಪೂಜೆಮಾಡಲು ಅಧಿಕಾರಿಯಾಗುವನು. ತನ್ನ ಪೀಠವನ್ನು ಪೂಜಿಸಿದರೆ ಅದು ಯೋಗ ಪೀಠಕ್ಕೆ ಸಮನಾಗುವುದು.

೧೦೦. ಕೊಳೆ, ದುರ್ಗಂಧ, ಶ್ಲೇಷ್ಮ, ಮಲಮೂತ್ರಗಳು ಇವುಗಳಿಂದ ಕೂಡಿಯೂ, ರೇತಸ್ಸು, ಉಗುಳುವುದು, ಬೆವರು, ಮೊದಲಾದ ಕೆಟ್ಟ ದ್ರವಗಳು ಸ್ರವಿಸುತ್ತಲೂ ಇರುವ ಪಂಚಭೂತಾತ್ಮಕವಾದ ಈ ಶರೀರವು ಸ್ವಭಾವದಿಂದ ಯಾವಾಗಲೂ ಅಶುದ್ಧವಾಗಿರುವುದು.

ರೇತೋನಿಷ್ಪೀವಮಾಲಾಭಿಃ ಸ್ರವದ್ಭಿರಪರಿಷ್ಕೃತಂ ।
ಬೀಜಭೂತಾನಿ ಚೈತಸ್ಯ ಮಹಾಭೂತಾನಿ ಪಂಚ ವೈ ॥ ೧೦೧

ತೇಷಾಂ ತು ಸರ್ವಭೂತಾನಾಂ ಬೀಜಾನಾಂ ದೇಹಸಂಗಿನಾಂ ।
ವಾಯುತೇಜಃಪೃಥಿವ್ಯಂಭೋವಿಯತಾಂ ಶುದ್ಧಯೇ ಕ್ರಮಾತ್ ॥ ೧೦೨ ॥

ಶೋಷಣಂ ದಹನಂ ಭಸ್ಮ ಪ್ರೋತ್ಸಾದೋऽಮೃತವರ್ಷಣಂ ।
ಆಪ್ಲಾವನಂ ಚ ಕರ್ತವ್ಯಂ ಚಿಂತಾಮಾತ್ರವಿಶುದ್ಧಯೇ ॥ ೧೦೩ ॥

ಅಂಡಸ್ಯ ಚಿಂತನಾದ್ಭೇದಾತ್ತನ್ಮಧ್ಯೇ ದೇವಚಿಂತನಾತ್ ।
ಸ್ವಕೀಯಸ್ಯೇಷ್ಟದೇವಸ್ಯ ಚಿಂತಾ ಸರ್ವಾತ್ಮನಾ ಭವೇತ್ ॥ ೧೦೪ ॥

ಸೋऽಹಮಿತ್ಯಸ್ಯ ಸತತಂ ಚಿಂತನಾದ್ದೇವರೂಪತಾ ।
ಆತ್ಮನೋ ಜಾಯತೇ ಸಮ್ಯಕ್ಸಂಸ್ಕೃತಿಃ ಪುಷ್ಪದಾನತಃ ॥ ೧೦೫ ॥

ಅಹಂ ದೇವೋऽಥ ನೈವೇದ್ಯಂ ಪುಷ್ಪಗಂಧಾದಿಕಂ ಚ ಯತ್ ।
ಪೂಜೋಪಕರಣಾರ್ಥಂ ಚ ದೇವತ್ವಮಿಹ ಜಾಯತೇ ॥ ೧೦೬ ॥

೧೦೧-೧೦೩. ಈ ಶರೀರಕ್ಕೆ ಪಂಚಮಹಾಭೂತಗಳು ಕಾರಣವಾಗಿರುವನ್ನು ಎಂದರೆ ಈ ಶರೀರವು ಆ ಭೂತಗಳಿಂದ ಕೂಡಿದ್ದಾಗಿರುವುದು ಆದುದರಿಂದ ಶರೀರದಲ್ಲಿ ಸಂಬಂಧಿಸಿರುವ ವಾಯು, ತೇಜಸ್ಸು, ಪೃಥಿವೀ, ನೀರು, ಆಕಾಶ ಈ ಪಂಚಭೂತಗಳ ಶುದ್ಧಿಗಾಗಿ ಶೋಷಣ, ದಹನ, ಭಸ್ಮಪ್ರೋತ್ಸಾದ, ಅಮೃತವರ್ಷಣ, ಆಪ್ಲಾವನ ಎಂಬ ಕರ್ಮಗಳನ್ನು ಆಯಾ ಭೂತಗಳ ಬೀಜಾಕ್ಷರಗಳನ್ನು ಉಚ್ಚರಿಸುತ್ತಾ ಮನಸ್ಸಿನಲ್ಲಿ ಭಾವನೆಯನ್ನು ಮಾಡಬೇಕು. ಹೀಗೆ ಮಾಡಿದರೆ ಶರೀರಶುದ್ಧಿಯಾಗುವುದು.

೧೦೪. ಬ್ರಹ್ಮಾಂಡವನ್ನು ಧ್ಯಾನಮಾಡಿ ಅದನ್ನು ಭೇದಿಸಿ ಅದರ ಮಧ್ಯದಲ್ಲಿ ತನ್ನ ಇಷ್ಟದೇವತೆಯನ್ನು ಏಕಾಗ್ರಮನಸ್ಸಿನಿಂದ ಧ್ಯಾನಮಾಡಬೇಕು.

೧೦೫-೧೦೬. "ಸೋऽಹಂ" ಎಂಬ ಹಂಸಮಂತ್ರವನ್ನು ಯಾವಾಗಲೂ ಧ್ಯಾನಮಾಡುವುದರಿಂದ ತನಗೆ ದೇವತಾರೂಪವು ಉಂಟಾಗುವುದು. ಹೂವಿನಿಂದ ತನಗೆ ಪೂಜೆಯನ್ನು ಮಾಡಿಕೊಂಡರೆ ದೇವತಾಭಾವನೆಯು ಇನ್ನೂ ದೃಢವಾಗಿ ಆಗುವುದು. ನಾನು ದೇವನು, ನನ್ನ ಸಮೀಪದಲ್ಲಿರುವ ಹೂವು, ನೈವೇದ್ಯ, ಗಂಧ

ದೇವಾಧಾರೋ ಹ್ಯಯಂ ದೇವೋ ದೇವಂ ದೇವಾಯ ಯೋಜಯೆತ್ ।
ಸರ್ವೇಷಾಂ ದೇವತಾಸೃಷ್ಟ್ಯಾ ಜಾಯತೇ ಶುದ್ಧತಾಪಿ ಚ ॥ ೧೦೭ ॥

ಮನೋಜೀವಾತ್ಮನೋಃ ಶುದ್ಧಿಃ ಪ್ರಾಣಾಯಾಮೇನ ಜಾಯತೇ ।
ಅಂತರ್ಗತಂ ಯಚ್ಚ ಮಲಂ ತಚ್ಚ ಶುದ್ಧಂ ಪ್ರಜಾಯತೇ ॥ ೧೦೮ ॥

ಗೃಹೇ ಚೇತ್ಪೂಜಯೇದ್ದೇವಂ ತದಾ ತಸ್ಯ ವಿಲೋಕನಂ ।
ಕುರ್ಯಾದಾದಿತ್ಯಬೀಜೇನ ಚತುಃಸಾರ್ಶ್ವೇಷ್ವಪಿ ಕ್ರಮಾತ್ ॥ ೧೦೯ ॥

ಹಾಂತಃ ಸಮಾಪ್ತಿಸಹಿತೋ ವಹ್ನಿಬೀಜೇನ ಸಂಹಿತಃ ।
ಉಪಾಂತಃ ಸಚತುರ್ಥಸ್ತು ಸ ತಥಾ ಸಬಲೋಗ್ರತಃ ॥ ೧೧೦ ॥

ಆದಿತ್ಯಬೀಜಂ ಕಥಿತಂ ಸರ್ವರೋಗವಿನಾಶನಂ ।
ಧರ್ಮಾರ್ಥಕಾಮಮೋಕ್ಷಾಣಾಂ ಕಾರಣಂ ತೋಷದಾಯಕಂ ॥ ೧೧೧ ॥

ಮೊದಲಾದ ಪೂಜಾಸಾಮಗ್ರಿಗಳೂ ದೇವತಾಸ್ವರೂಪಗಳು; ದೇವತೆಯನ್ನು ಪೂಜೆ ಮಾಡುವ ನಾನೂ ದೇವತಾಸ್ವರೂಪನು. ಪ್ರಪಂಚದಲ್ಲಿರುವ ವಸ್ತುಗಳೆಲ್ಲವೂ ದೇವತಾ ಸ್ವರೂಪಗಳೇ ಹೊರತು ದೇವರನ್ನು ಬಿಟ್ಟು ಯಾವ ವಸ್ತುವೂ ಇಲ್ಲ ಎಂದು ಪರಬ್ರಹ್ಮ ಸ್ವರೂಪವನ್ನು ಮನಸ್ಸಿನಲ್ಲಿ ಭಾವಿಸಿದರೆ ಆ ಭಾವನೆಯಿಂದ ತಾನೂ, ಪೂಜಾಸಾಮಗ್ರಿ ಗಳೂ ಎಲ್ಲವೂ ಪರಿಶುದ್ಧತೆಯನ್ನು ಹೊಂದುವವು.

೧೦೮. ಮನಸ್ಸು ಜೀವಾತ್ಮ ಇವರುಗಳ ಪರಿಶುದ್ಧಿಯು ಪ್ರಾಣಾಯಾಮದಿಂದ ಉಂಟಾಗುವುದು. ಮನಸ್ಸಿನಲ್ಲಿ ಬೇರೂರಿರುವ ಕೆಟ್ಟ ಭಾವನೆಗಳೇ ಮೊದಲಾದ ದೋಷಗಳು ಪ್ರಾಣಾಯಾಮದಿಂದ ಪರಿಹಾರವಾಗಿ ಅಂತಶ್ಶುದ್ಧಿಯು ಉಂಟಾಗುವುದು.

೧೦೯-೧೧೧. ಹಕಾರವೂ, ರಕಾರವೂ, ನಾಲ್ಕನೇ ಸ್ವರವಾದ ಈಕಾರವೂ ಬಿಂದುವೂ ಸೇರಿದರೆ ಹ್ರೀಂ ಎಂದು ಆದಿತ್ಯಬೀಜವಾಗುವುದು. ಈ ಆದಿತ್ಯಬೀಜವು ಸರ್ವ ರೋಗವನ್ನು ಶಮನಮಾಡುವುದೂ, ಧರ್ಮಾರ್ಥಕಾಮಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಿಗೆ ಸಾಧನಭೂತವಾದುದೂ, ಸಂತೋಷವನ್ನುಂಟುಮಾಡುವುದೂ ಆಗಿರುವುದು. ಸಾಧಕನು ದೇವತೆಯನ್ನು ತನ್ನ ಮನೆಯಲ್ಲಿ ಪೂಜಿಸುವುದಾದರೆ ಈ ಆದಿತ್ಯಬೀಜವನ್ನು ಉಚ್ಚರಿಸುತ್ತಾ ನಾಲ್ಕು ದಿಕ್ಕುಗಳಲ್ಲಿಯೂ ಕ್ರಮವಾಗಿ ನೋಡಬೇಕು.

ಅಶುದ್ಧಪಕ್ಷಿಸಂಯೋಗಪಕ್ಷಿವಿಷ್ಠಾಪ್ರಸೇಚನೇ ।
ಮೂಷಿಕಾನಾಂ ತಥಾ ಸ್ಪರ್ಶಃ ಕೃಮಿಕೀಟಾದಿಸಂಗಮಃ ॥ ೧೧೨ ॥

ಏವಮಾದೀನಿ ನಶ್ಯಂತಿ ಲೋಕನಾದ್ಗೃಹದೂಷಣಂ ।
ತತಸ್ತು ಯೋಗಪೀಠಸ್ಯ ಧ್ಯಾನಂ ಪ್ರಥಮತಶ್ಚರೇತ್ ॥ ೧೧೩ ॥

ಧ್ಯಾನಮಾತ್ರಂ ಯೋಗಪೀಠಂ ಪ್ರವಿಶತ್ಯೇವ ಮಂಡಲಂ ।
ಯೋಗಪೀಠೇ ಸ್ಮೃತೇ ಸರ್ವಂ ಯೋಗಪೀಠಮಯಂ ಸಮಂ ॥ ೧೧೪ ॥

ನ ಯೋಗಪೀಠಾದಧಿಕಂ ವಿದ್ಯತೇ ಪರಮಾಸನಂ ।
ಯಸ್ಯ ಧ್ಯಾನಂ ಜಗದ್ವ್ಯಾಪ್ತಂ ಸಚರಾಚರಮಾನುಷಂ ॥ ೧೧೫ ॥

ತಚ್ಚಿಂತನಸ್ಯ ಮಾಹಾತ್ಮ್ಯಂ ಕೋ ವಾ ವಕ್ತುಂ ಸಮುತ್ಸಹೇತ್ ।
ಚಿಂತಾಮಾತ್ರೇಣ ಮಾನುಷ್ಯಂ ಪಶ್ಯ ಶೋಕವಿನಾಶನಂ ॥ ೧೧೬ ॥

---

೧೧೨. ಶುದ್ಧವಲ್ಲದ ಗೂಬೆ ಕಾಗೆ ಮೊದಲಾದ ಹಕ್ಕಿಗಳ ಸಂಬಂಧ, ಹಕ್ಕಿಗಳ ಮಲಮೂತ್ರವಿಸರ್ಜನೆ, ಇಲಿಗಳ ಸ್ಪರ್ಶ, ಕ್ರಿಮಿ, ಹುಳು ಮೊದಲಾದವುಗಳ ಸಂಬಂಧ ಈ ವಿಧವಾದ ಮನೆಯ ಅಶುದ್ಧಿಯೆಲ್ಲವೂ ಆದಿತ್ಯಬೀಜ ಮಂತ್ರದಿಂದ ಗೃಹವನ್ನು ನೋಡುವುದರಿಂದ ನಾಶವಾಗಿ ದೇವತಾಪೂಜೆಗೆ ಯೋಗ್ಯವಾಗುವುದು.

೧೧೩-೧೧೪. ಬಳಿಕ ಯೋಗಪೀಠದ ಧ್ಯಾನವನ್ನು ಮಾಡಬೇಕು. ಹೀಗೆ ಧ್ಯಾನಮಾಡುವುದರಿಂದ ಆ ಯೋಗಪೀಠವು ಬ್ರಹ್ಮಾಂಡಮಂಡಲವನ್ನು ಪ್ರವೇಶಿಸಿ ಸಮಸ್ತವೂ ಯೋಗಪೀಠಮಯವಾಗಿಯೇ ಆಗುವುದು.

೧೧೫-೧೧೬. ಯಾವ ಯೋಗಪೀಠದ ಧ್ಯಾನವು ಚರಾಚರಾತ್ಮವಾದ ಸಮಸ್ತ ಜಗತ್ತನ್ನೂ ವ್ಯಾಪಿಸಿರುವುದೋ ಅಂತಹ ಯೋಗಪೀಠಕ್ಕೆ ಸಮಾನವಾದ ಆಸನವು ಬೇರೊಂದಿಲ್ಲ. ಆ ಯೋಗಪೀಠಧ್ಯಾನದ ಮಹಾತ್ಮೆಯನ್ನು ಹೇಳಲು ಯಾರುತಾನೇ ಸಮರ್ಥರು? ಧ್ಯಾನಮಾತ್ರದಿಂದಲೇ ಅದು ಮನುಷ್ಯರ ಸಮಸ್ತ ದುಃಖಗಳನ್ನೂ ನಾಶಮಾಡಬಲ್ಲದು.

ಧಾರಣಾದ್ಯೋಗಪೀಠಂ ತು ಚತುರ್ವರ್ಗಫಲಪ್ರದಂ ।
ಶುದ್ಧಸ್ಫಟಿಕಸಂಕಾಶಂ ಚತುಷ್ಕೋಣಂ ಚತುರ್ಯುತಂ ॥ ೧೧೭ ॥

ಆಧಾರಶಕ್ತ್ಯಾ ವಿಹಿತಂ ಪ್ರಗ್ರಹಂ ಸೂರ್ಯಸಂನಿಭಂ ।
ಆಗ್ನೇಯಾದಿಷು ಕೋಣೇಷು ಚತುರ್ಷು ಕ್ರಮತಃ ಸ್ಥಿತಂ ॥ ೧೧೮ ॥

ಧರ್ಮೋ ಜ್ಞಾನಂ ತಥೈಶ್ವರ್ಯಂ ವೈರಾಗ್ಯಂ ಕ್ರಮತಸ್ಸದಾ ।
ಪೂರ್ವಾದಿದಿಕ್ಷು ಚೈತಾನಿ ಸ್ಥಿತಾನಿ ಕ್ರಮತೋಽಥವಾ ॥ ೧೧೯ ॥

ಅಧರ್ಮಶ್ಚ ತಥಾಜ್ಞಾನಮನೈಶ್ವರ್ಯಂ ತತಃ ಪರಂ ।
ಅವೈರಾಗ್ಯಂ ಪರಂ ತಸ್ಮಾದ್ಧಾರಣಾರ್ಥಂ ವ್ಯವಸ್ಥಿತಂ ॥ ೧೨೦ ॥

ತಸ್ಯೋಪರಿ ಜಲೌಘಸ್ತು ತಸ್ಮಿನ್ಬ್ರಹ್ಮಾಂಡಮಾಸ್ಥಿತಂ ।
ಬ್ರಂಹ್ಮಾಂಡಾಭ್ಯಂತರೇ ತೋಯಂ ಕೂರ್ಮಸ್ತಸ್ಯೋಪರಿ ಸ್ಥಿತಃ ॥ ೧೨೧ ॥

ಕೂರ್ಮೋಪರಿ ತಥಾನಂತಃ ಪೃಥ್ವೀ ತಸ್ಯೋಪರಿ ಸ್ಥಿತಃ ।
ಅನಂತಗಾತ್ರಸಂಯುಕ್ತಂ ನಾಲಂ ಪಾತಾಲಗೋಚರಂ ॥ ೧೨೨ ॥

---

೧೧೭. ಯೋಗಪೀಠವನ್ನು ಧ್ಯಾನಮಾಡುವುದರಿಂದ ನಾಲ್ಕುವಿಧವಾದ ಪುರುಷಾರ್ಥಗಳು ಪ್ರಾಪ್ತಿಯಾಗುವವು. ಆ ಯೋಗಪೀಠದ ಧ್ಯಾನಕ್ರಮವು ಹೀಗಿರುವುದು—ಆ ಪೀಠವು ಶುಧ್ಧವಾದ ಸ್ಫಟಿಕದಂತೆ ಹೊಳೆಯುತ್ತಾ ನಾಲ್ಕುಮೂಲೆ ಮತ್ತು ನಾಲ್ಕು ಸುತ್ತುಗಳಿಂದಲೂ ಆಧಾರಶಕ್ತಿಯಿಂದಲೂ ಕೂಡಿ ಸೂರ್ಯನಂತೆ ಪ್ರಕಾಶಮಾನವಾಗಿರುವುದು.

೧೧೮-೧೧೯. ಆ ಯೋಗಪೀಠದ ಆಗ್ನೇಯಾದಿ ನಾಲ್ಕು ಕೋಣಗಳಲ್ಲಿ ಧರ್ಮ ಜ್ಞಾನ, ಐಶ್ವರ್ಯ, ವೈರಾಗ್ಯ, ಇವುಗಳೂ, ಪೂರ್ವಾದಿ ನಾಲ್ಕುದಿಕ್ಕುಗಳಲ್ಲಿ ಕ್ರಮವಾಗಿ ಅಧರ್ಮ, ಅಜ್ಞಾನ, ಅನೈಶ್ವರ್ಯ, ಅವೈರಾಗ್ಯ, ಇವುಗಳೂ ಇರುವವು.

೧೨೧-೧೨೨. ಅದರ ಮೇಲುಗಡೆಯಲ್ಲಿ ನೀರಿನ ರಾಸಿಯೂ, ಅದರಲ್ಲಿ ಬ್ರಂಹ್ಮಾಂಡವೂ, ಬ್ರಹ್ಮಾಂಡದ ಒಳಗಡೆ ನೀರೂ, ಆ ನೀರಿನಲ್ಲಿ ಆಮೆಯೂ, ಇರುವುದು ಆ ಆಮೆಯಮೇಲೆ ಅನಂತನೂ, ಅನಂತನಮೇಲೆ ಪೃಥ್ವಿಯೂ ಇರುವುದು. ಆ ಅನಂತನ ಶರೀರಕ್ಕೆ ಸಂಬಂಧಿಸಿದಂತೆ ಪಾತಾಳಪರ್ಯಂತರವಾಗಿಯೂ ಇರುವ ಪದ್ಮನಾಳವಿರುವುದು.

ಪೃಥ್ವೀಮಧ್ಯೇ ಸ್ಥಿತಂ ಪದ್ಮಂ ದಿಕ್ಪತ್ರಂ ಗಿರಿಕೇಸರಂ ।
ತಸ್ಯಾಷ್ಟದಿಕ್ಷು ದಿಕ್ಪಾಲಾಃ ಸ್ವರ್ಗೋ ಮಧ್ಯೇ ವ್ಯವಸ್ಥಿತಃ ॥ ೧೨೩ ॥

ಕರ್ಣಿಕಾಯಾಂ ಬ್ರಹ್ಮಲೋಕೋ ಮಹರ್ಲೋಕಾದಯೋ ಹ್ಯಧಃ ।
ಸ್ವರ್ಗೇ ಜ್ಯೋತೀಂಷಿ ದೇವಾಶ್ಚ ಚತುರ್ವೇದಾಸ್ತದಂತರೇ ॥ ೧೨೪ ॥

ಸತ್ತ್ವಂ ರಜಸ್ತಮ ಇತಿ ಗುಣಾಃ ಪ್ರಕೃತಿಸಂಭವಾಃ ।
ಸದಾ ಸ್ಥಿತಾಃ ಪದ್ಮಮಧ್ಯೇ ಪರಂ ತತ್ತ್ವಂ ತಥೈವ ಚ ॥ ೧೨೫ ॥

ಆತ್ಮತತ್ತ್ವಂ ತತ್ರ ಸಂಸ್ಥಮೂರ್ಧ್ವಚ್ಛದನಮೂರ್ಧ್ವತಃ
ಅಧೋಧಶ್ಛದನಂ ತತ್ರ ಕೇಸರಾಗ್ರೇ ಸ್ಥಿತಂ ಪುನಃ ॥ ೧೨೬ ॥

೧೨೩-೧೨೪. ಆ ಪೃಥ್ವಿಯ ಮಧ್ಯಭಾಗದಲ್ಲಿ ಎಂಟು ದಳಗಳಿಂದ ಕೂಡಿರುವ ಪದ್ಮವಿರುವುದು. ಆ ಎಂಟು ದಳಗಳಲ್ಲಿ ಎಂಟು ಕುಲಪರ್ವತಗಳಿರುವುವು. ಆ ಪದ್ಮದ ಎಂಟು ದಿಕ್ಕುಗಳಲ್ಲಿಯೂ ದಿಕ್ಪಾಲಕರೂ, ಮಧ್ಯದಲ್ಲಿ ಸ್ವರ್ಗಲೋಕವೂ, ಕರ್ಣಿಕಾ ಪ್ರದೇಶದಲ್ಲಿ ಬ್ರಹ್ಮಲೋಕವೂ, ಆ ಬ್ರಹ್ಮಲೋಕದ ಕೆಳಭಾಗದಲ್ಲಿ ಮಹರ್ಲೋಕವೇ ಮೊದಲಾದ ಇತರ ಲೋಕಗಳೂ ಇರುವುವು. ಸ್ವರ್ಗದಲ್ಲಿ ದೇವತೆಗಳೂ, ನಕ್ಷತ್ರಗಳೂ ಅವರ ಮಧ್ಯದಲ್ಲಿ ನಾಲ್ಕು ವೇದಗಳೂ ಇರುವವು.

೧೨೫. ಪದ್ಮ ಮಧ್ಯದಲ್ಲಿ ಸತ್ತ್ವ, ರಜಃ, ತಮಃ ಎಂಬ ಪ್ರಕೃತಿಯಿಂದ ಉಂಟಾದ ಮೂರು ಗುಣಗಳಿರುವವು. ಮತ್ತು ಪದ್ಮದ ಮಧ್ಯಭಾಗದಲ್ಲಿ ಪರಬ್ರಹ್ಮ ರೂಪವಾದ ತತ್ತ್ವವು ಇರುವುದು.

೧೨೬. ಅಲ್ಲಿ ಆತ್ಮತತ್ತ್ವವು ಮೇಲುಮುಖವಾದ ಆಚ್ಛಾದನದಿಂದ ಕೂಡಿ ಮೇಲುಭಾಗದಲ್ಲಿರುವುದು. ಅದರ ಆವರ್ಣವು ಮಾತ್ರ ಪದ್ಮದ ಕೇಸರಾಗ್ರದಲ್ಲಿ ಅಧೋಮುಖವಾಗಿರುವುದು. ಅನಂತರ ಕ್ರಮವಾಗಿ ಸೂರ್ಯ, ಅಗ್ನಿ, ಚಂದ್ರ, ವಾಯು, ಇವರುಗಳ ಮಂಡಲಗಳೂ ಇರುವುವು.

ಸೂರ್ಯಾಗ್ನಿಚಂದ್ರಮರುತಾಂ ಮಂಡಲಾನಿ ಕ್ರಮಾತ್ತತಃ ।
ಶಾವಾಸನಂ ಯೋಗಪೀಠೇ ಸುಖಾಸನಮತಃಪರೇ ॥ ೧೨೭ ॥

ಆರಾಧ್ಯಾಸನಮುತ್ಸೃಜ್ಯ ತತಶ್ಚ ವಿಮಲಾಸನಂ ।
ಮಧ್ಯೇ ವಿಚಿಂತಯೇತ್ಸರ್ವಂ ಜಗದ್ವೈ ಸಚರಾಚರಂ ॥ ೧೨೮ ॥

ಬ್ರಹ್ಮವಿಷ್ಣುಶಿವಾಂಶ್ಚೈವ ಭಾಗತ್ರಯವಿನಿಶ್ಚಿತಾನ್ ।
ಆತ್ಮಾನಂ ಚಿಂತಯೇತ್ತತ್ರ ಪೂಜನೇ ಸಮುಪಸ್ಥಿತಂ ॥ ೧೨೯ ॥

ಮಂಡಲಂ ಯೋಗಪೀಠಂ ತು ಪದ್ಮೇ ಪದ್ಮಂ ತು ಚಿಂತಯೇತ್ ।
ಶಾವಾದೀನ್ಯಾಸನಾನೀಹ ಚತ್ವಾರ್ಯಪಿ ವಿಚಿಂತಯೇತ್ ॥ ೧೩೦ ॥

ಯೋಗಪೀಠಂ ಪೃಥಕ್ ಧ್ಯಾತ್ವಾ ಮಂಡಲೇನ ಸಹೈಕತಾಂ ।
ಪುನರ್ಧ್ಯಾತ್ವಾ ತತಃ ಪಶ್ಚಾತ್ಪೂಜಯೇದಾಸನಂ ತತಃ ॥ ೧೩೧ ॥

೧೨೭-೧೨೮. ಬಳಿಕ ಯೋಗಪೀಠದಲ್ಲಿ ಶವಾಸನ, ಸುಖಾಸನ, ತಾನು ಪೂಜೆ ಮಾಡಲು ಯೋಗ್ಯವಾದ ಆಸನ, ವಿಮಲಾಸನ, ಈ ಆಸನಗಳನ್ನು ಧ್ಯಾನಮಾಡಿ ಬಳಿಕ ಪದ್ಮದ ಮಧ್ಯದಲ್ಲಿ ಚರಾಚರಾತ್ಮಕವಾದ ಜಗತ್ತನ್ನು ಧ್ಯಾನಮಾಡಬೇಕು.

೧೨೯. ಅನಂತರ ಆ ಯೋಗಪೀಠದಲ್ಲಿ ಬ್ರಹ್ಮವಿಷ್ಣುಮಹೇಶ್ವರರೆಂಬ ತ್ರಿಮೂರ್ತಿಗಳನ್ನೂ, ಪೂಜೆಮಾಡುವುದಕ್ಕೆ ಸಿದ್ಧನಾಗಿ ಕುಳಿತಿರುವ ತನ್ನನ್ನೂ ಚಿಂತಿಸಬೇಕು.

೧೩೦. ಯೋಗಪೀಠವನ್ನೂ, ಮಂಡಲವನ್ನೂ, ಪದ್ಮದಲ್ಲಿ ಮತ್ತೊಂದು ಪದ್ಮವನ್ನೂ, ಹಿಂದೆಹೇಳಿದ ಶವಾಸನ ಮೊದಲಾದ ನಾಲ್ಕು ಆಸನಗಳನ್ನೂ, ಧ್ಯಾನಿಸಬೇಕು.

೧೩೧. ಮೊದಲು ಯೋಗಪೀಠವನ್ನು ಬೇರೆಯಾಗಿ ಧ್ಯಾನಮಾಡಿ ಬಳಿಕ ಮಂಡಲದೊಂದಿಗೆ ಸೇರಿರುವಂತೆ ಪುನಃ ಧ್ಯಾನಮಾಡಿದನಂತರ ಆಸನವನ್ನು ಪೂಜೆ ಮಾಡಬೇಕು.

ಧ್ಯಾನೇನ ಯೋಗಪೀಠಸ್ಯ ಯಥಾ ಯದ್ದೀಯತೇ ಜಲಂ ।
ನೈವೇದ್ಯಂ ಪುಷ್ಪಧೂಪಾದಿ ತಸ್ಯ ಯಚ್ಚೋಪತಿಷ್ಠತೇ ॥ ೧೩೨ ॥

ಸರ್ವೇ ದೇವಾಃ ಸಗಂಧರ್ವಾಃ ಸಚರಾಚರಗುಹ್ಯಕಾಃ ।
ಚಿಂತಿತಾಃ ಪೂಜಿತಾಶ್ಚ ಸ್ಯುರ್ಯೋಗಪೀಠಸ್ಯ ಪೂಜನೇ ॥೧೩೩ ॥

ಅಭೀಷ್ಟದೇವತಾಪೂಜಾಂ ವಿನಾ ಯಸ್ಯ ವಿಚಿಂತನಾತ್ ।
ಲಭತೇ ವೈ ಚತುರ್ವರ್ಗಂ ತುಷ್ಟಿಃ ಪುಷ್ಟಿಶ್ಚ ಜಾಯತೇ ॥ ೧೩೪ ॥

ಆವಾಹನಾನಂತರತಃ ಪಾಣಿಭ್ಯಾಮವತಾರಯೇತ್ ।
ಪ್ರಾಗುತ್ತಾನೌ ಕರೌ ಕೃತ್ವಾ ಊರ್ಧ್ವಮುತ್ಕ್ಷಿಪ್ಯ ಸಾಂತರೌ ॥ ೧೩೫ ॥

ನಿರಂತರಾವಧಃ ಕುರ್ಯಾನ್ನಾಮಯನ್ ಪೂಜಕಸ್ತಥಾ ।
ಪೇರಂಬಸ್ಯ ತು ಬೀಜೇನ ತಸ್ಮಾದವತರೇತಿ ಚ ॥ ೧೩೬ ॥

೧೩೨-೧೩೩. ಯೋಗಪೀಠದ ಧ್ಯಾನದಿಂದ ಸಾಧಕನಿಗೆ ಒದಗಿರುವ ಜಲ, ನೈವೇದ್ಯ ಪುಷ್ಪ ದೂಪಾದಿಗಳೇ ಮೊದಲಾದ ಪೂಜಾಸಾಮಗ್ರಿಗಳು ಪೂಜಾಯೋಗ್ಯವಾಗುವವು ಮತ್ತು ಯೋಗಪೀಠವನ್ನು ಪೂಜಿಸುವುದರಿಂದ ದೇವತೆಗಳು, ಗಂಧರ್ವರು ಚರಾಚರಪ್ರಾಣಿಗಳಿಂದ ಸಹಿತರಾದ ಗುಹ್ಯಕರು ಇವರೆಲ್ಲರನ್ನೂ ಧ್ಯಾನಿಸಿ ಪೂಜೆ ಮಾಡಿದಂತಾಗುವುದು.

೧೩೪. ಯೋಗಪೀಠವನ್ನು ಧ್ಯಾನಮಾಡದೆ ಇಷ್ಟದೇವತೆಯ ಪೂಜೆಯನ್ನು ಮಾಡಬಾರದು. ಆದುದರಿಂದ ಯೋಗಪೀಠಧ್ಯಾನಸಹಿತವಾಗಿ ಇಷ್ಟದೇವತೆಯನ್ನು ಪೂಜಿಸಿದವನು ಚತುರ್ವರ್ಗ ಪುರುಷಾರ್ಥಗಳನ್ನೂ ತುಷ್ಟಿ ಪುಷ್ಟಿ ಇವುಗಳನ್ನೂ ಹೊಂದುತ್ತಾನೆ.

೧೩೫. ಪೂಜಕನು ತನ್ನ ಎರಡು ಕೈಗಳನ್ನೂ ಮೇಲಕ್ಕೆ ಎತ್ತಿ ಹಿಡಿದು ಮುಂದಕ್ಕೆ ಚಾಚಿ ಎರಡು ಅಂಗೈಗಳನ್ನೂ ಸೇರಿಸಿ ಊರ್ಧ್ವಮುಖವಾಗಿ ಹಿಡಿದು ಬಳಿಕ ಮೆಲ್ಲಗೆ ಕೈಯನ್ನು ತಗ್ಗಿಸುತ್ತಾ ದೇವರ ಆವಾಹನೆಯಾದನಂತರ ಕೈಗಳನ್ನು ಕೆಳಕ್ಕೆ ಇಳಿಸಬೇಕು.

೧೩೬-೧೩೭. ಪೇರಂಬಬೀಜಮಂತ್ರವನ್ನು (ಗಂ) ಉಚ್ಚರಿಸಿ ಆ ಪೀಠದಿಂದ ಅವತರಿಸು ಎಂದು ಎರಡುಮೂರಾವರ್ತಿ ಹೇಳುವುದರಿಂದ ಇಷ್ಟದೇವತೆಯ ಅವತರಣ

ಆಮ್ರೇಡಿತೇನ ಚಾಭೀಷ್ಟದೇವಾನಾಂ ಲಂಬನಾಯ ವೈ ।
ನಾಸಿಕಾವಾಯುನಿಸ್ಸಾರಾದ್ವಿಯತ್ಸ್ಥಾ ದೇವತಾ ಭವೇತ್ ॥ ೧೩೭ ॥

ಏವಂ ಕೃತೇ ಮಂಡಲೇ ತು ಸ್ಥಿತಿಸ್ತಸ್ಯ ಪ್ರಜಾಯತೇ ।
ಖಾಂತಃ ಶುದ್ಧಾಂಬುಬಿಂದುಭ್ಯಾಂ ಹ್ಯೈರಂಬಂ ಬೀಜಮುಚ್ಯತೇ ॥ ೧೩೮ ॥

ನಾಶನಂ ವಿಘ್ನಬೀಜಾನಾಂ ಧರ್ಮಕಾಮಾರ್ಥಸಾಧನಂ ।
ಗಂಧಪುಷ್ಪೇ ತಥಾ ಧೂಪದೀಪೌ ನೈವೇದ್ಯಮೇವ ಚ ॥ ೧೩೯ ॥

ಯದನ್ಯದ್ದೀಯತೇ ವಸ್ತ್ರಮಲಂಕಾರಾದಿಕಂ ಚ ಯತ್ ।
ತೇಷಾಂ ದೈವತಮುಚ್ಚಾರ್ಯ ಕೃತ್ವಾ ಪ್ರೋಕ್ಷಣಪೂಜನೇ ॥ ೧೪೦ ॥

ಉತ್ಸೃಜ್ಯ ಮೂಲಮಂತ್ರೇಣ ಪ್ರತಿನಾಮ್ನಾ ನಿವೇದಯೇತ್ ।
ವರುಣಸ್ಯ ತು ಬೀಜೇನ ತೇಷಾಂ ಪ್ರೋಕ್ಷಣಮಾಚರೇತ್ ॥ ೧೪೧ ॥

ಕರ್ಮವನ್ನು ಮಾಡಬೇಕು. ನಾಸಿಕದಿಂದ ವಾಯುವನ್ನು ನಿಸ್ಸರಣಮಾಡುವುದರಿಂದ ದೇವತೆಯು ಅಂತರಿಕ್ಷದಲ್ಲಿ ಬಂದು ಇರುವುದು. ಹೀಗೆ ಮಾಡಿದರೆ ಆ ಮಂಡಲದಲ್ಲಿ ದೇವತಾಸಾನ್ನಿಧ್ಯಕ್ಕೆ ಯೋಗ್ಯವಾದ ಸ್ಥಿತಿಯು ಉಂಟಾಗುವುದು.

೧೩೮. ಖಕಾರದ ಮುಂದಿನ ಅಕ್ಷರವಾದ ಗಕಾರಕ್ಕೆ ಐಕಾರವನ್ನೂ ಬಿಂದುವನ್ನೂ ಸೇರಿಸಿದರೆ ಗಂ ಎಂದು ಹೇರಂಬಬೀಜವಾಗುವುದು. ಇದು ಸಮಸ್ತ ವಿಘ್ನಗಳನ್ನೂ ಪರಿಹಾರಮಾಡಿ ಧರ್ಮಕಾಮಾರ್ಥಗಳನ್ನು ಸಾಧಿಸಿಕೊಡುವುದು.

೧೩೯-೧೪೦. ಪೂಜಾಕಾಲದಲ್ಲಿ ದೇವರಿಗೆ ಗಂಧ ಹೂವು ಧೂಪ ದೀಪ ನೈವೇದ್ಯ ವಸ್ತ್ರ ಆಲಂಕಾರ ಮೊದಲಾದುವುಗಳನ್ನು ಸಮರ್ಪಿಸುವಾಗ ಆಸಂಬಂಧವಾದ ಮಂತ್ರಗಳನ್ನು ಉಚ್ಚರಿಸುತ್ತಾ ಆ ದ್ರವ್ಯಗಳನ್ನು ಪ್ರೋಕ್ಷಣೆಮಾಡಿ ಸಮರ್ಪಿಸಬೇಕು. ಮೂಲಮಂತ್ರವನ್ನು ಹೇಳಿ ಉತ್ಸರ್ಜನೆಮಾಡಬೇಕು.

೧೪೧-೧೪೨. ಲಕಾರದ ಮುಂದಿನ ವರ್ಣವಾದ ವಕಾರಕ್ಕೆ ಬಿಂದುವನ್ನು ಸೇರಿಸಿದರೆ ವಂ ಎಂದು ವಾರುಣಬೀಜವಾಗುವುದು. ಈ ಬೀಜೋಚ್ಚಾರಣೆಯಿಂದ

ಇಷ್ಟೇನ ಮೂಲಮಂತ್ರೇಣ ತಥೋತ್ಸರ್ಗನಿವೇದನೇ ।
ಲಪರಶ್ಚಂದ್ರಬಿಂದುಭ್ಯಾಂ ಬೀಜಂ ವಾರುಣಮುಚ್ಯತೇ ॥ ೧೪೨ ॥

ವಿಲೋಕನಂ ಪೂಜನಂ ಚ ತಥಾ ದಾನಂ ಪೃಥಕ್ಪೃಥಕ್ ।
ಜಪಕರ್ಮಣಿ ಮಾಲಾಯಾಃ ಪ್ರತಿಪತ್ತಿರಿದಂ ತ್ರಯಂ ॥ ೧೪೩ ॥

ಇಷ್ಟಮಂತ್ರೇಣ ಮಾಲಾಯಾಃ ಪ್ರೋಕ್ಷಣಂ ಪರಿಕೀರ್ತಿತಂ ।
ಬೀಜಂ ಗಾಣಪತಂ ಪೂರ್ವಮುಚ್ಚಾರ್ಯ ತದನಂತರಂ ॥ ೧೪೪ ॥

ಅವಿಘ್ನಂ ಕುರು ಮಾಲೇ ತ್ವಂ ಗೃಹ್ಣೀಯಾದಿತ್ಯನೇನ ಚ ।
ಜಪಾಂತೇ ಶಿರಸಿ ನ್ಯಾಸೋ ಮಾಲಾಯಾಃ ಪರಿಕೀರ್ಕಿತಃ ॥ ೧೪೫ ॥

ಸ್ರಜಮಾದಾಯ ಪಾಣಿಭ್ಯಾಂ ಶ್ರೀಬೀಜೇನ ತಥಾರ್ಚಯೇತ್ ।
ಅಂತ್ಯದಂತ್ಯಾಂತ್ಯಮಾತ್ರಾಭ್ಯಾಂ ಚಾದಿವರ್ಗತೃತೀಯಕೌ ॥ ೧೪೬ ॥

ಪೂಜಾದ್ರವ್ಯಗಳ ಪ್ರೋಕ್ಷಣವನ್ನು ಮಾಡಬೇಕು. ಉತ್ಸರ್ಗನಿವೇದನೆಗಳನ್ನು ಇಷ್ಟ ದೇವತೆಯ ಮೂಲಮಂತ್ರದಿಂದ ಮಾಡಬೇಕು.

೧೪೩. ಜಪಮಾಡುವಾಗ ಜಪಮಾಲೆಗೆ ವಿಲೋಕನಂ-ಎಂದರೆ ನೋಡುವುದು ಪೂಜನಂ-ಎಂದರೆ ಪೂಜೆಮಾಡುವುದು, ದಾನಂ-ಎಂದರೆ ಮಾಲೆಯನ್ನು ಕೈಗೆ ತೆಗೆದು ಕೊಳ್ಳುವುದು ಎಂಬ ಈ ಮೂರು ಕರ್ಮಗಳನ್ನೂ ಪ್ರತ್ಯೇಕವಾಗಿ ಆಚರಿಸಬೇಕು.

೧೪೪-೧೪೫. ಜಪಮಾಲೆಯ ಪ್ರೋಕ್ಷಣವನ್ನು ತನಗೆ ಇಷ್ಟವಾದ ಮಂತ್ರದಿಂದ ಮಾಡಬಹುದು. ಮೊದಲು ಗಣಪತಿಬೀಜವಾದ ಗಂ ಎಂಬ ಬೀಜಾಕ್ಷರವನ್ನು ಉಚ್ಚರಿಸಿ ಬಳಿಕ ಎಲೈ ಮಾಲಾದೇವಿಯೇ ನೀನು ನನ್ನ ಜಪದ ವಿಘ್ನಗಳನ್ನು ಹೋಗಲಾಡಿಸು ಎಂಬ "ಅವಿಘ್ನಂ ಕುರು ಮಾಲೇ ತ್ವಂ" ಮಂತ್ರವನ್ನು ಹೇಳಿ ಮಾಲೆಯನ್ನು ತೆಗೆದುಕೊಂಡು ಜಪವನ್ನು ಮಾಡಬೇಕು. ಜಪವು ಮುಗಿದಮೇಲೆ ಆ ಜಪಸರವನ್ನು ಭಕ್ತಿಯಿಂದ ಶಿರಸ್ಸಿನಲ್ಲಿ ಇಟ್ಟುಕೊಳ್ಳಬೇಕು.

೧೪೬. ಜಪಮಾಲೆಯನ್ನು ಕೈಯಿನಿಂದ ತೆಗೆದುಕೊಂಡು ಶ್ರೀ ಬೀಜದಿಂದ ಪೂಜಿಸಬೇಕು. ಕಡೆಯ ಎರಡು ದಂತ್ಯಾಕ್ಷರಗಳು ಚವರ್ಗದ ಮೊದಲನೆಯ ಮತ್ತು ಮೂರನೆಯ ಅಕ್ಷರಗಳು ಇವುಗಳಿಗೆ ಬಿಂದುವನ್ನು ಸೇರಿಸಿದರೆ ಶ್ರೀಬೀಜವಾಗುವುದು.

ಪರತಃ ಪರತಃ ಪೂರ್ವಂ ಶ್ರೀಬೀಜಮಿಂದುನೇಂದುನಾ ।
ಮಾಲಾಯಾ ಅವತಾರಸ್ತು ಶಿರಸಃ ಕ್ರಿಯತೇ ಯದಾ ॥ ೧೪೭ ॥

ತಾಂ ಸಮಾದಾಯ ಪಾಣಿಭ್ಯಾಂ ಕುರ್ಯಾತ್ಸಾರಸ್ವತೇನ ವೈ ।
ಶ್ರೀಬೀಜಾನಾಮಾದ್ಯಮಾದ್ಯಂ ಬಿಂದುಚಂದ್ರಾರ್ಧಸಂಯುತಂ ॥ ೧೪೮ ॥

ಏತಚ್ಚತುಷ್ಟಯಂ ಬೀಜಂ ಸಾರಸ್ವತಮುದೀರಿತಂ ।
ಪೌರಾಣಿಕೈರ್ವೈದಿಕೈಶ್ಚ ಮೂಲಮಂತ್ರೇಣ ಚೈವ ಹಿ ॥ ೧೪೯ ॥

ಪ್ರದಕ್ಷಿಣಾಂ ಪ್ರಣಾಮಂ ಚ ಕುರ್ಯಾದ್ಧರ್ಮಾರ್ಥಸಾಧಕಂ ।
ಭೂಮಿಂ ವೀಕ್ಷ್ಯ ತಥಾಭ್ಯುಕ್ಷ್ಯ ಕ್ಷಿತಿಬೀಜೇನ ಪೂರ್ವತಃ ॥ ೧೫೦ ॥

ಸ್ಪೃಶಂಸ್ತಾಂ ಶಿರಸಾ ಭೂಮಿಂ ಪ್ರಣಮೇದಿಷ್ಟದೇವತಾಃ ।
ಸಮಾಪ್ತಿಹೀನಂ ವಾರಾಹಂ ಬೀಜಂ ಬಿಂದ್ವಿಂದುಸಂಯುತಂ ॥ ೧೫೧ ॥

೧೪೭-೧೪೮. ಜಪಮುಗಿದ ಬಳಿಕ ಜಪಸರವನ್ನು ಕೈಯಲ್ಲಿ ತೆಗೆದುಕೊಂಡು ಸಾರಸ್ವತಬೀಜಮಂತ್ರದಿಂದ ತನ್ನ ಶಿರಸ್ಸಿನಲ್ಲಿ ಇರಿಸಿಕೊಳ್ಳಬೇಕು. ಶ್ರೀಬೀಜದಲ್ಲಿರುವ ನಾಲ್ಕು ಅಕ್ಷರಗಳಿಗೆ ಕೊನೆಯ ಅನುಸ್ವಾರವನ್ನು ಸೇರಿಸಿದರೆ ಸಾರಸ್ವತಬೀಜವಾಗುವುದು

೧೪೯-೧೫೦. ಪೌರಾಣಿಕ ಶ್ಲೋಕಗಳಿಂದಲೂ, ವೇದಮಂತ್ರಗಳಿಂದಲೂ, ಮೂಲಮಂತ್ರದಿಂದಲೂ, ಧರ್ಮಾರ್ಥಾದಿಪುರುಷಾರ್ಥಗಳ ಸಾಧಕವಾದ ಪ್ರದಕ್ಷಿಣ ನಮಸ್ಕಾರವನ್ನು ಮಾಡಬೇಕು. ಮೊದಲು ಕ್ಷಿತಿಬೀಜದಿಂದ ಭೂಮಿಯನ್ನು ನೋಡಿ ಅದನ್ನು ಪ್ರೋಕ್ಷಿಸಿ ಬಳಿಕ ತನ್ನ ಇಷ್ಟದೇವತೆಯನ್ನು ನಮಸ್ಕರಿಸುವಾಗ ಶಿರಸ್ಸಿನಿಂದ ಭೂಮಿಯನ್ನು ಸ್ಪರ್ಶಮಾಡುತ್ತಾ ನಮಸ್ಕಾರಮಾಡಬೇಕು.

೧೫೧ ವಾರಾಹಬೀಜದಲ್ಲಿರುವ ಹಕಾರವನ್ನು. ಬಿಟ್ಟು ಉಳಿದ ವರ್ಣಕ್ಕೆ ಬಿಂದುವನ್ನು ಸೇರಿಸಿದರೆ. ಕ್ಷಿತಿಬೀಜವಾಗುವುದು (ಊಂ) ಇದು ನಾಲ್ಕು ಪುರುಷಾರ್ಥಗಳನ್ನು ಕೊಡುವಂತಹುದು.

ಕ್ಷಿತಿಬೀಜಂ ವಿಜಾನೀಯಾಚ್ಚತುರ್ವರ್ಗಪ್ರದಾಯಕಂ ।
ದರ್ಪಣಂ ವ್ಯಜನಂ ಘಂಟಾಂ ಚಾಮರಂ ಪ್ರೋಕ್ಷಯೇತ್ಪುನಃ ॥ ೧೫೨ ॥

ನೈವೇದ್ಯಾಲೋಕಮಂತ್ರೇಣ ಪೂರ್ವಂ ಪ್ರೋಕ್ತೇನ ಭೈರವ ॥ ೧೫೩ ॥

ನಾಮಾಕ್ಷರಾಣಿ ಚಾದ್ಯಾನಿ ಚೈತೇಷಾಂ ಬಿಂದುನೇಂದುನಾ ॥ ೧೫೪ ॥

ತತ್ಕೃ ನಮ ಇತಿ ಪ್ರಾಂತೇ ಗ್ರಹಣೇ ಮಂತ್ರಮುಚ್ಯತೇ ।
ನಿವೇದನಮುಖೈತೇಷಾಮಿಷ್ಟಮಂತ್ರೇಣ ಚಾಚರೇತ್ ॥ ೧೫೫ ॥

ವಾಗ್ಭವಸ್ಯ ದ್ವಿತೀಯೇನ ಕಾಮಬೀಜೇನ ಭೈರವ ।
ಮುದ್ರಾಯಾ ಬಂಧನಂ ಕಾರ್ಯಂ ಮೂಲಮಂತ್ರೇಣ ದರ್ಶನಂ ॥ ೧೫೬ ॥

೧೫೨-೧೫೩. ಎಲೈ ಭೈರವನೇ ಕೇಳು, ಹಿಂದೆ ಹೇಳಿದ ನೈವೇದ್ಯಾಲೋಕನ ಮಂತ್ರದಿಂದ ದೇವಪೂಜಾಸಾಮಗ್ರಿಗಳಾದ ಕನ್ನಡಿ, ಬೀಸಣಿಗೆ, ಘಂಟೆ, ಚಾಮರ, ಇವುಗಳನ್ನು ಪ್ರೋಕ್ಷಿಸಬೇಕು.

೧೫೪-೧೫೫. ಮೇಲೆ ಹೇಳಿದ ದರ್ಪಣ (ಕನ್ನಡಿ) ವ್ಯಜನಾದಿಶಬ್ದಗಳ ಮೊದಲುಅಕ್ಷರಕ್ಕೆ ಬಿಂದುವನ್ನು ಸೇರಿಸಿದರೆ ಆಯಾ ಉಪಕರಣದ ಬೀಜಾಕ್ಷರವಾಗುವುದು. ಹೇಗೆಂದರೆ ದರ್ಪಣಶಬ್ದದ ಮೊದಲನೆಯ ಅಕ್ಷರವಾದ ದಕಾರಕ್ಕೆ ಬಿಂದುವನ್ನು ಸೇರಿಸಿದರೆ ದಂ ಎಂದು ಬೀಜಾಕ್ಷರವಾಗುವುದು. ಅದರಮುಂದೆ ದರ್ಪಣಾಯ ನಮಃ ಎಂದು ಸೇರಿಸಿದರೆ, ದಂ ದರ್ಪಣಾಯ ನಮಃ ಎಂದು ದರ್ಪಣ ಗ್ರಹಣಮಂತ್ರವಾಗುವುದು. ಅದರಂತೆಯೇ **ವ್ಯಜನಕ್ಕೆ** ವ್ಯಂ ವ್ಯಂಜನಾಯನಮಃ ಎಂದೂ, ಘಂಟೆಗೆ ಘಂ ಘಂಟಾಯೈನಮಃ ಎಂದೂ, ಚಾಮರಕ್ಕೆ ಚಾಂ ಚಾಮರಾಯ ನಮಃ ಎಂದೂ ಬೀಜಾಕ್ಷರ ಮಂತ್ರಗಳು. ಈ ಬೀಜಾಕ್ಷರ ಮಂತ್ರಗಳಿಂದ ಆಯಾ ಪದಾರ್ಥಗಳನ್ನು ತೆಗೆದುಕೊಂಡು ಅವುಗಳನ್ನು ಸಮರ್ಪಿಸಲು ಉಕ್ತವಾಗಿರುವ ಮಂತ್ರಗಳಿಂದ ದೇವರಿಗೆ ಸಮರ್ಪಿಸಬೇಕು.

೧೫೬. ವಾಗ್ಭವಬೀಜದ ಎರಡನೆಯ ಅಕ್ಷರವಾದ ಕಾಮಬೀಜದಿಂದ (ಏಂ) ಮುದ್ರೆಗಳ ಬಂಧನವನ್ನು ಮಾಡಬೇಕು. ಮೂಲಮಂತ್ರದಿಂದ ತೋರಿಸಬೇಕು. ತಾರಾಬೀಜದಿಂದ ವಿಸರ್ಜನೆಮಾಡಬೇಕು.

ವರಿತ್ಯಾಗಂ ತು ಮುದ್ರಾಯಾಸ್ತಾರಾಬೀಜೇನ ಚಾಚರೇತ್ ।
ಸ್ರಾಂತಾದಿಚಂದ್ರಬಿಂದುಭ್ಯಾಂ ಷಷ್ಠಸ್ವರಸಮನ್ವಿತಃ ॥ ೧೫೬ ॥

ತಾರಾಬೀಜಮಿತಿ ಪ್ರೋಕ್ತಂ ಧರ್ಮಕಾಮಾರ್ಥಸಾಧನಂ ।
ಮುದಂ ದದಾತಿ ಯಸ್ಮಾತ್ತಾ ಮುದ್ರಾ ತೇನ ಪ್ರಕೀರ್ತಿತಾ ॥ ೧೫೭ ॥

ದರ್ಶಿತಾಯಾಂ ತು ಮುದ್ರಾಯಾಂ ಭವೇತ್ಪೂಜಾಸಮಾಪನಂ ।
ಕಾಮಂ ಮೋಕ್ಷಂ ತಥಾ ಧರ್ಮಮರ್ಥಮೋದಯುತಾ ಸ್ವಯಂ ॥ ೧೫೮ ॥

ದದಾತಿ ಸಾಧಕಾಯಾಶು ದೇವತಾಗಂತುಮುತ್ಸುಕಾ ।
ಮುದ್ರಾಂತೇ ತು ಮಹಾಮಂತ್ರಾನ್ಮತಿಮಾನ್ಸಮುದೀರಯೇತ್ ॥ ೧೬೦ ॥

ಯದ್ದತ್ತಂ ಭಕ್ತಿಮಾತ್ರೇಣ ಪತ್ರಂ ಪುಷ್ಪಂ ಫಲಂ ಜಲಂ ।
ಆವೇದಿತಂ ಚ ನೈವೇದ್ಯಂ ತದ್ಗೃಹಾಣಾನುಕಂಪಯಾ ॥ ೧೬೧ ॥

---

೧೫೬. ಮೊದಲನೆಯ ಸ್ವರವಾದ ಅಕಾರ ಆರನೆಯ ಸ್ವರವಾದ ಊಕಾರ ಮೂಡನೆ ಸೇರಿಸಿದರೆ ಓ ಎಂದಾಗುವುದು. ಇದಕ್ಕೆ ಬಿಂದುವನ್ನು ಸೇರಿಸಿದರೆ ಓಂ ಎಂದು ತಾರಾಬೀಜವಾಗುವುದು. ಈ ತಾರಾಬೀಜವು ಧರ್ಮ, ಕಾಮ, ಅರ್ಥ ಎಂಬ ಪುರುಷಾರ್ಥಗಳನ್ನು ಸಾಧನೆಮಾಡಿಕೊಡುವುದು.

೧೫೭. ಇಷ್ಟದೇವತೆಯನ್ನು ಪೂಜಿಸುವಾಗ ಆ ದೇವತೆಗೆ ಮುದ ಎಂದರೆ ಸಂತೋಷವನ್ನುಂಟುಮಾಡುವುದಾದುದರಿಂದ ಇದಕ್ಕೆ ಮುದ್ರೆ ಎಂದು ಹೆಸರುಬಂದಿತು. ಮುದ್ರೆಯನ್ನು ತೋರಿಸಿದನಂತರ ಪೂಜೆಯು ಅಲ್ಲಿಗೆ ಮುಗಿಯಿತು ಎಂದು ತಿಳಿಯಬೇಕು.

೧೫೮-೧೬೦. ಈರೀತಿ ಮುದ್ರೆಯನ್ನು ತೋರಿಸುವುದರಿಂದ ಇಷ್ಟದೇವತೆಯು ತಾನು ಪೂಜೆಯನ್ನು ಸ್ವೀಕರಿಸಿ ಹೋಗಲುದ್ಯುಕ್ತಳಾದಾಗ ಸಂತೋಷದಿಂದ ಸಾಧಕನಿಗೆ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಕೊಡುವಳು. ಮುದ್ರೆಯನ್ನು ತೋರಿಸುವಾಗ ಬುದ್ಧಿವಂತನಾದ ಸಾಧಕನು ಮುಂದೆ ಹೇಳುವ ಮಹಾಮಂತ್ರಗಳನ್ನು ದೇವಿಯ ಪ್ರೀತ್ಯರ್ಥವಾಗಿ ಹೇಳಬೇಕು.

೧೬೧. ಎಲೈ ದೇವಿಯೇ, ನಾನು ಭಕ್ತಿಯಿಂದ ಸಮರ್ಪಿಸಿದ ಪತ್ರ, ಪುಷ್ಪ, ಫಲ, ಜಲ ನೈವೇದ್ಯ ಇವುಗಳನ್ನು ನನ್ನ ಮೇಲೆ ದಯವಿಟ್ಟುಸ್ವೀಕರಿಸು.

ಆವಾಹನಂ ನ ಜಾನಾಮಿ ನ ಜಾನಾಮಿ ವಿಸರ್ಜನಂ ।
ಪೂಜಾಭಾವಂ ನ ಜಾನಾಮಿ ತ್ವಂ ಗತಿಃ ಪರಮೇಶ್ವರಿ ॥ ೧೬೨ ॥

ಕರ್ಮಣಾ ಮನಸಾ ವಾಚಾ ತ್ವತ್ತೋ ನಾನ್ಯಾ ಗತಿರ್ಮಮ ।
ಅಂತಶ್ಚರೇಣ ಭೂತಾನಾಂ ತ್ವಂ ಗತಿಃ ಪರಮೇಶ್ವರಿ ॥ ೧೬೩ ॥

ಮಾತಯೋರ್ನಿಸಹಸ್ರೇಷು ಯೇಷು ಯೇಷು ವ್ರಜಾಮ್ಯಹಂ ।
ತೇಷು ತೇಷ್ವಚ್ಯುತಾ ಭಕ್ತಿರಚ್ಯುತೇಽಸ್ತು ಸದಾ ತ್ವಯಿ ॥ ೧೬೪ ॥

ದೇವೀ ದಾತ್ರೀ ಚ ಭೋಕ್ತ್ರೀ ಚ ದೇವೀ ಸರ್ವಮಿದಂ ಜಗತ್ ।
ದೇವೀ ಜಯತಿ ಸರ್ವತ್ರ ಯಾ ದೇವೀ ಸೋಽಹಮೇವ ಚ ॥ ೧೬೫ ॥

---

೧೬೨. ಎಲೈ ಪರಮೇಶ್ವರಿಯೇ, ಆವಾಹನ, ವಿಸರ್ಜನ ಪೂಜಾಕ್ರಮ ಇವು ಗಳೊಂದೂ ನನಗೆ ತಿಳಿಯದು ಆದುದರಿಂದ ನಾನು ಮಾಡಿದ ಪೂಜೆಯಲ್ಲಿರುವ ಲೋಪದೋಷಗಳನ್ನು ಕ್ಷಮಿಸಿ ನನ್ನನ್ನು ಕಾಪಾಡು ನನಗೆ ನೀನೇಗತಿಯು.

೧೬೩. ಎಲೈ ಪರಮೇಶ್ವರಿಯೇ ಕರ್ಮದಿಂದಲೂ, ಮನಸ್ಸಿನಿಂದಲೂ, ಮಾತಿನಿಂದಲೂ ಸಹ ನನಗೆ ನೀನು ಹೊರತು ಬೇರೆ ಗತಿಯಿಲ್ಲ. ಸಮಸ್ತಪ್ರಾಣಿಗಳ ಅತಃಕರಣದಲ್ಲಿರುವ ನೀನೇ ನನಗೆ ಗತಿಯು.

೧೬೪. ಎಲೈ ತಾಯಿಯೇ, ನಾನು ಸಾವಿರಾರು ಯೋನಿಗಳಲ್ಲಿ ಜನ್ಮವೆತ್ತಿದರೂ ಆಯಾ ಜನ್ಮಗಳಲ್ಲಿ ನಾಶರಹಿತಳಾದ ನಿನ್ನಲ್ಲಿ ಸದಾ ಭಕ್ತಿಯುಂಟಾಗುವಂತೆ ಅನುಗ್ರಹಿಸು.

೧೬೫. ನಾನು ಅನುಭವಿಸುವ ಸಮಸ್ತಭೋಗೈಶ್ವರ್ಯಗಳನ್ನು ದೇವಿಯೇ ಕೊಡುವವಳು. ಈ ಐಶ್ವರ್ಯಾದಿಗಳನ್ನು ನಾನೇ ಮೊದಲಾದ ಪ್ರಾಣಿಗಳ ರೂಪದಿಂದ ಅನುಭವಿಸುವವಳೂ ಆ ದೇವಿಯೇ ಆಗಿರುವಳು. ಈ ಸಮಸ್ತ ಚರಾಚರಪ್ರಪಂಚ ವೆಲ್ಲವೂ ದೇವಿಯ ಸ್ವರೂಪವೇ ಆಗಿರುವುದು. ಸಮಸ್ತ ವಿಶ್ವವೂ ದೇವಿಯ ಅಧೀನ ವಾಗಿಯೇ ಇರುವುದು. ನಾನು ಸಹ ದೇವಿಯ ಅಂಶವೇ ಆಗಿರುವೆನು.

ಯದಕ್ಷರಪರಿಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್ ।
ತತ್ಸರ್ವಂ ಕ್ಷಮ್ಯತಾಂ ದೇವಿ ಕಸ್ಯ ನ ಸ್ಖಲಿತಂ ಮನಃ ॥ ೧೬೬ ॥

ಮಂತ್ರೇಷು ಪಠಿತೇಷ್ವೇಷು ಸ್ವಯಮೇವ ಪ್ರಸೀದತಿ ।
ದಾತುಂ ದೇವೀ ಚತುರ್ವರ್ಗಂ ನ ಚಿರಾದೇವ ಭೈರವ ॥ ೧೬೭ ॥

ಐಶಾನ್ಯಾಂ ಮಂಡಲಂ ಕಾರ್ಯಾದ್ದ್ವಾರಪದ್ಮವಿವರ್ಜಿತಂ ।
ವಿಸರ್ಜನಾರ್ಥಂ ನಿರ್ಮಾಲ್ಯಧಾರಿಣ್ಯಾಃ ಪೂಜನಾಯ ವೈ ॥ ೧೬೮ ॥

ಪಾದ್ಯಾದಿಭಿಃ ಪೂಜಯಿತ್ವಾ ಧ್ಯಾತ್ವಾ ನಿರ್ಮಾಲ್ಯಧಾರಿಣೀಂ ।
ನಿಕ್ಷಿಪ್ಯ ತಸ್ಮಿನ್ನಿರ್ಮಾಲ್ಯಂ ಮಂತ್ರೇಣ ತು ವಿಸರ್ಜಯೇತ್ ॥ ೧೬೯ ॥

ಗಚ್ಛ ಗಚ್ಛ ಪರಂ ಸ್ಥಾನಂ ಸ್ವಸ್ಥಾನಂ ಪರಮೇಶ್ವರಿ ।
ಯತ್ರ ಬ್ರಹ್ಮಾದಯೋ ದೇವಾ ನ ವಿದುಃ ಪರಮಂ ಪದಂ ॥ ೧೭೦ ॥

---

೧೬೬. ಎಲೈ ದೇವಿಯೇ, ನಾನು ಪೂಜೆಮಾಡುವ ಕಾಲದಲ್ಲಿ ಉಚ್ಚರಿಸುವ ಮಂತ್ರಗಳಲ್ಲಿ ಉಂಟಾಗಬಹುದಾದ ಅಕ್ಷರಲೋಪ, ಉಚ್ಚಾರಲೋಪ, ಮಾತ್ರಾಲೋಪ ಇವೆಲ್ಲವನ್ನೂ ಕ್ಷಮಿಸು. ಯಾರ ಮನಸ್ಸು ತಾನೇ ನ್ಯೂನತೆಯಿಲ್ಲದೆ ಇರುವುದು?

೧೬೭. ಎಲೈ ಭೈರವನೇ ಕೇಳು, ಈ ರೀತಿಯಾಗಿ ಮೇಲೆಹೇಳಿದ ಮಂತ್ರಗಳನ್ನು ಪಠಿಸಿದಮಾತ್ರದಿಂದಲೇ ದೇವಿಯು ಸಂತುಷ್ಟಳಾಗಿ ನಾಲ್ಕು ಪುರುಷಾರ್ಥಗಳನ್ನೂ ಬೇಗನೆ ಕೊಡಲುದ್ಯುಕ್ತಳಾಗುವಳು.

೧೬೮-೧೬೯. ದ್ವಾರಪದ್ಮಗಳಿಲ್ಲದಿರುವ ಮಂಡಲವನ್ನು ಈಶಾನ್ಯ ದಿಕ್ಕಿನಲ್ಲಿ ಮಾಡಿ ಅಲ್ಲಿ ದೇವಿಯನ್ನು ಪೂಜಿಸಿ ವಿಸರ್ಜನೆ ಮಾಡಬೇಕು. ದೇವಿಯನ್ನು ನಿರ್ಮಾಲ್ಯದಿಂದ ಕೂಡಿರುವಂತೆ ಧ್ಯಾನಿಸಿ ಪಾದ್ಯಾದಿ ಉಪಚಾರಗಳಿಂದ ಪೂಜಿಸಿ ನಿರ್ಮಾಲ್ಯವನ್ನು ತೆಗೆದು ಮುಂದೆ ಹೇಳುವ ಮಂತ್ರದಿಂದ ದೇವಿಯನ್ನು ವಿಸರ್ಜನೆ ಮಾಡಬೇಕು.

೧೭೦. ಎಲೈ ದೇವಿಯೇ ಬ್ರಹ್ಮನೇ ಮೊದಲಾದ ದೇವತೆಗಳೂ ಸಹ ಉತ್ಕೃಷ್ಟವಾದ ಯಾವ ನಿನ್ನ ಸ್ಥಾನವನ್ನು ತಿಳಿಯದಿರುವರೋ ಅಂತಹ ಪರಮಪದವಾದ ನಿನ್ನ ಸ್ಥಾನಕ್ಕೆ ಹೋಗು.

ವಿಸೃಜ್ಯ ಮುಂತ್ರೇಣಾನೇನ ತತಃ ಪೂರಕವಾಯುನಾ ।
ಧ್ಯಾಯಂಸ್ತು ಮುಂತ್ರೇಣಾನೇನ ನತ್ವಾ ತಾಂ ಸ್ಥಾಪಯೇದ್ಧೃದಿ ॥ ೧೭೧॥

ತಿಷ್ಠ ದೇವಿ ಪರೇ ಸ್ಥಾನೇ ಸ್ವಸ್ಥಾನೇ ಪರಮೇಶ್ವರಿ ।
ಯತ್ರ ಬ್ರಹ್ಮಾದಯಸ್ಸರ್ವೇ ಸುರಾಸ್ತಿಷ್ಠಂತಿ ಮೇ ಹೃದಿ ॥ ೧೭೨ ॥

ತತ ಏಕಜಟಾಬೀಜೈರಿಷ್ಟದೇವೀಂ ಧಿಯಾ ಸ್ಮರನ್ ।
ನಿರ್ಮಾಲ್ಯಂ ಮೂರ್ಧ್ನಿ ಗೃಹ್ಣೀಯಾದ್ಧರ್ಮಕಾಮಾರ್ಥಸಾಧನಂ ॥ ೧೭೩ ॥

ಮಂಡಲಪ್ರತಿಪತ್ತಿಂ ತು ತತಃ ಕುರ್ಯಾದ್ವಿಭೂತಯೇ ।
ಸರ್ವಾಂಗುಲೀನಾಮಗ್ರೈಶ್ಚಿಃ ಪದ್ಮಮಷ್ಟದಲಾನ್ವಿತಂ ॥ ೧೭೪ ॥

ನಿರ್ಮಂಥೇತ್ ಕ್ಷಿತಿಬೀಜೇನ ಮಂಡಲಂ ಚಾಪಿ ಭೈರವ ।
ತತಸ್ತು ಮೂಲಮಂತ್ರೇಣ ಸರ್ವವಶ್ಯೇನ ಪಾ ಪುನಃ ॥ ೧೭೫ ॥

೧೭೧-೧೭೨. ಮೇಲೆಹೇಳಿದ ಮಂತ್ರದಿಂದ ವಿಸರ್ಜನೆಯನ್ನು ಮಾಡಿದ ನಂತರ ಧ್ಯಾನಮಾಡುತ್ತಾ ನಮಸ್ಕಾರ ಮಾಡಿ-ಎಲೈ ಪರಮೇಶ್ವರಿಯಾದ ದೇವಿಯೇ ಬ್ರಹ್ಮನೇ ಮೊದಲಾದ ಎಲ್ಲ ದೇವತೆಗಳಿಗೂ ವಾಸಸ್ಥಾನವಾದ ನನ್ನ ಹೃದಯವೆಂಬ ಉತ್ಕೃಷ್ಟವಾದ ಸ್ಥಾನದಲ್ಲಿ ವಾಸವಾಗಿರು ಎಂದು ಹೇಳಿ ತನ್ನ ಹೃದಯದಲ್ಲಿ ದೇವಿಯನ್ನು ಇರಿಸಿಕೊಳ್ಳಬೇಕು.

೧೭೩. ಅನಂತರದಲ್ಲಿ ಏಕಜಟಾ ಎಂಬ ಬೀಜಮಂತ್ರದಿಂದ (ಪ್ರೌಂ ಪಃ) ತನ್ನ ಇಷ್ಟದೇವತೆಯನ್ನು ಮನಸ್ಸಿನಿಂದ ಸ್ಮರಿಸುತ್ತಾ ಧರ್ಮಾರ್ಥಕಾಮಮೋಕ್ಷಗಳಿಗೆ ಸಾಧಕವಾದ ನಿರ್ಮಾಲ್ಯವನ್ನು ಸಾಧಕನು ತನ್ನ ಶಿರಸ್ಸಿನಲ್ಲಿ ಧರಿಸಬೇಕು.

೧೭೪. ಎಲೈ ಭೈರವನೇ ಕೇಳು, ಅನಂತರ ಐಶ್ವರ್ಯಸ್ಥಿತಿಗಾಗಿ ಸಾಧಕನು ಮಂಡಲಪ್ರತಿಪತ್ತಿಯನ್ನು ಎಂದರೆ ವಿಸರ್ಜನೆಯನ್ನು ಹೀಗೆ ಮಾಡಬೇಕು---ಎಲ್ಲ ಬೆರಳುಗಳ ತುದಿಯನ್ನು ಒಟ್ಟಿಗೆ ಸೇರಿಸಿಕೊಂಡು ಅಷ್ಟದಳಗಳಿಂದ ಕೂಡಿರುವ ಪದ್ಮವನ್ನೂ ಮಂಡಲವನ್ನೂ ಸಹ ಭೂಮಿದೇವತಾಕವಾದ ಕ್ಷಿತಿಬೀಜವೆಂಬ ಮಥನ ಮಾಡಬೇಕು ಎಂದರೆ ಅಳಿಸಬೇಕು.

೧೭೫. ಬಳಿಕ ಸರ್ವವಶ್ಯಕರವಾದ ಮೂಲಮಂತ್ರವನ್ನು ಉಚ್ಚರಿಸುತ್ತಾ ಅನಾಮಿಕಾ ಬೆರಳ ತುದಿಯಿಂದ ತನ್ನ ಲಲಾಟವನ್ನು ಮುಟ್ಟಿಕೊಳ್ಳಬೇಕು.

ಅನಾಮಿಕಾನಾಮಗ್ರೇಣ ಲಲಾಟಮಪಿ ಸಂಸ್ಪೃಶೇತ್ ।
ಸಮಾಪ್ತಿಸಹಿತಃ ಪ್ರಾಂತಸ್ತಾರಾಬೀಜಂ ತತಃ ಪರಂ ॥ ೧೭೬ ॥

ಸ್ಮರಬೀಜಂ ವಿಸರ್ಗೇಣ ಪರತಃ ಪರತಃ ಪರಂ ।
ಭವೇದೇಕಜಟಾಬೀಜಂ ಧರ್ಮಕಾಮಾರ್ಥಸಾಧನಂ ॥ ೧೭೭ ॥

ತತೋ ಭಾಸ್ಕರಬೀಜೇನ ಸಹಿತೇನಾತ್ಮನಾ ಪುನಃ ।
ಮಂತ್ರೇಣ ಭಾಸ್ಕರಾಯಾರ್ಘ್ಯಮಚ್ಛಿದ್ರಾರ್ಥಂ ನಿವೇದಯೇತ್ ॥ ೧೭೮ ॥

ನಮೋ ವಿವಸ್ವತೇ ಬ್ರಹ್ಮನ್ ಭಾಸ್ವತೇ ವಿಷ್ಣುತೇಜಸೇ ।
ಜಗತ್ಸವಿತ್ರೇ ಶುಚಯೇ ಸವಿತ್ರೇ ಕರ್ಮದಾಯಿನೇ ॥ ೧೭೯ ॥

ತತಃ ಕೃತಾಂಜಲಿರ್ಭೂತ್ವಾ ಪಠಿತ್ವಾ ಮಂತ್ರಮೀರಿತಂ ।
ಏಕಾಗ್ರಮನಸಾ ವಾಽಚ್ಛಿದ್ರಮವಧಾರಯೇತ್ ॥ ೧೮೦ ॥

ಯಜ್ಞಚ್ಛಿದ್ರಂ ತಪಶ್ಛಿದ್ರಂ ಯಚ್ಛಿದ್ರಂ ಪೂಜನೇ ಮಮ ।
ಸರ್ವಂ ತದಚ್ಛಿದ್ರಮಸ್ತು ಭಾಸ್ಕರಸ್ಯ ಪ್ರಸಾದತಃ ॥ ೧೮೧ ॥

೧೭೬-೧೭೭. ಕಡೆಯ ವ್ಯಂಜನವಾದ ಹಕಾರಕ್ಕೆ ತಾರಾಬೀಜವಾದ ಓಕಾರವನ್ನು ಸೇರಿಸಿ ಮತ್ತು ಹಕಾರಕ್ಕೆ ಸ್ಮರಬೀಜವಾದ ಅಕಾರವನ್ನೂ ಸೇರಿಸಿ ಇವುಗಳಿಗೆ ಬಿಂದು ವಿಸರ್ಗಗಳನ್ನು ಸೇರಿಸಿದರೆ ಹೌಂ ಹಃ ಎಂದು ಏಕಜಟಾಬೀಜವಾಗುವುದು. ಇದು ಧರ್ಮಾರ್ಥಕಾಮಗಳನ್ನು ಸಾಧಿಸಿಕೊಡುವುದು.

೧೭೮. ಬಕ್ಕ ನ್ಯೂನಾತಿರಿಕ್ತ ಪರಿಹಾರಕ್ಕಾಗಿ ಭಾಸ್ಕರಬೀಜದಿಂದಲೂ ತನ್ನ ಆಧಾರ ಮಂತ್ರದಿಂದಲೂ ಸಹ ಸೂರ್ಯನಿಗೆ ಅರ್ಘ್ಯವನ್ನು ಕೊಡಬೇಕು.

೧೭೯-೧೮೧. ಬ್ರಹ್ಮಸ್ವರೂಪನಾಗಿಯೂ ವಿಷ್ಣುವಿನ ತೇಜಸ್ಸಿನಿಂದ ಒಪ್ಪುತ್ತಲೂ ಇರುವ ಓ ಭಾಸ್ಕರನೇ ನೀನು ಜಗತ್ತಿಗೆಲ್ಲ ಚಕ್ಷುಸ್ವರೂಪನಾದವನು, ನಿರ್ಮಲನು, ಜನಗಳು ಮಾಡುವ ಸಕಲ ಕರ್ಮಗಳಿಗೂ ಸಾಕ್ಷಿಭೂತನಾದವನು. ಇಂತಹ ನಿನ್ನನ್ನು ನಮಸ್ಕರಿಸುವೆನು ಎಂದು " ನಮೋ ವಿವಸ್ವತೇ " ಎಂಬ ಶ್ಲೋಕವನ್ನು ಹೇಳುತ್ತಾ ಕೈಗಳನ್ನು ಮುಗಿದುಕೊಂಡು-ನಾನು ಮಾಡಿದ ಈ ದೇವತಾರಾಧನೆಯಲ್ಲಿಯೂ, ಪೂಜೆಯಲ್ಲಿಯೂ, ಧ್ಯಾನದಲ್ಲಿಯೂ ಆಗಿರಬಹುದಾದ ನ್ಯೂನಾತಿರಿಕ್ತಗಳೆಲ್ಲವೂ ಎಂದರೆ ಲೋಪದೋಷಗಳೆಲ್ಲವೂ ಭಾಸ್ಕರನಾದ ನಿನ್ನ ಅನುಗ್ರಹದಿಂದ ಪರಿಹಾರವಾಗಿ ಪೂಜಾ ಕಾರ್ಯವೆಲ್ಲವೂ ಪೂರ್ಣವಾಗಲಿ ಎಂದು ಪ್ರಾರ್ಥಿಸಬೇಕು.

ತತಸ್ತು ಪುಷ್ಪನೈವೇದ್ಯತೋಯಪತ್ರಾದಿಕಂ ಚ ಯತ್ ।
ದೇವೀಬೀಜೇನ ತತ್ಸರ್ವಂ ಪುನರೇವ ವಿಲೋಕಯೇತ್ ॥ ೧೮೨ ॥

ಹಸ್ತೇನ ಚಕ್ಷುಷಾ ವಾಪಿ ಯತ್ರ ಯತ್ರ ಕೃತಃ ಪುರಾ ।
ಮುಂತ್ರನ್ಯಾಸಸ್ತತ್ರ ತತ್ರ ವಿಸೃಷ್ಟಿರಮುನಾ ಭವೇತ್ ॥ ೧೮೩ ॥

ಪ್ರಾಂತಾದಿಪಂಚವೋ ವಹ್ನಿ ಬೀಜಷಷ್ಠಸ್ವರಾಹಿತಃ ।
ತಥೋಪಾಂತಂ ವಾಗ್ಭವಾದ್ಯಂ ದುರ್ಗಾಬೀಜಂ ಪ್ರಚಕ್ಷತೇ ॥ ೧೮೪ ॥

ಸ್ಥಂಡಿಲೇ ಜ್ವಲದಗ್ನೌ ಚ ತೋಯೇ ಸೂರ್ಯಮರೀಚಿಷು ।
ಪ್ರತಿಮಾಸು ಚ ಶುದ್ಧಾಸು ಸಾಲಗ್ರಾಮಶಿಲಾಸು ಚ ॥ ೧೮೫ ॥

ಶಿವಲಿಂಗಶಿಲಾಯಾಂ ತು ಪೂಜಾ ಕಾರ್ಯಾ ವಿಭೂತಯೇ ।
ಸರ್ವತ್ರ ಮುಂಡಲನ್ಯಾಸಂ ಕುರ್ಯಾದೇಕಾಗ್ರಮಾನಸಃ ॥ ೧೮೬ ॥

---

೧೮೨. ಬಳಿಕ ಹೂವು, ನೈವೇದ್ಯ, ನೀರು, ಪತ್ರೆ ಮೊದಲಾದ ಪೂಜಾಸಾಮಗ್ರಿಗಳನ್ನು ದೇವೀಬೀಜಮಂತ್ರದಿಂದ (ಅಥವಾ ದುಂ ಎಂಬ ದುರ್ಗಾಬೀಜಮಂತ್ರದಿಂದ) ಪುನಃ ನೋಡಬೇಕು.

೧೮೩. ಕೈಯಿಂದಲೂ, ಕಣ್ಣಿನಿಂದಲೂ, ಎಲ್ಲೆಲ್ಲಿ ಮೊದಲು ಯಾವ ಯಾವ ಮಂತ್ರನ್ಯಾಸಗಳನ್ನು ಮಾಡಿದ್ದುಂಟೋ ಅವೆಲ್ಲವೂ ದೇವೀಬೀಜಪೂರ್ವಕವಾಗಿ ನೋಡುವುದರಿಂದ ವಿಸರ್ಜನೆಯಾಗುವುದು.

೧೮೪. ಅಕಾರದಿಂದ ಐದನೇ ಅಕ್ಷರವಾದ ಉಕಾರವು ವಹ್ನಿಬೀಜವಾದ ರಕಾರವು. ತಕಾರದ ಸಮೀಪದಲ್ಲಿರುವ ದಕಾರವೂ, ವಾಗ್ಬೀಜದ ಮೊದಲನೆಯ ಅಕ್ಷರವಾದ ಅಕಾರವೂ, ಇವೆಲ್ಲವೂ ಸೇರಿ ದುಂ ಎಂದು ದುರ್ಗಾಬೀಜವಾಗುವುದು.

೧೮೫-೧೮೬. ಪರಿಶುದ್ಧವಾದ ವೇದಿಕೆ, ಉರಿಯುತ್ತಿರುವ ಬೆಂಕಿ, ನೀರು, ಸೂರ್ಯರಶ್ಮಿ, ಪ್ರತಿಮೆಗಳು, ಶುದ್ಧವಾದ ಸಾಲಿಗ್ರಾಮ ಶಿಲೆಗಳು, ಶಿವಲಿಂಗಗಳು. ಇವುಗಳ ಪೂಜೆಯಲ್ಲಿ ಮೇಲೆಹೇಳಿದ ಮುಂಡಲನ್ಯಾಸವನ್ನು ಏಕಾಗ್ರಮನಸ್ಸಿನಿಂದ ಮಾಡಬೇಕು.

ಯೋಗಪೀಠಸ್ಯ ಬೀಜೇನ ಸ್ಥಂಡಿಲಾದಿಷು ಸಾಧಕಃ ।
ವಾಸುದೇವಸ್ಯ ರುದ್ರಸ್ಯ ಬ್ರಹ್ಮಣೋ ಮಿಹಿರಸ್ಯ ಚ ॥ ೧೪೭ ॥

ಕುರ್ಯಾತ್ಸರ್ವತ್ರ ಪೂಜಾಸು ಪ್ರತಿಪತ್ತಿಮಿಮಾಂ ಬುಧಃ ।
ಏವಂ ಯಃ ಪೂಜಯೇದ್ವಿಷ್ಣುಮಮುಭಿಃ ಪ್ರತಿಪತ್ತಿಭಿಃ ॥ ೧೪೪ ॥

ಚತುರ್ವರ್ಗಪ್ರದಸ್ತಸ್ಯ ನ ಚಿರಾಚ್ಛಾಯತೇ ಹರಿಃ ।
ಶಿವೋ ವಾ ಮಿಹಿರೋ ವಾಪಿ ಯೇಽನ್ಯೇ ಲಂಬೋದರಾದಯಃ ॥೧೪೫ ॥

ಪ್ರಸೀದಂತಿ ಸುರಾಸ್ಸರ್ವೇ ಪೂಜಾಯಾ ವಿಧಿನಾಽಮುನಾ ।
ವಿಶೇಷತೋ ಮಹಾದೇವೀ ಮಹಾಮಾಯಾ ಜಗನ್ಮಯೀ ॥ ೧೪೦ ॥

ಪ್ರತಿಪತ್ತಿಮಿಮಾಂ ನಿತ್ಯಂ ಸ್ಪೃಹಯತ್ಯೇವ ಪೂಜನೇ ।
ಏವಂ ಯಃ ಕುರುತೇ ಪೂಜಾಂ ಸಮ್ಯಕ್ ಸ ಫಲಭಾಗ್ಭವೇತ್ ॥ ೧೪೧ ॥

ಏತೈರ್ವಿಹಿನಾ ಯಾ ಪೂಜಾ ತತೋಽಲ್ಪಾಲ್ಪಂ ಫಲಂ ಭವೇತ್ ।
ಅಂಗಹೀನಸ್ತು ಪುರುಷೋ ನ ಸಮ್ಯಗ್ಯಾಜ್ಞಿಕೋ ಯಥಾ ॥ ೧೪೨ ॥

---

೧೪೬. ಅಲ್ಲದೆ ವಿಷ್ಣು, ರುದ್ರ, ಬ್ರಹ್ಮ, ಸೂರ್ಯ ಈ ದೇವತೆಗಳನ್ನು ಪೂಜೆಮಾಡುವ ಕಾಲದಲ್ಲಿಯೂ ಪೂಜಕನು ಈ ಮಂಡಲಪ್ರತಿಪತ್ತಿ ಕರ್ಮವನ್ನು ಮಾಡಬೇಕು.

೧೪೪. ಈ ಪ್ರತಿಪತ್ತಿ ಕರ್ಮಗಳಿಂದ ಯಾವನು ವಿಷ್ಣುವನ್ನು ಪೂಜಿಸುವನೋ ಅವನಿಗೆ ವಿಷ್ಣುವು ಚತುರ್ವಿಧ ಪುರುಷಾರ್ಥಗಳನ್ನು ಬೇಗನೆ ಕೊಡುವನು.

೧೪೫. ಶಿವ, ಸೂರ್ಯ, ಗಣಪತಿಯೇ ಮೊದಲಾದ ಇತರ ಎಲ್ಲ ದೇವತೆಗಳೂ ಈ ವಿಧವಾದ ಪೂಜಾಕ್ರಮದಿಂದ ಪೂಜಿಸಿದರೆ ಪ್ರಸನ್ನರಾಗುವರು.

೧೪೦-೧೪೧. ಅದರಲ್ಲೂ ಜಗತ್ಸ್ವರೂಪಿಣಿಯಾದ ಮಹಾಮಾಯೆಯು ಈ ಪ್ರತಿಪತ್ತಿಪೂರ್ವಕವಾದ ಪೂಜೆಯಿಂದ ವಿಶೇಷವಾಗಿ ಸಂತುಷ್ಟಳಾಗುವಳು. ಈರೀತಿ ಪೂಜೆಮಾಡಿದವನು ಪೂಜಾಫಲವನ್ನು ಹೊಂದುವನು.

೧೪೨. ಈ ಕರ್ಮಗಳನ್ನು ಅನುಸರಿಸದೆ ಮಾಡುವ ಪೂಜೆಯು ಅಲ್ಪಸ್ವಲ್ಪ ಫಲವನ್ನು ಮಾತ್ರ ಕೊಡುವುದು. ಹೇಗೆಂದರೆ ಅಂಗಹೀನನಾದ ಪುರುಷನು ಯಜ್ಞಗಳನ್ನು ಮಾಡಲು ಹೇಗೆ ಒಳ್ಳೆಯ ಅಧಿಕಾರಿಯಾಗುವುದಿಲ್ಲವೋ ಅದರಂತೆ ವಿಧಿನಿಯಮಗಳಿಲ್ಲದ ಪೂಜೆಯು ಹೆಚ್ಚು ಫಲದಾಯಕವಾಗುವುದಿಲ್ಲ.

ಅಂಗೈರ್ಹೀನಾ ತಥಾ ಪೂಜಾ ನ ಸಮ್ಯಕ್ಫಲಭಾಗ್ಭವೇತ್ ।
ಇದಂ ರಹಸ್ಯಂ ಪರಮಮಿದಂ ಸ್ವಸ್ತ್ಯಯನಂ ಪರಂ ॥ ೧೯೩ ॥

ಮಂತ್ರವೇದಮಯಂ ಶುದ್ಧಂ ಸರ್ವಪಾಪಪ್ರಣಾಶನಂ ॥ ೧೯೪ ॥

ಯಃ ಶ್ರಾವಯೇದ್ಬ್ರಾಹ್ಮಣಸಂನಿಧಾನೇ
ಶ್ರಾದ್ಧೇಷು ಯಜ್ಞೇ ಸುರಪೂಜನೇಷು ।
ಸಮ್ಯಕ್ಫಲಂ ತಸ್ಯ ಲಭೇತ್ಸ ಕರ್ಮಣೋ
ವಿನಾಪಿ ಪೂಜಾಂ ತದನಂತಮಶ್ನುತೇ ॥ ೧೯೫ ॥

ಇತಿ ಶ್ರೀ ಕಾಲಿಕಾಪುರಾಣ ಉತ್ತರತಂತ್ರೇ
ಏಕೋನಷಷ್ಟಿತಮೋಽಧ್ಯಾಯಃ.

೧೯೩-೧೯೪. ಈ ಪೂಜಾಕ್ರಮವು ಅತಿ ರಹಸ್ಯವಾದುದು. ಪರಮಮಂಗಳವನ್ನುಂಟುಮಾಡುವಂತಹುದು. ವೇದಗಳಿಂದಲೂ, ಮಂತ್ರಗಳಿಂದಲೂ ಕೂಡಿರುವ ಶುದ್ಧವಾದ ಈ ಪೂಜಾವಿಧಾನವು ಸಮಸ್ತ ಪಾಪಗಳನ್ನೂ ನಾಶಮಾಡುವುದು.

೧೯೫. ಯಾವ ಪುರುಷನು ದೇವೀಪೂಜಾಕ್ರಮಗಳಿಂದ ಸಹಿತವಾದ ಈ ಪುರಾಣವನ್ನು ಬ್ರಾಹ್ಮಣರ ಸನ್ನಿಧಿಯಲ್ಲಿಯೂ, ಶ್ರಾದ್ಧಕಾಲ, ಯಜ್ಞ, ದೇವರಪೂಜೆ, ಇವುಗಳಲ್ಲಿಯೂ ಪಠಿಸುವನೋ ಅವನು ದೇವಿಯ ಪೂಜೆಯನ್ನು ಮಾಡದಿದ್ದರೂ ಆ ಪೂಜೆಯ ಸಂಪೂರ್ಣ ಫಲವನ್ನು ಹೊಂದುವನು. ಅವನು ಮಾಡಿದ ಪಾರಾಯಣವು ಅನಂತವಾದ ಫಲವನ್ನು ಕೊಡುವುದು.

ಇಲ್ಲಿಗೆ ಕಾಲಿಕಾಪುರಾಣದಲ್ಲಿ ಐವತ್ತೊಂಭತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಷಷ್ಟಿತಮೋಽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ದೇವ್ಯಾಸ್ತಂತ್ರಂ ವಿಶೇಷೇಣ ಶೃಣುತಂ ಸಾಂಪ್ರತಂ ಯುವಾಂ ।
ಯೇನ ಚಾರಾಧಿತಾ ದೇವೀ ನ ಚಿರಾದ್ವರದಾ ಭವೇತ್ ॥ ೧ ॥

ಪೂರ್ವತಂತ್ರಾದ್ವಿಶೇಷೇಣ ತಥಾ ವೈ ತಂತ್ರಮುತ್ತರಂ ।
ವಿಶೇಷೇಣ ಚ ಸಾಮಾನ್ಯಾತ್ಕಥಿತಂ ಭವತೋಃ ಪುರಾ ॥ ೨ ॥

ಪುನರ್ದೇವ್ಯಾ ವಿಶೇಷೇಣ ಪೂಜಾಯಾಂ ಭಕ್ತಿಕರ್ಮಣಿ ।
ಯಾನಿ ತಂತ್ರಾಣಿ ಶೇಷಾಣಿ ತಾನಿ ವಕ್ಷ್ಯಾಮ್ಯಹಂ ಪುನಃ ॥ ೩ ॥

ಅರವತ್ತನೆಯ ಅಧ್ಯಾಯವು.

೧. ಭಗವಂತನಾದ ಪರಮೇಶ್ವರನು ಹೇಳಿದನು :—ಯಾವತಂತ್ರಕ್ರಮವಿಂದ ಪೂಜಿಸಿದರೆ ದೇವಿಯು ಬೇಗನೆ ವರವನ್ನು ಕೊಡುವಳೋ ಆ ತಂತ್ರವನ್ನು ನಾನು ವಿಸ್ತಾರವಾಗಿ ಹೇಳುವೆನು, ಕೇಳಿರಿ.

೨. ಹಿಂದೆ ಹೇಳಿದ ತಂತ್ರಕ್ಕಿಂತಲೂ ಅತಿಶಯವಾಗಿರುವ ಉತ್ತರ ತಂತ್ರವನ್ನು ಸಾಮಾನ್ಯರೀತಿಯಿಂದಲೂ, ವಿಸ್ತಾರವಾಗಿಯೂ, ಹೇಳಿರುವೆನು.

೩. ದೇವಿಯ ಪೂಜೆಯನ್ನು ಹೆಚ್ಚಾದ ಭಕ್ತಿಯಿಂದ ಮಾಡುವುದಕ್ಕಾಗಿ ಇನ್ನೂ ಹೇಳದೆ ಉಳಿದಿರುವ ಮಿಕ್ಕ ತಂತ್ರಗಳನ್ನೂ ಪುನಃ ಹೇಳುವೆನು.

ಯಃ ಕುರ್ಯಾತ್ತು ಮಹಾಮಾಯಾಭಕ್ತಿಮೇಕಾಗ್ರಮಾನಸಃ ।
ಅಂಗಿನಾ ವಾಂಗಿಮುದ್ರೇಣ ತೇನ ಕಾರ್ಯಮಿದಂ ಶುಭಂ ॥ ೪ ॥

ಫಲಂ ಪುಷ್ಪಂ ಚ ತಾಂಬೂಲಮನ್ನಪಾನಾದಿಕಂ ಚ ಯತ್ ।
ಅದತ್ವಾತು ಮಹಾದೇವ್ಯೈ ನ ಭೋಕ್ತವ್ಯಂ ಕದಾಚನ ॥ ೫ ॥

ಪಥಿ ವಾ ಪರ್ವತಾಗ್ರೇ ವಾ ಸಭಾಯಾಮಪಿ ಸಾಧಕಃ ।
ಯಥಾ ತಥಾ ನಿವೇದ್ಯೈವ ಸ್ವಮರ್ಥಮುಪಕಲ್ಪಯೇತ್ ॥ ೬ ॥

ದೃಷ್ಟ್ವೈವ ಮದಿರಾಭಾಂಡಂ ರಕ್ತವರ್ಣಾಸ್ತಥಾ ಸ್ತ್ರಿಯಃ ।
ಸಿಂಹಂ ಶವಂ ರಕ್ತಪದ್ಮಂ ವ್ಯಾಘ್ರಂ ವಾರಣಸಂಗಮಂ ॥ ೭ ॥

ಗುರುಂ ರಾಜಾನಮಥವಾ ಮಹಾಮಾಯಾಂ ತತೋ ನಮೇತ್ ।
ಪತಿವ್ರತಾಯಾಂ ಭಾರ್ಯಾಯಾಂ ಸದೈವ ಋತುಸಂಗಮಃ ॥ ೮ ॥

---

೪. ಯಾವನು ಏಕಾಗ್ರವಾದ ಮನಸ್ಸಿನಿಂದ ಮಹಾಮಾಯೆಯಾದ ದೇವಿಯಲ್ಲಿ ಭಕ್ತಿಯಿಂದಿರುವನೋ ಅವನು ದೇವಿಯ ಪೂಜೆಯನ್ನು ಮುಖ್ಯವಾದ ಕಲ್ಪದಿಂದಾಗಲಿ, ಮುಖ್ಯ ಮಂತ್ರದಿಂದಾಗಲಿ ಮಂಗಳಕರವಾದ ರೀತಿಯಿಂದ ಮಾಡಬೇಕು.

೫. ಹಣ್ಣು, ಹೂವು, ತಾಂಬೂಲ, ಅನ್ನಪಾನ ಇವೇ ಮೊದಲಾದುವುಗಳನ್ನು ದೇವಿಗೆ ಅರ್ಪಿಸದೆ ಯಾವಾಗಲೂ ತಾನು ಭುಜಿಸಬಾರದು.

೬. ಸಾಧಕನಾದವನು ದಾರಿಯಲ್ಲಿಯಾಗಲೀ, ಬೆಟ್ಟದಮೇಲುಗಡೆಯಲ್ಲಿಯಾಗಲೀ ಸಭೆಯಲ್ಲಿಯಾಗಲೀ ಎಲ್ಲಿದ್ದರೂ ಅಲ್ಲಲ್ಲಿ ತನಗೆ ದೊರಕುವ ಪದಾರ್ಥಗಳನ್ನು ಮಹಾದೇವಿಗೆ ಅರ್ಪಿಸಿ ತದನಂತರ ತಾನು ಉಪಯೋಗಿಸಬೇಕು.

೭. ಹೆಂಡವು ತುಂಬಿರುವಗಡಿಗೆ, ಕೆಂಪಾಗಿರುವ ಸ್ತ್ರೀಯರು, ಸಿಂಹ, ಹೆಣ, ಕೆಂಪುತಾವರೇಹೂವು, ಹುಲಿ, ಆನೆಗಳಗುಂಪು ಇವುಗಳನ್ನು ನೋಡಿದರೆ ಗುರುವಿಗೂ ರಾಜನಿಗೂ, ಅಥವಾ ದೇವಿಗೂ ನಮಸ್ಕಾರವನ್ನು ಮಾಡಬೇಕು.

೮. ಸಾಧಕನಾದವನು ಪತಿವ್ರತೆಯಾದ ತನ್ನ ಹೆಂಡತಿಯಲ್ಲಿ, ಋತುಕಾಲದಲ್ಲಿ ಮಾತ್ರ ಚಂಡಿಕಾದೇವಿಯನ್ನು ಧ್ಯಾನಮಾಡಿ ಸಂಗಮವನ್ನು ಮಾಡಬಹುದು. ಹೀಗೆ ಮಾಡಿದವಲ್ಲಿ ಅವನಿಗೆ ಐಶ್ವರ್ಯವು ಉಂಟಾಗುವುದು.

ಕ್ರಿಯತೇ ಚಂಡಿಕಾಂ ಧ್ಯಾತ್ವಾ ತದಾ ಕಾರ್ಯೋ ವಿಭೂತಯೇ ।
ಶಾಂತಿಕಂ ಪೌಷ್ಟಿಕಂ ವಾಪಿ ತಥೇಷ್ಟಾಪೂರ್ತಕರ್ಮಣಿ ॥ ೯ ॥
ಯದಾ ಕುರ್ಯಾತ್ತದಾ ನತ್ವಾ ದೇವೀಯಾತ್ರಾಂ ಸಮಾಚರೇತ್ ।
ತೌರ್ಯತ್ರಿಕಂ ಯದಾ ಪಶ್ಯೇತ್ಕೇವಲಂ ಗೀತಮೇವ ವಾ ॥ ೧೦ ॥
ತಚ್ಚ ದೇವ್ಯೈ ನಿವೇದ್ಯೈವ ಕರ್ತವ್ಯಂ ಸ್ವೋಪಯೋಜನಂ ।
ಯದ್ವೈವ ಭೂಷಣಂ ವಾಸೋ ಮಲಯೋದ್ಭವಮೇವ ವಾ ॥ ೧೧ ॥
ಸ್ವಕಾಯೇ ಪರಿಯುಂಜೀತ ತತ್ರ ಮಂತ್ರಂ ಧಿಯಾ ನ್ಯಸೇತ್ ।
ವ್ಯಾಯಾಮೇ ಚ ವಿಧಾನೇ ಚ ಸಭಾಯಾಂ ವಾ ಜಲೇ ಸ್ಥಲೇ ॥ ೧೨ ॥
ಯತ್ರ ಯತ್ರ ಸ್ವಯಂ ಗಚ್ಛೇತ್ತತ್ರ ದೇವೀಂ ಸದಾ ಸ್ಮರೇತ್ ।
ಯದ್ಯತ್ಕರ್ಮ ತು ಪೂಜಾಂಗಂ ತತ್ತನ್ಮಂತ್ರೇಣ ಚಾಚರೇತ್ ॥ ೧೩ ॥

---

೯. ಸಾಧಕನಾದವನು ಶಾಂತಿಕ, ಪೌಷ್ಟಿಕ ಕರ್ಮಗಳನ್ನೂ ಹಾಗೆಯೇ ಇಷ್ಟಾಪೂರ್ತ ಭಾವಿತೋಡಿಸುವುದು, ಕೆರೆಕಟ್ಟಿಸುವುದು, ತೋಪುಹಾಕಿಸುವುದು, ಮೊದಲಾದ ಕಾರ್ಯಗಳನ್ನು ಮಾಡುವಾಗ ದೇವಿಗೆ ನಮಸ್ಕಾರ ಮಾಡಿದನಂತರ ಪ್ರಾರಂಭ ಮಾಡಬೇಕು.

೧೦. ನೃತ್ತಗೀತವಾದ್ಯಗಳನ್ನಾಗಲಿ, ಸಂಗೀತವೊಂದನ್ನೇ ಆಗಲಿ, ಯಾವಾಗ ಸಾಧಕನು ಕೇಳುವನೋ ಆಗ ಮೊದಲು ಅದನ್ನು ದೇವಿಗೆ ಸಮರ್ಪಿಸಿದನಂತರ ತಾನು ಅದರ ಭೋಗವನ್ನು ಹೊಂದಬೇಕು.

೧೧. ಸಾಧಕನು ಯಾವಾಗ ವಸ್ತ್ರ, ಆಭರಣ, ಗಂಧ, ಇವುಗಳನ್ನು ತನ್ನ ಶರೀರದಲ್ಲಿ ಧರಿಸಬೇಕೋ ಆಗ ದೇವಿಯ ಮಂತ್ರವನ್ನು ತನ್ನ ಮನಸ್ಸಿನಲ್ಲಿ ಧ್ಯಾನಿಸಬೇಕು.

೧೨. ಸಾಧಕನಾದವನು ವ್ಯಾಯಾಮವನ್ನು ಮಾಡುವಾಗಲೂ, ಕಾರ್ಯಗಳನ್ನು ಮಾಡುವಾಗಲೂ, ಸಭೆಯಲ್ಲಿಯೂ, ಭೂಮಿಯಮೇಲೂ, ನೀರಿನ ಮಧ್ಯದಲ್ಲಿಯೂ ಇವೇ ಮೊದಲಾದ ಪ್ರದೇಶಗಳಲ್ಲಿಯೂ, ಮತ್ತು ತಾನು ಹೋಗುವ ಎಲ್ಲಾಕಡೆಯಲ್ಲಿಯೂ, ದೇವಿಯನ್ನು ಯಾವಾಗಲೂ ಸ್ಮರಿಸಬೇಕು.

೧೩. ಯಾವ ಯಾವ ಕೆಲಸವು ಪೂಜೆಗೆ ಅಂಗವಾಗಿರುವುದೋ ಅವನ್ನು ಆಯಾಯ ಮಂತ್ರಗಳಿಂದ ಮಾಡಬೇಕು. ಪೂಜೆಗೆ ಅಂಗವಾದ ಕರ್ಮವು ಮಂತ್ರವಿಲ್ಲದೆ ನಡೆಸಲ್ಪಡುವುದಾದರೆ ಅದು ಫಲಕಾರಿಯಾಗಲಾರದು.

ಮಂತ್ರಹೀನಂ ಪೂಜನಾಂಗಂ ಕರ್ಮ ಯತ್ತತ್ತು ನಿಷಲ್ಫಂ ।
ಯಸ್ಮಿನ್ ಕರ್ಮಣಿ ಯೋದ್ದಿಷ್ಟೋ ಮಂತ್ರಃ ಪೂಜಾಸು ಭೈರವ ॥ ೧೪ ॥

ನೈವೇದ್ಯಾಲೋಕಮಂತ್ರೇಣ ತತ್ತತ್ಕರ್ಮ ಸಮಾಚರೇತ್ ।
ದೇವ್ಯಾಸ್ತು ಮಂಡಲನ್ಯಾಸಮಿಷ್ಟಮಂತ್ರೇಣ ಚಾಚರೇತ್ ॥ ೧೫ ॥

ಪೂಜಾಂತೇ ಮಂಡಲಂ ಲಿಪ್ತ್ವಾ ತಿಲಕಂ ತೇನ ಕಾರಯೇತ್ ।
ಸರ್ವವಶ್ಯೇನ ಮಂತ್ರೇಣ ಧರ್ಮಕಾಮಾರ್ಥದಾಯಿನಾ ॥ ೧೬ ॥

ಬಲಿದಾನೇ ಬಲಿಂ ಛಿತ್ತ್ವಾ ಖಡ್ಗಸ್ಥೈ ರುಧಿರೈಃ ಸ್ವಕೈಃ ।
ಸರ್ವವಶ್ಯೇನ ಮಂತ್ರೇಣ ಲಲಾಟೇ ತಿಲಕಂ ನ್ಯಸೇತ್ ॥ ೧೭ ॥

ಜಗದ್ವಶೋ ಭವೇತ್ತಸ್ಯ ಚತುರ್ಥಃ ಕಸ್ಯ ವಹ್ನಿನಾ ।
ಷಷ್ಠಸ್ವರೇಣ ಸಂಯುಕ್ತಃ ಕಲಾಬಿಂದುಸಮನ್ವಿತಃ ॥ ೧೮ ॥

---

೧೪. ಎಲೈ ಭೈರವನೇ ಯಾವ ಮಂತ್ರವು ಯಾವ ಕರ್ಮಕ್ಕೆ ಪೂಜೆಯಲ್ಲಿ ಉಪಯೋಗಿಸತಕ್ಕದ್ದೋ ಆ ಮಂತ್ರದಿಂದಲಾಗಲೀ, ನೈವೇದ್ಯವನ್ನು ನೋಡುವ ಮಂತ್ರದಿಂದಲಾಗಲೀ ಆಯಾಯ ಕರ್ಮಗಳನ್ನು ಮಾಡಬೇಕು.

೧೫-೧೬. ದೇವಿಯ ಮಂಡಲನ್ಯಾಸವನ್ನು ತನ್ನ ಇಷ್ಟದೇವತೆಯ ಮಂತ್ರದಿಂದ ಮಾಡಬೇಕು. ಪೂಜೆಯ ಕೊನೆಯಲ್ಲಿ ಮಂಡಲವನ್ನು ಅಳಿಸಿ ಅದರಿಂದ ತಾನು. ಧರ್ಮ, ಅರ್ಥ, ಕಾಮ, ಇವುಗಳನ್ನು ಕೊಡುವುದಾಗಿಯೂ ಎಲ್ಲವನ್ನೂ ವಶಮಾಡಿ ಕೊಡುವುದಾಗಿಯೂ ಇರುವ ವಶ್ಯಮಂತ್ರದಿಂದ ತಿಲಕವನ್ನು ಇಟ್ಟುಕೊಳ್ಳಬೇಕು.

೧೭. ಬಲಿಯನ್ನು ಕೊಟ್ಟನಂತರ, ಬಲಿಯನ್ನು ಕತ್ತರಿಸಿದ ಕತ್ತಿಯಲ್ಲಿರುವ ತನ್ನಕೈಗೆ ಬಳೆದಿರುವ ರಕ್ತದಿಂದ, ಸರ್ವವಶ್ಯಮಂತ್ರದಿಂದ ಹಣೆಯಲ್ಲಿ ತಿಲಕವನ್ನು ಇಡಬೇಕು. ಹೀಗೆ ತಿಲಕವನ್ನು ಇಟ್ಟುದ್ದರಿಂದ ಜಗತ್ತು ಅವರ ಅಧೀನದಲ್ಲಿರುವುದು.

೧೮-೧೯. ವಹ್ನಿಬೀಜಾಕ್ಷರವಾದ ರಕಾರಕ್ಕೆ ನಾಲ್ಕನೇ ಸ್ವರವಾದ ಈ ಕಾರವನ್ನೂ ಆರನೇಸ್ವರವಾದ ಊಕಾರಕ್ಕೆ ಹಕಾರ ಮತ್ತು ಬಿಂದುವನ್ನೂ ಸೇರಿಸಿ ಬಳಿಕ

ಇಲ್ಲಿ ಕೊಟ್ಟಿರುವ ಸರ್ವವಶ್ಯಕರೀ ಮಂತ್ರದ ವಿವರಣೆಯು ಬೇರೆ ಗ್ರಂಥಗಳಲ್ಲಿರುವುದಕ್ಕಿಂತ ಭಿನ್ನವಾಗಿರುವುದು. ಮೂಲಗ್ರಂಥದಲ್ಲಿ ಬಹುತಪ್ಪುಗಳಿರುವುದರಿಂದಲೂ ಬೇರೆಪ್ರತಿಯು ಎಲ್ಲಿಯೂ ಇಲ್ಲದೇ ಇರುವುದರಿಂದಲೂ ಈ ವಿವರಣೆಯು ಶುದ್ಧವಾದುದೆಂದು ಹೇಳುವುದಕ್ಕಾಗುವುದಿಲ್ಲ.

ಅಥೋಷಾಂತಸ್ಥಕಾರಾಂತಃ ಸಪರೋಪಿ ತಥಾ ಪುನಃ ।
ದ್ವಿರ್ಯೋಹೀತಿ ಹಕಾರಸ್ಯ ತುರ್ಯೋ ದ್ವಿಸ್ವರಸಂಯುತಃ ॥ ೧೯ ॥

ತೃತೀಯಪರ್ಗಪ್ರಾಂತೇನ ತೃತೀಯಸ್ವರಸಂಜ್ಞಿನಾ ।
ಪೂರಿತಾಂತೋ ದ್ವಿಧಾ ವರ್ಣಸ್ತಥಾ ವಾದಿಚತುರ್ಥಕಃ ॥ ೨೦ ॥

ಸ್ವರೋ ದ್ವಿತೀಯಶ್ಚ ತಥಾ ಕ್ಷೋಭಶಬ್ದಃ ಪುರಃಸರಃ ।
ಪುರೇತಿ ಸಹಿತಃ ಸೋಪಿ ಮಿತ್ರಂ ಶತ್ರುಶ್ಚ ರಾಕ್ಷಸಃ ॥ ೨೧ ॥

ದಕ್ಷಪ್ರಜಾ ತಥಾ ರಾಜಾ ಸರ್ವಶಾಸ್ತ್ರ ಇತಿ ಶ್ರುತಃ ।
ವಿನಾಪಿ ಪೂಜನಂ ಕುರ್ಯಾದ್ಯೋರಹಸ್ತಿಲಕಂ ನರಃ ॥ ೨೨ ॥

ಮುಂತ್ರೋಣಾನೇನ ಸತತಂ ಸರ್ವಂ ತಸ್ಯ ವಶೋ ಭವೇತ್ ।
ರಾಜಾ ವಾ ರಾಜಪುತ್ರೋ ವಾ ಸ್ತ್ರಿಯೋ ವಾ ಯಕ್ಷರಾಕ್ಷಸಾಃ ॥ ೨೩ ॥

ಉಸಾಂತಸ್ವರವಾದ ಈಕಾರ, ಸಕಾರದ ಮುಂದಿನ ವರ್ಣವಾದ ಹಕಾರ ಮತ್ತು ರಕಾರ ಇವುಗಳಿಗೆ ನಾಲ್ಕನೇ ಸ್ವರವಾದ ಈಕಾರವನ್ನು ಸೇರಿಸಿ ಎರಡಾವರ್ತಿ ಉಚ್ಚರಿಸಿ ಮೋಹಯ ಎಂಬ ಶಬ್ದವನ್ನು ಎರಡಾವರ್ತಿ ಉಚ್ಚರಿಸಬೇಕು. ಮತ್ತು ಮೂರನೇ ವರ್ಗಾಕ್ಷರವಾದ ದಕಾರಕ್ಕೆ ಉಕಾರವನ್ನು ಗಕಾರಕ್ಕೆ ಮೂರನೇ ಸ್ವರವಾದ ಇಕಾರವನ್ನು ಸೇರಿಸಿ ಎರಡಾವರ್ತಿ ಉಚ್ಚರಿಸಿ, ಕ್ಷೋಭಶಬ್ದಕ್ಕೆ ವಕಾರವೇ ಕೊನೆಯಾಗಿರುವ ವರ್ಗದ ಮೊದಲನೇ ಅಕ್ಷರವನ್ನು ಎಂದರೆ ಯಕಾರವನ್ನು ಸೇರಿಸಿ ಕ್ಷೋಭಯ ಎಂದು ಎರಡಾವರ್ತಿ ಉಚ್ಚರಿಸಬೇಕು. ಹೀಗೆ ಉಚ್ಚರಿಸಿದರೆ ಅದು ಸರ್ವವಶ್ಯಕರೀ ಎಂಬ ಮಹಾ ಮಂತ್ರವಾಗುವುದು.

೨೨. ಸಮರ್ಥನಾವಪ್ರಜೆಯೂ, ರಾಜನೂ ಯಾರೇ ಆಗಲೀ ಪ್ರಜೆಯನ್ನು ಮಾಡದಿದ್ದಾಗ್ಯೂ ಈ ಮೇಲೆ ಹೇಳಿರುವ ವಶೀಕರಣ ಮಂತ್ರದಿಂದ ರಹಸ್ಯದಲ್ಲಿ ತಿಲಕವನ್ನಿಟ್ಟುಕೊಂಡರೆ ಆ ಮನುಷ್ಯನು ಪ್ರಪಂಚವೆಲ್ಲವನ್ನೂ ತನ್ನ ಅಧೀನದಲ್ಲಿ ಇರಿಸಿಕೊಳ್ಳುವನು ಎಂಬುದಾಗಿ ಎಲ್ಲಾ ಶಾಸ್ತ್ರದಲ್ಲಿಯೂ ಪ್ರಸಿದ್ಧವಾಗಿರುವುದು.

೨೩. ರಾಜನಾಗಲೀ, ರಾಜಪುತ್ರನಾಗಲೀ, ಸ್ತ್ರೀಯಾಗಲೀ, ಯಕ್ಷರಾಕ್ಷಸನೇ ಆಗಲಿ ನಾಲ್ಕು ವಿಧವಾದ ಪ್ರಾಣಿಗಳ ಸಮೂಹವೂ ಸಹ, ಹೀಗೆ ತಿಲಕವನ್ನು ಇಟ್ಟುಕೊಂಡವನ ವಶವರ್ತಿಯಾಗುವುದು.

ಸರ್ವೇ ತಸ್ಯ ವಶಂ ಯಾಂತಿ ಭೂತಗ್ರಾಮಾಶ್ಚತುರ್ವಿಧಾಃ ।
ಪ್ರವಾಸೇ ಪಥಿ ವಾ ದುರ್ಗೇ ಸ್ಥಾನಾಪ್ರಾಪ್ತೌ ಜಲೇಪಿ ವಾ ॥ ೨೪ ॥

ಕಾರಾಗಾರೇ ನಿಬದ್ಧೋ ವಾ ಪ್ರಾಯೋಪವೇಶಗತೋಽಪಿ ವಾ ।
ಕುರ್ಯಾತ್ತತ್ರ ಮಹಾಮಾಯಾಪೂಜಾಂ ವೈ ಮಾನಸೀಂ ಬುಧಃ ॥ ೨೫ ॥

ಮನೋಭಯೇ ಸಮುತ್ಪನ್ನೇ ಸಿಂಹವ್ಯಾಘ್ರಸಮಾಕುಲೇ ।
ಪರಚಕ್ರಾಗಮೇ ವಾಪಿ ಕುರ್ಯಾನ್ಮಾನಸಪೂಜನಂ ॥ ೨೬ ॥

ಮನಸಾ ಹೃದಯಸ್ಯಾಂತರ್ಧ್ಯಾತ್ವಾ ಯೋಗಾಖ್ಯಪೀಠಕಂ ।
ತತ್ರೈವ ಪೃಥ್ವೀಮಧ್ಯೇ ಪೂಜಾಂ ತತ್ರ ಸಮಾಚರೇತ್ ॥ ೨೭ ॥

ಮೈತ್ರಂ ಪ್ರಸಾಧನಂ ಸ್ನಾನಂ ದಂತಧಾವನಕರ್ಮ ವೈ ।
ಅನ್ಯಚ್ಚ ಸರ್ವಂ ಮನಸಾ ಕೃತ್ವಾ ಕುರ್ಯಾಚ್ಚ ಪೂಜನಂ ॥ ೨೮ ॥

೨೪-೨೫. ಪ್ರಯಾಣದಲ್ಲಿರುವಾಗಲಿ, ದುರ್ಗದಲ್ಲಿಯಾಗಲಿ, ತನ್ನ ವಾಸಸ್ಥಳವಲ್ಲದೆ ಬೇರೆಯಕಡೆಯಲ್ಲಿ ಇರುವಾಗಲೇ ಆಗಲಿ, ನೀರಿನಲ್ಲಿಆಗಲಿ, ಸೆರೆಯಮನೆಯಲ್ಲಿ ನಿರ್ಬಂಧದಲ್ಲಿರುವಾಗಲಾಗಲಿ, ಅನ್ನಾಹಾರಗಳನ್ನು ಬಿಟ್ಟು ಪ್ರಾಯೋಪವೇಶವನ್ನು ಮಾಡಿದಾಗಲೇ ಆಗಲಿ, ತೊಂದರೆಯಲ್ಲಿ ಸಿಕ್ಕಿದ ಸಂದರ್ಭಗಳಲ್ಲಿ ಮಹಾಮಾಯೆಯ ಪೂಜೆಯನ್ನು ಮನಸ್ಸಿನಿಂದಲೇ ಮಾಡಬೇಕು.

೨೬. ಸಿಂಹ, ಹುಲಿ, ಇವುಗಳಿಂದ ಮನಸ್ಸಿಗೆ ಭಯವು ಉಂಟಾದಾಗಲೂ, ಶತ್ರು ಸೈನ್ಯವು ಬಂದೊದಗಿದಾಗಲೂ, ಮಾನಸ ಪೂಜೆಯನ್ನು ಮಾಡಬೇಕು.

೨೭. ಸಾಧಕನಾದವನು ಮನಸ್ಸಿನಲ್ಲಿಯೇ ಯೋಗಪೀಠವನ್ನು ಧ್ಯಾನಮಾಡಿ ಅಲ್ಲಿಯೇ ಭೂಮಿಯ ಮಧ್ಯದಲ್ಲಿ ಪೂಜೆಯನ್ನು ಮಾಡುವಂತೆ ಮನಸ್ಸಿನಲ್ಲಿ ಭಾವಿಸಬೇಕು.

೨೮. ಎಲ್ಲರಲ್ಲಿಯೂ, ಸ್ನೇಹಭಾವವನ್ನೂ, ಸ್ನಾನ, ದಂತಧಾವನ, ಇವೇ ಮೊದಲಾವ ಎಲ್ಲಾಕೆಲಸಗಳನ್ನೂ ಮಾಡಿದಂತೆ ಮನಸ್ಸಿನಿಂದ ಭಾವಿಸಿ ದೇವಿಯ ಪೂಜೆಯನ್ನು ಮಾಡಬೇಕು.

ಪಶ್ಚಾತ್ತುಷ್ಪಾದಿಭಿಃ ಪೂಜಾ ಬಹಿರ್ದೇಶೇ ವಿಧೀಯತೇ ।
ತಥಾ ಹೃದ್ಯಪಿ ಕರ್ತವ್ಯಾಃ ಸರ್ವಾಶ್ಚ ಪ್ರತಿಪತ್ತಯಃ ॥ ೨೯ ॥

ಅಷ್ಟಮ್ಯಾಂ ಸತತಂ ದೇವೀಯಾಜಕಃ ಸ್ಯಾತ್ಸದಾ ವ್ರತೀ ।
ನವಮ್ಯಾಂ ತು ತಥಾ ಪೂಜಾ ಕರ್ತವ್ಯಾ ನಿಜಶೋಣಿತೈಃ ॥ ೩೦ ॥

ಲಿಂಗಸ್ಥಾಂ ಪೂಜಯೇದ್ದೇವೀಂ ಪುಸ್ತಕಸ್ಥಾಂ ತಥೈವ ಚ ।
ಸ್ಥಂಡಿಲಸ್ಥಾಂ ಮಹಾಮಾಯಾಂ ಪಾದುಕಾಪ್ರತಿಮಾಸು ಚ ॥ ೩೧ ॥

ಚಿತ್ರೇ ಚ ತ್ರಿಶಿಖೆ ಖಡ್ಗೇ ಜಲಸ್ಥಾಂ ವಾಪಿ ಪೂಜಯೇತ್ ।
ಪಂಚಾಶದಂಗುಲಂ ಖಡ್ಗಂ ತ್ರಿಶಿಖಂ ಚ ತ್ರಿಶೂಲಕಂ ॥ ೩೨ ॥

ಶಿಲಾಯಾಂ ಪರ್ವತಸ್ಯಾಗ್ರೇ ತಥಾ ಪರ್ವತಗಹ್ವರೇ ।
ದೇವೀಂ ಸಂಪೂಜಯೇನ್ನಿತ್ಯಂ ಭಕ್ತಿಶ್ರದ್ಧಾಸಮನ್ವಿತಃ ॥ ೩೩ ॥

---

೨೯. ಅನಂತರದಲ್ಲಿ ಹೂವು ಮೊದಲಾದುವುಗಳಿಂದ ಬಹಿಃಪೂಜೆಯನ್ನು ಮಾಡುವಂತೆಯೇ ಮನಸ್ಸಿನಲ್ಲಿಯೂ, ಎಲ್ಲಾ ವಿಧವಾದ ಭಾವನಾರೂಪವಾದ ಪ್ರತಿಪತ್ತಿ ಕರ್ಮಗಳನ್ನೂ ಮಾಡಬೇಕು.

೩೦. ದೇವಿಯ ಪೂಜೆಯನ್ನು ಮಾಡುವವನು ಅಷ್ಟಮಿಯ ದಿವಸ ಯಾವಾಗಲೂ ಬಹಳ ನಿಯಮದಿಂದ ಇದ್ದು, ನವಮಿಯ ದಿನ ತನ್ನ ದೇಹದ ರಕ್ತದಿಂದ ದೇವಿಯ ಪೂಜೆಯನ್ನು ಮಾಡಬೇಕು.

೩೧. ಶಿವಲಿಂಗ, ಪುಸ್ತಕ, ನೆಲದಮೇಲೆ ಬರೆದಿರುವ ಮಂಡಲ, ದೇವಿಯ ಪಾದುಕಾ, ದೇವಿಯಪ್ರತಿಮೆ, ದೇವಿಯಭಾವಚಿತ್ರ, ದೇವಿಯತ್ರಿಶೂಲ, ದೇವಿಯ ಕತ್ತಿ, ಇವುಗಳಲ್ಲಿಯಾಗಲೀ, ಕಲಶದಲ್ಲಿ ನೀರನ್ನು ತುಂಬಿಟ್ಟು ಅದರಲ್ಲಿಯಾಗಲೀ ದೇವಿಯನ್ನು ಆವಾಹನೆಮಾಡಿ ಪೂಜಿಸಬೇಕು.

೩೨-೩೩. ಕತ್ತಿಯು ಐವತ್ತು ಅಂಗುಲವಿರಬೇಕು. ತ್ರಿಶೂಲವೂ ಮೂರು ಅಲಗುಗಳಿಂದ ಕೂಡಿರಬೇಕು. ಕಲ್ಲಿನಮೇಲುಗಡೆಯಲ್ಲಿಯೂ, ಬೆಟ್ಟದಮೇಲೂ, ಬೆಟ್ಟದಗುಹೆಯಲ್ಲಿಯೂ, ಸಹ ದೇವಿಯನ್ನು ಭಕ್ತಿ, ಶ್ರದ್ಧಾದಿಗಳಿಂದ ಕೂಡಿ ಪೂಜಿಸ ಬೇಕು.

ವಾರಾಣಸ್ಯಾಂ ಸದಾ ಪೂಜಾ ಸಂಪೂರ್ಣಫಲದಾಯಿನೀ ।
ತತಸ್ತದ್ದ್ವಿಗುಣಾ ಪ್ರೋಕ್ತಾ ಪುರುಷೋತ್ತಮಸನ್ನಿಧೌ ॥ ೩೪ ॥

ತತೋಽಪಿ ದ್ವಿಗುಣಾ ಪ್ರೋಕ್ತಾ ದ್ವಾರವತ್ಯಾಂ ವಿಶೇಷತಃ ।
ಸರ್ವಕ್ಷೇತ್ರೇಷು ತೀರ್ಥೇಷು ಪೂಜಾ ದ್ವಾರವತೀ ಸಮಾ ॥ ೩೫ ॥

ವಿಂಧ್ಯೇ ಶತಗುಣಾ ಪ್ರೋಕ್ತಾ ಗಂಗಾಯಾಮಪಿ ತತ್ಸಮಾ ।
ಆರ್ಯಾವತೇರ್ಕ ಮಧ್ಯದೇಶೇ ಬ್ರಹ್ಮಾವತೇರ್ಕ ತಥೈವ ಚ ॥ ೩೬ ॥

ವಿಂಧ್ಯವತ್ಫಲದಾ ಪೂಜಾ ಪ್ರಯಾಗೇ ಪುಷ್ಕರೇ ತಥಾ ।
ತತಶ್ಚತುರ್ಗುಣಾ ಪ್ರೋಕ್ತಾ ಕರತೋಯಾನದೀಜಲೆ ॥ ೩೭ ॥

ತಸ್ಮಾಚ್ಚತುರ್ಗುಣಫಲಾ ನಂದಿಕುಂಡೇ ಚ ಭೈರವ ।
ತತಶ್ಚತುರ್ಗುಣಾ ಪ್ರೋಕ್ತಾ ಜಲ್ಪಿಷೇಶ್ವರಸನ್ನಿಧೌ ॥ ೩೮ ॥

---

೩೪. ಕಾಶಿಯಲ್ಲಿ ನಡೆಯಿಸುವ ದೇವಿಯ ಪೂಜೆಯು ಯಾವಾಗಲೂ ಪೂರ್ಣವಾದ ಫಲವನ್ನು ಕೊಡುವುದು. ವಿಷ್ಣುವಿನ ಸನ್ನಿಧಿಯಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ, ಎರಡರಷ್ಟು ಫಲವನ್ನು ಕೊಡುವುದು.

೩೫. ದ್ವಾರವತೀ ಎಂಬ ಪಟ್ಟಣದಲ್ಲಿ ನಡೆಯಿಸುವ ಪೂಜೆಯು ಅದಕ್ಕಿಂತಲೂ ಎರಡರಷ್ಟು ಫಲವನ್ನು ಕೊಡುವುದು. ಎಲ್ಲಾ ತೀರ್ಥಗಳಲ್ಲಿಯೂ, ಮತ್ತು ಕ್ಷೇತ್ರಗಳಲ್ಲಿಯೂ ಮಾಡುವ ಪೂಜೆಯೆಲ್ಲವೂ ಸೇರಿ ದ್ವಾರಾವತಿಯಲ್ಲಿ ಮಾಡುವ ಪೂಜೆಗೆ ಸಮನಾಗುವುದು.

೩೬. ವಿಂಧ್ಯಪರ್ವತದಲ್ಲಿ ಮಾಡುವ ಪೂಜೆಯು ನೂರುಪಾಲು ಹೆಚ್ಚು ಫಲವನ್ನು ಕೊಡುವುದು. ಗಂಗಾನದಿಯಲ್ಲಿ ನಡೆಯಿಸುವ ಪೂಜೆಯು ಇವಕ್ಕೆ ಸಮನಾದದ್ದು. ಆರ್ಯಾವರ್ತ, ಮಧ್ಯದೇಶ, ಬ್ರಹ್ಮಾವರ್ತ, ಪ್ರಯಾಗ, ಪುಷ್ಕರಕ್ಷೇತ್ರ ಇವುಗಳಲ್ಲಿ ಮಾಡುವ ಪೂಜೆಯೂ, ವಿಂಧ್ಯಪರ್ವತದಲ್ಲಿ ಮಾಡುವ ಪೂಜೆಯಂತೆ ಫಲವನ್ನು ಕೊಡುವುದು.

೩೭-೩೮. ಕರತೋಯಾ ಎಂಬ ಹೊಳೆನೀರಿನಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ ನಾಲ್ಕುಪಾಲು ಹೆಚ್ಚುಫಲವನ್ನು ಕೊಡುವುದು. ಎಲೈ ಭೈರವನೇ, ನಂದೀಕುಂಡದಲ್ಲಿ ಮಾಡುವ ಪೂಜೆಯು ಕರತೋಯಾನದೀದಡದಲ್ಲಿ ಮಾಡುವ

ತತ್ರ ಸಿದ್ಧೇಶ್ವರೀಯೋನೌ ತತೋಪಿ ದ್ವಿಗುಣಾ ಸ್ಮೃತಾ ।
ತತಶ್ಚಗುಣಾ ಪ್ರೋಕ್ತಾ ಲೌಹಿತ್ಯನದಪಾಥಸಿ ॥ ೩೯ ॥

ತತ್ಸಮಾ ಕಾಮರೂಪೇ ತು ಸರ್ವತ್ರೈವ ಜಲೇ ಸ್ಥಲೇ ।
ಸರ್ವಶ್ರೇಷ್ಠೋ ಯಥಾ ವಿಷ್ಣುರ್ಲಕ್ಷ್ಮೀಃ ಸರ್ವೋತ್ತಮಾ ಯಥಾ ॥ ೪೦ ॥

ದೇವಿಪೂಜಾ ತಥಾ ತಸ್ಯಾ ಕಾಮರೂಪೇ ಸುರಾಲಯೇ ।
ದೇವೀಕ್ಷೇತ್ರಂ ಕಾಮರೂಪಂ ವಿದ್ಯತೇನ್ಯನ್ನ ತತ್ಸಮಂ ॥ ೪೧ ॥

ಅನ್ಯತ್ರ ವಿರಲಾ ದೇವೀ ಕಾಮರೂಪೇ ಗೃಹೇ ಗೃಹೇ ।
ತತಃ ಶತಗುಣಾ ಪ್ರೋಕ್ತಾ ನೀಲಕೂಟಸ್ಯ ಮಸ್ತಕೇ ॥ ೪೨ ॥

ಪೂಜೆಗಿಂತಲೂ ನಾಲ್ಕುಪಾಲು ಹೆಚ್ಚು ಫಲವನ್ನು ಕೊಡುವುದು. ಇದಕ್ಕಿಂತಲೂ ನಾಲ್ಕರಷ್ಟು ಫಲವನ್ನು ಜಲ್ಪಿಷೇಶ್ವರನ ಸನ್ನಿಧಿಯಲ್ಲಿ ಮಾಡುವ ಪೂಜೆಯು ಕೊಡುವುದು.

೩೯. ಅಲ್ಲಿ ಸಿದ್ಧೇಶ್ವರೀದೇವಿಯ ಸನ್ನಿಧಿಯಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ ಎರಡರಷ್ಟು ಫಲವನ್ನು ಕೊಡುವುದೆಂದು ಹೇಳಲ್ಪಟ್ಟಿದೆ. ಲೌಹಿತ್ಯ ವೆಂಬ ನದಿಯ ನೀರಿನದಡದಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ ನಾಲ್ಕರಷ್ಟು ಫಲದಾಯಕವಾದದ್ದು.

೪೦-೪೧. ಕಾಮರೂಪ ದೇಶದ ಭೂಮಿ, ಜಲಸಮೂಪ ಮೊದಲಾವ ಯಾವ ಪ್ರದೇಶದಲ್ಲಿಯಾಗಲೀ ಮಾಡುವಪೂಜೆಯು ಲೌಹಿತ್ಯನದಿಯ ದಡದಲ್ಲಿ ಮಾಡುವ ಪೂಜೆಗೆ ಸಮನಾದದ್ದು. ವಿಷ್ಣುವು ಹೇಗೆ ಎಲ್ಲರಿಗಿಂತಲೂ ಉತ್ತಮನೋ, ಲಕ್ಷ್ಮಿಯು ಎಲ್ಲರಿಗಿಂತಲೂ ಹೇಗೆ ಉತ್ತಮಳೋ ಹಾಗಿಯೇ ದೇವತೆಗಳಿಗೆ ವಾಸಸ್ಥಾನವಾವ ಕಾಮರೂಪದೇಶದಲ್ಲಿ ಮಾಡುವ ದೇವಿಯ ಪೂಜೆಯು ಎಲ್ಲಕ್ಕಿಂತಲೂ ಉತ್ತಮ ವಾದದ್ದು. ಕಾಮರೂಪಕ್ಷೇತ್ರಕ್ಕೆ ಸಮನಾದ ದೇವಿಯ ಕ್ಷೇತ್ರವು ಮತ್ತೊಂದಿಲ್ಲವು.

೪೨. ಕಾಮರೂಪದಲ್ಲಿ ಪ್ರತಿಮನೆಯಲ್ಲಿಯೂ, ದೇವಿಯು ಇರುವಳು. ಬೇರೆಯ ಕಡೆಯಲ್ಲಿ ದೇವಿಯು ವಾಸಮಾಡುವುದು ವಿರಳವಾಗಿರುವುದು. ನೀಲಕೂಟ ಪರ್ವತದ ಶಿಖರದಲ್ಲಿ ಮಾಡುವ ಪೂಜೆಯು ಕಾಮರೂಪದೇಶದಲ್ಲಿ ಮಾಡುವ ಪೂಜೆಗಿಂತ ನೂರರಷ್ಟು ಹೆಚ್ಚುಫಲವನ್ನು ಕೊಡುವುದು.

ತತೋಽಪಿ ದ್ವಿಗುಣಾ ಪ್ರೋಕ್ತಾ ಹೇರುಕೇ ಶಿವಲಿಂಗಕೇ ।
ತತೋಽಪಿ ದ್ವಿಗುಣಾ ಪ್ರೋಕ್ತಾ ಶೈಲಪುತ್ರ್ಯಾದಿಯೋನಿಷು ॥ ೪೩ ॥
ತತಶ್ಚತಗುಣಾ ಪ್ರೋಕ್ತಾ ಕಾಮಾಖ್ಯಾಯೋನಿಮಂಡಲೇ ।
ಕಾಮಾಖ್ಯಾಯಾಂ ಮಹಾಮಾಯಾಪೂಜಾಂಯಃ ಕೃತವಾ ಸಕೃತ್ ॥೪೪॥
ಸ ಚೇಹ ಲಭತೇ ಕಾಮಾ ಪರತ್ರ ಶಿವರೂಪತಾಂ ।
ನ ತಸ್ಯ ಸದೃಶೋಽನ್ಯೋಽಸ್ತಿ ಕೃತ್ಯಂ ತಸ್ಯ ನ ವಿದ್ಯತೆ ॥ ೪೫ ॥
ವಾಂಛಿತಾರ್ಥಮವಾಪ್ನೋತಿ ಚಿರಾಯುರಭಿಜಾಯತೇ ।
ವಾಯೋರಿವ ಗತಿಸ್ತಸ್ಯ ಭವೇದನ್ಯೈರಬಾಧಿತಾ ॥ ೪೬ ॥
ಸಂಗ್ರಾಮೇ ಶಾಸ್ತ್ರವಾದೇ ವಾ ದುರ್ಜಯಃ ಸ ಚ ಜಾಯತೇ ।
ವೈಷ್ಣವೀತಂತ್ರಮುದ್ದಿಷ್ಟಂ ಕಾಮಾಖ್ಯಾಯೋನಿಮಂಡಲೇ ॥ ೪೭ ॥

---

೪೩. ಹೇರುಕವೆಂಬ ಶಿವಲಿಂಗದಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ ಎರಡರಷ್ಟು ಹೆಚ್ಚು ಫಲಕಾರಿಯಾಗುವುದು. ಶೈಲಪುತ್ರಿಯೇ ಮೊದಲಾದ ತೀರ್ಥಗಳಲ್ಲಿ ಮಾಡುವ ಪೂಜೆಯು ಅದಕ್ಕಿಂತಲೂ ಎರಡರಷ್ಟು ಹೆಚ್ಚು ಫಲಕಾರಿಯಾದುದು.

೪೪-೪೬. ಕಾಮಾಖ್ಯಾಯೋನಿ ಮಂಡಲವೆಂಬ ಪ್ರದೇಶದಲ್ಲಿ ನಡೆಸಿದ ಪೂಜೆಯು ಅದಕ್ಕಿಂತಲೂ ನೂರುಪಾಲು ಹೆಚ್ಚು ಫಲವನ್ನು ಕೊಡುವುದು ಕಾಮಾಖ್ಯಾ ಎಂದು ಹೆಸರುಳ್ಳ ಆ ಪ್ರದೇಶದಲ್ಲಿ ಯಾವನು ಒಂದುಸಾರಿ ಪೂಜೆಯನ್ನು ಮಾಡುವನೋ ಮಹಾಮಾಯೆಯು ಅವನ ಪೂಜೆಗೆ ಮೆಚ್ಚಿ ಅವನಿಗೆ ಕೊಡುವ ಫಲವನ್ನು ಹೇಳುವೆನು ಕೇಳು. ಅವನು ಈ ಲೋಕದಲ್ಲಿ ತನ್ನ ಇಷ್ಟಗಳೆಲ್ಲವನ್ನೂ ಹೊಂದಿ ಸುಖದಿಂದ ಇದ್ದು ಪರಲೋಕದಲ್ಲಿ ಶಿವಸಾಯುಜ್ಯವನ್ನು ಹೊಂದುವನು. ಅವನಿಗೆ ಸಮನಾದವನು ಯಾರೂ ಇಲ್ಲವು. ಅವನು ಈ ಲೋಕದಲ್ಲಿ ಮಾಡಬೇಕಾದ ಕೆಲಸವು ಯಾವುದೂ ಇಲ್ಲವು. ಅವನು ಈ ಲೋಕದಲ್ಲಿ ತನಗೆ ಬೇಕಾದ ಕಾಮಗಳನ್ನು ಅನುಭವಿಸುತ್ತಾ, ದೀರ್ಘಾಯುಷ್ಯವುಳ್ಳವನಾಗುವನು. ಅವನ ಗಮನಾದಿಗಳು ವಾಯುವಿನಂತೆ ಯಾರಿಂದಲೂ ತಡೆಯಲು ಅಶಕ್ಯವಾಗಿರುವುದು. ಅವನು ಯುದ್ಧದಲ್ಲಾಗಲೀ, ವಾದಗಳಲ್ಲಾಗಲೀ ಯಾರಿಂದಲೂ ಜಯಿಸಲು ಅಶಕ್ಯನಾಗುವನು.

೪೭. ವೈಷ್ಣವೀತಂತ್ರದಲ್ಲಿ ಹೇಳಿರುವ ಪ್ರಕಾರ ಕಾಮಾಖ್ಯಾಯೋನಿಮಂಡಲವೆಂಬ ಪ್ರದೇಶದಲ್ಲಿ ಒಂದು ಸಾರಿಯಾದರೂ ಪೂಜೆಯನ್ನು ಮಾಡಿದವನು ನೂರರಷ್ಟು ಹೆಚ್ಚಾದ ಫಲವನ್ನು ಹೊಂದುವನು.

ಸಕೃತ್ತು ಪೂಜನಂ ಕೃತ್ವಾ ಫಲಂ ಶತಗುಣಂ ಲಭೇತ್ ।
ಮೂಲಮೂರ್ತಿರ್ಮಹಾಮಾಯಾ ಯೋಗನಿದ್ರಾ ಜಗನ್ಮಯೀ ॥ ೪೮ ॥

ತಸ್ಯಾಸ್ತು ವೈಷ್ಣವೀತಂತ್ರಂ ಮಂತ್ರಂ ಪ್ರಾಕ್ಪ್ರತಿಪಾದಿತಂ ।
ಅಸ್ಯಾ ಯಾ ಮೂರ್ತಯಃ ಪ್ರೋಕ್ತಾಃ ಶೈಲಪುತ್ರ್ಯಾದಯೋಽಪರಾಃ ॥ ೪೯ ॥

ತಸ್ಯಾ ಏವ ವಿಭಾಗಾಸ್ತಾಸ್ತಚ್ಛರೀರವಿನಿರ್ಗತಾಃ ।
ನಿಸ್ಸರಂತಿ ಯಥಾ ನಿತ್ಯಂ ಸೂರ್ಯಬಿಂಬಾನ್ಮರೀಚಯಃ ॥ ೫೦ ॥

ದೇವ್ಯಾಸ್ತಥೋಗ್ರಚಂಡಾದ್ಯಾ ಮಹಾಮಾಯಾ ಶರೀರತಃ ।
ತಾಸಾಮೇವಾಂಗರೂಪಾಣಿ ವಕ್ಷ್ಯಾಮಿ ಮಾಯಾ ತವ ॥ ೫೧ ॥

ಏಕೈವ ತು ಮಹಾಮಾಯಾ ಕಾರ್ಯಾರ್ಥಂ ಭಿನ್ನತಾಂ ಗತಾ ।
ಕಾಮಾಖ್ಯಾ ತು ಮಹಾಮಾಯಾ ಮೂಲಮೂರ್ತಿಃ ಪ್ರಗೀಯತೇ ॥ ೫೨ ॥

---

೪೮. ಎಲ್ಲಕ್ಕೂ ಮೂಲಕಾರಣವಾದ ಮೂರ್ತಿಯು ಜಗದ್ರೂಪಿಣಿಯಾಗಿರುವ ಮಹಾಮಾಯಾ ಎಂಬ ಹೆಸರುಳ್ಳ ಯೋಗನಿದ್ರೆಯಾಗಿರುವಳು, ವೈಷ್ಣವೀ ತಂತ್ರದಲ್ಲಿ ಹೇಳಿರುವ ಆದೇವಿಯ ಮಂತ್ರವು ಹಿಂದೆಯೇ ಹೇಳಲ್ಪಟ್ಟಿದೆ.

೪೯. ಶೈಲಪುತ್ರಿಯೇ ಮೊದಲಾದ ದೇವಿಯ ಬೇರೆಬೇರೆ ಯಾವ ಆಕಾರಗಳುಂಟೋ, ಅವೆಲ್ಲವೂ ಪ್ರಸಿದ್ಧಳಾವ ಆ ದೇವಿಯ ಶರೀರದಿಂದ ಪ್ರತ್ಯೇಕವಾಗಿರುವ ದೇವಿಯ ಅಂಗಗಳೇ ಆಗಿರುತ್ತವೆ.

೫೦-೫೧. ಸೂರ್ಯನ ಬಿಂಬದಿಂದ ಹೇಗೆ ಪ್ರತಿದಿನವೂ ಅನೇಕ ಕಿರಣಗಳು ಹೊರಡುವುವೋ ಹಾಗೆಯೇ ಮಹಾಮಾಯೆಯ ಶರೀರದಿಂದ ಉಗ್ರಚಂಡಾ ಎಂಬುದೇ ಮೊದಲಾದ ಅನೇಕ ದೇವಿಯರು ಅವತರಿಸುವರು. ನಾನು ನಿನಗೆ ಅಂಗದೇವತೆಗಳಾದ ಅವರ ರೂಪವೇ ಮೊದಲಾದುವುಗಳನ್ನು ಹೇಳುತ್ತೇನೆ.

೫೨. ಮಹಾಮಾಯೆಯು ಒಬ್ಬಳೇ ಆಗಿದ್ದಾಗ್ಯೂ ದೇವಿಯ ಆಯಾಯ ಕಾರ್ಯಕ್ಕಾಗಿ ಬೇರೆಬೇರೆಯಾದ ಆಕಾರವನ್ನು ಹೊಂದುವಳು. ಕಾಮಾಖ್ಯಾ ಎಂಬ ಹೆಸರುಳ್ಳ ದೇವಿಯು ಮಹಾಮಾಯಾ ದೇವಿಯ ಮೂಲರೂಪವೆಂದು ಪ್ರಸಿದ್ಧಿಯು.

ಪೀಠೈರ್ಭಿನ್ನಾಹ್ವಯಾ ಸಾ ತು ಮಹಾಮಾಯಾ ಪ್ರಗೀಯತೇ ।
ಏಕ ಏವ ಯಥಾ ವಿಷ್ಣು ರ್ನಿತ್ಯತ್ವಾದ್ಧಿ ಸನಾತನಃ ॥ ೫೩ ॥

ತಥೈವ ಸಾ ಮಹಾಮಾಯಾ ಕಾರ್ಯಾರ್ಥಂ ಸಂಗತಾ ಗಿರೌ ।
ಕಾಮಾಖ್ಯೇತಿ ಸದಾ ದೇವೈರ್ಗದ್ಯತೆ ಸತತಂ ನರೈಃ ॥ ೫೪ ॥

ಯಥಾ ಹಿ ಪುರುಷಃ ಕೋಽಪಿ ಛತ್ರೀ ಛತ್ರಗ್ರಹಾದ್ಭವೇತ್ ।
ಸ್ನಾತಕಃ ಸ್ನಾನಕಾಲೇ ವೈ ಕಾಮಾಖ್ಯಾಪಿ ತಥಾಽಹ್ವಯಾ ॥ ೫೫ ॥

ಮಹಾಮಾಯಾಶರೀರಂ ತು ಕಾಮಾರ್ಥಂ ಸಮುಪಸ್ಥಿತಂ ।
ಲೋಹಿತೈಃ ಕುಂಕುಮೈಃ ಪೀತಂ ಕಾಮಾರ್ಥಮುಪಯೋಜಿತೈಃ ॥ ೫೬ ॥

---

೫೩. ಮಹಾಮಾಯಾ ದೇವಿಯು ಬೇರೆಬೇರೆಯಾದ ಪೀಠಗಳಲ್ಲಿ ನೆಲೆಸಿರುವಾಗ ಬೇರೆಬೇರೆಯ ಹೆಸರುಗಳಿಂದ ಪ್ರಸಿದ್ಧಿಯನ್ನು ಹೊಂದಿರುವಳು. ವಿಷ್ಣುವು ಒಬ್ಬನೇ ಆಗಿದ್ದಾಗ್ಯೂ ಯಾವಾಗಲೂ ನಾಶರಹಿತನಾಗಿರುವುದರಿಂದ "ಸನಾತನ" ಎಂತಲೂ, ದುರ್ಜನರನ್ನು ಶಿಕ್ಷಿಸುವನಾದ್ದರಿಂದ "ಜನಾರ್ದನ" ನೆಂತಲೂ ಹೇಗೆ ಪ್ರಸಿದ್ಧಿಯನ್ನು ಹೊಂದುವನೋ ಹಾಗೆಯೇ ದೇವಿಯೂ ಬೇರೆ ಬೇರೆ ಹೆಸರಿನಿಂದ ಪ್ರಸಿದ್ಧಳಾಗಿರುವಳು.

೫೪. ಮಹಾಮಾಯಾದೇವಿಯು ಆಯಾ ಕಾರ್ಯಕ್ಕಾಗಿ ವಿಷ್ಣುವಿನ ಹಾಗೆಯೇ ಬೆಟ್ಟದಲ್ಲಿ ಅವತರಿಸಿ ಕಾಮಾಖ್ಯಾ ಎಂಬ ಹೆಸರಿನಿಂದ ದೇವತೆಗಳಿಂದಲೂ, ಮನುಷ್ಯರಿಂದಲೂ ಸಹ ಯಾವಾಗಲೂ ಸ್ತುತಿಸಲ್ಪಡುವಳು.

೫೫. ಛತ್ರಿಯನ್ನು ಹಿಡಿದಿರುವ ಮನುಷ್ಯನನ್ನು ಛತ್ರೀ ಎಂದರೆ ಛತ್ರಿಯನ್ನು ಹಿಡಿದುಕೊಂಡಿರುವನನು ಎಂದೂ ಸ್ನಾನಕಾಲದಲ್ಲಿ ಅದೇ ಮನುಷ್ಯನನ್ನು ಸ್ನಾತಕ ಎಂದರೆ ಸ್ನಾನಮಾಡುವವನು ಎಂದೂ ಒಬ್ಬಪುರುಷನನ್ನೇ ಅವನು ಮಾಡುತ್ತಿರುವ ಕಾರ್ಯಾನುಸಾರವಾಗಿ ಬೇರೆ ಬೇರೆ ಹೆಸರುಗಳಿಂದ ಹೇಗೆ ಹೇಳುವೆವೋ ಅದರಂತೆ ದೇವಿಯು ಒಬ್ಬಳೇ ಆದರೂ ಅನೇಕ ಹೆಸರುಗಳಿಂದ ಪ್ರಸಿದ್ಧಳಾಗಿರುವಳು. ಅದರಂತೆಯೇ ಕಾಮಾಖ್ಯಾ ಎಂದೂ ಪ್ರಸಿದ್ಧಳು.

೫೬. ಮಹಾಮಾಯೆಯ ಶರೀರವು ಕಾಮಕ್ಕಾಗಿ ಉಪಯೋಗಿಸಲ್ಪಟ್ಟ ಕೆಂಪು ಬಣ್ಣ ಮತ್ತು ಕುಂಕುಮ, ಇವುಗಳಿಂದ ಹಳದೀಬಣ್ಣವನ್ನು ಪಡೆದ್ದಾಗಿ ಕಾಮಕ್ಕಾಗಿಯೇ ಸಿದ್ಧವಾಗಿರುವುದು.

ಖಡ್ಗಂ ತ್ಯಕ್ತ್ವಾ ಕಾಮಕಾಲೇ ಸಾ ಗೃಹ್ಣಾತಿ ಸ್ರಜಂ ಸ್ವಯಂ ।
ಯದಾ ತು ತ್ಯಕ್ತಕಾಮಾ ಸಾ ತದಾ ಸ್ಯಾದಸಿಧಾರಿಣೀ ॥ ೫೭ ॥

ಕಾಮಕಾಲೇ ಶಿವಪ್ರೇತೇ ನ್ಯಸ್ತಲೋಹಿತಪಂಕಜೆ ।
ರಮತೇ ತ್ಯಕ್ತಕಾಮಾ ತು ಸಿತಪ್ರೇತೋಪರಿ ಸ್ಥಿತಾ ॥ ೫೮ ॥

ತಥೈವೇತಸ್ತತೋ ಗತ್ವಾ ಸಿಂಹಸ್ಥಾ ಕಾಮದಾ ಭವೇತ್ ।
ಕದಾಚಿತ್ಸಾ ಸಿತಪ್ರೇತೇ ಕದಾಚಿದ್ರಕ್ತಪಂಕಜೇ । ॥ ೫೯ ॥

ಕದಾಚಿತ್ಕೇಸರೀಪೃಷ್ಠೇ ರಮತೇ ಕಾಮರೂಪಿಣೀ
ಯದಾ ಲೋಹಿತಪದ್ಮಸ್ಥಾ ತದಾಗ್ರೇ ಕೇಸರೀ ಚರಃ । ॥ ೬೦ ॥

ಯದಾ ಪ್ರೇತಗತಾ ದೇವೀ ತದಾಗ್ರೇಽನ್ಯಂ ನಿರಕ್ಷತೇ ।
ಮಹಾಮಾಯಾಸ್ವರೂಪೇಣ ಯದಾ ಸಾ ವರದಾ ಭವೇತ್ ॥ ೬೧ ॥

---

೫೭. ಕಾಮವನ್ನು ಅನುಭವಿಸುವ ಕಾಲದಲ್ಲಿ ಆ ದೇವಿಯು ಕತ್ತಿಯನ್ನು ಬಿಟ್ಟು ತಾನಾಗಿಯೇ ಮಾಲಿಕೆಯನ್ನು ಹಿಡಿದುಕೊಳ್ಳುವಳು ಯಾವಾಗ ಕಾಮವನ್ನು ಬಿಡಲು ಇಚ್ಛಿಸುವಳೋ ಆಗ ಆ ದೇವಿಯು ಕತ್ತಿಯನ್ನು ಧರಿಸುವಳು.

೫೮. ಕಾಮವನ್ನು ಅನುಭವಿಸುವ ಕಾಲದಲ್ಲಿ ಕೆಂಪಾದ ಕಮಲದಲ್ಲಿ ಇರುವ ಶಿವನ ಪ್ರೇತದಲ್ಲಿಯೂ, ಕಾಮವಿರುವ ಕಾಲದಲ್ಲಿ ಬೆಳ್ಳಗಿರುವ ಪ್ರೇತದಮೇಲೆಯೂ ಇದ್ದುಕೊಂಡು ವಿಹರಿಸುತ್ತಿರುವಳು.

೫೯. ಹಾಗೆಯೇ ಕಾಮಪ್ರದಳಾದ ದೇವಿಯು ಇಲ್ಲಿಂದಲ್ಲಿಗೆ ಹೋಗುವಾಗ ಸಿಂಹದ ಮೇಲೆ ಕುಳಿತು ಭಕ್ತರಿಗೆ ಇಷ್ಟಾರ್ಥಗಳನ್ನು ಕೊಡುವಳು. ಕೆಲವುವೇಳೆ ಬೆಳ್ಳಗಿರುವ ಶವದಮೇಲೂ, ಕೆಲವು ವೇಳೆ ಕೆಂಪುಕಮಲದಲ್ಲಿಯೂ, ಕೆಲವು ವೇಳೆ ಸಿಂಹದ ಬೆನ್ನಿನಮೇಲೂ ಕುಳಿತು ತನ್ನ ಇಷ್ಟಬಂದ ರೂಪವನ್ನು ಧರಿಸಿ ವಿಹರಿಸುವಳು.

೬೦-೬೧. ಈ ದೇವಿಯು ಯಾವಾಗ ಕೆಂಪುತಾವರೆಯಮೇಲೆ ಇರುವಳೋ ಆಗ ಮುಂದುಗಡೆಯಲ್ಲಿ ಸಿಂಹವಿರುವುದು. ದೇವಿಯು ಯಾವಾಗ ಪ್ರೇತದಮೇಲೆ ಇರುವಳೋ ಆಗ ಅವಳು ತನ್ನಮುಂದೆ ಇರುವುದಕ್ಕಾಗಿ ಇನ್ನೊಬ್ಬರನ್ನು ನಿರೀಕ್ಷಿಸುವಳು. ಯಾವಾಗ ಮಹಾಮಾಯಾಸ್ವರೂಪದಿಂದ ಇರುವಳೋ ಆಗ ಅವಳು ವರವನ್ನು ಕೊಡುವವಳಾಗಿರುವಳು.

ಪೂಜಾಕಾಲೇ ತದಾ ಪ್ರೇತಪದ್ಮಸಿಂಹೋಪರಿ ಸ್ಥಿತಾ ।
ರಕ್ತಪದ್ಮೇ ಯದಾ ಧ್ಯಾಯೇತ್ತದಾಗ್ರೇ ಚಿಂತಯೇದ್ಧರಿಂ ॥ ೬೨ ॥
ಯದಾ ಧ್ಯಾಯೇದ್ಧರೌ ಚಾನ್ಯದ್ವಯಮಗ್ರೇ ವಿಚಿಂತಯೇತ್ ।
ತ್ರಿಷು ಧ್ಯಾತೇಷು ಯುಗಪತ್ಪ್ರೇತೇ ಪದ್ಮೇ ಹರೌ ಕ್ರಮಾತ್ ॥ ೬೩ ॥
ಸ್ಥಿತೇಷು ಕಾಮದಾ ದೇವೀ ತೇಷು ಧ್ಯಾಯೇತ ಕಾಮದಾಂ ।
ಏಕ್ಯೈಕಸ್ಮಿನ್ನಪಿ ತಥಾ ಯಥಾವಚ್ಚಿಂತಯೇಚ್ಛುಭಾಂ ॥ ೬೪ ॥
ಏಕಾ ಸಮಸ್ತಜಗತಾಂ ಪ್ರಕೃತಿಃ ಸಾ ಯತಸ್ತತಃ ।
ವಿಷ್ಣುಬ್ರಹ್ಮಶಿವೈರ್ದೇವೈರ್ಧ್ರ್ಯತೇ ಸಾ ಜಗನ್ಮಯೀ ॥ ೬೫ ॥
ಸಿತಪ್ರೇತೋ ಮಹಾದೇವೋ ಬ್ರಹ್ಮಾ ಲೋಹಿತಪಂಕಜಂ ।
ಹರಿರ್ಹರಿಸ್ತು ವಿಜ್ಞೇಯೋ ವಾಹನಾನಿ ಮಹೌಜಸಃ ॥ ೬೬ ॥

---

೬೨. ಪೂಜೆಯನ್ನು ಮಾಡುವಕಾಲದಲ್ಲಿ, ದೇವಿಯು ಯಾವಾಗಲೂ, ಪ್ರೇತ, ಪದ್ಮ, ಸಿಂಹ, ಇವುಗಳಮೇಲೆ ಇರುವಳು. ಕೆಂಪಾದ ಪದ್ಮದ ಮೇಲೆ ಯಾವಾಗ ಇರುವಳೋ ಆಗ ದೇವಿಯ ಮುಂದುಗಡೆಯಲ್ಲಿ ವಿಷ್ಣುವನ್ನು ಧ್ಯಾನ ಮಾಡಬೇಕು.

೬೩. ಯಾವಾಗ ಸಿಂಹದ ಮೇಲಿರುವ ದೇವಿಯನ್ನು ಧ್ಯಾನಮಾಡುವಲ್ಲಿ, ಆಗ ಹರಬ್ರಹ್ಮರನ್ನು ಮುಂದುಗಡೆಯಲ್ಲಿ ಧ್ಯಾನಮಾಡಬೇಕು. ಪ್ರೇತ, ಪದ್ಮ, ಸಿಂಹ, ಇವುಗಳಮೇಲೆ ಇರುವಂತೆ ಒಂದೇಕಾಲದಲ್ಲಿ ಧ್ಯಾನ ಮಾಡಿದಾಗಲೂ, ಬೇರೆಯಾಗಿ ಅವುಗಳಮೇಲೆ ಇರುವಂತೆ ಧ್ಯಾನಮಾಡಿದಾಗಲೂ ದೇವಿಯು ಬೇಕಾದ ಇಷ್ಟಗಳನ್ನು ಕೊಡುವಳು. ಆದುದರಿಂದ ಕಾಮವನ್ನು ಕೊಡುವ ಈರೀತಿಯಾಗಿರುವ ದೇವಿಯನ್ನು ಧ್ಯಾನಮಾಡಬೇಕು.

೬೪. ಪ್ರೇತ, ಪದ್ಮ, ಸಿಂಹ ಇವು ಮೂರರಲ್ಲಿ ಯಾವುದಾದರೂ ಒಂದರಮೇಲೆ ಇರುವಹಾಗೆ ಶಾಸ್ತ್ರಕ್ರಮದಂತೆ ದೇವಿಯನ್ನು ಧ್ಯಾನಮಾಡಬೇಕು. ದೇವಿಯು ಎಲ್ಲಾ ಪ್ರಪಂಚಕ್ಕೂ ತಾನು ಒಬ್ಬಳೇ ಪ್ರಕೃತಿಯಾಗಿರುವಳು. ಎಂದರೆ ಎಲ್ಲಕ್ಕೂ ಆದಿಯಾಗಿರುವಳು. ಹೀಗೆಂದು ಧ್ಯಾನಮಾಡಬೇಕು.

೬೫–೬೬. ವಿಷ್ಣು, ಬ್ರಹ್ಮ, ಶಿವ, ಈ ಮೂರು ದೇವತೆಗಳೂ ಜಗದ್ರೂಪಿಣಿಯಾದ ಆ ದೇವಿಯನ್ನು ಧರಿಸಿರುತ್ತಾರೆ. ಶುಭ್ರವಾದ ಶವವು ಮಹಾದೇವನು. ಕೆಂಪು ತಾವರೆಯ ಹೂವು ಬ್ರಹ್ಮನು. ವಿಷ್ಣುವೇ ಸಿಂಹವಾಗಿರುವನು. ಹೀಗೆ ಈ ತ್ರಿಮೂರ್ತಿಗಳೂ ದೇವಿಗೆ ವಾಹನವಾಗಿರುವರು.

ಸ್ವಮೂರ್ತ್ಯಾ ವಾಹನತ್ವಂ ತು ತೇಷಾಂ ಯಸ್ಮಾನ್ನ ಯುಜ್ಯತೇ ।
ತಸ್ಮಾನ್ಮೂರ್ತ್ಯಂತರಂ ಕೃತ್ವಾ ವಾಹನತ್ವಂ ಗತಾ ಸ್ತ್ರಿಯಃ ॥ ೬೭ ॥

ಯಸ್ಮಿನ್ ಯಸ್ಮಿನ್ ಮಹಾಮಾಯಾ ಪ್ರೀಣಾತಿ ಸತತಂ ಶಿವಾ ।
ತೇನ ತೇನೈವ ರೂಪೇಣ ಆಸನಾನ್ಯಭಪಂಸ್ತ್ರಿಯಃ ॥ ೬೮ ॥

ಸಿಂಹೋಪರಿ ಸ್ಥಿತಂ ಪದ್ಮಂ ರಕ್ತಂ ತಸ್ಯೋರ್ಧ್ವಗಃ ಶವಃ ।
ತಸ್ಯೋಪರಿ ಮಹಾಮಾಯಾ ವರಾಭಯದಾಯಿನೀ ॥ ೬೯ ॥

ಏವಂ ರೂಪೇಣ ಯೋ ಧ್ಯಾತ್ವಾ ಪೂಜಯೇತ್ಸತತಂ ಶಿವಾಂ ।
ಬ್ರಹ್ಮವಿಷ್ಣುಶಿವಾಸ್ತೇನ ಪೂಜಿತಃ ಸ್ಯುರಸಂಶಯಂ ॥ ೭೦ ॥

ಏವಂ ಸದಾ ಮಹಾಮಾಯಾ ಕಾಮಾಖ್ಯಾ ಚೈಕರೂಪಿಣೀ ।
ಧ್ಯಾನತೋರೂಪತೋ ಭಿನ್ನಾ ತಸ್ಮಾತ್ತಾಂ ತತ್ರ ಪೂಜಯೇತ್ ॥ ೭೧ ॥

---

೬೭. ಹರಿಹರಬ್ರಹ್ಮರು ತಮ್ಮತಮ್ಮ ನಿಜವಾದ ಆಕಾರಗಳಿಂದ ವಾಹನವಾಗಿರುವುದು ಯುಕ್ತವಲ್ಲವಾದಕಾರಣ ಬೇರೆಯಾದ ಆಕಾರದಿಂದ ಅವರು ಮೂರು ಜನಗಳೂ, ದೇವಿಗೆ ವಾಹನವಾಗಿರುವರು.

೬೮. ಮಹಾಮಾಯಾರೂಪದಿಂದ ಇರುವ ದೇವಿಯು ಯಾವರೂಪದಲ್ಲಿ ಯಾವ ಕಾಲದಲ್ಲಿ ಇರಲು ಇಷ್ಟಪಡುವಳೋ ಆ ಕಾಲದಲ್ಲಿ ಈ ತ್ರಿಮೂರ್ತಿಗಳೂ ಆ ದೇವಿಯ ರೂಪಕ್ಕೆ ಅನುಸಾರವಾದ ವಾಹನಗಳ ಆಕಾರವನ್ನು ತಾಳುವರು.

೬೯-೭೦. ಸಿಂಹದಮೇಲೆ ಕೆಂಪುತಾವರೆಯಹೂವು, ಅದರಮೇಲೆ ಶವವು. ಇವುಮೂರರ ಮೇಲೆ ಮಹಾಮಾಯಾದೇವಿಯು ವರದ ಅಭಯಹಸ್ತಗಳಿಂದ ಕೂಡಿ ಪ್ರಕಾಶಿಸುತ್ತಿರುವಳು ಯಾವನು ಯಾವಾಗಲೂ ದೇವಿಯನ್ನು ಪೂಜಿಸುವನೋ ಅವನು ಬ್ರಹ್ಮವಿಷ್ಣುಮಹೇಶ್ವರರನ್ನು ಪೂಜೆಮಾಡಿದವನಾಗುವನು. ಈ ವಿಷಯದಲ್ಲಿ ಸಂಶಯಪಡಬೇಕಾದುದಿಲ್ಲ.

೭೧ ಕಾಮಾಖ್ಯಾ ಎಂದು ಪ್ರಸಿದ್ಧಳಾದ ಮಹಾಮಾಯೆಯು ಯಾವಾಗಲೂ ನಾಶರಹಿತಳಾದ ಒಬ್ಬಳೇ ದೇವಿಯಾಗಿರುವಳು. ಆದರೂ ಕಾರ್ಯಾರ್ಥವಾಗಿ ಅನೇಕ ಬಗೆಯ ರೂಪಗಳನ್ನು ಧರಿಸಿ ಭಿನ್ನಳಾಗಿರುವಂತೆ ಧ್ಯಾನಮಾಡಬಹುದು. ಈ ರೀತಿ ಧ್ಯಾನಮಾಡಿ ಪೂಜೆಯನ್ನು ಮಾಡಬೇಕು.

ಏವಂ ವಿಶೇಷತಂತ್ರಾಣಿ ದುರ್ಗಾಯಾಃ ಕಥಿತಾನಿ ವಾಂ ।
ಅಂಗಮಂತ್ರಾಣಿ ತಸ್ಯಾಸ್ತು ಶ್ರೂಯತಾಂ ನರಸತ್ತಮೌ ॥ ೭೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಷಷ್ಟಿತಮೋಽಧ್ಯಾಯಃ ॥

---

೭೨. ಎಲೈ ಪುರುಷಶ್ರೇಷ್ಠರೇ ಹೀಗೆ ದುರ್ಗಾದೇವಿಯ ವಿಶೇಷ ತಂತ್ರಗಳನ್ನು ನಿಮಗಾಗಿ ಹೇಳಿರುವೆನು. ಇನ್ನು ಆ ದುರ್ಗಾದೇವಿಯ ಅಂಗಮಂತ್ರಗಳನ್ನು ಪೇಳುವೆನು ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ
ಆರವತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಏಕಷಷ್ಟಿತಮೋऽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ಅಂಗಮುಂತ್ರಾಣ್ಯಹಂ ವಕ್ಷ್ಯೇ ಚಂಡಿಕಾಯಾ ವಿಶೇಷತಃ ।
ಯೈಃ ಸಮಾರಾಧಿತಾ ದೇವೀ ಚತುರ್ವರ್ಗಪ್ರದಾ ಭವೇತ್ ॥ ೧ ॥

ತಾಲವ್ಯಾಂತೋ ಯುತಃಷಷ್ಠಸ್ವರಬಿಂದ್ವಿಂದುವಹ್ನಿಭಿಃ ।
ತಥೋಷ್ಠಾಂತೋ ಯುತಸ್ತ್ವೇತೈರಾದ್ಯಂ ವಾಗ್ಭವಮೇವ ಚ ॥ ೨ ॥

ನೇತ್ರಬೀಜಂ ಚಂಡಿಕಾಯಾಸ್ತ್ರಯಮೇತತ್ಪ್ರಕೀರ್ತಿತಂ ।
ವಾಮಲಾಲಾಟದಾಕ್ಷಿಣ್ಯನೇತ್ರೇಷು ತ್ರಿತಯಂ ಕ್ರಮಾತ್ ॥ ೩ ॥

---

೧. ಶ್ರೀ ಪರಮೇಶ್ವರನು ಹೇಳಿದನು:—ನಾನು ಈಗ ಚಂಡಿಕಾದೇವಿಯ ಅಂಗಮಂತ್ರಗಳನ್ನು ವಿಸ್ತಾರವಾಗಿ ಹೇಳುವೆನು. ಆ ಅಂಗಮಂತ್ರಗಳಿಂದ ದೇವಿಯನ್ನು ಆರಾಧಿಸಿದರೆ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳನ್ನು ಕೊಡುವಳು.

೨. ಕೊನೆಯ ಎರಡು ತಾಲವ್ಯಾಕ್ಷರಗಳಿಗೆ ರಕಾರವನ್ನೂ ಆರನೆಯ ಸ್ವರವಾದ ಊಕಾರವನ್ನೂ ಬಿಂದುವನ್ನೂ ಸೇರಿಸಬೇಕು. ಈ ಎರಡು ಅಕ್ಷರಗಳೂ ಮೊದಲನೆಯ ವಾಗ್ಭವಬೀಜವೂ ಸೇರಿ ಚಂಡಿಕಾದೇವಿಯ ಮೂರು ನೇತ್ರಬೀಜಗಳಾಗುವುವು.

೩-೪. ಇವು ದೇವಿಯ ಎಡಭಾಗ ಲಲಾಟ ಮತ್ತು ಬಲಭಾಗ ಎಂಬ ಮೂರು ನೇತ್ರಬೀಜಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳಿಗೆ ಕಾರಣವಾಗಿಯೂ ಉತ್ಕೃ

ಧರ್ಮಾರ್ಥಕಾಮಮೋಕ್ಷಾಣಾಂ ಸರ್ವದಾ ಕಾರಣಂ ಪರಂ ।
ಮಂತ್ರಮೇತನ್ಮಹಾಗುಹ್ಯಂ ದುರ್ಗಾಬೀಜಮಿತಿ ಸ್ಮೃತಂ ॥ ೪ ॥

ಯದಾ ಕಾತ್ಯಾಯನಮುನೇರಾಶ್ರಮೇಷು ದಿವೌಕಸಾಂ ।
ತೇಜೋಭಿರ್ಧೃತಕಾಯಾಭೂದ್ದೇವೀ ದೇವೌಘಸಂಸ್ತುತಾ ॥ ೫ ॥

ತದಾ ನೇತ್ರತ್ರಯಾದ್ದೇವ್ಯಾ ಮೂಲಮೂರ್ತಿರ್ವಿನಿಃಸೃತಾ ।
ತೇಜೋಮಯೀ ಜಗದ್ಧಾತ್ರೀ ಮಹಿಷಾಸುರಘಾತಿನೀ ॥ ೬ ॥

ತೇಜೋಭಿಸ್ಸರ್ವದೇವಾನಾಂ ಸಾ ಧೃತ್ವಾ ವಪುರುತ್ತಮಂ ।
ಅಸ್ತ್ರಾಣ್ಯನೇಕಾನ್ಯಾದಾಯ ದೇವೈರ್ದತ್ತಾನಿ ಭಾಗಶಃ ॥ ೭ ॥

ಸಗಣಂ ಸಾನುಬಂಧಂ ಚ ಸಾಮಾತ್ಯಬಲವಾಹನಂ ।
ಬ್ರಹ್ಮಾದ್ಯೈಃ ಸಂಸ್ತುತಾ ದೇವೀ ಜಘಾನ ಮಹಿಷಾಸುರಂ ॥ ೮ ॥

ಷ್ಟವಾಗಿಯೂ ಬಹಳ ರಹಸ್ಯವಾಗಿಯೂ ಇರುವ ಈ ಮಂತ್ರಕ್ಕೆ ದುರ್ಗಾಬೀಜವೆಂದು ಹೆಸರು.

೫. ಕಾತ್ಯಾಯನಮುನಿಯ ಆಶ್ರಮದಲ್ಲಿ ದೇವತೆಗಳು ದೇವಿಯನ್ನು ಸ್ತುತಿಸಲು ಆಗ ದೇವಿಯ ಈ ಮೂರು ನೇತ್ರಗಳಿಂದ ಹೊರಟ ತೇಜಸ್ಸನ್ನು ಧರಿಸಿ ತೇಜೋಮಯವಾದ ಶರೀರವುಳ್ಳ ದೇವಿಯ ಮೂಲರೂಪವು ಹೊರಹೊರಟು ಪ್ರಕಾಶಿಸುತ್ತಲಿದ್ದಿತು.

೬-೮. ಜಗನ್ಮಾತೆಯಾದ ಆ ದೇವಿಯು ಎಲ್ಲಾ ದೇವತೆಗಳ ತೇಜಸ್ಸುಗಳಿಂದಲೂ ಕೂಡಿದ ಉತ್ತಮವಾದ ಶರೀರವನ್ನು ಧರಿಸಿಕೊಂಡು, ತೇಜಸ್ಸಿನರೂಪದಿಂದಿರುವವಳಾಗಿ ಮಹಿಷಾಸುರನನ್ನು ಸಂಹಾರಮಾಡುವುದಕ್ಕಾಗಿ ದೇವತೆಗಳೆಲ್ಲರೂ ಕೊಟ್ಟ ಅನೇಕ ನಿಧವಾದ ಅಸ್ತ್ರಗಳನ್ನು ತೆಗೆದುಕೊಂಡು, ಬ್ರಹ್ಮನೇ ಮೊದಲಾದ ದೇವತೆಗಳು ಸ್ತುತಿಸುತ್ತಿರಲು ಬಂಧುಪರಿವಾರ ಸೇನಾಸಹಿತನಾದ ಮಹಿಷಾಸುರನನ್ನು ನಿಗ್ರಹಮಾಡಿದಳು.

ಹತೇ ತು ಮಹಿಷೇ ದೇವೀ ಪೂಜಿತಾ ತ್ರಿದಶೈಸ್ತತಃ ।
ಅನೇನೈವ ತು ಮಂತ್ರೇಣ ಲೋಕೇ ಖ್ಯಾತಿಂ ಚ ಸಾ ಗತಾ ॥ ೯ ॥

ತತಃ ಪ್ರಭೃತಿ ಸಾ ಮೂರ್ತಿಃ ಸರ್ವೈಃ ಸರ್ವತ್ರ ಪೂಜ್ಯತೇ ।
ಮೂಲಮೂರ್ತಿಃ ಸುಗುಪ್ತಾಭೂತ್ ಸ್ವಮೂರ್ತ್ಯಾ ಖ್ಯಾತಿಮಾಗತಾ ॥ ೧೦ ॥

ದೇವಾನಾಂ ವರದಾನೇನ ಬ್ರಹ್ಮಾದ್ಯೈರುಪಯೋಜನಾತ್ ।
ಯಸ್ಮೂರ್ತಿಃ ಪೂಜ್ಯತೇ ಸರ್ವೈಸ್ತಾಂ ಮೂರ್ತಿಂ ಶೃಣು ಭೈರವ ॥ ೧೧ ॥

ಜಟಾಜೂಟಸಮಾಯುಕ್ತಾಮರ್ಧೇಂದುಕೃತಶೇಖರಾಂ ।
ಲೋಚನತ್ರಯಸಂಯುಕ್ತಾಂ ಪದ್ಮೇಂದುಸದೃಶಾನನಾಂ ॥ ೧೨ ॥

ತಪ್ತಕಾಂಚನವರ್ಣಾಭಾಂ ಸುಪ್ರತಿಷ್ಠಾಂ ಸುಲೋಚನಾಂ ।
ನವಯೌವನಸಂಪನ್ನಾಂ ಸರ್ವಾಭರಣಭೂಷಿತಾಂ ॥ ೧೩ ॥

---

೯. ದೇವಿಯು, ಮಹಿಷಾಸುರನ ವಧೆಯು ಆನಂತರ ದೇವತೆಗಳಿಂದ ಪೂಜಿಸಲ್ಪಟ್ಟವಳಾಗಿ ಈ ಮಂತ್ರದಿಂಲೇ ಲೋಕದಲ್ಲಿ ಖ್ಯಾತಿಯನ್ನು ಹೊಂದಿದಳು.

೧೦. ಆಕಾಲ ಮೊದಲುಮಾಡಿಕೊಂಡು ಆ ಮೂರ್ತಿಯನ್ನು ಎಲ್ಲರೂ ಎಲ್ಲಾ ಕಡೆಯಲ್ಲಿಯೂ ಪೂಜಿಸುವರು. ಮೂಲಮೂರ್ತಿಯು ರಹಸ್ಯವಾಗಿಯೇ ಇದ್ದು ತನ್ನ ಈ ಆಕಾರದಿಂದ ದೇವಿಯು ಪ್ರಸಿದ್ಧಿಗೆ ಬಂದಳು.

೧೧. ಬ್ರಹ್ಮನೇ ಮೊದಲಾದ ದೇವತೆಗಳಿಗೆ ವರವನ್ನು ಕೊಡುವ ಅವರಿಂದಲೂ ಲೋಕದಲ್ಲಿ ಎಲ್ಲರಿಂದಲೂ ಪೂಜಿಸಲ್ಪಡುವ ದೇವಿಯ ಮೂರ್ತಿಯಲಕ್ಷಣವನ್ನು ವಿವರಿಸಿ ಹೇಳುವೆನು. ಎಲೈ ಭೈರವನೇ ನೀನು ಕೇಳು.

೧೨-೧೩. ದೇವಿಯ ಶಿರಸ್ಸಿನಲ್ಲಿ ಇರುವ ಜಟಾಮಂಡಲವಲ್ಲಿ ಅರ್ಧಚಂದ್ರನು ಆಭರಣವಾಗಿ ಒಪ್ಪುತ್ತಿರುವನು. ಆ ದೇವಿಯು ಮೂರು ಕಣ್ಣುಗಳಿಂದಲೂ, ಕಮಲದಂತೆಯೂ ಚಂದ್ರನಂತೆಯೂ ಮನೋಹರವಾದ ಮುಖದಿಂದಲೂ ಶೋಭಿಸುತ್ತಿರುವಳು.

೯-೧೦ನೇ ಶ್ಲೋಕಗಳಲ್ಲಿ ಹೇಳಿರುವಂತೆ ದೇವಿಯ ಮೂಲರೂಪಕ್ಕಿಂತಲೂ ದೇವಿಯ ಇತರ ಕೆಲವು ಮೂರ್ತಿಗಳು ಹೆಚ್ಚು ಪ್ರಸಿದ್ಧವಾಗಿವೆ. ಅವುಗಳಲ್ಲಿ ಮಹಿಷಾಸುರಮರ್ದಿನಿ ಎಂಬ ಮೂರ್ತಿಯ ಧ್ಯಾನಕ್ರಮವನ್ನು ಇಲ್ಲಿ ವಿವರಿಸಿದೆ.

ಸುಚಾರುದರ್ಶನಾಂ ತೀಕ್ಷ್ಣಾಂ ಪೀನೋನ್ನತಪಯೋಧರಾಂ ।
ತ್ರಿಭಂಗಸ್ಥಾನಸಂಸ್ಥಾನಾಂ ಮಹಿಷಾಸುರಮರ್ದಿನೀಂ ॥ ೧೪ ॥

ಮಂಡಲಾಯತಸಂಸ್ಪರ್ಶದಶಬಾಹುಸಮನ್ವಿತಾಂ ।
ತ್ರಿಶೂಲಂ ದಕ್ಷಿಣೇ ದೇಯಂ ಖಡ್ಗಂ ಚಕ್ರಂ ಕ್ರಮಾದಧಃ ॥ ೧೫ ॥

ತೀಕ್ಷ್ಣ ಬಾಣಂ ತಥಾಶಕ್ತಿಂ ಬಾಹುಸಂಘೇಷು ಸಂಗತಾಂ ।
ಖೇಟಕಂ ಪೂರ್ಣಚಾಪಂ ಚ ಪಾಶಂ ಚಾಂಕುಶಮೂರ್ಧ್ವತಃ ॥ ೧೬ ॥

ಘಂಟಾಂ ಚ ಪರಶುಂ ಚಾಪಿ ವಾಮೇಽಧಃ ಪ್ರತಿಯೋಜಯೇತ್ ।
ಅಧಸ್ತಾನ್ಮಹಿಷಂ ತದ್ವದ್ದ್ವಿಶಿರಸ್ಕಂ ಪ್ರದರ್ಶಯೇತ್ ॥ ೧೭ ॥

ಶಿರಚ್ಛೇದೋದ್ಭವಂ ತದ್ವದ್ದಾನವಂ ಖಡ್ಗಪಾಣಿನಂ ।
ಹೃದಿ ಶೂಲೇನ ನಿರ್ಭಿನ್ನಂ ತಿರ್ಯಗ್ದಂತವಿಭೂಷಿತಂ ॥ ೧೮ ॥

ಪುಟವಿಟ್ಟ ಚಿನ್ನದಂತೆ ಶರೀರಕಾಂತಿಯಿರವುದು. ಕಣ್ಣುಗಳೇ ಮೊದಲಾದ ಅವಯವಗಳು ಬಹು ಸುಂದರವಾಗಿ ಮುಖದ ಕಾಂತಿಯನ್ನು ಮತ್ತಷ್ಟು ಹೆಚ್ಚಿಸುತ್ತಿರುವವು. ನವಯೌವನದಿಂದ ಕೂಡಿ ಸರ್ವಾಲಂಕಾರಗಳನ್ನು ಧರಿಸಿ ನೋಡಲು ಅತಿ ಮನೋಹರವಾಗಿ ಕಾಣುತ್ತಿರುವಳು. ಮುಂದಕ್ಕೆ ಉಬ್ಬಿ ದುಂಡಾಗಿರುವ ಸ್ತನಗಳಿಂದಲೂ, ಸಣ್ಣನಾದ ನಡು, ಗಂಭೀರವಾದ ನಾಭಿಪ್ರದೇಶ, ಮಂಡಲಾಕಾರವಾಗಿ ಪ್ರಸರಿಸಿರುವ ಹತ್ತು ತೋಳುಗಳು ಇವುಗಳಿಂದಲೂ ಪ್ರಕಾಶಿಸುತ್ತಿರುವಳು. ಆದೇವಿಯು, ಬಲಭಾಗದ ಕೈಗಳಲ್ಲಿ ತ್ರಿಶೂಲ, ಖಡ್ಗ, ಚಕ್ರ, ಹರಿತವಾದ ಬಾಣ, ಶಕ್ತ್ಯಾಯುಧ ಇವುಗಳನ್ನೂ ಎಡಭಾಗದ ಕೈಗಳಲ್ಲಿ ಬಿಲ್ಲು, ಪಾಶ, ಅಂಕುಶ, ಘಂಟೆ ಪರಶು ಇವುಗಳನ್ನೂ ಧರಿಸಿರುವಳು. ಆ ದೇವಿಯನ್ನು ಧ್ಯಾನಿಸುವಾಗ ದೇವಿಯ ಪಾದದ ಕೆಳಗೆ ತಲೆಯಲ್ಲವಿರುವ ಮಹಿಷವನ್ನೂ, ಆ ಮಹಿಷದ ತಲೆಯನ್ನು ಕತ್ತರಿಸಿದ ಪ್ರದೇಶದಿಂದ ಹುಟ್ಟಿದ ಖಡ್ಗಪಾಣಿಯಾದ ರಾಕ್ಷಸನನ್ನು ದೇವಿಯು ತ್ರಿಶೂಲದಿಂದ ಅವನ ಎದೆಯಲ್ಲಿ ಇರಿಯುತ್ತಿರುವಂತೆ ಭಾವಿಸಬೇಕು. ಮತ್ತು ಆ ಮಹಿಷಾಸುರನಿಗೆ ಕೋಪದಾಡೆ ಪಲ್ಲುಗಳೂ ರಕ್ತವು ಸೋರಿ ನೆನೆದ ಶರೀರವೂ, ಕೆಂಪಾದ ಕಣ್ಣುಗಳೂ, ಕೈಯಲ್ಲಿ ಕತ್ತಿಯೂ ಕೋಪದಿಂದ ಹುಬ್ಬುಗಂಟಿಕ್ಕಿ ಭಯಂಕರವಾಗಿ ಕಾಣುವ ಮುಖವೂ ಇರಬೇಕು ಮತ್ತು ಆದೇವಿಯು ಬಾಯಿಸಿಂದ ರಕ್ತವನ್ನು ಕಾರುತ್ತಿರುವ ಕತ್ತರಿಸಿದ ಮಹಿಷಾಸುರನ ಶಿರಸ್ಸನ್ನು ಕೇಶ

ರಕ್ತರಕ್ತೀಕೃತಾಂಗಂ ಚ ರಕ್ತವಿಸ್ಫುರಿತೇಕ್ಷಣಂ ।
ವೇಷ್ಟಿತಂ ನಾಗಪಾಶೇನ ಭೃಕುಟೀಕುಟಿಲಾನನಂ ॥ ೧೯ ॥

ಸಪಾಶವಾಮಹಸ್ತೇನ ಧೃತಕೇಶಂ ಚ ದುರ್ಗಯಾ ।
ವಮದ್ರುಧಿರವಕ್ತ್ರಂ ಚ ದೇವ್ಯಾಃ ಸಿಂಹಂ ಪ್ರದರ್ಶಯೇತ್ ॥ ೨೦ ॥

ದೇವ್ಯಾಸ್ತು ದಕ್ಷಿಣಂ ಪಾದಂ ಸಮಂ ಸಿಂಹೋಪರಿ ಸ್ಥಿತಂ ।
ಕಿಂಚಿದರ್ಧಂ ತಥಾ ವಾಮಮಂಗುಷ್ಠಂ ಮಹಿಷೋಪರಿ ॥ ೨೧ ॥

ಉಗ್ರಚಂಡಾ ಪ್ರಚಂಡಾ ಚ ಚಂಡೋಗ್ರಾ ಚಂಡನಾಯಿಕಾ ।
ಚಂಡಾ ಚಂಡವತೀ ಚೈವ ಚಾಮುಂಡಾ ಚಂಡಿಕಾ ತಥಾ ॥ ೨೨ ॥

ಆಭಿಶಕ್ತಿಭಿರಷ್ಟಾಭಿಃ ಸತತಂ ಪರಿವೇಷ್ಟಿತಾಂ ।
ಚಿಂತಯೇತ್ಸತತಂ ದೇವೀಂ ಧರ್ಮಕಾಮಾರ್ಥಮೋಕ್ಷದಾಂ ॥ ೨೩ ॥

ಏತಸ್ಯಾಶ್ಚಾಂಗಮಂತ್ರಂ ತು ದುರ್ಗಾತಂತ್ರಮಿತಿ ಶ್ರುತಂ ।
ಶೃಣುಷ್ವೈಕಮನಾ ಭೂತ್ವಾ ಧರ್ಮಕಾಮಾರ್ಥಸಾಧನಂ ॥ ೨೪ ॥

ಪಾಶದಿಂದ ಎಡಗೈಯಲ್ಲಿ ಹಿಡಿದೆತ್ತಿಕೊಂಡು ತನ್ನ ಬಲಗಾಲನ್ನು ಸಿಂಹದಮೇಲೆ ಪೂರ್ತಿಯಾಗಿಯೂ ಎಡಗಾಲಿನ ಅರ್ಧ ಭಾಗವನ್ನು ಸಿಂಹದ ಮೇಲೆಯೂ ಅಂಗುಷ್ಠವನ್ನು ಮಹಿಷಾಸುರನ ಮೇಲೆಯೂ ಇಟ್ಟುಕೊಂಡಿರುವಂತಿರಬೇಕು. ಈರೀತಿ ದೇವಿಯನ್ನು ಏಕಾಗ್ರಮನಸ್ಸಿನಿಂದ ಧ್ಯಾನಿಸಬೇಕು.

೨೨-೨೩. ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ ಚಂಡಾ ಚಂಡವತೀ, ಚಾಮುಂಡಾ, ಚಂಡಿಕಾ, ಎಂಬ ಹೆಸರುಳ್ಳ ಎಂಟು ಶಕ್ತಿದೇವತೆಗಳಿಂದ ದೇವಿಯು ಯಾವಾಗಲೂ ಸುತ್ತುವರಿದಿರುವಂತೆ ಧರ್ಮ, ಕಾಮ, ಅರ್ಥ, ಮೋಕ್ಷಗಳನ್ನು ಹೊಂದುವುದಕ್ಕಾಗಿ ಧ್ಯಾನಮಾಡಬೇಕು.

೨೪. ಈ ದೇವಿಯ, ಅಂಗಮಂತ್ರಗಳನ್ನೂ, ಪೂಜಾಕಲ್ಪವನ್ನೂ, ಹೇಳುವ ಗ್ರಂಥಕ್ಕೆ ದುರ್ಗಾತಂತ್ರವೆಂದು ಹೆಸರು. ಈ ತಂತ್ರವು ಧರ್ಮ, ಕಾಮ, ಅರ್ಥ, ಇವುಗಳನ್ನು ಸಾಧಿಸಲು ಅರ್ಹವಾಗಿರುವುದು. ಅದನ್ನು ನಿಶ್ಚಲಮನಸ್ಸಿನಿಂದ ಕೇಳು.

ವಹ್ನಿಭಾರ್ಯಾ ಸ್ವರಷ್ಷಷ್ಠೋ ಹಾಂತಃ ಪ್ರಾಂತೋಽಗ್ನಿರೇವಚ ।
ದುರ್ಗೇ ದ್ವಿರಿತಿ ಸೋಂಕಾರಂ ದುರ್ಗಾಮಂತ್ರಮಿತಿ ಶ್ರುತಂ ॥ ೨೫ ॥

ರವೌ ಮಕರರಾಶಿಸ್ಥೇ ಯಾ ಭವೇತ್ಸಿತಪಂಚಮೀ ।
ತಸ್ಯಾಮನೇನ ಮಂತ್ರೇಣ ಸಂಪೂಜ್ಯ ವಿಧಿವಚ್ಛಿವಾಂ ॥ ೨೬ ॥

ಶುಕ್ಲಾಷ್ಟಮ್ಯಾಂ ಪುನರ್ದೇವೀಂ ಪೂಜಯಿತ್ವಾ ಯಥಾವಿಧಿ ।
ನವಮ್ಯಾಂ ಬಲಿದಾನಾನಿ ಪ್ರಭೂತಾನಿ ಸಮಾಚರೇತ್ ॥ ೨೭ ॥

ಸಂಧ್ಯಾಯಾಂ ಚ ಬಲಿಂ ಕುರ್ಯಾನ್ನಿಜಗಾತ್ರಾಸೃಗುಕ್ಷಿತಂ ।
ಏವಂ ಕೃತೇ ತು ಕಲ್ಯಾಣೈರ್ಯುಕ್ತೋ ನಿತ್ಯಂ ಪ್ರಮೋದತೇ ॥ ೨೮ ॥

ಪುತ್ರಪೌತ್ರಸಮೃದ್ಧಸ್ತು ಧನಧಾನ್ಯಸಮೃದ್ಧಿಭಿಃ ।
ದೀರ್ಘಾಯುಸ್ಸರ್ವಸುಭಗೋ ಲೋಕೇಽಸ್ಮಿನ್ ಸ ಚ ಜಾಯತೇ ॥ ೨೯ ॥

---

೨೫. ಸ್ವಾಹಾಕಾರವು ಆರನೇ ಸ್ವರವಾದ ಊಕಾರವು ಹಕಾರ ರಕಾರ ಬಿಂದು ಗಳಿಂದ ಕೂಡಿಯೂ ಎರಡಾವರ್ತಿ ದುರ್ಗೆ ಎಂಬ ಶಬ್ದವೂ ಓಂಕಾರವೂ ಇವೆಲ್ಲವೂ ಸೇರಿದರೆ ದುರ್ಗಾಮಂತ್ರವಾಗುವುದು. (ಓಂ ಹ್ರೂಂ ದುರ್ಗೇ ದುರ್ಗೇ ಸ್ವಾಹಾ)

೨೬-೨೭. ಸೂರ್ಯನು ಮಕರ ರಾಶಿಯಲ್ಲಿರುವಾಗ ಬರುವ ಶುಕ್ಲಪಂಚಮಿ ಯದಿನ ಈಮಂತ್ರದಿಂದ ದೇವಿಯ ಪೂಜೆಯನ್ನು ಶಾಸ್ತ್ರಕ್ರಮದಿಂದ ಮಾಡಿ ಶುದ್ಧಾಷ್ಟಮಿಯಲ್ಲಿಯೂ, ಪೂಜಿಸಿ, ನವಮಿಯದಿನ ಶಾಸ್ತ್ರವಿಧಿಯಿಂದ ಅನೇಕ ಬಲಿಗಳನ್ನು ಕೊಡಬೇಕು.

೨೮. ಸಂಧ್ಯಾಕಾಲದಲ್ಲಿ ತನ್ನ ದೇಹದ ರಕ್ತದಿಂದ ನೆನಸಲ್ಪಟ್ಟ ಬಲಿಯನ್ನು ಕೊಡಬೇಕು. ಹೀಗೆ ಮಾಡಿದಲ್ಲಿ ಯಾವಾಗಲೂ ಸೌಖ್ಯದಿಂದ ಕೂಡಿದವನಾಗಿ ಸಂತೋಷವನ್ನು ಹೊಂದುವನು.

೨೯. ಯಾವನು ಮೇಲೆ ಹೆಳಿದ ರೀತಿಯಿಂದ ಪೂಜೆಯನ್ನು ಮಾಡುವನೋ ಅವನು ಈಲೋಕದಲ್ಲಿ ಪುತ್ರ, ಪೌತ್ರರಿಂದಲೂ, ಧನಧ್ಯಾನ್ಯಗಳ ಸಮೃದ್ಧಿಯಿಂದಲೂ ಕೂಡಿ ಬಹಳ ಆಯುಸ್ಸುಳ್ಳವನಾಗಿಯೂ, ಎಲ್ಲರಿಗಿಂತಲೂ ಸೌಂದರ್ಯವುಳ್ಳವನಾಗಿಯೂ ಬಾಳುವನು.

ಸಿತಾಷ್ಟಮ್ಯಾಂ ತು ಚೈತ್ರಸ್ಯ ಪುಷ್ಪೈಸ್ತತ್ಕಾಲಸಂಭವೈಃ ।
ಅಶೋಕೈರಪಿ ಯಃ ಕುರ್ಯಾನ್ಮಂತ್ರೇಣಾನೇನ ಪೂಜನಂ ॥ ೩೦ ॥

ನ ತಸ್ಯ ಜಾಯತೇ ಶೋಕೋ ರೋಗೋ ವಾಪ್ಯಥ ದುರ್ಗತಿಃ ।
ಜ್ಯೇಷ್ಠೇ ತು ಶುಕ್ಲಪಕ್ಷಸ್ಯ ಅಷ್ಟಮ್ಯಾಂ ಸಮುಪೋಷಿತಃ ॥ ೩೧ ॥

ನವಮ್ಯಾಂ ಸಲಿಲೈರನ್ನೈರ್ಯಾವಕೈರಥ ಮೋದಕೈಃ ।
ಕ್ಷೀರೈರಾಜ್ಯೈಸ್ತಥಾ ಕ್ಷೌದ್ರೈಃ ಶರ್ಕರಾಭಿಃ ಸಪಿಷ್ಟಕೈಃ ॥ ೩೨ ॥

ನಾನಾಪಶೂನಾಂ ರುಧಿರೈಃ ಮಾಂಸೈರಪಿ ಚ ಪೂಜಯೇತ್ ।
ತತೋ ದಶಮ್ಯಾಂ ಶುಕ್ಲಾಯಾಮದ್ಭಿಸ್ತು ತಿಲಮಿಶ್ರಿತೈಃ ॥ ೩೩ ॥

ದುರ್ಗಾತಂತ್ರೇಣ ಮಂತ್ರೇಣ ದಾತವ್ಯಮಂಜಲಿತ್ರಯಂ ।
ಏವಂ ಕೃತೇ ದಶಮ್ಯಾಂ ತು ಯತ್ಪಾಪಂ ದಶಜನ್ಮಭಿಃ ॥ ೩೪ ॥

---

೩೦. ಚೈತ್ರ ಶುದ್ಧ ಅಷ್ಟಮಿಯದಿನ ಆ ಕಾಲದಲ್ಲಿ ದೊರಕುವ ಅಶೋಕವೇ ಮೊದಲಾದ ಪುಷ್ಪಗಳಿಂದ ಯಾವನು ಈ ಮಂತ್ರಪೂರ್ವಕವಾಗಿ ದೇವಿಯನ್ನು ಪೂಜಿಸುವನೋ, ಅವನಿಗೆ ದುಃಖ, ರೋಗ, ದುರ್ಗತಿ, ಇವು ಯಾವುವೂ ಸಂಭವಿಸುವುದಿಲ್ಲ.

೩೧-೩೨. ಜ್ಯೇಷ್ಠ ಶುದ್ಧ ಅಷ್ಟಮಿಯದಿನ ಉಪವಾಸವನ್ನು ಮಾಡಿ, ನವಮಿಯದಿನ ನೀರು, ಅನ್ನ, ರವೆಯಗಂಜಿ, ಕಡಬು, ಹಾಲು, ತುಪ್ಪ, ಜೇನುತುಪ್ಪ, ಸಕ್ಕರೆ, ತಂಬಿಟ್ಟು, ಅನೇಕವಿಧವಾದ ಮೃಗಗಳಮಾಂಸ ಮತ್ತು ರಕ್ತ ಇವುಗಳಿಂದ ದೇವಿಯನ್ನು ಪೂಜಿಸಬೇಕು.

೩೩. ಆಮೇಲೆ ಶುದ್ಧ ದಶಮಿಯದಿನ, ಎಳ್ಳುಮಿಶ್ರವಾದ ನೀರಿನಿಂದ ದುರ್ಗಾತಂತ್ರದಲ್ಲಿ ಹೇಳಿರುವ ಕ್ರಮದಂತೆ ಮಂತ್ರಪೂರ್ವಕವಾಗಿ ಮೂರಾವರ್ತಿ ಅರ್ಘ್ಯವನ್ನು ಕೊಡಬೇಕು.

೩೪. ದಶಮಿಯದಿನ ಹೀಗೆ ಮಾಡಿದಲ್ಲಿ ಹತ್ತು ಜನ್ಮಗಳಲ್ಲಿ ಮಾಡಿದ ಪಾಪಗಳೆಲ್ಲವೂ ನಾಶವಾಗಿ ಅವನು ಬಹುಕಾಲ ಬದುಕುವನು.

ಕೃತಂ ತತ್ಪ್ರಲಯಂ ಯಾತಿ ದೀರ್ಘಾಯುರಪಿ ಜಾಯತೇ ।
ಆಷಾಢೇ ಶುಕ್ಲಪಕ್ಷಸ್ಯ ಯಾಷ್ಟಮೀ ಶ್ರಾವಣಸ್ಯ ಚ ॥ ೩೫ ॥

ಪವಿತ್ರಾರೋಪಣಂ ಕುರ್ಯಾದ್ದೇವೀಪ್ರೀತಿಕರಂ ಪರಂ ।
ದುರ್ಗಾತಂತ್ರೇಣ ಮಂತ್ರೇಣ ದುರ್ಗಾಬೀಜೇನ ಭೈರವ ॥ ೩೬ ॥

ವೈಷ್ಣವೀತಂತ್ರಮಂತ್ರೇಣ ಪವಿತ್ರಾರೋಪಣಂ ಚರೇತ್ ।
ವಿಶೇಷಾಚ್ಛ್ರಾವಣಂ ಪ್ರಾಪ್ಯ ದೇವ್ಯಾಃ ಕುರ್ಯಾತ್ಪವಿತ್ರಕಂ ॥ ೩೭ ॥

ಸರ್ವೇಷಾಮೇವ ದೇವಾನಾಂ ಪವಿತ್ರಾರೋಪಣಂ ಚರೇತ್ ।
ಆಷಾಢೇ ಶ್ರಾವಣೇ ವಾಪಿ ಸಂವತ್ಸರಫಲಪ್ರದಂ ॥ ೩೮ ॥

ಪ್ರತಿಪದ್ಧನದಸ್ಯೋಕ್ತಾ ಪವಿತ್ರಾರೋಪಣೇ ತಿಥಿಃ ।
ದ್ವಿತೀಯಾ ತು ಶ್ರಿಯೋ ದೇವ್ಯಾಸ್ತಿಥೀನಾಮುತ್ತಮಾ ಸ್ಮೃತಾ ॥ ೩೯ ॥

---

೩೫. ಆಷಾಢಮಾಸದ ಶುದ್ಧಾಷ್ಟಮಿಯ ದಿನವೂ, ಶ್ರಾವಣ ಶುದ್ಧಾಷ್ಟಮಿಯ ದಿನವೂ ಸಹ ದೇವಿಗೆ ಪ್ರೀತಿಯನ್ನುಂಟುಮಾಡುವ "ಪವಿತ್ರಾರೋಪಣ" ವೆಂಬ ಕರ್ಮವನ್ನು ಮಾಡಬೇಕು.

೩೬. ಎಲೈ ಭೈರವನೇ ಕೇಳು, ದುರ್ಗಾತಂತ್ರದಲ್ಲಿ ಹೇಳಿರುವ ಮಂತ್ರ ದಿಂದಲೂ, ದುರ್ಗಾ ಬೀಜಮಂತ್ರದಿಂದಲೂ, ವೈಷ್ಣವೀ ತಂತ್ರದಲ್ಲಿ ಹೇಳಿರುವಮಂತ್ರ ದಿಂದಲೂ ಪವಿತ್ರಾರೋಪಣೆಯನ್ನು ಮಾಡಬೇಕು.

೩೭. ಶ್ರಾವಣಮಾಸದಲ್ಲಿ ಮಾಡುವ ದೇವಿಯಪೂಜೆಯಲ್ಲಿ ಅವಶ್ಯಕವಾಗಿ ಪವಿತ್ರಾರೋಪಣವೆಂಬ ಕರ್ಮವನ್ನು ಮಾಡಬೇಕು. ಎಲ್ಲಾ ದೇವತೆಗಳಿಗೂ ಸಹ ಪವಿತ್ರಾರೋಪಣವನ್ನು ಈ ತಿಂಗಳಿನಲ್ಲಿ ಮಾಡಬೇಕು.

೩೮. ಆಷಾಢದಲ್ಲಿಯಾಗಲೀ, ಶ್ರಾವಣದಲ್ಲಿಯಾಗಲೀ, ಮಾಡುವ ಪವಿತ್ರಾ ರೋಪಣವೆಂಬ ಕರ್ಮವು ಸಂವತ್ಸರದವರಿಗೂ ಫಲವನ್ನು ಕೊಡುವುದಾಗಿರುವುದು. ಅದರಲ್ಲಿ ಪ್ರಥಮ ತಿಥಿಯು ಕುಬೇರನಿಗೆ ಪವಿತ್ರಾರೋಪಣೆಯನ್ನು ಮಾಡಲು ಉಕ್ತ ವಾಗಿರುವುದು.

೩೯-೪೨. ದ್ವಿತೀಯಾ ತಿಥಿಯು, ಶ್ರೀದೇವಿಗೂ ತೃತೀಯೆಯು ಪಾರ್ವತಿಗೂ ಚತುರ್ಥಿಯು ಗಣಪತಿಗೂ, ಪಂಚಮಿಯು ಸೋಮರಾಜನಿಗೂ, ಷಷ್ಠಿಯು ಷಣ್ಮುಖ

ತೃತೀಯಾ ಭವಭಾವಿನ್ಯಾಶ್ಚತುರ್ಥೀ ತತ್ಸುತಸ್ಯ ಚ ।
ಪಂಚಮೀ ಸೋಮರಾಜಸ್ಯ ಷಷ್ಠೀ ಪ್ರೋಕ್ತಾ ಗುಹಸ್ಯ ಚ ॥ ೪೦ ॥

ಸಪ್ತಮೀ ಭಾಸ್ಕರಸ್ಯೋಕ್ತಾ ದುರ್ಗಾಯಾಶ್ಚ ತಥಾಷ್ಟಮೀ ।
ಮಾತೃಣಾಂ ನವಮೀ ಪ್ರೋಕ್ತಾ ವಾಸುಕೇರ್ದಶಮೀ ಮತಾ ॥ ೪೧ ॥

ಏಕಾದಶೀ ಋಷೀಣಾಂ ಚ ದ್ವಾದಶೀ ಚಕ್ರಪಾಣಿನಃ ।
ತ್ರಯೋದಶೀ ತ್ವನಂಗಸ್ಯ ಮನು ಚೈವ ಚತುರ್ದಶೀ ॥ ೪೨ ॥

ಬ್ರಹ್ಮಣೋ ದಿಕ್ಪತೀನಾಂ ಚ ಪೌರ್ಣಮಾಸೀ ತಿಥಿರ್ಮತಾ ।
ಪವಿತ್ರಾರೋಪಣಂ ಯೋ ವೈ ದೇವಾನಾಂ ನ ಸಮಾಚರೇತ್ ॥ ೪೩ ॥

ತಸ್ಯ ಸಾಂವತ್ಸರೀಪೂಜಾಫಲಂ ಹರತಿ ಕೇಶವಃ ।
ತಸ್ಮಾದ್ಯತ್ನೇನ ಕರ್ತವ್ಯಂ ಪವಿತ್ರಾರೋಪಣಂ ಪರಂ ॥ ೪೪ ॥

ಕೃತೇ ಬಹುಫಲಪ್ರಾಪ್ತಿಸ್ತತ್ಪೂಜಾ ಸಫಲಾ ಭವೇತ್
ಪವಿತ್ರಂ ಯೇನ ಸೂತ್ರೇಣ ಯಥಾ ಕಾರ್ಯಂ ವಿಜಾನತಾ ॥ ೪೫ ॥

ನಿಗೂ, ಸಪ್ತಮಿಯು ಸೂರ್ಯನಿಗೂ, ಅಷ್ಟಮಿಯು ದುರ್ಗಾದೇವಿಗೂ, ಮಾತೃಕೆಯರಿಗೆ ನವಮಿಯೂ, ವಾಸುಕಿಗೆ ದಶಮಿಯೂ, ಋಷಿಗಳಿಗೆ ಏಕಾದಶಿಯೂ, ವಿಷ್ಣುವಿಗೆ ದ್ವಾದಶಿಯೂ, ಮನ್ಮಥನಿಗೆ ತ್ರಯೋದಶಿಯೂ, ಶಿವನಾದ ನನಗೆ ಚತುರ್ದಶಿಯೂ ಬ್ರಹ್ಮನಿಗೂ, ದಿಕ್ಪಾಲಕರಿಗೂ ಸಹ ಪೂರ್ಣಿಮೆಯೂ ಸಹ ಪವಿತ್ರಾರೋಪಣೆಗೆ ಉಕ್ತವಾಗಿರುವ ತಿಥಿಗಳಾಗಿರುವವು.

೪೩. ಯಾವನು ದೇವತೆಗಳಿಗೆ ಈ ಪವಿತ್ರಾರೋಪಣ ಕರ್ಮವನ್ನು ಮಾಡುವುದಿಲ್ಲವೋ ಅವನು ವರ್ಷದವರೆಗೆ ಮಾಡಿದ ಪೂಜೆಯಫಲವನ್ನು ವಿಷ್ಣುವು ಅವನಿಗೆ ಕೊಡುವುದಿಲ್ಲವು.

೪೪. ಆದ್ದರಿಂದ ಪವಿತ್ರಾರೋಪಣವೆಂಬ ಕರ್ಮವನ್ನು ಪ್ರಯತ್ನಪೂರ್ವಕವಾಗಿ ಮಾಡಲೇಬೇಕು. ಇದನ್ನು ನಡೆಸಿದರೆ ಬಹಳ ಫಲವುಂಟಾಗುವುದು. ಅವನ ಪೂಜೆಯು ಸಫಲವಾಗುವುದು.

೪೫. ಶಾಸ್ತ್ರವನ್ನು ಬಲ್ಲವನು ಯಾವ ದಾರದಿಂದ ಪವಿತ್ರವನ್ನು ಹೇಗೆಮಾಡಬೇಕು ಎಂಬುವುದನ್ನು ಅದರ ಪ್ರಮಾಣಸಹಿತವಾಗಿ ಹೇಳುವೆನು. ಎಲೈ ಭೈರವನೇ ಕೇಳು.

ತಚ್ಛೃಣುಷ್ವ ಪ್ರಮಾಣಂ ತು ವಚನಾನ್ಮಮ ಭೈರವ।
ಪ್ರಥಮಂ ಧರ್ಭಸೂತ್ರಂ ಚ ಪದ್ಮಸೂತ್ರಂ ತತಃ ಪರಂ ॥ ೪೬ ॥

ತತಃ ಕ್ಷೌಮಂ ಸುವರ್ಣಂ ಸ್ಯಾತ್ಕಾರ್ಪಾಸಕಮತಃ ಪರಂ।
ಪಟ್ಟಸೂತ್ರಂ ತಥಾನ್ಯೇನ ಪವಿತ್ರಾಣಿ ನ ಕಾರಯೇತ್ ॥ ೪೭ ॥

ವಿಚಿತ್ರಾಣಿ ಪವಿತ್ರಾಣಿ ಕರ್ತವ್ಯಾನಿ ತು ಯತ್ನತಃ।
ಗಂಧಮಾಲ್ಯೈಃ ಸುರಭಿಭಿಃ ರಚಿತಾನಿ ಯಥೋದಿತಂ ॥ ೪೮ ॥

ಕನ್ಯಾ ಚ ಕರ್ತಯೇತ್ಸೂತ್ರಂ ಪ್ರಮುದಾ ಚ ಪತಿವ್ರತಾ।
ವಿಧವಾ ಸಾಧುಶೀಲಾ ವಾ ದುಃಶೀಲಾ ನಹಿ ಕರ್ತ್ರಯೇತ್ ॥ ೪೯ ॥

ಯತ್ಸೂಚಿಭಿನ್ನಂ ದಗ್ಧಂ ಚ ಭಸ್ಮಧೂಮಾಭಿಗುಂಠಿತಂ।
ತದ್ವರ್ಜನೀಯಂ ಯತ್ನೇನ ಸೂತ್ರಮುಸ್ಕೃ ಪವಿತ್ರಕೇ ॥ ೫೦ ॥

೪೬-೪೭. ದರ್ಭೆಯಿಂದ ಮಾಡಿದ ಪವಿತ್ರವು ಎಲ್ಲಕ್ಕೂ ಉತ್ತಮವಾದದ್ದು. ಅಥವಾ ಪದ್ಮನಾಳದಿಂದಲೂ, ರೇಷ್ಮೆಯದಾರದಿಂದಲೂ ಹತ್ತಿಯ ನೂಲಿನಿಂದಲೂ, ಮಾಡಬಹುದು. ಇವುಗಳನ್ನು ಬಿಟ್ಟು ಬೇರೆ ದ್ರವ್ಯಗಳಿಂದ ಪವಿತ್ರವನ್ನು ಮಾಡಬಾರದು.

೪೮. ಅನೇಕವಿಧವಾದ ಪವಿತ್ರಗಳನ್ನು ಪ್ರಯತ್ನಪೂರ್ವಕವಾಗಿ ಮಾಡಬೇಕು ಅವುಗಳನ್ನು ಶಾಸ್ತ್ರಕ್ಕನುಸಾರವಾಗಿ ಗಂಧ, ಹೂವು ಮೊದಲಾದ ಸುಗಂಧದ್ರವ್ಯ ಗಳಿಂದ ವಾಸನೆಯುಳ್ಳವುಗಳನ್ನಾಗಿ ಮಾಡಬೇಕು.

೪೯. ಮದುವೆಯಾಗದಿರುವ ಕನ್ಯೆಯು ಪವಿತ್ರಕ್ಕಾಗಿ ದಾರವನ್ನು ರಚಿಸ ಬಹುದು. ಪತಿವ್ರತೆಯಾದ ಹೆಂಗಸೂ ಒಳ್ಳೆಯ ಆಚಾರದಿಂದಲೂ, ಸ್ವಭಾವ ದಿಂದಲೂ, ಕೂಡಿದ ವಿಧವೆಯೂ, ದಾರವನ್ನು ರಚಿಸಬಹುದು. ಕೆಟ್ಟನಡತೆಯುಳ್ಳ ಹೆಂಗಸು ಎಂದಿಗೂ ಪವಿತ್ರದ ದಾರವನ್ನು ಕತ್ತರಿಸಬಾರದು.

೫೦. ಸೂಜಿಯಿಂದ ಸೀಳಿಹೋಗಿರುವ, ಸುಟ್ಟಿರುವ, ಬೂದಿ, ಹೊಗೆ, ಇವ್ರ ಗಳಿಂದ ಬಣ್ಣಗೆಟ್ಟಿರುವ ದಾರವು ಈ ಪವಿತ್ರರಚನೆಗೆ ಅಯೋಗ್ಯವಾಗಿರುತ್ತದೆ. ಆದುದರಿಂದ ಅಂತಹವುಗಳನ್ನು ಉಪಯೋಗಿಸಬಾರದು.

ಉಪಯುಕ್ತಂ ಚಾಖುಜಗ್ಧಂ ಮದ್ಯರಕ್ತಾದಿದೂಷಿತಂ ।
ಮಲಿನಂ ನೀಲರಕ್ತಂ ಚ ಪ್ರಯತ್ನೇನ ವಿವರ್ಜಯೇತ್ ॥ ೫೧ ॥

ಸೂತ್ರೈಃ ಪವಿತ್ರಂ ಕುರ್ವೀತ ಕನಿಷ್ಠೋತ್ತಮಮಧ್ಯಮಂ ।
ಕನಿಷ್ಠಂ ಯತ್ಪವಿತ್ರಂ ತು ಸಪ್ತವಿಂಶತಿತಂತುಭಿಃ ॥ ೫೨ ॥

ಮರ್ತ್ಯಲೋಕೇ ಯಶಃ ಕೀರ್ತಿಃ ಸುಖಸೌಭಾಗ್ಯವರ್ಧನಂ ।
ಚತುಃಪಂಚಾಶತಾ ಪ್ರೋಕ್ತಂ ತಂತೂನಾಂ ಮಧ್ಯಮಂ ಪರಂ ॥ ೫೩ ॥

ದಿವ್ಯಭೋಗಾವಹಂ ಪುಣ್ಯಂ ಸ್ವರ್ಗಮೋಕ್ಷಪ್ರದಾಯಕಂ ।
ಉತ್ತಮಂ ಚೈವ ತಂತೂನಾಮಷ್ಟೋತ್ತರಶತೇನ ವೈ ॥ ೫೪ ॥

ತದ್ದತ್ತ್ವಾ ತು ಮಹಾದೇವ್ಯೈ ಶಿವಸಾಯುಜ್ಯಮಾಪ್ನುಯಾತ್ ।
ಉತ್ತಮಂ ವಾಸುದೇವಾಯ ದದ್ಯಾದ್ಯದಿ ಪವಿತ್ರಕಂ ॥ ೫೫ ॥

---

೫೧. ಒಂದುಸಾರಿ ಉಪಯೋಗಿಸಿದ, ಇಲಿಯು ಕಡಿದಿರುವ ಮದ್ಯ, ರಕ್ತ ಇವುಗಳಿಂದ ಅಪರಿಶುದ್ಧವಾದ ಕಪ್ಪು ಮತ್ತು ಕೆಂಪುಬಣ್ಣದಿಂದ ಕೂಡಿರುವ ದಾರವನ್ನು ಪವಿತ್ರಕ್ಕಾಗಿ ಉಪಯೋಗಿಸಬಾರದು.

೫೨-೫೪. ಉತ್ತಮ, ಮಧ್ಯಮ, ಕನಿಷ್ಠವೆಂದು ಪವಿತ್ರಗಳಲ್ಲಿ ಮೂರು ವಿಧವು. ಅವುಗಳಲ್ಲಿ ಇಪ್ಪತ್ತೇಳು ದಾರಗಳಿಂದ ಮಾಡಲ್ಪಟ್ಟ ಪವಿತ್ರವು ಭೂಮಿಯಲ್ಲಿ ಯಶಸ್ಸು, ಕೀರ್ತಿ, ಸುಖ, ಸೌಭಾಗ್ಯ ಇವುಗಳನ್ನು ಹೆಚ್ಚಿಸುವುದು. ಇದು ಕನಿಷ್ಠ ಪವಿತ್ರವೆನಿಸುವುದು. ಐವತ್ತುನಾಲ್ಕು ದಾರಗಳಿಂದ ಮಾಡಲ್ಪಟ್ಟ ಪವಿತ್ರವು ಮಧ್ಯಮವೆನಿಸಿಕೊಂಡು ಉತ್ತಮವಾದ ಭೋಗವನ್ನುಂಟುಮಾಡುವುದಲ್ಲದೆ ಪುಣ್ಯಕರವಾಗಿಯೂ, ಸ್ವರ್ಗ, ಮೋಕ್ಷ, ಇವುಗಳನ್ನು ಕೊಡುವುದಾಗಿಯೂ, ಇರುವುದು. ಒಂದುನೂರೆಂಟು ದಾರಗಳಿಂದ ಕೂಡಿದ ಪವಿತ್ರವು ಉತ್ತಮವೆನಿಸುವುದು. ಉತ್ತಮವಾದ ಪವಿತ್ರವನ್ನು ದೇವಿಗೆ ಸಮರ್ಪಿಸಿದಲ್ಲಿ ಅವನು ಶಿವಸಾಯುಜ್ಯವನ್ನು ಹೊಂದುವನು.

೫೫. ಉತ್ತಮವಾದ ಪವಿತ್ರವನ್ನು ವಿಷ್ಣುವಿಗೆ ಅರ್ಪಿಸಿದರೆ ಆಗ ಅವನು ವಿಷ್ಣುಲೋಕವನ್ನು ಹೊಂದುವುದರಲ್ಲಿ ಸಂದೇಹವಿಲ್ಲವು.

ತದಾ ಯಾತಿ ಹರೇರ್ಲೋಕಂ ಸಾಧಕೋ ನಾತ್ರ ಸಂಶಯಃ ।
ಅಷ್ಟೋತ್ತರಸಹಸ್ರಂ ತು ರತ್ನಮಾಲೇತಿ ಗೀಯತೇ ॥ ೫೬ ॥

ಪವಿತ್ರಂ ತು ಮಹಾದೇವ್ಯಾ ಭುಕ್ತಿಮುಕ್ತಿಪ್ರದಾಯಕಂ ।
ರತ್ನಮಾಲಾಂ ತು ಯೋ ಯಚ್ಛೇನ್ಮಹಾದೇವ್ಯೈ ಪವಿತ್ರಕಂ ॥ ೫೭ ॥

ಕೆಲ್ಪಕೋಟಿಸಹಸ್ರಾಣಿ ಸ್ವರ್ಗೇ ಸ್ಥಿತ್ವಾ ಶಿವೋ ಭವೇತ್ ।
ಏತತ್ತು ನಾಗಹಾರಾಖ್ಯಂ ಶಂಕರಸ್ಯ ಪವಿತ್ರಕಂ ॥ ೫೮ ॥

ಅಷ್ಟೋತ್ತರಸಹಸ್ರೇಣ ತಂತುನಾ ಸುಮನೋಹರಂ ।
ಯಃ ಪ್ರಯಚ್ಛತಿ ಮಹ್ಯಂ ತು ಸ ಯಾವಾನ್ ತಂತುಸಂಚಯಃ ॥ ೫೯ ॥

ತಾವತ್ಕಲ್ಪಸಹಸ್ರಾಣಿ ಮಮ ಲೋಕೇ ಪ್ರಮೋದತೇ ।
ಅಷ್ಟೋತ್ತರಸಹಸ್ರೇಣ ವನಮಾಲಾ ಪರೇಃ ಸ್ಮೃತಾ ॥ ೬೦ ॥

---

೫೬. ಸಾವಿರದೆಂಟು ದಾರಗಳಿಂದ ಮಾಡಿದ ಪವಿತ್ರವು ರತ್ನಮಾಲಾ ಎಂದು ಹೆಸರನ್ನು ಹೊಂದುವುದು. ಈ ಪವಿತ್ರವು ದೇವಿಗೆ ಅರ್ಪಿಸಿದ್ದಾದರೆ ಭುಕ್ತಿಮುಕ್ತಿಗಳನ್ನು ಕೊಡುವುದು.

೫೭. ಯಾವನು ರತ್ನಮಾಲೆಯೆಂಬ ಪವಿತ್ರವನ್ನು ಮಹಾದೇವಿಗೆ ಸಮರ್ಪಿಸುವನೋ ಅವನು ಅನೇಕಕೋಟಿಕಲ್ಪಗಳ ವರೆಗೂ ಸ್ವರ್ಗದಲ್ಲಿದ್ದು ಅನಂತರ ಶಿವಸಾಯುಜ್ಯವನ್ನು ಹೊಂದುವನು.

೫೮-೫೯. ಇದು ನಾಗಹಾರವೆಂದು ಹೆಸರುಳ್ಳದ್ದಾಗಿ ಈಶ್ವರನ ಪವಿತ್ರವಾಗಿರುವುದು. ಸಾವಿರದೆಂಟು ದಾರದಿಂದ ಮನೋಹರವಾಗಿ ರಚಿಸಿರುವ ಈ ಪವಿತ್ರಕ್ಕೆ ನಾಗಹಾರವೆಂದು ಹೆಸರು. ಇದು ಈಶ್ವರನಿಗೆ ಸಮರ್ಪಿಸುವ ಪವಿತ್ರವು. ಆದುದರಿಂದ ಅದನ್ನು ಯಾವನು ನನಗೆ ಒಪ್ಪಿಸುವನೋ ಅವನು ಆ ದಾರಗಳ ಸಂಖ್ಯೆಯು ಎಷ್ಟು ಇರುವುದೋ ಅಷ್ಟು ಸಾವಿರ ಕಲ್ಪಗಳು ಕಳೆಯುವ ತನಕ ನನ್ನ ಲೋಕದಲ್ಲಿ ಸುಖದಿಂದಿರುವನು.

೬೦. ಸಾವಿರದೆಂಟು ದಾರಗಳಿಂದ ಕೂಡಿರುವ ಪವಿತ್ರವು ವನಮಾಲೆಯೆಂಬ ಹೆಸರಿನಿಂದ ವಿಷ್ಣುವಿಗೆ ಪ್ರೀತಿಕರವಾಗಿರುವುದು. ಆ ಪವಿತ್ರವನ್ನು ವಿಷ್ಣುವಿಗೆ ಅರ್ಪಿಸುವುದರಿಂದ ವಿಷ್ಣುಸಾಯುಜ್ಯವನ್ನು ಹೊಂದುವನು.

ತಂತುನಾ ತಸ್ಯ ದಾನೇನ ವಿಷ್ಣುಸಾಯುಜ್ಯಮಾಪ್ನುಯಾತ್ ।
ಯತ್ಕನಿಷ್ಠಂ ಪವಿತ್ರಂ ತು ನಾಭಿಮಾತ್ರಂ ಭವೇತ್ತು ತತ್ ॥ ೬೧ ॥

ದ್ವಾದಶಗ್ರಂಥಿಸಂಯುಕ್ತಮಾತ್ಮಮಾನೇನ ಯೋಜಯೇತ್ ।
ಊರುಪ್ರಮಾಣಂ ಮಧ್ಯಂ ಸ್ಯಾದ್ಗ್ರಂಥೀನಾಂ ತತ್ರ ಯೋಜಯೇತ್ ॥

ಚತುರ್ವಿಂಶತಿಮುಪ್ಯಸ್ಯ ಮಾನಮಾತ್ಮನ ಏವ ಚ ।
ಪವಿತ್ರಮುತ್ತಮಂ ಪ್ರೋಕ್ತಂ ಜಾನುಮಾತ್ರಂ ತು ಭೈರವ ॥ ೬೩ ॥

ಷಟ್ತ್ರಿಂಶತ್ತತ್ತು ಗ್ರಂಥೀನಾಂ ಯೋಜಯೇದಾತ್ಮಮಾನತಃ ।
ಶತಮಷ್ಟೋತ್ತರಂ ಕಾರ್ಯಂ ಗ್ರಂಥೀನಾಂ ತು ವಿಧಾನತಃ ॥ ೬೪ ॥

ನಾಗಹಾರಾಹ್ವಯಂ ತದ್ವದನ್ಯೇಷು ಚ ವಿಧಾನತಃ ।
ಪವಿತ್ರಂ ಕ್ರಿಯತೇ ಯೇನ ಸೂತ್ರೇಣ ಗ್ರಂಥಯಃ ಪುನಃ ॥ ೬೫ ॥

ತದನ್ಯವರ್ಣಸೂತ್ರೇಣ ಕರ್ತವ್ಯಾ ಲಕ್ಷಣಾನ್ವಿತಾ ।
ಗ್ರಂಥಿಸ್ತು ಸಪ್ತಭಿಃ ಕುರ್ಯಾದ್ವೇಷ್ಟನೈಸ್ತು ಕನಿಷ್ಠಕೇ ॥ ೬೬ ॥

---

೬೧. ಕನಿಷ್ಠಪವಿತ್ರವು ನಾಭಿಪ್ರಮಾಣದಿಂದ ಇರಬೇಕು. ಇದು ಹನ್ನೆರಡು ಗ್ರಂಥಿಗಳಿಂದ ಕೂಡಿಕೊಂಡು ಇರುವಂತೆ ತನ್ನ ಅಳತೆಗೆ ಸರಿಯಾಗಿರುವಂತೆ ನೇರಿಸ ಬೇಕು.

೬೨-೬೩. ಮಧ್ಯಮ ಪವಿತ್ರದ ಪ್ರಮಾಣವು ತನ್ನ ತೊಡೆಯವರೆಗೆ ಇರಬೇಕು ಇಪ್ಪತ್ತುನಾಲ್ಕು ಗ್ರಂಥಿಗಳಿಂದ ಕೂಡಿರುವಂತೆ ಕಟ್ಟಬೇಕು. ಎಲೈ ಭೈರವನೇ ಕೇಳು-ಯಾವಪವಿತ್ರವು ತನ್ನ ಅಳತೆಗೆ ಮೂವತ್ತಾರು ಗಂಟುಗಳಿಂದ ಕೂಡಿದ್ದಾಗಿರುವುದೋ ಮತ್ತು ಮಂಡಿಯವರಿಗೂ ಬರುವಂತೆ ಇರುವುದೋ ಅದು ಉತ್ತಮವಾದ ಪವಿತ್ರ ವೆನಿಸುವುದು.

೬೪. ಶಾಸ್ತ್ರಕ್ರಮದಿಂದ ನೂರೆಂಟು ಗ್ರಂಥಿಗಳನ್ನು ಮಾಡಬೇಕು. ಈ ರೀತಿ ಯಾದ ಪವಿತ್ರವು ನಾಗಹಾರವೆನಿಸುವುದು.

೬೫-೬೬. ಪವಿತ್ರವನ್ನು ಒಂದು ವರ್ಣದ ಸೂತ್ರದಿಂದಲೂ, ಗ್ರಂಥಿಗಳನ್ನು ಬೇರೇ ಬಣ್ಣದ ದಾರಗಳಿಂದಲೂ ಮಾಡಬೇಕು, ಮತ್ತು ಕನಿಷ್ಠ ಪವಿತ್ರವನ್ನು ಏಳು ಸುತ್ತಿನ ಗ್ರಂಥಿ (ಗಂಟು) ಯಿಂದ ಮಾಡಬೇಕು.

ದ್ವಿಗುಣೈರ್ಮಧ್ಯಮೇ ಕುರ್ಯಾತ್ತ್ರಿಗುಣೈರುತ್ತಮೇ ತಥಾ ।
ಅಧಿವಾಸ್ಯ ಪವಿತ್ರಾಣಿ ಪೂರ್ವಸ್ಮಿನ್ ದಿವಸೇ ತತಃ ॥ ೬೭ ॥

ಮಂತ್ರನ್ಯಾಸಂ ಪವಿತ್ರೇ ತು ಕುರ್ಯಾತ್ತತ್ರಾಪರೇऽಹನಿ ।
ದುರ್ಗಾಬೀಜೇನ ಮಂತ್ರೇಣ ಬೀಜನ್ಯಾಸಂ ದ್ವಿಜಶ್ಚರೇತ್ ॥ ೬೮ ॥

ವೈಷ್ಣವೀತಂತ್ರಮಂತ್ರೇಣ ಕುರ್ಯುರನ್ಯೇ ಚ ಭೈರವ ।
ಪ್ರತಿಗ್ರಂಥಿ ಸ್ವಯಂ ಕುರ್ಯಾನ್ಮಂತ್ರನ್ಯಾಸಂ ವಿಚಕ್ಷಣಃ ॥ ೬೯ ॥

ಅಂಗುಷ್ಠಾಗ್ರೇಣ ಜಪನಂ ಮಾಲಾಯಾಮಿಹ ಭೈರವ ।
ಯಾವಂತೋ ಗ್ರಂಥಯಶ್ಚಾತ್ರ ತಾವಂತ್ಯೇವ ಚ ಸನ್ನ್ಯಸೇತ್ ॥ ೭೦ ॥

---

೬೭. ಮಧ್ಯಮ ಪವಿತ್ರವನ್ನು ಮಾಡುವುದರಲ್ಲಿ ಕನಿಷ್ಠ ಪವಿತ್ರಕ್ಕಿಂತ ಎರಡ ರಷ್ಟು ದಾರಗಳನ್ನು ಉಪಯೋಗಿಸಿ ಗಂಟುಗಳನ್ನು ಹಾಕಬೇಕು. ಉತ್ತಮವಾದ ಪವಿ ತ್ರವನ್ನು ಮಾಡಬೇಕಾದರೆ ಮೂರರಷ್ಟು ದಾರವನ್ನು ಉಪಯೋಗಿಸಿ ಪವಿತ್ರವನ್ನು ಮಾಡಬೇಕು. ಹಿಂದಿನ ದಿವಸವಲ್ಲಿ ಪವಿತ್ರಗಳನ್ನು ಅಧಿವಾಸನೆ ಯೆಂಬ ಕರ್ಮದಿಂದ ಶುದ್ಧಿಗೊಳಿಸಿ ಮಾರನೆಯ ದಿವಸ ಪವಿತ್ರದಲ್ಲಿ ಮಂತ್ರನ್ಯಾಸವನ್ನು ಮಾಡಬೇಕು. ಅಧಿವಾಸವೆಂದರೆ, ಪವಿತ್ರವನ್ನು ನೀರಿನಲ್ಲಿ ಒಂದು ರಾತ್ರಿಯ ಕಾಲ ಇಟ್ಟಿದ್ದು ಪೂಜಾದಿ ಗಳಿಂದಲೂ ಮಂತ್ರಗಳಿಂದಲೂ ಸತ್ಕರಿಸುವುದು. ಇದಕ್ಕೆ ಜಲಾಧಿವಾಸವೆಂದು ಹೆಸರು. ಇದರಂತೆಯೇ ಹಾಲಿನಲ್ಲಿ ಇಡುವುದು ಕ್ಷೀರಾಧಿವಾಸವೆಂತಲೂ, ಧಾನ್ಯದಲ್ಲಿಡುವುದು ಧಾನ್ಯಾಧಿವಾಸವೆಂತಲೂ, ಅನೇಕವಿಧವಾದ ಅಧಿವಾಸ ಕ್ರಮಗಳಿರುವವು.

೬೮. ದ್ವಿಜನಾದವನು ದುರ್ಗಾಬೀಜಮಂತ್ರದಿಂದ ಬೀಜನ್ಯಾಸವನ್ನು ಮಾಡ ಬೇಕು. ಎಲ್ಲೆ ಭೈರವನೇ, ವೈಷ್ಣವೀತಂತ್ರದಲ್ಲಿ ಹೇಳಿದ ಮಂತ್ರಗಳಿಂದ ಇತರರು ಬೀಜನ್ಯಾಸವನ್ನು ಮಾಡಬೇಕು.

೬೯. ಬುದ್ಧಿವಂತನಾದ ಸಾಧಕನು ತಾನು ಪವಿತ್ರದ ಪ್ರತಿಯೊಂದು ಗ್ರಂಥಿ ಯನ್ನೂ ಅಂಗುಷ್ಠದ ತುದಿಯಿಂದ ಹಿಡಿದುಕೊಂಡು ಮಂತ್ರನ್ಯಾಸವನ್ನೂ ಜಪವನ್ನೂ ಮಾಡಬೇಕು.

೭೦. ಪವಿತ್ರದಲ್ಲಿ ಎಷ್ಟುಗ್ರಂಥಿಗಳು ಇರುವವೋ ಅಷ್ಟು ಗ್ರಂಥಿಗಳಿಗೂ ಬೀಜಾ ಕ್ಷರನ್ಯಾಸವನ್ನು ಹೀಗೆ ಮಾಡಿದನಂತರ ಆ ಪವಿತ್ರದ ಮಂತ್ರಗಳನ್ನು ದೇವರ ಅಂಗಕ್ಕೆ ಉಪಯೋಗಿಸಿದಂತೆ ಆಗುವುದು.

ಮಂತ್ರಾಣಿ ತಸ್ಯ ತೇನ ಸ್ಯಾದೇವಾಂಗೋಪನಿಯೋಜನಂ ।
ದುರ್ಗಾತಂತ್ರೇಣ ಮಂತ್ರೇಣ ತತ್ತ್ವನ್ಯಾಸಂ ತು ಕಾರಯೇತ್ ॥ ೭೧ ॥

ಏಕತ್ರ ನ್ಯಸ್ಯ ಸಕಲಂ ಯಜ್ಞಪಾತ್ರೇ ಪವಿತ್ರಕಂ ।
ತಸ್ಮಿನ್ನಿಧಾಯ ಗಂಧಾದಿ ಪುಷ್ಪಾಣಿ ಚ ಸುಶೋಭನಂ ॥ ೭೨ ॥

ತತ್ತ್ವನ್ಯಾಸಂ ತತಃ ಕುರ್ಯಾದಂಗುಲ್ಯಗ್ರೇಣ ಭೈರವ ।
ವಿಷ್ಣೋಸ್ತು ಮೂಲಮಂತ್ರೇಣ ತತ್ತ್ವನ್ಯಾಸಂ ತು ಕಾರಯೇತ್ ॥ ೭೩ ॥

ಇದಂ ವಿಷ್ಣುರಿತಿ ಪ್ರೋಕ್ತಂ ಮಂತ್ರನ್ಯಾಸಂ ದ್ವಿಜಸ್ಯ ಹಿ ।
ಶೂದ್ರಾಣಾಂ ಮಂತ್ರವಿನ್ಯಾಸೇ ಮಂತ್ರೋ ವೈ ದ್ವಾದಶಾಕ್ಷರಃ ॥ ೭೪ ॥

ಪ್ರಾಸಾದೇನ ತು ಮಂತ್ರೇಣ ತತ್ತ್ವನ್ಯಾಸೋ ಮಮ ಸ್ಮೃತಃ ।
ಅನೇನ ಮಂತ್ರನ್ಯಾಸಂ ಚ ದಾನಂ ಚಾನೇನ ಕಾರಯೇತ್ ॥ ೭೫ ॥

ಕುಂಕುಮೋಶೀರ ಖರ್ಜೂರೈಶ್ಚಂದನಾದಿವಿಲೇಪನೈಃ ।
ಪವಿತ್ರಾಣಿ ವಿಲಿಪ್ಯಾಥ ತತ್ತ್ವನ್ಯಾಸಂ ತು ಯೋಜಯೇತ್ ॥ ೭೬ ॥

೭೧-೭೨. ಎಲೈ ಭೈರವನೇ, ಕೇಳು--ದುರ್ಗಾತಂತ್ರದಲ್ಲಿ ಹೇಳಿರುವ ಮಂತ್ರದಿಂದ ತತ್ತ್ವನ್ಯಾಸವನ್ನು ಮಾಡಬೇಕು. ಪೂಜಾಪಾತ್ರೆಯಲ್ಲಿ ಪವಿತ್ರವನ್ನು ಒಂದು ಕಡೆಯಲ್ಲಿಟ್ಟು ಅದರ ಮೇಲೆ ಮಂಗಳಕರವಾದ ಗಂಧ, ಹೂವು, ಇವೇ ಮೊದಲಾದ ಪೂಜಾದ್ರವ್ಯವನ್ನು ಇರಿಸಿದನಂತರ ಬೆರಳಿನ ತುದಿಯಿಂದ ತತ್ವನ್ಯಾಸವನ್ನು ಸಾಧಕನಾದವನು ಮಾಡಬೇಕು.

೭೩-೭೪. ವಿಷ್ಣುವಿಗೂ ಮೂಲಮಂತ್ರದಿಂದ ತತ್ವನ್ಯಾಸವನ್ನು ಮಾಡತಕ್ಕದ್ದು. ದ್ವಿಜರಾದವರಿಗೆ " ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇ ಪದಂ । ಸಮೂಳ್ಹಮಸ್ಯಪಾಂಸುರೇ॥ " ಎಂಬ ಮಂತ್ರವು ನ್ಯಾಸಕ್ಕೆ ಉಕ್ತವಾಗಿರುವುದು ಶೂದ್ರರಿಗೆ ಮಂತ್ರವಿನ್ಯಾಸದ ವಿಷಯದಲ್ಲಿ ದ್ವಾದಶಾಕ್ಷರ ಮಂತ್ರವು ಉಕ್ತವಾಗಿರುವುದು. ಪ್ರಾಸಾದ ಮಂತ್ರದಿಂದ ನನಗೆ ಈಶ್ವರ ತತ್ತ್ವ ನ್ಯಾಸವನ್ನು ಮಾಡಬೇಕು.

೭೫-೭೬. ಈ ಮಂತ್ರದಿಂದ ಮಂತ್ರನ್ಯಾಸವನ್ನೂ ದಾನವನ್ನೂ ಮಾಡಬೇಕು. ದಾನವೆಂದರೆ ಪೂಜಾಪಾತ್ರೆಯಲ್ಲಿರುವ ಪವಿತ್ರವನ್ನು ತನ್ನ ಕೈಗೆ ತೆಗೆದುಕ್ಕೊಳ್ಳುವುದು. ಬಳಿಕ ಕುಂಕುಮ, ಕೇಸರಿ, ಲಾವಂಚ, ಖರ್ಜೂರ, ಚಂದನ ಇವೇ ಮೊದಲಾದ ಸುಗಂಧದ್ರವ್ಯಗಳಿಂದ ಪವಿತ್ರಗಳನ್ನು ಲೇಪನಮಾಡಿ ಅನಂತರ ತತ್ತ್ವನ್ಯಾಸವನ್ನು ಮಾಡಬೇಕು.

ಸಂಪೂಜ್ಯ ಮಂಡಲೇ ದೇವೀಂ ವಿಧಿವತ್ಪ್ರಯತೋ ನರಃ ।
ವೈಷ್ಣವೀತಂತ್ರಮಂತ್ರೇಣ ದುರ್ಗಾತಂತ್ರೇಣ ಭೈರವ ॥ ೭೭ ॥

ದುರ್ಗಾಬೀಜೇನ ದದ್ಯಾತ್ತು ದೇವ್ಯಾ ಮೂರ್ಧ್ನಿ ಪವಿತ್ರಕಂ ।
ಯಸ್ಯ ದೇವಸ್ಯ ಯಃ ಪ್ರೋಕ್ತಸ್ತಸ್ಯ ತೇನೈವ ಮಂಡಲಂ ॥ ೭೮ ॥

ಯಸ್ಯ ಯಸ್ಯ ತು ಯೋ ಮಂತ್ರೋ ಯಥಾ ಧ್ಯಾನಾದಿಪೂಜನಂ ।
ತತ್ತತ್ತೇನೈವ ಮಂತ್ರೇಣ ಪೂಜಯಿತ್ವಾ ಪ್ರಯತ್ನತಃ ॥ ೭೯ ॥

ತಸ್ಯೈವ ಬೀಜಮಂತ್ರಾಭ್ಯಾಂ ಮೂರ್ಧ್ನಿ ದದ್ಯಾತ್ಪವಿತ್ರಕಂ ।
ಪವಿತ್ರಂ ಮಮ ಯೋ ದದ್ಯಾದ್ದೇವೇಭ್ಯಶ್ಚ ಪವಿತ್ರಕಂ ॥ ೮೦ ॥

ಸರ್ವೇಷಾಮೇವ ದೇವಾನಾಂ ಸಂಪೂರ್ಣಾರ್ಥಶ್ಚ ಭೈರವ ।
ಅಗ್ನಿರ್ಬ್ರಹ್ಮಾ ಭವಾನೀ ಚ ಗಜವಕ್ತ್ರೋ ಮಹೋರಗಃ ॥ ೮೧ ॥

---

೭೭. ಸಾಧಕನು ಭಕ್ತಿಪೂರ್ವಕವಾಗಿ ದೇವಿಯನ್ನು ಶಾಸ್ತ್ರಕ್ರಮದಿಂದ ಮಂಡಲದಲ್ಲಿ ಪೂಜಿಸಬೇಕು. ವೈಷ್ಣವೀ ತಂತ್ರದಲ್ಲಿ ಉಕ್ತವಾದ ಮಂತ್ರದಿಂದಲೂ, ದುರ್ಗಾತಂತ್ರದಿಂದಲೂ ಸಹ ದೇವಿಯನ್ನು ಪೂಜಿಸಿದನಂತರ ದೇವಿಯ ಶಿರಸ್ಸಿನಲ್ಲಿ ದುರ್ಗಾಬೀಜದಿಂದ ಪವಿತ್ರವನ್ನು ಸಮರ್ಪಿಸಬೇಕು.

೭೮-೭೯. ಯಾವ ಯಾವ ದೇವತೆಗೆ ಯಾವ ಮಂಡಲ, ಪವಿತ್ರ, ಮಂತ್ರ, ಧ್ಯಾನ, ಪೂಜೆ ಮೊದಲಾದವುಗಳು ಉತ್ತಮವಾಗಿರುವವೋ ಆಯಾ ದೇವತೆಗಳಿಗೆ ಆಯಾ ಮಂಡಲ, ಪವಿತ್ರ, ಮಂತ್ರ, ಧ್ಯಾನ, ಪೂಜೆಗಳಿಂದ ಭಕ್ತಿಪೂರ್ವಕವಾಗಿ ಪೂಜಿಸಿ ಆಯಾ ದೇವತೆಯ ಬೀಜಮಂತ್ರಗಳಿಂದ ಆಯಾ ದೇವತೆಯ ಶಿರಸ್ಸಿನಲ್ಲಿ ಪವಿತ್ರವನ್ನು ಸಮರ್ಪಿಸಬೇಕು.

೮೦. ಎಲೈ ಭೈರವನೇ ಕೇಳು, ನನಗೆ ಪವಿತ್ರವನ್ನು ಕೊಟ್ಟು, ಬಳಿಕ ದೇವತೆಗಳಿಗೆ ಪವಿತ್ರವನ್ನು ಕೊಟ್ಟರೆ ಎಲ್ಲಾ ದೇವತೆಗಳಿಗೂ ಪವಿತ್ರವು ಕೊಟ್ಟಂತೆ ಸಂಪೂರ್ಣವಾದ ಫಲವು ಉಂಟಾಗುವುದು.

೮೧-೮೨. ಅಗ್ನಿ, ಬ್ರಹ್ಮ, ಪಾರ್ವತಿ, ಆದಿಶೇಷ, ಷಣ್ಮುಖ, ಸೂರ್ಯ, ಮಾತೃ

ಸ್ಕಂದೋ ಭಾನುರ್ಮೃಗಃಶೋ ದಿಕ್ಪಾಲಾಶ್ಚ ನವಗ್ರಹಾಃ ।
ಏತಾ ಘಟೇಷು ಪ್ರತ್ಯೇಕಂ ಪೂಜಯಿತ್ವಾ ಯಥಾವಿಧಿ ॥ ೮೨ ॥

ಪವಿತ್ರಂ ಮೂರ್ಧ್ನಿ ಚೈಕೈಕಂ ದದ್ಯಾದೇಭ್ಯಃ ಸಮೂಹಿತಃ ।
ಪಂಚಗವ್ಯಂ ಚರುಂ ಕೃತ್ವಾ ದೇವ್ಯೈ ದತ್ವಾಹುತಿತ್ರಯಂ ॥ ೮೩ ॥

ತೇನೈವ ವಿಷ್ಣವೇ ದತ್ವಾ ಶಂಭವೇ ಚ ಯಥಾವಿಧಿ ।
ಆಜ್ಯೈರಷ್ಟೋತ್ತರಶತಂ ತಿಲೈರಾಜ್ಯೈಸ್ತಥೈವ ಚ ॥ ೮೪ ॥

ಅಷ್ಟೋತ್ತರಶತಂ ದದ್ಯಾನ್ಮಹಾದೇವ್ಯೈ ಚ ಸಾಧಕಃ ।
ಏವಮೇವ ವಿಧಾನೇನ ವಿಷ್ಣ್ವಾದೀನಾಂ ಚ ಸಾಧಕಃ ॥ ೮೫ ॥

ಪವಿತ್ರಾರೋಪಣಂ ಕುರ್ಯಾದ್ಧರ್ಮಕಾಮಾರ್ಥಸಿದ್ಧಯೇ ।
ನೈವೇದ್ಯೈರ್ವಿವಿಧೈಃ ಪೇಯೈರ್ವಟಪಿಷ್ಟಕಮೋದಕೈಃ ॥ ೮೬ ॥

ಕೂಷ್ಮಾಂಡೈರ್ನಾರಿಕೇಲೈಶ್ಚ ಖರ್ಜೂರೈಃ ಪನಸೈಸ್ತಥಾ ।
ಆಮ್ರದಾಡಿಮಕರ್ಕಾರುದ್ರಾಕ್ಷಾದಿವಿವಿಧೈಃ ಫಲೈಃ ॥ ೮೭ ॥

ಕಾಗಣ, ದಿಕ್ಪಾಲಕರು, ನವಗ್ರಹಗಳು ಇವರನ್ನು ಬೇರೆ ಬೇರೆ ಕಲಶಗಳಲ್ಲಿ ಪೂಜಿಸಿ ಬೇರೆ ಬೇರೆಯಾಗಿ ಒಂದೊಂದು ಪವಿತ್ರವನ್ನೂ ಇವರುಗಳ ಶಿರಸ್ಸಿನಲ್ಲಿ ಒಪ್ಪಿಸಬೇಕು.

೮೩-೮೪. ಪಂಚಗವ್ಯವನ್ನು ಮಾಡಿದನಂತರ, ಚರುವನ್ನು ಮಾಡಿ ದೇವಿಗೆ ಮೂರುಸಾರಿ ಆಹುತಿಗಳನ್ನು ಕೊಟ್ಟು ಘೃತದಿಂದ ನೂರೆಂಟು ಹೋಮವನ್ನು ಶಾಸ್ತ್ರೋಕ್ತ ಕ್ರಮದಂತೆ ಮಾಡಿ, ಸಾಧಕನು ದೇವಿಗಾಗಿ ಎಳ್ಳು, ತುಪ್ಪ ಇವುಗಳಿಂದ ನೂರೆಂಟು ಹೋಮವನ್ನು ಮಾಡಬೇಕು.

೮೫. ಸಾಧಕನಾದವನು ಧರ್ಮ, ಕಾಮ, ಅರ್ಥ ಇವುಗಳು ಸಿದ್ಧಿಸುವುದಕ್ಕಾಗಿ ವಿಷ್ಣುವೇ ಮೊದಲಾದ ದೇವತೆಗಳಿಗೆ ಇದೇ ಕ್ರಮದಿಂದ ಪವಿತ್ರಾರೋಪಣೆಯನ್ನು ಮಾಡಬೇಕು.

೮೬-೮೭. ಅನೇಕವಿಧವಾದ ನೈವೇದ್ಯಗಳಿಂದಲೂ ವಡೆ, ತಂಬಿಟ್ಟು, ಕಡಬು, ಕುಂಬಳಕಾಯಿ, ತೆಂಗಿನಕಾಯಿ ಖರ್ಜೂರ, ಹಲಸಿನಹಣ್ಣು ಮಾವಿನಹಣ್ಣು ದಾಳಿಂಬೀ ಹಣ್ಣು, ಕ್ರಮಾಕ್ಷದಹಣ್ಣು, ದ್ರಾಕ್ಷಿ ಇವೇ ಮೊದಲಾದ ಹಣ್ಣುಗಳಿಂದಲೂ ಭಕ್ಷ್ಯ ಭೋಜ್ಯವೇ ಮೊದಲಾದವುಗಳಿಂದಲೂ, ಎಲ್ಲಾವಿಧವಾದ ಮೀನು ಮಾಂಸ ಅನ್ನ

ಭಕ್ಷ್ಯಭೋಜ್ಯಾದಿಭಿಃ ಸರ್ವೈರ್ಮಾಂಸೈಶ್ಚಾರ್ಮಾಂಸೈಸ್ತಥೋದನೈಃ ।
ಗಂಧೈಃ ಪುಷ್ಪೈಸ್ತಥಾಧೂಪೈರ್ದೀಪೈಶ್ಚ ಸುಮನೋಹರೈಃ ।
ವಾಸೋಭಿರ್ಭೂಷಣೈಶ್ಚೈವ ಭವಾನೀಸಾಧಕೋ ಜಪೇತ್ ॥ ೮೮ ॥

ನಟನರ್ತಕಸಂಘೈಶ್ಚ ವೇಶ್ಯಾಭಿಶ್ಚೈವ ಭೈರವ ।
ನೃತ್ತ್ಯಗೀತೈಃ ಸಮುದಿತೋ ಜಾಗರಂ ಕಾರಯೇನ್ನಿಶಿ ॥ ೮೯ ॥

ಭೋಜಯೇದ್ಬ್ರಾಹ್ಮಣಾಂಶ್ಚಾಪಿ ಜ್ಞಾತೀನಪಿ ದ್ವಿಜಾತಿಭಿಃ ।
ಪವಿತ್ರಾರೋಪಣೇ ವೃತ್ತೇ ದಕ್ಷಿಣಾಮುಪಪಾದಯೇತ್ ॥ ೯೦ ॥

ಹಿರಣ್ಯಂ ಗಾಂ ತಿಲಘೃತಂ ವಾಸೋ ವಾ ಶಾಕಮೇವ ವಾ ।
ಇಮಂ ಮಂತ್ರಂ ತತಃ ಪಶ್ಚಾತ್ಸಾಧಕಃ ಸಮುದೀರಯೇತ್ ॥ ೯೧ ॥

ಮಣಿವಿದ್ರುಮಮಾಲಾಭಿರ್ಮಂದಾರಕುಸುಮಾದಿಭಿಃ ।
ಇಯಂ ಸಾಂವತ್ಸರೀ ಪೂಜಾ ತವಾಸ್ತು ಪರಮೇಶ್ವರಿ ॥ ೯೨ ॥

ಇವುಗಳಿಂದಲೂ, ಮನೋಹರವಾದ ಗಂಧ, ಹೂವು, ಧೂಪ, ದೀಪ, ಇವುಗಳಿಂದಲೂ ಅನೇಕವಿಧವಾದ ಪೀತಾಂಬರವೇ ಮೊದಲಾದ ವಸ್ತ್ರಗಳಿಂದಲೂ, ಆಭರಣಗಳಿಂದಲೂ ಸಹ ಸಾಧಕನು ದೇವಿಯನ್ನು ಪೂಜಿಸಬೇಕು.

೮೯. ನಟರೂ, ನರ್ತಕರೂ, ಸೂಳೆಯರೂ, ಇವರುಗಳ ಸಹಾಯದಿಂದ ರಾತ್ರಿಯಲ್ಲಿ ನೃತ್ಯ ಗೀತಗಳಿಂದ ಸಂತೋಷವಾಗಿ ಜಾಗರಣೆಯನ್ನು ಮಾಡಬೇಕು.

೯೦. ಪವಿತ್ರಾರೋಪಣೆಯು ನಡೆದನಂತರ ಸಾಧಕನು ಬ್ರಾಹ್ಮಣರನ್ನೂ ತನ್ನ ಜ್ಞಾತಿಗಳನ್ನೂ, ದ್ವಿಜರನ್ನೂ ಸಹ ಕರೆದು ಅವರಿಗೆ ಅನ್ನದಾನವನ್ನು ಮಾಡಿ ಎಲ್ಲರಿಗೂ ದಕ್ಷಿಣೆಯನ್ನು ಕೊಡಬೇಕು.

೯೧. ಚಿನ್ನ, ಹಸು, ಎಳ್ಳು, ತುಪ್ಪ, ಬಟ್ಟೆ, ತರಕಾರಿ, ಇವುಗಳನ್ನಾಗಲಿ ದಕ್ಷಿಣೆಯನ್ನಾಗಿ ಕೊಟ್ಟನಂತರ ಸಾಧಕನಾದವನು ಈ ಮುಂದೆ ಹೇಳುವ ಮಂತ್ರವನ್ನು ಹೇಳಬೇಕು.

೯೨. ರತ್ನ, ಹವಳ, ಇವುಗಳ ಹಾರಗಳಿಂದಲೂ, ಮಂದಾರ ಪುಷ್ಪವೇ ಮೊದಲಾದ ಹೂವುಗಳಿಂದಲೂ ಕೂಡ ಈಗ ನಾನು ಸಾಂವತ್ಸರಿಕ ಪೂಜೆಯನ್ನು ಮಾಡಿರುವೆನು. ಎಲೈ ಪರಮೇಶ್ವರಿಯೇ, ಇದು ನಿನಗೆ ಪ್ರೀತಿಯನ್ನುಂಟುಮಾಡಲಿ, ಎಂದು ದೇವಿಯನ್ನು ಪ್ರಾರ್ಥನೆ ಮಾಡಿದನಂತರ ದೇವಿಯನ್ನು ಪುನಃಪೂಜೆಗಳಿಂದಲೂ, ಪ್ರತಿಪತ್ತಿಕರ್ಮಗಳಿಂದಲೂ ವಿಸರ್ಜನೆಯನ್ನು ಮಾಡಬೇಕು.

ತತೋ ವಿಸರ್ಜಯೇದ್ದೇವೀಂ ಪೂಜಾಭಿಃ ಪ್ರತಿಪತ್ತಿಭಿಃ ।
ಏವಂ ಕೃತೇ ಪವಿತ್ರಾಣಾಂ ದಾನೇ ದೇವ್ಯಾ ಯಥಾವಿಧಿ ॥ ೯೩ ॥

ಸಂವತ್ಸರಸ್ಯ ಯಾ ಪೂಜಾ ಸಂಪೂರ್ಣಾ ವತ್ಸರಾದ್ಭವೇತ್ ।
ಕಲ್ಪಕೋಟಿಶತಂ ಯಾವದ್ದೇವೀಗೇಹೇ ವಸೇನ್ನರಃ ॥ ೯೪ ॥

ತತ್ರಾಪಿ ಸುಖಸೌಭಾಗ್ಯಸಮೃದ್ಧಿರತುಲಾ ಭವೇತ್ ॥ ೯೫ ॥

॥ಇತಿ ಶ್ರೀ ಕಾಲಿಕಾಪುರಾಣೇ ಏಕಷಷ್ಟಿತಮೋಽಧ್ಯಾಯಃ॥

೯೩-೯೫. ಈರೀತಿ ಶಾಸ್ತ್ರಾನುಸಾರವಾಗಿ ದೇವಿಯ ಪವಿತ್ರಾರೋಪಣ ವಿಧಿಯನ್ನು ಆಚರಿಸಿದರೆ ಸಂವತ್ಸರದ ಪೂಜೆಯು ಸಂಪೂರ್ಣವಾಗುವುದು. ಹೀಗೆ ಪೂಜೆಯನ್ನು ಮಾಡಿದವರು ಈ ಲೋಕದಲ್ಲಿ ಅನೇಕ ಸುಖ ಸೌಭಾಗ್ಯಗಳನ್ನು ಅನುಭವಿಸಿ ಬಳಿಕ ದೇವಿಯ ಲೋಕದಲ್ಲಿ ಅನೇಕಕೋಟಿ ಕಲ್ಪಗಳವರೆಗೆ ವಾಸಮಾಡುವರು.

ಇಲ್ಲಿಗೆ ಕಾಲಿಕಾಪುರಾಣದಲ್ಲಿ ಅರವತ್ತೊಂದನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ದ್ವಿಷಷ್ಟಿತಮೋऽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ದುರ್ಗಾತಂತ್ರೇಣ ಮಂತ್ರೇಣ ಕುರ್ಯಾದ್ದುರ್ಗಾಮಹೋತ್ಸವಂ ।
ಮಹಾನವಮ್ಯಾಂ ಶರದಿ ಬಲಿದಾನಂ ನೃಪಾದಯಃ ॥ ೧ ॥

ಆಶ್ವಿನಸ್ಯ ತು ಶುಕ್ಲಸ್ಯ ಭವೇದ್ಯಾ ಅಷ್ಟಮೀತಿಥಿಃ ।
ಮಹಾಷ್ಟಮೀತಿ ಸಾ ಪ್ರೋಕ್ತಾ ದೇವ್ಯಾಃ ಪ್ರೀತಿಕರಾ ಪರಾ ॥ ೨ ॥

ತತೋऽನು ನವಮೀ ಯಾ ಸ್ಯಾತ್ಸಾ ಮಹಾನವಮೀ ಸ್ಮೃತಾ ।
ಸಾ ತಿಥಿಃ ಸರ್ವಲೋಕಾನಾಂ ಪೂಜನೀಯಾ ಶಿವಪ್ರಿಯಾ ॥ ೩ ॥

ಅರವತ್ತೆರಡನೆಯ ಅಧ್ಯಾಯವು.

೧. ಭಗವಾನ್ ಶಂಕರನು ಹೇಳಲುಪಕ್ರಮಿಸಿದನು:—ರಾಜರೇ ಮೊದಲಾದವರು ಶರದೃತುವಿನಲ್ಲಿ ಆಶ್ವಯುಜ ಪ್ರತಿಪದ್ದಿವಸದಿಂದ ಪ್ರಾರಂಭ ಮಾಡಿ ದುರ್ಗಾದೇವಿಯ ಮಹೋತ್ಸವವನ್ನು ದುರ್ಗಾತಂತ್ರದಲ್ಲಿ ಹೇಳಿರುವಂತೆ ವಿಧಿಪೂರ್ವಕವಾಗಿಯೂ, ಮಂತ್ರಪುರಸ್ಸರವಾಗಿಯೂ ಮಾಡಿ ಮಹಾನವಮಿಯಲ್ಲಿ ಬಲಿದಾನವನ್ನು ಆಚರಿಸಬೇಕು.

೨. ಆಶ್ವಯುಜ ಮಾಸದ ಶುಕ್ಲಪಕ್ಷದ ಅಷ್ಟಮೀ ತಿಥಿಗೆ ಮಹಾಷ್ಟಮೀ ಎಂದು ಹೆಸರು. ಅದು ದೇವಿಗೆ ತುಂಬ ಪ್ರೀತಿಕರವಾದುದು.

೩. ಆ ಅಷ್ಟಮಿಯ ಮಾರನೇದಿನವಾದ ನವಮಿಗೆ ಮಹಾನವಮಿ ಎಂದು ಹೇಳುವರು. ಆ ನವಮೀ ತಿಥಿಯು ದೇವಿಗೆ ಅತ್ಯಂತ ಪ್ರೀತಿಕರವಾದುದರಿಂದ ಸಮಸ್ತ ಜನರಿಗೂ ಪೂಜ್ಯವಾದದ್ದು.

ಅನಯೋರ್ವತ್ಸ ಪೂಜಾಯಾಂ ವಿಶೇಷಂ ಶೃಣು ಭೈರವ ।
ಸಂಪೂಜ್ಯ ಮಂಡಲೇ ದೇವೀಂ ವಿಧಿವತ್ಪ್ರಯತೋ ನರಃ ॥ ೪ ॥

ವೈಷ್ಣವೀತಂತ್ರಮಂತ್ರೇಣ ದುರ್ಗಾತಂತ್ರೇಣ ಭೈರವ ।
ಮೂರ್ತಿಭೇದೇ ಯಥಾ ದೇವೀ ಪೂಜಾಂ ಗೃಹ್ಣಾತಿ ಭೂತಯೇ ॥ ೫ ॥

ಕನ್ಯಾಸಂಸ್ಥೇ ರವೌ ವತ್ಸ ಶುಕ್ಲಾಮಾರಭ್ಯ ನಂದಿಕಾಂ ।
ಅಯಾಚಿತಾಶೀ ನಕ್ತಾಶೀ ಏಕಾಶೀ ತ್ವಥ ಚಾಪದಃ
ಪ್ರಾತಃಸ್ನಾಯೀ ಜಿತದ್ವಂದ್ವಸ್ತ್ರಿಕಾಲಂ ಶಿವಪೂಜಕಃ । ॥ ೬ ॥

ಜಪಹೋಮಸಮಾಯುಕ್ತೋ ಭೋಜಯೇಚ್ಚ ಕುಮಾರಿಕಾಂ ।
ಬೋಧಯೇದ್ಬಿಲ್ವಶಾಖಾಸು ಷಷ್ಠ್ಯಾಂ ದೇವೀಫಲೇಷು ಚ ।
ಸಪ್ತಮ್ಯಾಂ ಬಿಲ್ವಶಾಖಾಂ ತಾಮಾಹೃತ್ಯ ಪ್ರತಿಪೂಜಯೇತ್ ॥ ೭ ॥

೪-೫. ಎಲೈ ಭೈರವನೇ, ಈ ಎರಡು ದಿನಗಳಲ್ಲಿ ದೇವೀಪೂಜೆಯ ವಿಶೇಷ ಕ್ರಮಗಳನ್ನು ಹೇಳುವೆನು ಕೇಳು. ದೇವಿಯನ್ನು ಆರಾಧಿಸಲಿಚ್ಛಿಸುವ ಮನುಷ್ಯನು ಮೊದಲು ನಿಯಮದಿಂದ ದೇವಿಯನ್ನು ಮಂಡಲದಲ್ಲಿ ಸ್ಥಾಪಿಸಿ ವೈಷ್ಣವೀತಂತ್ರದಿಂದ ಲಾಗಲೀ, ದುರ್ಗಾತಂತ್ರಪೂರ್ವಕವಾಗಿಯಾಗಲೀ, ಪೂಜಿಸಬೇಕು. ಎಲೈ ಭೈರವನೇ ವೈಷ್ಣವೀ, ದುರ್ಗಾ ಮೊದಲಾದ ದೇವಿಯ ಬೇರೆ ಬೇರೆ ರೂಪಗಳನ್ನು ಪೂಜಿಸುವುದರಿಂದ ದೇವಿಯು ಸಂತುಷ್ಟಳಾಗಿ ಪೂಜೆಯನ್ನು ಸ್ವೀಕರಿಸಿ ಆರಾಧಿಸಲ್ಪಟ್ಟ ಮೂರ್ತಿಗೆ ಅನುಸಾರವಾಗಿ ಆರಾಧಕರ ಇಷ್ಟಾರ್ಥಗಳನ್ನು ಸಲ್ಲಿಸುವಳು.

೬. ಎಲೈ ವತ್ಸನಾದ ಭೈರವನೇ ಕೇಳು, ಸೂರ್ಯನು ಕನ್ಯಾರಾಶಿಯಲ್ಲಿರುವಾಗ ಶುಕ್ಲಪಕ್ಷದ ನಂದಿಕಾಷ್ಟಮಿಯನ್ನು ಆರಂಭಮಾಡಿ ಸಾಧಕನು ದೇವಿಯನ್ನು ಆರಾಧಿಸಬೇಕು. ಯಾರನ್ನೂ ಯಾಚಿಸದೆ ತನಗೆ ಲಭ್ಯವಾದ ಆಹಾರವನ್ನು ರಾತ್ರಿಯಲ್ಲಿ ಒಂದು ಹೊತ್ತು ಮಾತ್ರ ಭುಜಿಸಬೇಕು. ಪ್ರಾತಃಕಾಲದಲ್ಲಿ ಸ್ನಾನಮಾಡಿ ಜಿತೇಂದ್ರಿಯನಾಗಿ, ಶೀತೋಷ್ಣ, ಸುಖದುಃಖಾದಿ ದ್ವಂದ್ವಗಳನ್ನು ಗೆದ್ದು ಮೂರು ಕಾಲಗಳಲ್ಲಿಯೂ ಈಶ್ವರನನ್ನು ಪೂಜಿಸಬೇಕು.

೭. ಜಪ, ಹೋಮ, ಇವುಗಳನ್ನು ಮಾಡಿ ಕುಮಾರಿಯನ್ನು ವಿಧಿಪೂರ್ವಕವಾಗಿ ಪೂಜಿಸಿ ಭೋಜನ ಮಾಡಿಸಬೇಕು. ಷಷ್ಠೀ ತಿಥಿಯಲ್ಲಿ ಬಿಲ್ವವೃಕ್ಷದ ಕೊನೆಯಲ್ಲಿ ದೇವಿಯನ್ನು ಭಾವನೆ ಮಾಡಿ ಸಪ್ತಮಿಯಂದು ಆ ಶಾಖೆಯನ್ನು ತಂದು ಅವನ್ನು ಪೂಜಿಸಬೇಕು.

ಪುನಃ ಪೂಜಾಂ ತಥಾಷ್ಟಮ್ಯಾಂ ವಿಶೇಷೇಣ ಸಮಾಚರೇತ್ ।
ಜಾಗರಂ ಚ ಸ್ವಯಂ ಕುರ್ಯಾದ್ಬಲಿದಾನಂ ಮಹಾನಿಶಿ ॥ ೮ ॥

ಪ್ರಭೂತಬಲಿದಾನಂ ತು ನವಮ್ಯಾಂ ವಿಧಿವಚ್ಚರೇತ್ ।
ಧ್ಯಾಯೇದ್ದಶಭುಜಾಂ ದೇವೀಂ ದುರ್ಗಾತಂತ್ರೇಣ ಪೂಜಯೇತ್ ॥ ೯ ॥

ವಿಸರ್ಜನಂ ದಶಮ್ಯಾಂ ತು ಕುರ್ಯಾದ್ದೈವೀ ಸಾಧಕೋತ್ತಮಃ ।
ಕೃತ್ವಾ ವಿಸರ್ಜನಂ ತಸ್ಯಾಂ ತಿಥೌ ನಕ್ತಂ ಸಮಾಚರೇತ್ ॥ ೧೦ ॥

ಯದಾ ತು ಷೋಡಶಭುಜಾಂ ಮಹಾಮಾಯಾಂ ಪ್ರಪೂಜಯೇತ್ ।
ದುರ್ಗಾತಂತ್ರೇಣ ಮಂತ್ರೇಣ ವಿಶೇಷಂ ತತ್ರ ವೈ ಶೃಣು ॥ ೧೧ ॥

ಕನ್ಯಾಯಾಂ ಕೃಷ್ಣಪಕ್ಷಸ್ಯ ಏಕಾದಶ್ಯಾಮುಪೋಷಿತಃ ।
ದ್ವಾದಶ್ಯಾಮೇಕಭುಕ್ತಂ ತು ನಕ್ತಂ ಕುರ್ಯಾತ್ಪರೇಽಹನಿ ॥ ೧೨ ॥

---

೮. ಪುನಃ ಅಷ್ಟಮಿಯಲ್ಲಿ ವಿಶೇಷಕ್ರಮಗಳಿಂದ ಪೂಜೆಯನ್ನು ಮಾಡಿ ರಾತ್ರಿ ಜಾಗರಣೆಯನ್ನು ಮಾಡಬೇಕು ಮತ್ತು ರಾತ್ರಿಯಲ್ಲಿ ಬಲಿದಾನವನ್ನು ಮಾಡಬೇಕು.

೯. ನವಮಿ ತಿಥಿಯಲ್ಲಿ ವಿಧ್ಯುಕ್ತವಾಗಿ ಮಹಾ ಬಲಿದಾನವನ್ನು ವಿಶೇಷಕ್ರಮಗಳಿಂದ ಆಚರಿಸಬೇಕು. ದೇವಿಯನ್ನು ಹತ್ತು ಭುಜಗಳುಳ್ಳವಳಾಗಿರುವಂತೆ ಧ್ಯಾನ ಮಾಡಿ ದುರ್ಗಾತಂತ್ರ ವಿಧಿಯಂತೆ ಪೂಜೆಮಾಡಬೇಕು.

೧೦. ಸಾಧಕನಾದವನು ಈರೀತಿ ಪೂಜೆ ಮಾಡಿ ದಶಮಿ ದಿವಸದ ರಾತ್ರೀ ಕಾಲದಲ್ಲಿ ದೇವಿಯನ್ನು ವಿಸರ್ಜನೆ ಮಾಡಬೇಕು.

೧೧. ಹದಿನಾರು ಭುಜಗಳಿಂದ ಶೋಭಿಸುವ ಮಹಾಮಾಯೆಯನ್ನು ದುರ್ಗಾತಂತ್ರ ಮಂತ್ರಗಳಿಂದ ಪೂಜಿಸಬೇಕಾದರೆ ಆ ಪೂಜೆಯಲ್ಲಿ ಆಚರಿಸಬೇಕಾದ ವಿಶೇಷಕ್ರಮಗಳನ್ನು ಹೇಳುವೆನು ಕೇಳು.

೧೨. ಕನ್ಯಾಮಾಸದ (ಭಾದ್ರಪದ ಮಾಸದ) ಕೃಷ್ಣಪಕ್ಷದ ಏಕಾದಶೀ ದಿನದಲ್ಲಿ ಸಾಧಕನು ಉಪವಾಸ ಮಾಡಿ ದ್ವಾದಶೀ ದಿವಸ ಒಂದು ಹೊತ್ತು ಮಾತ್ರ ಭೋಜನ ಮಾಡಬೇಕು ಮತ್ತು ಮಾರನೆಯ ದಿನ ಎಂದರೆ ತ್ರಯೋದಶೀ ಎನದಲ್ಲಿ ರಾತ್ರಿಯಲ್ಲಿ ಮಾತ್ರ ಭೋಜನ ಮಾಡಬೇಕು.

ಚತುರ್ದಶ್ಯಾಂ ಮಹಾಮಾಯಾಂ ಬೋಧಯಿತ್ವಾ ವಿಧಾನತಃ ।
ಗೀತವಾದಿತ್ರನಿಸ್ವೋಷೈರ್ನಾನಾನೈವೇದ್ಯವೇದನೈಃ ॥ ೧೩ ॥

ಅಯಾಚಿತಂ ಬುಧಃ ಕುರ್ಯಾದುಪವಾಸಂ ಪರೇಽಹನಿ ।
ಏವಮೇವ ವ್ರತಂ ಕುರ್ಯಾದ್ಯಾವದ್ವೈ ನವಮೀ ಭವೇತ್ ॥ ೧೪ ॥

ಜ್ಯೇಷ್ಠಾಯಾಂ ಚ ಸಮಭ್ಯರ್ಚ್ಯ ಮೂಲೇನ ಪ್ರತಿಪೂಜಯೇತ್ ।
ಉತ್ತರೇಣಾರ್ಚನಂ ಕೃತ್ವಾ ಶ್ರವಣಾಂತೇ ವಿಸರ್ಜಯೇತ್ ॥ ೧೫ ॥

ಯದಾ ತ್ವಷ್ಟಾದಶಭುಜಾಂ ಮಹಾಮಾಯಾಂ ಪ್ರಪೂಜಯೇತ್ ।
ದುರ್ಗಾತಂತ್ರೇಣ ಮಂತ್ರೇಣ ತತ್ರಾಪಿ ಶೃಣು ಭೈರವ ॥ ೧೬ ॥

ಕನ್ಯಾಯಾಂ ಕೃಷ್ಣಪಕ್ಷಸ್ಯ ಪೂಜಯಿತ್ವಾರ್ದ್ರಭೇ ದಿವಾ ।
ನವಮ್ಯಾಂ ಬೋಧಯೇದ್ದೇವೀಂ ಗೀತವಾದಿತ್ರನಿಸ್ವನೈಃ ॥ ೧೭ ॥

೧೩-೧೪. ಚತುರ್ದಶೀ ದಿವಸ ಮಹಾಮಾಯಾಸ್ವರೂಪಿಣಿಯಾದ ದೇವಿಯನ್ನು ವಿಧಿನಿಯಮಗಳಂತೆ ಆವಾಹನೆ ಮಾಡಿ, ಗೀತಗಳಿಂದಲೂ, ಮಂಗಳವಾದ್ಯಗಳಿಂದಲೂ, ವೇದಮಂತ್ರಗಳಿಂದಲೂ, ಯಾರನ್ನೂ ಯಾಚಿಸದೆ ಸ್ವಯಾರ್ಜಿತವಾದ ದ್ರವ್ಯಾದಿಗಳಿಂದಲೂ, ನಾನಾವಿಧವಾದ ಭಕ್ಷ್ಯಭೋಜ್ಯ ನೈವೇದ್ಯಗಳಿಂದಲೂ ದೇವಿಯನ್ನು ಪೂಜಿಸಿ ಮಾರನೆಯ ದಿವಸ ಉಪವಾಸವಿರಬೇಕು. ಈ ರೀತಿ ಪ್ರತಿಪತ್ತಿಥಿ ಮೊದಲುಗೊಂಡು ನವಮಿಯವರಿಗೂ ನಿಯಮದಿಂದ ವ್ರತವನ್ನು ಆಚರಿಸಬೇಕು.

೧೫. ಈ ರೀತಿ ಜ್ಯೇಷ್ಠಾನಕ್ಷತ್ರವ್ಯಾಪ್ತಿಯಿರುವ ತಿಥಿಯವರಿಗೂ ಪೂಜಿಸಿ ಮೂಲಾ ನಕ್ಷತ್ರದಲ್ಲಿ ವಿಶೇಷಪೂಜೆಯನ್ನು ಮಾಡಬೇಕು. ಬಳಿಕ ಉತ್ತರಾಷಾಢ ನಕ್ಷತ್ರದಲ್ಲಿ(ಮಹಾನವಮಿ ತಿಥಿಯಲ್ಲಿ)ವಿಶೇಷಪೂಜೆಯನ್ನು ಮಾಡಿ ಬಲಿದಾನಗಳನ್ನು ಆಚರಿಸಿ ಶ್ರವಣನಕ್ಷತ್ರದಲ್ಲಿ(ದಶಮಿ) ದೇವಿಯನ್ನು ವಿಸರ್ಜನೆಮಾಡಬೇಕು.

೧೬. ಎಲೈ ಭೈರವನೇ, ಹದಿನೆಂಟು ಭುಜಗಳುಳ್ಳ ಮಹಾಮಾಯೆಯನ್ನು ದುರ್ಗಾತಂತ್ರೋಕ್ತವಾಗಿ ಅರ್ಚಿಸಬೇಕಾದಲ್ಲಿ ಅಲ್ಲಿಯೂ ಆಚರಿಸಬೇಕಾದ ವಿಶೇಷ ನಿಯಮಗಳನ್ನು ಹೇಳುವೆನು ಕೇಳು.

೧೭. ಕನ್ಯಾಮಾಸದ ಕೃಷ್ಣಪಕ್ಷದ (ಭಾದ್ರಪದಕೃಷ್ಣ ನವಮಿ) ಆರ್ದ್ರಾನಕ್ಷತ್ರದಲ್ಲಿ ನವಮೀ ತಿಥಿಯಲ್ಲಿ ಹಗಲು ಹೊತ್ತಿನಲ್ಲಿ, ದೇವಿಯನ್ನು ಗೀತವಾದ್ಯಾದಿಗಳಿಂದ ಆವಾಹನೆ ಮಾಡಬೇಕು.

ಶುಕ್ಲಪಕ್ಷೇ ಚತುರ್ಥ್ಯಾಂ ತು ದೇವೀಕೇಶವಿಮೋಚನಂ ।
ಪ್ರಾತರೇವ ತು ಪಂಚಮ್ಯಾಂ ಸ್ನಾಪಯೇತ್ತು ಶುಭೈರ್ಜಲೈಃ ॥ ೧೮ ॥

ಸಪ್ತಮ್ಯಾಂ ಪತ್ರಿಕಾಪೂಜಾ ಅಷ್ಟಮ್ಯಾಂ ಚಾಪ್ಯುಪೋಷಣಂ ।
ಪೂಜಾ ಜಾಗರಣಂ ಚೈವ ನವಮ್ಯಾಂ ವಿಧಿವದ್ಬಲಿಃ ॥ ೧೯ ॥

ಸಂಪ್ರೇಷಣಂ ದಶಮ್ಯಾಂ ತು ಕ್ರೀಡಾಕೌತುಕಮಂಗಲೈಃ ।
ನೀರಾಜನಂ ದಶಮ್ಯಾಂ ತು ಬಲವೃದ್ಧಿಕರಂ ಮಹತ್ ॥ ೨೦ ॥

ಯದಾ ವೈ ವೈಷ್ಣವೀಂ ದೇವೀಂ ಮಹಾಮಾಯಾಂ ಜಗನ್ಮಯಾಂ ।
ಪೂಜಯೇತ್ತತ್ರ ಚ ತದಾ ವಿಶೇಷಂ ಶೃಣು ಭೈರವ ॥ ೨೧ ॥

ಕನ್ಯಾಸಂಸ್ಥೇ ರವೌ ಪೂಜಾ ಯಾ ಶುಕ್ಲಾ ತಿಥಿರಷ್ಟಮೀ ।
ತಸ್ಯಾಂ ರಾತ್ರೌ ಪೂಜಿತವ್ಯಾ ಮಹಾವಿಭವವಿಸ್ತರೈಃ ॥ ೨೨ ॥

---

೧೮. ಶುಕ್ಲಪಕ್ಷದ ಚತುರ್ಥೀ ದಿವಸ ದೇವಿಯ ಕೂವಲಿನ ಸಿಕ್ಕನ್ನು ಬಿಡಿಸಿ, ಪಂಚಮಿ ದಿನ ಪ್ರಾತಃಕಾಲದಲ್ಲಿ ನಿರ್ಮಲೋದಕದಿಂದ ಸ್ನಾನ ಮಾಡಿಸಬೇಕು.

೧೯. ಸಪ್ತಮಿ ದಿವಸ ಪತ್ರಿಕಾಪೂಜೆಯನ್ನೂ, ಅಷ್ಟಮಿಯಲ್ಲಿ ಉಪವಾಸವನ್ನೂ ರಾತ್ರಿ ಪೂಜೆ ಮತ್ತು ಜಾಗರಣೆಯನ್ನೂ, ನವಮಿಯ ದಿವಸ ವಿಧಿಪ್ರಕಾರ ಬಲಿದಾನವನ್ನೂ ಮಾಡಬೇಕು.

೨೦. ಈರೀತಿ ಪೂಜೆ ಮಾಡಿ ದಶಮೀ ದಿವಸ ಮಂಗಳವಾದ್ಯಾದಿವೈಭವಗಳಿಂದ ಪೂಜಾ ಮಹಾಮಂಗಳಾರತಿಗಳನ್ನು ಮಾಡಿ ದೇವಿಯನ್ನು ಸ್ವಸ್ಥಾನಕ್ಕೆ ವಿಸರ್ಜನೆ ಮಾಡಬೇಕು, ಈ ವ್ರತವು ಬಲವನ್ನೂ ವೃದ್ಧಿಯನ್ನೂ ಉಂಟುಮಾಡುವಂತಹುದು.

೨೧. ವಿಷ್ಣುಶಕ್ತಿಸ್ವರೂಪಿಣಿಯಾದ ಮತ್ತು ಜಗತ್ಸ್ವರೂಪಳಾದ ಮಹಾಮಾಯೆಯನ್ನು ಪೂಜಿಸುವ ಕ್ರಮದಲ್ಲಿ ವಿಶೇಷ ವಿಧಿನಿಯಮಗಳನ್ನು ಹೇಳುವೆನು ಕೇಳು.

೨೨. ಸೂರ್ಯನು ಕನ್ಯಾರಾಶಿಯಲ್ಲಿರುವಾಗ ಎಂದರೆ ಕನ್ಯಾಮಾಸದಲ್ಲಿ ಶುಕ್ಲಪಕ್ಷದ ಅಷ್ಟಮೀ ತಿಥಿಯ ರಾತ್ರಿಯಲ್ಲಿ ದೇವಿಯನ್ನು ಮಹಾ ವೈಭವಪೂರ್ವಕವಾಗಿ ಪೂಜಿಸಬೇಕು.

ನವಮ್ಯಾಂ ಬಲಿದಾನಂ ತು ಕರ್ತವ್ಯಂ ವೈ ಯಥಾವಿಧಿ ।
ಜಪಹೋಮಂ ಚ ವಿಧಿವತ್ಕುರ್ಯಾತ್ತತ್ರ ವಿಭೂತಯೇ ॥ ೨೩ ॥

ಸಂಪೂಜಯೇನ್ಮಹಾದೇವೀಮಷ್ಟಪುಷ್ಪಿಕಯಾ ನರಃ ।
ರಾಮಸ್ಯಾನುಗ್ರಹಾರ್ಥಾಯ ರಾವಣಸ್ಯ ವಧಾಯ ಚ ॥ ೨೪ ॥

ರಾತ್ರಾವೇವ ಮಹಾದೇವೀ ಬ್ರಹ್ಮಣಾ ಬೋಧಿತಾ ಪುರಾ ।
ತತಸ್ತು ತ್ಯಕ್ತನಿದ್ರಾ ಸಾ ನಂದಾಯಾಮಶ್ವಿನೇ ಸಿತೇ ॥ ೨೫ ॥

ಜಗಾಮ ನಗರೀಂ ಲಂಕಾಂ ಯತ್ರಾಸೀದ್ರಾಘವಃ ಪುರಾ ।
ತತ್ರ ಗತ್ವಾ ಮಹಾದೇವೀ ತದಾ ತೌ ರಾಮರಾವಣೌ ॥ ೨೬ ॥

ಯುದ್ಧೇ ನಿಯೋಜಯಾಮಾಸ ಸ್ವಯಮಂತರ್ಹಿತಾಂಬಿಕಾ ।
ರಕ್ಷಸಾಂ ವಾನರಾಣಾಂ ಚ ಜಗ್ಧ್ವಾ ಸಾ ಮಾಂಸಶೋಣಿತೇ ॥ ೨೭ ॥

---

೨೩. ನವಮಿಯಲ್ಲಿ ವಿಧಿಪೂರ್ವಕವಾಗಿ ಬಲಿದಾನವನ್ನು ಮಾಡಿ ಜಪ ಹೋಮಾದಿಗಳನ್ನು ನಿಯಮವಾಗಿ ಮಾಡಬೇಕು ಮತ್ತು ದೇವಿಯನ್ನು ಎಂಟು ವಿಧವಾದ ಪುಷ್ಪಗಳಿಂದ ಪೂಜಿಸಬೇಕು. ಇದರಿಂದ ಐಶ್ವರ್ಯಾಭಿವೃದ್ಧಿಯಾಗುವುದು.

೨೪. ಪೂರ್ವದಲ್ಲಿ ರಾಮನ ಅನುಗ್ರಹಕ್ಕಾಗಿಯೂ, ರಾವಣನ ಸಂಹಾರ ಕ್ಕಾಗಿಯೂ ಬ್ರಹ್ಮನು ದೇವಿಯನ್ನು ಅಷ್ಟಮಿಯ ರಾತ್ರಿಯಲ್ಲೇ ಆವಾಹನೆ ಮಾಡಿ ಪೂಜಿಸಿದನು.

೨೫. ಅದರಿಂದ ದೇವಿಯು ಸಂತುಷ್ಟಳಾಗಿ ನಿದ್ರೆಯನ್ನು ಬಿಟ್ಟು, ಆಶ್ವಯುಜ ಮಾಸದ ನಂದಾಷ್ಟಮಿಯಲ್ಲಿ ಶ್ರೀರಾಮನು ರಾವಣನೊಡನೆ ಯುದ್ಧಮಾಡುತ್ತಿದ್ದ ಲಂಕಾಪಟ್ಟಣದ ಸಮೀಪಕ್ಕೆ ಬಂದಳು.

೨೬. ದೇವಿಯು ಅಲ್ಲಿಗೆ ಬಂದು ರಾಮರಾವಣರು ಯುದ್ಧಮಾಡುತ್ತಿರುವಾಗ ತಾನು ಅವಶ್ಯವಾಗಿಯೇ ಇದ್ದುಕೊಂಡು ಅವರು ಯುದ್ಧಮಾಡುವಂತೆ ಪ್ರೇರಿಸು ತ್ತಿದ್ದಳು.

೨೭. ಯುದ್ಧದಲ್ಲಿ ರಾಕ್ಷಸರ ಮತ್ತು ಕಪಿಗಳ ರಕ್ತಮಾಂಸಗಳನ್ನು ದೇವಿಯು ಭಕ್ಷಿಸುತ್ತಾ ರಾಮರಾವಣರ ಯುದ್ಧವು ಏಳು ದಿನಗಳವರೆಗೆ ನಡೆಯುವಂತೆ ಮಾಡಿದಳು.

ರಾಮರಾವಣಯೋರ್ಯುದ್ಧಂ ಸಪ್ತಾಹಂ ಸಾ ನ್ಯಯೋಜಯತ್ ।
ವ್ಯತೀತೇ ಸಪ್ತಮೇ ರಾತ್ರೌ ನವಮ್ಯಾಂ ರಾವಣಂ ತತಃ ॥ ೨೮ ॥

ರಾಮೇಣ ಘಾತಯಾಮಾಸ ಮಹಾಮಾಯಾ ಜಗನ್ಮಯೀ ।
ಯಾವತ್ತಯೋಃ ಸ್ವಯಂ ದೇವೀ ಯುದ್ಧಕೇಲಿಮುದೈಕ್ಷತ ॥ ೨೯ ॥

ತಾವತ್ತು ಸಪ್ತರಾತ್ರಾಣಿ ಸರ್ವೈರ್ದೇವೈಃ ಸುಪೂಜಿತಾ ।
ನಿಹತೇ ರಾವಣೇ ವೀರೇ ನವಮ್ಯಾಂ ಸಕಲೈಃ ಸುರೈಃ ॥ ೩೦ ॥

ವಿಶೇಷಪೂಜಾಂ ದುರ್ಗಾಯಾಶ್ಚಕ್ರೇ ಲೋಕಪಿತಾಮಹಃ ।
ತತಃ ಸಂಪ್ರೇಷಿತಾ ದೇವೀ ದಶಮ್ಯಾಂ ಶಾಬರೋತ್ಸವೈಃ ॥ ೩೧ ॥

ಶಕ್ರೋಽಪಿ ದೇವಸೇನಾಯಾ ನೀರಾಜನಮಥಾಕರೋತ್ ।
ಶಾಂತ್ಯರ್ಥಂ ಸುರಸೈನ್ಯಾನಾಂ ದೇವರಾಜ್ಯಸ್ಯ ವೃದ್ಧಯೇ ॥ ೩೨ ॥

---

೨೮. ಈರೀತಿ ಯುದ್ಧವು ನಡೆದು ಏಳನೆಯ ರಾತ್ರಿಯು ಕಳೆದಮೇಲೆ ನವವಿಯದಿವಸ ಜಗತ್ಸ್ವರೂಪಿಣಿಯಾದ ಮಹಾಮಾಯೆಯು ಶ್ರೀರಾಮನಿಂದ ರಾವಣನನ್ನು ಸಂಹಾರಮಾಡಿಸಿದಳು.

೨೯. ರಾಮರಾವಣರಿಗೆ ನಡೆದ ಏಳು ದಿವಸಗಳ ಯುದ್ಧವನ್ನು ದೇವಿಯು ವಿನೋದದಿಂದ ನೋಡುತ್ತಿದ್ದಳು. ಆ ಕಾಲದಲ್ಲಿ ಸಮಸ್ತ ದೇವತೆಗಳೂ ದೇವಿಯನ್ನು ಪೂಜಿಸುತ್ತಿದ್ದರು.

೩೦-೩೧. ನವಮಿಯಲ್ಲಿ ಪರಾಕ್ರಮಿಯಾದ ರಾವಣನು ಸಂಹರಿಸಲ್ಪಡಲು ಲೋಕಪಿತಾಮಹನೆನಿಸಿದ ಚತುರ್ಮುಖಬ್ರಹ್ಮನು ಸಮಸ್ತ ದೇವತೆಗಳೊಡನೆ ಮಹಾದುರ್ಗೆಯ ಪೂಜೆಯನ್ನು ವಿಶೇಷ ವಿಧಿನಿಯಮಗಳಿಂದ ಆಚರಿಸಿ ದಶಮಿಯ ದಿವಸ ಶಾಬರೋತ್ಸವಾದಿಗಳಿಂದ ದೇವಿಯನ್ನು ಸಂತೋಷಪಡಿಸಿ ವಿಸರ್ಜನೆ ಮಾಡಿದನು.

೩೨. ಇಂದ್ರನೂ ಸಹ ದೇವಸೈನ್ಯಗಳ ಶಾಂತ್ಯರ್ಥವಾಗಿಯೂ ದೇವರಾಜ್ಯದ ಕ್ಷೇಮಕ್ಕಾಗಿಯೂ ದೇವಿಗೆ ನೀರಾಜನವನ್ನು ಮಾಡಿದನು.

ರಾಮರಾವಣಬಾಣೇನ ಯುದ್ಧಂ ಚಾವೇಕ್ಷ್ಯ ಭೀತಿದಂ ।
ತೃತೀಯಾಯಾಂ ತು ಲಂಕಾಯಾಃ ಪೂರ್ವೋತ್ತರದಿಶಿ ಸ್ಥಿತಂ ॥ ೩೩ ॥

ಸ್ವಾತೀನಕ್ಷತ್ರಯುಕ್ತಾಯಾಂ ಭೀತಂ ಸುರಬಲಂ ಮಹತ್ ।
ಶಾಂತ್ಯರ್ಥಂ ವರಯಾಮಾಸ ದೇವೇಂದ್ರೋ ವಚನಾದ್ಧರೇಃ ॥ ೩೪ ॥

ತತಸ್ತು ಶ್ರವಣೇನಾಥ ದಶಮ್ಯಾಂ ಚಂಡಿಕಾಂ ಶುಭಾಂ ।
ವಿಸೃಜ್ಯ ಚಕ್ರೇ ಶಾಂತ್ಯರ್ಥಂ ಬಲನೀರಾಜನಂ ಹರಿಃ ॥ ೩೫ ॥

ನೀರಾಜಿತಬಲಃ ಶಕ್ರಸ್ತತ್ರ ರಾಮಂ ಚ ರಾಘವಂ ।
ಸಂಪ್ರಾಪ್ಯ ಪ್ರಯಯೌ ಸ್ವರ್ಗಂ ಸಹ ದೇವೈಃ ಶಚೀಪತಿಃ ॥ ೩೬ ॥

ಇತಿವೃತ್ತಂ ಪುರಾ ಕಲ್ಪೇ ಮನೋಃ ಸ್ವಾಯಂಭುವೇಂತರೇ ।
ಪ್ರಾದುರ್ಭೂತಾ ದಶಭುಜಾ ದೇವೀ ದೇವಹಿತಾಯ ವೈ ॥ ೩೭ ॥

೩೩-೩೪. ಸ್ವಾತೀ ನಕ್ಷತ್ರದಿಂದ ಕೂಡಿದ ತದಿಗೆಯ ದಿವಸ ಲಂಕಾಪಟ್ಟಣದ ಪೂರ್ವೋತ್ತರದಿಗ್ಭಾಗದಲ್ಲಿ ರಾಮರಾವಣರಿಗೆ ಯುದ್ಧವು ಬಹು ಭಯಂಕರವಾಗಿ ನಡೆಯುತ್ತಿತ್ತು. ಆ ಯುದ್ಧವನ್ನು ನೋಡಿ ಭಯಗೊಂಡ ದೇವಸೈನ್ಯದ ಕ್ಷೇಮಕ್ಕಾಗಿ ದೇವೇಂದ್ರನು ವಿಷ್ಣುವಿನ ಮಾತಿನಂತೆ ದೇವಿಯನ್ನು ಆಹ್ವಾನಿಸಿ ಪೂಜಿಸಿದನು.

೩೫. ಆಮೇಲೆ ಶ್ರವಣ ನಕ್ಷತ್ರದಿಂದ ಕೂಡಿದ ವಿಜಯದಶಮಿಯ ದಿನದಲ್ಲಿ ಮಂಗಳಕರಳಾದ ಚಂಡಿಕಾದೇವಿಯನ್ನು ಪೂಜೆಮಾಡಿ ಶಾಂತ್ಯರ್ಥವಾಗಿ ನೀರಾಜನವನ್ನು ಮಾಡಿ ದೇವಿಯನ್ನು ವಿಸರ್ಜನೆ ಮಾಡಿದನು.

೩೬. ಈರೀತಿ ನೀರಾಜನ ವಿಧಿಯಿಂದ ಬಲಗೊಂಡ ಇಂದ್ರನು ಸಮಸ್ತ ದೇವತೆಗಳೊಡನೆ ಶ್ರೀರಾಮನ ಸಮೀಪವನ್ನೈದಿ ಅವನನ್ನು ಕಂಡು ಬಳಿಕ ಸ್ವರ್ಗಲೋಕಕ್ಕೆ ತೆರಳಿದನು.

೩೭. ಹಿಂದೆ ಸ್ವಾಯಂಭುವ ಮನ್ವಂತರದಲ್ಲಿ ತ್ರೇತಾಯುಗದ ಆದಿ ಭಾಗದಲ್ಲಿ ದೇವತೆಗಳ, ಮನುಷ್ಯರ ಮತ್ತು ಜಗತ್ತಿನ ಕಲ್ಯಾಣಕ್ಕಾಗಿ ಹತ್ತು ಭುಜಗಳಿಂದ ಕೂಡಿ ದೇವಿಯು ಪ್ರಾದುರ್ಭೂತಳಾದಳು.

ನೃಣಾಂ ತ್ರೇತಾಯುಗಸ್ಯಾದೌ ಜಗತಾಂ ಹಿತಕಾಮ್ಯಯಾ ।
ಪುರಾಕಲ್ಪೇ ಯಥಾ ವೃತ್ತಂ ಪ್ರತಿಕಲ್ಪಂ ತಥಾ ತಥಾ ॥ ೩೮ ॥

ಪ್ರವರ್ತತೇ ಸ್ವಯಂ ದೇವೀ ದೈತ್ಯಾನಾಂ ನಾಶನಾಯ ವೈ ।
ಪ್ರತಿಕಲ್ಪಂ ಭವೇದ್ರಾಮೋ ರಾವಣಶ್ಚಾಪಿ ರಾಕ್ಷಸಃ ॥ ೩೯ ॥

ತಥೈವ ಜಾಯತೇ ಯುದ್ಧಂ ತಥಾ ತ್ರಿದಶಸಂಗಮಃ ।
ಏವಂ ರಾಮಸಹಸ್ರಾಣಿ ರಾವಣಾನಾಂ ಸಹಸ್ರಶಃ ॥ ೪೦ ॥

ಭವಿತವ್ಯಾನಿ ಭೂತಾನಿ ತಥಾ ದೇವೀ ಪ್ರವರ್ತತೇ ।
ಪೂಜಯಂತಿ ಸುರಾಸ್ಸರ್ವೇ ಬಲಂ ನೀರಾಜಯಂತ್ಯಪಿ ॥ ೪೧ ॥

ತಥೈವ ಚ ನರಾಃ ಸರ್ವೇ ಕುರ್ಯುಃ ಪೂಜಾಂ ಯಥಾವಿಧಿ ।
ಬಲನೀರಾಜನಂ ರಾಜಾ ಕುರ್ಯಾದ್ಬಲವಿವೃದ್ಧಯೇ ॥ ೪೨ ॥

---

೩೮. ಪೂರ್ವಕಾಲದಲ್ಲಿ ಹೇಗೆ ನಡೆಯಿತೋ ಅದರಂತೆಯೇ ಪ್ರತಿ ಕಲ್ಪದಲ್ಲಿಯೂ ದೇವಿಯು ದೈತ್ಯರ ನಾಶಕ್ಕಾಗಿ ಪ್ರಾದುರ್ಭವಿಸುವಳು.

೩೯-೪೦. ಪ್ರತಿ ಕಲ್ಪದಲ್ಲಿಯೂ ರಾಮನೂ ರಾವಣನೂ ಹುಟ್ಟುವರು ಮತ್ತು ಇವರಿಗೆ ಯುದ್ಧವು ಸಂಭವಿಸುವುದು. ದೇವತೆಗಳೂ ಸೇರುವರು. ಹೀಗೆ ಸಾವಿರಾರು ಕಲ್ಪಗಳಲ್ಲಿ ಸಾವಿರಾರು ರಾಮರೂ ರಾವಣರೂ ಆಗಿಹೋಗಿರುವರು. ಮುಂದೆಯೂ ಆಗುವರು.

೪೧. ಹಿಂದೆ ನಡೆದಂತೆ ಮುಂದೆಯೂ ನಡೆಯುವುದು. ದೇವಿಯೂ ಅವತರಿಸುತ್ತಿರುವಳು. ದೇವತೆಗಳೂ ದೇವಿಯನ್ನು ಪೂಜೆಮಾಡಿ ಬಲನೀರಾಜನವನ್ನೂ ಮಾಡುವರು.

೪೨. ದೇವತೆಗಳು ಪೂಜಿಸುವಂತೆಯೇ ಮನುಷ್ಯರೂ ಸಹ ದೇವಿಯನ್ನು ವಿಧ್ಯುಕ್ತವಿಧಿಯಿಂದ ಪೂಜಿಸಬೇಕು. ರಾಜನಾದವನು ಬಲವೃದ್ಧಿಗಾಗಿ ಬಲನೀರಾಜನ ವಿಧಿಯನ್ನು ಮಾಡಬೇಕು.

ವಿವ್ಯಾಲಂಕಾರಯುಕ್ತಾಭಿರ್ವಾರುಣೀಭಿಃ ಪ್ರವರ್ತನಂ ।
ಕರ್ತವ್ಯಂ ನೃತ್ಯಗೀತಾನಿ ಕ್ರೀಡಾಕೌತುಕಮಂಗಲೈಃ ॥ ೪೩ ॥

ಮೋದಕೈಃ ಪಿಷ್ಟಕೈಃ ಪೇಯೈರ್ಭಕ್ಷ್ಯಭೋಜ್ಯೈರನೇಕಶಃ ।
ಕೂಷ್ಮಾಂಡೈರ್ನಾರಿಕೇಲೈಶ್ಚ ಖರ್ಜೂರೈಃ ಪನಸೈಸ್ತಥಾ ॥ ೪೪ ॥

ದ್ರಾಕ್ಷಾಮಲಕಶಾಂಡಿಲ್ಯೈಃಪ್ಲೀಹೈಶ್ಚ ಕರುಣೈಸ್ತಥಾ ।
ಕಶೇರುಕ್ರಮುಕೈರ್ಮಾಲ್ಯೈಃ ಸಜಂಬೂತಿಂದುಕಾದಿಭಿಃ ॥ ೪೫ ॥

ಗವ್ಯೈರ್ಗುಡ್ಯಸ್ತಥಾಮಾಂಸೈರ್ಮದ್ಯೈರ್ಮಧುಭಿರೇವ ಚ ।
ಬಾಲಪ್ರಿಯೈಶ್ಚ ನೈವೇದ್ಯೈರ್ಲಾಜಾಪ್ಸತಫಲಾದಿಭಿಃ ॥ ೪೬ ॥

ಇಕ್ಷುದಂಡೈಃ ಸಿತಾಭಿಶ್ಚ ಲವಲೀನಾಗರಂಗಕೈಃ ।
ಅಜಾಭಿರ್ಮಹಿಷೈರ್ಮೇಷೈರಾತ್ಮಶೋಣಿತಸಂಚಯೈಃ ॥ ೪೭ ॥

ಪಕ್ಷ್ಯಾದಿಬಲಿಜಾತೀಯೈಸ್ತಥಾ ನಾನಾವಿಧೈರ್ಮೃಗೈಃ ।
ಪೂಜಯೇಚ್ಚ ಜಗದ್ಧಾತ್ರೀಂ ಮಾಂಸಶೋಣಿತಕರ್ದಮೈಃ ॥ ೪೮ ॥

೪೩-೪೮. ನಾನಾವಿಧವಾದ ವಸ್ತ್ರಭೂಷಣಾದ್ಯಲಂಕಾರಗಳಿಂದಲೂ, ನೃತ್ಯ ಗೀತ ವಾದ್ಯಗಳಿಂದಲೂ, ಕ್ರೀಡಾ ವಿನೋದಗಳಿಂದಲೂ, ಮದ್ಯಗಳಿಂದಲೂ, ದೇವಿಯನ್ನು ಆರಾಧಿಸಬೇಕು ಮತ್ತು ಹಿಟ್ಟಿನಿಂದ ಮಾಡಿದ ಕಡಬು, ಅನೇಕ ವಿಧವಾದ ಭಕ್ಷ್ಯಭೋಜ್ಯಗಳು, ಪಾನೀಯಗಳು, ಕುಂಬಳಕಾಯಿ, ತೆಂಗಿನಕಾಯಿ, ಖರ್ಜೂರ, ಹಲಸಿನಹಣ್ಣು, ದ್ರಾಕ್ಷಿ, ನೆಲ್ಲೀಕಾಯಿ, ಬಿಲ್ವಪತ್ರೀ, ಮಾಂಸ, ಬೇಲದಕಾಯಿ, ಅಡಿಕೆ, ಗೆಣಸು, ನೇರಳೇಹಣ್ಣು, ಹೇರಳೇಹಣ್ಣು, ಇವುಗಳಿಂದಲೂ, ಹಾಲು ಮೊಸರು, ತುಪ್ಪ, ಬೆಲ್ಲ. ಮಾಂಸ, ಮದ್ಯ ಜೇನುತುಪ್ಪ, ಬಾಲಕರಿಗೆ ಇಷ್ಟವಾದ ಇತರ ನೈವೇದ್ಯಗಳು, ಮಂತ್ರಾಕ್ಷತೆ, ಫಲಗಳು, ಕಬ್ಬು, ಸಕ್ಕರೆ, ಮಾದಳದಹಣ್ಣು, ಹೆರಳೆ ಇವುಗಳಿಂದಲೂ, ಆಡು, ಮಹಿಷ, ಮೇಷ, ತನ್ನ ದೇಹದ ರಕ್ತ, ಬಲಿಗೆ ಯೋಗ್ಯವಾದ ನಾನಾವಿಧವಾದ ಪಕ್ಷಿಗಳು, ಮೃಗಗಳು, ರಕ್ತದಿಂದ ನೆನೆದ ಮಾಂಸ, ಇವುಗಳಿಂದಲೂ ಜಗತ್ಸೃಷ್ಟಿಕರ್ತಳಾದ ದೇವಿಯನ್ನು ಪೂಜಿಸಬೇಕು.

ರಾತ್ರೌ ಸ್ಕಂದವಿಶಾಖಸ್ಯ ಕೃತ್ವಾ ಪಿಷ್ಟಕಪುತ್ರಿಕಾಂ ।
ಪೂಜಯೇಚ್ಛತ್ರುನಾಶಾಯ ದುರ್ಗಾಯಾಃ ಪ್ರೀತಯೇ ತಥಾ ॥ ೪೯ ॥

ಹೋಮಮಂ ಚ ಸತಿಲೈರಾಜ್ಯೈರ್ಮಾರ್ಷೈರಪಿ ತಥಾಚರೇತ್ ।
ಉಗ್ರಚಂಡಾದಿಕಾಃ ಪೂಜ್ಯಾಸ್ತಥಾಷ್ಟೌ ಯೋಗಿನೀಃ ಶುಭಾಃ ॥ ೫೦ ॥

ಯೋಗಿನ್ಯಶ್ಚ ಚತುಃಷಷ್ಟಿಸ್ತಥಾ ವೈ ಕೋಟಿಯೋಗಿನೀಃ ।
ನವದುರ್ಗಾಸ್ತಥಾ ಪೂಜ್ಯಾ ದೇವ್ಯಾಃ ಸನ್ನಿಹಿತಾಃ ಶುಭಾಃ ॥ ೫೧ ॥

ಜಯಂತ್ಯಾದಿರ್ಗಂಧಪುಷ್ಪೈಸ್ತಾ ದೇವ್ಯಾ ಮೂರ್ತಯೋ ಯತಃ ।
ದೇವ್ಯಾಸ್ತಸ್ಯಾಣಿ ಚಾಸ್ತ್ರಾಣಿ ಭೂಷಣಾನಿ ತಥೈವ ಚ ॥ ೫೨ ॥

ಅಂಗಪ್ರತ್ಯಂಗಯುಕ್ತಾನಿ ವಾಹನಂ ಸಿಂಹಮೇವ ಚ ।
ಮಹಿಷಾಸುರಮರ್ದಿನ್ಯಾಃ ಪೂಜಯೇದ್ಭೂತಯೇ ಸದಾ ॥ ೫೩ ॥

---

೪೯. ರಾತ್ರಿಯಲ್ಲಿ ಗೆಡ್ಡೆಯ ಹಿಟ್ಟಿನಿಂದ ದುರ್ಗೆಯ ಪ್ರತಿಮೆಯನ್ನು ಮಾಡಿ ಶತ್ರುನಾಶಕ್ಕೋಸ್ಕರ ಪೂಜಿಸಬೇಕು.

೫೦. ಬಳಿಕ ಎಳ್ಳು, ತುಪ್ಪ, ಮಾಂಸ ಇವುಗಳಿಂದ ಹೋಮವನ್ನು ಮಾಡಿ ಉಗ್ರಚಂಡಿಯೇ ಮೊದಲಾದ ಎಂಟು ಜನಯೋಗಿನಿಯರನ್ನೂ ಪೂಜಿಸಬೇಕು.

೫೧. ಅರವತ್ತುನಾಲ್ಕು ಯೋಗಿನಿಯರನ್ನೂ, ಕೋಟಿಸಂಖ್ಯಾತರಾದ ಯೋಗಿನಿಯರನ್ನೂ ದೇವಿಯ ಮಂಗಳಕರಗಳಾದ ಒಂಭತ್ತು ಮೂರ್ತಿಗಳಾದ ದುರ್ಗಾದೇವಿಯರನ್ನೂ ಪೂಜಿಸಬೇಕು.

೫೨-೫೩. ಜಯಂತಿಯೇ ಮೊದಲಾದ ದೇವಿಯ ಒಂಭತ್ತು ಮೂರ್ತಿಗಳನ್ನು ಗಂಧ ಪುಷ್ಪಾದಿಗಳಿಂದ ಪೂಜಿಸಿ ಬಳಿಕ ದೇವಿಯ ಆಯುಧಗಳನ್ನೂ ಭೂಷಣಗಳನ್ನೂ ಆಯಾಯ ಅಂಗಗಳಲ್ಲಿರುವಂತೆ ಭಾವಿಸಿ ಪೂಜೆಮಾಡಬೇಕು ಮತ್ತು ಐಶ್ವರ್ಯಾಭಿವೃದ್ಧಿಗಾಗಿ ಮಹಿಷಾಸುರಮರ್ದಿನಿಯ ವಾಹನವಾದ ಸಿಂಹವನ್ನೂ ಪೂಜೆಮಾಡಬೇಕು.

ಪುರಾಕಲ್ಪೇ ಮಹಾದೇವೀ ಮನೋಃ ಸ್ವಾಯಂಭುವೇಂತರೆ ।
ನೃಣಾಂ ಕೃತಯುಗಸ್ಯಾದೌ ಸರ್ವದೇವೈಃ ಸ್ತುತಾ ಸದಾ ॥ ೫೪ ॥

ಮಹಿಷಾಸುರನಾಶಾಯ ಜಗತಾಂ ಹಿತಕಾಮ್ಯಯಾ ।
ಯೋಗನಿದ್ರಾ ಮಹಾಮಾಯಾ ಜಗದ್ಧಾತ್ರೀ ಜಗನ್ಮಯಿ ॥ ೫೫ ॥

ಭುಜೈಃ ಷೋಡಶಭಿರ್ಯುಕ್ತಾ ಭದ್ರಕಾಲೀತಿ ವಿಶ್ರುತಾ ।
ಕ್ಷೀರೋದಸ್ಯೋತ್ತರೇ ತೀರೇ ಬಿಭ್ರತೀ ವಿಪುಲಾಂ ತನುಂ ॥ ೫೬ ॥

ಅತಸೀಪುಷ್ಪವರ್ಣಾಭಾ ಜ್ವಲತ್ಕಾಂಚನಕುಂಡಲಾ ।
ಜಟಾಜೂಟೇನಖಂಡೇಂದುಮುಕುಟತ್ರಯಭೂಷಿತಾ ।
ನಾಗಹಾರೇಣ ಸಹಿತಾ ಸ್ವರ್ಣಹಾರವಿಭೂಷಿತಾ ॥ ೫೭ ॥

ಶೂಲಂ ಚಕ್ರಂ ಚ ಖಡ್ಗಂಚ ಶಂಖಂ ಬಾಣಂ ತಥೈವ ಚ ।
ಶಕ್ತಿಂ ವಜ್ರಂ ಚ ದಂಡ ಚ ನಿತ್ಯಂ ದಕ್ಷಿಣಬಾಹುಭಿಃ ॥ ೫೮ ॥

೫೪-೫೬. ಪೂರ್ವಕಲ್ಪದಲ್ಲಿ ಸ್ವಾಯಂಭುವಮನ್ವಂತರದಲ್ಲಿ ಕೃತಯುಗದ ಆದಿಯಲ್ಲಿ ಸಮಸ್ತ ದೇವತೆಗಳಿಂದಲೂ ಮನುಷ್ಯರಿಂದಲೂ ಸ್ತುತಿಸಲ್ಪಟ್ಟು ಜಗತ್ಸೃಷ್ಟಿ ಕರ್ತಳೂ ಜಗತ್ಸ್ವರೂಪಳೂ ಯೋಗನಿದ್ರೆಯೆಂಬ ಪ್ರಸಿದ್ಧಳೂ ಆದ ಮಹಾಮಾಯೆಯು ಮಹಿಷಾಸುರನ ನಾಶಕ್ಕಾಗಿಯೂ, ಜಗತ್ತಿನ ಕಲ್ಯಾಣಕ್ಕಾಗಿಯೂ, ಕ್ಷೀರ ಸಮುದ್ರದ ಉತ್ತರ ತೀರದಲ್ಲಿ ಹದಿನಾರು ಭುಜಗಳಿಂದ ಕೂಡಿದ ದೊಡ್ಡ ಶರೀರವನ್ನು ಧರಿಸಿ ಭದ್ರಕಾಲಿ ಎಂಬ ಪ್ರಸಿದ್ಧಳಾಗಿ ಅವತರಿಸಿದಳು.

೫೭. ಆ ಭದ್ರಕಾಲಿದೇವಿಯು ಅಗಸೆಹೂವಿನಂತೆ ಶುಭ್ರವಾದ ಶರೀರಕಾಂತಿಯಿಂದಲೂ, ಥಳಥಳನೆ ಬೆಳಗುತ್ತಿರುವ ಚಿನ್ನದ ಕುಂಡಲಗಳಿಂದಲೂ, ಶಿರಸ್ಸಿನಲ್ಲಿರುವ ಜಟೆ, ಅರ್ಧಚಂದ್ರ, ಕಿರೀಟ, ಇವುಗಳಿಂದಲೂ, ನಾಗಹಾರ ಮತ್ತು ಚಿನ್ನದ ಹಾರ ಇವುಗಳಿಂದಲೂ ಅಲಂಕೃತಳಾಗಿ ಅತಿ ಶೋಭಾಯಮಾನವಾಗಿ ಒಪ್ಪುತ್ತಿದ್ದಳು.

೫೮-೬೦. ಶುಭ್ರವಾದ ದಂತಪಂಕ್ತಿಗಳಿಂದ ಒಪ್ಪುತ್ತಿರುವ ಆ ದೇವಿಯು ತನ್ನ ಬಲಭಾಗದ ಎಂಟು ಕೈಗಳಲ್ಲಿ ಕ್ರಮವಾಗಿ ಶೂಲ, ಚಕ್ರ, ಖಡ್ಗ, ಶಂಖ, ಬಾಣ, ಶಕ್ತ್ಯಾಯುಧ ವಜ್ರದಂಡ ಇವುಗಳನ್ನೂ ಎಡಭಾಗದ ಎಂಟು ಕೈಗಳಲ್ಲಿ ಪೇಟಕ ಚರ್ಮ

ಬಿಭ್ರತೀ ಸತತಂ ದೇವೀ ವಿಕಾಶಿದಶನೋಜ್ಜ್ವಲಾ ।
ಖೇಟಕಂ ಚರ್ಮ ಚಾಪಂ ಚ ಪಾಶಂ ಚಾಂಕುಶಮೇವ ಚ ॥ ೫೯ ॥

ಘಂಟಾಂ ಪರ್ಶುಂ ಚ ಮುಸಲಂ ಬಿಭ್ರತೀ ವಾಮಪಾಣಿಭಿಃ ।
ಸಿಂಹಸ್ಥಾ ನಯನೈ ರಕ್ತವರ್ಣೈಸ್ತ್ರಿಭಿರತಿಜ್ವಲಾ ॥ ೬೦ ॥

ಶೂಲೇನ ಮಹಿಷಾಂ ಭಿತ್ತ್ವಾ ತಿಷ್ಠಂತೀ ಪರಮೇಶ್ವರೀ ।
ವಾಮಪಾದೇನ ಚಾಕ್ರಮ್ಯ ತತ್ರ ದೇವೀ ಜಗನ್ಮಯೀ ॥ ೬೧ ॥

ತಾಂ ದೃಷ್ಟ್ವಾ ಸಕಲಾ ದೇವಾಃ ಪ್ರಣಮ್ಯ ಪರಮೇಶ್ವರೀಂ ।
ಸೋಚುಃ ಕಿಂಚನ ತಂ ದೃಷ್ಟ್ವಾ ನಿಹತಂ ಮಹಿಷಾಸುರಂ ॥ ೬೨ ॥

ತತಃ ಪ್ರೋವಾಚ ದೇವಾಸ್ತಾನ್ಬ್ರಹ್ಮಾದೀನ್ಪರಮೇಶ್ವರೀ ।
ಸ್ಮಿತಪ್ರಭಿನ್ನವದನಾ ವಿಕಾಶಿವದನೋಜ್ಜ್ವಲಾ ॥ ೬೩ ॥

ಬಿಲ್ಲು, ಪಾಶ, ಅಂಕುಶ, ಘಂಟೆ, ಕೊಡಲಿ, ಮುಸಲಾಯುಧ ಇವುಗಳನ್ನೂ ಧರಿಸಿ ಶೋಭಿಸುತ್ತಿದ್ದಳು.

೬೧. ಅತಿ ಪ್ರಕಾಶಮಾನವಾಗಿಯೂ ಕೆಂಪಾಗಿಯೂ ಇರುವ ಮೂರು ಕಣ್ಣುಗಳಿಂದ ಕೂಡಿದ ಆ ದೇವಿಯು ಸಿಂಹದ ಮೇಲೆ ಕುಳಿತು ತನ್ನ ಎಡಗಾಲಿನಿಂದ ಮಹಿಷಾಸುರನನ್ನು ತುಳಿದು ಶೂಲದಿಂದ ಅವನನ್ನು ಇರಿಯುತ್ತಾ, ಸ್ತೋತ್ರಮಾಡುತ್ತಿರುವ ಆ ದೇವತೆಗಳಿಗೆ ಗೋಚರಳಾದಳು.

೬೨. ಈರೀತಿ ಗೋಚರಳಾದ ಪರಮೇಶ್ವರಿಯನ್ನೂ ಅವಳ ಪಾದದ ಕೆಳಗೆ ಮೃತನಾದ ಮಹಿಷಾಸುರನನ್ನೂ ನೋಡಿ ದೇವತೆಗಳೆಲ್ಲರೂ ದೇವಿಗೆ ನಮಸ್ಕರಿಸಿ ಗೌರವದಿಂದ ಏನನ್ನೂ ಹೇಳದೆ ಸುಮ್ಮನೆ ನಿಂತಿದ್ದರು.

೬೩. ಬಳಿಕ ಪರಮೇಶ್ವರಿಯು ಪ್ರಕಾಶಮಾನವಾದ ಮುಖಕಾಂತಿಯಿಂದಲೂ ಮುಗುಳು ನಗೆಯಿಂದಲೂ ಶೋಭಿಸುತ್ತಾ ಬ್ರಹ್ಮಾದಿದೇವತೆಗಳನ್ನು ಕುರಿತು ಹೀಗೆ ಹೇಳಿದಳು.

ಗಚ್ಛಂತು ಭೋಃ ಸುರಗಣಾ ಜಂಬೂದ್ವೀಪಾಂತರಂ ಪ್ರತಿ ।
ಹಿಮವತ್ಪರ್ವತಾಸನ್ನೇ ವರಂ ಕಾತ್ಯಾಯನಾಶ್ರಮಂ ॥ ೬೪ ॥

ತತ್ರೈವ ಭವತಾಂ ಸಾಧ್ಯಂ ಭವಿಷ್ಯತಿ ನ ಸಂಶಯಃ ।
ಇತ್ಯುಕ್ತ್ವಾ ಸಾ ಮಹಾದೇವೀ ತತ್ರೈವಾಂತರಧೀಯತ ॥ ೬೫ ॥

ದೇವಾ ಅಪಿ ತದಾ ಜಗ್ಮುಃ ಕಾತ್ಯಾಯನಮುನೇಃ ಪುರಂ ।
ಆಶ್ರಮಂ ಪ್ರತಿ ತೇ ಗತ್ವಾ ವಿಸ್ಮಯಾವಿಷ್ಟಮಾನಸಾಃ ॥ ೬೬ ॥

ನಿಹತೋ ಮಹಿಷೋ ದೇವ್ಯಾದಿಷ್ಟೋಽಸ್ಮಾಭಿರ್ಯದರ್ಥತಃ ।
ಸ್ತುತಾ ಚೈಷಾ ಮಹಾದೇವೀ ಜಗದ್ಧಾತ್ರೀ ಜಗನ್ಮಯೀ ॥ ೬೭ ॥

ಕಿಮರ್ಥಮಾಹ ಸಾ ದೇವೀ ಗಂತುಂ ಕಾತ್ಯಾಯನಾಶ್ರಮಂ ।
ಕಿಮನ್ಯದ್ವಾಂಛಿತಂ ಕಾರ್ಯಮುಸ್ಮಾಕಂ ವಾ ಭವಿಷ್ಯತಿ ॥ ೬೮ ॥

ಇತಿ ಬ್ರುವಂತಸ್ತೇ ಸರ್ವೇ ಗಚ್ಛಂತಿ ಸ್ಮ ಪರಸ್ಪರಂ ।
ಹಿಮವತ್ಪರ್ವತಾಸನ್ನಂ ಮುನಿಂ ಕಾತ್ಯಾಯನಾಶ್ರಮಂ ॥ ೬೯ ॥

೬೪-೬೫. ಎಲ್ಲೆ ದೇವತೆಗಳೇ, ನೀವು ಜಂಬೂದ್ವೀಪಕ್ಕೆ ಹೋಗಿ ಅಲ್ಲಿ ಹಿಮವತ್ಪರ್ವತದ ಸಮೀಪದಲ್ಲಿರುವ ಕಾತ್ಯಾಯನಋಷಿಯ ಆಶ್ರಮಕ್ಕೆ ಹೋಗಿರಿ. ಅಲ್ಲಿ ನಿಮ್ಮ ಮನೋರಥವು ಸಿದ್ಧಿಸುವುದು. ಸಂಶಯಪಡಬೇಕಾಗಿಲ್ಲ ಎಂದು ಹೇಳಿ ಆ ದೇವಿಯು ಅಲ್ಲಿಯೇ ಅದೃಶ್ಯಳಾದಳು.

೬೬. ದೇವತೆಗಳೂ ಸಹ ಆಶ್ಚರ್ಯಪಡುತ್ತಾ ಅಲ್ಲಿಂದ ಹೊರಟು ಕಾತ್ಯಾಯನ ಮುನಿಯ ಆಶ್ರಮಕ್ಕೆ ಬಂದರು.

೬೭-೬೯. ನಾವು ಏತಕ್ಕಾಗಿ ದೇವಿಯನ್ನು ಸ್ತೋತ್ರಮಾಡಿದೆವೋ ಆ ನಮ್ಮ ಕಾರ್ಯಸಿದ್ಧಿಗಾಗಿ ದೇವಿಯು ಮಹಿಷಾಸುರನನ್ನು ಸಂಹಾರ ಮಾಡಿರುವಳು. ಈಗ ಪುನಃ ಏತಕ್ಕಾಗಿ ಕಾತ್ಯಾಯನಮುನಿಯ ಆಶ್ರಮಕ್ಕೆ ನಮ್ಮನ್ನು ಕಳುಹಿಸಿರುವಳು? ನಮಗೆ ಸಿದ್ಧಿಸಬೇಕಾದ ಇಷ್ಟಾರ್ಥವಾವುದು? ಎಂದು ಮುಂತಾಗಿ ದೇವತೆಗಳು ತಮ್ಮತಮ್ಮಲ್ಲಿ ಮಾತನಾಡಿಕೊಳ್ಳುತ್ತಾ ಹಿಮವತ್ಪರ್ವತದ ಸಮೀಪದಲ್ಲಿರುವ ಕಾತ್ಯಾಯನಋಷಿಯ ಆಶ್ರಮಕ್ಕೆ ಬಂದು ಸೇರಿದರು.

ತತ್ರ ಸೇಂದ್ರಾಃ ಸದಿಕ್ಪಾಲಾ ಬ್ರಹ್ಮವಿಷ್ಣುಶಿವಾಸ್ತಥಾ ।
ನಿಷೇದುಃ ಸುಚಿರಂ ಪ್ರೀತಾ ದುರ್ಗಾದರ್ಶನಲಾಲಸಾಃ ॥ ೭೦ ॥

ತತೋ ರುದ್ರಗಣಾಃ ಸರ್ವೇ ಮಹಿಷಾಸುರಚೇಷ್ಟಿತಂ ।
ಆಗತ್ಯ ಕಥಯಾಮಾಸುರ್ದೇವಲೋಕೇಪರಾಭವಂ ॥ ೭೧ ॥

ತತಸ್ತತ್ರ ಮಹಾಕೋಪಂ ಬ್ರಹ್ಮವಿಷ್ಣುಶಿವಾದಯಃ ।
ಚಕ್ರುಃ ಕೋಽಸ್ಯೋಽಸ್ತಿ ಮಹಿಷೋ ಹತೋ ದೇವ್ಯಾ ಸ ದಾನವಃ ॥ ೭೨ ॥

ಪುನರ್ಯೇನೇಹ ಕ್ರಿಯತೇ ಜಗದ್ವಿಧ್ವಂಸನಂ ಭೃಶಂ ।
ಇತಿ ಪ್ರಕುಪ್ಯತಾಂ ತೇಷಾಂ ಶರೀರೇಭ್ಯಃ ಪೃಥಕ್ ಪೃಥಕ್ ॥ ೭೩ ॥

ನಿಶ್ಚಕ್ರಮುಶ್ಚ ತೇಜಾಂಸಿ ಶಕ್ತಿರೂಪಾಣಿ ತತ್ಕ್ಷಣಾತ್ ।
ತತ್ತೇಜೋಭಿರ್ಧೃತವಪುರ್ದೇವೀ ಕಾತ್ಯಾಯನೇನ ವೈ ॥ ೭೪ ॥

---

೭೦. ಹೀಗೆ ಆ ಆಶ್ರಮಕ್ಕೆ ಬಂದು ಇಂದ್ರನೂ, ದಿಕ್ಪಾಲಕರೂ, ಬ್ರಹ್ಮವಿಷ್ಣು ಶಿವಾದಿಗಳೂ ಮಹಾದೇವಿಯ ದರ್ಶನವನ್ನು ನಿರೀಕ್ಷಿಸುತ್ತಾ ಅಲ್ಲಿಯೇ ಕೂತಿದ್ದರು.

೭೧. ಬಳಿಕ ರುದ್ರನ ಗಣಗಳೆಲ್ಲರೂ ಅಲ್ಲಿಗೆ ಬಂದು ಆ ದೇವತೆಗಳಿಗೆ ಮಹಿಷಾಸುರನು ಮಾಡುತ್ತಿರುವ ದುಷ್ಕೃತ್ಯಗಳನ್ನೂ ದೇವಲೋಕವು ಅವನ ವಶವಾದದ್ದನ್ನೂ ಹೇಳಿದರು.

೭೨. ಆ ಮಹಿಷಾಸುರನು ಹಿಂದೆಯೇ ದೇವಿಯಿಂದ ಸಂಹೃತನಾಗಿರಲು ಮತ್ತೆ ಮಹಿಷಾಸುರನೆಂಬುವನು ಹೇಗೆ ಬಂದನು ಎಂದು ಆಗ ಅಲ್ಲಿದ್ದ ಬ್ರಹ್ಮವಿಷ್ಣು ಶಿವಾದಿಯಾದ ದೇವತೆಗಳು ಬಹಳ ಕೋಪಾವಿಷ್ಟರಾದರು.

೭೩. ಜಗತ್ತನ್ನು ತಲ್ಲಣಗೊಳಿಸುತ್ತಿರುವ ಈ ದೈತ್ಯನು ಯಾರಿರಬಹುದು ಎಂದು ಕೋಪಗೊಂಡ ಆ ದೇವತೆಗಳ ಶರೀರಗಳಿಂದ ಶಕ್ತಿರೂಪವಾದ ತೇಜಸ್ಸುಗಳು ಬೇರೆಬೇರೆಯಾಗಿ ಆಕ್ಷಣವೇ ಹೊರಹೊರಟುವು.

೭೪. ಆ ತೇಜಸ್ಸುಗಳೆಲ್ಲವೂ ಸೇರಿ ಉಂಟಾದ ಶರೀರವನ್ನು ಧರಿಸಿ ದೇವಿಯು ವ್ಯಕ್ತಳಾಗಲು ಕಾತ್ಯಾಯನಋಷಿಯು ಅವಳನ್ನು ಪೂಜಿಸಿದನು. ಅವರಿಂದ ದೇವಿಗೆ ಕಾತ್ಯಾಯಿನೀ ಎಂದು ಹೆಸರು ಪ್ರಸಿದ್ಧವಾಯಿತು.

ಸಂಧುಕ್ಷಿತಾ ಪೂಜಿತಾ ಚ ತೇನ ಕಾತ್ಯಾಯನೀ ಸ್ಮೃತಾ ।
ತತಸ್ತೇನೈವ ಮಂತ್ರೇಣ ದಶಬಾಹುಯುತೇನ ಸೈ ॥ ೭೫ ॥

ಪಶ್ಚಾಜ್ಜಘಾನ ಮಹಿಷಂ ಜಗದ್ಧಾತ್ರೀ ಜಗನ್ಮಯೀ ।
ಯದಾ ಸ್ತುತಾ ಮಹಾದೇವೀ ಬೋಧಿತಾ ಚಾಶ್ವಿನಸ್ಯ ಚ ॥ ೭೬ ॥

ಚತುರ್ದಶೀಕೃಷ್ಣಪಕ್ಷೇ ಪ್ರಾದುರ್ಭೂತಾ ಜಗನ್ಮಯೀ ।
ದೇವಾನಾಂ ತೇಜಸಾಂ ಮೂರ್ತಿಃ ಶುಕ್ಲಪಕ್ಷೇ ಸುಶೋಭನೇ ॥ ೭೭ ॥

ಸಪ್ತಮ್ಯಾಂ ಸಾಕರೋದ್ದೇವೀ ಅಷ್ಟಮ್ಯಾಂ ತೈರಲಂಕೃತಾ ।
ನವಮ್ಯಾಮುಪಹಾರ್ಯೈಸ್ತು ಪೂಜಿತಾ ಮಹಿಷಾಸುರಂ ॥ ೭೮ ॥

ನಿಜಘಾನ ದಶಮ್ಯಾಂ ತು ವಿಸೃಷ್ಟಾಂತರ್ಹಿತಾ ಶಿವಾ ॥ ೭೯ ॥

॥ ಮಾರ್ಕಂಡೇಯ ಉವಾಚ ॥

ಶ್ರುತ್ವೇಮಾಂ ಸಗರೋ ರಾಜಾ ದೇವ್ಯಾಃ ಸಂಗತಿಮುತ್ತಮಾಂ ।
ಸಂಶಯಾಲುಶ್ಚ ತದ್ರೂಪೇ ಪುನರೌರ್ವಮುಪೃಚ್ಛತ ॥ ೮೦ ॥

---

೭೫. ಬಳಿಕ ಜಗತ್ಸೃಷ್ಟಿಕರ್ತಳೂ, ಜಗತ್ಸ್ವರೂಪಳೂ ಆದ ದೇವಿಯು ಕಾತ್ಯಾಯನೀ ಎಂಬ ಮಂತ್ರದಿಂದಲೇ ಪೂಜಿಸಲ್ಪಟ್ಟು, ಹತ್ತು ಭುಜಗಳುಳ್ಳ ರೂಪದಿಂದ ಮಹಿಷಾಸುರನನ್ನು ಸಂಹಾರಮಾಡಿದಳು.

೭೬. ದೇವತೆಗಳಿಂದ ಪ್ರಾರ್ಥಿತಳಾಗಿ ಜಗತ್ಸ್ವರೂಪಳಾದ ದೇವಿಯು ಆಶ್ವಯುಜ ಮಾಸದ ಕೃಷ್ಣಪಕ್ಷದ ಚತುರ್ದಶೀ ದಿವಸದಲ್ಲಿ ಪ್ರಾದುರ್ಭೂತಳಾದಳು.

೭೭-೭೯. ದೇವತೆಗಳ ತೇಜಸ್ಸಿನಿಂದ ಒಟ್ಟುಗೂಡಿದ ಮೂರ್ತಿಯನ್ನು ಶುಕ್ಲಪಕ್ಷದಶುಭಕರವಾದ ಸಪ್ತಮಿಯಲ್ಲಿ ಕೈಗೊಂಡು ಆ ದೇವಿಯು ಅಷ್ಟಮಿಯಲ್ಲಿ ಅಲಂಕೃತಳಾಗಿನವಮಿಯಲ್ಲಿ ಉಪಹಾರಾದಿಗಳಿಂದ ಪೂಜಿತಳಾಗಿ ದಶಮಿಯದಿವಸ ಮಹಿಷಾಸುರನನ್ನು ಸಂಹಾರ ಮಾಡಿದಳು. ಆದಿವಸವೇ ಮಂಗಳಕರವಾದ ದೇವಿಯು ಪೂಜಾದಿಗಳಿಂದ ಸತ್ಕರಿಸಲ್ಪಟ್ಟು ಸ್ವಸ್ಥಾನಕ್ಕೆ ವಿಸರ್ಜಿಸಲ್ಪಟ್ಟು ಅಂತರ್ಧಾನಳಾದಳು.

೮೦. ಮಾರ್ಕಂಡೇಯಮುನಿಯು ಹೇಳಿದನು— ಈರೀತಿ ಹೇಳಿದ ದೇವಿಯು ಉತ್ತಮವಾದ ಉಷಾಖ್ಯಾನವನ್ನು ಸಗರರಾಜನು ಕೇಳಿ, ಆ ದೇವಿಯ ರೂಪದ ವಿಷಯದಲ್ಲಿ ಸಂಶಯಗೊಂಡು ಔರ್ವಮುನಿಯನ್ನು ಹೀಗೆ ಪ್ರಶ್ನೆಮಾಡಿದನು.

॥ ಸಗರ ಉವಾಚ ॥

ಯದಿ ಪಶ್ಚಾನ್ಮಹಾದೇವೀ ಜಘಾನ ಮಹಿಷಾಸುರಂ ।
ಕಥಂ ಪೂರ್ವಂ ಭದ್ರಕಾಲೀರೂಪಾಽಭೂನ್ಮಹಿಷಾಸುರಂ ॥ ೮೧ ॥

ತಥಾ ಹಿ ದರ್ಶನಂ ತಸ್ಯಾಃ ಪಾದಾತ್ಪ್ರಾಂತಶ್ಚ ಕಾರ ಚ ।
ದೃದಿ ಶೂಲೇನ ನಿರ್ಭಿನ್ನಂ ದದೃಶುಃ ಸಕಲಾಃ ಸುರಾಃ ॥ ೮೨ ॥

ಏವಂ ತು ಸಂಶಯಂ ಛಿಂದಿ ಮುನಿಶ್ರೇಷ್ಠ ಮಮಾಧುನಾ ।
॥ ಔರ್ವ ಉವಾಚ ॥

ಶೃಣು ತ್ವಂ ನೃಪಶಾರ್ದೂಲ ಭದ್ರಕಾಲೀ ಯಥಾ ಪುರಾ ॥ ೮೩ ॥

ಪ್ರಾದುರ್ಭೂತಾ ಮಹಾಮಾಯಾ ಮಹಿಷೇಣ ಸಹೈವ ತು ।
ಮಹಿಷಾಸುರ ಏವಾಸೌ ನಿದ್ರಾಯಾಂ ನಿಶಿ ಪರ್ವತಃ ॥ ೮೪ ॥

---

೮೧. ಸಗರರಾಜನು ಹೇಳಿದನು - ಎಲೈ ಔರ್ವಮುನಿಯೇ, ಈಗ ಹೇಳಿದಂತೆ ದೇವತೆಗಳ ತೇಜಸ್ಸಿನಿಂದ ಒಟ್ಟುಗೂಡಿದ ಶರೀರವನ್ನು ಧರಿಸಿ ದೇವಿಯು ಮಹಿಷಾಸುರನನ್ನು ಸಂಹರಿಸಿದಳೆಂದು ನೀನು ಹೇಳಿದೆಯಲ್ಲವೇ? ಹಾಗಾದರೆ ಹಿಂದೆ ಭದ್ರಕಾಲಿಯ ರೂಪವನ್ನು ಕೈಗೊಂಡು ಮಹಿಷಾಸುರನನ್ನು ಸಂಹರಿಸಿದ ಬಗೆ ಹೇಗೆ?

೮೨. ಅಲ್ಲದೆ ಆ ದೇವಿಯ ಪಾದಮೂಲದಲ್ಲಿ ಹತನಾಗಿ ಬಿದ್ದ ಮಹಿಷಾಸುರನು ಆ ದೇವಿಯನ್ನು ದರ್ಶನ ಮಾಡಿದ ಬಗೆ ಹೇಗೆ? ಎದೆಯಲ್ಲಿ ದೇವಿಯ ಶೂಲದಿಂದ ಇರಿಯಲ್ಪಟ್ಟ ಮಹಿಷನನ್ನು ದೇವತೆಗಳೆಲ್ಲಾ ಹೇಗೆ ನೋಡಿದರು? ಎಲೈ ಮುನಿಶ್ರೇಷ್ಠನಾದ ಔರ್ವನೇ, ಈ ವಿಧವಾದ ನನ್ನ ಸಂಶಯಗಳನ್ನೆಲ್ಲಾ ಈಗ ನಿವಾರಣೆಮಾಡು.

೮೩. ಔರ್ವಮುನಿಯು ಹೇಳಿದನು-ಎಲೈ ರಾಜೋತ್ತಮನೇ ಕೇಳು. ಪೂರ್ವದಲ್ಲಿ ಮಹಾಮಾಯಾಸ್ವರೂಪಳಾದ ಭದ್ರಕಾಳಿಯು ಮಹಿಷಾಸುರನಿಂದ ಸಹಜವಾಗಿ ದೇವತೆಗಳ ಎದುರಿನಲ್ಲಿ ಹೇಗೆ ಪ್ರಾದುರ್ಭೂತಳಾದಳೆಂಬುದನ್ನು ಹೇಳುವೆನು.

೮೪. ಈ ಮಹಿಷಾಸುರನೆಂಬುವನು ಒಂದು ದಿವಸ ರಾತ್ರಿಯಲ್ಲಿ ಭಯಂಕರನಾದ ಸ್ವರೂಪವುಳ್ಳ ಒಂದು ಕೆಟ್ಟ ಸ್ವಪ್ನವನ್ನು ಕಂಡನು.

ಸ್ವಪ್ನಂ ಪ್ರದದೃಶೇ ವೀರೋ ದಾರುಣಂ ಘೋರದರ್ಶನಂ ।
ಮಹಾಮಾಯಾ ಭದ್ರಕಾಲೀ ಛಿತ್ವಾ ಖಡ್ಗೇನ ಮೇ ಶಿರಃ ॥ ೮೫ ॥

ಪಪೌ ತಸ್ಯ ಚ ರಕ್ತಾನಿ ವ್ಯಾದಿತಾಸ್ಯಾತೀಭಿಷಣಾ ।
ತತಃ ಪ್ರಾತರ್ಭಯಯುತಃ ಸ ದೈತ್ಯೋ ಮಹಿಷಾಸುರಃ ॥ ೮೬ ॥

ತಾಮೇವ ಪೂಜಯಾಮಾಸ ಸುಚಿರಂ ಸಾನುಗಸ್ತದಾ ।
ಆರಾಧಿತಾ ತದಾ ದೇವೀ ಮಹಿಷೇಣಾಸುರೇಣ ವೈ ॥ ೮೭ ॥

ಪ್ರಾದುರ್ಭೂತಾ ಭದ್ರಕಾಲೀ ಭುಜೈಃ ಷೋಡಶಭಿರ್ಯುತಾ ।
ತತಃ ಪ್ರಣಮ್ಯ ಮಹಿಷೋ ಮಹಾಮಾಯಾಂ ಜಗನ್ಮಯಾಂ ॥ ೮೮ ॥

ಉವಾಚೇದಂ ವಚೋ ನಮ್ರಮೂರ್ತಿರ್ಭಕ್ತ್ಯಾಯುತೋಽಸುರಃ ।
॥ ಮಹಿಷ ಉವಾಚ ॥
ದೇವಿ ಖಡ್ಗೇನ ಸಂಛಿದ್ಯ ಶೋಣಿತಾನಿ ಶಿರೋ ಮಮ ॥ ೮೯ ॥

---

೮೫. ಏನೆಂದರೆ, ಮಹಾಮಾಯಾಸ್ವರೂಪಳಾದ ಭದ್ರಕಾಳಿಯು ತನ್ನ ಶಿರಸ್ಸನ್ನು ಕತ್ತಿಯಿಂದ ಕತ್ತರಿಸಿ ರಕ್ತವನ್ನು ಪಾನಮಾಡುತ್ತಿರುವಂತೆಯೂ ಮಾಂಸವನ್ನು ತಿನ್ನುತ್ತಾ ಅತಿ ಭಯಂಕರ ರೂಪವುಳ್ಳವಳಾಗಿರುವಂತೆ ಸ್ವಪ್ನವನ್ನು ಕಂಡನು.

೮೬. ಬೆಳಗ್ಗೆ ಎದ್ದು ಭಯಗೊಂಡವನಾಗಿ ಆ ಮಹಿಷಾಸುರನು ತನ್ನ ತಮ್ಮನಿಂದ ಕೂಡಿ ದೇವಿಯನ್ನು ಚೆನ್ನಾಗಿ ಪೂಜೆಮಾಡಿದನು.

೮೭. ಆಗ ಮಹಿಷಾಸುರನಿಂದ ಆರಾಧಿಸಲ್ಪಟ್ಟ ದೇವಿಯು, ಹದಿನಾರು ಭುಜಗಳಿಂದ ಶೋಭಿಸುತ್ತಾ ಭದ್ರಕಾಲಿಯೆಂಬುದಾಗಿ ಅಲ್ಲಿ ಪ್ರಾದುರ್ಭೂತಳಾದಳು.

೮೮. ಅನಂತರ ಅಲ್ಲಿ ಪ್ರಾದುರ್ಭೂತಳಾದ ಮಹಾಮಾಯೆಯನ್ನು ಮಹಿಷಾಸುರನು ಭಕ್ತಿಯಿಂದ ನಮಸ್ಕರಿಸಿ ಶರೀರವನ್ನು ಬಗ್ಗಿಸಿ ವಿನಯದಿಂದ ಹೀಗೆ ಹೇಳಿದನು.

೮೯. ಮಹಿಷಾಸುರನು ಹೇಳಿದನು:—ಎಲೈ ದೇವಿಯೇ ನೀನು ನನ್ನ ಶಿರಸ್ಸನ್ನು ಕತ್ತಿಯಿಂದ ಕತ್ತರಿಸಿ ನನ್ನ ರಕ್ತವನ್ನು ಪಾನಮಾಡುತ್ತಿರುವಂತೆ ನಾನು ಸ್ವಪ್ನವನ್ನು ಕಂಡೆನು.

ತ್ವಯಾ ಭುಕ್ತಾನಿ ದೃಷ್ಟಾನಿ ಮಯಾ ಸ್ವಪ್ನೇನ ನಿಶ್ಚಿತಂ ।
ಅವಶ್ಯಂ ತು ತ್ವಯಾ ಕಾರ್ಯಂ ಮಯಾ ಜ್ಞಾತಂ ಪ್ರಮಾಣತಃ ॥ ೯೦ ॥

ಏತದ್ರುಧಿರಪಾನಂ ಮೇ ತಥೈಕಂ ದೇಹಿ ಮೇ ವರಂ ।
ವಧ್ಯಸ್ತ್ವಾಹಂ ನಾತ್ರಾಸ್ತಿ ಸಂಶಯಃ ಪರಮೇಶ್ವರಿ ॥ ೯೧ ॥

ಮಮಾಪಿ ತತ್ರ ನೋ ದುಃಖಂ ನಿಯತಿಃ ಕೇನ ಲಂಘ್ಯತೇ ।
ಕಿಂತೂ ತ್ವಯೈವ ಸಹಿತಃ ಶಂಭುರಾರಾಧಿತಃ ಪುರಾ ॥ ೯೨ ॥

ಮಮ ಪಿತ್ರಾ ಮದರ್ಥೇನ ಜಾತಃ ಪಶ್ಚಾದಹಂ ತತಃ ।
ಮಯಾಪ್ಯಾರಾಧಿತಃ ಶಂಭುಃ ಪ್ರಾಪ್ತಾಶ್ಚೇಷ್ಟಾಸ್ತಧಾವಿಧಾಃ ॥ ೯೩ ॥

ಮನ್ವಂತರತ್ರಯಂ ಯಾವದಾಸುರಂ ರಾಜ್ಯಮುತ್ತಮಂ ।
ಅಕಂಟಕಂ ಮಯಾ ಭುಕ್ತಮನುತಾಪೋ ನ ವಿದ್ಯತೇ ॥ ೯೪ ॥

---

೯೦. ಈರೀತಿ ನನ್ನನ್ನು ಸಂಹರಿಸಿ ರಕ್ತಪಾನವನ್ನು ನೀನು ಮಾಡಬೇಕೆಂಬು ದನ್ನೂ ನಾನೂ ಚೆನ್ನಾಗಿ ತಿಳಿದುಕೊಂಡಿನು. ಆದರೆ ನನಗೆ ಒಂದು ವರವನ್ನು ಅನುಗ್ರಹಿಸಬೇಕು

೯೧. ಎಲೈ ಪರಮೇಶ್ವರಿಯೇ ನಾನು ನಿನ್ನಿಂದ ಸಂಹರಿಸಲ್ಪಡಬೇಕಾಗಿರು ವುದು. ಈ ವಿಚಾರದಲ್ಲಿ ಸಂಶಯವಿಲ್ಲ. ನನಗೂ ಈ ವಿಷಯದಲ್ಲಿ ಸ್ವಲ್ಪವೂ ವ್ಯಸನವಿಲ್ಲ. ಏಕೆಂದರೆ ವಿಧಿಯನ್ನು ಯಾರುತಾನೇ ಮೀರಬಲ್ಲರು ?

೯೨. ಪೂರ್ವದಲ್ಲಿ ನನ್ನ ತಂದೆಯು ನನ್ನನ್ನು ಪಡೆಯಲೋಸುಗ, ನಿನ್ನಿಂದ ಸಹಿತನಾದ ಈಶ್ವರನನ್ನು ಆರಾಧಿಸಿದನು. ಬಳಿಕ ಅವನ ಅನುಗ್ರಹದಿಂದ ನಾನು ಹುಟ್ಟಿದೆನು.

೯೩-೯೪. ನಾನೂ ಸಹ ಈಶ್ವರನನ್ನು ಆರಾಧಿಸಿ ಅನೇಕವಿಧವಾದ ಇಷ್ಟಾರ್ಥ ಗಳನ್ನು ಹೊಂದಿದೆನು ಮೂರು ಮನ್ವಂತರಕಾಲಪರ್ಯಂತರ, ಅಕಂಟಕವಾದ ಈ ಅಸುರ ರಾಜ್ಯಸನ್ನು ಅನುಭವಿಸಿದೆನು. ಆದುದರಿಂದ ನನಗೆ ವ್ಯಥೆಯೇನೂ ಇಲ್ಲವು.

ಕಾತ್ಯಾಯನೇನ ಮುನಿನಾ ಶಪ್ತೋಽಹಂ ಶಿಷ್ಯಕಾರಣಾತ್ ।
ಸೀಮಂತಿನೀ ವಿನಾಶಂ ತೇ ಕರಿಷ್ಯತಿ ನ ಸಂಶಯಃ ॥ ೯೫ ॥

ಪುರಾ ಮುನಿಂ ತಪಸ್ಯಂತಂ ರೌದ್ರಾಶ್ವಂ ನಾಮ ಸತ್ತಮಂ ।
ಮುನೇಃ ಕಾತ್ಯಾಯನಾಖ್ಯಸ್ಯ ಶಿಷ್ಯಂ ಹಿಮವದಂತಿಕೇ ॥ ೯೬ ॥

ದಿವ್ಯಸ್ತ್ರೀರೂಪಮತುಲಂ ಕೃತ್ವಾಹಂ ಕೌತುಕಾತ್ತದಾ ।
ಮಯಾ ಸಂಮೋಹಿತೋ ವಿಪ್ರೋಽತ್ಯಜತ್ಸದ್ಯಸ್ತದಾ ತಪಃ ॥ ೯೭ ॥

ನ ದೂರಾತ್ಸಂಸ್ಥಿತೇನಾಹಂ ಮುನಿನಾ ಕಾತ್ಯಸೂನುನಾ ।
ಜ್ಞಾತ್ವಾ ಮಾಯಾಂ ತದಾ ಶಪ್ತಃ ಶಿಷ್ಯಾರ್ಥೇ ಕ್ರೋಧವಹ್ನಿನಾ ॥ ೯೮ ॥

ಯಸ್ಮಾತ್ತ್ವಯಾ ಮೇ ಶಿಷ್ಯೋಽಯಂ ಮೋಹಿತಸ್ತಪಸಶ್ಚ್ಯುತಃ ।
ಕೃತಸ್ತ್ವಯಾ ಸ್ತ್ರೀರೂಪೇಣ ತತ್ತ್ವಾಂ ಸ್ತ್ರೀ ನಿಧನಿಷ್ಯತಿ ॥ ೯೯ ॥

ಇತಿ ಮಾಂ ಶಪ್ತವಾನ್ಪೂರ್ವಂ ಮುನಿಃ ಕಾತ್ಯಾಯನಃ ಸ್ವಯಂ ।
ತಸ್ಯ ಶಾಪಸ್ಯ ಕಾಲೋಽಯಮಾಗತ್ಯ ಸಮುಪಸ್ಥಿತಃ ॥ ೧೦೦ ॥

---

೯೫. ಕಾತ್ಯಾಯನಮುನಿಯು ತನ್ನ ಶಿಷ್ಯನ ನಿಮಿತ್ತವಾಗಿ ನೀನು ಒಬ್ಬ ಸ್ತ್ರೀಯಿಂದ ನಾಶವನ್ನು ಹೊಂದುವೆ, ಇದರಲ್ಲಿ ಸಂಶಯವಿಲ್ಲ ಎಂದು ನನಗೆ ಶಾಪವನ್ನು ಕೊಟ್ಟಿರುವನು.

೯೬-೯೭. ಪೂರ್ವದಲ್ಲಿ ಕಾತ್ಯಾಯನ ಮುನಿಯ ಶಿಷ್ಯನಾದ ರೌದ್ರಾಶ್ವನೆಂಬ ಮುನಿಶ್ರೇಷ್ಠನು ಹಿಮವತ್ಪರ್ವತದ ಸಮೀಪದಲ್ಲಿ ತಪಸ್ಸನ್ನು ಮಾಡುತ್ತಿದ್ದನು. ಆಗ ನಾನು ವಿನೋದಾರ್ಥವಾಗಿ ಸುಂದರ ಸ್ತ್ರೀರೂಪವನ್ನು ಧರಿಸಿ ಆ ತಪಸ್ವಿಯನ್ನು ಮೋಹಗೊಳಿಸಿದೆನು. ಅದರಿಂದ ಆ ಮುನಿಯು ತನ್ನ ತಪಸ್ಸನ್ನು ಬಿಟ್ಟುಬಿಟ್ಟನು.

೯೮-೯೯. ಅಲ್ಲಿ ಸಮೀಪದಲ್ಲಿಯೇ ಇದ್ದ ಕಾತ್ಯಾಯನ ಮುನಿಯು ಇದನ್ನು ಕಂಡು ಕೋಪಾವಿಷ್ಟನಾಗಿ ನನ್ನನ್ನು ಕುರಿತು — ನೀನು ಸ್ತ್ರೀರೂಪದಿಂದ ನನ್ನ ಶಿಷ್ಯನ ತಪಸ್ಸಿಗೆ ವಿಘ್ನವನ್ನುಂಟುಮಾಡಿದ ಕಾರಣ ಸ್ತ್ರೀಯಿಂದಲೇ ನಿನಗೆ ಮರಣವುಂಟಾಗುವುದು ಎಂದು ಶಾಪವನ್ನು ಕೊಟ್ಟನು.

೧೦೦. ಈರೀತಿ ಕಾತ್ಯಾಯನ ಮುನಿಯೇ ನನಗೆ ಶಾಪವನ್ನು ಕೊಟ್ಟಿರುವನು. ಆ ಶಾಪವ ಕಾಲವು ಈಗ ಸನ್ನಿಹಿತವಾಗಿರುವುದು.

ದೇವೇಂದ್ರತ್ವಂ ಮಯಾ ಪ್ರಾಪ್ತಂ ಭುಕ್ತಂ ತ್ರಿಭುವನಂ ಸಮಂ ।
ಕಿಂಚಿನ್ನ ಶೋಚ್ಯಂ ಮೇಽತ್ರಾಸ್ತಿ ವಾಂಛನೀಯಂ ಹಿ ಯನ್ಮಯಾ ॥ ೧೦೧ ॥

ತಸ್ಮಾತ್ತ್ವಾಂ ವೈ ಪ್ರಪನ್ನೋಽಹಂ ಪ್ರಾರ್ಥ್ಯಂ ಶೇಷಂ ಹಿ ಯನ್ಮಮ ।
ತದ್ದೇಹಿ ದೇವಿ ದುರ್ಗೇ ತ್ವಂ ಭೂಯಸ್ತುಭ್ಯಂ ನಮೋನಮಃ ॥ ೧೦೨ ॥

॥ ದೇವ್ಯುವಾಚ ॥

ಪ್ರಾರ್ಥನೀಯೋ ವರೋ ಯಸ್ತೇ ತಂ ವೃಣುಷ್ವ ಮಹಾಸುರ ।
ದಾಸ್ಯಾಮಿ ತೇ ವರಂ ಪ್ರಾರ್ಥ್ಯಂ ಸಂಶಯೋ ನಾತ್ರ ವಿದ್ಯತೇ ॥ ೧೦೩ ॥

॥ ಮಹಿಷ ಉವಾಚ ॥

ಯಜ್ಞಭಾಗಮಹಂ ಭೋಕ್ತುಮಿಚ್ಛಾಮಿ ತ್ವತ್ಪ್ರಸಾದತಃ ।
ಯಥಾ ಮಖೇಷು ಸರ್ವೇಷು ಪೂಜ್ಯೋಽಹಂ ಸ್ಯಾಂ ತಥಾ ಕುರು ॥ ೧೦೪ ॥

---

೧೦೧. ದೇವೇಂದ್ರ ಪದವಿಯನ್ನೂ. ಮೂರುಲೋಕಗಳ ಆಧಿಪತ್ಯವನ್ನೂ, ಸಹ ನಾನು ಅನುಭವಿಸಿರುವೆನು, ಆದುದರಿಂದ ನನಗೆ ಮರಣವಿಷಯದಲ್ಲಿ ಯಾವ ನ್ಯೂನೆಯೂ ಇಲ್ಲವು ಮತ್ತು ನೆರವೇರಬೇಕಾಗಿರುವ ಯಾವ ಅಪೇಕ್ಷೆಯೂ ನನಗೆ ಇಲ್ಲವು.

೧೦೨. ಆದುದರಿಂದ ಎಲೈ ದುರ್ಗಾದೇವಿಯೇ ನಿನ್ನನ್ನು ನಾನು ಕೊನೆಯ ದಾಗ ಒಂದೇ ಒಂದು ವರವನ್ನು ಮಾತ್ರ ಬೇಡುತ್ತೇನೆ. ಅದನ್ನು ನನಗೆ ಅನುಗ್ರಹಿಸು. ಎಲೈ ದೇವಿಯೇ ನಿನಗೆ ಪುನಃಪುನಃ ನಮಸ್ಕಾರಮಾಡುವೆನು.

೧೦೩, ದೇವಿಯು ಹೇಳಿದಳು---ದೈತ್ಯೇಶ್ವರನೇ, ನೀನು ಕೇಳಬೇಕೆಂದಿರುವ ವರವನ್ನು ಅವಶ್ಯಕವಾಗಿ ಕೇಳು. ಅದನ್ನು ನಾನು ಕೊಡುವೆನು. ಸಂಶಯ ಪಡಬೇಡ.

೧೦೪-೧೦೫. ಮಹಿಷಾಸುರನು ಹೇಳಿದನು --- ಯಜ್ಞಭಾಗವನ್ನು ಅನುಭವಿಸಲು ನಾನು ಅಪೇಕ್ಷಿಸುತ್ತೇನೆ. ಆದುದರಿಂದ ವರವನ್ನು ನೀನು ಕೊಡಬಯಸಿದರೆ ನೀನು ಅನುಗ್ರಹಮಾಡಿ ಸಮಸ್ತ ಯಜ್ಞಗಳಲ್ಲಿಯೂ ದೇವಾದಿಗಳಿಗೆ ಕೊಡುವಂತೆ ನನಗೂ ಯಜ್ಞಭಾಗವನು ಕೊಟ್ಟು ನನ್ನನ್ನೂ ಪೂಜ್ಯನನ್ನಾಗಿ ಆಗುವಂತಯೂ,

ತ್ವತ್ಪಾದಸೇವಾಂ ನ ತ್ಯಕ್ಷೇ ಯಾವತ್ಸೂರ್ಯಃ ಪ್ರವರ್ತತೇ ।
ಏವಂ ವರದ್ವಯಂ ದೇಹಿ ಯದಿ ದೇಯೋ ವರೋ ಮಮ ॥ ೧೦೫ ॥

॥ ದೇವ್ಯುವಾಚ ॥
ಯಜ್ಞಭಾಗಃ ಸುರೇಭ್ಯಸ್ತು ಕಲ್ಪಿತಾ ವೈ ಪೃಥಕ್ಪೃಥಕ್ ।
ಭಾಗೋ ನ ವಿದ್ಯತೇ ಚಾನ್ಯೋ ಯಂ ದಾಸ್ಯಾಮಿ ತವಾಧುನಾ ॥ ೧೦೬ ॥

ಕಿಂತು ತ್ವಯಿ ಮಯಾ ಯುದ್ಧೇ ನಿಪತೇ ಮಹಿಷಾಸುರ ।
ನೈವ ತ್ಯಕ್ಷ್ಯಸಿ ಮತ್ಪಾದಂ ಸತತಂ ನಾತ್ರ ಸಂಶಯಃ ॥ ೧೦೭ ॥

ಮಮ ಪ್ರವರ್ತತೇ ಪೂಜಾ ಯತ್ರ ಯತ್ರ ಚ ತತ್ರ ತೇ
ಪೂಜ್ಯಶ್ಚಿಂತ್ಯಶ್ಚ ತತ್ರೈವ ಕಾಯೋ ಯಸ್ತವ ದಾನವ ॥ ೧೦೮ ॥

ಇತಿ ಶ್ರುತ್ವಾ ವಚಸ್ತಸ್ಯಾಃ ಪ್ರತ್ಯೂಷೇ ಮಹಿಷಾಸುರಃ ।
ವರಂ ಪ್ರಾಪ್ಯೇಹ ಮುದಿತಃ ಪ್ರಸನ್ನವದನಸ್ತದಾ ॥ ೧೦೯ ॥

ಮತ್ತು ಸೂರ್ಯನು ಪ್ರಪಂಚದಲ್ಲಿ ಉದಯಿಸುತ್ತಿರುವ ಪರ್ಯಂತವೂ ನಿನ್ನ ಪಾದ ಸೇವೆಯನ್ನು ನಾನು ಬಿಡದೆ ಮಾಡುವಂತೆಯೂ ಈ ಎರಡು ವರಗಳನ್ನೂ ನನಗೆ ಅನುಗ್ರಹಿಸು.

೧೦೬. ದೇವಿಯು ಹೇಳಿದಳು—ಯಜ್ಞಭಾಗಗಳು ಆಯಾಯ ದೇವತೆಗಳಿಗೆ ಬೇರೆ ಬೇರೆಯಾಗಿ ನಿರ್ದಿಷ್ಟವಾಗಿವೆ. ಈಗ ನಿನಗೆ ಕೊಡಲು ಬೇರೆ ಯಾವ ಹವಿರ್ಭಾಗವೂ ಉಳಿದಿರುವುದಿಲ್ಲ.

೧೦೭. ಎಲೈ ಮಹಿಷಾಸುರನೇ ನೀನು ನನ್ನೊಡನೆ ಯುದ್ಧಮಾಡಿ ಮಡಿದಲ್ಲಿ ನನ್ನ ಪಾದವನ್ನು ಎಂದಿಗೂ ಬಿಡದಿರುವೆ. ಇದರಲ್ಲಿ ಸಂಶಯವಿಲ್ಲವು.

೧೦೮. ಆದರೆ, ಎಲ್ಲೆಲ್ಲಿ ನನ್ನ ಪೂಜೆಯು ನಡೆಯುವುದೋ ಅಲ್ಲೆಲ್ಲಾ ನೀನೂ, ನಿನ್ನ ಶರೀರವೂ ನನ್ನ ಪಾದಸಮೀಪದಲ್ಲಿಯೇ ಇರುವುದರಿಂದ, ಧ್ಯಾನಿಸಲ್ಪಟ್ಟು, ಪೂಜಿಸಲ್ಪಡುವೆ.

೧೦೯. ಈರೀತಿ ದೇವಿಯ ಮಾತನ್ನು ಕೇಳಿ ಮಹಿಷಾಸುರನು ಪ್ರಾತಃಕಾಲದಲ್ಲಿ ದೇವಿಯಿಂದ ವರವನ್ನು ಪಡೆದು ಹರ್ಷದಿಂದ ಅರಳಿದ ಮುಖವುಳ್ಳವನಾದನು.

ಉಗ್ರಚಂಡೇ ಭದ್ರಕಾಲಿ ದುರ್ಗೇ ದೇವಿ ನಮೋಽಸ್ತು ತೇ ।
ಪ್ರಭೂತಾ ಮೂರ್ತಯೋ ದೇವಿ ಭವತ್ಯಾಂ ಸಕಲಾತ್ಮಿಕಾಃ ॥ ೧೧೦ ॥

ಕಾಭಿಸ್ತೇ ಮೂರ್ತಿಭಿಃ ಪೂಜ್ಯೋ ಯಜ್ಞೋಽಹಂ ಪರಮೇಶ್ವರಿ ।
ತತ್ಸಮಾಚಕ್ಷ್ವ ಯದಿ ಮೇ ಭವತ್ಯೇಹ ಕೃಪಾ ಕೃತಾ ॥ ೧೧೧ ॥

॥ ದೇವ್ಯುವಾಚ ॥

ಯಾನಿ ನಾಮಾನಿ ಪ್ರೋಕ್ತಾನಿ ತ್ವಯೇಹ ಮಹಿಷಾಸುರ ।
ತಾಸು ಮೂರ್ತಿಷು ಸಂಪೃಷ್ಟಃ ಪೂಜ್ಯೋ ಲೋಕೇ ಭವಿಷ್ಯತಿ ॥ ೧೧೨ ॥

ಉಗ್ರಚಂಡೇತಿ ಯಾ ಮೂರ್ತಿರ್ಭದ್ರಕಾಲೀ ಹ್ಯಹಂ ಪುನಃ ।
ಯಯಾ ಮೂರ್ತ್ಯಾ ತ್ವಾಂ ಹನಿಷ್ಯೇ ಸಾ ದುರ್ಗೇತಿ ಪ್ರಕೀರ್ತಿತಾ ॥ ೧೧೩ ॥

ಏತಾಸು ಮೂರ್ತಿಷು ಸದಾ ಪಾದಲಗ್ನೋ ನೃಣಾಂ ಭವಾನ್ ।
ಪೂಜ್ಯೋ ಭವಿಷ್ಯತಿ ಸ್ವರ್ಗೇ ದೇವಾನಮಾಪಿ ರಕ್ಷಸಾಂ ॥ ೧೧೪ ॥

೧೧೦-೧೧೧. ಎಲೈ ಉಗ್ರಚಂಡಿಯೆ, ಭದ್ರಕಾಲಿಯೇ, ದುರ್ಗಾದೇವಿಯೇ ನಿನಗೆ ನಮಸ್ಕಾರವು ಸಕಲಾತ್ಮಿಕಳಾದ ನಿನಗೆ ಅನೇಕ ರೂಪಗಳಿರುವುವು ಆ ಮೂರ್ತಿಗಳಲ್ಲಿ ಯಾವ ಮೂರ್ತಿಯ ಕೂಡ ನಾನು ಪೂಜ್ಯನೆನಿಸುವೆನು? ಎಲೈ ಪರಮೇಶ್ವರಿಯೇ ನಿನಗೆ ನನ್ನಲ್ಲಿ ದಯವಿದ್ದರೆ ಅದನ್ನು ಹೇಳು.

೧೧೨. ದೇವಿಯು ಹೇಳಿದಳು — ಎಲೈ ಮಹಿಷಾಸುರನೇ ಈಗ ನೀನು ಯಾವ ನನ್ನ ಹೆಸರುಗಳನ್ನು ಹೇಳಿದೆಯೋ ಆ ಮೂರ್ತಿಗಳ ಕೂಡ ನೀನು ಲೋಕದಲ್ಲಿ ಪೂಜ್ಯನಾಗುವೆ.

೧೧೩. ನಿನ್ನನ್ನು ಯಾವ ರೂಪದಿಂದ ನಾನು ಕೊಲ್ಲುವೆನೋ ಆ ಮೂರ್ತಿಗೆ ಉಗ್ರಚಂಡಿಯೆಂದೂ, ಭದ್ರಕಾಲಿಯೆಂದೂ, ದುರ್ಗೆಯೆಂದೂ ಹೆಸರು ಪ್ರಸಿದ್ಧವಾಗಿರುವುದು.

೧೧೪. ಈ ಮೂರ್ತಿಗಳ ಪಾದತಳದಲ್ಲಿ ನೀನು ಇಪ್ಪುಕೊಂಡು ಮನುಷ್ಯರಿಗೂ ಸ್ವರ್ಗದಲ್ಲಿರುವ ದೇವತೆಗಳಿಗೂ ರಾಕ್ಷಸರಿಗೂ ಪೂಜ್ಯನಾಗಿರುತ್ತಿ.

ಆದಿಸೃಷ್ಟ್ಯಾವುಗ್ರಚಂಡಾಮೂರ್ತ್ಯಾ ತ್ವಾಂ ನಿಹತಃ ಪುರಾ ।
ದ್ವಿತೀಯಸೃಷ್ಟೌ ತು ಭವಾನ್ ಭದ್ರಕಾಲ್ಯಾ ಮಯಾ ಹತಃ ॥ ೧೧೫ ॥

ದುರ್ಗಾರೂಪೇಣಾಧುನಾ ತ್ವಾಂ ಹನಿಷ್ಯಾಮಿ ಸಹಾನುಗಂ ।
ಕಂತು ಪೂರ್ವಂ ನ ಗೃಹೀತಸ್ತ್ವಂ ಮಯಾ ಪಾದಯೋಸ್ತಲೇ ॥ ೧೧೬ ॥

ಅಧುನಾ ಪ್ರಾರ್ಥಿತವರೋ ಗೃಹೀತಃ ಪೂರ್ವಕಾಮಯೋಃ ।
ಗೃಹೀತವ್ಯಶ್ಚ ಪಶ್ಚಾತ್ತ್ವಂ ಯಜ್ಞಭಾಗೊಪಭುಕ್ತಯೇ ॥ ೧೧೭ ॥

॥ ಔರ್ವ ಉವಾಚ ॥

ಇತ್ಯುಕ್ತ್ವಾ ಸಾ ಮಹಾಮಾಯಾ ಉಗ್ರಚಂಡಾಹ್ವಯಾಂ ತನುಂ ।
ದರ್ಶಯಾಮಾಸ ಚ ತದಾ ಮಹಿಷಾಯಾಸುರಾಯ ವೈ ॥ ೧೧೮ ॥

ಯಾ ಮೂರ್ತಿಃ ಷೋಡಶಭುಜಾ ಭದ್ರಕಾಲೀತಿ ವಿಶ್ರುತಾ ।
ತಥೈವ ಮೂರ್ತಿಂ ಬಾಹುಭ್ಯಾಮಪರಾಭ್ಯಾಂ ತು ಬಿಭ್ರತೀ ॥ ೧೧೯ ॥

---

೧೧೫. ಆದಿ ಸೃಷ್ಟಿಯಲ್ಲಿ ನಾನು ಉಗ್ರಚಂಡಾ ಎಂಬ ರೂಪವನ್ನು ತಾಳಿ ನಿನ್ನನ್ನು ಸಂಹರಿಸಿದೆನು. ಎರಡನೆಯ ಸೃಷ್ಟಿಯಲ್ಲಿ ಭದ್ರಕಾಲಿಯ ರೂಪದಿಂದ ಸಂಹರಿಸಿದೆನು. ಈಗ ತಮ್ಮನೊಡನೆ ಇರುವ ನಿನ್ನನ್ನು ದುರ್ಗಾರೂಪದಿಂದ ಕೊಲ್ಲುವೆನು.

೧೧೬-೧೧೭. ಆದರೆ ಹಿಂದಿನ ಎರಡು ರೂಪಗಳಲ್ಲಿ ನೀನು ನನ್ನ ಪಾದತಲದಲ್ಲಿ ಇರಲಿಲ್ಲವು. ಈಗ ನೀನು ಪ್ರಾರ್ಥಿಸಿದ ವರದಂತೆ ನನ್ನ ಪಾದತಲದಲ್ಲಿರುವಂತೆ ಅನುಗ್ರಹಿಸುವೆನು ಮತ್ತು ನೀನು ಕೇಳಿದ ಮೊದಲನೆಯ ವರದಂತೆ ಯಜ್ಞಭಾಗವನ್ನು ಅನುಭವಿಸಲು ಮುಂದೆ ಅನುಗ್ರಹಿಸುವೆನು.

೧೧೮. ಔರ್ವಮುನಿಯು ಹೇಳಿದನು:— ಹೀಗೆ ಹೇಳಿ ಮಹಾಮಾಯೆಯು ಹಿಂದೆ ತಾನು ಧರಿಸಿದ್ದ ಉಗ್ರಚಂಡಾ ಎಂಬ ಮೂರ್ತಿಯ ರೂಪವನ್ನು ಆಗ ಮಹಿಷಾಸುರನಿಗೆ ತೋರಿಸಿದಳು.

೧೧೯-೧೨೧. ಯಾವ ಮೂರ್ತಿಯು ಹದಿನಾರು ಭುಜಗಳಿಂದ ಕೂಡಿ ಭದ್ರಕಾಲಿ ಎಂದು ಪ್ರಸಿದ್ಧವಾಗಿರುವುದೋ ಅಂತಹ ಮೂರ್ತಿಯ ಆಕಾರವೇ ಉಗ್ರಚಂಡೀಪೀಠಿಗೆ ಇದ್ದಿತು. ಅದರ ಜೊತೆಗೆ ಇನ್ನೆರಡು ಭುಜಗಳೂ ಇದ್ದು ಅವುಗಳಲ್ಲಿ ಒಂದಕ್ಕೆ ಬಲಗೈಯಲ್ಲಿ

ದಕ್ಷಿಣಾಧೋ ಗದಾಂ ವಾಮಸಾಣಿನಾ ಪಾನಪಾತ್ರಕಂ ।
ಸುರಪೂರ್ಣಂ ಚ ಶಿರಸಾ ಮುಂಡಮಾಲಾಂ ಬಿಲೇಶಯಂ ॥ ೧೨೦ ॥

ಭಿನ್ನಾಂಜನಚಯಪ್ರಖ್ಯಾ ಪ್ರಚಂಡಾ ಸಿಂಹವಾಹಿನೀ ।
ರಕ್ತನೇತ್ರಾ ಮಹಾಕಾಯಾ ಯುಕ್ತಾಷ್ಟಾದಶಬಾಹುಭಿಃ ॥ ೧೨೧ ॥

ಉಗ್ರಚಂಡಾ ಭದ್ರಕಾಲೀ ದೇವ್ಯಾ ಮೂರ್ತಿದ್ವಯಂ ತಥಾ ।
ಮಹಿಷಃ ಪ್ರಣನಾಮಾಶು ದೃಷ್ಟ್ವಾ ವಿಸ್ಮಯಮಾಗತಃ ॥ ೧೨೨ ॥

ತತೋ ಯಥಾ ಪದಾಕ್ರಮ್ಯ ನಿಹತೋ ಮಹಿಷಾಸುರಃ ।
ತಥೈವ ಜಗೃಹೇ ಪಾದತಲೇ ದೇವೀದ್ವಯಂ ತು ತಂ ॥ ೧೨೩ ॥

ಹೃದಿ ಶೂಲೇನ ನಿರ್ಭಿನ್ನಂ ಮಾಹಿಷಂ ವಿಶಿರಸ್ಕಕಂ ।
ಗೃಹೀತಕೇಶಂ ದೇವ್ಯಾ ತು ನಿರ್ಯದಂತ್ರವಿಭೂಷಿತಂ ॥ ೧೨೪ ॥

ಕೆಳಭಾಗದಲ್ಲಿ ಗದೆಯನ್ನೂ, ಎಡಗೈಯ್ಯಲ್ಲಿ ಮದ್ಯದಿಂದ ತುಂಬಿದ ಪಾನಪಾತ್ರೆಯನ್ನೂ ಆ ದೇವಿಯು ಧರಿಸಿದ್ದಳು. ಶಿರಸ್ಸಿನಲ್ಲಿ ಮುಂಡಗಳ ಮಾಲೆಯನ್ನೂ, ಸರ್ಪವನ್ನೂ ಧರಿಸಿ, ಕಪ್ಪಗಿರುವ ಕಾಡಿಗೆಯಂತೆ ಕಾಂತಿಯನ್ನು ಬೀರುತ್ತಾ ಕ್ರೂರರೂಪವುಳ್ಳವಳಾಗಿ ಸಿಂಹದಮೇಲೆ ಕುಳಿತು ಕೆಂಪಾದ ಕಣ್ಣುಗಳಿಂದಲೂ, ದೊಡ್ಡ ಶರೀರದಿಂದಲೂ, ಹದಿನೆಂಟು ಭುಜಗಳಿಂದಲೂ ಪ್ರಕಾಶಿಸುತ್ತಾ ಆ ಮಹಿಷಾಸುರನಿಗೆ ಗೋಚರಿಸಿದಳು.

೧೨೨. ಈರೀತಿ ದೇವಿಯು ಉಗ್ರಚಂಡಾ ಮತ್ತು ಭದ್ರಕಾಲೀ ಮೂರ್ತಿಗಳನ್ನು ಮಹಿಷಾಸುರನಿಗೆ ದರ್ಶನ ಮಾಡಿಸಲು ಅವನು ಕೂಡಲೇ ವಿಸ್ಮಯಗೊಂಡು ಆ ಮೂರ್ತಿದ್ವಯಗಳನ್ನು ನಮಸ್ಕರಿಸಿದನು.

೧೨೩. ಬಳಿಕ ಮಹಿಷಾಸುರನು ದೇವಿಯ ಪಾದದಿಂದ ತುಳಿಯಲ್ಪಟ್ಟ ಯಾವರೀತಿ ಹತನಾದನೋ ಅವರಂತೆ ಆ ಉಗ್ರಚಂಡಾಭದ್ರಕಾಲಿಯರ ಪಾದತಲದಲ್ಲಿ ಮಹಿಷಾಸುರನು ಸಿಕ್ಕಿಬಿದ್ದಂತೆ ಅವನಿಗೆ ಗೋಚರಿಸಿತು.

೧೨೪-೧೨೫. ದೇವಿಯು ತನ್ನ ಎಡೆಯನ್ನು ಶೂಲದಿಂದ ಇರಿಯುತ್ತಿರುವಂತೆಯೂ, ಮಹಿಷರೂಪವಾದ ಶಿರಸ್ಸನ್ನು ಕತ್ತರಿಸಿ ಕೇಶಗಳಿಂದ ಅದನ್ನು ಎತ್ತಿ ಹಿಡಿದಿರುವಂತೆಯೂ, ರಕ್ತವನ್ನು ಕಾರುತ್ತಾ ಭಯಂಕರವಾಗಿ ಕಾಣುತ್ತಲೂ ಇರುವ

ವಮುದ್ರಕ್ತಂ ಮಹಾಕಾಯಂ ದೃಷ್ಟ್ವಾ ಪೂರ್ವತನುಂ ಸ್ವಕಂ ।
ಭಯಂ ಪ್ರಾಪ್ಯಾಸುರಃ ಸೋಽಥ ಶುಶೋಚ ಚ ಮುಮೋಹ ಚ ॥ ೧೨೫ ॥

ತತಸ್ತು ಕ್ಷಣಮಾತ್ಮಾನಂ ಸಂಸ್ತಭ್ಯ ಸ ತು ದಾನವಃ ।
ಪ್ರಣಮ್ಯ ವಚನಂ ದೇವೀಮಿದಮಾಹ ಸಗದ್ಗದಂ ॥ ೧೨೬ ॥

॥ ಮಹಿಷ ಉವಾಚ ॥

ಯದಿ ದೇವಿ ಪ್ರಸನ್ನಾಸಿ ಯಜ್ಞಭಾಗಾಶ್ಚ ಕಲ್ಪಿತಾಃ ।
ತದಾ ಮಮಾನ್ಯಥಾ ನಾಶ ಏವಮೇತದ್ಭವೇನ್ನ ಹಿ ॥ ೧೨೭ ॥

ಯಥಾಹಂ ನ ಸುರೈಃ ಸಾರ್ಧಂ ಕರಿಷ್ಯೇ ವೈರಮದ್ಭುತಂ ।
ತಥಾ ಮಾಂ ಕುರು ಭೋ ದೇವಿ ನ ಜನ್ಮ ಪ್ರಲಭೇ ಯಥಾ ॥ ೧೨೮ ॥

॥ ದೇವ್ಯುವಾಚ ॥

ಆರಾಧಿತಾಹಂ ಭವತಾ ವರೋ ದತ್ತೋ ಮಯಾ ತವ ।
ವಧ್ಯಶ್ಚ ತ್ವಂ ಮಮೈವೇಹ ನಾತ್ರ ಕಾರ್ಯಾ ವಿಚಾರಣಾ ॥ ೧೨೯ ॥

ದೊಡ್ಡದಾದ ಪೂರ್ವಜನ್ಮದ ತನ್ನ ಶರೀರವನ್ನು ನೋಡಿ ಆ ಮಹಿಷಾಸುರನು ಬಹಳ ಭಯಗೊಂಡು ವ್ಯಸನದಿಂದ ಮೂರ್ಛಿಹೋದನು.

೧೨೬. ಬಳಿಕ ಸ್ವಲ್ಪ ಹೊತ್ತಿನಮೇಲೆ ಚೇತರಿಸಿಕೊಂಡೆದ್ದು ಆ ಮಹಿಷಾಸುರನು ದೇವಿಯನ್ನು ನಮಸ್ಕರಿಸಿ ಭಯದಿಂದ ತೊದಲುತ್ತಿರುವ ಮಾತಿನಿಂದ ದೇವಿಯನ್ನು ಕುರಿತು ಹೀಗೆ ಹೇಳಿದನು.

೧೨೭. ಮಹಿಷಾಸುರನು ಹೇಳಿದನು:—ಎಲೈ ದೇವಿಯೇ ನೀನು ನನಗೆ ಪ್ರಸನ್ನಳಾಗಿದ್ದಲ್ಲಿ ಮತ್ತು ಯಜ್ಞಭಾಗವನ್ನು ಕಲ್ಪಿಸಿರುವುದರಿಂದ ನನಗೆ ಯಾವಾಗಲೂ ನಾಶವುಂಟಾಗದಂತೆ ಅನುಗ್ರಹಿಸು.

೧೨೮. ಅಲ್ಲದೆ ದೇವತೆಗಳೊಡನೆ ನನಗೆ ವೈರವುಂಟಾಗದಂತೆಯೂ, ಪುನಃ ನನಗೆ ಜನ್ಮವುಂಟಾಗದಂತೆಯೂ ಅನುಗ್ರಹಿಸು.

೧೨೯. ದೇವಿಯು ಹೇಳಿದಳು:—ನೀನು ನನ್ನನ್ನು ಆರಾಧಿಸಿ ನನ್ನಿಂದ ವರವನ್ನು ಪಡೆದಿರುವೆ. ಆದರೆ ಈಗ ಎಂದರೆ ಈ ಜನ್ಮದಲ್ಲಿ ನಿನ್ನನ್ನು ನಾನು ವಧಿಸಲೇ ಬೇಕಾಗಿದೆ. ಈ ವಿಚಾರದಲ್ಲಿ ಸಂಶಯವಿಲ್ಲ.

ಯತ್ತ್ವಯಾ ಪ್ರಾರ್ಥಿತಂ ಚಾಪಿ ಸರ್ವೈಃ ಸುರಗಣೈಃ ಸಹ ।
ವಿರೋಧೀ ಮೇ ಸದಾ ಮಾ ಭೂದಿತಿ ಚಾಪಿ ಭವಿಷ್ಯತಿ ॥ ೧೩೦ ॥

ಮತ್ಪಾದತಲಸಂಸ್ಪರ್ಶಾಚ್ಛರೀರಂ ತವ ದಾನವ ।
ಯಜ್ಞಭಾಗೋಽಪಭೋಗಾಯ ವಿಶೀರ್ಣಂ ನ ಭವಿಷ್ಯತಿ ॥ ೧೩೧ ॥

ತವ ಜೀವಾತ್ಮಭಿಃ ಪ್ರಾಣಾಃ ಸರ್ವ ಏವ ಮಹಾಸುರ ।
ಹರಸ್ಯ ಪಾದಸಂಯೋಗಾಚ್ಚಿರಂ ಸ್ಥಾಸ್ಯತಿ ಕೇವಲಂ ॥ ೧೩೨ ॥

ಕಲ್ಪಕೋಟಿಸಹಸ್ರಾಣಿ ತ್ರಿಂಶತ್ತ್ವಂ ಮಹಿಷಾಸುರ ।
ಶತಾನಿ ಚಾಷ್ಟಾವನ್ಯಾನಿ ಜನ್ಮ ತೇ ನ ಭವಿಷ್ಯತಿ ॥ ೧೩೩ ॥

ಇತಿ ದೇವೀ ವರಂ ದತ್ತ್ವಾ ಮಹಿಷಾಯಾಸುರಾಯ ವೈ ।
ಪ್ರಣತಾ ತೇನ ಶಿರಸಾ ತತ್ರೈವಾಂತರಧೀಯತ ॥ ೧೩೪ ॥

ಮಹಿಷೋಽಪಿ ನಿಜಂ ಸ್ಥಾನಂ ಪುನಃ ಪ್ರಾಯಾತ್ಸ ಮೋಹಿತಃ ।
ಮಾಯಯಾ ಚಾಸುರಂ ಭಾವಮಾದಾಯ ನೃಪ ಪೂರ್ವವತ್ ॥ ೧೩೫ ॥

---

೧೩೦. ನೀನು ಈಗ ಪ್ರಾರ್ಥಿಸಿದಂತೆ ದೇವತೆಗಳೊಡನೆ ನಿನಗೆ ವೈರವು ಉಂಟಾಗುವುದಿಲ್ಲ. ನೀನು ನನಗೂ ಯಾವಾಗಲೂ ವಿರೋಧಿಯಾಗುವುದಿಲ್ಲ.

೧೩೧. ಎಲೈ ದಾನವನೇ ನಿನ್ನ ಶರೀರವು ನನ್ನ ಪಾದತಲದಲ್ಲಿ ಬಿದ್ದು ಛಿನ್ನವಾಗಿರುವುದರಿಂದ ಯಜ್ಞಭಾಗಕ್ಕೆ ಅನರ್ಹವಾಗಿರುವುದು.

೧೩೨. ಎಲೈ ದೈತ್ಯಶ್ರೇಷ್ಠನೇ ನಿನ್ನ ಪ್ರಾಣಗಳೆಲ್ಲವೂ ಮಹೇಶ್ವರನ ಪಾದಕಮಲಗಳಲ್ಲಿ ಮಿಳಿತವಾಗಿ ಶಾಶ್ವತವಾಗಿ ಅಲ್ಲಿಯೇ ನೆಲಸಿರುವವು.

೧೩೩. ಎಲೈ ಮಹಿಷಾಸುರನೇ ಮೂವತ್ತುಸಾವಿರದ ಎಂಟನೂರುಕೋಟಿ ಕಲ್ಪಗಳವರೆಗೆ ನಿನಗೆ ಈ ಲೋಕದಲ್ಲಿ ಜನ್ಮವು ಉಂಟಾಗುವುದಿಲ್ಲ.

೧೩೪. ಈರೀತಿ ದೇವಿಯು ಮಹಿಷಾಸುರನಿಗೆ ವರವನ್ನು ಕೊಟ್ಟು ಅವನಿಂದ ನಮಸ್ಕೃತಳಾಗಿ ಅಲ್ಲಿಯೇ ಅಂತರ್ಧಾನವನ್ನೈದಿದಳು.

೧೩೫. ಎಲೈ ಸಗರರಾಜನೇ ಕೇಳು:—ಮಹಿಷಾಸುರನೂ ಸಹ ದೇವಿಯ ಮಾಯೆಯಿಂದ ಮೋಹಿತನಾಗಿ ಮತ್ತೆ ದೈತ್ಯಸ್ವಭಾವವನ್ನು ಹೊಂದಿ ತನ್ನ ಸ್ವಸ್ಥಾನಕ್ಕೆ ಹಿಂದಿರುಗಿದನು.

॥ ಸಗರ ಉವಾಚ ॥

ಅನೇಕೇ ನಿಹತಾ ದೈತ್ಯಾ ಮಾಯಯಾ ಲೋಕಭೂತಯೇ ॥ ೧೩೬ ॥

ತೇನೈವಾಕಾರಣೇನಾಯಂ ಪ್ರಗೃಹೀತೋ ವರಾಃ ಕಥಂ ।
ದತ್ತಾಸ್ತಸ್ಮೈ ಸಮಾಚಕ್ಷ್ವ ಮಮ ಸಮ್ಯಗ್ದ್ವಿಜೋತ್ತಮ ॥ ೧೩೭ ॥

॥ ಔರ್ವ ಉವಾಚ ॥

ಆರಾಧಿತೋ ಮಹಾದೇವೋ ರಂಭೇಣ ಸುರವೈರಿಣಾ ।
ಚಿರೇಣ ಸ ಚ ಸುಪ್ರೀತಸ್ತಪಸಾ ತಸ್ಯ ಶಂಕರಃ ॥ ೧೩೮ ॥

ಅಥ ತುಷ್ಟೋ ಮಹಾದೇವಃ ಪ್ರತ್ಯಕ್ಷಂ ರಂಭಮೂಚಿವಾನ್ ।
ಪ್ರೀತೋಽಸ್ಮಿ ತೇ ವರಂ ರಂಭ ವರಯಸ್ವ ಯಥೇಪ್ಸಿತಂ ॥ ೧೩೯ ॥

ಏವಮುಕ್ತಃ ಪ್ರತ್ಯುವಾಚ ರಂಭಸ್ತಂ ಚಂದ್ರಶೇಖರಂ ।
ಅಪುತ್ರೋಹಂ ಮಹಾದೇವ ಯದಿ ತೇ ಮಯ್ಯನುಗ್ರಹಃ ॥ ೧೪೦ ॥

೧೩೬-೧೩೭. ಸಗರರಾಜನು ಔರ್ವಮುನಿಯನ್ನು ಕೇಳಿದನು:—ಎಲೈ ಬ್ರಾಹ್ಮಣೋತ್ತಮನೇ ಲೋಕಕಲ್ಯಾಣಕ್ಕಾಗಿ ಅನೇಕ ದೈತ್ಯರು ದೇವಿಯಿಂದ ಸಂಹರಿಸಲ್ಪಟ್ಟಿರುವರು. ಆದರೆ ಈ ಮಹಿಷಾಸುರನಿಗೆ ಮಾತ್ರ ದೇವಿಯು ಅನುಗ್ರಹ ಮಾಡಿ ವರಗಳನ್ನು ಕೊಟ್ಟ ಬಗೆಯೆಂತು? ಅದನ್ನು ನನಗೆ ಹೇಳುವವನಾಗು.

೧೩೮-೧೩೯. ಔರ್ವಯುನಿಯು ಹೇಳಿದನು:—ಪೂರ್ವದಲ್ಲಿ ರಂಭಾಸುರನೆಂಬ ದೈತ್ಯನು ಮಹೇಶ್ವರನನ್ನು ಬಹುಕಾಲ ಆರಾಧಿಸಲು, ಶಂಕರನು ಅವನ ತಪಸ್ಸಿಗೆ ಮೆಚ್ಚಿ ಸಂತುಷ್ಟನಾಗಿ ಅವನಿಗೆ ಪ್ರತ್ಯಕ್ಷನಾದನು ಮತ್ತು ಆ ದೈತ್ಯನನ್ನು ಕುರಿತು ಎಲೈ ರಂಭನೇ ನಿನ್ನ ಆರಾಧನೆಯಿಂದ ಸಂತುಷ್ಟನಾಗಿರುವೆನು, ನಿನಗೆ ಬೇಕಾದ ವರವನ್ನು ಕೇಳು ಎಂದು ಹೇಳಿದನು.

೧೪೦. ಶಂಕರನು ಹೀಗೆ ಹೇಳಲು ರಂಭಾಸುರನು ಪ್ರತ್ಯುತ್ತರವಾಗಿ ಈರೀತಿ ಪ್ರಾರ್ಥಿಸಿದನು—ಎಲೈ ಮಹಾದೇವನೇ, ನೀನು ನನ್ನಲ್ಲಿ ಅನುಗ್ರಹವನ್ನು ಮಾಡುವುದಾದರೆ ನನಗೆ ಮಕ್ಕಳಿಲ್ಲ ಆದುದರಿಂದ ಮೂರು ಜನ್ಮದಲ್ಲಿಯೂ ನೀನೇ ನನಗೆ ಪುತ್ರನಾಗಬೇಕು.

ಮಮ ಜನ್ಮತ್ರಯೇ ಪುತ್ರೋ ಭವಾನ್ ಭವತು ಶಂಕರ।
ಅವಧ್ಯಃ ಸರ್ವಭೂತಾನಾಂ ಜೇತಾ ಚ ತ್ರಿದಿವೌಕಸಾಂ ॥ ೧೪೧ ॥

ಚಿರಾಯುಶ್ಚ ಯಶಸ್ವೀ ಚ ಲಕ್ಷ್ಮೀವಾನ್ಸ ಚ ಶಂಕರ।
ಏವಮುಕ್ತಸ್ತು ದೈತ್ಯೇನ ಪ್ರತ್ಯುವಾಚ ವೃಷಧ್ವಜಃ ॥ ೧೪೨ ॥

ಭವತ್ವೇತದ್ವಾಂಛಿತಂ ತೇ ಭವಿಷ್ಯಾಮಿ ಸುತಸ್ತವ।
ಇತ್ಯುಕ್ತ್ವಾ ಸ ಮಹಾದೇವಸ್ತತ್ರೈವಾಂತರಧೀಯತ ॥ ೧೪೩ ॥

ರಂಭೋಽಪಿ ಯಾತಃ ಸ್ವಸ್ಥಾನಂ ಜಹರ್ಷೋತ್ಫುಲ್ಲವಿಲೋಚನಃ।
ಪಥಿ ಗಚ್ಛನ್ಸ ರಂಭೋಽಥ ದದರ್ಶ ಮಹಿಷೀಂ ಶುಭಾಂ ॥ ೧೪೪ ॥

ತ್ರಿಹಾಯಣೀಂ ಚಿತ್ರವರ್ಣಾಂ ಸುಂದರೀಮೃತುಶಾಲಿನೀಂ।
ಸ ತಾಂ ದೃಷ್ಟ್ವಾಽಥ ಮಹಿಷೀಂ ರಂಭಃ ಕಾಮೇನ ಮೋಹಿತಃ ॥ ೧೪೫ ॥

---

೧೪೧. ಎಲೈ ಶಂಕರನೇ ನನಗೆ ಆಗುವ ಪುತ್ರನು ಯಾರಿಂದಲೂ ಸಂಹರಿಸಲ್ಪಡದವನಾಗಿಯೂ, ದೇವತೆಗಳನ್ನು ಜಯಿಸುವವನಾಗಿಯೂ, ಬಹುಕಾಲ ಆಯಸ್ಸುಳ್ಳವನಾಗಿಯೂ, ಕೀರ್ತಿವಂತನಾಗಿಯೂ ಐಶ್ವರ್ಯವಂತನಾಗಿಯೂ ಇರಬೇಕು. ಇಂತಹ ಪುತ್ರನನ್ನು ನನಗೆ ಅನುಗ್ರಹಿಸಬೇಕು.

೧೪೨-೧೪೩. ರಂಭಾಸುರನು ಹೀಗೆ ಪ್ರಾರ್ಥಿಸಲು, ಶಂಕರನು ಅವನನ್ನು ಕುರಿತು ಎಲೈ ದಾನವನೇ, ನಿನ್ನ ಇಷ್ಟದಂತೆ ನಿನಗೆ ನಾನೇ ಅಂತಹ ಪುತ್ರನಾಗುವೆನು ಎಂದು ಹೇಳಿ ಅಲ್ಲಿಯೇ ಅಂತರ್ಧಾನನಾದನು.

೧೪೪. ರಂಭಾಸುರನೂ, ಸಹ ಸಂತೋಷದಿಂದ ವಿಕಸಿತವಾದ ಕಣ್ಣುಗಳುಳ್ಳವನಾಗಿ ತನ್ನ ಸ್ಥಾನವನ್ನು ಕುರಿತು ಹೊರಟುಬರುತ್ತಿದ್ದಾಗ ದಾರಿಯಲ್ಲಿ ಒಂದು ಲಕ್ಷಣವಾದ ಮಹಿಷಿ (ಎಮ್ಮೆ)ಯನ್ನು ನೋಡಿದನು.

೧೪೫. ಆ ಮಹಿಷಿಯು ಯೌವನದಿಂದ ಕೂಡಿ ಸುಂದರವಾಗಿಯೂ, ವಿಚಿತ್ರವರ್ಣ ವುಳ್ಳದ್ದಾಗಿಯೂ, ಆಗತಾನೆ ಪುಷ್ಪವತಿಯಾಗಿಯೂ ಇದ್ದಿತು. ಅದನ್ನು ನೋಡಿ ರಂಭಾಸುರನು ಕಾಮಪರವಶನಾದನು.

ದೋರ್ಭ್ಯಾಂ ಗೃಹೀತ್ವಾ ಚ ತದಾ ಚಕಾರ ಸುರತೋತ್ಸವಂ ।
ತಯೋಃ ಪ್ರವೃತ್ತೇ ಸುರತೇ ತದಾ ಸಾ ತಸ್ಯ ತೇಜಸಾ ॥ ೧೪೬ ॥

ದಧಾರ ಮಹಿಷೀ ಗರ್ಭಂ ತದಾಽಭೂನ್ಮಹಿಷಾಸುರಃ ।
ತಸ್ಯಾಂ ಸ್ವಾಂಶೇನ ಗಿರಿಶಸ್ತತ್ಪುತ್ರತ್ವಮವಾಪ್ತವಾನ್ ॥ ೧೪೭ ॥

ಪವೃಧೇ ಸ ತದಾ ರಾಂಭಿಃ ಶುಕ್ಲಪಕ್ಷಸಮುದ್ರವತ್ ।
ತಂ ಚ ಕಾತ್ಯಾಯನಮುನಿಃ ಶಪ್ತವಾನ್ಮಹಿಷಾಸುರಂ ॥ ೧೪೮ ॥

ದುರ್ಣಯಂ ವೀಕ್ಷ್ಯ ಶಿಷ್ಯಾರ್ಥೇ ಶಿಷ್ಯಾನುಗ್ರಹಕಾರಕಃ ।
ಕಾತ್ಯಾಯನೇನ ಶಪ್ತಂ ತಂ ವಿಜ್ಞಾಯ ಮಹಿಷಾಸುರಂ ॥ ೧೪೯ ॥

ಪ್ರಾಹ ಪ್ರಣಾಮಪೂರ್ವಂ ತು ಚಂಡಿಕಾಂ ಚಂದ್ರಶೇಖರಃ ।
॥ ಈಶ್ವರ ಉವಾಚ ॥
ದೇವಿ ಕಾತ್ಯಾಯನೇನಾರ್ಯ ಶಪ್ತೋಽದ್ಯ ಮಹಿಷಾಸುರಃ ॥ ೧೫೦ ॥

೧೪೬-೧೪೭. ಆಗ ರಂಭಾಸುರನು ಆ ಮಹಿಷಿಯನ್ನು ತನ್ನ ಎರಡು ಕೈಗಳಿಂದಲೂ ಆಲಿಂಗನೆಮಾಡಿ ರತಿಕ್ರೀಡೆಯನ್ನೆಸಗಿದನು. ಈರೀತಿ ರತಿಕ್ರೀಡೆಯು ನಡೆಯಲು ಆ ಮಹಿಷಿಯು ಅವನ ತೇಜಸ್ಸಿನಿಂದ ಗರ್ಭವನ್ನು ಧರಿಸಿತು. ಮಹಾದೇವನು ತನ್ನ ಅಂಶದಿಂದ ಆ ಮಹಿಷಿಯಲ್ಲಿ ಮಹಿಷಾಸುರನೆಂಬ ಹೆಸರಿನಿಂದ ಆ ರಂಭಾಸುರನಿಗೆ ಪುತ್ರನಾಗಿ ಜನಿಸಿದನು.

೧೪೮. ಆ ರಂಭಾಸುರನ ಮಗನು ಶುಕ್ಲಪಕ್ಷದ ಸಮುದ್ರದಂತೆ ದಿನದಿನಕ್ಕೂ ಸ್ರವೃದ್ಧಮಾನನಾದನು. ಆಗ ಒಂದು ಸಮಯದಲ್ಲಿ ಈ ಮಹಿಷಾಸುರನು ಕಾತ್ಯಾಯನ ಮುನಿಯ ಶಿಷ್ಯನ ವಿಚಾರದಲ್ಲಿ ಮಾಡಿದ ದುರ್ನಡತೆಯನ್ನು ಕಂಡು ಆ ಮುನಿಯು ತನ್ನ ಶಿಷ್ಯನ ಅನುಗ್ರಹಕ್ಕಾಗಿ ಮಹಿಷಾಸುರನನ್ನು ಶಪಿಸಿದನು.

೧೪೯. ಹೀಗೆ ಕಾತ್ಯಾಯನಮುನಿಯು ಮಹಿಷಾಸುರನನ್ನು ಶಪಿಸಿದ ವಿಚಾರವನ್ನು ತಿಳಿದು, ಶಂಕರನು ದೇವಿಯನ್ನು ನಮಸ್ಕರಿಸಿ ಹೀಗೆ ಹೇಳಿದನು.

೧೫೦. ಈಶ್ವರನು ಹೇಳಿದನು—ಎಲೈ ಜಗತ್ಸ್ವರೂಪಳಾದ ದೇವಿಯೇ, ಸ್ತ್ರೀಯಿಂದ ನಿನಗೆ ಮರಣವಾಗುವುದೆಂದು ಮಹಿಷಾಸುರನಿಗೆ ಕಾತ್ಯಾಯನಮುನಿಯು ಶಾಪವನ್ನು ಕೊಟ್ಟಿರುವನು.

ಯೋಽಷ್ವಿದಿನಾಶಕರ್ತ್ರೀತಿ ಭವಿತೇತಿ ಜಗನ್ಮಯೇ ।
ನಿಃಸಂಶಯಮೃಷೇರ್ವಾಕ್ಯಂ ಭವಿಷ್ಯತಿ ನ ಸಂಶಯಃ ॥ ೧೫೧ ॥

ಮದೀಯೋ ಮಹಿಷಃ ಕಾಯಸ್ತ್ವಯಾ ದೇವಿ ಜಗನ್ಮಯಿ ।
ಹಂತವ್ಯಃ ಸತತಂ ಯೋಗಯುಕ್ತಃ ಪೂರ್ವೇ ಪರೇಽಪಿ ಚ ॥ ೧೫೨ ॥

ಹರಿರ್ಹರಿಸ್ವರೂಪೇಣ ನ ತ್ವಾಂ ವೋಢುಂ ಕ್ಷಮೋಽಧುನಾ ।
ಮಮಾಯಂ ಮಾಹಿಷಃ ಕಾಯಸ್ತವ ವೋಢಾ ಭವಿಷ್ಯತಿ ॥ ೧೫೩ ॥

ಇತಿ ಪೂರ್ವಂ ಮಹಾದೇವೋ ದೇವೀಂ ಪ್ರಾರ್ಥಿತವಾನ್ಪುರಾ ।
ತೇನ ದೇವೀ ಮಹಾದೇವಂ ಜಗ್ರಾಹ ಮಹಿಷಾಸುರಂ ।
ತ್ರಿಷು ಜನ್ಮಸು ಪುತ್ರೋಽಭೂದ್ರಂಭಸ್ಯ ಭಗವಾನ್ ಹರಃ ॥ ೧೫೪ ॥

ಸೃಷ್ಟಿತ್ರಯೇ ಸ ರಂಭೋಽಪಿ ರಂಭ ಏವ ವ್ಯಜಾಯತ ।
ಆಸುರಂ ತಾದೃಶಂ ತೇಪೇ ತಪಃ ಪರಮದಾರುಣಂ ॥ ೧೫೫ ॥

೧೫೧-೧೫೩. ಋಷಿಯ ವಾಕ್ಯವು ಖಂಡಿತವಾಗಿಯೂ ನಿಜವಾಗುವುದು. ಇದರಲ್ಲಿ ಸಂಶಯವಿಲ್ಲ. ಯೋಗಸ್ವರೂಪವಾದ ಮತ್ತು ನನ್ನ ಅಂಶದಿಂದ ಕೂಡಿದ ಮಹಿಷಶರೀರವು ಈಗಲೂ ಮುಂದೆಯೂ ನಿನ್ನಿಂದ ಸಂಹರಿಸಲ್ಪಡಬೇಕು.

೧೫೩. ನಿನ್ನ ವಾಹನವಾದ ಸಿಂಹವು ತನ್ನ ಶರೀರದಿಂದ ನಿನ್ನನ್ನು ಧರಿಸಲು ಈಗ ಅಸಮರ್ಥವಾಗಿರುವುದು. ಆದುದರಿಂದ ನನ್ನ ಮಹಿಷಶರೀರವು ನಿನ್ನನ್ನು ಧರಿಸಲು ಶಕ್ತವಾಗಿರುವುದು.

೧೫೪. ಹೀಗೆ ಮಹಾದೇವನು ದೇವಿಯನ್ನು ಪೂರ್ವದಲ್ಲಿ ಪ್ರಾರ್ಥಿಸಿದನು ಆದುದರಿಂದ ಮಹಾದೇವನ ಅಂಶಭೂತವಾದ ಮಹಿಷಾಸುರನನ್ನು ದೇವಿಯು ಅನುಗ್ರಹಿಸಿದಳು. ಮತ್ತು ಭಗವಾನ್ ಶಂಕರನು ಮೂರು ಜನ್ಮಗಳಲ್ಲಿಯೂ ರಂಭಾಸುರನಿಗೆ ಪುತ್ರನಾಗಿ ಜನಿಸಿದನು.

೧೫೫. ಆ ರಂಭಾಸುರನು ಮೂರಾವೃತ್ತಿ ನಡೆದ ಸೃಷ್ಟಿಯಲ್ಲಿಯೂ ರಂಭಾಸುರನಾಗಿಯೇ ಹುಟ್ಟಿ ಅಸುರಭಾವದಿಂದ ಕೂಡಿ ಘೋರವಾದ ತಪಸ್ಸನ್ನು ಮಾಡಿದನು.

ತಥೈವಾರಾಧಿತಃ ಶಂಭುಃ ಪುತ್ರಾರ್ಥೇ ಪ್ರದದೌ ವರಂ ।
ತಥೈವ ಮಹಿಷೀಂ ಭೇಜೇ ಪ್ರಥಮಂ ಸುರತಾಯ ಸಃ ॥ ೧೫೬ ॥

ತಸ್ಯಾಂ ತಥಾಭವದ್ವೀರೋ ದಾನವೋ ಮಹಿಷಾಸುರಃ ।
ತಥೈವ ಶೇಪೇ ಭಗವಾನ್ಮುನಿಃ ಕಾತ್ಯಾಯನಸ್ತು ತಂ ॥ ೧೫೭ ॥

ಇತಿ ಪ್ರವೃತ್ತೇ ಪೂರ್ವೇಽಸ್ಮಿನ್ವರಸ್ಮಿನ್ನ ತು ಜನ್ಮನಿ ।
ಮಹಿಷಃ ಪೂಜಯಿತ್ವಾಥ ದೇವೀಂ ವರಮಾಯಾಚತ ॥ ೧೫೮ ॥

ತೃತೀಯೇ ಜನ್ಮನಿ ವರಂ ಪ್ರಾಪ್ಯ ಕಲ್ಪಾವಶೇಷತಃ ।
ನೇಹ ಮೇ ಜನ್ಮ ಭವಿತೇತ್ಯೇವಂ ವರಮಯಾಚತ್ ॥ ೧೫೯ ॥

ತೇನ ದೇವೀಪಾದತಲೇ ತಿಷ್ಠತ್ಯೇವೋಸುರೋಽಧುನಾ ।
ನೋತ್ಪತ್ತಿರಪಿ ತಸ್ಯಾಥ ಸಂವರ್ತಾನ್ತಾದಭೂನ್ನೃಪ ॥ ೧೬೦ ॥

೧೫೬-೧೫೭. ಆ ರಂಭಾಸುರನು ಈಗ ನಡೆಸಿದಂತೆಯೇ ಹಿಂದೆಯೂ ಪುತ್ರ ಪ್ರಾಪ್ತಿಗೋಸ್ಕರ ಶಂಕರನನ್ನು ಆರಾಧಿಸಿ ವರವನ್ನು ಪಡೆದನು. ಮತ್ತು ಮಹಿಷಿಯಲ್ಲಿ ರತಿಕ್ರೀಡೆಯನ್ನೆಸಗಿ ಪರಾಕ್ರಮಶಾಲಿಯಾದ ಮಹಿಷಾಸುರನನ್ನು ಪುತ್ರನನ್ನಾಗಿ ಪಡೆದನು. ಕಾತ್ಯಾಯನಮುನಿಯೂ ಈಗಿನಂತೆಯೇ ಮಹಿಷಾಸುರನನ್ನು ಶಪಿಸಿದನು.

೧೫೮. ಹೀಗೆಯೇ ಆ ಜನ್ಮಗಳಲ್ಲಿಯೂ ಮಹಿಷಾಸುರನು ದೇವಿಯನ್ನು ಆರಾಧಿಸಿ ವರವನ್ನು ಬೇಡಿದನು.

೧೫೯. ಮೂರನೇ ಜನ್ಮದಲ್ಲಿ ದೇವಿಯಿಂದ ವರವನ್ನು ಪಡೆದು ಆಲ್ಲಿಂದ ಮುಂದೆ ತನಗೆ ಜನ್ಮವು ಉಂಟಾಗದಂತೆ ದೇವಿಯನ್ನು ಪ್ರಾರ್ಥಿಸಿದನು.

೧೬೦. ಹೀಗೆ ದೇವಿಯ ವರಪ್ರಸಾದದಿಂದ ದೇವಿಯ ಪಾದತಲದಲ್ಲಿ ಆ ಮಹಿಷಾಸುರನು ಈಗಲೂ ಇರುವನು. ಅವನಿಗೆ ಕಲ್ಪಾವಸಾನದಲ್ಲಿ ನಡೆಯುವ ಪ್ರಳಯಾನಂತರ ಜನ್ಮವೆಂಬುದೇ ಇಲ್ಲವು.

ಏವಂ ದೇವೀಪ್ರಸಾದೇನ ಮಹಾದೇವಾಂಶಸಂಭವಃ ।
ಪರಾಮವಾಪ ಸತತಂ ಪ್ರತಿಪತ್ತಿಂ ಮಹಾಸುರಃ ॥ ೧೬೧ ॥

ಇತಿ ತೇ ಕಥಿತಂ ರಾಜನ್ಯಥಾ ಸ ಮಹಿಷಾಸುರಃ ।
ದೇವೀಪಾದತಲಂ ಪ್ರಾಪ್ಯ ಯಥಾ ಸೋಽದ್ಯಾಪಿ ಮೋದತೇ ॥ ೧೬೨ ॥

ಪ್ರಸ್ತುತಂ ಶೃಣು ಭೋ ರಾಜನ್ ಕಥಯಾಮಿ ನೃಪೋತ್ತಮ ॥ ೧೬೩ ॥

॥ ಮಾರ್ಕಂಡೇಯ ಉವಾಚ ॥

ಇತಿ ವಃ ಕಥಿತಂ ರಾಜಾ ಸಗರಃ ಸಹಿತೋ ಯಥಾ ।
ಔರ್ವೇಣ ಚಕ್ರೇ ಸಂವಾದಂ ದೇವೀಮಹಿಷಯೋರ್ಜನೇ ॥ ೧೬೪ ॥

ಪುನರ್ಯದಾಹ ಭೂಯೋಽಪಿ ಸಗರಾಯ ಮಹಾತ್ಮನೇ ।
ತಚ್ಛೃಣ್ವಂತು ಮುನಿಶ್ರೇಷ್ಠಾ ಗುಹ್ಯಾದ್ಗುಹ್ಯತರಂ ಪರಂ ॥ ೧೬೫ ॥

ಇತಿ ಶ್ರೀಕಾಲಿಕಾಪುರಾಣೇ ಮಹಿಷಾಸುರೋಪಾಖ್ಯಾನೇ
ದ್ವಿಷಷ್ಟಿತಮೋಽಧ್ಯಾಯಃ

---

೧೬೧. ಮಹಾದೇವಾಂಶಸಂಭೂತನಾದ ಆ ಮಹಿಷಾಸುರನು ಈರೀತಿ ದೇವಿಯ ಪ್ರಸಾದದಿಂದ ದೇವಿಯಲ್ಲಿ ಯಾವಾಗಲೂ ಉತ್ತಮವಾವ ಭಕ್ತಿಯನ್ನು ಹೊಂದಿದನು.

೧೬೨-೧೬೩. ಆ ಮಹಿಷಾಸುರನು ದೇವಿಯ ಪಾದತಲವನ್ನು ಹೊಂದಿ ಈಗಲೂ ಸಹ ಹೇಗೆ ಸಂತೋಷದಿಂದಿರುವನೆಂಬ ವಿಚಾರವನ್ನು, ನಿನಗೆ ಹೇಳಿದ್ದಾಯಿತು ಎಲೈ ರಾಜನೇ ಈಗ ಪ್ರಸ್ತುತವಿಷಯವನ್ನು ಹೇಳುವೆನು - ಕೇಳು.

೧೬೪. ಮಾರ್ಕಂಡೇಯಮುನಿಯು ಹೇಳಿದನು — ಎಲೈ ವೆತಾಲಭೈರವರೇ ನಿಮಗೆ ದೇವಿಯು ಮಹಿಷಾಸುರನನ್ನು ಪಾದತಲದಲ್ಲಿ ಇಟ್ಟುಕೊಂಡಿರುವ ವಿಷಯದಲ್ಲಿ ಔರ್ವಸಗರರಿಗೆ ನಡೆದ ಸಂವಾದವನ್ನು ಹೇಳಿದ್ದಾಯಿತು.

೧೬೫. ಎಲೈ ಕಮಠಾದಿಮುನಿಗಳೇ ಬಳಿಕ ಔರ್ವಮುನಿಯು ಮಹಾತ್ಮನಾದ ಸಗರರಾಜನಿಗೆ ಮತ್ತೇನನ್ನು ಹೇಳಿದನೋ ಅಂತಹ ರಹಸ್ಯಗಳಲ್ಲಿಯೂ ಅತ್ಯಂತ ರಹಸ್ಯವಾದ ವಿಷಯವನ್ನು ಹೇಳುವೆನು, ಕೇಳಿರಿ.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಅರವತ್ತೆರಡನೆಯ ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ತ್ರಿಷಷ್ಟಿತಮೋऽಧ್ಯಾಯಃ ॥

॥ ಔರ್ವ ಉವಾಚ ॥

ಯಥಾಹ ಭಗವಾನ್ದೇವೋ ಭೈರವಾಯ ಮಹಾತ್ಮನೇ ।
ವೇತಾಲಾಯ ನೃಪಶ್ರೇಷ್ಠ ತಥಾ ತ್ವಂ ಪ್ರಸ್ತುತಂ ಶೃಣು ॥ ೧ ॥

॥ ಭಗವಾನುವಾಚ ॥

ಉಗ್ರಚಂಡಾ ಚ ಯಾ ಮೂರ್ತಿರಷ್ಟಾದಶಭುಜಾಭವತ್ ।
ಸಾ ನವಮ್ಯಾಂ ಪುರಾ ಕೃಷ್ಣಪಕ್ಷೇ ಕನ್ಯಾಂ ಗತೇ ರವೌ ॥ ೨ ॥
ಪ್ರಾದುರ್ಭೂತಾ ಮಹಾಮಾಯಾ ಯೋಗಿನೀಕೋಟಿಭಿಃ ಸಹ ।
ಆಷಾಢಸ್ಯ ತು ಪೂರ್ಣಾಯಾಂ ಸತ್ರಂ ದ್ವಾದಶವಾರ್ಷಿಕಂ ॥ ೩ ॥

ಅರವತ್ತ ಮೂರನೆಯ ಅಧ್ಯಾಯವು.

೧. ಔರ್ವಮುನಿಯಿಂತೆಂದನು — ಎಲೈ ಸಗರರಾಜನೇ, ಭಗವಾನೀಶ್ವರನು ಭೈರವನಿಗೂ ಭೇತಾಲನಿಗೂ ಯಾವವಿಷಯವನ್ನು ಹೇಳಿದನೋ ಅದನ್ನೇ ನಿನಗೂ ಈಗ ಹೇಳುವೆನು, ಕೇಳು.

೨. ಭಗವಾನೀಶ್ವರನಿಂತೆಂದನು — ದೇವಿಯ ಉಗ್ರಚಂಡಾ ಎಂಬ ಹದಿನೆಂಟು ಭುಜಗಳಿಂದ ಯುಕ್ತವಾದ ಯಾವಮೂರ್ತಿಯುಂಟೋ ಮಹಾಮಾಯೆಯ ಆ ಮೂರ್ತಿಯು, ಪೂರ್ವದಲ್ಲಿ ಸೂರ್ಯನು ಕನ್ಯಾರಾಶಿಯಲ್ಲಿರುವಾಗ ಕೃಷ್ಣಪಕ್ಷದ ನವಮಿಾ ತಿಥಿಯಲ್ಲಿ ಕೋಟಿಯೋಗಿನಿಗಳಿಂದ ಕೂಡಿ ಪ್ರಾದುರ್ಭೂತಳಾದಳು.

೩. ಆಷಾಢಮಾಸದ ಹುಣಿಮೆಯಲ್ಲಿ, ದಕ್ಷಪ್ರಜಾಪತ್ಯನು ಹನ್ನೆರಡುವರ್ಷ ಪರ್ಯಂತರ ಮಾಡಲ್ಪಡಬೇಕಾದ ಒಂದು, ಮಹಾಯಜ್ಞವನ್ನು ಮಾಡಲುಜ್ಜಗಿಸಿ ಆ ಯಜ್ಞಕ್ಕೆ ಎಲ್ಲಾ ದೇವತೆಗಳನ್ನು ಆಹ್ವಾನಿಸಿದನು.

ದಕ್ಷಃ ಕರ್ತುಂ ಸಮಾರೇಭೇ ವೃತಾಃ ಸರ್ವೇ ದಿವೌಕಸಃ ।
ತತೋಽಹಂ ನ ವೃತಸ್ತೇನ ದಕ್ಷೇಣ ಸುಮಹಾತ್ಮನಾ ॥ ೪ ॥

ಕಪಾಲೀತಿ ಸತೀ ಚಾಪಿ ತಜ್ಜಾಯೇತಿ ಚ ನೋ ವೃತಾ ।
ತತೋ ರೋಷಸಮಾಯುಕ್ತಾ ಪ್ರಾಣಾಂಸ್ತ್ಯಾಜ ಸಾ ಸತೀ ॥ ೫ ॥

ತ್ಯಕ್ತದೇಹಾ ಸತೀ ಚಾಪಿ ಚಂಡಮೂರ್ತಿಸ್ತದಾಭವತ್ ।
ತತಃ ಪ್ರವೃತ್ತೇ ಯಜ್ಞೇಽಪಿ ತಸ್ಮಿನ್ವೈ ದಶವಾರ್ಷಿಕೇ ॥ ೬ ॥

ನವಮ್ಯಾಂ ಕೃಷ್ಣಪಕ್ಷೇ ತು ಕನ್ಯಾಯಾಂ ಚಾಣುಮೂರ್ತಿಧೃಕ್ ।
ಯೋಗನಿದ್ರಾ ಮಹಾಮಾಯಾ ಯೋಗಿನೀಕೋಟಿಭಿಃ ಸಹ ॥ ೭ ॥

ಸತೀರೂಪಂ ಪರಿತ್ಯಜ್ಯ ಯಜ್ಞಭಂಗಮಥಾಕರೋತ್ ।
ಶಂಕರಸ್ಯ ಗಣೈಃ ಸರ್ವೈಃ ಸಹಿತಾ ಶಂಕರೇಣ ಚ ॥ ೮ ॥

---

೪. ಆದರೆ ಆ ಮಹಾತ್ಮನಾದ ದಕ್ಷನು ನನ್ನನ್ನು ನರಕಪಾಲನನ್ನೂ ಹಿಡಿದಿರುವನೆಂಬ ಕಾರಣದಿಂದ ಕರೆಯಲಿಲ್ಲವು. ಅಲ್ಲದೆ ತನ್ನ ಮಗಳಾದ ಸತೀದೇವಿಯನ್ನೂ ಸಹ ನನ್ನ ಹೆಂಡತಿಯೆಂದು ಕರೆಯಲಿಲ್ಲವು.

೫. ಅದರಿಂದ ಕೋಪಗೊಂಡ ಸತಿಯು ತನ್ನ ಪ್ರಾಣಗಳನ್ನು ಬಿಟ್ಟು ಚಂಡಮೂರ್ತಿಯ ರೂಪವನ್ನು ಕೈಗೊಂಡಳು.

೬–೭. ಹನ್ನೆರಡು ವರ್ಷ ಪರ್ಯಂತರ ಮಾಡಬೇಕಾದ ದಕ್ಷನ ಆ ಯಜ್ಞವು ನಡೆಯುತ್ತಲೇ ಇದ್ದಿತು. ಆಗ ಕನ್ಯಾಮಾಸದ ಕೃಷ್ಣಪಕ್ಷದ ನವಮೀತಿಥಿಯಲ್ಲಿ ಮಹಾಮಾಯಾಸ್ವರೂಪಳಾದ ಯೋಗನಿದ್ರೆಯು ಸಣ್ಣರೂಪದಿಂದ ಕೋಟಿಯೋಗಿನಿಯರೊಡನೆ ಪ್ರಾದುರ್ಭೂತಳಾದಳು.

೮. ಸತೀರೂಪವನ್ನು ತ್ಯಜಿಸಿ ಚಂಡಿಮೂರ್ತಿರೂಪವನ್ನು ಧರಿಸಿದ ಯೋಗಮಾಯೆಯು ಶಂಕರನಿಂದಲೂ, ಶಂಕರನ ಗಣಗಳಿಂದಲೂ ಕೂಡಿ ತಾನೇ ಆ ದಕ್ಷಬ್ರಹ್ಮನ ಯಜ್ಞವನ್ನು ಧ್ವಂಸಮಾಡಿದಳು.

ಸ್ವಯಂ ಬಭಂಜ ಸಾ ದೇವೀ ಮಹಾಸತ್ರಂ ಮಹಾತ್ಮನಃ ।
ತತೋ ದೇವ್ಯಾ ಮಹಾಕ್ರೋಧೇ ವ್ಯತೀತೇ ತ್ರಿದಿವೌಕಸಃ ॥ ೯ ॥

ಪೂಜಯಾಂಚಕ್ರುರತುಲಾಂ ದೇವೀಂ ಪೂರ್ವೋದಿತೇನ ವೈ ।
ಪೂರ್ವೋದಿತವಿಧಾನೇನ ಪೂಜಾಮಸ್ಯಾ ದಿವೌಕಸಃ ॥ ೧೦ ॥

ಕೃತ್ವೈವ ಪರಮಾಮಾಪುರ್ನಿವೃತಿಂ ದುಃಖಹಾನಯೇ ।
ಏವಮನ್ಯೈರಪಿ ಸದಾ ಕಾರ್ಯಂ ದೇವ್ಯಾಃ ಪ್ರಪೂಜನಂ ॥ ೧೧ ॥

ವಿಭೂತಿಮತುಲಾಂ ಪ್ರಾಪ್ತುಂ ಚತುರ್ವರ್ಗಪ್ರದಾಯಿಕಾಂ ।
ಯೋ ಮೋಹಾದಥವಾಲಸ್ಯಾದ್ದೇವೀಂ ದುರ್ಗಾಂ ಮಹೋತ್ಸವೇ ॥ ೧೨ ॥

ನ ಪೂಜಯತಿ ದಂಭಾದ್ವಾ ದ್ವೇಷಾದ್ವಾಪ್ಯಥ ಭೈರವ ।
ಕ್ರುದ್ಧಾ ಭಗವತೀ ತಸ್ಯ ಕಾಮಾನಿಷ್ಟಾನ್ನಿಹಂತಿ ವೈ ॥ ೧೩ ॥

---

೯. ದಕ್ಷಬ್ರಹ್ಮನ ಯಜ್ಞವಿಧ್ವಂಸನದಿಂದ ದೇವಿಯ ಮಹಾಕೋಪವು ಶಾಂತ ವಾಗಲು ದೇವತೆಗಳು ದೇವಿಯನ್ನು ಹಿಂದೆ ಹೇಳಿದ ವಿಧಿಯಂತೆ ವೈಭವದಿಂದ ಪೂಜೆ ಮಾಡಿದರು.

೧೦. ಈರೀತಿ ದೇವತೆಗಳು ಹಿಂದೆ ಹೇಳಿದ ನಿಯಮದಿಂದ ದೇವಿಯ ಪೂಜೆ ಯನ್ನು ಸಾಂಗವಾಗಿ ಮಾಡಿ ದುಃಖನಿವೃತ್ತಿಯನ್ನು ಹೊಂದಿದರು.

೧೧. ಇದೇರೀತಿಯಾಗಿ ಇತರರೂ ಸಹ, ಐಶ್ವರ್ಯಪ್ರಾಪ್ತಿಗಾಗಿ ಧರ್ಮಾರ್ಥ ಕಾಮಮೋಕ್ಷಗಳೆಂಬ ನಾಲ್ಕುವಿದ ಪುರುಷಾರ್ಥಗಳನ್ನೂ ಕೊಡುವ ದೇವಿಯ ಆರಾಧನೆ ಯನ್ನು ಯಾವಾಗಲೂ ಮಾಡಬೇಕು.

೧೨-೧೩. ಯಾವ ಮನುಷ್ಯನು ಮೋಹದಿಂದಾಗಲೀ, ಆಲಸ್ಯದಿಂದಾಗಲೀ, ಡಂಭದಿಂದಾಗಲೀ, ದ್ವೇಷದಿಂದಾಗಲೀ ದೇವಿಯನ್ನು ದುರ್ಗಾಮಹೋತ್ಸವದಲ್ಲಿ ಪೂಜೆ ಮಾಡುವುದಿಲ್ಲವೋ ಅಂತಹ ಮನುಷ್ಯನಮೇಲೆ ದೇವಿಯು ಕೋಪಗೊಂಡು ಅವನ ಇಷ್ಟಾರ್ಥಗಳನ್ನು ನಾಶಮಾಡುವಳು. ಎಲೈ ಭೈರವನೇ ಕೇಳು, ಅಲ್ಲದೆ ಆ ಮನುಷ್ಯನು ಮುಂದಿನ ಜನ್ಮದಲ್ಲಿ ದೇವಿಗೆ ಬಲಿಯಾಗಿ ಅರ್ಪಿಸುವ ಪಶುವಾಗಿ ಜನಿಸುವನು.

ಪರತ್ರ ಚ ಮಹಾಮಾಯಾ ಬಲಿಂ ಭೂತ್ವಾ ಪ್ರಜಾಯತೇ ।
ಅಷ್ಟಮ್ಯಾಂ ರುಧಿರೈಶ್ಚೈವ ಮಹಾಮಾಂಸೈಃ ಸುಗಂಧಿಭಿಃ ॥ ೧೪ ॥

ಪೂಜಯೇದ್ಬಹುಜಾತೀಯೈರ್ಬಲಿಭಿರ್ಭೋಜನೈಃ ಶಿವಾಂ ।
ಸಿಂದೂರೈಃ ಪಟ್ಟವಾಸೋಭಿರ್ನಾನಾವಿಧವಿಲೇಪನೈಃ ॥ ೧೫॥

ಪುಷ್ಪೈರನೇಕಜಾತೀಯೈಃ ಫಲೈರ್ಬಹುವಿಧೈರಪಿ ।
ಉಪವಾಸಂ ಮಹಾಷ್ಟಮ್ಯಾಂ ಪುತ್ರವಾನ್ನ ಸಮಾಚರೇತ್ ॥ ೧೬ ॥

ಯಥಾ ತಥೈವ ಪೂತಾತ್ಮಾ ವ್ರತೀ ದೇವೀಂ ಪ್ರಪೂಜಯೇತ್ ।
ಪೂಜಯಿತ್ವಾ ಮಹಾಷ್ಟಮ್ಯಾಂ ನವಮ್ಯಾಂ ಬಲಿಭಿಸ್ತಥಾ ॥ ೧೭ ॥

ವಿಸರ್ಜಯೇದ್ದಶಮ್ಯಾಂ ತು ಶ್ರವಣೇ ಶಾಬರೋತ್ಸವೈಃ
ಅಂತ್ಯಪಾದೋ ದಿವಾಭಾಗೇ ಶ್ರವಣಸ್ಯ ಯದಾ ಭವೇತ್ ॥ ೧೮ ॥

೧೪-೧೫. ಅಷ್ಟಮಿಯ ದಿವಸದಲ್ಲಿ ದೇವಿಯನ್ನು ರಕ್ತದಿಂದಲೂ ಸುವಾಸನೆಯುಳ್ಳ ಮಾಂಸಗಳಿಂದಲೂ, ಅನೇಕ ವಿಧವಾದ ಬಲಿಗಳಿಂದಲೂ, ಭೋಜನ (ಭಕ್ಷ್ಯಭೋಜ್ಯಾದಿ) ಗಳಿಂದಲೂ, ಸಿಂದೂರ, ಪಟ್ಟವಸ್ತ್ರ, ಸುಗಂಧಪ್ರವ್ಯಗಳು ಇವುಗಳಿಂದಲೂ, ಅನೇಕ ವಿಧವಾದ ಫಲಪುಷ್ಪಗಳಿಂದಲೂ, ಆರಾಧಿಸಬೇಕು.

೧೬. ಸಾಧಕನು ತನಗೆ ಮಕ್ಕಳಿದ್ದಲ್ಲಿ ಮಹಾಷ್ಟಮಿಯ ಎವಸ ಉಪವಾಸವನ್ನು ಮಾಡಬಾರದು. ವ್ರತವನ್ನು ಮಾಡುವವನು ಶುದ್ಧನಾಗಿ ನಿಯಮದಿಂದ ದೇವಿಯನ್ನು ಪೂಜಿಸಬೇಕು.

೧೭. ಈರೀತಿ ಮಹಾಷ್ಟಮಿಯಲ್ಲಿ ದೇವಿಯನ್ನು ಪೂಜಿಸಿ ನವಮಿಯಲ್ಲಿ ಮಹಾಬಲಿದಾನವನ್ನು ಆಚರಿಸಿ ದಶಮಿಯ ದಿವಸ ಶ್ರವಣನಕ್ಷತ್ರವಿರುವಾಗ ಶಾಬರೋತ್ಸವಾದಿಗಳಿಂದ ದೇವಿಯನ್ನು ಸಂತೋಷಗೊಳಿಸಿ ವಿಸರ್ಜನೆ ಮಾಡಬೇಕು.

೧೮. ದಶಮಿತಿಥಿಯಲ್ಲಿ ಶ್ರವಣನಕ್ಷತ್ರದ ಕೊನೆಯ ಪಾದವಿರುವಾಗ ಬುದ್ಧಿವಂತನಾದವನು ದೇವಿಯನ್ನು ಮೇಲೆ ಹೇಳಿದರೀತಿಯಲ್ಲಿ ವಿಸರ್ಜನೆಮಾಡಬೇಕು.

ತದಾ ಸಂಪ್ರೇಷಣಂ ದೇವ್ಯಾ ದಶಮ್ಯಾಂ ಕಾರಯೇದ್ಬುಧಃ ।
ಸುವಾಸಿನೀಭಿಃ ಕುಮಾರೀಭಿರ್ವೇಶ್ಯಾಭಿರ್ನರ್ತಕೈಸ್ತಥಾ ॥ ೧೯ ॥

ಶಂಖತೂರ್ಯನಿನಾದೈಶ್ಚ ಮೃದಂಗೈಃ ಪಟಹೈಸ್ತಥಾ ।
ಧ್ವಜೈರ್ವಸ್ತ್ರೈರ್ಬಹುವಿಧೈರ್ಲಾಜಾಪುಷ್ಪಪ್ರಕೀರ್ಣಕೈಃ ॥ ೨೦ ॥

ಧೂಲಿಕರ್ದಮನಿಕ್ಷೇಪೈಃ ಕ್ರೀಡಾಕೌತುಕಮಂಗಲೈಃ ।
ಭಗಲಿಂಗಾಭಿಧಾನೈಶ್ಚ ಭಗಲಿಂಗಪ್ರಗೀತಕೈಃ ॥ ೨೧ ॥

ಭಗಲಿಂಗಾದಿಶಬ್ದೈಶ್ಚ ಕ್ರೀಡಯೇಯುರಲಂ ಜನಾಃ ।
ಪರೈರ್ನಾಕ್ಷಿಪ್ಯತೇ ಯಸ್ತು ಯಃ ಪರಾನ್ನಾಕ್ಷಿಪೇದ್ಯದಿ ॥ ೨೨ ॥

ಕ್ರುದ್ಧಾ ಭಗವತೀ ತಸ್ಯ ಶಾಪಂ ದದ್ಯಾತ್ಸುದಾರುಣಂ ।
ಆದಿಪಾದೋ ನಿಶಾಭಾಗೇ ಶ್ರವಣಸ್ಯ ಯದಾ ಭವೇತ್ ॥ ೨೩ ॥

೧೯-೨೧. ದೇವಿಯನ್ನು ಉತ್ಸವಪೂರ್ವಕವಾಗಿ ವಿಸರ್ಜನೆಮಾಡುವಾಗ ಮುತ್ತೈದೆಯರು, ಕನ್ಯೆಯರು, ವೇಶ್ಯೆಯರು, ನರ್ತಕಿಯರು, ಇವರುಗಳಿಂದಲೂ, ಶಂಖ ತೂರ್ಯ, ಮೃದಂಗ, ಪಟಹ, ಭೇರಿ ಮೊದಲಾದ ವಾದ್ಯಘೋಷಗಳಿಂದಲೂ, ಧ್ವಜಗಳು, ನಾನಾವಿಧವಾದ ವಸ್ತ್ರಗಳು, ಹುವ್ವು ಅರಳು ಮೊದಲಾದ ಸುಗಂಧದ್ರವ್ಯಗಳನ್ನು ಎರಚುತ್ತಾ ಉತ್ಸವವನ್ನು ಮಾಡಬೇಕು. ಮತ್ತು ಭಕ್ತರು ನಾನಾವಿಧವಾದ ಆಟ ಪಾಟಗಳಿಂದಲೂ ಧೂಳು, ಕೆಸರು ಇವುಗಳನ್ನು ವಿನೋದವಾಗಿ ಒಬ್ಬರಿಗೊಬ್ಬರು ಎರಚುತ್ತಾ ಯೋನಿ ಲಿಂಗ ಮೊದಲಾದ ಶಬ್ದಗಳನ್ನು ಉಚ್ಚರಿಸುತ್ತಲೂ, ಇತರರನ್ನು ನಿರ್ದೇಶಿಸಿ ಆ ಶಬ್ದಗಳಿಂದ ಬೈಯ್ಯುತ್ತಲೂ ಇವೇ ಮೊದಲಾದ ನಾನಾವಿಧ ಹಾಸ್ಯ ಚೇಷ್ಟೆಗಳಿಂದ ವಿನೋದಮಾಡುತ್ತಾ ದೇವಿಯ ಉತ್ಸವವನ್ನು ನಡೆಸಬೇಕು.

೨೨. ಮತ್ತು ಆ ವಿನೋದಕಾಲದಲ್ಲಿ ಒಬ್ಬರನ್ನೊಬ್ಬರು ಬೈಯ್ಯುತ್ತಲೂ ಬೈಸಿಕೊಳ್ಳುತ್ತಲೂ ಇರಬೇಕು. ಹೀಗೆ ಯಾರು ಮಾಡುವುದಿಲ್ಲವೋ ಅವರಿಗೆ ದೇವಿಯು ಕೋಪಗೊಂಡು ಕ್ರೂರವಾದ ಶಾಪವನ್ನು ಕೊಡುವಳು.

೨೩. ಶ್ರವಣನಕ್ಷತ್ರದ ಮೊದಲನೆಯ ಪಾದವು ನವಮಿಯ ರಾತ್ರಿಯಕಾಲದಲ್ಲಿ ಪ್ರಾಪ್ತವಾದರೆ ದೇವಿಯ ವಿಸರ್ಜನವನ್ನು ನವಮಿಯ ದಿವಸವೇ ಮಾಡಬೇಕು ಮೂರನೆಯ ಪಗಲಿನಲ್ಲಿ ಕೂಡದು.

ತದಾ ದೇವ್ಯಾಃ ಸಮುತ್ಥಾನಂ ನವಮ್ಯಾಂ ನ ಪುನರ್ದಿವಾ ।
ಅಂತ್ಯಷಾಢೋ ನಿಶಾಭಾಗೇ ಶ್ರವಣಸ್ಯ ಯದಾ ಭವೇತ್ ॥ ೨೪ ॥

ತದಾ ದೇವ್ಯಾಃ ಸಮುತ್ಥಾನಂ ನವಮ್ಯಾಂ ದಿನಭಾಗತಃ ।
ವಿಸರ್ಜನಮನೇನೈವ ಮಂತ್ರೇಣ ವತ್ಸ ಭೈರವ ॥ ೨೫ ॥

ಕರ್ತವ್ಯಮಂಭಸಿ ಸ್ಥಾಪ್ಯ ವಿಸೃಜ್ಯ ಚ ವಿಭೂತಯೇ ।
ಉತ್ತಿಷ್ಠ ದೇವಿ ಚಂಡೇಶೇ ಶುಭಾಂ ಪೂಜಾಂ ಪ್ರಗೃಹ್ಯ ಚ ॥ ೨೬ ॥

ಕುರುಷ್ವ ಮಮ ಕಲ್ಯಾಣಮಷ್ಟಭಿಃ ಶಕ್ತಿಭಿಃ ಸಹ ।
ಗಚ್ಛ ಗಚ್ಛ ಪರಂ ಸ್ಥಾನಂ ಸ್ವಸ್ಥಾನಂ ದೇವಿ ಚಂಡಿಕೇ ॥ ೨೭ ॥

ಯತ್ಪೂಜಿತಂ ಮಯಾ ದೇವಿ ಪರಿಪೂರ್ಣಂ ತದಸ್ತು ಮೇ ।
ವ್ರಜ ತ್ವಂ ಸ್ರೋತಸಿ ಜಲೇ ತಿಷ್ಠ ಗೇಹೇ ಚ ಭೂತಲೇ ॥ ೨೮ ॥

ನಿಮಜ್ಯಾಂಭಸಿ ಸಂತ್ಯಜ್ಯ ಪತ್ರಿಕಾವರ್ಜಿತೇ ಜಲೇ ।
ಪುತ್ರಾಯುರ್ಧನವೃದ್ಧ್ಯರ್ಥಂ ಸ್ಥಾಪಿತಾಸಿ ಜಲೇ ಮಯಾ ॥ ೨೯ ॥

---

೨೪. ಶ್ರವಣನಕ್ಷತ್ರದ ಕೊನೆಯಪಾದವು ರಾತ್ರಿಯಲ್ಲಿ ಪ್ರಾಪ್ತವಾದರೆ, ಆಗ ದೇವಿಯ ವಿಸರ್ಜನವನ್ನು ನವಮಿಯ ಹಗಲಿನಲ್ಲಿಯೇ ಮಾಡಬೇಕು.

೨೫. ಎಲೈ ಭೈರವನೇ ಐಶ್ವರ್ಯವೃದ್ಧಿಯನ್ನು ಬಯಸುವವನು ದೇವಿಯನ್ನು ಈ ಕೆಳಗೆ ಹೇಳುವ ಮಂತ್ರದಿಂದ ನೀರಿನಲ್ಲಿ ಇಟ್ಟು ವಿಸರ್ಜನೆ ಮಾಡಬೇಕು.

೨೬-೨೯. ದೇವಿಯನ್ನು ವಿಸರ್ಜನೆಮಾಡುವಾಗ ಮೇಲಿನ ಮಂತ್ರಗಳನ್ನು ಹೇಳಬೇಕು. ಅದರ ಅರ್ಥವು ಹೀಗಿದೆ—ಎಲೈ ಚಂಡಿಕಾಂಬೆಯೇ, ನಾನು ಮಾಡಿದ ಮಂಗಳಕರವಾದ ಪೂಜೆಯನ್ನು ಸ್ವೀಕರಿಸಿ ಆನಂದದಿಂದ ಏಳುವವಳಾಗು. ನಿನ್ನ ಅಷ್ಟಶಕ್ತಿಗಳಿಂದ ಕೂಡಿ ನನಗೆ ಮಂಗಳವನ್ನುಂಟುಮಾಡು. ಎಲೈ ಚಂಡಿಕೆಯೇ ನಿನ್ನ ಸ್ವಸ್ಥಾನವಾದ ಪರಮಪದವನ್ನು ಕುರಿತು ತೆರಳು. ನಾನು ಮಾಡಿದ ಪೂಜೆಯಲ್ಲಿ ಲೋಪಗಳಿದ್ದರೂ ಅದು ನಿನ್ನ ಅನುಗ್ರಹದಿಂದ ಪರಿಪೂರ್ಣವಾಗಲಿ. ಈ ಹರಿಯುವ ನದಿಯ ನೀರಿನಲ್ಲಿಯೂ, ಭೂತಲದಲ್ಲಿರುವ ದೇವಾಲಯದಲ್ಲಿಯೂ ನೆಲೆಸುವವಳಾಗು. ಪುತ್ರರು, ಆಯಸ್ಸು, ಧನ ಇವುಗಳ ವೃದ್ಧ್ಯರ್ಥವಾಗಿ ನಾನು ನಿನ್ನನ್ನು ಈ ಜಲದಲ್ಲಿ ಪ್ರತಿಷ್ಠಾಪಿಸಿ ವಿಸರ್ಜಿಸುತ್ತೇನೆ.

ಇತ್ಯನೇನ ತು ಮಂತ್ರೇಣ ದೇವೀಂ ಸಂಸ್ಥಾಪಯೇಜ್ಜಲೇ ।
ಸರ್ವಲೋಕಹಿತಾರ್ಥಾಯ ಸರ್ವಲೋಕವಿಭೂತಯೇ ॥ ೩೦ ॥

ದುರ್ಗಾತಂತ್ರೇಣ ಮಂತ್ರೇಣ ಪೂಜಿತವ್ಯೇ ಉಭೇ ಅಪಿ ।
ಭದ್ರಕಾಲೀಮುಗ್ರಚಂಡಾಂ ಮಹಾಮಾಯಾಂ ಮಹೋತ್ಸವೇ ॥ ೩೧ ॥

ನೇತ್ರಬೀಜಂ ತು ಸರ್ವಾಸಾಂ ಪೂಜನೇ ಪರಿಕೀರ್ತಿತಂ ।
ಯೋಗಿನೀನಾಂ ತು ಸರ್ವಾಸಾಂ ಮೂಲಮೂರ್ತೇಸ್ತಥೈವ ಚ ॥ ೩೨ ॥

ಮಂತ್ರಂ ತಥೋಗ್ರಚಂಡಾಯಾಃ ಪೃಥಕ್ತ್ವಂ ಶೃಣು ಭೈರವ ।
ಆದ್ಯಂ ದ್ವಯಂ ನೇತ್ರಬೀಜಂ ಮಂತ್ರಸ್ಯೋಪಾಂತಮಂತರೇ ॥ ೩೩ ॥

ವಹ್ನಿನಾಂತಃ ಸ್ವರೇಣೇಂದುಬಿಂದುಭ್ಯಾಂ ತಂತ್ರಮೌಗ್ರಕಂ ।
ನೇತ್ರಬೀಜಂ ದ್ವಿತೀಯಂ ತು ದ್ವಿಧಾವರ್ತಿತಮುಚ್ಯತೇ ॥ ೩೪ ॥

---

೩೦. ಸಮಸ್ತಲೋಕಗಳ ಕಲ್ಯಾಣಕ್ಕಾಗಿಯೂ, ಧನಧಾನ್ಯಾದಿ ಐಶ್ವರ್ಯಾಭಿವೃದ್ಧಿಗಾಗಿಯೂ ದೇವಿಯನ್ನು ಮೇಲಿನ ಮಂತ್ರಗಳಿಂದ ಜಲದಲ್ಲಿ ಸ್ಥಾಪನೆ ಮಾಡಬೇಕು.

೩೧. ದುರ್ಗಾಮಹೋತ್ಸವದಲ್ಲಿ ಭದ್ರಕಾಲೀ ಮತ್ತು ಉಗ್ರಚಂಡಾ ಎಂಬ ಎರಡು ಮೂರ್ತಿಗಳನ್ನು ದುರ್ಗಾಕಲ್ಪೋಕ್ತಮಂತ್ರಗಳಿಂದ ಪೂಜಿಸಬೇಕು.

೩೨. ದೇವಿಯ ಮೂಲಮೂರ್ತಿ, ಯೋಗಿನಿಯರೇ ಮೊದಲಾದ ಸಮಸ್ತ ದೇವತೆಗಳ ಪೂಜೆಯನ್ನು ಮಾಡುವಾಗ ದೇವಿಯ ನೇತ್ರಬೀಜಾಕ್ಷರಗಳನ್ನು ಹೇಳಬೇಕು.

೩೩-೩೪. ಎಲೈ ಭೈರವನೇ ಉಗ್ರಚಂಡಾದೇವಿಯ ಮಂತ್ರವನ್ನು ಪ್ರತ್ಯೇಕವಾಗಿ ಹೇಳುವೆನು, ಕೇಳು. ಈ ಮಂತ್ರದ ಮೊದಲನೆಯ ಎರಡಕ್ಷರಗಳೂ, ಕಡೆಯ ಎರಡಕ್ಷರಗಳೂ ನೇತ್ರಬೀಜಾಕ್ಷರಗಳು ವಹ್ನಿ ಬೀಜಾಕ್ಷರಕ್ಕೆ ಎರಡನೇ ನೇತ್ರಬೀಜವನ್ನೂ ಬಿಂದುವನ್ನೂ ಸೇರಿಸಿ ಎರಡಾವೃತ್ತಿ ಉಚ್ಚರಿಸಬೇಕು.

ಭದ್ರಕಾಲ್ಯಾಸ್ತು ಮಂತ್ರೋಽಯಂ ಧರ್ಮಕಾಮಾರ್ಥಸಿದ್ಧಯೇ ।
ಯದಾ ತು ವೈಷ್ಣವೀ ದೇವೀ ಮಹಾಮಾಯಾ ಜಗನ್ಮಯಾ ॥ ೩೫ ॥

ಪೂಜ್ಯತೇ ವೈಷ್ಣವೀ ದೇವೀ ತಂತ್ರೋಕ್ತಾ ಅಷ್ಟಯೋಗಿನೀಃ ।
ತಾಃ ಪ್ರೋಕ್ತಾಃ ಶೈಲಪುತ್ರ್ಯಾಶ್ಚ ಪೂರ್ವಕಲ್ಪೇ ಚ ಭೈರವ ॥ ೩೬ ॥

ಉಗ್ರಚಂಡಾದಯಶ್ಚಾಷ್ಟೌ ದುರ್ಗಾತಂತ್ರಸ್ಯ ಕೀರ್ತಿತಾಃ ।
ಭದ್ರಕಾಲ್ಯಾಸ್ತು ಮಂತ್ರೇಣ ಭದ್ರಕಾಲೀಂ ಪ್ರಪೂಜಯೇತ್ ॥ ೩೭ ॥

ಪೂಜಯೇದ್ಭೂತಿವೃದ್ಧ್ಯರ್ಥಮೇತಾ ಏವಾಷ್ಟಯೋಗಿನೀಃ ।
ಜಯಂತೀಂ ಮಂಗಲಾಂ ಕಾಲೀಂ ಭದ್ರಕಾಲೀಂ ಕಪಾಲಿನೀಂ ॥ ೩೮ ॥

ದುರ್ಗಾಂ ಶಿವಾಂ ಕ್ಷಮಾಂ ಧಾತ್ರೀಂ ದಲೇಷ್ವಷ್ಟಸು ಪೂಜಯೇತ್ ।
ಯದೋಗ್ರಚಂಡಾತಂತ್ರೇಣ ಸಾ ದೇವೀ ತತ್ರ ಪೂಜ್ಯತೇ ॥ ೩೯ ॥

ಯೋಗಿನ್ಯಸ್ತತ್ರ ಪೂಜ್ಯಾಸ್ಸ್ಯುರಷ್ಟಾವನ್ಯಾಶ್ಚ ಭೈರವ ।
ಕೌಶಿಕೀ ಶಿವದೂತೀ ಚ ಉಮಾ ಹೈಮವತೀಶ್ವರೀ ॥ ೪೦ ॥

೩೫-೩೬. ಮೇಲೆ ಹೇಳಿರುವುದು ಭದ್ರಕಾಳಿಯ ಮಂತ್ರವು. ಇದು ಧರ್ಮ ಕಾಮಾರ್ಥಗಳ ಸಿದ್ಧಿಯನ್ನುಂಟುಮಾಡುವುದು. ಜಗತ್ಸ್ವರೂಪಿಣಿಯಾದ ವಿಷ್ಣು ಮಾಯೆಯನ್ನು ಪೂಜಿಸುವಾಗ ದೇವೀತಂತ್ರದಲ್ಲಿ ಹೇಳಿರುವ ಅಷ್ಟಯೋಗಿನಿಯರನ್ನು ಪೂಜಿಸಬೇಕು. ಎಲೈ ಭೈರವನೇ, ಅವರ ಹೆಸರುಗಳು ಪೂರ್ವಕಲ್ಪದಲ್ಲಿಯೇ ಹೇಳಲ್ಪಟ್ಟಿವೆ.

೩೭. ದುರ್ಗಾತಂತ್ರದಲ್ಲಿ ಉಗ್ರಚಂಡಿಯೇ ಮೊದಲಾದ ಎಂಟು ಜನ ಯೋಗಿನಿಯರು ಹೇಳಲ್ಪಟ್ಟಿರುವರು. ಭದ್ರಕಾಲೀಮೂರ್ತಿಯನ್ನು ಭದ್ರಕಾಲೀ ಮಂತ್ರದಿಂದ ಪೂಜೆಮಾಡಬೇಕು.

೩೮. ಭದ್ರಕಾಲಿಯನ್ನು ಭದ್ರಕಾಲೀ ಮಂತ್ರದಿಂದ ಪೂಜಿಸುವಾಗ ಐಶ್ವರ್ಯಾಭಿವೃದ್ಧಿಗಾಗಿ ಜಯಂತೀ, ಮಂಗಲಾ, ಕಾಲೀ ಭದ್ರಕಾಲೀ, ಕಪಾಲೀ, ದುರ್ಗಾ, ಕ್ಷಮಾ, ಧಾತ್ರೀ ಎಂಬ ಅಷ್ಟಯೋಗಿನಿಯರನ್ನು ಪೂಜೆಮಾಡಬೇಕು.

೩೯-೪೦. ಎಲೈ ಭೈರವನೇ ದೇವಿಯನ್ನು ಉಗ್ರಚಂಡಾತಂತ್ರಪ್ರಕಾರವಾಗಿ ಪೂಜಿಸುವಾಗ, ಕೌಶಿಕೀ, ಶಿವದೂತೀ, ಉಮಾ, ಹೈಮವತೀ, ಈಶ್ವರೀ, ಶಾಕಂಭರೀ ದುರ್ಗಾ ಮಹೋದರೀ ಎಂಬ ಬೇರೆ ಎಂಟುಜನ ಯೋಗಿನಿಯರನ್ನು ಪೂಜಿಸಬೇಕು.

ಶಾಂಕಭರೀ ಚ ದುರ್ಗಾ ಚ ಸಪ್ತಮೀ ಚ ಮಹೋದರೀ ।
ಉಮಾಯಾಃ ಸೌಮ್ಯಮೂರ್ತೇಸ್ತು ತಂತ್ರಂ ತ್ವಂ ಶೃಣು ಭೈರವ ॥ ೪೧ ॥

ಪಾದಿಃ ಸಮಾಪ್ತಿಸಹಿತಃ ಫಂಡತೋ ನಾಂತ ಏವಚ ।
ಏಕಾಕ್ಷರಸ್ತ್ರ್ಯಕ್ಷರಶ್ಚ ಉಮಾತಂತ್ರ ಇತಿ ಸ್ಮೃತಃ ॥ ೪೨ ॥

ಸುವರ್ಣಸದೃಶೀಂ ಗೌರೀಂ ಭುಜದ್ವಯಸಮನ್ವಿತಾಂ ।
ನೀಲಾರವಿಂದಂ ವಾಮೇನ ಪಾಣಿನಾ ಬಿಭ್ರತೀಂ ಸದಾ ॥ ೪೩ ॥

ಶುಕ್ಲಂ ತು ಚಾಮರಂ ಧೃತ್ವಾ ಭರ್ಗಸ್ಯಾಂಗೇಽಥ ದಕ್ಷಿಣೇ ।
ವಿನ್ಯಸ್ಯ ದಕ್ಷಿಣಂ ಹಸ್ತಂ ತಿಷ್ಠಂತೀಂ ಪರಿಚಿಂತಯೇತ್ ॥ ೪೪ ॥

ವಿನಾಪಿ ಶಂಭುಂ ರುದ್ರಾಣೀಂ ಭಕ್ತಸ್ತು ಪರಿಚಿಂತಯೇತ್ ।
ದ್ವಿಭುಜಾಂ ಸ್ವರ್ಣಗೌರಾಂಗೀಂ ಪದ್ಮಚಾಮರಧಾರಿಣೀಂ ॥ ೪೫ ॥

೪೧-೪೨. ಸೌಮ್ಯರೂಪದಿಂದಿರುವ ಉಮಾಮೂರ್ತಿಯ ಮಂತ್ರವನ್ನು ಹೇಳುವೆನು. ಎಲೈ ಭೈರವನೇ ಕೇಳು. ಮೊದಲು ಪಕಾರವೂ ಬಳಿಕ ಹಕಾರವೂ ಕಡೆಯಲ್ಲಿ ಫಟ್ ಎಂಬ ಶಬ್ದವೂ ಸೇರಿ ಉಮಾಮಂತ್ರವಾಗುವುದು. ಈ ಮೂರು ಒಟ್ಟಾಗಿ ಸೇರಿದರೆ ಏಕಾಕ್ಷರಮಂತ್ರವೂ ಪ್ರತ್ಯೇಕವಾಗಿ ಉಚ್ಚರಿಸಿದರೆ ಮೂರು ಅಕ್ಷರದಮಂತ್ರವೆಂದೂ ಹೇಳಲ್ಪಡುವುದು.

೪೩-೪೪. ಚಿನ್ನದ ವರ್ಣದಂತೆ ಶರೀರಕಾಂತಿಯುಳ್ಳವಳಾಗಿಯೂ, ಎರಡು ಭುಜಗಳಿಂದ ಕೂಡಿ ಎಡಗೈಯ್ಯಲ್ಲಿ ಕನ್ನೈದಿಲೆಹೂವನ್ನು ಹಿಡಿದುಕೊಂಡವಳಾಗಿಯೂ, ಬಲಗೈಯಲ್ಲಿ ಬೆಳ್ಳಿಯ ಚಾಮರವನ್ನು ಹಿಡಿದು, ಈಶ್ವರನ ಬಲಗೈಯನ್ನು ಹಿಡಿದು ನಿಂತಿರುವಂತೆ ಗೌರಿಯನ್ನು ಧ್ಯಾನಮಾಡಬೇಕು.

೪೫. ಅಥವಾ ಭಕ್ತನಾದವನು ಉಮಾದೇವಿಯನ್ನು ಶಂಕರನೊಡನೆ ಇಲ್ಲದೆ ಒಬ್ಬಳೇ ಇರುವಂತೆಯೂ ಧ್ಯಾನಮಾಡಬೇಕು. ಎರಡು ಭುಜಗಳೂ, ಚಿನ್ನದಂತೆ ಶರೀರಕಾಂತಿಯೂ, ಉಳ್ಳವಳಾಗಿ ಒಂದು ಕೈಯಲ್ಲಿ ಪದ್ಮವನ್ನೂ ಮತ್ತೊಂದು ಕೈಯಲ್ಲಿ ಚಾಮರವನ್ನೂ ಧರಿಸಿ, ಹುಲಿಯ ಚರ್ಮದ ಮಧ್ಯದಲ್ಲಿರುವ ಕಮಲದಲ್ಲಿ ಪದ್ಮಾಸನದಿಂದ ಕುಳಿತಿರುವಂತೆ ಧ್ಯಾನಮಾಡಬೇಕು.

ವ್ಯಾಘ್ರಚರ್ಮಸ್ಥಿತೇ ಪದ್ಮೇ ಪದ್ಮಾಸನಗತಾ ಸದಾ ।
ಏತಸ್ಯಾಃ ಪೂಜನೇ ಪ್ರೋಕ್ತಾ ಅಷ್ಟೌ ವೇತಾಲಭೈರವ ॥ ೪೬ ॥

ಯೋಗಿನ್ಯೋ ನಾಯಿಕಾಶ್ಚಾಪಿ ಪೃಥಕ್ತ್ವೇನ ವ್ಯವಸ್ಥಿತಾಃ ।
ಜಯಾ ಚ ವಿಜಯಾ ಚೈವ ಮಾತಂಗೀ ಲಲಿತಾ ತಥಾ ॥ ೪೭ ॥

ನಾರಾಯಣ್ಯಥ ಸಾವಿತ್ರೀ ಸ್ವಧಾ ಸ್ವಾಹಾ ತಥಾಷ್ಟಮೀ ।
ಪೂರ್ವಂ ಶುಂಭೋ ನಿಶುಂಭಶ್ಚ ದಾನವೌ ಭ್ರಾತರಾವುಭೌ ॥ ೪೮ ॥

ಬಭೂವತುರ್ಮಹಾಸತ್ತ್ವೌ ಮಹಾಕಾಯೌ ಮಹಾಬಲೌ ।
ಅಂಧಕಸ್ಯ ಸುತೌ ದ್ವೌ ತೌ ದಂತಿನಾವಿವ ದುರ್ಮದೌ ॥ ೪೯ ॥

ಮಯಾ ವಿನಿಹತೇ ತಸ್ಮಿನ್ನಂಧಕಾಖ್ಯೇ ಮಹಾಬಲೇ ।
ಸಸೈನ್ಯವಾಹನೌ ತೌ ತು ಪಾತಾಲತಲಮಾಶ್ರಿತೌ ॥ ೫೦ ॥

ಬಭೂವತುರ್ಮಹಾಕಾಯೌ ಮಹಾಸತ್ತ್ವೌ ಮಹಾಬಲೌ ।
ತತಸ್ತಪ್ತ್ವಾ ತಪಸ್ತೀವ್ರಂ ಬ್ರಹ್ಮಾಣಂ ತೌ ಮಹಾಸುರೌ ॥ ೫೧ ॥

೪೬-೪೭. ಎಲೈ ವೇತಾಲಭೈರವರೇ ಕೇಳಿ—ಈ ದೇವಿಯ ಪೂಜೆಯಲ್ಲಿ ಅಷ್ಟಯೋಗಿನಿಯರ ಹೆಸರುಗಳನ್ನು ಬೇರೆ ಬೇರೆಯಾಗಿ ಹೇಳುವೆನು ಕೇಳಿ. ಜಯಾ ವಿಜಯಾ, ಮಾತಂಗೀ, ಲಲಿತಾ, ನಾರಾಯಣೀ ಸಾವಿತ್ರೀ, ಸ್ವಧಾ, ಸ್ವಾಹಾ ಎಂಬು ದಾಗಿ ಎಂಟುಜನ ಯೋಗಿನಿಯರು ಇರುವರು.

೪೮-೪೯. ಪೂರ್ವದಲ್ಲಿ ಅಂಧಕಾಸುರನ ಮಕ್ಕಳಾದ ಶುಂಭ, ನಿಶುಂಭ ಎಂಬ ಇಬ್ಬರು ಅಣ್ಣತಮ್ಮಂದಿರು ಇದ್ದರು. ಅವರು ದೊಡ್ಡ ಶರೀರವುಳ್ಳವರಾಗಿ ಮಹಾಬಲ ಪರಾಕ್ರಮ ಶಾಲಿಗಳಾಗಿಯೂ ಆನೆಯಂತೆ ಮದದಿಂದ ಕೊಬ್ಬಿದವರಾಗಿಯೂ ಇದ್ದರು.

೫೦. ಮಹಾಬಲವುಳ್ಳ ಇವರ ತಂದೆಯಾದ ಅಂಧಕಾಸುರನನ್ನು ಸಂಹಾರ ಮಾಡಿದ ಮೇಲೆ ಈ ಶಂಭುನಿಶಂಭರು ತಮ್ಮ ಸೈನ್ಯವಾಹನಗಳಸಮೇತ ಪಾತಾಳ ಲೋಕಕ್ಕೆ ಹೊರಟುಹೋಗಿ ಅಲ್ಲಿಯೇ ಇದ್ದರು.

೫೧. ಆ ಅಣ್ಣತಮ್ಮಂದಿರು ಮಹಾಬಲಾಢ್ಯರಾಗಿಯೂ, ದೊಡ್ಡ ಶರೀರವುಳ್ಳ ವರಾಗಿಯೂ ಪರಾಕ್ರಮಶಾಲಿಗಳಾಗಿಯೂ ಇದ್ದರು. ಅವರು ಬ್ರಹ್ಮನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿ ಅವನನ್ನು ಸಂತೋಷಗೊಳಿಸಿದರು. ಇವರ ತಪಸ್ಸಿ ನಿಂದ ಸಂತುಷ್ಟನಾದ ಬ್ರಹ್ಮನು ಇವರಿಗೆ ಬೇಕಾದ ವರವನ್ನು ಕೊಟ್ಟನು.

ಸಮ್ಯಕ್ತದಾ ತೋಷಯತಾಂ ಸ ಸುಪ್ರೀತೋ ವರಂ ದದೌ ।
ತೌ ಬ್ರಹ್ಮವರದೃಪ್ತೌ ತು ಸಮಾಸಾದ್ಯ ಜಗತ್ತ್ರಯಂ ॥ ೫೨ ॥

ಇಂದ್ರತ್ವಮುಕರೋಚ್ಛುಂಭಶ್ಚಂದ್ರತ್ವಂ ಚ ನಿಶುಂಭಕಃ ।
ಸರ್ವೇಷಾಮೇವ ದೇವಾನಾಂ ಯಜ್ಞಭಾಗಾನುಪಾಹರತ್ ॥ ೫೩ ॥

ಸ್ವಯಂ ಶುಂಭೋ ನಿಶುಂಭಶ್ಚ ದಿಕ್ಪಾಲತ್ವಂ ಚ ತೌ ಗತೌ ।
ಸರ್ವೇ ಸುರಾಗಣಾಃ ಸೇಂದ್ರಾಸ್ತತೋ ಗತ್ವಾ ಹಿಮಾಚಲಂ ॥ ೫೪ ॥

ಗಂಗಾವತಾರನಿಕಟೇ ಮಹಾಮಾಯಾಂ ಪ್ರತುಷ್ಟವುಃ ।
ಅನೇಕಶಃ ಸ್ತುತಾ ದೇವೀ ತದಾ ಸರ್ವಾಮರೋತ್ಕರೈಃ ॥ ೫೫ ॥

ಮಾತಂಗವನಿತಾ ಮೂರ್ತಿರ್ಭೂತ್ವಾ ದೇವಾನಪೃಚ್ಛತ ।
ಯುಷ್ಮಾಭಿರಮರೈರತ್ರ ಸ್ತ್ರೀಯತೇ ಕಾ ಚ ಭಾಮಿನೀ ॥ ೫೬ ॥

---

೫೨. ಬ್ರಹ್ಮನ ವರಬಲದಿಂದ ಗರ್ವಿತರಾಗಿ, ಈ ಶುಂಭನಿಶುಂಭರು ಮೂರು ಲೋಕಗಳನ್ನೂ ಗೆದ್ದು ತಮ್ಮ ವಶಪಡಿಸಿಕೊಂಡರು. ಶುಂಭನು ಇಂದ್ರನ ಪದವಿಯನ್ನೂ ನಿಶುಂಭನು ಚಂದ್ರನ ಪದವಿಯನ್ನೂ, ಆಕ್ರಮಿಸಿದರು.

೫೩. ದೇವತೆಗಳೆಲ್ಲರ ಯಜ್ಞಭಾಗವನ್ನು ಇವರು ಅಪಹರಿಸಿದ್ದಲ್ಲದೆ ದಿಕ್ಪಾಲಕರ ಸ್ಥಾನವನ್ನೂ, ಆಕ್ರಮಿಸಿ ಅವರ ಕಾರ್ಯಗಳನ್ನು ತಾವೇ ಮಾಡತೊಡಗಿದರು.

೫೪. ಬಳಿಕ ಸಮಸ್ತ ದೇವತೆಗಳು ಇಂದ್ರನೊಡಗೂಡಿ ಹಿಮಾಚಲಪರ್ವತಕ್ಕೆ ಹೋಗಿ ಅಲ್ಲಿ ಗಂಗಾವತಾರವೆಂಬ ಪುಣ್ಯಕ್ಷೇತ್ರದ ಸಮೀಪದಲ್ಲಿ ಮಹಾಮಾಯಾ ಸ್ವರೂಪಳಾದ ದೇವಿಯನ್ನು ಸ್ತೋತ್ರಮಾಡಿದರು.

೫೫. ದೇವತೆಗಳು ಅನೇಕವಿಧವಾಗಿ ದೇವಿಯನ್ನು ಸ್ತೋತ್ರಮಾಡಲು ದೇವಿಯು ಮಾತಂಗಕನ್ಯೆಯ ರೂಪವನ್ನಾಂತು ದೇವತೆಗಳನ್ನು ಪ್ರಶ್ನೆಮಾಡಿದಳು.

೫೬. ಎಲೈ ದೇವತೆಗಳೇ ನೀವು ಇಲ್ಲಿ ಯಾವ ಸ್ತ್ರೀಯನ್ನು ಸ್ತೋತ್ರಮಾಡುತ್ತಿರುವಿರಿ? ನೀವು ಈ ಮತಂಗಮುನಿಯ ಆಶ್ರಮಕ್ಕೆ ಏನು ಕಾರಣ ಬಂದಿರುವಿರಿ?

ಕಿಮರ್ಥಮಾಗತಾ ಯೂಯಂ ಮತಂಗಸ್ಯಾಶ್ರಮಂ ಪ್ರತಿ ।
ಏವಂ ಬ್ರುವಂತ್ಯಾ ಮಾತಂಗ್ಯಾಸ್ತಸ್ಯಾಸ್ತು ಕಾಯಕೋಶತಃ ॥ ೫೭ ॥

ಸಮುದ್ಭೂತಾಬ್ರುವೀದ್ದೇವೀ ಮಾಂ ಸ್ತುವಂತಿ ಸುರಾ ಇತಿ ।
ಶುಂಭೋ ನಿಶುಂಭೋ ಹ್ಯಸುರೌ ಬಾಧೇತೇ ಸಕಲಾನ್ಸುರಾನ್ ॥ ೫೮ ॥

ತಸ್ಮಾತ್ತಯೋರ್ವಧಾಯಾಹಂ ಸ್ತೂಯೇ ತೈಃ ಸಕಲೈಃ ಸುರೈಃ ।
ವಿನಿಃಸೃತಾಯಾಂ ದೇವ್ಯಾಂ ತು ಮಾತಂಗ್ಯಾಃ ಕಾಯಕೋಶತಃ ॥ ೫೯ ॥

ಭಿನ್ನಾಂಜನನಿಭಾ ಕೃಷ್ಣಾ ಸಾಭೂದ್ಗೌರೀ ಕ್ಷಣಾದಪಿ ।
ಕಾಲಿಕಾಖ್ಯಾಭವತ್ಸಾಪಿ ಹಿಮಾಚಲಕೃತಾಶ್ರಯಾ ॥ ೬೦ ॥

ತಾಮುಗ್ರತಾರಾಮೃಷಯೋ ವದಂತೀಹ ಮನಿಷಿಣಃ ।
ಉಗ್ರಾದಪಿ ಭಯಾತ್ತ್ರಾತ್ರೀ ಯಸ್ಮಾದ್ಭಕ್ತಾನ್ಸದಾಂಬಿಕಾ ॥ ೬೧ ॥

ಏತಸ್ಯಾಃ ಪ್ರಥಮಂ ಬೀಜಂ ಕಥಿತಂ ತ್ರಯಮೇವ ಚ ।
ಏಷೈವೈಕಜಟಾಖ್ಯಾ ತು ಯಸ್ಮಾತ್ತಸ್ಮಾಜ್ಜಟೈಕಿಕಾಂ ॥ ೬೨ ॥

---

೫೭. ಮಾತಂಗಕನ್ಯೆಯು ಹೀಗೆ ಹೇಳುತ್ತಿರಲು, ಅವಳ ಶರೀರದಿಂದ ದೇವಿಯು ಹೊರಹೊರಟು-ಈ ದೇವತೆಗಳು ನನ್ನನ್ನು ಸ್ತೋತ್ರಮಾಡುತ್ತಿರುವರೆಂದು ಹೇಳಿದಳು.

೫೮. ಶುಂಭನಿಶುಂಭರೆಂಬ ದೈತ್ಯರಿಬ್ಬರು ದೇವತೆಗಳೆಲ್ಲರನ್ನೂ ಪೀಡಿಸುತ್ತಿರುವರು. ಅವರ ಸಂಹಾರಕ್ಕೋಸ್ಕರ ಈ ದೇವತೆಗಳು ನನ್ನನ್ನು ಪ್ರಾರ್ಥಿಸುತ್ತಿರುವರು ಎಂದು ಹೇಳಿದಳು.

೫೯-೬೦. ಮಾತಂಗಿಯ ಶರೀರದಿಂದ ಹೊರಹೊರಟ ದೇವಿಯು ಅಂಜನ ಪರ್ವತದ ತುಂಡಿನಂತೆ ಕಪ್ಪಗಿರುವ ಶರೀರದಿಂದ ಬೆಳಗುತ್ತಾ ಕಾಲಿಕಾ ಎಂಬ ಹೆಸರಿನಿಂದ ಹಿಮಾಚಲಪರ್ವತವನ್ನಾಶ್ರಯಿಸಿದಳು.

೬೧. ಈ ದೇವಿಯು ಭಕ್ತರುಗಳನ್ನು ಉಗ್ರವಾದ ಭಯದಿಂದ ಕಾಪಾಡುವವಳಾದುದರಿಂದ ಉಗ್ರತಾರಾ ಎಂದು ಇವಳನ್ನು ಬುದ್ಧಿವಂತರು ಕರೆಯುವರು.

೬೨. ಈ ದೇವಿಯ ಮೊದಲನೆಯ ಬೀಜಾಕ್ಷರವನ್ನೂ, ಮೂರು ಬೀಜಾಕ್ಷರಗಳನ್ನೂ ಸಹ ಹಿಂದೆಯೇ ಹೇಳಿದೆ. ಈ ದೇವಿಗೆ ಒಂದು ಜಟೆಯಿರುವುದರಿಂದ ಏಕಜಟಾ ಎಂದು ಹೆಸರೂ ಇರುವುದು.

ಶೃಣುತಂ ಚಿಂತನಂ ಚಾಸ್ಯಾಃ ಸಮ್ಯಗ್ವೇತಾಲಭೈರವೌ ।
ಯಥಾ ಧ್ಯಾತ್ವಾ ಮಹಾದೇವೀಂ ಭಕ್ತಃ ಪ್ರಾಪ್ನೋತ್ಯಭೀಪ್ಸಿತಂ ॥ ೬೩ ॥

ಚತುರ್ಭುಜಾಂ ಕೃಷ್ಣವರ್ಣಾಂ ಮುಂಡಮಾಲಾವಿಭೂಷಿತಾಂ ।
ಖಡ್ಗಂ ದಕ್ಷಿಣಪಾಣಿಭ್ಯಾಂ ಬಿಭ್ರತೀಂದೀವರಂ ತ್ವಧಃ ॥ ೬೪ ॥

ಕರ್ತ್ರೀಂ ಚ ಖರ್ಪರಂ ಚೈವ ಕ್ರಮಾದ್ವಾಮೇನ ಬಿಭ್ರತಾಂ ।
ದ್ಯಾಂ ಲಿಖಂತೀಂ ಜಟಾಮೇಕಾಂ ಬಿಭ್ರತೀಂ ಶಿರಸಾ ಸ್ವಯಂ ॥ ೬೫ ॥

ಮುಂಡಮಾಲಾಭರಾಂ ಶೀರ್ಷೇ ಗ್ರೀವಾಯಾಮಪಿ ಸರ್ವದಾ ।
ವಕ್ಷಸಾ ನಾಗಹಾರಂ ತು ಬಿಭ್ರತೀಂ ರಕ್ತಲೋಚನಾಂ ॥ ೬೬ ॥

ಕೃಷ್ಣವಸ್ತ್ರಧರಾಂ ಕಟ್ಯಾಂ ವ್ಯಾಘ್ರಾಜಿನಸಮನ್ವಿತಾಂ ।
ವಾಮಪಾದಂ ಶವಹೃದಿ ಸಂಸ್ಥಾಪ್ಯ ದಕ್ಷಿಣಂ ಪದಂ ॥ ೬೭ ॥

---

೬೩. ಎಲೈ ಬೇತಾಲ ಭೈರವರೇ, ಯಾವ ಈ ಮಹಾದೇವಿಯನ್ನು ಧ್ಯಾನಿಸುವುದರಿಂದ ಭಕ್ತನಾದವನು ತನ್ನ ಇಷ್ಟಾರ್ಥಗಳನ್ನು ಪಡೆಯುವನೋ ದೇವಿಯ ಅಂತಹ ಧ್ಯಾನಕ್ರಮವನ್ನು ಹೇಳುವೆನು ಕೇಳಿ.

೬೪-೬೬. ಈ ದೇವಿಯು ನಾಲ್ಕು ಭುಜಗಳಿಂದ ಕೂಡಿ ಕಪ್ಪಗಿರುವ ಶರೀರ ಕಾಂತಿಯಿಂದ ಬೆಳಗುತ್ತಿರುವಳು. ಮುಂಡಗಳಮಾಲೆಯಿಂದ ಅಲಂಕೃತಳಾಗಿರುವಳು. ಬಲಭಾಗದ ಕೈಗಳ ಕೆಳಕಿ ಮೇಲಿನ ಕೈಯಲ್ಲಿ ಕತ್ತಿಯನ್ನೂ ಕೆಳಗಿನಕೈಯಲ್ಲಿ ಕನ್ನೈದಿಲೆ ಪುಷ್ಪವನ್ನೂ, ಎಡಭಾಗದ ಕೈಗಳಲ್ಲಿ ಕ್ರಮವಾಗಿ ಧರಿಸಿರುವಳು. ಶಿರಸ್ಸಿನಲ್ಲಿ ಶೋಭಿಸುವ ಏಕಮಾತ್ರವಾದ ಜಟೆಯು ಗಗನವನ್ನು ಚುಂಬಿಸುತ್ತಿರುವುದು. ಕತ್ತಿನಲ್ಲಿ ಮುಂಡಗಳ ಮಾಲೆಯನ್ನೂ, ಎದೆಯಲ್ಲಿ ನಾಗಹಾರವನ್ನೂ ಧರಿಸಿ ಕೆಂಪಾದ ಕಣ್ಣುಗಳಿಂದ ಒಪ್ಪುತ್ತಿರುವಳು. ನಡುವಿನಲ್ಲಿ ವ್ಯಾಘ್ರಚರ್ಮದಿಂದ ಕೂಡಿದ ಕಪ್ಪುವಸ್ತ್ರವನ್ನು ಉಟ್ಟಿರುವಳು.

೬೭-೬೮. ಎಡಗಾಲನ್ನು ಶವದ ಹೃದಯದ ಮೇಲೆ ಇರಿಸಿ ಬಲಗಾಲನ್ನು ಸಿಂಹದ ಬೆನ್ನಿನಮೇಲೆ ಇಟ್ಟು ಶವವನ್ನು ನಾಲಿಗೆಯಿಂದ ನೆಕ್ಕುತ್ತ ಘೋರರೂಪದಿಂದ ಭಯಂಕರವಾಗಿ ಅಟ್ಟಹಾಸವನ್ನು ಮಾಡುತ್ತಿರುವಳು. ಈರೀತಿಯಿರುವ ಉಗ್ರತಾರಾ ದೇವಿಯನ್ನು ಸುಖವನ್ನಪೇಕ್ಷಿಸುವ ಭಕ್ತರು ಧ್ಯಾನಮಾಡಬೇಕು.

ವಿನ್ಯಸ್ಯ ಸಿಂಹಪೃಷ್ಠೇ ತು ಲೇಲಿಹಾನಾಂ ಶವಂ ಸ್ವಯಂ ।
ಸಾಟ್ಟಹಾಸಾಂ ಮಹಾಘೋರಾಂ ಚಾವಯುಕ್ತಾತಿಭೀಷಣಾಂ ॥ ೬೪ ॥

ಚಿಂತ್ಯೋಗ್ರತಾರಾ ಸತತಂ ಭಕ್ತಿಮದ್ಭಿಃ ಸುಖೇಪ್ಸುಭಿಃ ।
ಏತಸ್ಯಾಃ ಸಂಪ್ರವಕ್ಷ್ಯಾಮಿ ಯಾ ಅಷ್ಟೌ ಯೋಗಿನೀಃ ಸ್ಮೃತಾಃ ॥ ೬೯ ॥

ಮಹಾಕಾಲಾಥ ರುದ್ರಾಣೀ ಉಗ್ರಾ ಭೀಮಾ ತಥೈವ ಚ ।
ಘೋರಾ ಚ ಭ್ರಾಮರೀ ಚೈವ ಮಹಾರಾತ್ರಿಶ್ಚ ಸಪ್ತಮೀ ॥ ೭೦ ॥

ಭೈರವೀ ಚಾಷ್ಟಮೀ ಪ್ರೋಕ್ತಾ ಯೋಗಿನೀಸ್ತಾಃ ಪ್ರಪೂಜಯೇತ್ ।
ಯಾ ಕಾಯಕೋಶಾನ್ನಿಃಸೃತಾ ಕಾಲಿಕಾಯಾಸ್ತು ಭೈರವ ।
ಸಾ ಕೌಶಿಕೀತಿ ವಿಖ್ಯಾತಾ ಚಾರುರೂಪಾ ಮನೋಹರಾ ॥ ೭೧ ॥

ನಿಃಸೃತಾ ಹೃದಯಾದ್ದೇವ್ಯಾ ರಸನಾಗ್ರೇಣ ಚಂಡಿಕಾ ।
ನೈತಸ್ಯಾಃ ಸದೃಶೀ ಮೂರ್ತ್ಯಾ ಚಾರುರೂಪೇಣ ವಿದ್ಯತೇ ॥ ೭೨ ॥

ತ್ರಿಷು ಲೋಕೇಷು ಕಾಂತ್ಯಾ ವಾ ನಾಸ್ಯಾಸ್ತುಲ್ಯಾ ಭವಿಷ್ಯತಿ ॥ ೭೩ ॥

೬೯-೭೦. ಈ ದೇವಿಯ ಪೂಜೆಯಲ್ಲಿ ಅಷ್ಟಯೋಗಿನಿಯರನ್ನು ಹೇಳುವೆನು- ಮಹಾಕಾಲಾ, ರುದ್ರಾಣೀ, ಉಗ್ರಾ, ಭೀಮಾ, ಘೋರಾ, ಭ್ರಾಮರೀ, ಮಹಾರಾತ್ರಿ, ಭೈರವೀ, ಎಂದು ಅವರುಗಳಿಗೆ ಹೆಸರು. ಅವರನ್ನು ಪೂಜಿಸಬೇಕು.

೭೧. ಎಲೈ ಭೈರವನೇ ಕಾಲಿಕಾದೇವಿಯ ಶರೀರಕೋಶದಿಂದ ಹೊರಹೊರಟು ಪ್ರಾದುರ್ಭೂತಳಾದುದರಿಂದ ಈ ದೇವಿಗೆ ಕೌಶಿಕೀ ಎಂದು ಹೆಸರು ಪ್ರಸಿದ್ಧವಾಗಿರುವುದು. ಈ ದೇವಿಯು ಮನೋಹರವಾದ ಸುಂದರರೂಪದಿಂದ ಶೋಭಿಸುತ್ತಿರುವಳು.

೭೨-೭೩. ಈ ಕೌಶಿಕಿಯು ದೇವಿಯ ಹೃದಯ ಕೋಶದಿಂದ ನಾಲಗೆಯ ತುದಿಯ ಮೂಲಕ ಹೊರಹೊರಟು ಬಂದು ಮನೋಹರವಾಗಿ ಒಪ್ಪುತ್ತಿರುವಳು. ಸೌಂದರ್ಯರೂಪಗಳಲ್ಲಿಯೂ, ಕಾಂತಿಯಲ್ಲಿಯೂ ಈ ದೇವಿಯ ಮೂರ್ತಿಗೆ ಸಮನಾದ ಮತ್ತೊಂದು ಮೂರ್ತಿಯು ಮೂರು ಲೋಕಗಳಲ್ಲಿ ಎಲ್ಲಿಯೂ ಇಲ್ಲ.

ಯೋಗನಿದ್ರಾ ಮಹಾಮಾಯಾ ಯಾ ಮೂಲಪ್ರಕೃತಿರ್ಮತಾ ।
ತಸ್ಯಾಃ ಪ್ರಾಣಸ್ವರೂಪೇಯಂ ದೇವೀ ಯಾ ಕೌಶಿಕೀ ಸ್ಮೃತಾ ॥ ೭೪ ॥

ನೇತ್ರಬೀಜಂ ತಥೈತಸ್ಯಾಃ ಬೀಜಂ ತು ಪರಿಕೀರ್ತಿತಂ ।
ತಂತ್ರಮನ್ಯಾಃ ಪ್ರವಕ್ಷ್ಯಾಮಿ ಮೂರ್ತಿರೂಪಂ ಚ ಭೈರವ ॥ ೭೫ ॥

ಸಮಾಪ್ತಿನಾಂತ್ಯದಂತ್ಯಸ್ತು ಷಡ್ವರ್ಗಾದಿಸಬಿಂದುಭಿಃ ।
ಷಷ್ಠಸ್ವರೇಣ ಸಂಸ್ಪೃಷ್ಟೋ ಬಿಂದುನಾ ಸಮಲಂಕೃತಃ ॥ ೭೬ ॥

ಕೌಶಿಕೀಮಂತ್ರತಂತ್ರೋಽಯಂ ಸರ್ವಕಾಮಾರ್ಥದಾಯಕಃ ।
ತಸ್ಯಾಸ್ತು ಸಂಪ್ರವಕ್ಷ್ಯಾಮಿ ಯಾ ಮೂರ್ತಿರಿಹ ಭೈರವ ॥೭೭॥

ಶೃಣುಷ್ವೈಕಮನಾ ಭೂತ್ವಾ ಜಗದಾಹ್ಲಾದಕಾರಕಂ ।
ಧಮ್ಮಿಲ್ಲಸಂಯತಕಚಾಂ ವಿಧೋಶ್ಚಾಧೋಮುಖೀಂ ಕಲಾಂ ॥ ೭೮ ॥

---

೭೪. ಯೋಗನಿದ್ರೆಯೆಂದೂ, ಮಹಾಮಾಯೆಯೆಂದೂ ಪ್ರಸಿದ್ಧವಾಗಿರುವ ಯಾವ ಮೂಲಪ್ರಕೃತಿಯುಂಟೋ ಅದರ ಪ್ರಾಣಸ್ವರೂಪವೇ ಈ ಕೌಶಿಕಿಯೆಂದು ಹೇಳಲ್ಪಡುವುದು.

೭೫. ಈ ದೇವಿಯ ನೇತ್ರಬೀಜವೂ ಬೀಜಾಕ್ಷರವೂ ಹೇಳಲ್ಪಟ್ಟಿರುವುದು. ಈಗ ಎಲೈ ಭೈರವನೇ, ತಂತ್ರಕ್ರಮವನ್ನೂ ಧ್ಯಾನಕ್ರಮವನ್ನೂ ವಿವರಿಸುವೆನು.

೭೬. ಕಡೆಯ ವರ್ಣವಾದ ಹಕಾರ ಕಡೆಯ ದಂತ್ಯಾಕ್ಷರವಾದ ನಕಾರ ಷಡ್ವರ್ಗಾದಿಯಾದ ಯಕಾರ ಇವುಗಳಿಗೆ ಆರನೇಸ್ವರವಾದ ಊಕಾರ ಮತ್ತು ಬಿಂದುಗಳನ್ನು ಸೇರಿಸಿದರೆ ಕೌಶಿಕೀ ಮಂತ್ರವಾಗುವುದು.

೭೭. ಈ ಕೌಶಿಕೀ ಮಂತ್ರವು, ಸರ್ವ ಇಷ್ಟಾರ್ಥವನ್ನೂ ಕೊಡಬಲ್ಲುದು. ಈ ಕೌಶಿಕೀಮೂರ್ತಿಯ ಜಗತ್ತನ್ನು ಮೋಹಗೊಳಿಸುವ ಯಾವ ರೂಪವಿರುವುದೋ ಅದನ್ನು ಹೇಳುತ್ತೇನೆ ಎಲೈ ಭೈರವನೇ, ನಿಶ್ಚಲಚಿತ್ತದಿಂದ ಕೇಳುವವನಾಗು.

೭೮-೮೦. ಈ ದೇವಿಯು ತನ್ನ ತಲೆಗೂದಲನ್ನು ಚೆನ್ನಾಗಿ ಬಾಚಿ ಗಂಟು ಹಾಕಿಕೊಂಡು ಅದರ ಕೊನೆಯಲ್ಲಿ ಕಲೆಗಳಿಂದ ಕೂಡಿದ ಕೆಳಮುಖನಾಗಿರುವ ಚಂದ್ರನನ್ನು ಧರಿಸಿ ಮನೋಹರವಾಗಿ ಒಪ್ಪುತ್ತಿರುವಳು. ರತ್ನಮಯವಾದ ಕುಂಡಲಗಳಿಂದ

ಕೇಶಾಂತೇ ತಿಲಕಸ್ಯೋರ್ಧ್ವೇ ದಧತೀ ಸುಮನೋಹರಾ ।
ಮಣಿಕುಂಡಲಸಂಘೃಷ್ಟಗಂಡಾ ಮುಕುಟಮಂಡಿತಾ ॥ ೭೯ ॥

ಸಜ್ಜ್ಯೋತಿಃ ಕರ್ಣಪೂರಾಭ್ಯಾಂ ಕರ್ಣಮಾಪೂರ್ಯಸಂಗತಾ ।
ಸುವರ್ಣಮಣಿಮಾಣಿಕ್ಯನಾಗಹಾರವಿರಾಜಿತಾ ॥ ೮೦ ॥

ಸದಾ ಸುಗಂಧಿಭಿಃ ಪದ್ಮೈರಮ್ಲಾನೈರತಿಸುಂದರೀ ।
ಮಾಲಾಂ ಬಿಭರ್ತಿ ಗ್ರೀವಾಯಾಂ ರತ್ನಕೇಯೂರಧಾರಿಣೀ ॥ ೮೧ ॥

ಮೃಡಾಲಾಯತವೃತ್ತೈಸ್ತು ಬಾಹುಭಿಃ ಕೋಮಲೈಃ ಶುಭೈಃ ।
ರಾಜಂತೀ ಕಂಚುಕೋಪೇತಪೀನೋನ್ನತಪಯೋಧರಾ ॥ ೮೨ ॥

ಕ್ಷೀಣಮಧ್ಯಾ ಪೀತವಸ್ತ್ರಾ ತ್ರಿವಲೀಪ್ರಖ್ಯಭೂಷಿತಾ ।
ಶೂಲಂ ವಜ್ರಂ ಚ ಬಾಣಂ ಚ ಖಡ್ಗಂ ಶಕ್ತಿಂ ತಥೈವ ಚ ॥ ೮೩ ॥

ದಕ್ಷಿಣೈಃ ಪಾಣಿಭಿರ್ದೇವೀ ಗೃಹೀತ್ವಾ ತು ವಿರಾಜಿತಾ ।
ಗದಾಂ ಘಂಟಾಂ ಚ ಚಾಪಂ ಚ ಚರ್ಮ ಶಂಖಂ ತಥೈವ ಚ ॥ ೮೪ ॥

ಹೊಳೆಯುತ್ತಿರುವ ಕಪೋಲಗಳಿಂದಲೂ, ಕಿರೀಟದಿಂದಲೂ, ಕಿವಿಯಲ್ಲಿ ಪ್ರಕಾಶಮಾನವಾಗಿ ಹೊಳೆಯುತ್ತಿರುವ ಕರ್ಣಾಭರಣಗಳಿಂದಲೂ, ವಕ್ಷಸ್ಥಳದಲ್ಲಿ ವಿರಾಜಮಾನವಾದ ರತ್ನಗಳನ್ನು ಕೆತ್ತಿದ ಚಿನ್ನದ ನಾಗಹಾರದಿಂದಲೂ ಪ್ರಕಾಶಿಸುತ್ತಿರುವಳು.

೮೧-೮೨. ಯಾವಾಗಲೂ ಬಾಡದೇ ಇರುವ ಸುಗಂಧಯುಕ್ತವಾದ ಕಮಲದ ಹೂವುಗಳಿಂದ ಅಲಂಕೃತಳಾಗಿ ಅತಿಸುಂದರಿಯಾಗಿರುವಳು. ಕಂಠದಲ್ಲಿ ರತ್ನಮಯವಾದ ಹಾರವನ್ನು ಧರಿಸಿರುವಳು. ಇವಳ ಬಾಹುಗಳು ಕೋಮಲವಾಗಿಯೂ ದುಂಡಾಗಿಯೂ ಮನೋಹರವಾಗಿಯೂ ಇರುವುವು. ಮತ್ತು ಉಬ್ಬಿ ದುಂಡಾಗಿರುವ ಸ್ತನಗಳ ಮೇಲೆ ಕುಪ್ಪಸವನ್ನು ತೊಟ್ಟು ವಿರಾಜಿಸುತ್ತಿರುವಳು. ತನ್ನ ಸಣ್ಣದಾದ ನಡುವಿನಲ್ಲಿ ಪೀತಾಂಬರವನ್ನು ಉಟ್ಟಿರುವಳು ಇವಳ ಉದರವು ತ್ರಿವಳಿಗಳಿಂದ (ಸುಕ್ಕು) ಕೂಡಿ ಪ್ರಕಾಶಿಸುತ್ತಿರುವುದು.

೮೩-೮೫. ಈ ಕೌಶಿಕೀದೇವಿಯು ತನ್ನ ಬಲಗೈಗಳಲ್ಲಿ ಮೇಲಿಂದ ಕೆಳಕ್ಕೆ ಕ್ರಮವಾಗಿ ಶೂಲ, ವಜ್ರಾಯುಧ, ಬಾಣ, ಕತ್ತಿ, ಶಕ್ತ್ಯಾಯುಧಗಳನ್ನೂ, ಎಡ ಭಾಗದ ಕೈಗಳಲ್ಲಿ ಗದೆ, ಘಂಟೆ, ಬಿಲ್ಲು, ಚರ್ಮ, ಶಂಖಗಳನ್ನೂ ಧರಿಸಿ, ಪುಲಿಯ

ಊರ್ಧ್ವಾದಿಕ್ರಮತೋ ದೇವೀ ದಧತೀ ವಾಮಪಾಣಿಭಿಃ ।
ಸಿಂಹಸ್ಯೋಪರಿ ತಿಷ್ಠಂತೀ ವ್ಯಾಘ್ರಚರ್ಮಾಣಿ ಕೌಶಿಕೀ ॥ ೮೫ ॥

ಬಿಭ್ರತೀ ರೂಪಮತುಲಂ ಸಸುರಾಸುರಮೋಹನಂ ।
ಏತಸ್ಯಾಃ ಶೃಣು ವತ್ಸ ತ್ವಂ ಯಾಃ ಪೂಜ್ಯಾ ಅಷ್ಟಯೋಗಿನೀಃ ॥ ೮೬ ॥

ತಾಃ ಪೂಜಿತಾಶ್ಚ ಕುರ್ವಂತಿ ಚತುರ್ವರ್ಗಂ ನೃಣಾಂ ಸದಾ ।
ಬ್ರಹ್ಮಾಣೀ ಪ್ರಥಮಾ ಪ್ರೋಕ್ತಾ ತತೋ ಮಾಹೇಶ್ವರೀ ಮತಾ ॥ ೮೭ ॥

ಕೌಮಾರೀ ಚೈವ ವಾರಾಹೀ ವೈಷ್ಣವೀ ಪಂಚಮೀ ತಥಾ ।
ನಾರಸಿಂಹೀ ತಥೈವೈಂದ್ರೀ ಶಿವದೂತೀ ತಥಾಷ್ಟಮೀ ॥ ೮೮ ॥

ಏತಾಃ ಪೂಜ್ಯಾ ಮಹಾಭಾಗ ಯೋಗಿನೀಃ ಕಾಮದಾಯಿನೀಃ ।
ದೇವ್ಯಾ ಲಲಾಟನಿಃಕ್ರಾಂತಾ ಯಾ ಕಾಲೀತಿ ಚ ವಿಶ್ರುತಾ ॥ ೮೯ ॥

ತಸ್ಯಾ ಮಂತ್ರಂ ಪ್ರವಕ್ಷ್ಯಾಮಿ ಕಾಮದಂ ಶೃಣು ಭೈರವ ।
ಸಮಾಪ್ತಿಸಹಿತೋದಂತ್ಯಃ ಪ್ರಾಂತಸ್ತಸ್ಮಾತ್ಪರಃ ಸರಃ ॥ ೯೦ ॥

ಚರ್ಮದಿಂದ ಅಲಂಕೃತಳಾಗಿ, ಸಿಂಹದ ಫೋಲೆ ಕುಳಿತು ದೇವಾಸುರರನ್ನು ಮೋಹ ಗೊಳಿಸುವ ತನ್ನ ಸುಂದರರೂಪದಿಂದ ರಾರಾಜಿಸುತ್ತಿರುವಳು.

೮೬. ಎಲೈ ಭೈರವನೇ ಕೇಳು—ಈ ದೇವಿಯ ಪೂಜೆಯ ಕಾಲದಲ್ಲಿ ಅರ್ಚಿಸಲ್ಪಡಬೇಕಾದ ಅಷ್ಟಯೋಗಿನಿಯರುಗಳನ್ನು ಹೇಳುವೆನು. ಇವರನ್ನು ಪೂಜಿಸುವುದರಿಂದ ಮಾನವರಿಗೆ ಚತುರ್ವಿಧಪುರುಷಾರ್ಥಗಳೂ ಸಿದ್ಧಿಸುವವು.

೮೭-೮೮. ಮೊದಲನೆಯ ಯೋಗಿನಿಯು ಬ್ರಹ್ಮಾಣಿಯು, ಬಳಿಕ ಮಾಹೇಶ್ವರಿಯು, ಹಾಗೆಯೇ ಕೌಮಾರೀ, ವಾರಾಹೀ, ಐದನೆಯವಳಾದ ವೈಷ್ಣವೀ, ನಾರಸಿಂಹೀ, ಐಂದ್ರೀ, ಎಂಟನೆಯ ಶಿವದೂತೀ. ಈ ಮಹಾಯೋಗಿನಿಯರನ್ನು ಪೂಜಿಸುವುದರಿಂದ ಇಷ್ಟಾರ್ಥಗಳು ನೆರವೇರುವವು.

೮೯. ದೇವಿಯ ಲಲಾಟಭಾಗದಿಂದ ಹೊರಹೊರಟ ಕಾಲಿಯೆಂಬ ಮೂರ್ತಿಯ ಇಷ್ಟಾರ್ಥಗಳನ್ನು ಕೊಡುವ ಮಂತ್ರವನ್ನು ಹೇಳುವೆನು ಕೇಳು.

೯೦. ಹಕಾರ, ಸಕಾರ, ದಂತ್ಯಾಕ್ಷರವಾದ ತಕಾರ ಇವುಗಳು, ಆರನೇಸ್ವರವಾದ ಊಕಾರ ಮತ್ತು ಬಿಂದುಗಳೊಡನೆ ಕೂಡಿ ಕಾಲೀತಂತ್ರವೆನಿಸುವುದು.

ಷಷ್ಠಸ್ವರಾಗ್ನಿಬಿಂದ್ವಿಂದುಸಹಿತಃ ಸಾದಿರೇವ ಚ ।
ಕಾಲೀತಂತ್ರಮಿತಿ ಪ್ರೋಕ್ತಂ ಧರ್ಮಕಾಮಾರ್ಥದಾಯಕಂ ॥ ೯೧ ॥

ಏತನ್ಮೂರ್ತಿಂ ಪ್ರವಕ್ಷ್ಯಾಮಿ ವತ್ಸೈಕಾಗ್ರಮನಾಃ ಶೃಣು ।
ನೀಲೋತ್ಪಲದಲಶ್ಯಾಮಾ ಚತುರ್ಬಾಹುಸಮನ್ವಿತಾ ॥ ೯೨ ॥

ಖಟ್ವಾಂಗಂ ಚಂದ್ರಹಾಸಂ ಚ ಬಿಭ್ರತೀ ದಕ್ಷಿಣೇ ಕರೇ ।
ವಾಮೇ ಚರ್ಮ ಚ ಪಾಶಂ ಚ ಊರ್ಧ್ವಾಧೋಭಾಗತಃ ಪುನಃ ॥ ೯೩ ॥

ದಧತೀಂ ಮುಂಡಮಾಲಾಂ ಚ ವ್ಯಾಘ್ರಚರ್ಮಧರಾಂಬರಾಂ ।
ಕೃಷ್ಣಾಂಗೀ ದೀರ್ಘದಂಷ್ಟ್ರಾ ಚ ಅತಿದೀರ್ಘಾತಿಭೀಷಣಾ ॥ ೯೪ ॥

ಲೋಲಜಿಹ್ವಾ ನಿಮ್ನರಕ್ತನಯನಾ ನಾದಭೈರವ ।
ಕಬಂಧವಾಹನಾ ಪೀನಾ ವಿಸ್ತಾರಶ್ರವಣಾನನಾ ।
ಏಷಾ ತಾರಾಹ್ವಯಾ ದೇವೀ ಚಾಮುಂಡೇತಿ ಚ ಗೀಯತೇ ॥ ೯೫ ॥

---

೯೧. ಎಲೈ ವತ್ಸ ಭೈರವನೇ, ಇದು ಕಾಲೀತಂತ್ರವೆಂದು ಹೇಳಲ್ಪಟ್ಟಿರುವುದು. ಇದು ಧರ್ಮಾರ್ಥಕಾಮಗಳನ್ನು ಕೊಡುವುದು. ಇನ್ನು ಈ ಮೂರ್ತಿಧ್ಯಾನಕ್ರಮವನ್ನು ಹೇಳುವೆನು. ಏಕಾಗ್ರಮನಸ್ಸಿನಿಂದ ಕೇಳು.

೯೨-೯೫. ಈ ದೇವಿಯು ಕನ್ನೈದಿಲೆ ಪುಷ್ಪದಂತೆ ಶ್ಯಾಮಲವರ್ಣದ ದೇಹ ಕಾಂತಿಯಿಂದಲೂ ನಾಲ್ಕುಭುಜಗಳಿಂದಲೂ ಶೋಭಿಸುತ್ತಿರುವಳು. ಬಲಭಾಗದಕೈಗಳಲ್ಲಿ ಮೇಲಿನಿಂದ ಕೆಳಕ್ಕೆ ಕ್ರಮವಾಗಿ, ಖಟ್ವಾಯುಧ, ಕತ್ತಿ, ಇವುಗಳನ್ನೂ, ಎಡಭಾಗದ ಕೈಗಳಲ್ಲಿ ಚರ್ಮ, ಪಾಶ ಇವುಗಳನ್ನೂ ಧರಿಸಿ; ಕಂಠದಲ್ಲಿ ಮುಂಡ ಮಾಲೆಯನ್ನು ಧರಿಸಿ ವ್ಯಾಘ್ರಚರ್ಮವನ್ನು ವಸ್ತ್ರವನ್ನಾಗಿ ಧರಿಸಿರುವಳು. ಕಪ್ಪಗಿರುವ ಶರೀರಕಾಂತಿಯುಳ್ಳ ಈದೇವಿಯು ಉದ್ದವಾದ ಕೋರೆಹಲ್ಲುಗಳಿಂದಲೂ, ಉದ್ದವಾಗಿಯೂ ಭಯಂಕರವಾಗಿಯೂ, ನೇತಾಡುತ್ತಲೂ ಇರುವ ನಾಲಿಗೆಯಿಂದಲೂ, ಕೆಳಮುಖನಾಗಿ ಕೆಂಡದಂತಿರುವ ಕಣ್ಣುಗಳಿಂದಲೂ, ಕರ್ಕಶಸ್ವರದಿಂದಲೂ ಅತಿಭಯಂಕರವಾಗಿ ಕಾಣುತ್ತಿರುವಳು. ಮತ್ತು ಈ ದೇವಿಯು ಶಿರವಿಲ್ಲದ ಮುಂಡದಮೇಲೆ ಕುಳಿತು ದೊಡ್ಡದಾದ ಕಿವಿಗಳಿಂದಲೂ ದುಂಡಾಗಿರುವ ಮುಖದಿಂದಲೂ ಒಪ್ಪುತ್ತಿರುವಳು. ಈ ದೇವಿಗೆ ತಾರಾ ಎಂದು ಹೆಸರು. ಚಾಮುಂಡಾ ಎಂತಲೂ ಹೆಸರು ಹೇಳಲ್ಪಡುವುದು.

ಏತಸ್ಯಾ ಯೋಗಿನೀಶ್ಚಾಷ್ಟೌ ಪೂಜಯೇಚ್ಚಿಂತಯೇದ್ಯದಿ ।
ತ್ರಿಪುರಾ ಭೀಷಣಾ ಚಂಡೀ ಕರ್ತ್ರೀ ಹರ್ತ್ರೀ ವಿಧಾನಿಕಾ ॥ ೯೬ ॥

ಕರಾಲಾ ಶೂಲಿನೀ ಚೇತಿ ಅಷ್ಟೌ ತಾಃ ಪರಿಕೀರ್ತಿತಾಃ ।
ಏಷಾತಿಕಾಮದಾ ದೇವೀ ಜಾಡ್ಯಹಾನಿಕರೀ ಸದಾ ॥ ೯೭ ॥

ಏತಸ್ಯಾಃ ಸದೃಶೀ ಕಾಚಿತ್ಕಾಮದಾ ನ ಹಿ ವಿದ್ಯತೇ ।
ಕೌಶಿಕ್ಯಾ ಹೃದಯಾದ್ದೇವೀ ನಿಃಸೃತಾ ಧ್ಯಾಯತೋ ಹರೇಃ ॥ ೯೮ ॥

ಶಿವದೂತೀತಿ ಸಾ ಖ್ಯಾತಾ ಯಾ ಚ ದೇವಶತೈರ್ವೃತಾ ।
ಮಂತ್ರಮಸ್ಯಾಃ ಪ್ರವಕ್ಷ್ಯಾಮಿ ಧರ್ಮಕಾಮಾರ್ಥದಾಯಕಂ । ॥ ೯೯ ॥

ಯಚ್ಛ್ರುತ್ವಾ ಸಾಧಕೋ ಯಾತಿ ದುರ್ಲಭಂ ಶಿವಮಂದಿರಂ ।
ಯಾಮಾರಾಧ್ಯ ಮಹಾದೇವೀಂ ಶಿವದೂತೀಂ ಶಿವಾತ್ಮಿಕಾಂ ॥ ೧೦೦ ॥

---

೯೬. ಈಮೂರ್ತಿಯ ಅಷ್ಟಯೋಗಿನಿಗಳು ಯಾರೆಂದರೆ-ತ್ರಿಪುರಾ, ಭೀಷಣಾ, ಚಂಡೀ, ಕರ್ತ್ರೀ, ಹರ್ತ್ರೀ, ವಿಧಾನಿಕಾ, ಕರಾಲಾ, ಶೂಲಿನೀ, ಎಂದು ಈ ಎಂಟು ಮಂದಿಯನ್ನು ಪೂಜಿಸಿ ಧ್ಯಾನಿಸಬೇಕು.

೯೭. ಈ ಕಾಲೀ ದೇವಿಯು ಯಾವಾಗಲೂ ಜಾಡ್ಯಗಳನ್ನು ಪರಿಹರಿಸಿ ಇಷ್ಟಾರ್ಥಗಳನ್ನು ಕೊಡುವಳು. ಇವಳಂತೆ ಇಷ್ಟಾರ್ಥಗಳನ್ನು ಕೊಡಬಲ್ಲ ಮತ್ತಾವ ದೇವತೆಯೂ ಇರುವುದಿಲ್ಲ.

೯೮. ದೇವಿಯನ್ನು ಧ್ಯಾನಮಾಡುತ್ತಿರುವ ವಿಷ್ಣುವಿನ ಎದುರಿಗೆ ಕೌಶಿಕೀ ದೇವಿಯ ಹೃದಯದಿಂದ ಹೊರಹೊರಟ ದೇವಿಯು ಶಿವದೂತಿಯೆಂದು ಪ್ರಸಿದ್ಧಳಾಗಿರುವಳು. ಇವಳು ನೂರಾರು ದೇವತೆಗಳಿಂದ ಪರಿವೃತಳಾಗಿರುವಳು.

೯೯-೧೦೦. ಯಾವ ಶಿವಸ್ವರೂಪಳಾದ ಶಿವದೂತಿ ಎಂಬ ದೇವಿಯನ್ನು ಪೂಜಿಸುವುದರಿಂದ ಮಾನವನು ಶೀಘ್ರವಾಗಿ ಇಷ್ಟಾರ್ಥಗಳನ್ನು ಪಡೆಯುವನೋ ಮತ್ತು ಸರ್ವಕಾರ್ಯಗಳಲ್ಲಿ ಜಯಶೀಲನಾಗುವನೋ ಮತ್ತು ಧರ್ಮಕಾಮಾರ್ಥಗಳನ್ನೂ ದುರ್ಲಭವಾದ ಕೈಲಾಸಪದವನ್ನೂ ಯಾವ ಮಂತ್ರಶ್ರವಣಮಾತ್ರದಿಂದ ಸಾಧಕನು ಹೊಂದುವನೋ ಅಂತಹ ಈ ಶಿವದೂತೀದೇವಿಯ ಮಂತ್ರವನ್ನು ಹೇಳುವೆನು ಕೇಳು.

ನ ಚಿರಾಲ್ಲಭತೇ ಕಾಮಾನ್ನರಃ ಸರ್ವಜಯೀ ಭವೇತ್ ।
ಅಂತಃ ಸಮಾಸ್ತಿಸಹಿತೋ ಬಿಂದ್ವಿಂದುಭ್ಯಾಂ ದಶಾವರಃ ॥ ೧೦೧ ॥

ಸ್ವರೇಣೋಷಾಂತದಂತ್ಯೇನ ಸಂಸ್ಪೃಷ್ಟೋಂತೇನ ಪೂರ್ವಶಃ ।
ಸ ಏವ ಬಿಂದುಯುಗಲಪೂರ್ವಸ್ಥೋಷಾಂತಪಾವಕಃ ॥ ೧೦೨ ॥

ಷಷ್ಠಸ್ವರಕಲಾಶೂನ್ಯೈಃ ಸಹಿತಃ ಪ್ರಥಮಸ್ಥಿತಃ ।
ಮುಂತೋ್ರೀಯಂ ಶಿವದೂತ್ಯಾಸ್ತು ಶಿವದೂತೀಜಯಪ್ರದಃ ॥ ೧೦೩ ॥

ರೂಪಮಸ್ಯಾಃ ಪ್ರವಕ್ಷ್ಯಾಮಿ ಶೃಣು ವತ್ಸೈಕಸಂಮತಃ ।
ಚತುರ್ಭುಜಂ ಮಹಾಕಾಯಂ ಸಿಂದೂರಸದೃಶದ್ಯುತಿ ॥ ೧೦೪ ॥

ರಕ್ತದಂತಂ ಮುಂಡಮಾಲಾಜಟಾಜೂಟಾರ್ಧಚಂದ್ರಧೃಕ್ ।
ನಾಗಕುಂಡಲಹಾರಾಭ್ಯಾಂ ಶೋಭಿತಂ ನಖರೋಜ್ಜ್ವಲಂ ॥ ೧೦೫ ॥

೧೦೧-೧೦೨ ಕಡೆಯ ವರ್ಣವಾದ ಹಕಾರವು, ಬಿಂದುವಿನಿಂದಲೂ ಕಡೆಯ ದಂತ್ಯಾಕ್ಷರದ ಹಿಂದಿನ ವರ್ಣವಾದ ಧಕಾರವು, ವಹ್ನಿ ಬೀಜವಾದ ರಕಾರವು ಇವು ಗಳೂ, ಆರನೇಸ್ವರವಾದ ಊಕಾರ ಮತ್ತು ವಿಸರ್ಗಗಳಿಂದಲೂ ಕೂಡಿ ಶಿವದೂತೀ ಎಂಬ ಮಂತ್ರವಾಗುವುದು.

೧೦೩. ಈ ಮಂತ್ರವು ಶಿವದೂತಿಯನ್ನು ಪ್ರಸನ್ನಳನ್ನಾಗಿ ಮಾಡಿಕೊಡುವ ಮಂತ್ರವು. ಈ ಶಿವದೂತಿಯ ಧ್ಯಾನಕ್ರಮವನ್ನು ಹೇಳುವೆನು. ಎಲೈ ವತ್ಸನೇ ಒಳ್ಳೆಯ ಮನಸ್ಸಿನಿಂದ ಕೇಳುವವನಾಗು.

೧೦೪-೧೦೫. ಈ ಶಿವದೂತೀದೇವಿಗೆ ನಾಲ್ಕು ಭುಜಗಳೂ, ಸಿಂದೂರವಂತಿ ಹೊಳೆಯುವ ದೊಡ್ಡ ಶರೀರವೂ, ಕೆಂಪಾದ ಹಲ್ಲುಗಳೂ ಇರುವವು. ಈ ದೇವಿಯು ಮುಂಡಮಾಲೆಯನ್ನು ಧರಿಸಿ, ಜಟೆಯಲ್ಲಿ ಅರ್ಧಚಂದ್ರನನ್ನು ಧರಿಸಿರುವಳು. ನಾಗಕುಂಡಲಗಳಿಂದಲೂ ನಾಗಹಾರಗಳಿಂದಲೂ ಶೋಭಿಸುತ್ತಾ ವ್ಯಾಘ್ರಚರ್ಮವನ್ನು ಹೊದ್ದುಕೊಂಡು ಬಲಗೈಗಳಲ್ಲಿ ಮೇಲಿಂದ ಕೆಳಕ್ಕೆ ಕ್ರಮವಾಗಿ ಖೂಲವನ್ನೂ, ಖಡ್ಗ ವನ್ನೂ ಎಡಗೈಗಳಲ್ಲಿ ಪಾಶವನ್ನೂ ಚರ್ಮವನ್ನೂ ಧರಿಸಿರುವಳು. ದೊಡ್ಡದಾದ ಮುಖವೂ, ದಪ್ಪನಾದ ತುಟಿಗಳೂ ಎತ್ತರವಾದ ಶರೀರಾಕೃತಿಯೂ ಎಲ್ಲರಿಗೂ ಭಯ ವನ್ನುಂಟುಮಾಡುತ್ತಿರುವುದು. ಮತ್ತು ಈ ದೇವಿಯು ತನ್ನ ಬಲಗಾಲನ್ನು ಶವದ

ವ್ಯಾಘ್ರಚರ್ಮಪರೀಧಾನಂ ದಕ್ಷಿಣೇ ಶೂಲಖಡ್ಗಧೃಕ್ ।
ವಾಮೇ ಪಾಶಂ ತಥಾ ಚರ್ಮ ಬಿಭ್ರದೂರ್ಧ್ವಾಪರಕ್ರಮಾತ್ ॥ ೧೦೬ ॥

ಸ್ಥೂಲವಕ್ತ್ರಂ ಚ ಪೀನೌಷ್ಠಂ ತುಂಗಮೂರ್ತಿಂ ಭಯಂಕರಂ ।
ನಿಃಕ್ಷಿಪ್ಯ ದಕ್ಷಿಣಂ ಪಾದಂ ಸಂತಿಷ್ಠತ್ಯುಣಪೋಪರಿ ॥ ೧೦೭ ॥

ವಾಮಪಾದಂ ಶೃಗಾಲಸ್ಯ ಪೃಷ್ಠೇ ಘೋರುಶತೈರ್ವೃತಂ ।
ಈದೃಶೀಂ ಶಿವದೂತ್ಯಾಸ್ತು ಮೂರ್ತಿಂ ಧ್ಯಾಯೇದ್ವಿಭೂತಯೇ ॥ ೧೦೮ ॥

ಧ್ಯಾನಮಾತ್ರಾದಧೃತಸ್ಯಾ ನರಃ ಕಲ್ಯಾಣಮಾಪ್ನುಯಾತ್ ।
ಪೂಜನಾದಚಿರಾದ್ದೇವೀ ಸರ್ವಾನ್ಕಾಮಾನ್ದದಾತಿ ಚ ॥ ೧೦೯ ॥

ಯಃ ಶಿವಾನಿರುತಂ ಶ್ರುತ್ವಾ ಶಿವದೂತೀಂ ಶುಭಪ್ರದಾಂ ।
ಪ್ರಣಮೇತ್ಸಾಧಕೋ ಭಕ್ತ್ಯಾ ತಸ್ಯ ಕಾಮಾಃ ಕರೇ ಸ್ಥಿತಾಃ ॥ ೧೧೦ ॥

ಯದಾ ಜಘಾನ ಜಗತಾಂ ರಕ್ತಬೀಜಂ ಹಿತಾಯ ವೈ ।
ಮಹಾದೇವೀ ಮಹಾಮಾಯಾ ತದಾಸ್ಯಾಃ ಕಾಯತಃ ಸೃತಾ ॥ ೧೧೧ ॥

ಮೇಲಿಟ್ಟು ಎಡಗಾಲನ್ನು ನರಿಯ ಬೆನ್ನಿನ ಮೇಲಿಟ್ಟುಕೊಂಡು ನೂರಾರು ನರಿಗಳಿಂದ ಪರಿವೃತಳಾಗಿ ಶೋಭಿಸುತ್ತಿರುವಳು. ಇಂತಹ ಶಿವದೂತೀದೇವಿಯನ್ನು ಐಶ್ವರ್ಯಾಭಿವೃದ್ಧಿಗಾಗಿ ಧ್ಯಾನಮಾಡಬೇಕು.

೧೦೯. ಈ ದೇವಿಯ ಧ್ಯಾನಮಾತ್ರದಿಂದಲೇ ಮಾನವನು ಶುಭವನ್ನು ಪಡೆಯುವನು. ಪೂಜೆ ಮಾಡುವುದರಿಂದ ದೇವಿಯು ಶೀಘ್ರವಾಗಿ ಸಮಸ್ತ ಇಷ್ಟಾರ್ಥಗಳನ್ನು ಕೊಡುವಳು.

೧೧೦. ಮಂಗಳಕರವಾಗಿಯೂ, ಶಿವದೂತಿಯ ಸಬಂಧವಾದುದಾಗಿಯೂ ಇರುವ ಹೆಣ್ಣುನರಿಯ ಶಬ್ದವನ್ನು ಕೇಳಿ, ಸಾಧಕನು ಭಕ್ತಿಯಿಂದ ನಮಸ್ಕಾರಮಾಡಬೇಕು. ಅದರಿಂದ ಅವನ ಇಷ್ಟಾರ್ಥಗಳು ಕೈಗೂಡುವವು.

೧೧೧. ಮಹಾಮಾಯಾಸ್ವರೂಪಳಾದ ದೇವಿಯು ಜಗತ್ಕಲ್ಯಾಣಕ್ಕಾಗಿ ರಕ್ತಬೀಜಾಸುರನನ್ನು ಸಂಹಾರಮಾಡಿದಾಗ ಆದೇವಿಯ ಶರೀರದಿಂದ ಈ ಶಿವದೂತಿಯು ಹೊರಹೊರಟುಬಂದಳು.

ದೂತಂ ಪ್ರಸ್ಥಾಪಯಾಮಾಸ ಶಿವಂ ಶುಂಭಾಯ ಸಾಂಬಿಕಾ ।
ತೇನ ಸಾ ಶಿವದೂತೀತಿ ದೇವ್ಯೈಃ ಸರ್ವೈಃ ಪ್ರಗೀಯತೇ ॥ ೧೧೨ ॥

ಕ್ಷೇಮಂಕರೀ ಚ ಶಾಂತಾ ಚ ವೇದಮಾತಾ ಮಹೋದರೀ ।
ಕರಾಲಾ ಕಾಮದಾ ದೇವೀ ಭರ್ಗಸ್ಯ ಭಗಶಾಲಿನೀ ॥ ೧೧೩ ॥

ಭಗೋದರೀ ಭಗಾಹಾರಾ ಭಗಜಿಹ್ವಾ ಭಗಾ ತಥಾ ।
ಏತಾ ದ್ವಾದಶ ಯೋಗಿನ್ಯಃ ಪೂಜನೇ ಪರಿಕೀರ್ತಿತಾಃ ॥ ೧೧೪ ॥

ಏತಾ ದ್ವಾದಶ ಯೋಗಿನ್ಯಃ ಶಿವದೂತ್ಯಾಃ ಸದೈವ ಹಿ ।
ವಿಚರಂತೀ ಸ್ವಯಂ ದೇವೀ ಯತ್ರ ತತ್ರೈವ ಗಚ್ಛತಿ ॥ ೧೧೫ ॥

ಯೋಗಿನ್ಯೋ ಹ್ಯಥ ಸಖ್ಯಃಸ್ಯುರ್ಯಥಾನ್ಯಾಸಾಂ ತಥಾ ಪುನಃ ।
ಚಂಡಿಕಾಯಾಸ್ತು ಯೋಗಿನ್ಯಃ ಸಖ್ಯೋಽತ್ರ ಪರಿಕೀರ್ತಿತಾಃ ॥ ೧೧೬ ॥

---

೧೧೨. ಆಗ ಆ ದೇವಿಯು ಶುಂಭಾಸುರನ ಸಮೀಪಕ್ಕೆ ಶಿವನನ್ನು ದೂತನನ್ನಾಗಿ ಕಳುಹಿಸಿದಳು. ಅದರಿಂದ ಈ ದೇವಿಗೆ ಶಿವದೂತಿಯೆಂದು ಹೆಸರು ಬಂದು ದೇವತೆಗಳಿಂದ ಕೊಂಡಾಡಲ್ಪಡುತ್ತಿರುವುದು.

೧೧೩-೧೧೪. ಕ್ಷೇಮಂಕರೀ, ಶಾಂತಾ, ವೇದಮಾತಾ, ಮಹೋದರೀ, ಕರಾಲಾ, ಕಾಮದಾ, ಭರ್ಗಸ್ಯದೇವೀ, ಭಗಶಾಲಿನೀ, ಭಗೋದರೀ, ಭಗಾಹಾರಾ, ಭಗಜಿಹ್ವಾ, ಭಗಾ ಎಂಬ ಈ ಹನ್ನೆರಡುಮಂದಿ ಯೋಗಿನಿಯರು ಪೂಜಾಕಾಲದಲ್ಲಿ ಪಠಿಸಲ್ಪಡಬೇಕು.

೧೧೫. ಈ ಹನ್ನೆರಡು ಮಂದಿಯೂ ಶಿವದೂತೀದೇವಿಯ ಯೋಗಿನಿಯರು. ಇವರು, ದೇವಿಯು ಎಲ್ಲೆಲ್ಲಿ ಸಂಚರಿಸುವಳೋ ಅಲ್ಲೆಲ್ಲಾ ದೇವಿಯ ಸಮೀಪದಲ್ಲಿಯೇ ಯಾವಾಗಲೂ ಇರುವರು.

೧೧೬. ಇತರ ದೇವಿಯ ಮೂರ್ತಿಗಳಿಗೆ ಹೇಗೋ ಹಾಗೆ, ಈ ಶಿವದೂತೀದೇವಿಗೂ ಈ ಯೋಗಿನಿಯರು ಸಖಿಯರಾಗಿರುವರು. ಇವರು ಚಂಡಿಕಾದೇವಿಗೂ ಸಪ್ತ ಸಖಿಯರೆಂದು ಪ್ರಸಿದ್ಧವಾಗಿರುವುದು.

ಇತಿ ತೇ ತ್ವಂಗಮಂತ್ರಾಣಿ ಕಥಿತಾನಿ ಸಮಾಸತಃ ।
ಕಾಮಾಖ್ಯಾಯಾಶ್ಚ ಮಾಹಾತ್ಮ್ಯಂ ಕಲ್ಪತಂತ್ರಂ ವದಾಮಿ ವಾಂ ॥ ೧೧೭ ॥

ಇತಿ ಶ್ರೀ ಕಾಲಿಕಾಪುರಾಣೇ ಕಾಮಾಖ್ಯಾಮಾಹಾತ್ಮ್ಯೇ
ತ್ರಿಷಷ್ಟಿತಮೋಽಧ್ಯಾಯಃ

---

೧೧೭. ಈ ರೀತಿ ದೇವಿಯ ಅಂಗಮಂತ್ರಗಳನ್ನು ವಿಸ್ತಾರವಾಗಿ ನಿಮಗೆ ಹೇಳಿದ್ದಾಯಿತು. ಇನ್ನು ಕಾಮಾಖ್ಯಾದೇವಿಯ ಮಹಿಮೆಯನ್ನೂ ಮಂತ್ರತಂತ್ರಗಳನ್ನೂ ನಿಮಗೆ ಹೇಳುವೆನು.

ಇಲ್ಲಿಗೆ ಶ್ರೀ ಕಾಳಿಕಾ ಪುರಾಣದಲ್ಲಿ ಅರವತ್ತಮೂರನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಚತುಃಷಷ್ಟಿತಮೋಽಧ್ಯಾಯಃ ॥

॥ ಭಗವಾನುವಾಚ ॥

ಕಾಮಾರ್ಥಮಾಗತಾ ಯಸ್ಮಾನ್ಮಯಾ ಸಾರ್ಧಂ ಮಹಾಗಿರೌ ।
ಕಾಮಾಖ್ಯಾ ಪ್ರೋಚ್ಯತೇ ದೇವೀ ನೀಲಕೂಟೇರಹೋಗತಾ ॥ ೧ ॥

ಕಾಮದಾ ಕಾಮಿನೀ ಕಾಮಾ ಕಾಂತಾ ಕಾಮಾಂಗದಾಯಿನೀ ।
ಕಾಮಾಂಗನಾಶಿನೀ ಯಸ್ಮಾತ್ಕಾಮಾಖ್ಯಾ ತೇನ ಚೋಚ್ಯತೇ ॥ ೨ ॥

ಏತಸ್ಯಾಃ ಶೃಣು ಮಾಹಾತ್ಮ್ಯಂ ಕಾಮಾಖ್ಯಾಯಾ ವಿಶೇಷತಃ ।
ಯಾ ಸಾ ಪ್ರಕೃತಿರೂಪೇಣ ಜಗತ್ಸರ್ವಂ ನಿಯೋಜಯೇತ್ ॥ ೩ ॥

ಅರವತ್ತನಾಲ್ಕನೆಯ ಅಧ್ಯಾಯವು.

೧. ಭಗವಾನ್ ಶಂಕರನು ಹೇಳಿದನು--ನೀಲಕೂಟವೆಂಬ ಮಹಾಪರ್ವತದಲ್ಲಿ ಏಕಾಂತವಾಗಿ ನನ್ನೊಡನೆ ಕೂಡಿ ಕ್ರೀಡಿಸಲು ಬಂದಳಾದ್ದರಿಂದ ಈ ದೇವಿಗೆ ಕಾಮಾಖ್ಯಾ ಎಂದು ಹೆಸರಾಯಿತು.

೨. ಈ ದೇವಿಯು ಕಾಮವನ್ನು ಕೊಡುವಳು, ಸ್ವಯಂ ಕಾಮಿನಿಯು (ಸ್ತ್ರೀಯು) ಕಾಮದಲ್ಲಿ ಆಸಕ್ತಳಾಗಿರುವಳು, ಪ್ರೀತಿಯನ್ನು ಉಂಟುಮಾಡುವಳು. ಕಾಮಾಂಗಗಳನ್ನು ಎಂದರೆ ಕಾಮಸಾಧನೆಗಳನ್ನು ಕೊಡುವಳು. ಮತ್ತು ಅವುಗಳನ್ನು ನಾಶಮಾಡುವಳು. ಈ ರೀತಿ ಇರುವುದರಿಂದ ಈ ದೇವಿಯು ಕಾಮಾಖ್ಯಾ ಎಂದು ಕರೆಯಲ್ಪಡುವಳು.

೩. ಯಾವ ದೇವಿಯು ಪ್ರಕೃತಿರೂಪದಿಂದ ಸಮಸ್ತ ಜಗತ್ತನ್ನೂ ಸೃಷ್ಟಿಸಿ ಕಾಪಾಡುವಳೋ ಅಂತಹ ಕಾಮಾಖ್ಯಾದೇವಿಯ ಮಾಹಾತ್ಮ್ಯವನ್ನು ವಿಶೇಷ ರೀತಿಯಿಂದ ಹೇಳುವೆನು, ಕೇಳು.

ಮಧುಕೈಟಭನಾಶಾಯ ಮಹಾಮಾಯಾವಿಮೋಹಿತಃ ।
ಯದಾ ಸಂಯುಯುಧೇ ವಿಷ್ಣುಸ್ತದೈಷಾಮೋಹಾಯದ್ದೃಢಂ ॥ ೪ ॥

ದೈನಂದಿನೇ ತು ಪ್ರಲಯೇ ಪ್ರಸುಪ್ತೇ ಗರುಡಧ್ವಜೇ ।
ತಸ್ಯ ಶ್ರವಣವಿಡ್ಜಾತಾವಸುರೌ ಮಧುಕೈಟಭೌ ॥ ೫ ॥

ಕೂರ್ಮಪೃಷ್ಠೇ ಸ್ಥಿತಾ ದೇವೀ ವಿಶೀರ್ಣೇವಾಭಪಙ್ಜಲೈಃ ।
ತಾಂ ವಿಶೀರ್ಣಾಂ ಯೋಗನಿದ್ರಾ ಮಹಾಮಾಯಾ ವ್ಯಲೋಕಯತ್ ॥ ೬ ॥

ತಾಂ ವೈ ದೃಢತರಾಂ ಪೃಥ್ವೀಂ ಕರ್ತುಂ ಪ್ರತಿ ತದೇಶ್ವರೀ ।
ಉಪಾಯಂ ಚಿಂತಯಾಮಾಸ ಕಥಂ ಪೃಥ್ವೀ ಭವೇದ್ದೃಢಾ ॥ ೭ ॥

ಇದಾನೀಮಾಜ್ಯವತ್ಪೃಥ್ವೀ ಪ್ರವೃತ್ತಾ ಕೋಮಲಾ ಜಲೈಃ ।
ಸೃಷ್ಟಿಕಾಲೇ ಜನಾನ್ಸೋಢುಂ ಕಥಂ ಶಕ್ತಾ ಭವಿಷ್ಯತಿ ॥ ೮ ॥

---

೪. ಮಹಾಮಾಯೆಯಿಂದ ಮೋಹಿತನಾದ ವಿಷ್ಣುವು ಮಧುಕೈಟಭರನ್ನು ಸಂಹಾರ ಮಾಡಲು ಅವರೊಡನೆ ಯುದ್ಧಮಾಡಿದಾಗ ದೇವಿಯು ವಿಷ್ಣುವನ್ನು ವಿಶೇಷವಾಗಿ ಮೋಹಗೊಳಿಸಿದಳು.

೫. (ಬ್ರಹ್ಮನ) ಎನಾಂತ್ಯದಲ್ಲಿ ನಡೆಯುವ ಪ್ರಲಯಕಾಲದಲ್ಲಿ ವಿಷ್ಣುವು ಮಲಗಿರಲು ಅವನ ಕಿವಿಯ ಮಲದಿಂದ ಮಧುಕೈಟಭರೆಂಬ ದೈತ್ಯರು ಹುಟ್ಟಿದರು.

೬. ಆ ಕಾಲದಲ್ಲಿ ಮಹಾಮಾಯಾಸ್ವರೂಪಳಾದ ಯೋಗನಿದ್ರಾದೇವಿಯು ಆಮೆಯ ಬೆನ್ನಿನ ಮೇಲೆ ಕುಳಿತು ಪ್ರಳಯಜಲದಲ್ಲಿ ನೀರಿನಿಂದ ನೆನೆದು ಮೆತ್ತಗಾಗಿರುವ ಭೂಮಿಯನ್ನು ನೋಡಿದಳು.

೭. ಆಗ ದೇವಿಯು ಭೂಮಿಯನ್ನು ಘಟ್ಟಿಯಾಗುವಂತೆ ಮಾಡಲು ಏನು ಮಾಡಬೇಕೆಂದು ಉಪಾಯವನ್ನು ಯೋಚಿಸಿದಳು.

೮. ಈಗ ಭೂಮಿಯು ನೀರಿನಿಂದ ನೆನೆದು ತುಪ್ಪದಂತೆ ಅತಿ ಮೃದುವಾಗಿರುವುದು. ಮುಂದೆ ನಡೆಯಲಿರುವ ಸೃಷ್ಟಿಕಾಲದಲ್ಲಿ ಜನರ ಭಾರವನ್ನು ಧರಿಸಲು ಹೇಗೆ ಸಮರ್ಥವಾಗುವುದು ?

ಇತಿ ಸಂಚಿಂತ್ಯ ಸಾ ಮಾಯಾ ಜಗತಾಂ ಸೃಷ್ಟಿರೂಪಿಣೀ ।
ಉಪಗಮ್ಯ ತದಾ ವಿಷ್ಣುಮಾಸಸಾದ ಸನಿದ್ರಿತಂ ॥ ೯ ॥

ತಂ ತು ಸುಪ್ತಂ ಸಮಾಸಾದ್ಯ ಜಗನ್ನಾಥಂ ಜಗತ್ಪತಿಂ ।
ವಾಮಹಸ್ತಕನಿಷ್ಠಾಗ್ರಂ ತಸ್ಯ ಕರ್ಣೇ ನ್ಯವೇಶಯತ್ ॥ ೧೦ ॥

ನಿವೇಶ್ಯ ನಖರಾಗ್ರೇಣ ಪ್ರೋದ್ಧೃತ್ಯ ಶ್ರಾವಣಂ ಮಲಂ ।
ಚೂರ್ಣೀಚಕಾರ ಸಾ ದೇವೀ ಯೋಗನಿದ್ರಾ ಜಗತ್ಪ್ರಸೂಃ ॥ ೧೧ ॥

ತತ್ಕರ್ಣಮಲಚೂರ್ಣೇಭ್ಯೋ ಮಧುನಾರ್ಮಾಸುರೋಽಭವತ್ ।
ತತೋ ದಕ್ಷಿಣಹಸ್ತಸ್ಯ ಕನಿಷ್ಠಾಗ್ರಂ ತು ದಕ್ಷಿಣೇ ॥೧೨ ॥

ಕರ್ಣೇ ನ್ಯವೇಶಯದ್ದೇವೀ ತಸ್ಮಾದಪ್ಯುದ್ಧೃತಂ ಮಲಂ ।
ತಚ್ಚಾಪಿ ಕ್ಷೋದಯಾಮಾಸ ಕರಶಾಖಾದ್ವಯೇನ ತು ॥ ೧೩ ॥

---

೯. ಹೀಗೆಂದು ಯೋಚಿಸಿ ಜಗತ್ಸೃಷ್ಟಿಸ್ವರೂಪಳಾದ ಮಹಾಮಾಯೆಯು ನಿದ್ರಿಸುತ್ತಲಿದ್ದ ವಿಷ್ಣುವಿನ ಸಮೀಪವನ್ನೈದಿದಳು.

೧೦. ನಿದ್ರಿಸುತ್ತಲಿರುವ, ಜಗತ್ಪತಿಯಾದ ಆ ವಿಷ್ಣುವಿನ ಸಮೀಪವನ್ನೈದಿ ಯೋಗಮಾಯೆಯು ಆತನ ಕಿವಿಯಲ್ಲಿ ತನ್ನ ಎಡಗೈಯ ಕಿರುಬೆರಳಿನ ತುದಿಯನ್ನು ಇಟ್ಟಳು.

೧೧-೧೨. ಜಗತ್ಸೃಷ್ಟಿಕರ್ತಳಾದ ಆ ಯೋಗನಿದ್ರಾದೇವಿಯು ಈರೀತಿ ವಿಷ್ಣು ವಿನ ಕಿವಿಯಲ್ಲಿ ತನ್ನ ಬೆರಳನ್ನು ಇರಿಸಿ ಉಗುರಿನಿಂದ ಕಿವಿಯ ಕೊಳೆಯನ್ನು ತೆಗೆದು ಅದನ್ನು ಚೂರ್ಣಮಾಡಿ ಎಸೆದಳು. ಹಾಗೆ ಚೂರ್ಣಮಾಡಿ ಎಸೆದ ಕಿವಿಯ ಕೊಳೆಯಿಂದ ಮಧುವೆಂಬ ದೈತ್ಯನು ಜನಿಸಿದನು.

೧೩. ಬಳಿಕ ತನ್ನ ಬಿಲಗೈಯ ಕಿರುಬೆರಳನ್ನು ವಿಷ್ಣುವಿನ ಬಲಗಿವಿಯಲ್ಲಿ ಇಟ್ಟು ಕೊಳೆಯನ್ನು ತೆಗೆದು ಅದನ್ನು ಎರಡುಬೆರಳುಗಳಿಂದ ಚೂರ್ಣಮಾಡಿ ಎಸೆದಳು. ಆ ಮಲದಿಂದ ಕೈಟಭನೆಂಬ ಮಹಾಬಲಶಾಲಿಯಾದ ದೈತ್ಯನು ಉತ್ಪನ್ನನಾದನು.

ತತೋಽಭೂತ್ಕೈಟಭೋ ನಾಮ ಬಲವಾನ್ಯೋಽಸುರೋಮಹಾನ್ ।
ಉತ್ಪನ್ನಃ ಸ ಚ ಪಾನಾರ್ಥಂ ಯಸ್ಮಾನ್ಮೃಗಿತವಾನ್ಮಧು ॥ ೧೪ ॥

ತತಸ್ತಸ್ಯ ಮಹಾದೇವೀ ಮಧುನಾಮಾಕರೋತ್ತದಾ ।
ಉತ್ಪನ್ನಃ ಕೇಟವದ್ಯಾತಿ ಮಹಾಮಾಯಾಕರೇ ಯತಃ ॥ ೧೫ ॥

ತತೋಽಸ್ಯ ಕೈಟಭಂ ನಾಮ ಮಹಾಮಾಯಾ ತದಾಽಕರೋತ್ ।
ಮಹಾಮಾಯಾಮೋಹಿತೌ ತೌ ವಿಷ್ಣುಗಾತ್ರಂ ತದಾ ಗತೌ ॥ ೧೬ ॥

ಭ್ರಮಮಾಣೌ ದದೃಶತುರ್ನಾಭಿಪದ್ಮೇ ಸ್ಥಿತಂ ವಿಧಿಂ ।
ತಮೂಚತುಸ್ತೌ ಧಾತಾರಂ ಹನಿಷ್ಯಾವೋಽದ್ಯ ತ್ವಾಮಿಹ ॥ ೧೭ ॥

ತ್ವಂ ಜಾಗರಯ ವೈಕುಂಠಂ ಯದಿ ಜೀವಿತುಮಿಚ್ಛಸಿ ।
ತತೋ ಬ್ರಹ್ಮಾ ಮಹಾಮಾಯಾಂ ಯೋಗನಿದ್ರಾಂ ಜಗತ್ಪ್ರಸೂಂ ॥ ೧೮ ॥

---

೧೪. ವಿಷ್ಣುವಿನ ಎಡದ ಕಿವಿಯ ಮಲದಿಂದ ಉತ್ಪನ್ನನಾದ ದೈತ್ಯನುಹುಟ್ಟಿದ ಕೂಡಲೆ ಕುಡಿಯಲು ಮಧು (ಮದ್ಯ)ನನ್ನು ಹುಡುಕಿದ್ದರಿಂದ ದೇವಿಯು ಅವನಿಗೆ ಮಧುದೈತ್ಯನೆಂಬ ಹೆಸರನ್ನು ಇಟ್ಟಳು.

೧೫. ವಿಷ್ಣುವಿನ ಬಲಗಿವಿಯ ಮಲದಿಂದ ಉತ್ಪನ್ನನಾದ ದೈತ್ಯನು ಮಹಾ ಮಾಯೆಯ ಕೈಯಲ್ಲಿ ಕೇಟದಂತೆ (ಹುಳುವಿನಂತೆ) ಕಾಣುತ್ತಿದ್ದುದರಿಂದ ದೇವಿಯು ಅವನಿಗೆ ಕೈಟಭನೆಂಬ ಹೆಸರನ್ನು ಇಟ್ಟಳು.

೧೬. ಆ ದೈತ್ಯರಿಬ್ಬರೂ ಮಹಾಮಾಯೆಯಿಂದ ಮೋಹಿತರಾಗಿ ವಿಷ್ಣುವಿನ ಶರೀರವನ್ನು ಸೇರಿ ಅಲ್ಲೆ ಸುತ್ತುತ್ತಾ ಅವನ ನಾಭಿಕಮಲದಲ್ಲಿ ಇದ್ದ ಬ್ರಹ್ಮನನ್ನು ನೋಡಿದರು.

೧೭. ಆ ದೈತ್ಯರು ಬ್ರಹ್ಮನನ್ನು ನೋಡಿ ಎಲೈ ಬ್ರಹ್ಮನೇ, ನಿನಗೆ ಜೀವಿಸಿರ ಬೇಕೆಂಬ ಇಚ್ಛೆಯಿದ್ದಲ್ಲಿ ನೀನು ಈ ವಿಷ್ಣುವನ್ನು ಎಚ್ಚರಗೊಳಿಸು ಇಲ್ಲದಿದ್ದರೆ ನಿನ್ನನ್ನು ಈಗಲೇ ಕೊಲ್ಲುವೆವು ಎಂದು ಬ್ರಹ್ಮನನ್ನು ಕುರಿತು ಹೇಳಿದರು.

೧೮. ಆಗ ಬ್ರಹ್ಮನು ಭಯಗೊಂಡು ಜಗತ್ಸೃಷ್ಟಿಕರ್ತಳಾಗಿಯೂ, ಮಹಾ ಮಾಯಾಸ್ವರೂಪಳಾಗಿಯೂ ಇರುವ ಯೋಗನಿದ್ರಾದೇವಿಯನ್ನು ಅನೇಕ ಸ್ತೋತ್ರ ಗಳಿಂದ ಸ್ತುತಿಸಿ ಪ್ರಸನ್ನಳಾಗುವಂತೆ ಮಾಡಿದನು.

ಪ್ರಸಾದಯಾಮಾಸ ತದಾ ಸ್ತುತಿಭಿರ್ಬಹುಭಿರ್ಭಯಾತ್ ।
ಚಿರಂ ಸ್ತುತಾಥ ಸಾ ದೇವೀ ಬ್ರಹ್ಮಣಾ ಜಗದಾತ್ಮನಾ ॥ ೧೯ ॥

ಪ್ರಸನ್ನಾ ತರಸಾ ವ್ಯಗ್ರಮುವಾಚ ಚ ಯಥಾ ವಿಧಿಂ ।
ಕಿಮರ್ಥಂ ಸಂಸ್ತುತಾ ಚಾಹಂ ಕಿಂ ಕರಿಷ್ಯಾಮ್ಯಹಂ ತವ ॥ ೨೦ ॥

ತದ್ವದ ತ್ವಂ ಮಹಾಭಾಗ ಕರಿಷ್ಯಾಮ್ಯಹಮದ್ಯ ತೇ ।
ತತಸ್ತೇನ ಮಹಾಮಾಯಾ ಪ್ರೋಕ್ತಾ ಧಾತ್ರಾ ಮಹಾತ್ಮನಾ ॥ ೨೧ ॥

ಪ್ರಬೋಧಯ ಜಗನ್ನಾಥಂ ಯಾವನ್ನೋ ಮಾಂ ಹನಿಷ್ಯತಃ ।
ಸಂಮೋಹಯ ದುರಾಧರ್ಷಾವಸುರೌ ಮಧುಕೈಟಭೌ ॥ ೨೨ ॥

ಇತ್ಯುಕ್ತಾ ಸಾ ತದಾ ದೇವೀ ಬ್ರಹ್ಮಣಾ ಜಗದಾತ್ಮನಾ ।
ಬೋಧಯಾಮಾಸ ವೈ ಕುಂತಂ ನೋಹಮಾಯಾಸ ವೈ ತದಾ ॥ ೨೩ ॥

---

೧೯. ಸೃಷ್ಟಿಕರ್ತನಾದ ಬ್ರಹ್ಮನು ಹೀಗೆ ಬಹುಕಾಲ ದೇವಿಯನ್ನು ಸ್ತೋತ್ರ ಮಾಡಲು ದೇವಿಯು ಪ್ರಸನ್ನಳಾಗಿ ವ್ಯಸನದಿಂದ ಕೂಡಿರುವ ಬ್ರಹ್ಮನನ್ನು ಕುರಿತು ಹೀಗೆ ಜೇಳಿದಳು.

೨೦. ಎಲೈಪೂಜ್ಯನಾದ ಬ್ರಹ್ಮನೇ ನೀನು ನನ್ನನ್ನು ಏತಕ್ಕಾಗಿ ಸ್ತುತಿಸಿದೆ? ನಿನಗೆ ನನ್ನಿಂದ ಆಗಬೇಕಾದುದೇನು? ಅದನ್ನು ಹೇಳು. ನಾನು ನಿನ್ನ ಕಾರ್ಯವನ್ನು ನೆರವೇರಿಸುವೆನು.

೨೧-೨೨. ಬಳಿಕ ಬ್ರಹ್ಮನು ಮಹಾಮಾಯೆಯನ್ನು ಕುರಿತು ಹೀಗೆ ಹೇಳಿದನು ಎಲೈ ದೇವಿಯೇ ಈ ಮಧುಕೈಟಬರು ನನ್ನನ್ನು ಕೊಲ್ಲಲುದ್ಯುಕ್ತರಾಗಿರುವರು. ಆದುದರಿಂದ ಅಪ್ಪರಲ್ಲಿ ಜಗದೊಡೆಯನಾದ ವಿಷ್ಣುವನ್ನು ಎಚ್ಚರಗೊಳಿಸು ಮತ್ತು ಬಲಗರ್ವಿತರಾದ ಈ ಮಧುಕೈಟಭರನ್ನು ಮೋಹಗೊಳಿಸು.

೨೩. ಬ್ರಹ್ಮನು ಹೀಗೆ ಹೇಳಲು, ದೇವಿಯು ವಿಷ್ಣುವನ್ನು ಎಚ್ಚರಗೊಳಿಸಿ, ಆ ದೈತ್ಯರನ್ನು ಮೋಹಗೊಳಿಸಿದಳು.

ತತಃ ಪ್ರಬುದ್ಧಃ ಕೈಷ್ಣಸ್ತು ದದರ್ಶ ಭಯಶಾಲಿನಂ ।
ಬ್ರಹ್ಮಾಣಂ ತೌ ತದಾ ಘೋರಾವಸುರೌ ಮಧುಕೈಟಭೌ ॥ ೨೪ ॥

ತತಸ್ತಾಭ್ಯಾಂ ಸ ಯುಯುಧೇ ಹ್ಯಸುರಾಭ್ಯಾಂ ಜನಾರ್ದನಃ ।
ನಾಶಕದ್ಧಾರಿತುಂ ವೀರಾವಸುರೌ ಮಧುಕೈಟಭೌ ॥ ೨೫ ॥

ಅನಂತೋಽಪಿ ಫಣಾಗ್ರೇಣ ತಾನ್ಧೃತ್ವಾಂ ಕ್ಷಮೋಽಭವತ್ ।
ಯುಧ್ಯಮಾನಾನ್ಮಹಾವೀರಾನ್ವೈಕುಂಠಂ ಮಧುಕೈಟಭಾನ್ ॥ ೨೬ ॥

ಅಥ ಬ್ರಹ್ಮಾ ಶಿಲಾರೂಪಾಂ ಸ್ಥಿತಿಶಕ್ತಿಂ ತದಾಕರೋತ್ ।
ಅರ್ಧಯೋಜನವಿಸ್ತೀರ್ಣಾಮರ್ಧಯೋಜನಮಾಯತಾಂ ॥ ೨೭ ॥

ತಸ್ಯಾಂ ಶಿಲಾಯಾಂ ಗೋವಿಂದೋ ಯುಯುಧೇ ನೃಪಸತ್ತಮ ।
ಸಹ ತಾಭ್ಯಾಂ ಶಿಲಾ ಸಾ ತಂ ಪ್ರವಿವೇಶ ಜಲಾಂತರಂ ॥ ೨೮ ॥

---

೨೪. ಆ ಮೇಲೆ ವಿಷ್ಣುವು ಎಚ್ಚರಗೊಂಡು ಅಲ್ಲಿ ಭಯಪಡುತ್ತಲಿರುವ ಬ್ರಹ್ಮನನ್ನೂ, ಕ್ರೂರಿಗಳಾದ ಮಧುಕೈಟಭ ದೈತ್ಯರನ್ನೂ, ನೋಡಿದನು.

೨೫. ಬಳಿಕ ವಿಷ್ಣುವು ಆ ದೈತ್ಯರೊಡನೆ ಯುದ್ಧಮಾಡಿದನು. ಆದರೆ ಪರಾಕ್ರಮಶಾಲಿಗಳಾದ ಆ ಮಧುಕೈಟಭರನ್ನು ಗೆಲ್ಲಲು ಸಮರ್ಥನಾಗಲಿಲ್ಲ.

೨೬. ಭೂಮಿಯನ್ನು ತನ್ನ ಹೆಡೆಯಿಂದ ಹೊತ್ತಿರುವ ಆದಿಶೇಷನೂ ಸಹ ಯುದ್ಧಮಾಡುತ್ತಿರುವ ವಿಷ್ಣುವನ್ನೂ, ಮಧುಕೈಟಭದೈತ್ಯರನ್ನೂ ಹೊರಲು ಸಮರ್ಥನಾಗಲಿಲ್ಲ.

೨೭. ಬಳಿಕ ಬ್ರಹ್ಮನು ಅರ್ಧಯೋಜನ ಉದ್ದವೂ ಅರ್ಧಯೋಜನ ಅಗಲವೂ ಇರುವ ಕಲ್ಲಿನಂತೆ ಘಟ್ಟಿಯಾಗಿರುವ ಪ್ರದೇಶವನ್ನು ಸೃಷ್ಟಿಸಿದನು.

೨೮. ಆ ಕಲ್ಲಿನ ಮೇಲೆ ನಿಂತುಕೊಂಡು ವಿಷ್ಣುವು ದೈತ್ಯರೊಡನೆ ಯುದ್ಧಮಾಡಿದನು. ಆದರೆ ಆ ಕಲ್ಲೂ ಸಹ ಆ ದೈತ್ಯರೊಡನೆ ನೀರಿನಲ್ಲಿ ಮಳುಗಿಹೋಯಿತು.

ತಸ್ಯಾಂ ತು ಶಕ್ತ್ಯಾಂ ಮಗ್ನಾಯಾಂ ತೋಯೇ ಸ ಯುಯುಧೇ ಹರಿಃ ।
ಪಂಚವರ್ಷಸಹಸ್ರಾಣಿ ಬಾಹುಯುದ್ಧೇನಿರಂತರಂ ॥ ೨೯ ॥

ಯದಾ ವೈ ನಾಶಕದ್ಧಂತುಂ ತೌ ವಿಷ್ಣುರ್ಜಗತಾಂ ಪತಿಃ ।
ಪರಾಂ ಚಿಂತಾಂ ತದಾವಾಪ ವಿಧಾತಾಪಿ ಭಯಾತ್ತತಃ ॥ ೩೦ ॥

ತತಸ್ತಾವೇವ ತಂ ವಿಷ್ಣುಮೂಚತುರ್ಬಲದರ್ಪಿತೌ ।
ಪುನಃ ಪುನರ್ಜಗನ್ಮಾತೃಮಹಾಮಾಯಾವಿಮೋಹಿತೌ ॥ ೩೧ ॥

ತುಷ್ಟೌ ಸ್ವಸ್ತ್ವನ್ನಿಯುದ್ಧೇನ ವರಂ ವರಯ ಮಾಧವ ।
ತವೇಷ್ಟಂ ಸಂಪ್ರದಾಸ್ಯಾವಃ ಸತ್ಯಮೇತದ್ಬ್ರವೋಽಧುನಾ ॥ ೩೨ ॥

ತಯೋಸ್ತದ್ವಚನಂ ಶ್ರುತ್ವಾ ಮಾಧವೋ ಜಗತಾಂ ಪತಿಃ ।
ಉವಾಚ ತೌ ಯುವಾಂ ವಧ್ಯೌ ಭವತಾಂ ಮೇ ಮಹಾಬಲೌ ॥ ೩೩ ॥

---

೨೯. ಆ ಶಿಲೆಯೂ ನೀರಿನಲ್ಲಿ ಮುಳುಗಿಹೋದ ಮೇಲೆ ವಿಷ್ಣುವು ಆ ದೈತ್ಯ ಪೊಡನೆ ನೀರಿನಲ್ಲಿಯೇ ಐದುಸಾವಿರ ವರ್ಷಗಳವರಿಗೂ ಬಾಹುಯುದ್ಧವನ್ನು ಮಾಡಿದನು.

೩೦. ಜಗದೊಡೆಯನಾದ ವಿಷ್ಣುವು ಈ ರೀತಿ ಯುದ್ಧಮಾಡಿದರೂ ಆ ದೈತ್ಯರನ್ನು ಕೊಲ್ಲಲು ಆಗಲಿಲ್ಲ. ಆಗ ವಿಷ್ಣುಬ್ರಹ್ಮರಿಬ್ಬರೂ ಭಯದಿಂದ ಚಿಂತಾಕ್ರಾಂತರಾದರು.

೩೧. ಬಳಿಕ ಬಲಗರ್ವಿತರಾದ ಆ ದೈತ್ಯರು ಮತ್ತೆ ಜಗಜ್ಜನನಿಯಾದ ಮಹಾಮಾಯೆಯಿಂದ ಮೋಹಿತನಾಗಿ ವಿಷ್ಣುವನ್ನು ಕುರಿತು ಹೀಗೆ ಹೇಳಿದರು.

೩೨. ಎಲೈ ವಿಷ್ಣುವೇ, ನೀನು ನಮ್ಮೊಡನೆ ಮಾಡಿದ ಯುದ್ಧದಿಂದ ನಾವು ಸಂತುಷ್ಟರಾದೆವು. ಆದುದರಿಂದ ನಿನಗೆ ಬೇಕಾದ ವರವನ್ನು ಬೇಡು ಅದನ್ನು ನಿನಗೆ ಸತ್ಯವಾಗಿ ಕೊಡುವೆವು.

೩೩. ಆ ದೈತ್ಯರ ಈ ವಿಧವಾದ ಮಾತನ್ನು ಕೇಳಿ ಜಗದೊಡೆಯನಾದ ವಿಷ್ಣುವು ಅವರನ್ನು ಕುರಿತು ಇಂತೆಂದನು. ನೀವು ವರವನ್ನು ಕೊಡುವುದಾದರೆ ಮಹಾಬಲಶಾಲಿಗಳಾದ ನಿಮ್ಮನ್ನು ನಾನು ಕೊಲ್ಲುವಂತೆ ವರವನ್ನು ಕೊಡಿ.

ಇತಿ ದೇಹಿ ವರಂ ಮಹ್ಯಂ ದಾತವ್ಯಂ ಯದಿ ವಿದ್ಯತೇ ।
ತೌ ತದಾ ಪ್ರಾಹತುರ್ನಾಶಸ್ತ್ವತ್ತೋ ನೌ ಶೋಭನೋಽಧುನಾ ॥ ೩೪ ॥

ತತ್ರಾವಾಂ ಜಹಿ ನೋ ಯತ್ರ ತೋಯಂ ಸಂಪ್ರತಿ ವಿದ್ಯತೇ ।
ತಯೋಸ್ತದ್ವಚನಂ ಶ್ರುತ್ವಾ ಮಾಧವೋ ಜಗತಾಂ ಪತಿಃ ।
ಬ್ರಹ್ಮಾಣಂ ಮಾಂ ಚ ಶೀಘ್ರೇಣ ಪ್ರಾಹೇದಂ ಚಾತ್ಮಸಂಜ್ಞಯಾ ॥ ೩೫ ॥

ಬ್ರಹ್ಮಶಕ್ತಿಶಿಲಾಂ ಶೀಘ್ರಮುದ್ಧೃತ್ಯ ಧ್ರಿಯತಾಂ ಯಥಾ ।
ತತ್ರ ಸ್ಥಿತ್ವಾ ಮಹಾಘೋರೌ ಹನಿಷ್ಯಾಮಿ ಮಹಾಬಲೌ ॥ ೩೬ ॥

ತತೋ ಬ್ರಹ್ಮಾ ಹ್ಯಹಂ ಚೈವ ಉದ್ದಧಾರ ಶಿಲಾಂ ತು ತಾಂ ।
ತಸ್ಯಾಂ ಮಧ್ಯೇ ಪೂರ್ವಭಾಗೇ ಹ್ಯಹಂ ಪರ್ವತರೂಪಧೃಕ್ ॥ ೩೭ ॥

ಊರ್ಧ್ವೆ ಸ್ಥಿತ್ವಾ ಶಿಲಾಂ ಭಿತ್ವಾ ಪ್ರವಿವೇಶ ರಸಾತಲಂ ।
ಐಶಾನ್ಯಾಮಭವ ತ್ಕೂರ್ಮಃ ಪರ್ವತಶ್ಚಾಗ್ರಹೀಚ್ಛಿಲಾಂ ॥ ೩೮ ॥

---

೩೪. ವಿಷ್ಣುವಿನ ಮಾತನ್ನು ಕೇಳಿ ಆ ದೈತ್ಯರು ಎಲೈ ವಿಷ್ಣುವೇ ಒಳ್ಳೆಯದು, ನೀನು ನಮ್ಮನ್ನು ಕೊಲ್ಲುವುದಾದರೆ ಈಗ ಯಾವ ಪ್ರದೇಶದಲ್ಲಿ ನೀರು ಇಲ್ಲವೋ ಅಲ್ಲಿ ನೀನು ನಮ್ಮನ್ನು ಕೊಲ್ಲಬಹುದು ಎಂದು ನುಡಿದರು.

೩೫. ದೈತ್ಯರ ಈ ಮಾತನ್ನು ಕೇಳಿ ವಿಷ್ಣುವು ಬ್ರಹ್ಮನನ್ನೂ ನನ್ನನ್ನೂ (ಶಂಕರ) ಕುರಿತು ಸಂಜ್ಞೆಯಿಂದ ಹೀಗೆ ಹೇಳಿದನು.

೩೬. ಬ್ರಹ್ಮಶಕ್ತಿಶಿಲೆಯನ್ನು ಬೇಗನೆ ನೀರಿನಿಂದ ಮೇಲಕ್ಕೆ ಎತ್ತಿ ನಿಲ್ಲಿಸಿರಿ. ನಾನು ಅದರ ಮೇಲೆ ನಿಂತು ಕ್ರೂರರಾದ ಮತ್ತು ಬಲಶಾಲಿಗಳಾದ ಈ ದೈತ್ಯರನ್ನು ಕೊಲ್ಲುವೆನು.

೩೭. ಆಮೇಲೆ ಬ್ರಹ್ಮನೂ ನಾನೂ (ಶಂಕರನೂ) ಸಹ ಆ ಬ್ರಹ್ಮಶಕ್ತಿಶಿಲೆಯನ್ನು ಮೇಲಕ್ಕೆತ್ತಿದೆವು. ಆಶಿಲೆಯ ಮಧ್ಯಭಾಗದಲ್ಲಿ ಪರ್ವತರೂಪವನ್ನು ಧರಿಸಿ ನಾನೇ ನಿಂತೆನು.

೩೮. ನನ್ನ ರೂಪವಾದ ಆ ಪರ್ವತವು ಮೇಲುಭಾಗದಲ್ಲಿ ಆಕಾಶವನ್ನೂ, ಕೆಳಗೆ ಪಾತಾಳವನ್ನೂ ವ್ಯಾಪಿಸಿ ಸ್ಥಿರವಾಗಿ ನಿಂತಿತು. ಆ ಪರ್ವತವನ್ನು ಈಶಾನ್ಯ ದಿಕ್ಕಿನಲ್ಲಿ ಆದಿಕೂರ್ಮನು ಹೊತ್ತು ನಿಂತನು.

ವಾಯವ್ಯಾಂ ಚ ತಥಾನಂತೋ ನೈರ್ಋತ್ಯಾಂ ಚ ಸುರೇಶ್ವರೀ ।
ಮಹಾಮಾಯಾ ಜಗದ್ಧಾತ್ರೀ ಶೈಲರೂಪಪ್ರಧಾರಿಣೀ ॥ ೩೯ ॥

ಆಗ್ನೇಯ್ಯಾಂ ಚ ತಥಾ ವಿಷ್ಣುರೇಕರೂಪೇಣ ಸಂಸ್ಥಿತಃ ।
ಬ್ರಹ್ಮಾ ಶಕ್ತಿಶಿಲಾಂ ಗೃಹ್ಣನ್ಭಗವಾನ್ಪರಮೇಶ್ವರಃ ॥ ೪೦ ॥

ಮಧ್ಯೇ ಬ್ರಹ್ಮಾ ತ್ವಹಂ ಚೈವ ವರಾಹಶ್ಚ ತಥಾಪರಃ ।
ತತೋ ವರಾಹಪೃಷ್ಠಸ್ಯ ಚರಮೇ ಜಗತಾಂ ಪತಿಃ ॥ ೪೧ ॥

ಸ್ಥಿತ್ವಾ ಶಿಲಾಮುವಷ್ಟಭ್ಯ ಬ್ರಹ್ಮಶಕ್ತಿಮಧೋಗತಾಂ ।
ವಾಮೋರುಜಘನೇ ಯತ್ನಾದಾರೋಪ್ಯ ಶಿರಸೀ ತಯೋಃ ॥ ೪೨ ॥

ಜಗದಾಧಾರಭೂತಃ ಸ ಸರ್ವಯತ್ನೇನ ಸಂಯುತಃ ।
ಸರ್ವೈರ್ಬಲೈಃ ಸಮಾಕ್ರಮ್ಯ ಚಿಚ್ಛೇದ ಚ ಪೃಥಕ್ಪೃಥಕ್ ॥ ೪೩ ॥

ಮಧುಕೈಟಭಯೋಃ ಸಮ್ಯಗ್ಗ್ರೀವಯೋಃ ಪೃಥಿವೀವೃತೇ ।
ತಸ್ಯ ಚಾಕ್ರಮತಸ್ಸ್ಥೇಮ್ನಾ ಬ್ರಹ್ಮಶಕ್ತಿರಧೋಗತಾ ॥ ೪೪ ॥

೩೯-೪೦. ವಾಯುವ್ಯದಿಕ್ಕಿನಲ್ಲಿ ಆದಿಶೇಷನೂ, ನೈರುತ್ಯದಿಕ್ಕಿನಲ್ಲಿ ಶೈಲರೂಪವನ್ನು ಧರಿಸಿದ, ಜಗತ್ಸೃಷ್ಟಿಕರ್ತಳಾದ ಸಾಕ್ಷಾತ್ ಆದಿಮಾಯೆಯೂ, ಆಗ್ನೇಯ ದಿಕ್ಕಿನಲ್ಲಿ ದೇವದೇವನಾದ ಭಗವಾನ್ವಿಷ್ಣುವೂ, ಮಧ್ಯಭಾಗದಲ್ಲಿ ಬ್ರಹ್ಮನೂ, ನಾನೂ, ಆದಿವರಾಹನೂ ಸೇರಿ ಆ ಶಕ್ತಿಶಿಲೆಯನ್ನು ಧರಿಸಿದೆವು.

೪೧-೪೩. ಬಳಿಕ ಜಗತ್ಪತಿಯಾದ ವಿಷ್ಣುವು ಆದಿವರಾಹನ ಬೆನ್ನಿನ ಮೇಲೆ ನಿಂತು ಕೆಳಕ್ಕೆ ಜಾರಿಹೋಗುತ್ತಲಿರುವ ಬ್ರಹ್ಮಶಿಲೆಯನ್ನು ದೃಢವಾಗಿ ನಿಲ್ಲುವಂತೆ ಮಾಡಿದನು. ಆಮೇಲೆ ಬಹು ಪ್ರಯತ್ನಪಟ್ಟು ಆ ದೈತ್ಯರನ್ನು ತನ್ನ ಎಡತೊಡೆಯ ಮೇಲೆ ಎಳೆದುಕೊಂಡು ಒಂದೊಂದನ್ನಾಗಿ ಅವರ ಶಿರಸ್ಸುಗಳನ್ನು ಕತ್ತರಿಸಿದನು.

೪೪. ವಿಷ್ಣುವು ಭೂಮಿಯ ಮೇಲೆ ನಿಂತಿರಲಿಲ್ಲವಾದುದರಿಂದ ಅವನ ಭಾರದಿಂದಲೂ, ಮಧುಕೈಟಭರ ಶಿರಸ್ಸುಗಳ ಭಾರದಿಂದಲೂ ಆ ಬ್ರಹ್ಮಶಕ್ತಿಶಿಲೆಯು ಕೆಳಕ್ಕೆ ಇಳಿಯುವಂತಾಯಿತು. ದೇವತೆಗಳೆಲ್ಲರೂ ಎಷ್ಟುಪ್ರಯತ್ನಪಟ್ಟು ಅದನ್ನು ಹಿಡಿದುಕೊಂಡರೂ, ಸಾಧ್ಯವಾಗದೆ ಆ ಶಿಲೆಯು ಜಾರಿ ಬೀಳುತ್ತಲೇ ಇದ್ದಿತು.

ಧ್ರಿಯಮಾಣಾಪಿ ದೇವೌಘೈರ್ಯತ್ನಾದಪಿ ಮುಹುರ್ಮುಹುಃ ।
ತತಸ್ತಯೋಸ್ತು ವ್ಯತಯೋಃ ಶರೀರೇ ಜಗತಾಂ ಪತಿಃ ॥ ೪೫ ॥

ಬ್ರಹ್ಮಶಕ್ತಿಂ ಸಮುದ್ಧೃತ್ಯ ನ್ಯಧಾತ್ತಸ್ಯಾಂ ಪ್ರಯತ್ನತಃ ।
ಉದ್ಧೃತಾಯಾಂ ಪೃಥಿವ್ಯಾಂ ತು ತಯೋರ್ಮೇದೋವಿಲೇಪನೈಃ ॥ ೪೬ ॥

ಸುದೃಢಾಮಕರೋತ್ಪೃಥ್ವೀಂ ಕ್ಲೇದಿತಾಂ ತೋಯರಾಶಿಭಿಃ ।
ಮೇದೋವಿಲೇಪನಾದ್ಯಸ್ಮಾದ್ಗಿಯತೇ ಮೇದಿನೀ ಚ ಸಾ ॥ ೪೭ ॥

ಅದ್ಯಾಪಿ ಪೃಥಿವೀ ದೇವೀ ದೇವರಾಕ್ಷಸಮಾನುಷೈಃ ।
ಅಥ ಕಾಲೇ ಬಹುತಿಥೇ ವ್ಯತೀತೇ ಪ್ರಾಣಿಸರ್ಜನೇ ॥ ೪೮ ॥

ಅಗೃಹ್ಣಾಂ ದಕ್ಷತನಯಾಂ ಭಾರ್ಯಾರ್ಥೇಽಪಂ ವಧೂಂ ವರಾಂ ।
ಸಾ ಮೇಽಭೂತ್ಪ್ರೀಯಸೀ ಭಾರ್ಯಾ ಪ್ರಾದಾಯ ಸಮಯಂ ಪಿತುಃ ॥ ೪೯ ॥

---

೪೫. ಇದನ್ನು ನೋಡಿ ಜಗದೊಡೆಯನಾದ ವಿಷ್ಣುವು ಬಹುಶ್ರಮಪಟ್ಟು ಶಕ್ತಿಶಿಲೆಯನ್ನು ಮೇಲಕ್ಕೆ ಎತ್ತಿ ತಂದನು. ಮೃತರಾದ ಮಧುಕೈಟಭರ ಶಿರಸ್ಸುಗಳನ್ನು ಆ ಕಲ್ಲಿನ ಮೇಲೆ ಇರಿಸಿದನು.

೪೬-೪೭. ನಂತರ ನೀರಿನಲ್ಲಿ ಮುಳುಗಿಹೋಗಿದ್ದ ಭೂಮಿಯನ್ನು ಮೇಲಕ್ಕೆ ಎತ್ತಿ ತಂದನು. ನೀರಿನಲ್ಲಿದ್ದು ನೆನೆದುಹೋಗಿ ಮೆತ್ತಗಾಗಿದ್ದ ಆ ಭೂಮಿಗೆ ಮಧುಕೈಟಭ ದೈತ್ಯರ ಮೇದಸ್ಸನ್ನು ಚೆನ್ನಾಗಿ ಲೇಪನಮಾಡಿ ಘಟ್ಟಿಯಾಗುವಂತೆ ಮಾಡಿದನು. ಮೇದಸ್ಸನ್ನು ಲೇಪನಮಾಡಿದ್ದರಿಂದ ಆ ಲಾಗಾಯಿತು ಈ ಭೂಮಿಯನ್ನು ಮೇದಿನೀ ಎಂದು ದೇವದಾನವಮನುಷ್ಯಾದಿಗಳು ಈಗಲೂ ಕರೆಯುತ್ತಿರುವರು.

೪೮-೪೯. ಮುಂದೆ ಸೃಷ್ಟಿಕಾರ್ಯವು ಬೆಳೆದು ಬಹುಕಾಲ ಕಳೆದಮೇಲೆ ದಕ್ಷಬ್ರಹ್ಮನ ಮಗಳಾದ ಸತೀದೇವಿಯೆಂಬ ಉತ್ತಮ ವಧುವನ್ನು ಮದುವೆಯಾದೆನು. ಆ ಸತಿಯು ನನಗೆ ತುಂಬ ಪ್ರೀತಿಪಾತ್ರಳಾದ ಭಾರ್ಯೆಯಾಗಿದ್ದಳು. ಹಿಂದೆ ದಕ್ಷನು ಮಹಾಮಾಯಾಸ್ವರೂಪಳಾದ ದೇವಿಯನ್ನು ಕುರಿತು ತಪಸ್ಸುಮಾಡಿ, ಆ ದೇವಿಯೇ ತನಗೆ ಮಗಳಾಗಬೇಕೆಂದು ವರವನ್ನು ಕೇಳಿಕೊಂಡಿದ್ದನು. ದೇವಿಯು ಹಾಗೆಯೇ ಆಗಲೆಂದು ವರವನ್ನು ಕೊಟ್ಟಳು. ಆದರೆ ತನಗೆ ಅಪಮಾನನನ್ನು ಮಾಡಿದರೆ ಶರೀರತ್ಯಾಗಮಾಡುವೆನೆಂದು ಆ ದಕ್ಷನೊಡನೆ ನಿಬಂಧನೆಯನ್ನೂ ಮಾಡಿದ್ದಳು.

ಅನಿಷ್ಟಕಾರೀ ತ್ವಂ ಚೇತ್ಸ್ಯಃ ಪ್ರಾಣಾಂಸ್ತ್ಯಕ್ಷ್ಯೇ ತದಾ ತ್ವಹಂ ।
ತತೋ ಯಜ್ಞೇ ಸಮಸ್ತಾಂಸ್ತು ಸ ಚ ವವ್ರೇ ಚರಾಚರಂ ॥ ೫೦ ॥

ನ ಮಾಂ ನಾಪಿ ಸತೀಂ ವವ್ರೇ ತದನಿಷ್ಟಾನ್ಮೃತಾ ತು ಸಾ ।
ತತೋ ಮೋಹಸಮಾವಿಷ್ಟಸ್ತಾಮಾದಾಯ ಮೃತಾಮಹಂ ॥ ೫೧ ॥

ಪ್ರಾತಃಪೀಠವರಂ ತಂ ತು ಭ್ರಮಮಾಣ ಇತಸ್ತತಃ ।
ತಸ್ಯಾಸ್ತ್ವಂಗಾನಿ ಪ್ರಯ್ಯಾಯಾತ್ಪತಿತಾನಿ ಯತೋ ಯತಃ ॥ ೫೨ ॥

ತತ್ತತ್ಪುಣ್ಯತಮಂ ಜಾತಂ ಯೋಗನಿದ್ರಾಪ್ರಭಾವತಃ ।
ತಸ್ಮಿಂಸ್ತು ಕುಬ್ಜಿಕಾಪೀಠೇ ಸತ್ಯಾಸ್ತದ್ಯೋನಿಮಂಡಲಂ ॥ ೫೩ ॥

ಪತಿತಂ ತತ್ರ ಸಾ ದೇವೀ ಮಹಾಮಾಯಾ ವ್ಯಲೀಯತ ।
ಲೀನಾಯಾಂ ಯೋಗನಿದ್ರಾಯಾಂ ಮಯಿ ಪರ್ವತರೂಪಿಣಿ ॥ ೫೪ ॥

---

೫೦. ಆ ಮೇಲೆ ಆ ದಕ್ಷನು ಮಹತ್ತಾದ ಯಜ್ಞವನ್ನು ಮಾಡಲು ಆರಂಭಿಸಿ, ಆ ಯಜ್ಞಕ್ಕೆ ಬರುವಂತೆ ದೇವಮನುಷ್ಯರಾಕ್ಷಸಗಂಧರ್ವರಾದಿಯಾಗಿ ಸಕಲ ಚರಾಚರ ಪ್ರಾಣಿಗಳನ್ನೂ ಆಹ್ವಾನಿಸಿದನು. ಆದರೆ ನನ್ನನ್ನೂ ನನ್ನ ಪತ್ನಿಯಾದ ಆ ಸತಿಯನ್ನು ಮಾತ್ರ ಕರೆಯಲಿಲ್ಲ. ಈ ಅಪಮಾನವನ್ನು ಸಹಿಸಲಾರದೆ ಸತಿಯು ಮೃತಳಾದಳು.

೫೧. ಆ ಸತಿಯಮೇಲಿನ ಮೋಹದಿಂದ ನಾನು ಅವಳ ಮೃತಶರೀರವನ್ನು ಹೊತ್ತುಕೊಂಡು ಕೈಲಾಸಪರ್ವತ ಪ್ರಾಂತಗಳಲೆಲ್ಲಾ ಅಲೆಯುತ್ತಿದ್ದೆನು.

೫೨. ಆ ಮೃತಶರೀರದ ಅವಯವಗಳು ಒಂದೊಂದಾಗಿ ಅಲ್ಲಲ್ಲಿ ಬೀಳುತ್ತಿದ್ದವು. ಆ ಅಂಗಗಳು ಬಿದ್ದ ಸ್ಥಳಗಳು, ಯೋಗಮಾಯೆಯ ಪ್ರಭಾವದಿಂದ ಅತ್ಯಂತ ಪವಿತ್ರವಾದ ಕ್ಷೇತ್ರಗಳಾಗಿ ಪರಿಣಮಿಸಿದವು.

೫೩. ಕುಬ್ಜಿಕಾಪೀಠವೆಂಬ ಪರ್ವತಸ್ಥಳದಲ್ಲಿ ಸತೀದೇವಿಯ ಯೋನಿಮಂಡಲವು ಬಿದ್ದಿತು. ಅಲ್ಲಿ ಮಹಾಮಾಯಾದೇವಿಯು ನೆಲಸಿದಳು.

೫೪. ಕುಬ್ಜಿಕಾಪೀಠವೆಂಬ ನನ್ನ ರೂಪವಾದ ಆ ಪರ್ವತದಲ್ಲಿ ಬಿದ್ದ ಸತಿಯ ಯೋನಿಮಂಡಲದಲ್ಲಿ ಯೋಗನಿದ್ರೆಯು ನೆಲೆಸಲು ಆ ಪರ್ವತವು ನೀಲವರ್ಣವುಳ್ಳದ್ದಾಯಿತು.

ಸ ನೀಲವರ್ಣಃ ಶೈಲೋಽಭೂತ್ಪತಿತೇ ಯೋನಿಮಂಡಲೇ ।
ಸ ತು ಶೈಲೋ ಮಹಾತುಂಗಃ ಪಾತಾಲತಲಮೂವಿಶತ್ ॥ ೫೫ ॥

ತಸ್ಯಾ ಆಕ್ರಮಣಾದ್ಗಾಢಂ ಧ್ಯಂತಸ್ಸ್ಥಂ ದ್ರುಹಿಣೋ ಹ್ಯಧಾತ್ ।
ಸ ತು ಪೂರ್ವಂ ಬ್ರಹ್ಮಶಕ್ತಿಶಿಲಾಂ ಧರ್ತುಂ ಚತುರ್ಮುಖಃ ॥ ೫೬ ॥

ಶೈಲರೂಪೋ ಭವತ್ತೇನ ಶೈಲರೂಪೇಣ ಮಾಮಧಾತ್ ।
ಬ್ರಹ್ಮಾ ಪರ್ವತರೂಪೀ ಸ ಮಯಿ ಪರ್ವತರೂಪಿಣಿ ॥ ೫೭ ॥

ಸಶಕ್ತ್ಯೋಽಧೋಽಗಮದ್ಗಾಢಮಾಕ್ರಾಂತೋ ಮಾಯಯಾ ವಿಧೇಃ ।
ತತೋ ವರಾಹಃ ಸಂಶಕ್ತ್ಯೋ ಮಯಿ ಮಾಂ ಸ ತು ಮಾಧವಃ ॥ ೫೮ ॥

ಶೈಲರೂಪಃ ಶೈಲರೂಪಂ ಧರ್ತುಂ ಸಮುಪಚಕ್ರಮೆ ।
ಸೋಽಪ್ಯಧೋಯಾನ್ಮಯಾ ಸಾರ್ಧಂ ತದಾ ಪರ್ವತರೂಪಿಣಾ ॥ ೫೯ ॥

---

೫೫. ತುಂಬಾ ಉನ್ನತವಾಗಿದ್ದರೂ ಆ ಪರ್ವತವು ದೇವಿಯ ಆಕ್ರಮಣದಿಂದ ಪಾತಾಳದವರಿಗೂ ಕೆಳಕ್ಕೆಳಿಯಿತು. ಪಾತಾಳಕ್ಕೆಳಿದಿರುವ ಆ ಪರ್ವತವನ್ನು ಬ್ರಹ್ಮನು ಧರಿಸಿದನು.

೫೬. ಆ ಬ್ರಹ್ಮನು ಬ್ರಹ್ಮಶಿಲೆ ಶಕ್ತಿಯನ್ನು ಉದ್ಧರಿಸಲೋಸುಗ ಹಿಂದೆ ಶೈಲರೂಪವನ್ನು ಧರಿಸಿದ್ದನು. ಈಗ ಅದೇ ಶೈಲರೂಪದಿಂದ ಅವನು ಶೈಲರೂಪನಾದ ನನ್ನನ್ನೂ ಧರಿಸಿದನು.

೫೭. ಪರ್ವತರೂಪನಾದ ಬ್ರಹ್ಮನು ಪರ್ವತರೂಪನಾದ ನನ್ನನ್ನು ಧರಿಸುತ್ತಾ ಇರಲು ಆದಿಮಾಯೆಯಿಂದ ಆಕ್ರಮಿಸಲ್ಪಟ್ಟಬಳಿಕ ಶಕ್ತನಾದ ಅವನೂ ಸಹ ಪಾತಾಳಕ್ಕೇ ಇಳಿದನು.

೫೮. ಆಮೇಲೆ ವರಾಹ ರೂಪದಿಂದ ನನ್ನಲ್ಲಿ ನೆಲಸಿದ್ದ ಶಕ್ತನಾದ ವಿಷ್ಣುವು ಪರ್ವತರೂಪವನ್ನು ಧರಿಸಿ ಪರ್ವತರೂಪಿಯಾದ ನನ್ನನ್ನು ಧರಿಸತೊಡಗಿದನು.

೫೯. ಆಗ ಆ ವಿಷ್ಣುವೂಸಹ ಪರ್ವತರೂಪಿಯಾದ ನನ್ನೊಡನೆ ಕೆಳಗೆ ಹೋದನು. ಅಲ್ಲಿ ಭೂದೇವಿಯನ್ನು ಅವಲಂಬಿಸಿ ನಿಂತನು.

ಆಕ್ರಮ್ಯ ದೇವೀಂ ಪೃಥಿವೀಂ ಸ್ಥಿತೋ ಭುವಿ ನಿಖಾಂಧತಃ ।
ಶತಂ ಶತಂ ಯೋಜನಾನಾಂ ತುಂಗಮಾಸೀದ್ಗಿರಿತ್ರಯಂ ॥ ೬೦ ॥

ತದಾಕ್ರಾಂತಂ ಮಹಾದೇವ್ಯಾ ಸರ್ವಮೇವ ಹ್ಯಧೋಗತಂ ।
ಕ್ರೋಶಮಾತ್ರಂ ಸ್ಥಿತಂ ತುಂಗಶೇಷಂ ತತ್ತ್ರಿತಯಸ್ಯ ತು ॥ ೬೧ ॥

ಏಕಾ ಸಮಸ್ತ ಜಗತಾಂ ಪ್ರಕೃತಿಃ ಸಾ ಯತಃ ಸ್ತತಃ ।
ಬ್ರಹ್ಮವಿಷ್ಣುಶಿವೈರ್ದೇವೈಃ ಧೃತಾ ಸಾ ಜಗತಾಂ ಪ್ರಸೂಃ ॥ ೬೨ ॥

ತತ್ರ ಪೂರ್ವೋ ಬ್ರಹ್ಮಶೈಲಃ ಶ್ವೇತ ಇತ್ಯುಚ್ಯತೇ ಸುರೈಃ ।
ಮಧ್ಯೋಪಧಾರೀ ಶೈಲಸ್ತು ನೀಲ ಇತ್ಯುಚ್ಯತೇ ತಥಾ ॥ ೬೩ ॥

ಸ ತು ಮಧ್ಯಗತಃ ಪೀಠಃ ತ್ರಿಕೋಣೋಲೂಖಲಾಕೃತಿಃ ।
ವಿಭ್ರಾಜಮಾನಃ ಸತತಂ ಮಧ್ಯೇ ಬ್ರಹ್ಮವರಹಯೋಃ ॥ ೬೪ ॥

೬೦-೬೨. ಬ್ರಹ್ಮವಿಷ್ಣುಮಹೇಶ್ವರ ರೂಪಿಗಳಾದ ಆ ಮೂರು ಪರ್ವತಗಳು ನೂರುನೂರು ಯೋಜನಗಳು ಎತ್ತರವಾಗಿದ್ದುವು. ಇಂತಹ ಆ ಪರ್ವತಗಳು ಮಹಾದೇವಿಯ ಆಕ್ರಮಣದಿಂದ ಪಾತಾಳದವರೆಗೂ ಇಳಿದು ಒಂದು ಕ್ರೋಶದಷ್ಟು ಮಾತ್ರ ಎತ್ತರವಾಗಿ ಕಾಣುತ್ತಿದ್ದವು. ಉಳಿದ ಭಾಗವು ಕೆಳಕ್ಕೆ ಇಳಿದುಹೋಯಿತು. ದೇವಿಯ ಪ್ರಭಾವವೇ ಅಂತಹುದು. ಬ್ರಹ್ಮವಿಷ್ಣುಶಿವರೇ ಮೊದಲಾದ ಸಮಸ್ತ ಜಗತ್ತಿಗೂ ಅವಳೊಬ್ಬಳೇ ಕಾರಣ ಕರ್ತಳು. ಆದುದರಿಂದ ಜಗಜ್ಜನನಿಯಾದ ಅವಳನ್ನು ಬ್ರಹ್ಮವಿಷ್ಣುಶಿವಾದಿ ದೇವತೆಗಳು ಈ ರೀತಿಯಾಗಿ ಧರಿಸಿದರು.

೬೩. ಆ ಪರ್ವತಗಳಲ್ಲಿ ಬ್ರಹ್ಮಶೈಲವನ್ನು ಶ್ವೇತ ಪರ್ವತವೆಂದೂ ನನ್ನ ಸ್ವರೂಪವಾಗಿರುವ ರುದ್ರಶೈಲನನ್ನು ನೀಲಪರ್ವತವೆಂದೂ ದೇವತೆಗಳು ಕರೆಯುವರು.

೬೪. ದೇವೀಪೀಠವಾದ ಆ ನೀಲಶೈಲವು ತ್ರಿಕೋಣಾಕಾರವಾಗಿರುವುದು. ವರಳೆನಂತೆ ದುಂಡಾಗಿಯೂ ಇರುವುದು. ಅದು ಬ್ರಹ್ಮಶೈಲ ಮತ್ತು ವರಾಹಶೈಲಗಳ ಮಧ್ಯದಲ್ಲಿ ಸದಾ ಪ್ರಕಾಶಿಸುತ್ತಲಿರುವುದು.

ವರಾಹಃ ಶೈಲರೂಪೋ ಯಃ ಸ ಚಿತ್ರ ಇತಿ ಕಥ್ಯತೇ।
ಸರ್ವೇಷಾಂ ಸಂಸ್ಥಿತಃ ಪಶ್ಚಾ ದ್ವೀಘ್ರ್ಯಃ ಸರ್ವೇಭ್ಯ ಏವ ಚ ॥ ೬೫ ॥

ಐಶಾನ್ಯಾಂ ಯೋಽ ಭವತ್ಕರ್ಮಃ ಶೈಲರೂಪೋ ಮಹಾದ್ಯುತಿಃ ।
ಮಣಿಕರ್ಣಃ ಸ ನಾಮ್ನಾತು ಖ್ಯಾತೋ ದೇವೌಘಸೇವಿತಃ ॥ ೬೬ ॥

ಯೋಽನಂತರೂಪಃ ಶೈಲಸ್ತು ವಾಯವ್ಯಾಂ ಸಮವಸ್ಥಿತಃ ।
ಮಣಿಪರ್ವತಸಂಜ್ಞೋಽಸೌ ಪರ್ವತೋ ಮಾಧವಪ್ರಿಯಃ ॥ ೬೭ ॥

ಮಹಾಮಾಯಾಗಿರಿರ್ಯಸ್ತು ನೈಋರ್ತ್ಯಾಂ ಸಮವಸ್ಥಿತಃ ।
ಸ ಗಂಧಮಾದನೋ ನಾಮ್ನಾ ಸರ್ವದಾ ಶಂಕರಪ್ರಿಯಃ ॥ ೬೮ ॥

ವರಾಹಪೃಷ್ಠಚರಮೇ ಯತ ಶ್ಚಿನ್ನೌ ಮಹಾಸುರೌ ।
ಹರಿಣಾ ತತ್ರ ಸಂಯಾತಃ ಪಾಂಡುನಾಥ ಇತಿ ಸ್ಮೃತಃ ॥ ೬೯ ॥

ಬ್ರಹ್ಮಶಕ್ತಿಶಿಲಾಯಾಸ್ತು ಪೂರ್ವಭಾಗೇ ತು ಮಧ್ಯತಃ ।
ಯಸ್ತು ಪರ್ವತರೂಪೋಽಹಂ ಸ ತು ಭಸ್ಮಾಚಲಾಹ್ವಯಃ ॥ ೭೦ ॥

---

೬೫. ವರಾಹರೂಪಿಯಾದ ಶೈಲವನ್ನು " ಚಿತ್ರಪರ್ವತ " ವೆಂದು ಕರೆಯುವರು. ಅದು ಎಲ್ಲಕ್ಕೂ ಕೊನೆಯಲ್ಲಿರುವುದು. ಎಲ್ಲಾ ಪರ್ವತಗಳಿಗಿಂತಲೂ ಅತಿ ವಿಸ್ತಾರವಾಗಿರುವುದು.

೬೬. ಈಶಾನ್ಯದಲ್ಲಿ ಶೈಲರೂಪವಾಗಿದ್ದ ಆದಿಕೂರ್ಮಕ್ಕೆ " ಮಣಿಕರ್ಣ " ವೆಂದು ಹೆಸರು. ಅದು ತುಂಬಾ ತೇಜಸ್ವಿಯಾಗಿದ್ದು ದೇವತೆಗಳಿಂದ ಸೇವಿಸಲ್ಪಡುತ್ತಿದೆ.

೬೭. ವಾಯವ್ಯದಲ್ಲಿರುವ ಆದಿಶೇಷರೂಪಿಯಾದ ಶೈಲಕ್ಕೆ " ಮಣಿಪರ್ವತ " ವೆಂದು ಹೆಸರು. ಅದು ವಿಷ್ಣುವಿಗೆ ತುಂಬಾ ಪ್ರಿಯವಾದುದು.

೬೮. ನೈರುತ್ಯದಲ್ಲಿರುವ ಆದಿಮಾಯಾರೂಪಿಯಾದ ಶೈಲಕ್ಕೆ ' ಗಂಧಮಾದನ ' ವೆಂದು ಹೆಸರು. ಅದು ಸದಾ ಶಂಕರನಿಗೆ ಪ್ರಿಯವಾದುದು.

೬೯-೭೦. ಆದಿವರಾಹದ ಬೆನ್ನಿನ ಕೊನೆಯಲ್ಲಿ ನಿಂತು ಆ ಮಹಾದೈತ್ಯರನ್ನು ವಿಷ್ಣುವು ಸಂಹರಿಸಿದುದರಿಂದ ಪರ್ವತದ ಆ ಭಾಗಕ್ಕೆ " ಪಾಂಡುನಾಥ " ವೆಂದೂ, ಬ್ರಹ್ಮಶಕ್ತಿ ಶಿಲೆಯ ಪೂರ್ವಭಾಗದ ಮಧ್ಯದಲ್ಲಿರುವ ನನ್ನ (ಶಂಕರ) ರೂಪಿಯಾದ ಶೈಲಕ್ಕೆ " ಭಸ್ಮಾಚಲ " ವೆಂದೂ ಹೆಸರು.

ಏವಂ ಪುಣ್ಯತಮೇ ಪೀಠೇ ಕುಬ್ಜಿಕಾಪೀಠಸಂಜ್ಞಕೇ ।
ನೀಲಕೂಟೇ ಮಯಾ ಸಾರ್ಧಂ ದೇವೀ ರಹಸಿ ಸಂಸ್ಥಿತಾ ॥ ೭೧ ॥

ಸತ್ಯಾಸ್ತು ಪತಿತಂ ತತ್ರ ವಿಶೀರ್ಣಂ ಯೋನಿಮಂಡಲಂ ।
ಶಿಲಾತ್ವಮಗಮಚ್ಛೈಲೆ ಕಾಮಾಖ್ಯಾ ತತ್ರ ಸಂಸ್ಥಿತಾ ॥ ೭೨ ॥

ಸಂಸ್ಪೃಶ್ಯ ತಾಂ ಶಿಲಾಂ ಮರ್ತ್ಯೋ ಹ್ಯಮರತ್ವಮವಾಪ್ನುಯಾತ್ ।
ಅಮರ್ತ್ಯೋ ಬ್ರಹ್ಮಸದನಂ ತತ್ಸ್ಥೋ ಮೋಕ್ಷಮವಾಪ್ನುಯಾತ್ ॥ ೭೩ ॥

ತಸ್ಯಾಃ ಶಿಲಾಯಾ ಮಾಹಾತ್ಮ್ಯಂ ಯತ್ರ ಕಾಮೇಶ್ವರೀ ಸ್ಥಿತಾ ।
ಅದ್ಭುತಂ ಯಸ್ಯ ಗುಹ್ಯೇ ತು ಲೋಹಂ ಭಸ್ಮ ಭವೇದ್ಧ್ರುವಂ ॥ ೭೪ ॥

ಸಾ ಚಾಪಿ ಪ್ರತ್ಯಹಂ ತತ್ರ ಪಂಚಮೂರ್ತಿಧರಾಭವತ್ ।
ಮೋಹಾರ್ಥಂ ಸರ್ವಲೋಕಾನಾಂ ಮಮಾಪಿ ಪ್ರೀತಯೇ ಶಿವಾ ॥ ೭೫ ॥

---

೭೧. ಹೀಗೆ ಅತ್ಯಂತ ಪವಿತ್ರವೂ, ಕುಬ್ಜಿಕಾಪೀಠವೆಂದು ಪ್ರಸಿದ್ಧವೂ ಆದ ನೀಲಕೂಟ ಪರ್ವತದಲ್ಲಿ ದೇವಿಯು ನನ್ನೊಡನೆ ಏಕಾಂತದಲ್ಲಿರುವಳು.

೭೨. ಆ ಶೈಲದಲ್ಲಿ ಬಿದ್ದ ಸತೀದೇವಿಯ ಯೋನಿಮಂಡಲವು ವಿಶೀರ್ಣವಾಗಿ ಶಿಲೆಯಭಾವವನ್ನು ಹೊಂದಿತು. ಅಲ್ಲಿ ಕಾಮಾಖ್ಯಾ ಎಂಬ ಹೆಸರಿನಿಂದ ದೇವಿಯು ನೆಲಸಿದಳು.

೭೩. ಆ ಶಿಲೆಯ ಸ್ಪರ್ಶಮಾತ್ರದಿಂದಲೇ ಮನುಷ್ಯನು ದೇವತ್ವವನ್ನು ಹೊಂದುವನು. ದೇವನು ಸ್ಪರ್ಶಮಾಡಿದರೆ ಬ್ರಹ್ಮಲೋಕಕ್ಕೆ ಹೋಗುವನು, ಅಲ್ಲಿದ್ದು ಮುಂದೆ ಮುಕ್ತಿಯನ್ನು ಹೊಂದುವನು.

೭೪. ಕಾಮೇಶ್ವರಿಯು ನೆಲಸಿರುವ ಆ ಶಿಲೆಯ ಮಹಾತ್ಮ್ಯವು ಅದ್ಭುತವಾದುದು. ಆ ಶಿಲೆಯ ಗುಹ್ಯಸ್ಥಾನದಲ್ಲಿ ಪಾಕುವ ಲೋಹವೂ ಸಹ ಭಸ್ಮವಾಗುವುದು.

೭೫ ೭೬. ಆ ಸ್ಥಳದಲ್ಲಿ ದೇವಿಯು ಸಕಲ ಜನಗಳನ್ನೂ ಮೋಹಗೊಳಿಸಲೋಸುಗವೂ, ನನ್ನ ಪ್ರೀತಿಗಾಗಿಯೂ ಸಹ ನಿತ್ಯವೂ ಪಂಚಮೂರ್ತಿಗಳನ್ನು ಧರಿಸಿ ನೆಲಸಿರುವಳು. ನಾನೂ ಸಹ ಐದು ಭಾಗಗಳಲ್ಲಿ ಐದು ಮುಖಗಳುಳ್ಳವನಾಗಿಯೇ

ಅಹಂ ಪಂಚಮುಖೇನಾಶು ಪಂಚಭಾಗೇ ವ್ಯವಸ್ಥಿತಃ ।
ಈಶಾನಃ ಪೂರ್ವಭಾಗಸ್ಥಃ ಕಾಮೇಶ್ವರ್ಯಾಃ ಪ್ರಧಾನತಃ ॥ ೭೬ ॥

ಐಶಾನ್ಯಾಂ ವೈ ತತ್ಪುರುಷೋ ಹ್ಯಘೋರಸ್ತಸ್ಯ ಸನ್ನಿಧೌ ।
ಸದ್ಯೋಜಾತೋಽಥವಾಯವ್ಯಾಂ ವಾಮದೇವಸ್ತು ಸಂಗತಃ ॥ ೭೭ ॥

ದೇವ್ಯಾಶ್ಚಾಪಿ ನರಶ್ರೇಷ್ಠ ಪಂಚರೂಪಾಣಿ ಭೈರವ ।
ಶೃಣು ವೇತಾಳ ಗುಹ್ಯಾನಿ ದೇವೈರಪಿ ಸದೈವ ಹಿ ॥ ೭೮ ॥

ಕಾಮಾಖ್ಯಾ ತ್ರಿಪುರಾ ಚೈವ ತಥಾ ಕಾಮೇಶ್ವರೀ ಶಿವಾ ।
ಶಾರದಾಥ ಮಹಾಲೋಕಾ ಕಾಮರೂಪಗುಣೈರ್ಯುತಾ ॥ ೭೯ ॥

ಮಯಿ ಲಿಂಗತ್ವಮಾಪನ್ನೇ ಶಿಲಾಯಾಂ ಯೋನಿಮಂಡಲೇ ।
ಸರ್ವೇ ಶಿಲಾತ್ವಮಗಮ್ಯ ಶೈಲರೂಪಾಶ್ಚ ನಿರ್ಜರಾಃ ॥ ೮೦ ॥

ಇರುವೆನು. ಕಾಮೇಶ್ವರಿಯ ಪೂರ್ವಭಾಗದಲ್ಲಿ ಈಶಾನರೂಪದಿಂದ ನೆಲಸಿರುವೆನು. ಈಶಾನ್ಯದಲ್ಲಿ ತತ್ಪುರುಷರೂಪದಿಂದ ಇರುವೆನು. ಅವಳ ಸನ್ನಿಧಿಯಲ್ಲಿಯೇ ಅಘೋರ ರೂಪದಿಂದಿರುವೆನು. ವಾಯವ್ಯದಲ್ಲಿ ಸದ್ಯೋಜಾತರೂಪದಿಂದಿರುವೆನು. ವಾಮದೇವ ರೂಪದಿಂದ ಅವಳೊಡನೆಯೇ ಇರುವೆನು.

೭೮. ನರಶ್ರೇಷ್ಠರಾದ ಎಲೈ ವೇತಾಳ ಭೈರವರೇ, ದೇವಿಗೂ ಸಹ ಐದುರೂಪ ಗಳಿರುವವು. ಅದು ಅತಿ ರಹಸ್ಯವಾದುದರಿಂದ ದೇವತೆಗಳಿಗೂ ತಿಳಿಯದು. ಅವನ್ನು ನಿಮಗೆ ಹೇಳುವೆನು ಕೇಳಿ.

೭೯. ಆವುಗಳಲ್ಲಿ ಮೊದಲನೆಯವಳು ಕಾಮಾಖ್ಯಾ, ಎರಡನೆಯವಳು ತ್ರಿಪುರಾ, ಮೂರನೆಯವಳು ಮಂಗಳರೂಪಳಾದ ಕಾಮೇಶ್ವರಿಯು, ಶಾರದೆಯೆಂಬುವವಳು ನಾಲ್ಕನೆಯವಳು, ಕಾಮ, ರೂಪ, ಮತ್ತು ಗುಣಗಳಿಂದ ಕೂಡಿದ "ಮಹಾಲೋಕ" ಎಂಬುವಳೇ ಐದನೆಯವಳು.

೮೦. ಶಿಲಾರೂಪವಾದ ಯೋನಿಮಂಡಲದಲ್ಲಿ ನಾನು ಲಿಂಗಭಾವವನ್ನು ಹೊಂದಿ ನೆಲಸಲು, ದೇವತೆಗಳೂ ಶಿಲಾಭಾವವನ್ನೇ ಹೊಂದಿ ಶೈಲರೂಪವನ್ನು ಕೈಗೊಂಡರು.

ಯಥಾಹಂ ನಿಜರೂಪೇಣ ರೇಮೇ ವೈ ಸಹ ಕಾಮುಯಾ ।
ಶಿಲಾರೂಪಪ್ರತಿಚ್ಛನ್ನಾಸ್ತಥಾ ಸರ್ವಾಸ್ತು ದೇವತಾಃ ॥ ೮೧ ॥

ರಮಂತೇ ಚ ಸ್ವರೂಪೇಣ ನಿತ್ಯಂ ರಹಸಿ ಸಂಸ್ಥಿತಾಃ ।
ಬ್ರಹ್ಮಾ ವಿಷ್ಣುರ್ಹರಶ್ಚಾತ್ರ ದಿಕ್ಪಾಲಾಃ ಸರ್ವ ಏವ ತೇ ॥ ೮೨ ॥

ಅನ್ಯೇಽಪ್ಯತ್ರ ಸ್ಥಿತಾ ದೇವಾಃ ಸಾನುಕೂಲಾಃ ಸದಾ ಮಯಿ ।
ಶಿಲಾರೂಪಪ್ರತಿಚ್ಛನ್ನಾಃ ಶೈಲೇ ಶೈಲೇ ವ್ಯವಸ್ಥಿತಾಃ । ॥ ೮೩ ॥

ಉಪಾಸಿತುಂ ತದಾ ದೇವೀಂ ಕಾಮಾಖ್ಯಾಂ ಕಾಮರೂಪಿಣೀಂ ।
ನೀಲಶೈಲಸ್ತ್ರಿಕೋಣಸ್ತು ಮಧ್ಯನಿಮ್ನಃ ಸದಾಶಿವಃ ॥ ೮೪ ॥

ತನ್ಮಧ್ಯೇ ಮಂಡಲಂ ಚಾರು ತ್ರಿಂಶಚ್ಛಕ್ತಿಸಮುನ್ನಿಶಂ ।
ಯೋನಿಸ್ತಸ್ಯಾಂ ಶಿಲಾಯಾಂ ತು ಶಿಲಾರೂಪಾ ಮನೋಹರಾ ॥ ೮೫ ॥

---

೮೧. ಲಿಂಗಭಾಗವನ್ನು ಪೊಂದಿದ ನಾನು ನಿಜರೂಪದಿಂದ ಆಶೈಲದಲ್ಲಿ ಕಾಮ ದೇವಿಯೊಡನೆ ವಿಹರಿಸುತ್ತಿರುವಂತೆ ದೇವತೆಗಳಿಗೂ ಸಹ ಶಿಲಾಭಾವವನ್ನು ಪೊಂದಿ ದ್ದರೂ ನಿಜರೂಪದಿಂದ ಏಕಾಂತವಲ್ಲಿ ವಿಹರಿಸುತ್ತಲಿದ್ದರು.

೮೨. ಬ್ರಹ್ಮ, ವಿಷ್ಣು, ಶಂಕರ, ದಿಕ್ಪಾಲರು, ಇವರೆಲ್ಲರೂ ಸಹ ಶಿಲಾಭಾವ ವನ್ನು ಪೊಂದಿದವರಾಗಿ ಆಯಾಯ ಶೈಲಗಳಲ್ಲಿ ನೆಲಿಸಿರುತ್ತಾ ಅಲ್ಲಲ್ಲಿ ನಿಜರೂಪದಿಂದ ಏಕಾಂತದಲ್ಲಿ ವಿಹರಿಸುವರು.

೮೩. ಇನ್ನೂ ಕೆಲದೇವತೆಗಳು ನನ್ನ ನೀಲಕೂಟಪರ್ವತದಲ್ಲಿ, ಸುಂದರವಾದ ರೂಪವುಳ್ಳ ಕಾಮಾಖ್ಯಾದೇವಿಯನ್ನು ಉಪಾಸಿಸಲು ಸದಾ ನೆಲಸಿರುವರು.

೮೪. ನೀಲಕೂಟ ಶೈಲವು ತ್ರಿಕೋಣಾಕಾರವಾಗಿದೆ. ಮಧ್ಯೆ ಹಳ್ಳವಾಗಿರು ವುದು. ಅದು ಸದಾ ಮಂಗಳಕರವಾದುದು. ಆ ಶೈಲದ ಮಧ್ಯದಲ್ಲಿ ಮೂವತ್ತು ಶಕ್ತಿ ದೇವತೆಯರಿಂದ ಕೂಡಿದ ಸುಂದರವಾದ ಮಂಡಲವು ಇರುವುದು.

೮೫-೮೬. ಆ ಶಿಲೆಯಲ್ಲಿ ಸತೀದೇವಿಯ ಯೋನಿಯು ಮನೋಹರವಾದ ಶಿಲಾ ರೂಪವಾಗಿರುವುದು. ಅದು ಹನ್ನೆರಡು ಅಂಗುಲ ಅಗಲವಾಗಿಯೂ ಹನ್ನೊಂದು ಅಂಗುಲ ಎತ್ತರವಾಗಿಯೂ ಇರುವುದು. ಮತ್ತೂ ಅದು ಬರುಬರುತ್ತಾ ಸೂಕ್ಷ್ಮವೂ

ವಿತಸ್ತಿಮಾತ್ರವಿಸ್ತೀರ್ಣಾ ಏಕವಿಂಶಾಂಗುಳೀಯುತಾ ।
ಕ್ರಮಸೂಕ್ಷ್ಮಾವನಮ್ರಾ ಸಾ ಭಸ್ಮಶೈಲಾನುಗಾಮಿನೀ ॥ ೮೬ ॥

ಸಿಂದೂರಕುಂಕುಮಾರಕ್ತಾ ಸರ್ವಕಾಮಪ್ರದಾಯಿನೀ ।
ತಸ್ಯಾಂ ಯೋನೌ ಪಂಚರೂಪಾ ನಿತ್ಯಂ ಕ್ರೀಡತಿ ಕಾಮಿನೀ ॥ ೮೭ ॥

ಮಹಾಮಾಯಾ ಜಗದ್ಧಾತ್ರೀ ಮೂಲಭೂತಾ ಸನಾತನೀ ।
ತತ್ರಾಷ್ಟೌಯೋಗಿನೀರ್ನಿತ್ಯಾ ನೂತ್ನನೂತ್ನಾಃ ಸನಾತಾನೀಃ ॥ ೮೮ ॥

ಪೂರ್ವೋಕ್ತಾಃ ಶೈಲಪುತ್ರ್ಯಾದ್ಯಾಃ ಸ್ಥಿತಾ ದೇವ್ಯಾಃ ಸಮಂತತಃ ।
ತಾಸಾಂ ತು ಪೀಠನಾಮಾನಿ ಶೃಣು ಚೈಕತ್ರ ಭೈರವ ॥ ೮೯ ॥

ಗುಪ್ತಕಾಮಾ ಚ ಶ್ರೀಕಾಮಾ ತಥಾನ್ಯಾ ವಿಂಧ್ಯವಾಸಿನೀ ।
ಕೋಟೀಶ್ವರೀ ವನಸ್ಥಾ ತು ಪಾದುದುರ್ಗಾ ತಥಾ ಪರಾ ॥ ೯೦ ॥

ದೀರ್ಘೇಶ್ವರೀ ಕ್ರಮಾದೇವ ಪ್ರಕಟಾ ಭುವನೇಶ್ವರೀ ।
ಸ್ವಯೋಗಿನ್ಯಃ ಪೀಠನಾಮ್ನಾ ಖ್ಯಾತಾ ಅಷ್ಟೌ ಚ ದೇವತಾಃ ॥ ೯೧ ॥

ಸ್ವಲ್ಪಬಗ್ಗಿಯೂ ಇಪ್ಪು ಭಸ್ಮಶೈಲವನ್ನನುಸರಿಸಿರುವುದು. ಸಿಂಧೂರಕುಂಕುಮಗ ಗಳಂತೆ ರಕ್ತವರ್ಣವಾಗಿರುವುದು. ಸಕಲ ಇಷ್ಟಾರ್ಥಗಳನ್ನು ಕೊಡುವಂತಹುದು.

೮೬. ಶಿಲಾರೂಪವಾದ ಆ ಯೋನಿಯಲ್ಲಿ ಮಹಾಮಾಯೆಯೂ, ಜಗತ್ತಿಗೆ ಆದಿಕಾರಣಳೂ ನಾಶರಹಿತಳೂ ಆದ ದೇವಿಯು ಪಂಚರೂಪಗಳನ್ನಾಂತು ವಿಹರಿಸುತ್ತಿರುವಳು.

೮೮. ಹಿಂದೆ ಹೇಳಿದ ಶೈಲಪುತ್ರಿಯೇ ಮೊದಲಾದ ಎಂಟುಮಂದಿ ನಿತ್ಯಾ ಎಂಬ ಯೋಗಿನಿಯರು ಆ ದೇವಿಯಸುತ್ತಲೂ ಅಲ್ಲಿಯೇ ನೆಲಸಿರುವರು.

೮೯-೯೧. ಎಲ್ಲಿ ಭೈರವನೇ ಆ ಯೋಗಿನಿಯರ ಪೀಠನಾಮಗಳನ್ನು ಕೇಳು. ಗುಪ್ತಕಾಮಾ, ಶ್ರೀಕಾಮಾ, ವಿಂಧ್ಯವಾಸಿನೀ, ಕೋಟೀಶ್ವರೀ, ವನಸ್ಥಾ, ಪಾದದುರ್ಗಾ ದೀರ್ಘೇಶ್ವರೀ, ಭುವನೇಶ್ವರೀ ಎಂದು ಎಂಟು ಮಂದಿ ಯೋಗಿನಿಯರು ಅಲ್ಲಿ ನೆಲಸಿರುವರು. ಇವರೆಲ್ಲರೂ ಆ ಕಾಮಾಖ್ಯಾಪೀಠದ ದೇವಿಯರೆಂದು ಪ್ರಸಿದ್ಧರು.

ಸರ್ವತೀರ್ಥಾನಿ ಚೈಕತ್ರ ಜಲರೂಪಾಣಿ ಭೈರವ ।
ಸ್ಥಿತಾನಿ ನಾಮ್ನಾ ಸೌಭಾಗ್ಯಸರಸ್ಯಲ್ಪಾಪಿ ಪುಣ್ಯದಾ ॥ ೯೨ ॥

ವಿಷ್ಣುಸ್ತು ತಿರೇ ತಸ್ಯಾಸ್ತು ನಾಮ್ನಾ ಕಮಲ ಇತ್ಯುತ ।
ಕಾಮುಕಾಖ್ಯಸ್ತು ಬಟುಕಃ ಕಾಮಾಖ್ಯಾಭ್ಯರ್ಣಸಂಸ್ಥಿತಃ ॥ ೯೩ ॥

ಲಕ್ಷ್ಮೀ ಸರಸ್ವತೀ ದೇವ್ಯೌ ದೇವ್ಯಾಃ ಸಂಗೇ ವ್ಯವಸ್ಥಿತೌ ।
ಲಲಿತಾಖ್ಯಾಭವಲ್ಲಕ್ಷ್ಮೀರ್ಮಾತಂಗೀ ತು ಸರಸ್ವತೀ ॥ ೯೪ ॥

ಗಣಾಧ್ಯಕ್ಷಃ ಪೂರ್ವಭಾಗೇ ತಸ್ಯ ಶೈಲಸ್ಯ ಸಂಸ್ಥಿತಃ ।
ಸಿದ್ಧಃ ಸ ನಾಮ್ನಾ ವಿಖ್ಯಾತೋ ದ್ವಾರೇ ದೇವ್ಯಾಃ ಪ್ರಿಯಃ ಸುತಃ ॥ ೯೫ ॥

ಕಲ್ಪವೃಕ್ಷಃ ಕಲ್ಪವಲ್ಲೀ ತಿಂತಿಡೀ ಚಾಪರಾಜಿತಾ ।
ಭೂತ್ವಾ ತಸ್ಮಿನ್ಮಹಾಶೈಲೇ ಸ್ಥಿತೋ ದೇವ್ಯಾ ಧೃತಃ ಪ್ರಿಯೇ ॥ ೯೬ ॥

---

೯೨. ಎಲೈ ಭೈರವನೇ, ಅಲ್ಲಿರುವ ಸೌಭಾಗ್ಯವೆಂಬ ಸರಸ್ಸು ಚಿಕ್ಕದಾಗಿದ್ದರೂ, ಸಕಲ ತೀರ್ಥಗಳೂ ಒಟ್ಟುಗೂಡಿ ಅಲ್ಲಿ ಜಲರೂಪದಿಂದ ನೆಲಸಿರುವವು. ಆದುದರಿಂದ ಆ ಸರಸ್ಸು ಬಹು ಪುಣ್ಯದಾಯಕವಾದುದು.

೯೩. ಆ ಸರಸ್ಸಿನ ತೀರದಲ್ಲಿ ವಿಷ್ಣುವು "ಕಮಲ" ನೆಂಬ ಹೆಸರಿನಿಂದ ಇರುವನು, ಕಾಮುಕ (ಶಂಕರ) ನೆಂಬ ಬಾಲನು ಆ ಕಾಮಾದೇವಿಯ ಸನ್ನಿಧಿಯಲ್ಲಿಯೇ ಇರುವನು.

೯೪. ಲಕ್ಷ್ಮೀ ಸರಸ್ವತೀದೇವಿಯರು ಲಲಿತಾ ಮತ್ತೂ ಮಾತಂಗೀ ಎಂಬ ಹೆಸರುಗಳಿಂದ ದೇವಿಯೊಡನೆಯೇ ಇರುವರು.

೯೫. ಆ ನೀಲಕೂಟಶೈಲದ ಪೂರ್ವಭಾಗದಲ್ಲಿ ಗಣಪತಿಯು ಇರುವನು, ಕಾಮಾದೇವಿಯ ಸುತನಾದ ಅವನು ಸಿದ್ಧಗಣಪತಿಯೆಂಬ ಹೆಸರಿನಿಂದ ಪ್ರಖ್ಯಾತನಾಗಿ ದ್ವಾರದಲ್ಲಿಯೇ ಇರುವನು.

೯೬. ಕಲ್ಪವೃಕ್ಷವು ತಿಂತಿಡೀ ಮತ್ತೂ ಅಪರಾಜಿತಾ ಎಂಬ ಕಲ್ಪಲತೆಗಳ ರೂಪದಿಂದ ಆ ಮಹಾಶೈಲದಲ್ಲಿ ಇರುವುದು. ದೇವಿಯು ಅದನ್ನು ಪ್ರೀತಿಯಿಂದ ಧರಿಸುವಳು.

ವರಾಹಃ ಪಾಂಡುನಾಥಾಖ್ಯಃ ಸ್ಥಿತಸ್ತತ್ರ ಪರಿರ್ಯತಂ ।
ಜಘನೆ ಶಿರಸೀ ಕೃತ್ವಾ ಜಘಾನ ಮಧುಕೈಟಭೌ ॥ ೯೭ ॥

ತಸ್ಯಾಸನ್ನೆ ಬ್ರಹ್ಮಕುಂಡಂ ಬ್ರಹ್ಮಣಾ ನಿರ್ಮಿತಂ ಪುರಾ ।
ಈಶಾನಾಖ್ಯಃ ಶಿವೊ ಯತ್ರ ತತ್ಸಿದ್ಧೇಶ್ವರಸಂಜ್ಞಿತಂ ॥ ೯೮ ॥

ಶಿಲಾರೂಪಂ ಸಿದ್ಧಕುಂಡಂ ಮಧ್ಯಸ್ಥಂ ವಿದ್ಧಿ ಭೈರವ ।
ತಸ್ಯಾಸನ್ನೇ ಗಯಾಕ್ಷೇತ್ರಂ ಕ್ಷೇತ್ರಂ ವಾರಾಣಸೀ ತಥಾ ॥ ೯೯ ॥

ಯೋನಿಮಂಡಲಸಂಕಾಶಂ ಕುಂಡಂ ಭೂತ್ವಾ ವ್ಯವಸ್ಥಿತಂ ।
ತತ್ರೈವಾಮೃತಕುಂಡಂ ತು ಸುಧಾಸಂಘಪ್ರಪೂರಿತಂ ॥ ೧೦೦ ॥

ಮಮಪ್ರಿಯಾರ್ಥಮಿಂದ್ರೇಣ ಸ್ಥಾಪಿತಂ ಸಹ ನಿರ್ಜರೈಃ ।
ವಾಸುದೇವಾಹ್ವಯಂ ಶೀರ್ಷಂ ಶ್ರೀಕಾಮೇಶ್ವರಸಂಜ್ಞಕಂ ॥ ೧೦೧ ॥

ಕಾಮುಕುಂಡಂ ಮಹಾಪುಣ್ಯಂ ತಸ್ಯಾಸನ್ನೇ ವ್ಯವಸ್ಥಿತಂ ।
ಕೇದಾರಸಂಜ್ಞಕಂ ಕ್ಷೇತ್ರಂ ಮಧ್ಯಸ್ಥಂ ಸಿದ್ಧಕಾಮಾಂಯೋಃ ॥ ೧೦೨ ॥

---

೯೭. ಅಲ್ಲಿ ವರಾಹನು "ಪಾಂಡುನಾಥ" ನೆಂಬ ಹೆಸರಿನಿಂದ ಇರುವನು. ಅಲ್ಲಿಯೇ ಹಿರಿಯು ಹಿಂದೆ ಮಧುಕೈಟಭರನ್ನು ಕಾಲಿನಮೇಲೆ ಎಳೆದುಕೊಂಡು ಅವರ ಶಿರಸ್ಸನ್ನು ಕತ್ತರಿಸಿದನು.

೯೮. ಅವರ ಸಮೀಪದಲ್ಲಿಯೇ ಪೂರ್ವದಲ್ಲಿ ಬ್ರಹ್ಮನು ನಿರ್ಮಿಸಿದ ಬ್ರಹ್ಮ ದಂಡವು ಇರುವುದು. ಈಶಾನ ನೆಂಬ ಶಿವನು ನೆಲಸಿರುವ ಸ್ಥಾನಕ್ಕೆ ಸಿದ್ಧೇಶ್ವರವೆಂದು ಹೆಸರು.

೯೯-೧೦೦. ಎಲೈ ಭೈರವನೆ! ಶಿಲಾರೂಪವಾದ ಸಿದ್ಧಕುಂಡವು ಮಧ್ಯದಲ್ಲಿ ರುವುದು, ಅದಕ್ಕೆ ಸಮೀಪದಲ್ಲಿಯೇ ಗಯಾಕ್ಷೇತ್ರವೂ ವಾರಾಣಸೀಕ್ಷೇತ್ರವೂ ಇರುವುದು, ಆ ಕುಂಡವು ಯೋನಿಮಂಡಲದಾಕಾರವಾಗಿ ವಿರಾಜಿಸುತ್ತಿರುವುದು.

೧೦೦. ಅಲ್ಲಿ ಅಮೃತದಿಂದ ತುಂಬಿರುವ ಕುಂಡವೊಂದನ್ನು ಇಂದ್ರನು ನನ್ನ ಅನುಕೂಲತೆಗಾಗಿ ಇರಿಸಿರುವನು.

೧೦೨. ವಾಸುದೇವವೆಂಬ ನನ್ನ ಶಿರಸ್ಸು ಕಾಮೇಶ್ವರವೆಂಬ ಹೆಸರಿನಿಂದ ಅಲ್ಲಿ ನೆಲಸಿರುವುದು. ಅದರ ಸಮೀಪದಲ್ಲಿ ಮಹಾಪರ್ವತವಾದ ಕಾಮುಕುಂಡವು ಇರುವುದು.

ದೀರ್ಘಂ ಚತುರ್ದಶವ್ಯಾಮಂ ಛಾಯಾಕ್ಷೇತ್ರಾಹ್ವಯಂ ತು ತತ್ ।
ತಸ್ಯಾಸನ್ನೇ ಶೈಲಪುತ್ರೀ ಗುಪ್ತಕಾಮಾಹ್ವಯಾ ತು ಸಾ ॥ ೧೦೩ ॥

ಗುಪ್ತಕುಂಡಸ್ಯ ಮಧ್ಯಸ್ಥಾ ಕಾಮೇಶಗ್ರಾವ್ಣಿ ಸಂಗತಾ ।
ಕಾಮೇಶ್ವರಶಿಲಾ ಶಕ್ತಾ ಕಾಮಾಖ್ಯಾಸಂಜ್ಞಿತಾ ಸದಾ ॥ ೧೦೪ ॥

ಪೂರ್ವಭಾಗೇಣ ಸಂಸಕ್ತಾ ಯೋನೇಸ್ತು ಪರಮಾರ್ಗತಃ ।
ಕಾಮುಕಾಮಾಖ್ಯಯೋರ್ಮಧ್ಯೇ ಕಾಲರಾತ್ರಿರ್ವ್ಯವಸ್ಥಿತಾ ॥ ೧೦೫ ॥

ಪೀಠೇ ದೀರ್ಘೇಶ್ವರೀನಾಮ್ನಾ ಸೀಮಭಾಗೇ ಪ್ರಚಂಡಿಕಾ ।
ಕಾಮಾಖ್ಯಾ ಪ್ರಸ್ತರಸ್ಯಾಂತೇ ಕೂಷ್ಮಾಂಡೀ ನಾಮ ಯೋಗಿನೀ ॥ ೧೦೬ ॥

ಪೀಠೇ ಕೋಟೀಶ್ವರೀ ನಾಮ್ನಾ ಯೋನಿರೂಪೇಣ ಸಂಸ್ಥಿತಾ ।
ಯಚ್ಚಾಘೋರಾಹ್ವಯಂ ಶೀರ್ಷಂ ತತ್ಕಾಮಾಯಾಸ್ತು ದಕ್ಷಿಣೇ ॥ ೧೦೭ ॥

---

೧೦೩. ಸಿದ್ಧಕುಂಡ ಮತ್ತು ಕಾಮಕುಂಡಗಳ ಮಧ್ಯದಲ್ಲಿ "ಕೇದಾರ" ವೆಂಬ ಕ್ಷೇತ್ರವು ಇರುವುದು. ಅದು ಪದಿನಾಲ್ಕುವ್ಯಾಮ ವಿಸ್ತಾರವಾಗಿರುವುದು. ಛಾಯಾಕ್ಷೇತ್ರವೆಂದು ಅದಕ್ಕೆ ಹೆಸರು.

೧೦೪. ಅದರ ಸಮೀಪದಲ್ಲಿ ಶೈಲಪುತ್ರಿಯು "ಗುಪ್ತಕಾಮಾ" ಎಂಬ ಹೆಸರಿನಿಂದ ಇರುವಳು. ಅವಳು ಕಾಮೇಶ್ವರವೆಂಬ ಶಿಲೆಯಲ್ಲಿ ಮಿಳಿತವಾಗಿರುವ ಗುಪ್ತಕುಂಡದ ಮಧ್ಯದಲ್ಲಿರುವಳು.

೧೦೫. ಕಾಮೇಶ್ವರ ಶಿಲೆಯೊಡನಿರುವ ದೇವಿಗೆ ಕಾಮಾಖ್ಯಾ ಎಂದು ಹೆಸರು. ಅವಳು ಯೋನಿಶಿಲೆಯ ಪೂರ್ವಭಾಗದಲ್ಲಿ ಸೇರಿ ನೆಲಸಿರುವಳು.

೧೦೬. ಕಾಮೇಶ್ವರ ಮತ್ತು ಕಾಮಾಖ್ಯಾದೇವಿಯ ಮಧ್ಯದಲ್ಲಿ ಕಾಲರಾತ್ರೀ ದೇವಿಯು ನೆಲಸಿರುವಳು. ಪೀಠದಲ್ಲಿ ದೀರ್ಘೇಶ್ವರಿಯೂ, ಕೊನೆಯಲ್ಲಿ ಪ್ರಚಂಡಿಕೆಯೂ ಇರುವರು.

೧೦೭. ಕಾಮಾಖ್ಯಾಶಿಲೆಯ ಕೊನೆಯಲ್ಲಿ "ಕೂಷ್ಮಾಂಡೀ" ಎಂಬ ಯೋಗಿನಿಯು ಇರುವಳು. ಪೀಠದಲ್ಲಿ "ಕೋಟೀಶ್ವರೀ" ಎಂಬ ದೇವಿಯು ಯೋನಿರೂಪದಿಂದ ಇರುವಳು.

ಪೀಠೇ ಭೈರವನಾಮಾ ತು ಗೀಯತೇ ಪರಮಾರ್ಥಿಭಃ ।
ಚಾಮುಂಡಾ ಭೈರವೀನಾಮ್ನಾ ಭೈರವಾಸನ್ನಸಂಸ್ಥಿತಾ ॥ ೧೦೮ ॥

ನಾಯಿಕಾ ಕಾಮುದಾ ಭಕ್ತೇ ಚಂಡಮುಂಡವಿನಾಶಿನೀ ।
ಕಾಮಭೈರವಯೋರ್ಮಧ್ಯೇ ಸ್ವಯಂ ದೇವೀ ಸುರಾಪಗಾ ॥ ೧೦೯ ॥

ಹಿತಾಯ ಸರ್ವಜಗತಾಂ ದೇವ್ಯಾಸ್ತು ಪ್ರೀತಯೇ ಸದಾ ।
ಸದ್ಯೋಜಾತಾಹ್ವಯಂ ಶೀರ್ಷಂ ಪೀಠೇ ತ್ವಾಮ್ರಾತಕೇಶ್ವರಂ ॥ ೧೧೦ ॥

ಭೈರವಾಖ್ಯೇ ಗಹ್ವರೇ ತು ಸ್ಥಿತಂ ದೇವರ್ಷಿಸೇವಿತಂ ।
ವಿದ್ಧಿ ತತ್ರೈವ ದುರ್ಗಾಖ್ಯಾ ನಾಯಿಕಾ ಯೋಗರೂಪಿಣೀ ॥ ೧೧೧ ॥

ಸಿದ್ಧಕಾಮೇಶ್ವರೀ ನಾಮ್ನಾ ಖ್ಯಾತಾ ದೇವೇಷು ನಿತ್ಯಶಃ ।
ಅಜೀರ್ಣಪತ್ರಃ ಸುಚ್ಛಾಯೋ ವೃಕ್ಷಸ್ತತ್ರ ಸುಸಂಸ್ಥಿತಃ ॥ ೧೧೨ ॥

---

೧೦೮. ಅಘೋರವೆಂಬ ನನ್ನ ಶಿರಸ್ಸು ಕಾಮಾದೇವಿಯ ದಕ್ಷಿಣ ಪೀಠದಲ್ಲಿ ಭೈರವನೆಂಬ ಹೆಸರಿನಿಂದ ಇರುವುದು. ತತ್ತ್ವವನ್ನು ತಿಳಿದ ಸಾಧಕರು ಅವನ್ನು ಸ್ತುತಿಸುವರು.

೧೦೯. ಜಗನ್ನಾಯಿಕೆಯೂ, ಭಕ್ತೇಷ್ಟದಾಯಿನಿಯೂ, ಚಂಡಮುಂಡರನ್ನು ಸಂಹರಿಸಿದವಳೂ ಆದ ಚಾಮುಂಡಾದೇವಿಯು "ಭೈರವೀ" ಎಂಬ ಹೆಸರಿನಿಂದ ಭೈರವೇಶ್ವರನ ಸಮೀಪದಲ್ಲಿರುವಳು.

೧೧೦. ಕಾಮಾದೇವಿ ಮತ್ತು ಭೈರವರ ಮಧ್ಯದಲ್ಲಿ ದೇವಗಂಗೆಯು ಸಕಲ ಜಗತ್ತಿನ ಹಿತಕ್ಕಾಗಿಯೂ, ದೇವಿಗೆ ಪ್ರೀತಿಯನ್ನುಂಟುಮಾಡುವ ಸಲುವಾಗಿಯೂ ತಾನೇ ನೆಲಸಿರುವಳು.

೧೧೧. ಸದ್ಯೋಜಾತವೆಂಬ ನನ್ನ ಶಿರಸ್ಸು ಭೈರವವೆಂಬ ಗಹನವಾದ ಪೀಠದಲ್ಲಿ "ಆಮ್ರಾತಕೇಶ್ವರ" ನೆಂಬ ಹೆಸರಿನಿಂದ ಪ್ರಸಿದ್ಧವಾಗಿರುವುದು. ಇದು ಯಾವಾಗಲೂ ದೇವರ್ಷಿಗಳಿಂದ ಸೇವಿಸಲ್ಪಡುತ್ತಲಿರುವುದು.

೧೧೨. ಅಲ್ಲಿಯೇ ಜಗನ್ನಾಯಿಕೆಯೂ, ಯೋಗರೂಪಳೂ ಆದ ದುರ್ಗೆಯು "ಸಿದ್ಧಕಾಮೇಶ್ವರೀ" ಎಂಬ ಹೆಸರಿನಿಂದ ದೇವತೆಗಳಲ್ಲಿ ಪ್ರಸಿದ್ಧಳಾಗಿ ಇರುವಳು.

ಆಮ್ರಾತಕಃ ಕಲ್ಪವೃಕ್ಷಃ ಕಲ್ಪವಲ್ಲೀಸಮನ್ವಿತಃ ।
ಪೀಠೇ ತು ಸಿದ್ಧಗಂಗಾಖ್ಯಾ ಸ್ವಯಂ ಗಂಗಾ ಸಮುತ್ಥಿತಾ ॥ ೧೧೩ ॥

ಆಮ್ರಾತಕಸ್ಯ ನಿಕಟೇ ಮಮ ಪ್ರೀತಿವಿವೃದ್ಧಯೇ ।
ಪುಷ್ಕರಾಖ್ಯಂ ತು ತತ್ಕ್ಷೇತ್ರಂ ಪೀಠೇ ತ್ವಾಮ್ರಾತಕಾಹ್ವಯಂ ॥ ೧೧೪ ॥

ಐಶಾನ್ಯಾಂ ತತ್ಪುರುಷಾಖ್ಯಂ ಮಮ ಶೀರ್ಷಂ ವ್ಯವಸ್ಥಿತಂ ।
ಭುವನೇಶ್ವರನಾಮ್ನಾ ತು ಪೀಠೇ ಖ್ಯಾತಂ ತು ಭೈರವ ॥ ೧೧೫ ॥

ಗಹ್ವರಂ ಭುವನೇಶಸ್ಯ ಭುವನಾನಂದಸಂಜ್ಞಕಂ ।
ತಸ್ಯಾಸನ್ನೇ ತು ಸುರಭಿಃ ಶಿಲಾರೂಪೇಣ ಸಂಸ್ಥಿತಾ ॥ ೧೧೬ ॥

ಕಾಮಧೇನುರಿತಿ ಖ್ಯಾತಾ ಪೀಠೇ ಕಾಮಪ್ರದಾಯಿನೀ ।
ಯೋಽಸೌ ಶರಭಮೂರ್ತಿರ್ಮೇ ಮಧ್ಯಖಂಡಪ್ರಚಂಡಕಃ ॥ ೧೧೭ ॥

ಮಹಾಭೈರವನಾಮಾಭೂತ್ಕೋಟಿಲಿಂಗಾಹ್ವಯಸ್ತು ಸಃ ।
ಮೂರ್ತಿಭಿಃ ಪಂಚಭಿಃ ಪಂಚಭಾಗೇಷು ಸಮವಸ್ಥಿತಃ ॥ ೧೧೮ ॥

---

೧೧೩. ಆಮ್ರಾತಕವೆಂಬ ಕಲ್ಪವೃಕ್ಷವೂ, ಕಲ್ಪಲತೆಯೂ ಅಲ್ಲಿರುವವು. ಅವುಗಳ ಎಲೆಗಳು ಯಾವಾಗಲೂ ಬಾಡುವುದೇ ಇಲ್ಲ. ಆ ವೃಕ್ಷದ ನೆರಳು ಬಹು ಹಿತವಾಗಿರುವುದು.

೧೧೪. ಆ ಆಮ್ರಾತಕವೃಕ್ಷದ ಸಮೀಪದಲ್ಲಿಯೇ ಇರುವ ಪೀಠದಲ್ಲಿ ಗಂಗೆಯು ನನ್ನ ಸಂತೋಷಾರ್ಥವಾಗಿ " ಸಿದ್ಧಗಂಗಾ " ಎಂಬ ಹೆಸರಿನಿಂದ ನೆಲಸಿರುವಳು.

೧೧೫. ಆ ಕ್ಷೇತ್ರಕ್ಕೆ ಪುಷ್ಕರವೆಂದೂ, ಆಮ್ರಾತಕಪೀಠವೆಂದೂ ಹೆಸರು. ಅದರ ಈಶಾನ್ಯದಲ್ಲಿ ತತ್ಪುರುಷವೆಂಬ ನನ್ನ ಶಿರಸ್ಸು ಇರುವುದು.

೧೧೬. ಆ ಸ್ಥಾನಕ್ಕೆ ಭುವನೇಶ್ವರ ಪೀಠವೆಂದು ಹೆಸರು. ಎಲೈ ಭೈರವನೇ; ಆ ಪೀಠಕ್ಕೆ ಭುವನಾನಂದ ಗುಹೆಯೆಂದು ಮತ್ತೊಂದು ಹೆಸರೂ ಪ್ರಸಿದ್ಧವಾಗಿರುವುದು.

೧೧೭. ಅದರ ಸಮೀಪದಲ್ಲಿಯೇ ಕಾಮಧೇನುವೆಂದು ಪ್ರಸಿದ್ಧವಾಗಿ, ಸಕಲ ಇಷ್ಟಾರ್ಥಗಳನ್ನೂ ಕರೆಯುವ ಹಸುವು ಶಿಲಾರೂಪದಿಂದ ನೆಲಸಿರುವುದು.

೧೧೮-೧೧೯. ಮಧ್ಯಖಂಡದಲ್ಲಿ ಅತಿ ಪ್ರಚಂಡವಾದ ನನ್ನ ಶರಭಮೂರ್ತಿಯು ಮಹಾಭೈರವನೆಂಬ ಹೆಸರಿನಿಂದ ಪ್ರಸಿದ್ಧವಾಯಿತು. ಅದಕ್ಕೆ ಕೋಟಿಲಿಂಗಮೂರ್ತಿ

ಅಪಂ ಪಶ್ಚಾದತಿಪ್ರೀತ್ಯಾ ಭೈರವಾಖ್ಯಃ ಸ್ಥಿತೋಽಧರೇ ।
ಮಹಾಗೌರೀ ತು ಯಾ ದೇವೀ ಯೋಗಿನೀ ಸಿದ್ಧರೂಪಿಣೀ ॥ ೧೧೯ ॥

ಸಾ ಬ್ರಹ್ಮಪರ್ವತೇ ಚಾಸ್ತೇ ಶಿಲಾರೂಪೇಣ ಚೋರ್ಧ್ವತಃ ।
ಅತೀವ ರೂಪಸಂಪನ್ನಾ ನಾಮ್ನಾ ಸಾ ಭುವನೇಶ್ವರೀ ॥ ೧೨೦ ॥

ಯತ್ರ ಬ್ರಹ್ಮಾ ತು ಸಂಶಕ್ತೋ ಮುಖಿ ಪರ್ವತರೂಪಿಣಿ ।
ಕಲ್ಪವಲ್ಲೀ ತು ತತ್ರಾಸ್ತೇ ನಾಮ್ನಾ ಸಾ ತ್ವಪರಾಜಿತಾ ॥ ೧೨೧ ॥

ಕಾಮುಖೇನೋರದೂರಸ್ಥಾ ಪೂರ್ವಭಾಗೇ ಮಹೇಶ್ವರೀ ।
ಶ್ರೀಕಾಮಾಖ್ಯಾ ಯೋನಿರೂಪಾ ಚಂಡಿಕಾ ಸಾ ತು ಯೋಗಿನೀ ॥ ೧೨೨ ॥

ಆಗ್ನೇಯಾಂ ವಿದ್ಧಿ ತಾಂ ಸಂಸ್ಥಾಂ ಸರ್ವಕಾಮಪ್ರದಾಂ ಶುಭಾಂ ।
ಯೋಗಿನೀ ಚಂಡಘಂಟಾಖ್ಯಾ ಪೀಠೇಽಸ್ಮಿ ಭೂದ್ವಿಂಧ್ಯವಾಸಿನೀ ॥ ೧೨೩ ॥

ಯೆಂದೂ ಹೆಸರು. ಅದು ಐದು ಮೂರ್ತಿಗಳುಳ್ಳದಾಗಿ ಐದು ಭಾಗಗಳಲ್ಲಿ ನೆಲಸಿರುವುದು. ನಾನು ಭೈರವನೆಂಬ ಹೆಸರಿನಿಂದ ಅದರ ಹಿಂಬಾಗದಲ್ಲಿರುವೆನು. ಅದು ನನಗೆ ಬಹು ಪ್ರೀತಿಕರವಾದುದು.

೧೨೦. ಯೋಗಿನಿಯೂ, ಸಿದ್ಧರೂಪವುಳ್ಳವಳೂ ಆದ ಮಹಾಗೌರೀದೇವಿಯು ಬ್ರಹ್ಮಪರ್ವತದ ಮೇಲುಭಾಗದಲ್ಲಿ ಶಿಲಾರೂಪದಿಂದ ನೆಲಸಿರುವಳು. ಅವಳು ತುಂಬಾ ರೂಪಸಂಪನ್ನಳು. ಭುವನೇಶ್ವರಿಯೆಂದು ಅವಳ ಹೆಸರು.

೧೨೧. ಪರ್ವತರೂಪನಾದ ನನ್ನಲ್ಲಿ ಬ್ರಹ್ಮನು ಎಲ್ಲಿ ನೆಲಸಿದನೋ ಆ ಸ್ಥಳದಲ್ಲಿ ಕಲ್ಪವಲ್ಲೀದೇವಿಯು "ಅಪರಾಜಿತಾ" ಎಂಬ ಹೆಸರಿನಿಂದ ನೆಲಸಿರುವಳು.

೧೨೨. ಪೂರ್ವದಿಕ್ಕಿನಲ್ಲಿ ಮಹೇಶ್ವರೀದೇವಿಯು ಇರುವಳು. ಆಗ್ನೇಯ ದಿಕ್ಕಿನಲ್ಲಿ ಕಾಮಾಖ್ಯಾದೇವಿಯು ಯೋನಿರೂಪದಿಂದ ಇರುವಳು. ಈ ಮಂಗಳಕರಳಾವ ದೇವಿಗೆ ಯೋಗಿನೀಯೆಂದೂ, ಚಂಡಿಕಾ ಎಂದೂ ಹೆಸರುಗಳು. ಈ ದೇವಿಯು ಸಕಲ ಇಷ್ಟಾರ್ಥಗಳನ್ನೂ ಕೊಡುವಳು.

೧೨೩. ವಿಂಧ್ಯವಾಸಿನೀ ಎಂಬ ಯೋಗಿನಿಯು ಚಂಡಘಂಟಾ ಎಂಬ ಹೆಸರಿನಿಂದಲೂ, ವನವಾಸೀ ಎಂಬ ಯೋಗಿನಿಯು ಸ್ಕಂದಮಾತೆಯೆಂಬ ಹೆಸರಿನಿಂದಲೂ ಅದೇ ಪೀಠದಲ್ಲಿ ನೆಲಸಿರುವರು.

ಯೋಗಿನೀ ಸ್ಕಂದಮಾತಾ ತಪ್ಪೀಠೇಽ ಭೂದ್ವನವಾಸಿನೀ ।
ಕಾತ್ಯಾಯನೀ ಪೀಠನಾಮ್ನಾ ಪಾದದುರ್ಗೇತಿ ಗೀಯತೇ ॥ ೧೨೪ ॥

ನೈರ್ಋತ್ಯಾಂ ನೀಲಶೈಲಸ್ಯ ಪ್ರಾಂತೇ ಸಾ ಸಂಸ್ಥಿತಾ ಶಿವಾ ।
ಯೋಽಸೌ ನಂದೀ ಮಮ ತನುಃ ಸ ತು ಪಾಷಾಣರೂಪಧೃಕ್ ॥ ೧೨೫ ॥

ಸಂಸ್ಥಿತಃ ಪಶ್ಚಿಮದ್ವಾರಿ ಹನೂರ್ಮಾ ಪೀಠನಾಮತಃ ।
ಇತಿ ತಸ್ಯ ವಚಃ ಶ್ರುತ್ವಾ ಶಂಭೋರಮಿತತೇಜಸಃ ॥ ೧೨೬ ॥

ಭೈರವಸ್ತಂ ತು ಪಪ್ರಚ್ಛ ವೇತಾಲೋಽಪಿ ಸಮುತ್ಸುಕಃ ।

॥ ಇತಿ ಶ್ರೀ ಕಾಲಿಕಾಪುರಾಣೇ ಚತುಃಷಷ್ಟಿತಮೋಽಧ್ಯಾಯಃ ॥

---

೧೨೪. ಕಾತ್ಯಾಯಿನೀದೇವಿಯು ಪೀಠದ ಹೆಸರಿನಿಂದ "ಪಾದದುರ್ಗಾ" ಎಂದು ಕರೆಯಲ್ಪಡುವಳು. ಅವಳು ನೀಲಕೂಟಗಿರಿಯ ನೈರುತ್ಯದಿಕ್ಕಿನ ಕೊನೆಯಲ್ಲಿ ಇರುವಳು.

೧೨೫. ನನ್ನ ಸ್ವರೂಪನಾದ ನಂದಿಕೇಶ್ವರನು ಶಿಲಾರೂಪವನ್ನು ಧರಿಸಿ ಆ ಪೀಠದ ಪಶ್ಚಿಮ ಬಾಗಿಲಿನಲ್ಲಿರುವನು. ಅವನ ಪೀಠನಾಮವು 'ಹನೂರ್ಮಾ' ಎಂಬುದು.

೧೨೬. ಹೀಗೆ ಮಹಾತೇಜಸ್ವಿಯಾದ ಶಂಕರನು ಹೇಳಿದ ಮಾತುಗಳನ್ನು ಕೇಳಿ, ವೇತಾಲ ಭೈರವರು ಕುತೂಹಲಯುಕ್ತರಾಗಿ, ಮತ್ತೆ ಆ ಶಂಕರನನ್ನು ಪ್ರಶ್ನೆ ಮಾಡಿದರು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಅರವತ್ತನಾಲ್ಕನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

- - - -

ಅಥ

॥ ಶ್ರೀ ಕಾಲಿಕಾಪುರಾಣೇ ಪಂಚಷಷ್ಟಿತಮೋಽಧ್ಯಾಯಃ ॥

॥ ವೇತಾಲಭೈರವಾವೂಚತುಃ ॥

ಶ್ರುತಃ ಪೀಠಕ್ರಮಸ್ತಾತ ದೇವ್ಯಾಃ ಪೂಜಾಕ್ರಮಸ್ತಥಾ ।
ಶ್ರೋತುಮಿಚ್ಛಾಮಿ ಮೂರ್ತೀನಾಂ ಪಂಚಾನಾಮಪಿ ಶಂಕರ ॥ ೧ ॥

ರೂಪಾಣಿ ಪಂಚ ಮೂರ್ತೀನಾಂ ಮಂತ್ರಾಣಿ ಚ ಸಮಂತತಃ
ತತ್ರ ಮಂತ್ರಾಣಿ ತಂತ್ರಾಣಿ ವದ ನೋ ವೃಷಭಧ್ವಜ ॥ ೨ ॥

॥ ಈಶ್ವರ ಉವಾಚ ॥

ಶೃಣು ವಕ್ಷ್ಯಾಮಿ ವೇತಾಲ ಮಂತ್ರಂ ತಂತ್ರಂ ಪೃಥಕ್ಪೃಥಕ್ ।
ಕಾಮಾಖ್ಯಾಪಂಚಮೂರ್ತೀನಾಂ ರೂಪಂ ಕಲ್ಪಂ ಚ ಭೈರವ ॥ ೩ ॥

ಅರವತ್ತೈದನೆಯ ಅಧ್ಯಾಯವು

೧-೨. ವೇತಾಲಭೈರವರು ಹೇಳಿದರು--ತಂದೆಯಾದ ಓ ಶಂಕರನೇ ದೇವಿಯ ಪೀಠಕ್ರಮವನ್ನೂ ಪೂಜಾಕ್ರಮವನ್ನೂ ಕೇಳಿದೆವು. ಈಗ ದೇವಿಯ ಐದು ಮೂರ್ತಿಗಳ ರೂಪಗಳನ್ನೂ, ಮಂತ್ರಗಳನ್ನೂ ಕೇಳಲಿಚ್ಛಿಸುವೆವು. ಓ ವೃಷಭ ಧ್ವಜನೇ! ಆ ಮಂತ್ರಗಳನ್ನೂ, ತಂತ್ರಕ್ರಮಗಳನ್ನೂ, ನಮಗೆ ಹೇಳು.

೩. ಈಶ್ವರನು ಹೇಳಿದನು:- ಎಲೈ ವೇತಾಲಭೈರವರೇ! ಕೇಳಿ ಕಾಮಾಖ್ಯಾ ದೇವಿಯ ಐದು ಮೂರ್ತಿಗಳ ಮಂತ್ರವನ್ನೂ, ತಂತ್ರಕ್ರಮವನ್ನೂ, ರೂಪ ಮತ್ತೂ ಕಲ್ಪಗಳನ್ನೂ ಬೇರೆ ಬೇರೆಯಾಗಿ ಹೇಳುವೆನು.

ಕಾಮಸ್ಥಂ ಕಾಮಮಧ್ಯಸ್ಥಂ ಕಾಮದಾಯಪುಟೀಕೃತಂ ।
ಕಾಮೇನ ಕಾಮಯೇತ್ಕಾಮೀ ಕಾಮಂ ಕಾಮೇ ನಿಯೋಜಯೇತ್ ॥ ೪ ॥

ಜ್ಯೇಷ್ಠಂ ತು ವ್ಯಂಜನಂ ಬ್ರಹ್ಮ ಪರಃಶಾಂತಂ ತದುಚ್ಯತೇ ।
ಪ್ರಥಮಂ ಕ್ರಮತಃ ಕುರ್ಯಾತ್ತಂ ಸಶಕ್ತಂ ಸುಧಾಮಯಂ ॥ ೫ ॥

ಪ್ರಜಾಪತಿಸ್ತಥಾ ಶುಕ್ರಬೀಜಂ ಸಂಸ್ಥಾದಿಸಂಯುತಂ ।
ಚಂದ್ರಾರ್ಧಸಹಿತಂ ಬೀಜಂ ಕಾಮಾಖ್ಯಾಯಾಃ ಪ್ರಚಕ್ಷತೇ ॥ ೬ ॥

ಇದಂ ಧರ್ಮಪ್ರದಂ ಕಾಮಮೋಕ್ಷಾರ್ಥಾನಾಂ ಪ್ರದಾಯಕಂ ।
ಇದಂ ರಹಸ್ಯಂ ಪರಮಮನ್ಯತ್ರ ತು ಸುದುರ್ಲಭಂ ॥ ೭ ॥

---

೪. ಕಾಮಾಖ್ಯಾದೇವಿಯ ಸ್ವರೂಪವು ಎಂತಹುದೆಂದರೆ, ಕಾಮಕಲೆಗಳಿಂದ ಕೂಡಿರುವುದು, ಕಾಮಾಖ್ಯಾದೇವಿಯ ಮೂಲಮಂತ್ರಮಧ್ಯದಲ್ಲಿ ಪ್ರಕಾಶಿಸುತ್ತಿರುವುದು ಮತ್ತು ಕಾಮಗಿರಿಪೀಠದ ಪುಟ್ಟದಲ್ಲಿ ನೆಲಸಿರುವಂತಹುದು. ಸಾಧಕನು ತನ್ನ ಇಷ್ಟಕಾಮಗಳಸಿದ್ಧಿಗಾಗಿ ಇಂತಹ ಕಾಮಾಖ್ಯಾದೇವಿಯ ಸ್ವರೂಪವನ್ನು ಧ್ಯಾನಮಾಡಬೇಕು. ಧ್ಯಾನಮಾಡುವಾಗ ಆ ದೇವಿಯ ಸ್ವರೂಪದಲ್ಲೇ ನಿಶ್ಚಲವಾದ ಮನಸ್ಸನ್ನಿಟ್ಟು ತನ್ನ ಇಷ್ಟಾರ್ಥವಾದ ಕಾಮವನ್ನೂ, ಧ್ಯೇಯದೇವತೆಯಾದ ಕಾಮಾಖ್ಯಾದೇವಿಯನ್ನೂ, ಧ್ಯಾನಮಾಡುವ ತನ್ನನ್ನೂ ಸೋಽಹಂ ಭಾವದಿಂದ ಒಂದೇವಸ್ತುವನ್ನಾಗಿ ಚಿಂತಿಸಿ ತನ್ನ ಮನಸ್ಸನ್ನು ಆ ದೇವಿಯ ಸ್ವರೂಪದಲ್ಲಿ ಲೀನವಾಗಿರುವಂತೆ ಭಾವಿಸಬೇಕು; ಎಂದರೆ ಧ್ಯಾನ, ಧ್ಯೇಯ, ಧ್ಯೇತೃಗಳೆಂಬ ಮೂರು ವಸ್ತುಗಳೂ ಒಂದೇವಸ್ತುವಿನ ಬಾಹ್ಯಸ್ವರೂಪಗಳೆಂದೂ, ಪರಮಾರ್ಥದೃಷ್ಟಿಯಿಂದ ಧ್ಯಾನಿಸಿದವೆ ಭೇದಗಳೊಂದೂ ಇಲ್ಲದೆ ನಾಶರಹಿತವಾದ ಒಂದೇ ತತ್ವವಿರುವುದೆಂದೂ, ಆ ತತ್ವವೇ ದೇವಿಯ ನಿಜಸ್ವರೂಪವೆಂದೂ ತಿಳಿಯಬೇಕು.

೫-೬. ಮೊದಲನೇ ವ್ಯಂಜನವಾದ ಕ, ಜ್ಞಾನಶಕ್ತಿಯ ಮುಂಬಿನ ವರ್ಣವಾದ ಸಕಾರ, ಶಕ್ತಿಕಬೀಜವಾದ ಈ, ಇವುಗಳಿಗೆ ಬಿಂದುವನ್ನು ಸೇರಿಸಬೇಕು ಮತ್ತು ಸೃಜಾಪತಿ ಬೀಜವಾದ ಕಕಾರ, ಶುಕ್ರಬೀಜವಾದ ಲ ಕಾರ, ಮತ್ತು ಬಿಂದುಗಳನ್ನು ಕ್ರಮವಾಗಿ ಸೇರಿಸಿದರೆ ಕಾಮಾಖ್ಯಾದೇವಿಯ ಬೀಜಾಕ್ಷರಗಳಾಗುವವು.

೭. ಈ ಮಂತ್ರವು ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳನ್ನು ಕೊಡುವುದು. ಅತಿ ರಹಸ್ಯವಾದುದು ಇನ್ನೆಲ್ಲಿಯೂ ಈ ಮಂತ್ರವು ಲಭಿಸುವುದಿಲ್ಲ.

ರ್ಯೋತ್ತ್ರೇಣೇದಂ ಯಃ ಶೃಣುಯಾದ್ಗುರುವಕ್ತ್ರಾನ್ನರೋತ್ತಮಃ ।
ಸ ಕಾಮಾನಖಿಲಾ ಪ್ರಾಪ್ಯ ಶಿವಲೋಕೇ ಮಹೀಯತೇ ॥ ೮ ॥

ಶ್ರುತಿಸಕಲಿತಸಾರಂ ದೇವಕಂಠೌಘಹಾರಂ
ಸಕಲಕಲುಷಹಾರಿ ಶ್ರೀಧರಾನಂದಕಾರಿ ।
ಸುನಯಶುಭಪಯೋಭಿರ್ಭಾಜಯೇದ್ಯದ್ಯಶೋಭಿಃ
ತದಿಹ ಶಿವ ಸಮುಸ್ತಂ ವಿಘ್ನಹಂತ್ರೀಂಗಿತಾರ್ಥಂ ॥ ೯ ॥

ನಯನಕರಭಕಾರಿ ಧ್ಯಾನಿನಾಂ ಚೋಪಕಾರಿ
ಪ್ರಣಯಿಸುನಯಸಂಸ್ಥಂ ದೇವಸತ್ಯಾಹ್ನಿಕಸ್ಥಂ ।
ಪರಮಪದವಿಶೀರ್ಣಂ ಶರ್ವಪೌರ್ಭಾಗ್ಯಜೀರ್ಣಂ
ಶೃಣು ಶಿವಪದರೂಪಂ ಕಾಮದೇವ್ಯಾಃ ಸ್ವರೂಪಂ ॥ ೧೦ ॥

ಶ್ರವಣಗಗನಾಮಾತ್ರಾಚ್ಚಾರ್ದಿತಂ ಯಸ್ಯ ನಾಮ
ಪ್ರಭವತಿ ಬಹುಭೂತ್ಯೈ ಗೀತಿಮಾರ್ಯೈಕಧಾಮ ।

---

೮. ಈ ಮಂತ್ರವನ್ನು ಗುರುಮುಖದಿಂದ ಯಾವ ನರೋತ್ತಮನು ಕೇಳುವನೋ ಅವನು ಸಕಲ ಇಷ್ಟಾರ್ಥಗಳನ್ನೂ, ಹೊಂದಿ ಶಿವಲೋಕವಲ್ಲಿ ಗೌರವಿಸಲ್ಪಡುವನು.

೯. ಮತ್ತು ಈ ಮಂತ್ರವು ಸಕಲ ವೇದಗಳ ಸಾರವು, ದೇವತೆಗಳ ಕಂಠದಲ್ಲಿ ಹಾರದಂತೆ ಸದಾ ಇರುವುದು. ಸಕಲ ಪಾಪವನ್ನೂ ನಾಶಮಾಡುವಂತಹುದು. ವಿಷ್ಣುವಿಗೆ ತುಂಬಾ ಆನಂದವನ್ನುಂಟುಮಾಡುವಂತಹುದು. ಇದರ ಉಚ್ಚಾರಣೆಯಿಂದ ಒಳ್ಳೆಯ ನೀತಿ, ಯಶಸ್ಸು ಮತ್ತೂ ಮಂಗಳವೂ ಆಗುವುವು. ಸಕಲ ರಹಸ್ಯಾರ್ಥ ಮಯವೂ, ವಿಘ್ನಗಳನ್ನು ಹೋಗಲಾಡಿಸುವಂತಹುದೂ, ಆಗಿರುವುದು.

೧೦. ಈ ಕಾಮಾಖ್ಯಾ ದೇವಿಯ ಸ್ವರೂಪವು ಕಣ್ಣುಗಳನ್ನು ಕುಕ್ಕುವಂತೆ ಅತಿ ಪ್ರಕಾಶಮಾನವಾಗಿರುವುದು. ಧ್ಯಾನಮಾಡುವ ಯೋಗಿಗಳಿಗೆ ಉಪಕಾರವನ್ನು ಮಾಡುವಂತಹುದು. ದಯಾಮಯವಾದುದು, ಈ ದೇವಿಯಲ್ಲಿ ಭಕ್ತಿಯಿಂದಿರುವವರಿಗೆ ಪರಮಪದಪ್ರಾಪ್ತಿಯನ್ನು ಕೊಡುವಂತಹುದು. ಈಶ್ವರನೇ ಮೊದಲಾದ ದೇವತೆಗಳ ಕರ್ತೃವನ್ನು ಸಹ ಪರಿಹಾರಮಾಡುವಂತಹುದು. ಇಂತಹ ಮಂಗಳಕರವಾದ ಕಾಮೇಶ್ವರೀ ದೇವಿಯ ಸ್ವರೂಪವನ್ನು ಹೇಳುವೆನು ಕೇಳು.

೧೧. ಈ ಪರಮ ಪವಿತ್ರವಾದ ಕಾಮಾಖ್ಯಾ ದೇವಿಯ ಹೆಸರನ್ನು ಶ್ರವಣದಿಂದ ಕೇಳಿದ ಮಾತ್ರದಿಂದಲೇ ಸಕಲೈಶ್ವರ್ಯಗಳೂ ಸಿದ್ಧಿಸುವವು. ಕುಂಡಲೀ ಎಂಬ ಮಹಾ

ಸುರಗಣಗಣನಾಯಾಂ ಕುಂಡಲೀ ಯಸ್ಯ ಶಕ್ತಿಃ
ತದಿಹ ಪರಮರೂಪಂ ಚಿಂತನೀಯಂ ಕೃತೀಶೈಃ ॥ ೧೧ ॥

ರವಿಶಶಿಯುತಕರ್ಣಾ ಕುಂಕುಮಾಪೀತವರ್ಣಾ
ಮಣಿಕನಕವಿಚಿತ್ರಾ ಲೋಲಕರ್ಣಾ ತ್ರಿನೇತ್ರಾ ।
ಅಭಯವರದಹಸ್ತಾ ಸಾಕ್ಷಸೂತ್ರಪ್ರಶಸ್ತಾ
ಪ್ರಣತಸುರನರೇಶಾ ಸಿದ್ಧಕಾಮೇಶ್ವರೀ ಸಾ ॥ ೧೨ ॥

ಅರುಣಕಮಲಸಂಸ್ಥಾ ರಕ್ತಪದ್ಮಾಸನಸ್ಥಾ
ನವತರುಣಶರೀರಾ ಮುಕ್ತಕೇಶೀ ಸುಹಾರಾ ।
ಶವ ಹೃದಿ ಪೃಥುತುಂಗನ್ಯಸ್ತಯುಗ್ಮಾ ಮನೋಜ್ಞಾ ।
ಶಿಶುರವಿಸಮವಸ್ತ್ರಾ ಸಿದ್ಧಕಾಮೇಶ್ವರೀ ಸಾ ॥ ೧೩ ॥

ಶಕ್ತಿಸ್ವರೂಪವಾಗಿರುವ ಈ ದೇವಿಯ ಮಂತ್ರಸ್ವರೂಪವನ್ನು ದೇವತೆಗಳು ಸಹ ತಿಳಿಯಲಾರರು. ಇಂತಹ ಪರಮಪೂಜ್ಯವಾದ ದೇವಿಯ ಸ್ವರೂಪವನ್ನು ಸಾಧಕನು ಧ್ಯಾನಮಾಡಬೇಕು.

೧೨. ಕುಂಕುಮದಂತೆ ಸ್ವಲ್ಪ ಕೆಂಪಾದ ಶರೀರಕಾಂತಿ, ಸುವರ್ಣರತ್ನಾದಿಖಚಿತವಾಗಿ ಸೂರ್ಯಚಂದ್ರರಂತೆ ಪ್ರಕಾಶಮಾನವಾಗಿ ಕಿವಿಯಲ್ಲಿ ನೇತಾಡುತ್ತಿರುವ ಕರ್ಣಾಭರಣಗಳು, ಮೂರುಕಣ್ಣುಗಳು, ಹಸ್ತಗಳಲ್ಲಿ ಶೋಭಿಸುವ ಜಪಮಾಲೆ ಅಭಯ ಹಸ್ತ, ವರದಹಸ್ತ ಇವುಗಳಿಂದ ಶೋಭಿಸುತ್ತಿರುವ ಆ ದೇವಿಗೆ ಸಿದ್ಧಕಾಮೇಶ್ವರೀ ಎಂದು ಹೆಸರು. ಈ ದೇವಿಯನ್ನು ದೇವಮನುಷ್ಯರಾದಿಯಾಗಿ ಸಮಸ್ತರೂ ಸೇವಿಸುವರು.

೧೩. ಕೆಂಪಾಗಿರುವ ಕಮಲದಲ್ಲಿ ಪದ್ಮಾಸನಾಸೀನೆಯಾಗಿ ಕುಳಿತು, ನವಯೌವನಸಂಪನ್ನವಾದ ಶರೀರವನ್ನು ಧರಿಸಿ ಪ್ರಕಾಶಿಸುತ್ತಿರುವಳು. ಬಿಚ್ಚಿ ಕೆದರಿರುವ ಸುಂದರವಾದ ಕೇಶರಾಶಿ, ಎದೆಯಲ್ಲಿ ರತ್ನಹಾರ, ಬಾಲಸೂರ್ಯನಂತೆ ಪ್ರಕಾಶಮಾನವಾದ ಪಟ್ಟೆವಸ್ತ್ರ ಇವುಗಳಿಂದ ಮನೋಹರವಾಗಿ ಒಪ್ಪುತ್ತ, ಶವದ ಹೃದಯವಿಸ್ತಾರವಾದ ತನ್ನ ಪಾದಗಳನ್ನು ಇಟ್ಟು ರಾಜಿಸುತ್ತಿರುವಳು. ಹೀಗಿರುವ ದೇವಿಯೇ ಸಿದ್ಧಕಾಮೇಶ್ವರಿಯು.

ವಿಪುಲವಿಭವದಾತ್ರೀ ಸ್ಮೇರವಕ್ತ್ರಾ ಸುಕೇಶೀ
ದಲಿತಕರಕಪೋಲಾಂತಾ ಸಾಮಿಚಂದ್ರಾವತಂಸಾ ।
ಮನಸಿಜದೃಷದಿಸ್ಥಾ ಯೋನಿಮುದ್ರಾಲಸಂತೀ
ಸಕಲಗಗನಶಕ್ತಾ ಸಂಶ್ರುತಸ್ತಾಲಭಾಗಾ ॥ ೧೪ ॥

ಚಿಂತ್ಯಾ ಚೈವಂ ವಿದ್ಯುದಗ್ನಿಪ್ರಕಾಶಾ
ಧರ್ಮಾರ್ಥಾದ್ಯಂ ಸಾಧಕೈರ್ವಾಂಛಿತಾರ್ಥೈಃ ।
ಕಲ್ಪ್ಯಂ ತತ್ರಾನ್ಯಸ್ತದಂ ಸಮ್ಯಗರ್ಘಂ
ವೇತಾಲ ತ್ವಂ ಭೈರವ ಶ್ರೀಪ್ರತಿಷ್ಠಂ । ॥ ೧೫ ॥

ತಸ್ಮಿನ್ನರ್ಘಂ ಮಂಡಲಂ ಯದ್ಧಿ ಪಶ್ಚಾತ್
ಕಾರ್ಯಂ ಚೈತಚ್ಚಂದನೈಃ ಪುಷ್ಪಯುಕ್ತೈಃ ।
ಪರ್ಯಾಯೋ ಯೋ ಲೇಖನೇ ಪೂರ್ವಯುಕ್ತೋ
ದೇವೀತಂತ್ರೇ ಸ್ತೋತ್ರಪೂರ್ವಂ ವಿಧೇಯಃ ॥ ೧೬ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚಷಷ್ಟಿತಮೋಽಧ್ಯಾಯಃ ॥

---

೧೪. ಅಲ್ಲದೆ, ಈ ದೇವಿಯು ಸಕಲೈಶ್ವರ್ಯವನ್ನೂ ಕೊಡುವಳು. ಮಂದ ಹಾಸದಿಂದೊಪ್ಪುವ ಮುಖವುಳ್ಳವಳು ಸುಂದರವಾದ ಕೇಶವುಳ್ಳವಳು. ಕರಕ ಮಂಡಲಂತಿರುವ ದಂತವುಳ್ಳವಳು. ಬಾಲಚಂದ್ರನಂತೆ ಆಹ್ಲಾದಕರಳಾಗಿರುವಳು, ಕಾಮಾಖ್ಯಾಪೀಠವೆಂಬ ಶಿಲಾಮಯವಾದ ಯೋನಿಮಂಡಲದಲ್ಲಿ ಶೋಭಿಸುತ್ತಿರುವಳು. ಆಕಾಶವನ್ನೆಲ್ಲಾ ವ್ಯಾಪಿಸಿರುವಂತೆ ದೊಡ್ಡದಾದ ಶರೀರವುಳ್ಳವಳು.

೧೫. ಮಿಂಚಿನಂತೆಯೂ ಅಗ್ನಿಯಂತೆಯೂ ಅತಿ ಪ್ರಕಾಶಮಾನಳಾಗಿರುವಳು. ಸಾಧಕರಿಗೆ ಧರ್ಮಕಾಮಾದಿಪುರುಷಾರ್ಥಗಳನ್ನು ಕೊಡುವಳು. ಸಮಸ್ತ ಇಷ್ಟಾರ್ಥಗಳನ್ನು ಕೊಡುವ ಕಾಮೇಶ್ವರೀದೇವಿಯನ್ನು ಈ ರೀತಿ ಧ್ಯಾನಮಾಡಬೇಕು. ಎಲೈ ವೇತಾಲ ಭೈರವನೇ ಕಾಮಾಖ್ಯಾಪೀಠದಲ್ಲಿ ನೆಲಸಿರುವ ದೇವಿಯನ್ನು ಈ ರೀತಿ ಧ್ಯಾನಿಸಿ ಪೂಜಾದಿಗಳನ್ನು ಮಾಡಬೇಕು.

೧೬. ಗಂಧ ಹೂವು ಮೊದಲಾದ ಸುಗಂಧದ್ರವ್ಯಗಳಿಂದ ಹಿಂದೆ ಹೇಳಿರುವಂತೆ ಅರ್ಘಮಂಡಲಾಕಾರವಾದ ಚಕ್ರವನ್ನು ಬರೆದು ಪೂಜಿಸಬೇಕು. ಈ ಲೇಖನಕ್ರಮವು ದೇವೀತಂತ್ರದಲ್ಲಿ ಹಿಂದೆಯೇ ಹೇಳ್ಪಟ್ಟಿರುವುದು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಅರವತ್ತೈದನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀಕಾಲಿಕಾಪುರಾಣೇ ಷಟ್‌ಷಷ್ಟಿತಮೋಽಧ್ಯಾಯಃ ॥

॥ ಈಶ್ವರ ಉವಾಚ ॥

ವೈಷ್ಣವೀ ತಂತ್ರಮುಂತ್ರಸ್ಯ ಯಥಾಪೂರ್ವಂ ಮಯೋದಿತಂ ।
ಮಂಡಲಪ್ರತಿಪತ್ತ್ಯಾ ತು ಪರ್ಯಾಯೋ ಮಂಡಲಸ್ಯ ಯಃ ॥ ೧ ॥

ಸ ಏವ ಪ್ರಥಮಂ ಕಾರ್ಯಃ ಶಿಲಾಯಾಂ ಪುಷ್ಪಚಂದನೈಃ ।
ಪಾತ್ರಾದೀನಾಂ ಪ್ರತಿಷ್ಠಾನಂ ತಥೈವಾತ್ರಾಪಿ ಯೋಜಯೇತ್ ॥ ೨ ॥

ವೈಷ್ಣವೀತಂತ್ರಮುಂತ್ರಸ್ಯ ಪ್ರೋಕ್ತಾ ಯಾಃ ಪ್ರತಿಪತ್ತಯಃ ।
ಅತ್ರ ತಾಸ್ಸಕಲಾ ಯೋಜ್ಯಾ ಆಸನಾದ್ಯೈಶ್ಚ ಪೂಜನಂ ॥ ೩ ॥

ಅರವತ್ತಾರನೆಯ ಅಧ್ಯಾಯವು

೧-೨. ಈಶ್ವರನು ಹೇಳಿದನು:—ವೈಷ್ಣವೀದೇವಿಯ ತಂತ್ರ ಮತ್ತು ಮುಂತ್ರ ಗಳಿಗೆ ಹಿಂದೆ ಮಂಡಲವನ್ನು ಹೇಗೆ ಹೇಳಿರುವೆನೋ ಆದರಂತೆಯೇ ಮಂಡಲಕ್ರಮ ವನ್ನೂ ಪೂಜಾಕ್ರಮವನ್ನೂ ಮಾಡಬೇಕು. ಮೊದಲು ಗಂಧಪುಷ್ಪಾದಿಗಳಿಂದ ಮಂಡಲ ವನ್ನು ರಚಿಸಬೇಕು. ಬಳಿಕ ಪಾತ್ರಾಸಾದನಕ್ರಮವನ್ನು ಹಿಂದೆ ಹೇಳಿದಂತೆಯೇ ಇಲ್ಲಿಯೂ ಮಾಡಬೇಕು.

೩. ವೈಷ್ಣವೀ ತಂತ್ರದಲ್ಲಿ ಹೇಳಿರುವ ಮಂತ್ರಪ್ರಯೋಗವನ್ನೂ, ಅನುಷ್ಠಾನ ಕ್ರಮವನ್ನೂ ಆಸನಾದಿ ಪೂಜಾಕ್ರಮವನ್ನೂ ಇಲ್ಲಿಯೂ ಮಾಡಬೇಕು. ಇವುಗಳಲ್ಲದೆ ಕೆಲವು ವಿಶೇಷಾಂಶಗಳಿರುವವು. ಅವುಗಳನ್ನು ಮಾತ್ರ ಇಲ್ಲಿ ಹೇಳುವೆನು.

ತೇಭ್ಯೋಽನ್ಯೋ ಯೋ ವಿಶೇಷೋಽತ್ರ ತದ್ವಕ್ಷ್ಯೇ ಶೃಣು ಭೈರವ ।
ಪ್ರಥಮಂ ಭಾಸ್ಕರಾಯಾರ್ಘ್ಯಂ ಪ್ರದದ್ಯಾಚ್ಛ್ವೇತಸರ್ಷಪೈಃ ॥ ೪ ॥

ಪುಷ್ಪಚಂದನಸಂವೀತೈಃ ಸಗಣಾಯ ಮಹಾತ್ಮನೇ ।
ಆಸನಾರ್ಚನಶೇಷೇ ತು ಪೀಠೋಕ್ತಾಃ ಸರ್ವದೇವತಾಃ ॥ ೫ ॥

ಪೀಠನಾಮ್ನಾ ತು ಸಂಪೂಜ್ಯ ಮಂಡಲಸ್ಯ ತು ಮಧ್ಯತಃ ।
ಧ್ಯಾನಸ್ವರೂಪಂ ಭಿನ್ನಂ ತದ್ವೈಷ್ಣವ್ಯಾ ಸಹ ಭೈರವ ॥ ೬ ॥

ಕಾಮಾಯಾಃ ಸರ್ವಮನ್ಯತ್ತು ಮಹಾಮಾಯಾಸ್ತವೋದಿತಂ ।
ಯೋಗಿನೀಸ್ತು ಚತುಷ್ಷಷ್ಟೀಃ ಪೂಜಯೇಚ್ಚ ಪೃಥಕ್ ಪೃಥಕ್ ॥ ೭ ॥

ಗುಹಾಂ ಮನೋಭವಾಂ ಚಾಪಿ ಮಹೋತ್ಸಾಹಾಂ ತಥಾ ಸಖೀಂ ।
ಅನಂತರಂ ಪೂಜಯೇತ್ತು ದಿಕ್ಪಾಲಾಂಶ್ಚ ನವಗ್ರಹಾನ್ ॥ ೮ ॥

---

೪. ಎಲೈ ಭೈರವನೇ ಕೇಳು. ಮೊದಲು ಬಿಳಿಯಸಾಸುವೆ, ಗಂಧ, ಪುಷ್ಪ, ಜಲ ಇವುಗಳಿಂದ ಸೂರ್ಯನಿಗೂ ಅವನ ಪರಿವಾರದೇವತೆಗಳಿಗೂ ಅರ್ಘ್ಯವನ್ನು ಕೊಡಬೇಕು.

೫. ಆಸನ ಪೂಜೆಯಾದಮೇಲೆ, ಪೀಠೋಕ್ತವಾದ ಸಕಲ ಪರಿವಾರದೇವತೆಗಳನ್ನೂ ಸಹ ಆ ಪೀಠನಾಮನಿಂದಲೇ ಮಂಡಲದ ಮಧ್ಯದಲ್ಲಿ ಪೂಜಿಸಬೇಕು.

೬. ಕಾಮಾಖ್ಯಾದೇವಿಗೂ ವೈಷ್ಣವಿಗೂ ಧ್ಯಾನಸ್ವರೂಪವು ಮಾತ್ರ ಬೇರೆಯಾದುದು, ಮಿಕ್ಕಾದುದೆಲ್ಲವನ್ನೂ ಮಹಾಮಾಯಾಸ್ತವದಲ್ಲಿ ಹೇಳಿರುವುದು.

೭. ಮನೋಭವಾ ಎಂಬ ಗುಹೆಯನ್ನೂ, ಮಹೋತ್ಸಾಹಾ ಮತ್ತು ಶಾರದಾ ಎಂಬ ದೇವಿಯ ಸಖಿಯರಾದ ಅಧಿದೇವತಾಪ್ರತ್ಯಧಿದೇವತೆಯರನ್ನೂ ಪೂಜಿಸಬೇಕು.

೮. ಅಮೇಲೆ ದಿಕ್ಪಾಲಕರನ್ನೂ ನವಗ್ರಹದೇವತೆಗಳನ್ನೂ ಪೂಜಿಸಬೇಕು. ಇವರೆಲ್ಲರನ್ನೂ ಪ್ರತ್ಯೇಕವಾಗಿ ಅವರವರ ರೂಪಾಲಂಕಾರ, ಆಯುಧ, ವಾಹನ ಮುಂತಾದುವುಗಳನ್ನು ಧ್ಯಾನಿಸಿ ಪೂಜಿಸಬೇಕು.

ರೂಪತಸ್ತ್ವಾ ಸಮುದ್ದಿಶ್ಯ ಪೂಜಯೇದಿಷ್ಟಸಿದ್ಧಯೇ ।
ಪೂರ್ವದ್ವಾರೇ ಗಣಪತಿಂ ಪ್ರಥಮಂ ತು ಪ್ರಪೂಜಯೇತ್ ॥ ೯ ॥

ನಂದಿನಂ ಚ ಹನೂಮಂತಂ ಪಶ್ಚಿಮದ್ವಾರಿ ಪೂಜಯೇತ್ ।
ಭೃಂಗೀ ಚೋತ್ತರತಃ ಪೂಜ್ಯೋ ಮಹಾಕಾಲಸ್ತು ದಕ್ಷಿಣೇ ॥ ೧೦ ॥

ಏತೇ ಮಮ ದ್ವಾರಪಾಲಾ ದೇವ್ಯಾ ದ್ವಾರೇ ಪ್ರಪೂಜಯೇತ್ ।
ಪಾತ್ರಾಮೃತೀಕೃತಿವಿಧೌ ಕುರ್ಯಾದ್ವೈ ಕಾಮಮುದ್ರಯಾ ॥ ೧೧ ॥

ಭೂತಾಪಸರಣಂ ಕುರ್ಯಾತ್ತ್ರಿರ್ವಾರಂ ಕಾಲತ್ರಯೇಣ ತು ।
ವಾಮಹಸ್ತೇ ದಕ್ಷಿಣೇನ ಪಾಣಿನಾ ತಾಲಮಾಹರೇತ್ ॥ ೧೨ ॥

ಹುಂ ಫಡಿತಿ ಮಂತ್ರೇಣ ವೇತಾಲಾದೀಂಶ್ಚ ಸಾರಯೇತ್ ।
ಸರ್ವಮುತ್ತರತಂತ್ರೋಕ್ತಂ ತಂತ್ರೇ ಕುರ್ಯಾತ್ತು ಸಾಧಕಃ ॥ ೧೩ ॥

ಅತ್ರೋಕ್ತೇನ ಸ್ವರೂಪೇಣ ಪ್ರಾಣಾಯಾಮಂ ತಥಾಚರೇತ್ ।
ಸ್ನಾಪಯೇತ್ಪ್ರಥಮಂ ದೇವೀಂ ಮೂಲಮಂತ್ರೇಣ ಪೂಜಕಃ ॥ ೧೪ ॥

೯-೧೦. ಭೃಂಗಿಯನ್ನು ಉತ್ತರದಲ್ಲಿಯೂ, ಮಹಾಕಾಲನನ್ನು ದಕ್ಷಿಣದಲ್ಲಿಯೂ, ಪೂಜಿಸಬೇಕು. ಇವರೆಲ್ಲರೂ ನನ್ನ ದ್ವಾರಪಾಲಕರು. ಇವರನ್ನು ದೇವಿಯ ದ್ವಾರಪಾಲಕರನ್ನಾಗಿಯೂ ಪೂಜಿಸಬೇಕು.

೧೧-೧೨. ಕಾಮಮುದ್ರೆಯಿಂದ ಪಾತ್ರೆಗಳ ಅಮೃತೀಕರಣವನ್ನು ಮಾಡಬೇಕು. ಮೊದಲು ಮೂರುಕಾಲಗಳಲ್ಲಿಯೂ ಭೂತಾಪಸರಣವನ್ನು ಮಾಡಬೇಕು. ಎಡಗೈಯಿನ ಮೇಲೆ ಬಲಗೈಯ್ಯನ್ನಿಟ್ಟು ಚಪ್ಪಾಳೆಯನ್ನು ಹೊಡೆದು ಹುಂಫಟ್ ಎಂಬ ಮಂತ್ರದಿಂದ ವೇತಾಳ ಮುಂತಾದ ಭೂತಗಳನ್ನು ಓಡಿಸಬೇಕು.

೧೩. ಉತ್ತರ ತಂತ್ರದಲ್ಲಿ ಹೇಳದುದೆಲ್ಲವನ್ನೂ ಈ ತಂತ್ರದಲ್ಲಿಯೂ ಸಾಧಕನು ಮಾಡಬೇಕು. ಈ ತಂತ್ರದಲ್ಲಿ ಹೇಳಿದ ಕ್ರಮದಂತೆಯೇ ಪ್ರಾಣಾಯಾಮವನ್ನು ಆಚರಿಸಬೇಕು.

೧೪-೧೬. ಮೊದಲು ಮೂಲಮಂತ್ರವನ್ನು ಉಚ್ಚರಿಸಿ ಜೇನುತುಪ್ಪ, ಹಾಲು ತುಪ್ಪ, ಪೊಸರು, ಗೋಮೂತ್ರ, ಗೋಮಯ ಇವುಗಳಿಂದಲೂ ರತ್ನೋದಕ, ಸಕ್ಕರೆ,

ಮಧುಕ್ಷೀರಾಜ್ಯದಧಿಭಿರ್ಗೋಮೂತ್ರೈರ್ಗೋಮಯೈಸ್ತಥಾ ।
ರತ್ನೋದಕೈಃ ಶರ್ಕರಾಭಿರ್ಗುಡರತ್ನಕುಶೋದಕೈಃ ॥ ೧೫ ॥

ಸಿತಸರ್ಷವಯುಕ್ತಾಭ್ಯಾಂ ತಿಲಕ್ಷೀರೈಸ್ತಥಾ ಯವೈಃ ।
ರಕ್ತಚಂದನಪುಷ್ಪೈಶ್ಚ ದೂರ್ವಾಭೀ ರೋಚನಾಯುತೈಃ ॥ ೧೬ ॥

ನವಭಿರ್ವಿತರೇದರ್ಘ್ಯಂ ಶಿಲಾಯಾಂ ಯೋನಿಸನ್ನಿಧೌ ।
ಆಸನಂ ಪಾದ್ಯಮರ್ಘ್ಯಂ ಚ ತತ ಆಚಮನೀಯಕಂ ॥ ೧೭ ॥

ಮಧುಪರ್ಕಂ ಸ್ನಾನಜಲಂ ವಸ್ತ್ರಚಂದನಭೂಷಣಂ ।
ಪುಷ್ಪಂ ಧೂಪಂ ಚ ದೀಪಂ ಚ ನೈತ್ರಾಂಜನಮತಃ ಪರಂ ॥ ೧೮ ॥

ನೈವೇದ್ಯಾಚಮನೀಯೇ ಚ ಪ್ರದಕ್ಷಿಣನಮಸ್ಕೃತೀ ।
ಏತೇ ಷೋಡಶ ನಿರ್ದಿಷ್ಟಾ ಉಪಚಾರಾಸ್ತು ಪೀಠತಃ ॥ ೧೯ ॥

ಆವಾಹಯೇನ್ಮಹಾದೇವೀಂ ಗಾಯತ್ರ್ಯಾ ಕಾಮಯೋಗಯಾ ।
ತಾಮೇವ ವಿದ್ಧಿ ವೇತಾಲ ವಿದ್ಧಿ ಭೈರವ ದೈವತಂ ॥ ೨೦ ॥

ಕಾಮಾಖ್ಯೇ ತ್ವಮಿಹಾಗಚ್ಛ ಯಥಾವನ್ಮಮ ಸನ್ನಿಧೌ ।
ಪೂಜಾಕರ್ಮಣಿ ಸಾನ್ನಿಧ್ಯಮಿಹ ಕಲ್ಪಯ ಭಾಮಿನಿ ॥ ೨೧ ॥

ಇವುಗಳಿಂದಲೂ ಸ್ನಾನವನ್ನು ಮಾಡಿಸಬೇಕು. ಬಕ್ಕ ಬೆಲ್ಲ, ಕುಶೋದಕ, ಬಿಳಿಯ ಸಾಸುವೆ, ಎಳ್ಳು, ಹಾಲು, ಅಕ್ಕಿ, ಕೆಂಪುಗಂಧ, ಹೂವು ಗಂಧಮಿಶ್ರವಾದ ಹುಲ್ಲು ಗರಿಕೆ, ಈ ಒಂಭತ್ತು ದ್ರವ್ಯಗಳಿಂದ ಶಿಲಾರೂಪವಾದ ಕಾಮಾಖ್ಯಾದೇವಿಯ ಯೋನಿ ಮಂಡಲದಲ್ಲಿ ಅರ್ಘ್ಯಪ್ರದಾನವನ್ನು ಮಾಡಬೇಕು.

೧೭-೧೯. ಆಸನ, ಪಾದ್ಯ, ಅರ್ಘ್ಯ, ಆಚಮನೀಯ, ಮಧುಪರ್ಕ, ಸ್ನಾನ, ವಸ್ತ್ರ, ಗಂಧ, ಅಲಂಕಾರ, ಪುಷ್ಪ, ಧೂಪ, ದೀಪ, ನೈವೇದ್ಯ, ಆಚಮನೀಯ. ಪ್ರದಕ್ಷಿಣ, ನಮಸ್ಕಾರ ಈ ಹದಿನಾರು (೧೬) ಉಪಚಾರಗಳನ್ನು ಪೀಠಕ್ಕೆ ಮಾಡಬೇಕು.

೨೦ ೨೧. ಓ ಕಾಮಾಖ್ಯಾದೇವಿಯೇ, ನಾನು ಮಾಡುತ್ತಿರುವ ಈ ಪೂಜಾ ಮಂಡಲಕ್ಕೆ ಬಂದು ನಿನ್ನ ಸನ್ನಿಧಿಯನ್ನು ಇಲ್ಲಿ ಉಂಟುಮಾಡು, ಎಂದು ಪ್ರಾರ್ಥಿಸಿ, ಮುಂದೆ ಹೇಳುವ ಕಾಮಾಖ್ಯಾಗಾಯತ್ರಿಯಿಂದ ದೇವಿಯನ್ನು ಆವಾಹನೆಮಾಡಬೇಕು. ಈ ಪೂಜಾಕಲ್ಪಕ್ಕೆ ಈ ಕಾಮಾಖ್ಯಾದೇವಿಯೇ ದೇವತೆಯು.

ಕಾಮಾಖ್ಯಾಯೈ ಚ ವಿದ್ಮಹೇ ಕಾಮೇಶ್ವರ್ಯೈ ಚ ಧೀಮಹಿ ।
ತತಃ ಕುರ್ಯಾನ್ಮಹಾದೇವೀ ತತಶ್ಚಾನುಪ್ರಚೋದಯಾತ್ ॥ ೨೨ ॥

ಏಷಾ ತು ಕಾಮುಗಾಯತ್ರೀ ಪೂಜಯೇದನಯಾ ಶುಭಾಂ ।
ಪೂಜಾವಸಾನೇ ಚ ಬಲಿಂ ದೇವ್ಯಾ ಪ್ರೀತ್ಯೈ ನಿವೇದಯೇತ್ ॥ ೨೩ ॥

ರುದ್ರಾಕ್ಷಮಾಲಯಾ ಜಾಪ್ಯಮಾದಾಯೈವ ಸಮಾಚರೇತ್ ।
ನಾಕ್ಷರೈರ್ಮೂಲಮಂತ್ರಸ್ಯ ತ್ರಿಧಾವೃತ್ತಿಂ ಪ್ರಪೂಜಯೇತ್ ॥ ೨೪ ॥

ಕಾಮಾಖ್ಯಾಯಾಃ ಷಡಂಗಾನಿ ಆಹ್ವಾನಾನಂತರೇ ತಥಾ ।
ವೈಷ್ಣವೀತಂತ್ರಮಂತ್ರಸ್ಯ ಕರಾಂಗನ್ಯಾಸಯೋಶ್ಚ ಯೇ ॥ ೨೫ ॥

ಸುರಾಃ ಪ್ರೋಕ್ತಾಸ್ತ್ವೈಃ ಸುರೈಸ್ತು ಸಾರ್ಧಚಂದ್ರೈಃ ಸಬಿಂದುಕೈಃ ।
ಮೂಲಮಂತ್ರಾದ್ಯಕ್ಷರಾಭ್ಯಾಂ ಯುಗಪತ್ತು ನಿಯೋಜಿತೈಃ ॥ ೨೬ ॥

---

೨೨. "ಕಾಮಾಖ್ಯಾಯೈ ಚ ವಿದ್ಮಹೇ ಕಾಮೇಶ್ವರ್ಯೈ ಚ ಧೀಮಹಿ । ತನ್ನೋ ಮಹಾದೇವೀ ಪ್ರಚೋದಯಾತ್ ॥" ಈ ಮಂತ್ರವು ಕಾಮಾಖ್ಯಾದೇವಿಯ ಗಾಯತ್ರಿಯು. ಈ ಮಂತ್ರವನ್ನು, ದೇವಿಯನ್ನು ಆವಾಹನೆಮಾಡುವಾಗಲೂ, ಜಪ ಮಾಡುವಾಗಲೂ, ಉಪಯೋಗಿಸಬೇಕು. "ಕಾಮಾಖ್ಯಾದೇವಿಯನ್ನು ಧ್ಯಾನಿಸಿ ಉಪಾಸನೆಮಾಡುವೆವು. ಎಲೈ ಕಾಮೇಶ್ವರೀದೇವಿಯೇ ನೀನು ನಮ್ಮ ಬುದ್ಧಿಯನ್ನು ಪ್ರೇರಿಸುವಳಾಗು" ಎಂದು ಈಮಂತ್ರದ ಸಂಕ್ಷೇಪಾರ್ಥವು.

೨೩. ಮೇಲೆ ಹೇಳಿದ ಮಂತ್ರವು ಕಾಮುಗಾಯತ್ರಿಯು. ಅದರಿಂದ ಕಾಮೇಶ್ವರಿಯನ್ನು ಪೂಜಿಸಬೇಕು. ಪೂಜೆಯ ಕೊನೆಯಲ್ಲಿ ದೇವಿಯ ಪ್ರೀತಿಗಾಗಿ ಬಲಿಯನ್ನು ಕೊಡಬೇಕು.

೨೪. ರುದ್ರಾಕ್ಷಮಾಲೆಯಿಂದ ಜಪವನ್ನು ಮಾಡಬೇಕು. ಕೇವಲ ಮೂಲ ಮಂತ್ರದ ಅಕ್ಷರಗಳಿಂದ ಮಾಡಬಾರದು. ಮೂರು ಬಾರಿ ಹಿಂದೆ ಹೇಳಿದಂತೆ ಪೂಜಿಸ ಬೇಕು.

೨೫-೨೬. ಆವಾಹನವನ್ನು ಮಾಡಿದ ಮೇಲೆ ಕಾಮಾಖ್ಯಾದೇವಿಯ ಷಡಂಗನ್ಯಾಸವನ್ನೂ ಕರನ್ಯಾಸವನ್ನೂ ಮಾಡಬೇಕು. ವೈಷ್ಣವೀತಂತ್ರಮಂತ್ರಗಳಿಗೆ ಅಂಗ ನ್ಯಾಸ ಕರನ್ಯಾಸಗಳಿಗಾಗಿ ಹೇಳಿರುವ ದೇವತೆಗಳೇ ಈ ಮಂತ್ರಕ್ಕೂ ದೇವತೆಗಳು. ಮೂಲಮಂತ್ರದ ಎರಡೆರಡು ಅಕ್ಷರಗಳಿಗೆ ಅನುಸ್ವಾರವನ್ನು ಸೇರಿಸಿಕೊಂಡು ಕನಿಷ್ಠ (ಕಿರುಬೆರಳು) ಅಂಗುಲಿ ಮೊದಲುಮಾಡಿಕೊಂಡು ಅಂಗನ್ಯಾಸ ಕರನ್ಯಾಸಗಳನ್ನು ಮಾಡಬೇಕು.

ಕನಿಷ್ಠಾದಿಕ್ರಮೇಣೈವ ಷ್ಡಂಗನ್ಯಾಸಂ ಸಮಾಚರೇತ್ ।
ಅಂಗನ್ಯಾಸಕರನ್ಯಾಸೌ ಕೃತ್ವಾ ಪಶ್ಚಾತ್ತು ಸಾಧಕಃ ॥ ೨೭ ॥

ಹೃಚ್ಛಿರಸ್ತು ಶಿಖಾ ವರ್ಮ ನೇತ್ರಸ್ಯೋದರಪೃಷ್ಠತಃ ।
ಬಾಹ್ವೋಃ ಪಾಣ್ಯೋರ್ಜಂಘಯೋಶ್ಚ ಪಾದಯೋಶ್ಚಾಪಿ ವಿನ್ಯಸೇತ್ ॥

ಅಭಯಂ ವರದಂ ಹಸ್ತಮಕ್ಷಮಾಲಾಂ ಚ ಸೂತ್ರಕಂ ।
ಪೂಜಯೇಚ್ಚಶಿನಂ ಸೂರ್ಯಂ ಶಿರಶ್ಚಂದ್ರಕಲಾಂ ತಥಾ ॥ ೨೯ ॥

ರಕ್ತಪದ್ಮಂ ಶವಂ ಚೈವ ಲೌಹಿತ್ಯಂ ಬ್ರಹ್ಮಪುತ್ರಕಂ ।
ಮನೋಭವಂ ಶಿಲಾಂ ತತ್ರ ಶಕ್ತಿಸ್ಥಾಂ ಶವಮುಧ್ಯತಃ ॥ ೩೦ ॥

ದೇವ್ಯಾಃ ಪ್ರಪೂಜಯೇದ್ಭಕ್ತಃ ಕರವಾಲಂ ಚ ಪಾರ್ಶ್ವತಃ ।
ಪೀಠಾದಿದೇವತಾಸ್ತತ್ರ ಯಜೇತ್ಕಾಮೇಶ್ವರೀಂ ಶುಭಾಂ ॥ ೩೧ ॥

ತ್ರಿಪುರಾಂ ಪೂಜಯೇನ್ಮಧ್ಯೇ ಪೀಠಪ್ರತ್ಯಧಿದೇವತಾಂ ।
ಶಾರದಾಂ ಚ ಮಹೋತ್ಸಾಹಾಂ ಮಧ್ಯ ಏವ ಪ್ರಪೂಜಯೇತ್ ॥ ೩೨ ॥

೨೭-೨೮. ಅಂಗನ್ಯಾಸಕರನ್ಯಾಸಗಳನ್ನು ಮಾಡಿದಮೇಲೆ, ಸಾಧಕನು ಹೃದಯ, ಶಿರಸ್ಸು, ಶಿಖೆ, ವರ್ಮ, ನೇತ್ರ, ಉದರ, ಬಾಹು, ಕೈಗಳು, ಜಂಘೆಗಳು (ತೊಡೆ) ಇವುಗಳಲ್ಲಿಯೂ ನ್ಯಾಸವನ್ನು ಮಾಡಬೇಕು.

೨೯-೩೦. ದೇವಿಯ ಅಭಯವರದಹಸ್ತಗಳನ್ನೂ, ಅಕ್ಷಸೂತ್ರವೆಂಬ ಜಪಮಾಲೆ, ಚಂದ್ರ, ಸೂರ್ಯ, ಶಿರಸ್ಸಿನಲ್ಲಿರುವ ಚಂದ್ರಕಲೆ, ರಕ್ತಕಮಲ, ದೇವಿಯ ಆಸನವಾದ ಶವ, ಬ್ರಹ್ಮಪುತ್ರನಾದ ಲೌಹಿತ್ಯನದಿ, ಶಕ್ತಿಶಿಲಾ ಇವುಗಳನ್ನೂ, ಶವ ಮಧ್ಯದಲ್ಲಿ ಇರುವ ಶಕ್ತಿಶಿಲೆಯಮೇಲೆ ಮನ್ಮಥನನ್ನೂ ಸಹ ಪೂಜಿಸಬೇಕು.

೩೧. ದೇವಿಯ ಖಡ್ಗನನ್ನು ಪಾರ್ಶ್ವದಲ್ಲಿ ಪೂಜಿಸಬೇಕು. ಪೀಠದೇವತೆಗಳನ್ನೂ ಕಾಮೇಶ್ವರಿಯನ್ನೂ ಆ ಪೀಠದಲ್ಲಿ ಪೂಜಿಸಬೇಕು.

೩೨. ಪೀಠದ ಮಧ್ಯದಲ್ಲಿ ಪ್ರಧಾನದೇವತೆಯಾದ ತ್ರಿಪುರಾದೇವಿಯನ್ನೂ, ಆ ಪೀಠದಲ್ಲಿಯೇ ದೇವಿಯ ಎಡಬಲಪಾರ್ಶ್ವಗಳಲ್ಲಿ ಅಧಿದೇವತಾಪ್ರತ್ಯಧಿದೇವತೆಗಳಾದ ಶಾರದಾ, ಮಹೋತ್ಸಾಹಾ ಎಂಬ ದೇವಿಯರನ್ನೂ ಪೂಜೆಮಾಡಬೇಕು.

ಚಂಡೇಶ್ವರೀ ಮಹಾದೇವೀ ದೇವ್ಯಾ ನಿರ್ಮಾಲ್ಯಧಾರಿಣೀ ।
ಯೋನಿಮುದ್ರಾ ಸಮಾಖ್ಯಾತಾ ಕಾಮಾಖ್ಯಾಯಾ ವಿಸರ್ಜನೇ ॥ ೩೩ ॥

ಇದಂ ದ್ರವ್ಯಂ ತು ಸಿಂದೂರಚಂದನಾಗರುಕುಂಕುಮೈಃ ।
ಇತಿ ಯೋ ಹಿ ಮಯಾ ಪ್ರೋಕ್ತೋ ವಿಶೇಷಃ ಪರಿಪೂಜನೇ ॥ ೩೪ ॥

ಏಭಿರ್ವಿಶೇಷೈಃ ಸಹಿತಂ ವೈಷ್ಣವೀತಂತ್ರಗೋಚರಂ ।
ಸರ್ವಂ ಕೃತ್ಯಂ ಸಮಾಸಾದ್ಯ ಕಾಮಾಖ್ಯಾಂ ಪರಿಪೂಜಯೇತ್ ॥ ೩೫ ॥

ಅನೇನೈವ ವಿಧಾನೇನ ಕಾಮಾಖ್ಯಾಂ ಯಸ್ತು ಪೂಜಯೇತ್ ।
ಮನೋಭವಗುಹಾಮಧ್ಯೇ ಸ ಯಾತಿ ಪರಮಾಂ ಗತಿಂ ॥ ೩೬ ॥

ಬ್ರಹ್ಮಾಣೀ ಚಂಡಿಕಾ ರೌದ್ರೀ ಗೌರೀಂದ್ರಾಣೀ ತಥೈವ ಚ ।
ಕೌಮಾರೀ ವೈಷ್ಣವೀ ದುರ್ಗಾ ನಾರಸಿಂಹೀ ಚ ಕಾಲಿಕಾ ॥ ೩೭ ॥

---

೩೩. ಚಂಡೇಶ್ವರಿಯೆಂಬ ಮಹಾದೇವಿಯು ದೇವಿಯ ನಿರ್ಮಾಲ್ಯವನ್ನು ಧರಿಸುವವಳು. ಅವಳನ್ನೂ ಪೂಜಿಸಬೇಕು. ಯೋನಿಮುದ್ರೆಯಿಂದ ದೇವಿಯನ್ನು ವಿಸರ್ಜಿಸಬೇಕು.

೩೪-೩೫. ಸಿಂಧೂರ, ಚಂದನ, ಅಗರು, ಕುಂಕುಮ, ಇವು ದೇವಿಯ ಪೂಜಾದ್ರವ್ಯಗಳು. ಈರೀತಿಯಾಗಿ ನಾನು ಹೇಳಿರುವ ವಿಶೇಷವನ್ನೂ, ವೈಷ್ಣವೀ ತಂತ್ರದಲ್ಲಿ ಹೇಳಿರುವ ವಿಧಾನವನ್ನೂ ಅನುಸರಿಸಿ, ಕಾಮಾಖ್ಯಾದೇವಿಯನ್ನು ಪೂಜಿಸಬೇಕು.

೩೬. ಈ ವಿಧಾನದಿಂದ ಕಾಮಾಖ್ಯಾದೇವಿಯನ್ನು ಮನೋಭವ ಗುಹೆಯ ಮಧ್ಯದಲ್ಲಿ ಯಾವನು ಪೂಜಿಸುವನೋ ಅವನು ಉತ್ತಮಗತಿಯನ್ನು ಹೊಂದುವನು.

೩೭-೪೪. ಬ್ರಹ್ಮಾಣೀ, ಚಂಡಿಕೆ, ರೌದ್ರೀ, ಗೌರಿ, ಇಂದ್ರಾಣೀ, ಕೌಮಾರೀ, ವೈಷ್ಣವೀ, ದುರ್ಗೇ, ನಾರಸಿಂಹೀ, ಕಾಲಿಕಾದೇವಿ, ಚಾಮುಂಡಾ, ಶಿವದೂತೀ, ವಾರಾಹೀ, ಕೌಶಿಕೀ, ಮಾಹೇಶ್ವರೀ, ಶಾಂಕರೀ, ಜಯಂತೀ, ಸರ್ವಮಂಗಲಾ, ಕಾಲೀ, ಕಪಾಲಿನೀ, ಮೇಘಾದೇವಿ, ಶಿವಾದೇವಿ, ಶಾಕಂಭರೀ, ಭೀಮಾ, ಶಾಂತಾ, ಭ್ರಾಮರೀದೇವಿ, ರುದ್ರಾಣೀ, ಅಂಬಿಕಾ, ಕ್ಷಮಾದೇವಿ, ಧಾತ್ರೀ, ಸ್ವಾಹಾ, ಸ್ವಧಾ,

ಚಾಮುಂಡಾ ಶಿವದೂತೀ ಚ ವಾರಾಹೀ ಕೌಶಿಕೀ ತಥಾ ।
ಮಾಹೇಶ್ವರೀ ಶಾಂಕರೀ ಚ ಜಯಂತೀ ಸರ್ವಮಂಗಲಾ ॥ ೩೮ ॥

ಕಾಲೀ ಕಪಾಲಿನೀ ಮೇಧಾ ಶಿವಾ ಶಾಕಂಭರೀ ತಥಾ ।
ಭೀಮಾ ಶಾಂತಾ ಭ್ರಾಮರೀ ಚ ರುದ್ರಾಣೀ ಚಾಂಬಿಕಾ ತಥಾ ॥ ೩೯ ॥

ಕ್ಷಮಾ ಧಾತ್ರೀ ತಥಾ ಸ್ವಾಹಾ ಸ್ವಧಾಽಪರ್ಣಾ ಮಹೋದರೀ
ಘೋರರೂಪಾ ಮಹಾಕಾಲೀ ಭದ್ರಕಾಲೀ ಭಯಂಕರೀ ॥ ೪೦ ॥

ಕ್ಷೇಮಂಕರೀ ಚೋಗ್ರದಂಡಾ ಚಂಡೋಗ್ರಾ ಚಂಡನಾಯಿಕಾ ।
ಚಂಡಾ ಚಂಡಾವತೀ ಚಂಡೀ ಮಹಾಮೋಹಾ ಪ್ರಿಯಂಕರೀ ॥೪೧॥

ಕಲವಿಕರೀಣೀ ದೇವೀ ಬಲಪ್ರಮಥಿನೀ ತಥಾ ।
ಮದನೋನ್ಮಥಿನೀ ದೇವೀ ಸರ್ವಭೂತಸ್ಯ ದಾಮನೀ ॥ ೪೨ ॥

ಉಮಾ ತಾರಾ ಮಹಾನಿದ್ರಾ ವಿಜಯಾ ಚ ಜಯಾ ತಥಾ ।
ಪೂರ್ವೋಕ್ತಾಃ ಶೈಲಪುತ್ರ್ಯಾದ್ಯಾಃ ಯೋಗಿನ್ಯಷ್ಟೌ ಚ ಯಾಃ ಕ್ರಮಾತ್ ॥

ತಾಭಿರೇಭಿಶ್ಚ ಸಹಿತಾಶ್ಚತುಷ್ಷಷ್ಟೀಶ್ಚ ಯೋಗಿನೀಃ ।
ಪೂಜಯೇನ್ಮಂಡಲಸ್ಯಾಂತಃ ಸರ್ವಕಾಮಾರ್ಥಸಿದ್ಧಯೇ ॥ ೪೪ ॥

ನಾನಾವಿಧಂ ತು ನೈವೇದ್ಯಂ ಪಾನಂ ಪಾಯಸಮೇವಚ ।
ಮೋದಕಾಪೂಪಪಿಷ್ಟಾದಿ ದೇವ್ಯೈ ಸಮ್ಯಕ್ಪ್ರದಾಪಯೇತ್ ॥ ೪೫ ॥

ಅಪರ್ಣಾದೇವಿ, ಮಹೋದರೀ, ಘೋರರೂಪಾ, ಮಹಾಕಾಲೀ, ಭದ್ರಕಾಲೀ, ಭಯಂಕರೀ, ಕ್ಷೇಮಂಕರೀ, ಉಗ್ರದಂಡಾದೇವಿ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಡವತೀ, ಚಂಡೀ, ಮಹಾಮೋಹಾ, ಪ್ರಿಯಂಕರೀದೇವಿ, ಕಲವಿಕರಿಣೀ, ಬಲಪ್ರಮಥಿನೀದೇವಿ, ಮದನೋನ್ಮಥಿನೀದೇವಿ, ಸರ್ವಭೂತದಮನೀದೇವೀ, ಉಮಾ, ತಾರಾ, ಮಹಾನಿದ್ರಾ, ವಿಜಯಾ, ಜಯಾ, ಹಿಂದೆ ಹೇಳಿದ ಶೈಲಪುತ್ರಿಯೇ ಮೊದಲಾದ ಎಂಟುಜನ ಯೋಗಿನಿಯರು, ಇವರುಗಳು, ಮೇಲೆಹೇಳಿದವರೆಲ್ಲಾ ಒಟ್ಟು ಅರವತ್ತನಾಲ್ಕು (64) ಯೋಗಿನಿಯರಾಗುವರು. ಇವರನ್ನು ಮಂಡಲದ ಮಧ್ಯದಲ್ಲಿ ಸಕಲ ಇಷ್ಟಾರ್ಥ ಸಿದ್ಧಿಗಾಗಿ ಪೂಜಿಸಬೇಕು.

೪೫. ಪಾನ, ಪಾಯಸ, ಮೋದಕ, ಕರಿಗಡಬು, ತಂಬಿಟ್ಟು, ಮೊದಲಾದ ಅನೇಕ ಬಗೆಯ ನೈವೇದ್ಯಗಳನ್ನು ದೇವಿಗೆ ನಿವೇದಿಸಬೇಕು.

ಏವಂ ತು ಪೂಜಯೇದ್ದೇವೀಂ ಕಾಮಾಖ್ಯಾಂ ವರದಾಯಿನೀಂ।
ಭಕ್ತ್ಯಾಯುಕ್ತೋ ನರೋ ಯಸ್ತು ಸ ಸರ್ವಾನ್ ಲಭತೇ ಪ್ರಿಯಾನ್ ॥ ೪೬ ॥

ಮಹೋತ್ಸಾಹಾ ತು ಯಾ ದೇವೀ ಮಹಾಮಾಯಾ ತು ಸಾ ಸ್ಮೃತಾ।
ವೈಷ್ಣವೀತಂತ್ರಮಂತ್ರೇಣ ಸಾ ಪೂಜ್ಯಾ ಯೋನಿಮಂಡಲೇ ॥ ೪೭ ॥

ತದೇವ ಮಂಡಲಂ ಚಾಸ್ಯ ಹ್ಯಂಗನ್ಯಾಸಂ ತಥೈವ ಚ ।
ಸಾ ಏವ ಪೂಜಾ ಪರ್ಯಾಯೇ ತಧ್ಧ್ಯಾನಂ ಸೈವ ದೇವತಾ ॥ ೪೮ ॥

ತಂತ್ರಂ ತದೇವಮುಕ್ತಂ ತು ತಸ್ಯಾನ್ನಾನ್ಯಂ ತು ಕಿಂಚನ।
ಮಂಡಲಾದಿವಿಸೃಷ್ಟ್ಯರ್ಥಂ ಮಹಾಮಾಯಾಮಹೋತ್ಸವೇ ॥ ೪೯ ॥

ಯತ್ಪ್ರೋಕ್ತಂ ತೇನ ತಾಂ ದೇವೀಂ ಮಹೋತ್ಸಾಹಾಂ ತು ಮಂಡಲೇ।
ಸ್ನಾನಂ ಪೂರ್ವಂ ಪೂಜಯೇತ್ತು ಮಧ್ವಾಜ್ಯಾದಿಭಿರಾಸವೈಃ ॥ ೫೦ ॥

೪೬, ಈ ರೀತಿಯಾಗಿ ವರದಾಯಕಿಯಾದ ಕಾಮಾಖ್ಯಾದೇವಿಯನ್ನು ಭಕ್ತಿಯಿಂದ ಯಾವನು ಪೂಜಿಸುವನೋ ಅವನು ಸಕಲ ಇಷ್ಟಾರ್ಥಗಳನ್ನೂ ಹೊಂದುವನು.

೪೭. ಮಹೋತ್ಸಾಹಾದೇವಿಯು ಮಹಾಮಾಯೆಯ್ವಸರೂಪಳು. ವೈಷ್ಣವೀ ತಂತ್ರದಲ್ಲಿ ಹೇಳಿದ ಮಂತ್ರದಿಂದ ಅವಳನ್ನು ಯೋನಿಮಂಡಲದಲ್ಲಿ ಪೂಜಿಸಬೇಕು.

೪೮. ಅದರಂತೆ ವೈಷ್ಣವೀತಂತ್ರದಲ್ಲಿ ಹೇಳಿದಂತೆಯೇ ಅಂಗನ್ಯಾಸವು, ಅದರಂತೆಯೇ ಪೂಜಾಕ್ರಮವು, ಅದರಂತೆಯೇ ಧ್ಯಾನವು, ಅವಳೇ ದೇವತೆಯು.

೪೯-೫೦. ಅದೇ ತಂತ್ರವು, ಅದರಲ್ಲಿ ಏನುಹೇಳಿದೆಯೋ ಅದರಂತೆಯೇ ಮಾಡಬೇಕು. ಅದಕ್ಕಿಂತಲೂ ವ್ಯತ್ಯಾಸವೇನೂ ಇಲ್ಲ. ಮಹಾಮಾಯೆಯ ಮಹೋತ್ಸವದಲ್ಲಿ ಮಂಡಲಾದಿಗಳ ವಿಸರ್ಜನೆಗಾಗಿ ಯಾವ ಕ್ರಮವನ್ನು ಹೇಳಿರುವುದೋ ಅದರಂತೆಯೇ ಮಧು, ತುಪ್ಪ ಮೊದಲಾದುವುಗಳಿಂದಲೂ ಮದ್ಯದಿಂದಲೂ ಸ್ನಾನ ಪೂರ್ವಕವಾಗಿ ಮಹೋತ್ಸಾಹಾದೇವಿಯನ್ನು ಪೂಜಿಸಿ ವಿಸರ್ಜನೆ ಮಾಡಬೇಕು.

ಶೃಣುತಂ ತ್ರಿಪುರಾಮಾರ್ಚೇಃ ಕಾಮಾಖ್ಯಾಯಾಃ ಪ್ರಪೂಜನಂ ।
ಏತಸ್ಯಾ ಮೂಲಮಂತ್ರಂ ತು ಪೂರ್ವಮುತ್ತರಮಂತ್ರಕೇ ॥ ೫೧ ॥

ಯುವಯೋರಿಷ್ಟಯೋಃ ಸಮ್ಯಕ್ಪ್ರಮಾತ್ತತ್ಪ್ರತಿಪಾದಿತಂ ।
ವಾಗ್ಭವಂ ಕಾಮರಾಜಂ ತು ಡಾಮರಂ ಚೇತಿ ತತ್ತ್ರಯಂ ॥ ೫೨ ॥

ಸರ್ವಧರ್ಮಾರ್ಥಕಾಮಾದಿಸಾಧಕಂ ಕುಂಡಲೀಯುತಂ ।
ತ್ರೀಣ್ಯಸ್ಯಾ ತ್ತ್ರಿಪುರತೋ ದದ್ಯಾದ್ದುರ್ಗಾ ಧ್ಯಾತಾ ಮಹೇಶ್ವರೀ ॥ ೫೩ ॥

ತ್ರಿಪುರೇತಿ ತತಃ ಖ್ಯಾತಾ ಕಾಮಾಖ್ಯಾ ಕಾಮರೂಪಿಣೀ ।
ತಸ್ಯಾಸ್ತು ಸ್ನಾಪನಂ ಯಾದೃಕ್ಕಾಮಾಖ್ಯಾಯಾಃ ಪ್ರಕೀರ್ತಿತಂ ॥ ೫೪ ॥

ತೇನೈವ ಸ್ನಾಪನಂ ಕುರ್ಯಾನ್ಮೂಲಮಂತ್ರೇಣ ಪೂಜಕಃ ।
ತ್ರಿಗುಣಂ ಮಂಡಲಂ ಚಾಸ್ಯಾಸ್ತ್ರಿಪುರಂ ತು ತ್ರಿರೇಖಕಂ ॥ ೫೫ ॥

---

೫೧. ಎಲೈ ವೇತಾಲಭೈರವರೇ! ಈಗ ಕಾಮಾಖ್ಯಾದೇವಿಯ ಮತ್ತೊಂದು ರೂಪವಾದ ತ್ರಿಪುರಾದೇವಿಯ ಪೂಜೆಯನ್ನು ಹೇಳುವೆನು ಕೇಳಿರಿ, ಈ ತ್ರಿಪುರಾದೇವಿಯ ಮೂಲಮಂತ್ರವನ್ನು ಪ್ರಿಯರಾದ ನಿಮಗೆ ಹಿಂದೆ ಉತ್ತರತಂತ್ರದಲ್ಲಿ ಕ್ರಮವಾಗಿ ಹೇಳಿಯೇ ಇರುವೆನು.

೫೨. ವಾಗ್ಭವ, ಕಾಮರಾಜ, ಡಾಮರಗಳೆಂಬ ಈ ಮೂರು ಮಂತ್ರಗಳೇ ತ್ರಿಪುರಾದೇವಿಯ ಮೂಲಮಂತ್ರವು. ಕುಂಡಲೀಬಿಂದುಯುಕ್ತವಾವ ಈ ಮಂತ್ರಗಳು ಸಕಲ ಧರ್ಮ, ಅರ್ಥ, ಕಾಮಗಳನ್ನು ನೀಡುವುವು.

೫೩. ಮಹೇಶ್ವರಿಯಾದ ದುರ್ಗಾದೇವಿಯು ಧ್ಯಾನಮಾಡಿದವರಿಗೆ ಪ್ರತ್ಯಕ್ಷಳಾಗಿ ಧರ್ಮಾರ್ಥ ಕಾಮ ಈ ಮೂರನ್ನೂ ಎಮರಿನಲ್ಲಿಯೇ ಕೊಡುವುದರಿಂದ ಅವಳಿಗೆ ತ್ರಿಪುರಾ ಎಂಬ ಹೆಸರಾಯಿತು. ಅವಳೇ ಕಾಮರೂಪಿಣಿಯಾದ ಕಾಮಾಖ್ಯಾದೇವಿಯು.

೫೪. ಕಾಮಾಖ್ಯಾದೇವಿಗೆ ಹೇಳಿದ ವಿಧಿಯಂತೆಯೇ ಈ ತ್ರಿಪುರಾದೇವಿಗೂ ಸ್ನಾನವನ್ನು ಮೂಲಮಂತ್ರದಿಂದ ಮಾಡಿಸಬೇಕು.

೫೫. ಅವಳ ಮಂಡಲವು ಮೂರುಗುಣಗಳುಳ್ಳದುದು. ಮೂರುಪುರಗಳುಳ್ಳದ್ದು. ಮೂರು ರೇಖೆಗಳುಳ್ಳದುದು. ಅವಳ ಮಂತ್ರವೂ ಮೂರು ಅಕ್ಷರಗಳುಳ್ಳದ್ದು. ರೂಪಗಳೂ ಮೂರು.

ಮಂತ್ರಂ ತು ತ್ರ್ಯಕ್ಷರಂ ಜ್ಞೇಯಂ ತಥಾ ರೂಪಂ ತ್ರಯಂ ಪುನಃ ।
ತ್ರಿವಿಧಾ ಕುಂಡಲೀ ಶಕ್ತಿಸ್ತ್ರಿದೇವಾನಾಂ ಚ ಸೃಷ್ಟಯೇ ॥ ೫೬ ॥

ಸರ್ವಂ ತ್ರಯಂ ತ್ರಯಂ ಯಸ್ಮಾತ್ತ್ರಿಪುರಾ ತೇನ ಸಾ ಸ್ಮೃತಾ ।
ಉದೀಚ್ಯಾದ್ಯಥ ಪೂರ್ವಾಂತಾ ರೇಖಾಃ ಕಾರ್ಯಾಸ್ತು ಮಂಡಲೇ ॥೫೭॥

ತ್ರಿಸ್ತ್ರಿರೇಖಾಸ್ತು ಕರ್ತವ್ಯಾಸ್ತಾ ಏವ ಪುಷ್ಪಚಂದನೈಃ ।
ಐಶಾನ್ಯಾಮಥ ನೈರ್ಋತ್ಯಾಂ ಮಂತ್ರಂ ಕೃತ್ವಾ ತು ಸಂಲಿಖೇತ್ ॥ ೫೮ ॥

ನೈರ್ಋತ್ಯಾಂ ಚೈವ ವಾಯವ್ಯಾಂ ತತೋ ಹ್ಯೈಶಾನ್ಯಗಾಂ ಪುನಃ ।
ಏವಂ ತ್ರಿಕೋಣಂ ವಿಲಿಖೇನ್ಮಂಡಲಸ್ಯಾಂತರೇ ಪುನಃ ॥ ೫೯ ॥

ಐಶಾನ್ಯಾದ್ಯಾಸ್ತು ಯಾ ರೇಖಾ ಸಾ ತು ಶಕ್ತಿರ್ನಿಗದ್ಯತೇ ।
ನೈರುತ್ಯಾಂ ವಾಯವೀಯಾಂತಾಂ ತತೋ ಹ್ಯೈಶಾನ್ಯಗಾ ತು ಯಾ ॥ ೬೦ ॥

---

೫೬. ಬ್ರಹ್ಮ ವಿಷ್ಣು ಮಹೇಶ್ವರರನ್ನು ಸೃಷ್ಟಿಸಬಲ್ಲ ಮೂರುವಿಧವಾದ ಕುಂಡಲೀ ಶಕ್ತಿಯು ಅವಳಿಗಿರುವುದು. ಈರೀತಿಯಾಗಿ ಆ ದೇವಿಗೆ ಎಲ್ಲವೂ ಮೂರು ಮೂರು ಇರುವುದರಿಂದ "ತ್ರಿಪುರಾ" ಎಂದು ಹೆಸರಾಯಿತು.

೫೭. ಮಂಡಲದಲ್ಲಿ ಉತ್ತರ ಮೊದಲುಗೊಂಡು ಪೂರ್ವದ ಕೊನೆಯವರೆಗೆ ಮೂರು ಮೂರು ರೇಖೆಗಳನ್ನು ಪುಷ್ಪಚಂದನಗಳಿಂದ ಬರೆಯಬೇಕು.

೫೮-೫೯. ಐಶಾನ್ಯ ಮತ್ತು ನೈರುತ್ಯದಲ್ಲಿ ಮಂತ್ರಪೂರ್ವಕವಾಗಿ ರೇಖೆಯನ್ನು ಬರೆಯಬೇಕು. ಅನಂತರ ನೈರುತ್ಯ ಮತ್ತು ವಾಯವ್ಯದಲ್ಲಿ ಬರೆಯಬೇಕು. ತಿರುಗಿ ಐಶಾನ್ಯಕ್ಕೆ ರೇಖೆಯನ್ನು ಎಳೆಯಬೇಕು. ಈರೀತಿಯಾಗಿ ಮಂಡಲದ ಮಧ್ಯದಲ್ಲಿ ತ್ರಿಕೋಣವನ್ನು ಬರೆಯಬೇಕು.

೬೦. ಐಶಾನ್ಯಾದಿಯಾಗಿ ಹೊರಟ ರೇಖೆಗಳಿಗೆ ಶಕ್ತಿಯೆಂದು ಹೆಸರು. ನೈರುತ್ಯ ವಾಯವ್ಯಗಳಲ್ಲಿಯ ಮತ್ತು ಈಶಾನ್ಯಕ್ಕೆ ಹೋಗಿರುವ ರೇಖೆಗಳಿಗೆ ಶಂಭು ಎಂದೂ ಹೆಸರು. ಶಕ್ತಿರೇಖೆಯಿಂದ ಶಂಭುರೇಖೆಯನ್ನು ಭೇದಿಸಬೇಕು. ಎಂದರೆ ಶಂಭುರೇಖೆಯಮೇಲೆ ಶಕ್ತಿರೇಖೆಯನ್ನು ಎಳೆದು ಬರೆಯಬೇಕು.

ಸಾ ತು ಶಂಭುಃ ಸಮಾಖ್ಯಾತಾ ಶಕ್ತ್ಯಾ ಶಂಭುಂ ವಿಭೇದಯೇತ್ ।
ಶಕ್ತ್ಯಾ ವಿಭಿನ್ನಂ ಭೂತೇಶಂ ವೇಷ್ಟಯೇತ್ಕಮಲೇನ ತು ॥ ೬೧ ॥

ಅಷ್ಟಪತ್ರೇಣ ತಾಂ ಧ್ಯಾತ್ವಾ ತ್ರಿವರ್ಣಾಂ ಪ್ರಾಕ್ಪ್ರಪೂಜಯೇತ್ ।
ತ್ರಿಭಿಸ್ತ್ರಿಭಿಸ್ತು ರೇಖಾಭಿಃ ಶಕ್ತಿಂ ಶಂಭುಂ ಚ ವೇಷ್ಟಯೇತ್ ॥ ೬೨ ॥

ಸ್ಥಾನಸ್ಯಾಭ್ಯುಕ್ಷಣಂ ಸಮ್ಯಙ್ಮಾರ್ಜನಂ ಲಿಖನಂ ತಥಾ ।
ಅಸ್ತ್ರಮಂತ್ರಂ ಪ್ರಯೋಗಾಣಾಂ ಭೂತಾನಾಮುಪಸಾರಣಂ ॥ ೬೩ ॥

ವೈಷ್ಣವೀತಂತ್ರಮುಕ್ತ್ಯುಕ್ತಂ ತಥೈವೋತ್ತರತಂತ್ರಕೇ ।
ಯತ್ಪ್ರೋಕ್ತಂ ತತ್ತು ಸಾಮಾನ್ಯಂ ಪ್ರಾಕ್ಕುರ್ಯಾತ್ಸಾಧಕೋ ನರಃ ॥
ತ್ರಿಪುರಾಯಾ ವಿಶೇಷೇಣ ಸಹಿತಂ ಪೂಜನಕ್ರಮಂ ।
ಏತತ್ತ್ರಿಕೋಣಂ ದೇವಾನಾಂ ತ್ರಯಾಣಾಂ ಸ್ಥಾನಮಿಷ್ಯತೇ ॥ ೬೫ ॥

ಐಶಾನ್ಯಾಂ ತು ತಥೇಶಾನೋ ನೈಋರ್ತ್ಯಾಂ ಚತುರಾನನಃ ।
ವಾಯವ್ಯಾಂ ತು ತಥಾ ಬ್ರಹ್ಮಾ ಷಟ್ಕೋಣೇಷು ಪ್ರಕೀರ್ತಿತಾಃ ॥ ೬೬ ॥

---

೬೧. ಶಕ್ತಿವಿಭಿನ್ನವಾದ ಶಂಭುರೇಖೆಯನ್ನು ಅಷ್ಟದಳಗಳುಳ್ಳ ಕಮಲದಿಂದ ಸುತ್ತುವರಿಯಬೇಕು. ಅನಂತರ ತ್ರಿವರ್ಣವುಳ್ಳ ದೇವಿಯನ್ನು ಮೊದಲು ಧ್ಯಾನಿಸಿ ಆಮೇಲೆ ಪೂಜಿಸಬೇಕು.

೬೨-೬೩. ಮೂರು ಮೂರು ಗೆರೆಗಳಿಂದ ಶಕ್ತಿ, ಶಂಭುರೇಖೆಗಳನ್ನು ಸುತ್ತ ಬೇಕು. ಆ ಸ್ಥಾನವನ್ನು ಚೆನ್ನಾಗಿ ಪ್ರೋಕ್ಷಿಸಬೇಕು, ಪೂಜಿಸಬೇಕು, ಅನಂತರ ಬರೆಯಬೇಕು. ಆಮೇಲೆ ಅಸ್ತ್ರಮಂತ್ರಪ್ರಯೋಗಗಳು, ಭೂತಗಳ ಅವನರನ್ನೆ ಇವುಗಳನ್ನೂ ಸಹ ಮಾಡಬೇಕು.

೬೪. ಉತ್ತರ ತಂತ್ರದಲ್ಲಿಯೂ, ವೈಷ್ಣವೀತಂತ್ರದಲ್ಲಿಯೂ ಏನೇನು ಹೇಳಿರುವುದೋ ಅದೆಲ್ಲವನ್ನೂ ಇಲ್ಲಿ ಸಾಧಕನು ಆಚರಿಸತಕ್ಕದ್ದು, ಅನಂತರ ಇಲ್ಲಿ ಹೇಳಿದ ವಿಶೇಷ ವಿಧಿಗಳಿಂದಲೂ "ತ್ರಿಪುರಾ" ದೇವಿಯನ್ನು ಪೂಜಿಸುತ್ತದು.

೬೫-೬೬. ತ್ರಿಪುರಾಮಂಡಲವಲ್ಲಿರುವ ತ್ರಿಕೋಣವು ಮೂರು ದೇವತೆಗಳ ಸ್ಥಾನವಾಗಿರುವುದು. ಈಶಾನ್ಯದಲ್ಲಿ ಈಶಾನ (ರುದ್ರ) ನು ಇರುವನು. ನೈರುತ್ಯದಲ್ಲಿ ಚತುರಾನನ (ಬ್ರಹ್ಮ) ನು ಇರುವನು. ವಾಯವ್ಯದಲ್ಲಿ ಬ್ರಹ್ಮನಿರುವನು. ಹೀಗೆ ಆರುಕೋಣಗಳಲ್ಲಿ ದೇವತೆಗಳಿರುವರು.

ದಲಂ ತ್ವೇಕಂ ಪುರಂ ಪ್ರೋಕ್ತಂ ಕೇಸರಂ ತ್ವಪರಂ ಪುರಂ ।
ಪುರಂ ಶೇಷಂ ತ್ರಿಕೋಣಂ ತು ತ್ರಿಪುರಂ ಮಂಡಲಂ ಸ್ಮೃತಂ ॥ ೬೭ ॥

ದಲೇಷು ಕೇಸರೇ ಚಾಪಿ ತ್ರಿಕೋಣೇ ಚ ತ್ರಿಧಾ ತ್ರಿಧಾ ।
ರೇಖಾಸ್ತು ವಿಹಿತಾಃ ಸಮ್ಯಕ್ಕುರ್ಯಾತ್ತತ್ರ ಪುನಃಪುನಃ ॥ ೬೮ ॥

ಉತ್ತರಂ ತದ್ಭವೇದ್ದ್ವಾರಂ ತಸ್ಯೈವ ಧನುರಾಕೃತಿ ।
ಪೂರ್ವದ್ವಾರಂ ತು ಷಟ್ಕೋಣಂ ಚತುಷ್ಕೋಣಂ ತು ದಕ್ಷಿಣೇ ॥ ೬೯ ॥

ಪಶ್ಚಿಮಂ ತೋರಣಾಕಾರಂ ಯಥಾ ಚಾನ್ಯತ್ರ ಮಂಡಲೇ ।
ಐಶಾನ್ಯಾಂ ಪಂಚಬಾಣಾಂಸ್ತು ಲೀಖೇದ್ವಹ್ನೌ ಚ ತದ್ಧನುಃ ॥ ೭೦ ॥

ನೈರ್ಋತ್ಯಾಂ ಪುಸ್ತಕಂ ಚಾಪಿ ಹಾಯವ್ಯಾಮಕ್ಷಮಾಲಿಕಾಂ ।
ಏವಂ ಕೃತ್ವಾ ಮಂಡಲಂ ತು ಧೃತ್ವಾ ವಾಮೇನ ಪಾಣಿನಾ ॥ ೭೧ ॥

ವಾಗ್ವೇಶ್ಯನೇ ನಮ ಇತಿ ಮಂಡಲಂ ಪೂಜಯೇತ್ತತಃ ।
ಪೂಜಯಿತ್ವಾ ತತೋ ಭೂತ್ವಾ ಕಾಲಿಕಾತ್ರಿತಯೇನ ತು ॥ ೭೨ ॥

೬೭-೭೧. ಮಂಡಲದ ದಲಗಳು ಮೊದಲನೆಯ ಪುರವು. ಕೇಸರವು ಎರಡನೆಯ ಪುರವು. ಅದರ ಒಳಗೆ ಇರುವ ತ್ರಿಕೋಣವು ಮೂರನೆಯ ಪುರವು. ಹೀಗೆ ಮಂಡಲಕ್ಕೆ ತ್ರಿಪುರವೆಂದು ಹೆಸರು. ದಲ, ಕೇಸರ, ಮತ್ತು ತ್ರಿಕೋಣ ಇವುಗಳಲ್ಲಿ ಮೂರು ಮೂರಾಗಿರುವ ರೇಖೆಗಳಿಂದ ಚೆನ್ನಾಗಿ ಪುನಃಪುನಃ ಬರೆಯಬೇಕು. ಮಂಡಲಕ್ಕೆ ಉತ್ತರದಲ್ಲಿ ಧನುರಾಕಾರವಾಗಿ ದ್ವಾರವನ್ನು ಮಾಡಬೇಕು. ಪೂರ್ವದಲ್ಲಿ ಆರು ಕೋಣಗಳುಳ್ಳ ದ್ವಾರವನ್ನು ರಚಿಸಬೇಕು. ದಕ್ಷಿಣದಲ್ಲಿ ನಾಲ್ಕು ಕೋಣಗಳುಳ್ಳ ದ್ವಾರವನ್ನು ರಚಿಸಬೇಕು. ಪಶ್ಚಿಮದಲ್ಲಿ ತೋರಣದ ಆಕಾರವಾದ ದ್ವಾರವನ್ನು ರಚಿಸಬೇಕು. ಮಿಕ್ಕುದುದೆಲ್ಲವೂ ಮಿಕ್ಕ ಮಂಡಲಗಳಂತೆಯೇ. ಈಶಾನ್ಯದಲ್ಲಿ ಐದು ಬಾಣಗಳನ್ನೂ, ಆಗ್ನೇಯದಲ್ಲಿ ಅವುಗಳ ಧನುಸ್ಸನ್ನೂ ಬರೆಯಬೇಕು. ನೈರುತ್ಯದಲ್ಲಿ ಪುಸ್ತಕವನ್ನೂ ವಾಯವ್ಯದಲ್ಲಿ ಜಪಮಾಲಿಕೆಯನ್ನೂ ಬರೆಯಬೇಕು. ಹೀಗೆ ಮಂಡಲವನ್ನು ರಚಿಸಿ ಅದನ್ನು ಎಡಗೈಯಲ್ಲಿ ಧರಿಸಿ, ವಾಗ್ವೇಶ್ಯನೇ ನಮಃ ಎಂದು ಪೂಜಿಸಬೇಕು.

೭೨. ಹೀಗೆ ಪೂಜಿಸಿ ಹಿಂದೆ ಹೇಳಿದ ಕಾಳಿಕಾ ಮೂಲ ಮಂತ್ರವೇ ಮೊದಲಾದ ಮೂರು ಮೂಲಮಂತ್ರಗಳಿಂದ ಮೂರುಬಾರಿ ಭೂತಾಪಸರಣವನ್ನು ಮಾಡಬೇಕು.

ಮೂಲಮುಂತ್ರೇಣ ಪೂರ್ವೋಕ್ತೈರ್ಮಂತ್ರೈರಪಿ ಸಮಾರಭೇತ್ ।
ನವಭಿಶ್ಚೋಟಿಕಾಭಿಸ್ತು ತ್ರಿಧಾ ಕೃತ್ವಾ ತು ವೇಷ್ಟನಂ ॥ ೭೩ ॥

ಅಭ್ಯುಕ್ಷಣಂ ತತಃ ಕುರ್ಯಾದ್ಭೂತಾನಾಮುಪಸಾರಣಂ ।
ಪ್ರತಿಪತ್ತಿಸ್ತು ಪಾತ್ರಸ್ಯ ಅರ್ಘ್ಯಾರ್ಥಂ ನವಧಾ ಪುನಃ ॥ ೭೪ ॥

ಪೂರ್ವವತ್ಸಾಧಕಃ ಕುರ್ಯಾದ್ದಹನಂ ಪ್ಲವನಂ ತಥಾ ।
ಅಮೃತೀಕರಣಂ ಕುರ್ಯಾತ್ಪ್ರಥಮಂ ಧೇನುಮುದ್ರಯಾ ॥ ೭೫ ॥

ಯೋನಿಮುದ್ರಾಂ ತತಃ ಕೃತ್ವಾ ಪಾತ್ರತೋಯಂ ತು ತ್ರಿಃ ಸ್ಪೃಶೇತ್ ।
ಮಾರ್ತಂಡಭೈರವಾಯಾರ್ಘ್ಯಂ ದೂರ್ವಾಭಿಃ ಸಿದ್ಧಸರ್ಷಪೈಃ ॥ ೭೬ ॥

ರಕ್ತಪುಷ್ಪೈಶ್ಚಂದನೈಶ್ಚ ಸಗಣಾಯ ನಿವೇದಯೇತ್ ।
ಪಾಣಿಕಚ್ಛಪಿಕಾಂ ತ್ಯಕ್ತ್ವಾ ಚಿಂತನಂ ಯೋನಿಮುದ್ರಾಯಾ ॥ ೭೭ ॥

೭೩-೭೪. ಕೈಯನ್ನು ಶಿರಸ್ಸಿನ ಸುತ್ತಲೂ ಪ್ರದಕ್ಷಿಣಾಕಾರವಾಗಿ ಮೂರುಸಲ ಸುತ್ತಿಸಿ ಒಂಬತ್ತುಸಲ ಛುಟಕೆಯನ್ನು ಹಾಕಬೇಕು. ಬಳಿಕ ನೀರನ್ನು ತೆಗೆದುಕೊಂಡು ಪ್ರೋಕ್ಷಣಮಾಡಿ ಭೂತಾಪಸರಣವನ್ನು ಮಾಡಬೇಕು. ಅರ್ಘ್ಯಪಾತ್ರವೇ ಮೊದಲಾದ ಪಾತ್ರಾಸಾದನ ಕ್ರಮವನ್ನು ಇದರಂತೆಯೇ ಒಂಭತ್ತುಸಲ ಮಾಡಬೇಕು.

೭೫. ಹಿಂದೆ ಹೇಳಿದಂತೆಯೇ ಭೂತಶುದ್ಧಿಗಾಗಿ ದಹನ ಮತ್ತೂ ಪ್ಲವನಗಳನ್ನು ಸಾಧಕನು ಮಾಡಬೇಕು. ಮೊದಲು ಧೇನುಮುದ್ರೆಯಿಂದ ಅಮೃತೀಕರಣವನ್ನು ಮಾಡಬೇಕು.

೭೬. ಯೋನಿಮುದ್ರೆಯನ್ನು ಪ್ರದರ್ಶಿಸಿ ಪಾತ್ರದಲ್ಲಿರುವ ಜಲವನ್ನು ಮೂರು ಬಾರಿ ಸ್ಪರ್ಶಿಸಬೇಕು. ಗಣಗಳೊಂದಿಗಿರುವ ಮಾರ್ತಾಂಡ ಭೈರವನಿಗೆ ದೂರ್ವಾ, ಸಿದ್ಧಸರ್ಷಪ(ಬಿಳಿಯಸಾಸುವೆ) ರಕ್ತ ಪುಷ್ಪ, ಚಂದನಗಳಿಂದಲೂ ಸಹ ಅರ್ಘ್ಯವನ್ನು ಕೊಡಬೇಕು.

೭೭. ಎಲೈ ವೇತಾಲಭೈರವನೆ! ಮುದ್ರೆಯನ್ನು ಪ್ರದರ್ಶಿಸಿ ಅನಂತರ ಯೋನಿಮುದ್ರೆಯಿಂದ ಆದಿಯಲ್ಲೂ ಮಧ್ಯದಲ್ಲೂ ಕ್ರಮವಾಗಿ ಧ್ಯಾನವನ್ನು ಮಾಡಬೇಕು.

ಆದೌ ಮಧ್ಯೇ ಚ ಕರ್ತವ್ಯಂ ಕ್ರಮಾದ್ವೇತಾಲಭೈರವ ।
ಅಸ್ತ್ರಮಂತ್ರೇಣ ಪಾತ್ರಸ್ಯ ಸ್ಥಾಪನಾರ್ಥಂ ತು ಮಂಡಲಂ ॥ ೭೮ ॥

ಷಟ್ಕೋಣಂ ತು ಲಿಖೇತ್ಪೂರ್ವಂ ತನ್ಮಂತ್ರಸ್ಥಾಪನೇಽಪಿ ಚ ।
ಐಂ ಆಂ ಹ್ರೀಂ ಇತಿ ಮಂತ್ರೇಣ ತ್ರಿಧಾ ಪಾತ್ರೇ ಜಲಂ ಕ್ಷಿಪೇತ್ ॥

ತ್ರಿಧಾ ಗಂಧಂ ಚ ಪುಷ್ಪಂ ಚ ತ್ರಿಧಾ ದೂರ್ವಾಕ್ಷತಂ ಪುನಃ ।
ಓಂ ಹಾಂ ಕ್ರೀಂ ಹೂಂ ಹೂಂ ಕ್ರೋಂ ಅಂಗುಷ್ಠಾದಿಕ್ರಮಾನ್ನ್ಯಸೇತ್

ಓಂ ಕ್ರಾಂ ಇತ್ಯಸ್ತ್ರಮಂತ್ರೇಣ ಪಾಣಿಪೃಷ್ಠತಲೇ ತಥಾ ।
ಹೃದಯಾದಿಕ್ರಮಾತ್ಪಶ್ಚಾನ್ನ್ಯಾಸಂ ಕುರ್ಯಾತ್ತ್ರಿಧಾ ತ್ರಿಧಾ ॥ ೮೧ ॥

ಸಂಯೋಜ್ಯ ಪಾಣ್ಯೋಃ ಕ್ರಮತಶ್ಚಾಂಗುಷ್ಠಾದಿದ್ವಯಂ ದ್ವಯಂ ।
ತ್ರಿಧಾ ತ್ರಿಧಾ ಪೃಥಕ್ಕುರ್ಯಾಚ್ಛೇಷಾಂಗಾನಿ ಚ ವಿನ್ಯಸೇತ್ ॥ ೮೨ ॥

---

೭೮. ಪಾತ್ರವನ್ನು ಸ್ಥಾಪಿಸಲೂ, ಅಸ್ತ್ರಮಂತ್ರವನ್ನು ಸ್ಥಾಪಿಸಲೂ ಸಹ ಅಸ್ತ್ರಮಂತ್ರವೆಂದ ಆರು ಕೋಣಗಳುಳ್ಳ ಮಂಡಲವನ್ನು ಮೊದಲು ಬರೆಯಬೇಕು.

೭೯. ಆ ಪಾತ್ರೆಯಲ್ಲಿ ಐಂ ಆಂ ಹ್ರೀಂ ಎಂಬ ಮಂತ್ರದಿಂದ ಮೂರುಬಾರಿ ಜಲವನ್ನೂ, ಗಂಧ, ಪುಷ್ಪ, ದೂರ್ವಾ, ಅಕ್ಷತೆ ಇವುಗಳನ್ನೂ ಮೂರುಮೂರು ಬಾರಿ ಹಾಕಬೇಕು.

೮೦-೮೧. ಓಂ ಹಾಂ ಕ್ರೀಂ ಹೂಂ ಹೂಂ ಕ್ರೋಂ ಎಂಬ ಮಂತ್ರದಿಂದ ಅಂಗುಷ್ಠಾದಿನ್ಯಾಸವನ್ನು ಮಾಡಬೇಕು. ಓಂ ಕ್ರಾಂ ಎಂಬ ಅಸ್ತ್ರಮಂತ್ರದಿಂದ ಕರತಲಕರಪೃಷ್ಠನ್ಯಾಸಗಳನ್ನು ಮಾಡಬೇಕು. ಆಮೇಲೆ ಮೂರುಮೂರು ಬಾರಿ ಹೃದಯಾದಿನ್ಯಾಸಗಳನ್ನು ಮಾಡಬೇಕು.

೮೨. ಎರಡು ಕೈಗಳ ಅಂಗುಷ್ಠವೇ ಮೊದಲಾದ ಜೋಡಿಗಳನ್ನು ಎರಡೆರಡಾಗಿ ಸೇರಿಸಿ ಮೂರು ಮೂರು ಪ್ರಕಾರವಾಗಿ ಬೇರೆ ನ್ಯಾಸವನ್ನು ಮಾಡಬೇಕು. ಅನಂತರ ಮಿಕ್ಕ ಅಂಗನ್ಯಾಸಗಳನ್ನು ಮಾಡಬೇಕು.

ಕರ್ಣರಂಧ್ರೇ ತಥಾ ಬ್ರಹ್ಮದ್ವಾರಂ ಕೇಶತಲಂ ತಥಾ ।
ನಾಸಿಕಾರಂಧ್ರಯುಗಲಂ ಜಾನುಯುಗ್ಮಂ ಪದದ್ವಯಂ ॥ ೮೩ ॥

ತ್ರಿಧಾ ತ್ರಿಧಾ ನ್ಯಸೇದೇಭಿಃ ಷಡ್ಭಿರ್ಮಂತ್ರೈಃ ಪೃಥಕ್ಪೃಥಕ್ ।
ಪ್ರಾಣಾಯಾಮಂ ತತಃ ಕುರ್ಯಾತ್ಪೂರಕೈಃ ಕುಂಭಕೈಸ್ತಥಾ ॥ ೮೪ ॥

ರೇಚಕೇನಾಪಿ ತ್ರಿಪುರಾಮೂರ್ತಿಂ ದೇವೀಂ ವಿಚಿಂತಯೇತ್ ।
ದಹನಂ ಪ್ಲವನಂ ಕೃತ್ವಾ ಆದ್ಯಾಂ ಮೂರ್ತಿಂ ವಿಚಿಂತಯೇತ್ ॥ ೮೫ ॥

ತ್ರಿಧಾಹೃತ್ಯಾ ತು ಹೃದಯೇ ತಾಂ ಮೂರ್ತಿಂ ಶೃಣು ಭೈರವ ।
ಸಿಂದೂರಪುಂಜಸಂಕಾಶಾಂ ತ್ರಿನೇತ್ರಾಂ ತು ಚತುರ್ಭುಜಾಂ ॥ ೮೬ ॥

ವಾಮೋರ್ಧ್ವೇ ಪುಷ್ಪಕೋದಂಡಂ ಧೃತ್ವಾऽಧಃ ಪುಸ್ತಕಂ ತಥಾ ।
ದಕ್ಷಿಣೋರ್ಧ್ವೇ ಪಂಚಬಾಣಾನಕ್ಷಮಾಲಾಂ ದಧಾತ್ಯಧಃ ॥ ೮೭ ॥

---

೮೩. ಕರ್ಣದ್ವಾರಗಳು, ಬ್ರಹ್ಮರಂಧ್ರ, ಕೇಶಪ್ರದೇಶ, ನಾಸಿಕಾರಂಧ್ರ, ಜಾನು (ತೊಡೆ) ಗಳಿರಡು, ಕಾಲುಗಳು ಇವುಗಳನ್ನು ಹಿಂದೆ ಹೇಳಿದ ಆರು ಮೂಲ ಮಂತ್ರಗಳಿಂದ ಬೇರೆ ಬೇರೆಯಾಗಿ ಮೂರುಮೂರುಬಾರಿ ನ್ಯಾಸ ಮಾಡಬೇಕು.

೮೪. ಅನಂತರ ಪೂರಕ, ರೇಚಕ, ಕುಂಭಕಗಳಿಂದ ಪ್ರಾಣಾಯಾಮವನ್ನು ಮಾಡಿ ತ್ರಿಪುರಾದೇವಿಯನ್ನು ಧ್ಯಾನಿಸಬೇಕು.

೮೫. ದಹನ ಮತ್ತು ಪ್ಲವನಗಳನ್ನು ಮಾಡಿ ಆದಿಮೂರ್ತಿಯನ್ನು ಹೃದಯದಲ್ಲಿ ಪ್ರತಿಷ್ಠಿಸಿಕೊಂಡು ಚಿಂತಿಸಬೇಕು. ಆ ಮೂರ್ತಿಯ ಸ್ವರೂಪವನ್ನು ಹೇಳುವೆನು, ಎಲೈ ಭೈರವನೇ! ಕೇಳು.

೮೬-೮೮. ಆ ತ್ರಿಪುರಾದೇವಿಯು ಕುಂಕುಮದಂತೆ ಕೆಂಪಾದ ಶರೀರಕಾಂತಿಯಿಂದಲೂ, ಮೂರು ಕಣ್ಣುಗಳಿಂದಲೂ, ನಾಲ್ಕು ಭುಜಗಳಿಂದಲೂ ಪ್ರಕಾಶಿಸುತ್ತಲಿರುವಳು. ಆ ದೇವಿಯು ತನ್ನ ಎಡಭಾಗದ ಮೇಲುಗೈಯ್ಯಲ್ಲಿ ಪುಷ್ಪಧನಸ್ಸನ್ನೂ, ಕೆಳಗೈಯ್ಯಲ್ಲಿ ಪುಸ್ತಕವನ್ನೂ, ಬಲಭಾಗದ ಮೇಲುಗೈಯ್ಯಲ್ಲಿ ಐದು ಬಾಣಗಳನ್ನೂ, ಕೆಳಗೈಯ್ಯಲ್ಲಿ ಜಪಮಾಲೆಯನ್ನೂ ಹಿಡಿದಿರುವಳು. ನಾಲ್ಕು ಶವಗಳ ಮೇಲ್ಭಾಗದಲ್ಲಿ ಮತ್ತೊಂದು ಶವವನ್ನಿಟ್ಟು ಅವರ ಬೆನ್ನಿನಮೇಲೆ ಕಾಲನ್ನಿಟ್ಟು ನಿಂತಿರುವಳು. ಶಿರಸ್ಸಿ

ಚತುರ್ಣಾಂ ಕುಣಪಾನಾಂ ತು ಪೃಷ್ಠೇಽನ್ಯಂ ಕುಣಪಾಂತರಂ ।
ನಿಧಾಯ ತಸ್ಯ ಪೃಷ್ಠೇ ತು ಸಮಪಾದೇನ ಸಂಸ್ಥಿತಾಂ ॥ ೮೮ ॥

ಜಟಾಜೂಟಾರ್ಧಚಂದ್ರೇಣ ಸಮಾಬದ್ಧಶಿರೋಧರಾಂ ।
ಲಗ್ನಾಂ ತ್ರಿವಲಿಭೇದೇನ ಚಾರುಮಧ್ಯಾಂ ಮನೋಹರಾಂ ॥ ೮೯ ॥

ಸರ್ವಾಲಂಕಾರಸಂಪೂರ್ಣಾಂ ಸರ್ವಾಂಗಸುಂದರೀಂ ಶುಭಾಂ ।
ಸ್ರವದ್ರುಧಿರಸಂದೋಹಾಂ ಸರ್ವಲಕ್ಷಣಸಂಯುತಾಂ ॥ ೯೦ ॥

ಏನಾಂ ತು ಪೃಥನುಂ ಧ್ಯಾತ್ವಾ ತ್ರಿಧಾತ್ಮಾನಂ ವಿಚಿಂತಯೇತ್ ।
ಸದ್ರೂಪಂ ಚ ತತಃ ಪಶ್ಚಾತ್ಪುಷ್ಪಂ ತದ್ವಾಗ್ಭವೇನ ತು ॥ ೯೧ ॥

ಸ್ವಮಸ್ತಕೇ ಪುನರ್ದದ್ಯಾದಂಗನ್ಯಾಸಂ ಪುನಸ್ತಥಾ ।
ಮಂತ್ರದ್ವಯಂ ತ್ರಿಧಾ ಜಪ್ತ್ವಾ ವಾಗ್ಭವ್ಯಾದ್ಯಂ ತು ಸಾಧಕಃ ॥ ೯೨ ॥

ಅರ್ಘ್ಯಪಾತ್ರಸ್ಯ ತೋಯೇಷು ತೈಸ್ತೋಯೈಃ ಸೇಚಯೇಚ್ಛಿರಃ ।
ಪೂಜೋಪಕರಣಂ ಚಾಪಿ ತ್ರಿರಭ್ಯುಕ್ಷ್ಯ ತಥೈವ ತು ॥ ೯೩ ॥

ನಲ್ಲಿ ಭೂಷಣಪ್ರಾಯನಾದ ಅರ್ಧಚಂದ್ರನು, ಉದರದಲ್ಲಿ ಕಾಣುವ ತ್ರಿವಳಿ (ಮೂರು ಸುಕ್ಕು) ಗಳಿಂದ ಸುಂದರವಾದ ನಡು, ಇವುಗಳಿಂದ ಬಹು ಮನೋಹರವಾಗಿ ಕಾಣುತ್ತಿರುವಳು; ಸರ್ವಾಲಂಕಾರಗಳನ್ನು ಧರಿಸಿ, ಸರ್ವಾಂಗ ಸುಂದರಿಯಾಗಿಯೂ, ಸರ್ವ ಲಕ್ಷಣ ಸಂಪನ್ನೆಯಾಗಿಯೂ ರಾರಾಜಿಸುತ್ತಲಿರುವಳು.

೮೮. ಈರೀತಿ ಇರುವ ದೇವಿಯನ್ನು ಧ್ಯಾನಮಾಡಿ. ತನ್ನನ್ನೂ ಧ್ಯಾನಮಾಡಬೇಕು. ಬಳಿಕ ತನಗೂ ಆ ದೇವಿಯ ರೂಪಕ್ಕೂ ಇರುವ ಅಭೇದವನ್ನು ಧ್ಯಾನಿಸಿ ವಾಗ್ಭವಬೀಜಮಂತ್ರದಿಂದ ಪುಷ್ಪವನ್ನು ತನ್ನ ಶಿರಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆಮೇಲೆ ಅಂಗನ್ಯಾಸವನ್ನು ಪ್ರಾರಂಭಿಸಬೇಕು.

೯೨-೯೩. ಕಾಮಾಖ್ಯಾದೇವಿಯ ಎರಡು ಬೀಜಮಂತ್ರಗಳಿಗೂ ಮೊದಲು ವಾಗ್ಭವಬೀಜವಾದ ಐಂ ಎಂಬುದನ್ನು ಸೇರಿಸಿ ಮೂರಾವೃತ್ತಿ ಜಪಿಸಬೇಕು. ಸಾಧಕನು ಆ ಮಂತ್ರಗಳಿಂದಲೇ ಅರ್ಘ್ಯಪಾತ್ರೆಯಲ್ಲಿರುವ ನೀರಿನಿಂದ ತನ್ನ ಶಿರಸ್ಸನ್ನೂ, ಪೂಜಾ ಸಾಮಗ್ರಿಗಳನ್ನೂ ಮೂರಾವರ್ತಿ ಪ್ರೋಕ್ಷಿಸಬೇಕು.

ಕಾಮಪೀಠಂ ತತೋ ಧ್ಯಾತ್ವಾ ಪೂಜಯೇತ್ಕ್ರಮತಸ್ತ್ವಮಾ ।
ಗಣೇಶಂ ಚ ಗಣಾಧ್ಯಕ್ಷಂ ಗಣನಾಥಂ ತಥೈವ ಚ ॥ ೯೪ ॥

ಗಣಕ್ರೀಡಂ ಚ ಪೂರ್ವಾದಿದ್ವಾರೇ ಮಂತ್ರೇಣ ಪೂಜಯೇತ್ ।
ಹೈರಂಬಬೀಜಮೇತೇಷಾಂ ಮಂತ್ರಸ್ತು ಪರಿಕೀರ್ತಿತಾಃ ॥ ೯೫ ॥

ವಿದ್ಯಾ ಶಾಂತಿರ್ನಿವೃತ್ತಿಶ್ಚ ಪ್ರತಿಷ್ಠಾ ದ್ವಾರಪಾಲಕಾಃ ।
ಕಲಾಂತಾಃ ಪೂಜಯೇತ್ಸಮ್ಯಕ್ಪೂರ್ವಾದಿಕ್ರಮತಸ್ತಥಾ ॥ ೯೬ ॥

ಸಿದ್ಧಪುತ್ರಂ ಜ್ಞಾನಪುತ್ರಂ ತಥಾ ಸಹಜಪುತ್ರಕಂ ।
ಶೇಷಂ ಸಮಯಪುತ್ರಂ ತು ಪೂಜಯೇದ್ವಟುಕಾನಿಮಾ ॥ ೯೭ ॥

ಪ್ರತ್ಯೇಕಂ ತು ಶ್ರಿಯಂ ದೇವೀಂ ಬಟುಕಾನಾಂ ಪರೇವರೇ ।
ಶ್ರೀಮಿತ್ಯನೇನ ಮಂತ್ರೇಣ ಪೂರ್ವಾದೌ ಪೂಜಯೇತ್ಕ್ರಮಾತ್ ॥ ೯೮ ॥

ಸಿದ್ಧಸ್ಯ ಸಹಜಸ್ಯಾಥ ಜ್ಞಾನಸ್ಯ ಸಮಯಸ್ಯ ಚ ।
ಕುಮಾರೀಂ ಪೂಜಯೇತ್ಕೋಣೇ ಐಶಾನ್ಯಾದೌ ತು ಮಂಡಲೇ ॥ ೯೯ ॥

೯೪-೯೬. ಅನಂತರ ಕಾಮಪೀಠವನ್ನು ಧ್ಯಾನಿಸಿ ಮುಂದೆ ಹೇಳುವ ದೇವತೆಗಳನ್ನು ಪೂಜಿಸಬೇಕು. ಗಣೇಶ, ಗಣಾಧ್ಯಕ್ಷ, ಗಣನಾಥ, ಗಣಕ್ರೀಡ, ಈ ನಾಲ್ಕು ದೇವತೆಗಳನ್ನು ಅವರ ಮೂಲಮಂತ್ರದಿಂದ ಪೂರ್ವವೇ ಮೊದಲಾದ ದ್ವಾರಗಳಲ್ಲಿ ಪೂಜಿಸಬೇಕು. ಹೈರಂಬ ಬೀಜವಾದ ಗಂ ಎಂಬ ಬೀಜಾಕ್ಷರವೇ ಮೇಲಿನ ದೇವತೆಗಳಿಗೆ ಮೂಲಮಂತ್ರವು. ವಿದ್ಯೆ, ಶಾಂತಿ, ನಿವೃತ್ತಿ, ಪ್ರತಿಷ್ಠೆ ಇವರು ದ್ವಾರಪಾಲಕರು. ಕಲಾಂತವಾಗಿರುವ ಈ ದೇವತೆಯರನ್ನು ಪೂರ್ವಾದಿಕ್ರಮದಿಂದ ಪೂಜಿಸಬೇಕು.

೯೭. ಸಿದ್ಧಪುತ್ರ, ಜ್ಞಾನಪುತ್ರ, ಸಹಜಪುತ್ರ, ಸಮಯಪುತ್ರ ಎಂಬ ಈ ವಟುಗಳನ್ನೂ ಪೂಜಿಸಬೇಕು.

೯೮. ಶ್ರೀಂ ಎಂಬ ಮಂತ್ರದಿಂದ ಶ್ರೀದೇವಿಯನ್ನು ಪೂರ್ವಾದಿ ನಾಲ್ಕು ದಿಕ್ಕುಗಳಲ್ಲಿಯೂ ವಟುಗಳ ಪಕ್ಕದಲ್ಲಿ ಪ್ರತ್ಯೇಕವಾಗಿ ಪೂಜಿಸಬೇಕು.

೯೯-೧೦೦. ಈಶಾನ್ಯಾದಿ ಕೋಣಗಳಲ್ಲಿ ಇರುವ ಸಿದ್ಧ, ಸಹಜ, ಜ್ಞಾನ, ಸಮಯ ಇವರುಗಳ ಪಕ್ಕದಲ್ಲಿ, ಮಂಡಲದಲ್ಲಿ ಕುಮಾರಿಯನ್ನು ಪೂಜಿಸಬೇಕು.

ಗೋರಟಂ ಡಾಮರಂ ಚೈವ ಲೋಹಜಂಘಂ ತಥೈವ ಚ ।
ಭೂತನಾಥಂ ಕ್ಷೇತ್ರಪಾಲಮಿಶಾನಾದೌ ಪ್ರಪೂಜಯೇತ್ ।

ಮಂಡಲಸ್ಯ ಚ ಮಧ್ಯೇ ತು ಪಂಚ ಬಾಣಾ ಪ್ರಪೂಜಯೇತ್ ॥ ೧೦೦ ॥

॥ ಇತಿ ಶ್ರೀಕಾಲಕಾಪುರಾಣೇ ಷಟ್ಷಷ್ಟಿತಮೋಽಧ್ಯಾಯಃ ॥

ಮತ್ತು ಈಶಾನ್ಯದಿಂದ ಮೊದಲುಮಾಡಿ ಗೋರಟ, ಡಾಮರ, ಲೋಹಜಂಘ, ಭೂತನಾಥ, ಕ್ಷೇತ್ರಪಾಲ ಇವರುಗಳನ್ನು ಕ್ರಮವಾಗಿ ಪೂಜಿಸಬೇಕು. ಮಂಡಲದ ಮಧ್ಯದಲ್ಲಿ ದೇವಿಯ ಐದು ಪುಷ್ಪಬಾಣಗಳನ್ನು ಪೂಜೆಮಾಡಬೇಕು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಅರವತ್ತಾರನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಸಪ್ತಷಷ್ಟಿತಮೋऽಧ್ಯಾಯಃ ॥

॥ ಶ್ರೀ ಭಗವಾನು ವಾಚ ॥

ದ್ರಾವಣಂ ಶೋಷಣಂ ಚೈವ ಬಂಧನಂ ಮೋಹನಂ ತಥಾ ।
ಆಕರ್ಷಣಂ ಚ ಮಧ್ಯೇನ ಮಂತ್ರೇಣೈವ ಪ್ರಪೂಜಯೇತ್ ॥ ೧ ॥

ತತಸ್ತ್ರೀಷ್ವಥ ಕೋಣೇಷು ಪೂಜಯೇತ್ತು ತ್ರಿಯೋಗಿನೀಃ ।
ಭಗಾಂ ಚ ಭಗಜಿಹ್ವಾಂ ಚ ಭಗಾಸ್ಯಾಮುತ್ತರಾದಿಕಂ ॥ ೨ ॥

ಕ್ರಮಾತ್ತು ಪೂಜ್ಯಾಸ್ತಿಸ್ರೋऽನ್ಯಾ ಅನ್ಯಾ ಮಧ್ಯೇ ತು ಕೋಣಯೋಃ ।
ಭಗಮಾಲಿನೀಂ ತು ಪ್ರಥಮೇ ದ್ವಿತೀಯೇ ತು ಭಗೋದರೀಂ ॥ ೩ ॥

॥ ಅರವತ್ತೇಳನೆಯ ಅಧ್ಯಾಯವು ॥

೧. ಭಗವಂತನಾದ ಶ್ರೀ ಶಂಕರನು ಹೇಳಿದನು:— ದ್ರಾವಣ, ಶೋಷಣ, ಬಂಧನ ,ಮೋಹನ, ಆಕರ್ಷಣ ಇವುಗಳನ್ನು ಮೂಲಮಂತ್ರದಿಂದ ಮಂಡಲದ ಮಧ್ಯ ದಲ್ಲಿಯೇ ಪೂಜಿಸಬೇಕು. ಇವು ದೇವಿಯ ಐದು ಪುಷ್ಪಬಾಣಗಳು.

೨-೩. ಅನಂತರ ಮೂರು ಕೋಣೆಗಳಲ್ಲಿ ಭಗಾ, ಭಗಜಿಹ್ವಾ, ಭಗಾಸ್ಯಾ, ಎಂಬ ಮೂರು ಯೋಗಿನಿಯಿರನ್ನು ಉತ್ತರದಿಕ್ಕಿನಿಂದ ಮೊದಲುಮಾಡಿ, ಪೂಜಿ ಸಬೇಕು. ಇನ್ನೂ ಮೂರು ಯೋಗಿನಿಯರನ್ನು ಕೋಣಗಳೆರಡರ ಮಧ್ಯವಲ್ಲಿ ಕ್ರಮ ವಾಗಿ ಪೂಜಿಸಬೇಕು. ಹೇಗೆಂದರೆ, ಭಗಮಾಲಿನಿಯನ್ನು ಪ್ರಥಮ ಕೋಣದಲ್ಲಿಯೂ, ಭಗೋದರಿಯನ್ನು ಎರಡನೆಯ ಕೋಣದಲ್ಲಿಯೂ ಕಾಮರೂಪಿಣಿಯಾದ ಭಗಹಾರಾ ಎಂಬ ಯೋಗಿನಿಯನ್ನು ಮೂರನೆಯ ಕೋಣದಲ್ಲಿಯೂ ಪೂಜಿಸಬೇಕು.

ತೃತೀಯೇ ಭಗಹಾರಾಂ ತು ಯೋಗಿನೀಂ ಕಾಮರೂಪಿಣೀಂ ।
ಅನಂಗಕುಸುಮಾಂ ದೇವೀಂ ತಥೈವಾನಂಗಮೇಖಲಾಂ ॥ ೪ ॥

ಅನಂಗಮದನಾಂ ಚೈವ ತ್ವನಂಗಮದನೋದ್ಭವಾಂ ।
ಅನಂಗವೇಶಾಂ ಚಾನಂಗಮಾಲಿನೀಂ ಮದನೋದ್ಭವಾಂ ॥ ೫ ॥

ದಲಕೇಸರಮಧ್ಯೇ ತು ಹ್ಯಷ್ಟವಿಂಶಾಂ ಮದನಾಂಕುಶಾಂ ।
ಶೈಲಪುತ್ರ್ಯಾದಯಃ ಶ್ಚಾಷ್ಟೌ ತ್ರಿಪುರಾಪೂಜನಕ್ರಮೇ ॥ ೬ ॥

ಏತನ್ನಾಮಭಿರವ್ಯಗ್ರಾ ಬಭೂವುಃ ಕಾಮಯೋಗಿನೀಃ ।
ವಾಗ್ಭವೇನ ತಥಾ ದುರ್ಗಾಂ ನೇತ್ರಬೀಜಾಂ ತು ಕೇನ ತು ॥ ೭ ॥

ಅಂಗನ್ಯಾಸಂ ಸಮುಂತ್ರೈಸ್ತು ಷಡ್ಭಿರಷ್ಟಾವಿರ್ಮಾಪುನಃ ।
ಪೂಜಯೇತ್ಕ್ಷೇತ್ರಪಾಲಾಂಸ್ತು ಮಧ್ಯೇ ಕಿಂಜಲ್ಕಪತ್ರಯೋಃ ॥ ೮ ॥

ಹೇತುಕಂ ತ್ರಿಪುರಘ್ನಂ ಚ ಅಗ್ನಿಜಿಹ್ವಂ ತಥೈವ ಚ ।
ಅಗ್ನಿವೇತಾಲಸಂಜ್ಞಂ ಚ ಕಾಲಂ ಚಾಥ ಕರಾಲಕಂ ॥ ೯ ॥

೪-೫. ಅನಂಗಕುಸುಮಾ ಅನಂಗಮೇಖಲಾ, ಅನಂಗಮದನಾ, ಅನಂಗ ಮದನೋದ್ಭವಾ ಅನಂಗವೇಶಾ, ಅನಂಗಮಾಲಿನೀ, ಮದನೋದ್ಭವಾ, ಮದನಾಂ ಕುಶಾ ಎಂಬ ಈ ಎಂಟುಜನ ಯೋಗಿನಿಯರನ್ನು ದಲ ಮತ್ತು ಕೇಸರಗಳ ಮಧ್ಯ ದಲ್ಲಿ ಪೂಜಿಸಬೇಕು.

೬-೭. ಶೈಲಪುತ್ರಿಯೇ ಮೊದಲಾದ ಎಂಟುಜನ ಯೋಗಿನಿಯರನ್ನು ಈ ತ್ರಿ ಪುರಾ ಪೂಜೆಯಲ್ಲಿ ಅವರವರ ಹೆಸರುಗಳಿಂದಲೂ, ನೇತ್ರ ಬೀಜದೊಡನೆ ವಾಗ್ಭವ ಮಂತ್ರದಿಂದ ದುರ್ಗಾದೇವಿಯನ್ನು ಪೂಜಿಸಬೇಕು.

೮. ಆರುಮಂತ್ರಗಳಿಂದ ಅಂಗನ್ಯಾಸ ಕರನ್ಯಾಸಗಳನ್ನು ಮಾಡಿ ಮುಂದೆ ಹೇ ಳುವ ಎಂಟುಜನ ಕ್ಷೇತ್ರಪಾಲಕರನ್ನು ಮಂಡಲದ ಸುತ್ತಲೂ ಇರುವ ದಲ ಮತ್ತು ಕೇಸರಗಳಮಧ್ಯದಲ್ಲಿ ಪೂಜಿಸಬೇಕು.

೯. ಹೇತುಕ, ತ್ರಿಪುರಘ್ನ, ಅಗ್ನಿಜಿಹ್ವಾ, ಅಗ್ನಿವೇತಾಲ, ಕಾಲ, ಕರಾಲ, ಏಕಪಾದ, ಭೀಮನಾಥ ಈ ಎಂಟು ಜನಗಳೇ ದ್ವಾರಪಾಲಕರು ಇವರನ್ನು ಉತ್ತರ ದ್ವಾರ ಮೊದಲುಗೊಂಡು ಪೂಜಿಸಬೇಕು.

ಏಕಪಾದಂ ಭೀಮನಾಥಮುತ್ತರಾದಿಕ್ರಮೇಣ ತು ।
ಏಭಿರೇವಾಷ್ಟಭಿರ್ಮಂತ್ರೈಃ ಕಾಮರಾಜೇನ ಸಂಯುತೈಃ ॥ ೧೦ ॥

ನವೈತಾನಸಿತಾಂಗಾದೀ೯ ನಾಯಿಕಾ೯ ಪೂಜಯೇತ್ಕ್ರಮಾತ್ ।
ಮಂಡಲಸ್ಯ ಚತುರ್ದಿಕ್ಷು ದ್ವೌ ದ್ವೌ ಪೂರ್ವಾದಿಷು ಕ್ರಮಾತ್ ॥ ೧೧ ॥

ಪದ್ಮಮಂಡಲಯೋರ್ಮಧ್ಯೇ ಶೇಷಮೇಕಂ ತು ಪೂಜಯೇತ್ ।
ಅಸಿತಾಂಗೋ ರುರುಶ್ಚಂಡಃ ಕ್ರೋಧೋನ್ಮತ್ತೋ ಭಯಂಕರಃ ॥ ೧೨ ॥

ಕಪಾಲೀ ಭೀಷಣಶ್ಚೈವ ಸಂರೀತಿಶ್ಚೇತಿ ವೈ ನವ ।
ಏಶಾನ್ಯಾದಿಕ್ರಮಾದ್ದ್ವೌ ದ್ವೌ ನಾಯಿಕೇ ಪೂಜಯೇನ್ನರಃ ॥ ೧೩ ॥

ಪದ್ಮಮಂಡಲಯೋರ್ಮಧ್ಯೇ ಅಗ್ನೌ ದ್ವೌ ಚ ಪ್ರಪೂಜಯೇತ್ ।
ಬ್ರಹ್ಮಾಣೀಂ ಭೈರವೀಂ ಚಾಪಿ ತಥಾ ಮಾಹೇಶ್ವರೀಮಪಿ ॥ ೧೪ ॥

೧೦-೧೧. ಈ ನಾಯಕರ ಎಂಟುಮಂತ್ರಗಳೂ, ಕಾಮರಾಜಮಂತ್ರವೂ, ಸೇರಿ ಆಗುವ ಒಟ್ಟು ಒಂಭತ್ತು ಮಂತ್ರಗಳಿಂದ ಅಸಿತಾಂಗನೇ ಮೊದಲಾಗಿ ಮುಂದೆ ಹೇಳುವ ಒಂಭತ್ತು ಮಂದಿ ನಾಯಕರನ್ನು ಕ್ರಮವಾಗಿ ಪೂಜಿಸಬೇಕು. ಹೇಗೆಂದರೆ, ಪೂರ್ವದಿಕ್ಕಿನಿಂದಲೇ ಮೊದಲು ಮಾಡಿಗೊಂಡು ಮಂಡಲದ ನಾಲ್ಕುದಿಕ್ಕುಗಳಲ್ಲಿ, ಕ್ರಮವಾಗಿ ಇಬ್ಬಿಬ್ಬರು ನಾಯಕರನ್ನೂ ಪದ್ಮ ಮತ್ತು ಮಂಡಲಗಳಮಧ್ಯದಲ್ಲಿ ಉಳಿದ ಇನ್ನೊಬ್ಬ ನಾಯಕನನ್ನೂ ಪೂಜಿಸಬೇಕು.

೧೨. ಅಸಿತಾಂಗ, ರುರು, ಚಂಡ, ಕ್ರೋಧ, ಉನ್ಮತ್ತ, ಭಯಂಕರ, ಕಪಾಲೀ, ಭೀಷಣ, ಸಂರೀತೀ ಎಂಬ ಈ ಒಂಭತ್ತು ಜನಗಳೇ ನಾಯಕರು. ಈ ಒಂಭತ್ತುಮಂದಿಯಲ್ಲಿ ಅಸಿತಾಂಗ, ರುರು ಎಂಬುವರನ್ನು ಮಂಡಲದ ಪೂರ್ವದಿಕ್ಕಿನಲ್ಲಿಯೂ, ಚಂಡ, ಕ್ರೋಧ ಎಂಬುವರನ್ನು ದಕ್ಷಿಣದಿಕ್ಕಿನಲ್ಲಿಯೂ, ಉನ್ಮತ್ತ, ಭಯಂಕರ ಎಂಬುವರನ್ನು ಪಶ್ಚಿಮದಿಕ್ಕಿನಲ್ಲಿಯೂ, ಕಪಾಲೀ ಭೀಷಣ ಎಂಬುವರನ್ನು ಉತ್ತರದಿಕ್ಕಿನಲ್ಲಿಯೂ, ಸಂರೀತಿ ಎಂಬ ಭೈರವನಾಯಕನನ್ನು ಪದ್ಮಮಂಡಲಗಳ ಮಧ್ಯವಲ್ಲಿಯೂ ಪೂಜಿಸಬೇಕು.

೧೪-೧೫. ಇವರಲ್ಲದೆ ಬ್ರಹ್ಮಾಣೀ, ಭೈರವೀ, ಮಾಹೇಶ್ವರೀ, ಕೌಮಾರಿ, ವೈಷ್ಣವೀ, ನಾರಸಿಂಹೀ, ವಾರಾಹೀ, ಇಂದ್ರಾಣೀ, ಚಾಮುಂಡಾ, ಚಂಡಿಕಾ, ಎಂಬ

ಕೌಮಾರೀಂ ವೈಷ್ಣವೀಂ ಚೈವ ನಾರಸಿಂಹೀಂ ತಥೈವ ಚ ।
ವಾರಾಹೀಂ ಚ ತಥೇಂದ್ರಾಣೀಂ ಚಾಮುಂಡಾಂ ಚಂಡಿಕಾಂ ತಥಾ ॥೧೫॥

ಆಧಾರಶಕ್ತಿಪ್ರಭೃತೀರ್ಮ ಮಂಡಲಸ್ಯ ತು ಮಧ್ಯತಃ ।
ವೈಷ್ಣವೀತಂತ್ರಕಲ್ಪೋಕ್ತಾ ಸರ್ವಾ ಭೈರವ ಪೂಜಯೇತ್ ॥ ೧೬ ॥

ಶಿವಸ್ಯ ಪಂಚ ಯಾಃ ಪ್ರೋಕ್ತಾಃ ಸದ್ಯೋಜಾತಾದಯಃ ಪುರಾ ।
ಮೂರ್ತಯಸ್ತಾಃ ಪದ್ಮಮಧ್ಯೇ ಪಂಚ ಪ್ರೇತತ್ವಮಾಗತಾಃ ॥ ೧೭ ॥

ತಾಃ ಪಂಚ ಪೂಜಯೇನ್ಮಧ್ಯೇ ರಕ್ತಪದ್ಮಂ ಶವಂ ತಥಾ ।
ಸಿಂಹಂ ಚ ಪೂಜಯೇತ್ತತ್ರ ಜಗದಾಧಾರಸಂಜ್ಞಿತಂ ॥ ೧೮ ॥

ಜಯಂತೀಂ ಮಂಗಲಾಂ ಕಾಲೀಂ ಭದ್ರಕಾಲೀಂ ಕಪಾಲಿನೀಂ ।
ದುರ್ಗಾಂ ಕ್ಷಮಾಂ ಶಿವಾಂ ಧಾತ್ರೀಂ ಸ್ವಧಾಂ ಸ್ವಾಹಾಂ ಚ ಪೂಜಯೇತ್ ॥

ಈ ಹತ್ತು ಜನ ನಾಯಿಕೆಯರಿರುವರು. ಈ ಹತ್ತುಮಂದಿ ನಾಯಿಕೆಯರಲ್ಲಿ ಈಶಾನ್ಯ ದಿಕ್ಕಿನಲ್ಲಿ ಬ್ರಹ್ಮಾಣೀ ಭೈರವೀ ಎಂಬುವರನ್ನೂ ಆಗ್ನೇಯದಿಕ್ಕಿನಲ್ಲಿ ಮಾಹೇಶ್ವರೀ ಕೌಮಾರಿಯನ್ನೂ, ನೈರ್ಋತ್ಯದಿಕ್ಕಿನಲ್ಲಿ ವೈಷ್ಣವೀ ನಾರಸಿಂಹಿಯರನ್ನೂ, ವಾಯುವ್ಯ ದಿಕ್ಕಿನಲ್ಲಿ ವಾರಾಹೀ ಇಂದ್ರಾಣಿಯರನ್ನೂ ಪದ್ಮಮಂಡಲಗಳ ಮಧ್ಯದಲ್ಲಿ ಚಾಮುಂಡಾ, ಚಂಡಿಕೆಯರನ್ನೂ ಪೂಜಿಸಬೇಕು.

೧೬. ವೈಷ್ಣವೀತಂತ್ರ ಮತ್ತೂ ಕಲ್ಪಗಳಲ್ಲಿ ಹೇಳಿರುವ ಕ್ರಮದಂತೆ ಆಧಾರಶಕ್ತಿಯೇ ಮೊದಲಾದ ಸಕಲದೇವತೆಯರನ್ನೂ ಮಂಡಲದ ಮಧ್ಯದಲ್ಲಿ ಪೂಜಿಸಬೇಕು.

೧೭. ಹಿಂದೆ ಹೇಳಿದ ಶಿವನ ಸದ್ಯೋಜಾತವೇ ಮೊದಲಾದ ಐದು ಮೂರ್ತಿಗಳು ಪದ್ಮದ ಮಧ್ಯದಲ್ಲಿ ಪ್ರೇತಭಾಗವನ್ನು ಹೊಂದಿರುವುವು.

೧೮ ಆ ಐದು ಮೂರ್ತಿಗಳನ್ನೂ ಪದ್ಮಮಧ್ಯದಲ್ಲಿ ಪೂಜಿಸಬೇಕು. ರಕ್ತಕಮಲ, ಶವ, ಜಗದಾಧಾರವೆಂಬ ಹೆಸರುಳ್ಳ ದೇವಿಯ ಸಿಂಹಾಸನವಾದ ಸಿಂಹ, ಇವನ್ನೂ ಅಲ್ಲಿ ಪೂಜಿಸಬೇಕು.

೧೯-೨೦. ಜಯಂತೀ, ಮಂಗಲಾ, ಕಾಲೀ, ಭದ್ರಕಾಲೀ, ಕಪಾಲಿನೀ, ದುರ್ಗಾ, ಕ್ಷಮಾದೇವೀ, ಶಿವಧಾತ್ರೀ, ಸ್ವಾಹಾ, ಸ್ವಧಾ ಇವರನ್ನು ಪೂಜಿಸಿ ಉಗ್ರಚಂಡಾ,

ಉಗ್ರಚಂಡಾ ಪ್ರಚಂಡಾ ಚ ಚಂಡೋಗ್ರಾ ಚಂಡನಾಯಿಕಾ ।
ಚಂಡಾ ಚಂಪವತೀ ಚೈವ ಚಂಡೋಗ್ರಾ ಚಂಡನಾಯಿಕಾ ॥ ೨೦ ॥

ಏತಾಃ ಸಂಪೂಜಯೇನ್ಮಧ್ಯೇ ಮಂಡಲಸ್ಯ ವಿಶೇಷತಃ ।
ಆದಿತ್ಯಾದೀ ಗ್ರಹಾನ್ ಸರ್ವಾನ್ ರೂಪತೋ ಽಸ್ತ್ರಸಂಯುತಾನ್ ॥ ೨೧ ॥

ಕ್ರಮಾತ್ಪ್ರತ್ಯೇಕಮುದ್ದಿಶ್ಯ ಪಾರ್ಶ್ವೇ ಪಾರ್ಶ್ವೇ ಪ್ರಪೂಜಯೇತ್ ।
ದಿಕ್ಪಾಲಾನಾಂ ತು ಮಂತ್ರೇಣ ತಥಾ ಸರ್ವಾಂಸ್ತು ದಿಕ್ಪತೀನ್ ॥ ೨೨ ॥

ಅಸ್ತ್ರಮಂತ್ರೈಸ್ತು ತಾನ್ ಸರ್ವಾನ್ ತೇಷಾಂ ಮಂತ್ರಾಣಿ ಭೈರವ ।
ನಾಥಂ ಕಾಮೇಶ್ವರಂ ತತ್ರ ಏಕವಕ್ತ್ರಂ ಚತುರ್ಭುಜಂ ॥ ೨೩ ॥

ಭಸ್ಮಶ್ವೇತಂ ಮಧ್ಯಹೃದಿ ರಕ್ತಪುಷ್ಪೈಸ್ತು ಕುಂಕುಮೈಃ ।
ತ್ರಿಶೂಲಂ ಚ ಪಿನಾಕಂ ಚ ವಾಮದಕ್ಷಿಣಹಸ್ತಯೋಃ ಸ್ಥಿತಂ ॥ ೨೪ ॥

ಉತ್ಪಲಂ ಬೀಜಪೂರಂ ಚ ದಕ್ಷಿಣಂ ದ್ವಿತಯೇ ತಥಾ ।
ಶ್ವೇತಪದ್ಮೋಪರಿಸ್ಥಂ ಚ ಧ್ಯಾತ್ವಾ ಮಧ್ಯೇ ಪ್ರಪೂಜಯೇತ್ ॥ ೨೫ ॥

ಪ್ರಚಂಡಾ, ಚಂಡೋಗ್ರಾ, ಚಂಡನಾಯಿಕಾ, ಚಂಡಾ, ಚಂಪವತೀ, ಚಂಡೋಗ್ರಾ, ಚಂಡನಾಯಿಕಾ, ಇವರುಗಳನ್ನೂ ವಿಶೇಷವಾಗಿ ಮಂಡಲದ ಮಧ್ಯದಲ್ಲಿ ಪೂಜಿಸಬೇಕು.

೨೧. ಸೂರ್ಯನೇ ಮೊದಲಾದ ನವಗ್ರಹಗಳನ್ನು ಅವರವರ ರೂಪ, ಅಸ್ತ್ರ ಆಯುಧ, ಅಲಂಕಾರ, ವಾಹನ, ಇವುಗಳ ಸಹಿತ ಪ್ರತ್ಯೇಕವಾಗಿ ಮಂಡಲದ ಪಾರ್ಶ್ವದಲ್ಲಿ ಪೂಜಿಸಬೇಕು.

೨೨. ಎಲೈ ಭೈರವನೇ ಇಂದ್ರ, ಅಗ್ನಿ, ಯಮ, ನಿರ್ಋತಿ, ವರುಣ ವಾಯು, ಕುಬೇರ, ಈಶಾನರೆಂಬ ಎಂಟು ಮಂದಿ ದಿಕ್ಪಾಲಕರೆಲ್ಲರನ್ನು ಅವರವರ ಮಂತ್ರಗಳಿಂದಲೂ ಅಸ್ತ್ರಮಂತ್ರಗಳಿಂದಲೂ ಪೂಜಿಸಬೇಕು.

೨೩. ಒಂದೇ ಮುಖವುಳ್ಳವನೂ, ನಾಲ್ಕುಭುಜಗಳುಳ್ಳವನೂ, ಭಸ್ಮಭೂಷಿತನೂ ಜಗದೊಡೆಯನೂ, ಆದ ಕಾಮೇಶ್ವರನನ್ನು ಹೃದಯದಲ್ಲಿ ರಕ್ತಪುಷ್ಪಗಳಿಂದಲೂ, ಕುಂಕುಮಗಳಿಂದಲೂ, ಪೂಜಿಸಬೇಕು.

೨೪-೨೫. ಆ ಕಾಮೇಶ್ವರನು ಎಡಗೈಗಳಿರಡರಲ್ಲಿ ತ್ರಿಶೂಲ ಮತ್ತು ಪಿನಾಕ ಧನಸ್ಸುಗಳನ್ನೂ, ಬಲಗೈಗಳಲ್ಲಿ ಕನ್ನೈದಿಲೆ ಮತ್ತು ಬೀಜಪೂರಾ (ಸೀಬೆ) ಫಲವನ್ನು ಹಿಡಿದು ಬಿಳಿಯಕಮಲದಲ್ಲಿ ಕುಳಿತಿರುವನು. ಇಂತಪ ಕಾಮೇಶ್ವರನನ್ನು ಹೃದಯದಲ್ಲಿ ಧ್ಯಾನಿಸಿ ಪೂಜಿಸಬೇಕು.

ಕಾಮಾಖ್ಯಾಂ ಮೂರ್ತಿತೋ ಧ್ಯಾತ್ವಾ ಕಾಮಾಖ್ಯಾಮಪಿ ಪೂಜಯೇತ್ ।
ಕಾಮೇಶ್ವರೀಂ ತತ್ರ ದೇವೀಂ ಪೂಜಯೇತ್ಪರಮೇಶ್ವರೀಂ ॥ ೨೬ ॥

ವಕ್ಷ್ಯಮಾಣೇನ ರೂಪೇಣ ತತ್ರ ವೇತಾಲಭೈರವೌ ।
ಕರಾಲಂ ಕ್ಷೇತ್ರಪಾಲಂ ಚ ಖಡ್ಗಕರ್ಪರಧಾರಿಣಂ ॥ ೨೭ ॥

ಪೂಜಯೇದೀಶಮತ್ಯರ್ಥಂ ದಂಷ್ಟ್ರಾಭಿನ್ನಾಧರಂ ಭವಂ ।
ತಿಂತಿಡೀಂ ಕಲ್ಪವೃಕ್ಷಂ ಚ ಸುಚ್ಛಾಯಂ ರತ್ನಭೂಷಿತಂ ॥ ೨೮ ॥

ತ್ರಿಕೂಟಂ ಕೃಷ್ಣವರ್ಣಂ ಚ ನೀಲಶೈಲಂ ಮಹಾದ್ಯುತಿಂ ।
ಮನೋಭವಾಂ ಗುಹಾಂ ತತ್ರ ಪಂಚವ್ಯಾಮಾಯತಾಂ ಶುಭಾಂ ॥ ೨೯ ॥

ರತ್ನಮಂಡಲಸಂಯುಕ್ತಾಂ ರಕ್ತವರ್ಣಾಂ ಸುವರ್ತುಲಾಂ ।
ಅಪರಾಜಿತಾಂ ಚ ವಲ್ಲೀಂ ಚ ವ್ಯಾಮತ್ರಯಸುವಿಸ್ತೃತಾಂ ॥ ೩೦ ॥

---

೨೬. ಎಲ್ಲೆವೇತಾಲ ಭೈರವರೇ, ಕಾಮಾಖ್ಯಾಮೂರ್ತಿಯನ್ನು ಧ್ಯಾನಿಸಿ ಪೂಜಿಸಬೇಕು. ಪರಮೇಶ್ವರಿಯಾದ ಕಾಮೇಶ್ವರೀ ದೇವಿಯನ್ನು ಮುಂದೆ ಹೇಳುವ ರೂಪದಂತೆ ಪೂಜಿಸಬೇಕು.

೨೭. ಬಳಿಕ ಕ್ಷೇತ್ರಪಾಲನಾದ ಕರಾಲನನ್ನು ಪೂಜಿಸಬೇಕು. ಅವನು ಖಡ್ಗಾದ್ಯಾಯುಧಗಳನ್ನು ಧರಿಸಿರುವನು. ಅವನ ಕೋರೆಹಲ್ಲುಗಳು ತುಟಿಗಳನ್ನು ಅತಿಕ್ರಮಿಸಿ ಹೊರಕ್ಕೆ ಚಾಚಿಕೊಂಡು ಭಯಂಕರವಾಗಿ ಕಾಣಿಸುತ್ತಿರುವವು.

೨೮. ಬಳಿಕ ಹಿತಕರವಾದ ನೆರಳಿನಿಂದಲೂ, ರತ್ನಾದ್ಯಲಂಕಾರಗಳಿಂದಲೂ, ಶೋಭಿಸುವ ತಿಂತಿಡೀ ಎಂಬ ಕಲ್ಪವೃಕ್ಷವನ್ನೂ, ಮೂರುಶಿಖರಗಳಿಂದ ಕೂಡಿ ಕಪ್ಪು ಬಣ್ಣದ ನೀಲಶೈಲವೆಂಬ ಮಹಾಪ್ರಕಾಶಯುಕ್ತವಾದ ಪರ್ವತವನ್ನೂ, ಪೂಜಿಸಬೇಕು.

೨೯. ಆ ನೀಲಕೂಟಪರ್ವತದಲ್ಲಿ ಐದುವ್ಯಾಮಗಳ ವಿಸ್ತಾರವುಳ್ಳ, ಮನೋಭವವೆಂಬ ಗುಹೆ ಇರುವುದು. ಅದು ವರ್ತುಲಾಕಾರವಾಗಿಯೂ, ರತ್ನಮಯವಾದ ಮಂಡಲದಿಂದ ಕೆಂಪುಕಾಂತಿಯುಳ್ಳದ್ದಾಗಿ ಮನೋಹರವಾಗಿರುವುದು. ಇಂತಹ ಮನೋಭವ ಗುಹೆಯನ್ನು ಪೂಜಿಸಬೇಕು.

೩೦. ಮೂರು ವ್ಯಾಮವಿಸ್ತಾರವಾದುದೂ, ಕೆಂಪುವರ್ಣವುಳ್ಳದುದೂ, ಸದಾ ಪುಷ್ಪಗಳಿಂದ ಶೋಭಿಸುತ್ತಿರುವುದೂ, ಆದ "ಅಪರಾಜಿತಾ" ಎಂಬ ಲತೆಯನ್ನೂ, ಅಲ್ಲಿ ಪೂಜಿಸಬೇಕು.

ಆರಕ್ತವರ್ಣಾಂ ಸತತಂ ಕುಸುಮೈರುಪಶೋಭಿತಾಂ ।
ವಟುಕಂ ಕಂಬಲಾಖ್ಯಂ ತು ಸ್ವರ್ಣಗೌರಂ ಗಜಾಸನಂ ॥ ೩೧ ॥

ದ್ವಿಭುಜಂ ದಕ್ಷಿಣೇ ದಂಡಪಾಣಿಂ ವಾಮೇ ಕಪಾಲಕಂ ।
ಬಿಭ್ರತಂ ಪುರತೋ ದೇವ್ಯಾಃ ಪೂಜ್ಯೋ ವಿಘ್ನವಿಪತ್ತಯೇ ॥ ೩೨ ॥

ಭೈರವಂ ಪಾಂಡುನಾಥಶ್ಚ ರಕ್ತಗೌರಶ್ಚತುರ್ಭುಜಃ ।
ಗದಾಂ ಪದ್ಮಂ ಚ ಶಕ್ತಿಂ ಚ ಚಕ್ರಂ ಚಾಪಿ ಕರೇಷು ಚ ॥ ೩೩ ॥

ಬಿಭ್ರದ್ದೇವ್ಯಾಃ ಪುರೋಭಾಗೇ ಪೂಜ್ಯೋಽಯಂ ವಿಷ್ಣುರೂಪಧೃಕ್ ।
ಶ್ಮಶಾನಂ ಹೇರುಕಾಖ್ಯಂ ಚ ರಕ್ತವರ್ಣಂ ಭಯಂಕರಂ ॥ ೩೪ ॥

ಅಸಿಚರ್ಮಧರಂ ರೌದ್ರಂ ಭುಂಜಾನಂ ಮನುಜಾಮಿಷಂ ।
ತಿಸೃಭಿರ್ಮುಂಡಮಾಲಾಭಿರ್ಗಲದ್ರಕ್ತಾಭಿರಾಜಿತಂ ॥ ೩೫ ॥

೩೧-೩೨ ಚಿನ್ನದಂತೆ ಗೌರವಾದ ವರ್ಣವುಳ್ಳವನೂ, ಆನೆಯಮೇಲೆ ಕುಳಿತಿರುವವನೂ, ಎರಡು ಭುಜಗಳುಳ್ಳವನೂ, ಬಲಗೈಯಲ್ಲಿ ದಂಡವನ್ನೂ ಎಡಗೈಯಲ್ಲಿ ಕಪಾಲವನ್ನೂ ಧರಿಸಿರುವನೂ ಆದ "ಕಂಬಲನೆಂಬ" ವಟುವನ್ನು ದೇವಿಯ ಮುಂದು ಗಡೆ ವಿಘ್ನನಿವಾರಣೆಗಾಗಿ ಪೂಜಿಸಬೇಕು.

೩೩. ಬಳಿಕ ಪಾಂಡುನಾಥನೆಂಬ ಭೈರವನನ್ನು ದೇವಿಯ ಮುಂಭಾಗದಲ್ಲಿ ಪೂಜಿಸಬೇಕು. ಇವನು ರಕ್ತಮಿಶ್ರವಾದ ಗೌರವರ್ಣದ ಶರೀರಕಾಂತಿಯಿಂದಲೂ, ನಾಲ್ಕು ಭುಜಗಳಿಂದಲೂ, ಶೋಭಿಸುತ್ತಾ ಇರುವನು.

೩೪-೩೬ ಆಮೇಲೆ ಕೆಂಪಾದ ಶರೀರಕಾಂತಿಯಿಂದ, ಕತ್ತಿ ಗುರಾಣಿಗಳನ್ನು ಧರಿಸಿ ಅತಿಭಯಂಕರನಾಗಿ ಕಾಣುತ್ತಿರುವ ಹೇರುಕನೆಂಬ ಹೆಸರಿನ ಶ್ಮಶಾನಪುರುಷನು ಅಲ್ಲಿರುವನು. ಆ ಹೇರುಕನು ರಕ್ತಸುರಿಯುತ್ತಿರುವ ಮೂರು ಮುಂಡಗಳ ಮಾಲೆಯನ್ನು ಕಂಠದಲ್ಲಿ ಧರಿಸಿ ಮನುಷ್ಯಮಾಂಸವನ್ನು ತಿನ್ನುತ್ತಿರುವನು. ಅಲ್ಲದೆ ಅವನು ಬೆಂಕಿಯಿಂದ ಸುಡುತ್ತಿರುವ ಶವದ ಮೇಲೆ ಕುಳಿತಿರುವನು. ಆ ಶವದ ಹಲ್ಲುಗಳು ಬೆಂಕಿಯಿಂದ ಸುಡುವಾಗ ಛಟಛಟವೆಂದು ಉದುರುತ್ತಿರುವವು. ಇಂತಹ ಭಯಂಕರವಾದ ಶವವೆಂಬ ವಾಹನದ ಮೇಲೆ ಆಯುಧಪಾಣಿಯಾಗಿ ಕುಳಿತಿರುವ ಹೇರುಕನನ್ನು ಧ್ಯಾನದಿಂದಲೇ ಪೂಜಿಸಬೇಕು.

ಅಗ್ನಿನಿರ್ದಗ್ಧವಿಗಲದ್ದಂತಪ್ರೇತೋಪರಿ ಸ್ಥಿತಂ।
ಪೂಜಯೇಚ್ಚಿಂತನೇನೈವ ಶಸ್ತ್ರವಾಹನಭೂಷಣಂ ॥ ೩೬ ॥

ಮಹೋಚ್ಛ್ವಾಸಾಂ ಯೋಗಿನೀಂ ತು ಮಹಾಮಾಯಾಸ್ವರೂಪಿಣೀಂ।
ಧ್ಯಾನತೋ ರೂಪತಸ್ತಾಂ ತು ದೇವ್ಯಾ ಅಗ್ರೇ ಪ್ರಪೂಜಯೇತ್ ॥ ೩೭ ॥

ಪುರೀಂ ಚಂದ್ರವತೀಂ ದೇವ್ಯಾ ನೀಲಪರ್ವತಪೂರ್ವತಃ।
ಯೋಜನದ್ವಯವಿಸ್ತೀರ್ಣಾಮರ್ಧಯೋಜನಮಾಯತಾಂ ॥ ೩೮ ॥

ಉಚ್ಚೈರನೇಕಪ್ರಾಸಾದಸೌಧಸದ್ಮವಿಭೂಷಿತಾಂ।
ಮಣಿರತ್ನ ಸುವರ್ಣೌಘಜಾತಪ್ರಾಸಾದವಿಸ್ತೃತಾಂ ॥ ೩೯ ॥

ಕ್ರೀಡಾಸರೋವರೈಃ ಸದ್ಭಿಃ ಸಂಛನ್ನಾಂ ವಿಕಚೈಃ ಕಚೈಃ।
ಸಂಯುಕ್ತಾಂ ಪೂಜಯೇತ್ತತ್ರ ದೇವ್ಯಾ ಅಗ್ರೇ ಸಮಂತ್ರಕಂ ॥ ೪೦ ॥

ಲೌಹಿತ್ಯಂ ರಕ್ತಗೌರಾಂಗಂ ನೀಲವಸ್ತ್ರವಿಭೂಷಿತಂ।
ರತ್ನಮಾಲಾಸಮಾಯುಕ್ತಂ ಚತುರ್ಬಾಹುಸಮನ್ವಿತಂ ॥ ೪೧ ॥

---

೩೭. ಮಹಾಮಾಯಾಸ್ವರೂಪಿಣಿಯಾದ "ಮಹೋಚ್ಛ್ವಾಸಾ" ಎಂಬ ಯೋಗಿನಿಯನ್ನು ಧ್ಯಾನದಿಂದಲೂ, ರೂಪದಿಂದಲೂ ದೇವಿಯ ಮುಂಭಾಗದಲ್ಲಿ ಪೂಜಿಸಬೇಕು.

೩೮-೪೦. ನಿಲಶೈಲದ ಪೂರ್ವಭಾಗದಲ್ಲಿ ಎರಡುಯೋಜನ ವಿಸ್ತಾರವಾಗಿಯೂ ಅರ್ಧಯೋಜನ ದೀರ್ಘವಾಗಿಯೂ, ಇರುವಂತಹ "ಚಂದ್ರಾವತೀ" ಯೆಂಬ ದೇವಿಯ ಪುರಿಯು ಇರುವುದು. ಆ ನಗರವು ರತ್ನಖಚಿತವಾದ ಅನೇಕ ಭವನಗಳಿಂದಲೂ, ಉಪ್ಪರಿಗೆಗಳಿಂದಲೂ, ಅರಮನೆಗಳಿಂದಲೂ, ನಿಬಿಡವಾಗಿರುವುದು. ಆ ಪುರಿಯಲ್ಲಿರುವ ಅನೇಕ ಕ್ರೀಡಾಸರೋವರಗಳಲ್ಲಿ ಸುವರ್ಣಕಮಲಗಳು ಅರಳಿ ಸುಸೋಭವಾಗಿ ಒಪ್ಪುತ್ತಿರುವವು. ಇಂತಹ ಪುರಿಯನ್ನು ದೇವಿಯ ಮುಂಭಾಗದಲ್ಲಿ ಮಂತ್ರ ಪೂರ್ವಕವಾಗಿ ಪೂಜಿಸಬೇಕು.

೪೧-೪೨. ಬಳಿಕ ಬ್ರಹ್ಮಪುತ್ರನಾದ ಲೌಹಿತ್ಯನೆಂಬ ನಿಯತ ಪರಿವಾರದೇವತೆಯನ್ನು ಪೂಜಿಸಬೇಕು. ಆ ದೇವನು ರಕ್ತಗೌರಮಿಶ್ರವಾದ ಶರೀರಕಾಂತಿಯುಳ್ಳವನು. ನೀಲವಸ್ತ್ರವನ್ನು ಧರಿಸಿರುವನು. ಕತ್ತಿನಲ್ಲಿ ರತ್ನಮಯವಾದ ಹಾರವು ಬೆಳಗು

ಪುಸ್ತಕಂ ಶ್ವೇತಪದ್ಮಂ ಚ ಬಿಭ್ರತಂ ದಕ್ಷಿಣೇ ಕರೇ।
ವಾಮೇ ಶಕ್ತಿಂ ಧ್ವಜಂ ಚೈವ ಶಿಶುಮಾರಸ್ಥಿತಂ ಶುಭಂ ॥ ೪೨ ॥

ಪೀಠೇಶ್ವರಾನಿಮಾನ್ಪಶ್ಚೇ ಮಂತ್ರೈರೇತೈಃ ಪ್ರಪೂಜಯೇತ್।
ನಾಥಂ ಕಾಮೇಶ್ವರಂ ದೇವಂ ಪ್ರಾಸಾದೇನ ಪ್ರಪೂಜಯೇತ್ ॥ ೪೩ ॥

ದ್ವಾವುಪಾಂತೌ ಬಲೇನೈವ ಮದನಾಂತೇ ಚ ತತ್ಕ್ರಮಾತ್ ॥ ೪೪ ॥
ಯೋಜಯೇನ್ನಾದಬಿಂದುಭ್ಯಾಮಾಸಾಕಾರಮನುಮಂತ್ರಕಂ।

ಚಂಡಿಕಾನೇತ್ರಬೀಜಸ್ಯ ಯಚ್ಛೇಷಮಕ್ಷರಂ ತು ತತ್ ॥ ೪೫ ॥

ಕಲ್ಪಂ ತಿಂತಿಡಿಕಾವೃಕ್ಷಮಂತ್ರಮೇತತ್ಪ್ರಕೀರ್ತಿತಂ।
ಉಗ್ರಾಯಾ ಮಧ್ಯಬೀಜಂ ತು ನೀಲಶೈಲಸ್ಯ ಮಂತ್ರಕಂ ॥ ೪೬ ॥

ತ್ತಿರುವುದು. ನಾಲ್ಕುಭುಜಗಳಿಂದ ಶೋಭಿಸುತ್ತಿರುವನು. ಬಲಗೈಗಳಲ್ಲಿ ಪುಸ್ತಕವನ್ನೂ, ಬಿಳಿಯಕಮಲವನ್ನೂ, ಎಡಗೈಗಳಲ್ಲಿ ಶಕ್ತ್ಯಾಯುಧ ಮತ್ತು ಧ್ವಜವನ್ನೂ ಪಿಡಿದಿರುವನು. ಶಿಶುಮಾರನೆಂಬ ಜಲಪ್ರಾಣಿಯ ಮೇಲೆ ಕುಳಿತು ಶೋಭಿಸುತ್ತಿರುವ ಇಂತಹ ಲೌಹಿತ್ಯದೇವನನ್ನು ಪೂಜಿಸಬೇಕು.

೪೩. ಹಿಂದೆ ಹೇಳಿದ ಪೀಠಾಧಿಪತಿದೇವತೆಗಳನ್ನು ಈಗ ಹೇಳುವ ಮಂತ್ರಗಳಿಂದಲೂ ಜಗದೊಡೆಯನಾದ ಕಾಮೇಶ್ವರದೇವನನ್ನು ಪ್ರಾಸಾದ ಮಂತ್ರದಿಂದಲೂ ಪೂಜಿಸಬೇಕು.

೪೪-೪೫. ಬಲಬೀಜಾಕ್ಷರ ಮತ್ತು ಮದನಬೀಜಾಕ್ಷರಗಳಿಗೆ ಕ್ರಮವಾಗಿ ಕಡೆಯಸ್ವರಗಳ ಹಿಂದಿನ ಸ್ವರಗಳಾದ ಓ ಔ ಗಳನ್ನೂ ಬಿಂದುವನ್ನೂ ಸೇರಿಸಬೇಕು. ಮತ್ತು ಈ ಎರಡು ಅಕ್ಷರಗಳಿಗೆ ಚಂಡಿಕಾ ದೇವಿಯ ನೇತ್ರಬಿಜಾಕ್ಷರವನ್ನು ಮೂರನೆಯ ಅಕ್ಷರವಾಗಿ ಸೇರಿಸಬೇಕು. ಈ ಮೂರು ಅಕ್ಷರಗಳಿಂದ ಕೂಡಿವ ಮಂತ್ರವು ತಿಂತಿಡಿಕಾ ಎಂಬ ಕಲ್ಪವೃಕ್ಷವನ್ನು ಪೂಜಿಸುವ ಮಂತ್ರವೆಂದು ಹೇಳಲ್ಪಡುವುದು.

೪೬. ಉಗ್ರಾದೇವಿಯ ಪೆಸರಿನ ಮಧ್ಯಾಕ್ಷರವಾದ ಗ್ರಾ ಎಂಬ ವರ್ಣಕ್ಕೆ ಬಿಂದುವನ್ನು ಸೇರಿಸಿದರೆ ನೀಲಪರ್ವತವನ್ನು ಪೂಜಿಸುವ ಮಂತ್ರವಾಗುವುದು.

ಮನೋಭವಸ್ಯ ಬೀಜಂ ತು ಮಹಾದೇವೇನ ಸಂಹಿತಂ ।
ಚಂದ್ರಬಿಂದುಸಮಾಯುಕ್ತಂ ತನ್ಮಂತ್ರಂ ಚಾಪರಾಜಿತಂ ॥ ೪೭ ॥

ಹಯಗ್ರೀವಸ್ವರೂಪಸ್ಯ ವಿಷ್ಣೋರ್ಯದ್ಬೀಜಮುತ್ತಮಂ ।
ಕಂಬಲಸ್ಯ ತು ತನ್ಮಂತ್ರಂ ಪೂಜನಂ ಪರಿಕೀರ್ತಿತಂ ॥ ೪೮ ॥

ಕೇವಲಃ ಸಪ್ರರೋಹಾದಿಷಷ್ಠಸ್ವರಸಮನ್ವಿತಃ ।
ಚಂದ್ರಬಿಂದುಸಮಾಯುಕ್ತಂ ಹಯಗ್ರೀವಸ್ಯ ಬೀಜಕಂ ॥ ೪೯ ॥

ಭೈರವಂ ಪಾಂಡುನಾಥಂ ಚ ವನಮಾಲಿಸ್ವರೂಪಿಣಂ ।
ವಾರಾಹೇನ ತು ಬೀಜೇನ ಪೂಜಯೇತ್ತು ವಿಧಾನತಃ ॥ ೫೦ ॥

ಸಪರೌ ದ್ವಾವನುಸ್ವಾರವಿಸರ್ಗಾಭ್ಯಾಂ ತು ಸಂಯುತೌ ।
ಮಹಾಭೈರವಮಂತ್ರೇಣ ಭೈರವಾಂತೇನ ಪೂಜಯೇತ್ ॥ ೫೧ ॥

ಮಹೋಚ್ಛಾಸಾಂ ಮಹಾಮಾಯಾಂ ದ್ವಿತೀಯಾಷ್ಟಾಕ್ಷರೇಣ ತು ।
ದೇವೀತಂತ್ರೋದಿತೇನೈವ ಪೂಜಯೇದ್ಭೂತಿವೃದ್ಧಯೇ ॥ ೫೨ ॥

---

೪೭. ಮದನಬೀಜ, ಮಹಾದೇವಬೀಜ ಇವುಗಳಿಗೆ ಅನುಸ್ವಾರವನ್ನು ಸೇರಿಸಿದರೆ ಅಪರಾಜಿತವೆಂಬ ಲತೆಯನ್ನು ಪೂಜಿಸುವ ಮಂತ್ರವಾಗುವುದು.

೪೮. ಹಯಗ್ರೀವಸ್ವರೂಪಿಯಾದ ವಿಷ್ಣುವಿನ ಬೀಜಾಕ್ಷರವೇ ಕಂಬಲನೆಂಬ ವಟುವನ್ನು ಪೂಜಿಸುವ ಶ್ರೇಷ್ಠವಾದ ಮಂತ್ರವೆಂದು ಪ್ರಸಿದ್ಧಿಯು.

೪೯. ಹಕಾರಕ್ಕೆ ಆರನೇಸ್ವರವಾದ ಊಕಾರವನ್ನೂ ಬಿಂದುವನ್ನೂ ಸೇರಿಸಿದರೆ ಅದು ಹಯಗ್ರೀವಬೀಜಾಕ್ಷರವೆನಿಸುವುದು.

೫೦. ವನಮಾಲಿಸ್ವರೂಪಿಯಾದ ಪಾಂಡುನಾಥನೆಂಬ ಭೈರವಮೂರ್ತಿಯನ್ನು ವಾರಾಹಬೀಜಮಂತ್ರದಿಂದ ಕ್ರಮವಾಗಿ ಪೂಜಿಸಬೇಕು.

೫೧. ಸಕಾರದ ಮುಂದೆ ಅನುಸ್ವಾರ ವಿಸರ್ಗಗಳನ್ನು ಸೇರಿಸಿ ಕಡೆಯಲ್ಲಿ ಭೈರವಶಬ್ದವನ್ನು ಉಚ್ಚರಿಸಿದರೆ ಮಹಾಭೈರವನನ್ನು ಪೂಜಿಸುವ ಮಂತ್ರವಾಗುವುದು.

೫೨. ದೇವಿಯ ತಂತ್ರದಲ್ಲಿ ಹೇಳಿರುವ ಅಷ್ಟಾಕ್ಷರೀ ಮಂತ್ರದ ಎರಡನೇ ಮತ್ತು ಎಂಟನೇ ಅಕ್ಷರಗಳಿಂದ ಮಹಾಮಾಯಾಸ್ವರೂಪಿಣಿಯಾದ ಮಹೋಚ್ಛಾಸಾ ದೇವಿಯನ್ನು ಪೂಜಿಸಿದರೆ ಐಶ್ವರ್ಯವೃದ್ಧಿಯಾಗುವುದು.

ಆದ್ಯಾಕ್ಷರಂ ತು ಸಾಮೀಂದುಬಿಂದುಭ್ಯಾಂ ಸಮಲಂಕೃತಂ।
ಸ್ವನಾಮ್ನಶ್ಚಂದ್ರವತ್ಯಾಸ್ತು ಪೂಜಾಮಂತ್ರಂ ಪ್ರಕೀರ್ತಿತಂ ॥ ೫೩ ॥

ಸರ್ವಲಕ್ಷಣಸಂಪೂರ್ಣಾಂ ಸರ್ವಾಲಂಕಾರಭೂಷಿತಂ।
ಲೌಹಿತ್ಯನದರಾಜಸ್ಯ ಬ್ರಹ್ಮಪುತ್ರಸ್ಯ ಭೂತಿದಂ ॥
ಬ್ರಹ್ಮಬೀಜಂ ತು ಮನ್ಮಂತ್ರಂ ವಹ್ನಿಭಾರ್ಯಾಂತಮಿಷ್ಯತೇ ॥ ೫೪ ॥

ದ್ವಿತೀಯಂ ತ್ರಿಪುರಾರೂಪಂ ತಥೈವ ತು ತೃತೀಯಕಂ।
ಆವಾಹನಾರ್ಥಂ ದೇವ್ಯಾಸ್ತು ಚಿಂತಯೇದ್ಯೋನಿಮುದ್ರಯಾ ॥ ೫೫ ॥

ಬಂಧೂಕಪುಷ್ಪಸಂಕಾಶಾಂ ಜಟಾಜೂಟೇಂದುಮಂಡಿತಾಂ।
ಸರ್ವಲಕ್ಷಣಸಂಪೂರ್ಣಾಂ ಸರ್ವಾಲಂಕಾರಭೂಷಿತಾಂ ॥ ೫೬ ॥

ಉದ್ಯದ್ರವಿಪ್ರಭಾಂ ಪದ್ಮಪರ್ಯಂಕೇಷು ಸುಸಂಸ್ಥಿತಾಂ।
ಮುಕ್ತಾರತ್ನಾವಲೀಯುಕ್ತಾಂ ಪೀನೋನ್ನತಪಯೋಧರಾಂ ॥ ೫೭ ॥

---

೫೩. ದೇವಿಯ ನಗರಿಯಾವ ಚಂದ್ರವತೀ ಎಂಬ ಶಬ್ದದ ಮೊದಲನೇ ಅಕ್ಷರವಾವ ಚಕಾರಕ್ಕೆ ಅನುಸ್ವಾರವನ್ನು ಸೇರಿಸಿ ಉಚ್ಚರಿಸಿದರೆ ಆ ಪುರಿಯನ್ನು ಪೂಜಿಸುವ ಮಂತ್ರವಾಗುವುದು.

೫೪. ಬ್ರಹ್ಮಬೀಜಾಕ್ಷರಕ್ಕೆ ಅನುಸ್ವಾರವನ್ನು ಸೇರಿಸಿ ಕಡೆಯಲ್ಲಿ ಸ್ವಾಹಾ ಎಂಬ ಶಬ್ದವನ್ನು ಸೇರಿಸಿ ಉಚ್ಚರಿಸಿದರೆ, ಸರ್ವಲಕ್ಷಣಸಂಪನ್ನನಾಗಿಯೂ, ಸರ್ವಾಲಂಕಾರಭೂಷಿತನಾಗಿಯೂ ಇರುವ ಬ್ರಹ್ಮಪುತ್ರನಾದ ಲೌಹಿತ್ಯದೇವನನ್ನು ಪೂಜಿಸುವ ಮಂತ್ರವಾಗುವುದು. ಈ ಮಂತ್ರವು ಐಶ್ವರ್ಯವನ್ನು ಕೊಡುವುದು. ನನ್ನನ್ನು (ಈಶ್ವರ) ಪ್ರಾಸಾದ ಮಂತ್ರದಿಂದ ಸ್ವಾಪಾಕಾರದೊಡನೆ ಪೂಜಿಸಬೇಕು.

೫೫. ತ್ರಿಪುರಾದೇವಿಯನ್ನು ಆವಾಹನೆ ಮಾಡುವಾಗ ಆ ದೇವಿಯ ಎರಡನೆಯ ಮತ್ತು ಮೂರನೆಯ ರೂಪಗಳನ್ನು ಧ್ಯಾನಮಾಡಿ ಯೋನಿಮುದ್ರೆಯಿಂದ ಆವಾಹನೆ ಮಾಡಬೇಕು. ತ್ರಿಪುರಾದೇವಿಯ ಎರಡನೆಯ ರೂಪದ ಧ್ಯಾನಕ್ರಮವು ಈ ರೀತಿಯಾಗಿರುವುದು.

೫೬-೫೭. ತ್ರಿಪುರಾದೇವಿಯ,ಶರೀರಕಾಂತಿಯು ಬಂಧೂಕಪುಷ್ಪದಂತೆ ಕೆಂಪಾಗಿರುವುದು. ಶಿರಸ್ಸಿನಲ್ಲಿ ಚಂದ್ರಕಲೆಯು ಬೆಳಗುತ್ತಿರುವುದು. ಸರ್ವಸ್ತ್ರೀಲಕ್ಷಣಗ

ವಲೀವಿಭಂಗಚತುರಾಮಾಸವಾಮೋದಮೋದಿತಾಂ ।
ನೇತ್ರಾಹ್ಲಾದಕರೀಂ ಶುಭ್ರಾಂ ಕ್ಷೋಭಣೀಂ ಜಗತಾಂ ತಥಾ ॥ ೫೮ ॥

ತ್ರಿನೇತ್ರಾಂ ಯೋನಿಮುದ್ರಾಯಾಮಿಷದ್ಧಾಸಸಮಾಯುತಾಂ ।
ನವಯೌವನಸಂಪನ್ನಾಂ ಮೃಡಾಲಾಭಚತುರ್ಭುಜಾಂ ॥ ೫೯ ॥

ವಾಮೋರ್ಧ್ವೇ ಪುಸ್ತಕಂ ಧತ್ತೇ ಅಕ್ಷಮಾಲಾಂ ತು ದಕ್ಷಿಣೇ ।
ವಾಮೇನಾಭಯದಾಂ ದೇವೀಂ ದಕ್ಷಿಣಾಧೋ ವರಪ್ರದಾಂ ॥ ೬೦ ॥

ಸ್ರವದ್ರಕ್ತೌಘಸೂರ್ಯಾಭಾಂ ಶಿರೋಮಾಲಾಂ ತು ಬಿಭ್ರತೀಂ ।
ಆಪಾದಲಂಬಿನೀಂ ಕಲ್ಪದ್ರುಮಮಾಸಾದ್ಯ ಸಂಸ್ಥಿತಾಂ ॥ ೬೧ ॥

ಕದಂಬೋಪವನಾಂತಸ್ಥಾಂ ಕಾಮಾಹ್ಲಾದಕರೀಂ ಶುಭಾಂ ।
ದ್ವಿತೀಯಾಂ ತ್ರಿಪುರಾಂ ಧ್ಯಾಯೇದೇವಂ ರೂಪಾಂ ಮನೋಹರಾಂ ॥ ೬೨ ॥

ಳಿಂದಕೂಡಿ, ಸರ್ವಾಲಂಕಾರಗಳನ್ನು ಧರಿಸಿ, ಪದ್ಮದಲ್ಲಿ ಕುಳಿತು, ಉದಯಿಸುತ್ತಿರುವ ಸೂರ್ಯನಂತೆ ರಾರಾಜಿಸುತ್ತಿರುವಳು. ಕಂಠದಲ್ಲಿ ಮುತ್ತಿನ ಮತ್ತು ರತ್ನಗಳ ಹಾರಗಳು ಬೆಳಗುತ್ತಿರುವವು. ಮುಂದಕ್ಕೆ ಉಬ್ಬಿ ದುಂಡಾಗಿರುವ ಸ್ತನಗಳಿಂದಲೂ, ಉದರದಲ್ಲಿ ಶೋಭಿಸುವ ತ್ರಿವಳಿಗಳಿಂದಲೂ, ಮನೋಹರಳಾಗಿ ಒಪ್ಪುತ್ತಿರುವಳು. ಮದ್ಯವನ್ನು ಸೇವಿಸಿ ಸಂತೋಷಚಿತ್ತಳಾಗಿ, ನೋಡುವವರಿಗೆ ಬಹುಸುಂದರವಾಗಿ ಕಾಣುತ್ತಿರುವಳು. ಜಗತ್ತನ್ನೇ ಕ್ಷೋಭಗೊಳಿಸಲು ಶಕ್ತಳಾಗಿಯೂ ಮೂರುಕಣ್ಣುಗಳುಳ್ಳವಳಾಗಿಯೂ, ಯೋನಿಮುದ್ರೆಯಿಂದ ಸ್ವಲ್ಪ ಮಂದಹಾಸವನ್ನು ಸೂಸುತ್ತಲೂ ಇರುವಳು. ನವಯೌವನದಿಂದ ಶೋಭಿಸುವ ಶರೀರ ಸೌಂದರ್ಯ, ಕಮಲನಾಳದಂತೆ ಮೃದುವಾದ ಭುಜಗಳು, ಇವುಗಳಿಂದ ಪ್ರಕಾಶಿಸುತ್ತಿರುವಳು. ತನ್ನ ಎಡಗೈಗಳಲ್ಲಿ ಪುಸ್ತಕ ಅಭಯಮುದ್ರೆ ಇವುಗಳನ್ನೂ ಬಲಗೈಗಳಲ್ಲಿ ಜಪಮಾಲೇ, ವರದಮುದ್ರೇ ಇವುಗಳನ್ನು ಧರಿಸಿರುವಳು. ರಕ್ತವನ್ನು ಸೋಸುತ್ತಿರುವ ಮುಂಡಗಳಮಾಲೆಯನ್ನು ಧರಿಸಿ, ಬಾಲ ಸೂರ್ಯನಂತೆ ಪ್ರಕಾಶಿಸುತ್ತಾ ಕದಂಬವನದಲ್ಲಿ ಕಲ್ಪವೃಕ್ಷವನ್ನಾಶ್ರಯಿಸಿ ನಿಂತಿರುವಳು. ಕಾಲಿನವರಿಗೆ ನೀಳವಾಗಿರುವ ಸುಂದರವಾದ ಕೇಶರಾಶಿಯಿಂದ ಬೆಳಗುತ್ತಾ ಕಾಮ, ಸಂತೋಷ ಇವುಗಳನ್ನು ಉಂಟುಮಾಡುತ್ತಿರುವ ಮಂಗಳಕರವಾದ ತ್ರಿಪುರಾದೇವಿಯ ಎರಡನೆಯ ರೂಪವನ್ನು ಈ ರೀತಿ ಧ್ಯಾನಮಾಡಬೇಕು.

ತೃತೀಯಂ ತ್ರಿಪುರಾರೂಪಂ ಶೃಣು ನೇತಾಲ ಭೈರವ ।
ಜಪಾಕುಸುಮಸಂಕಾಶಾಂ ಮುಕ್ತಕೇಶೀಂ ಶುಭಾನನಾಂ ॥ ೬೩ ॥

ಸದಾಶಿವಂ ಹಸಂತಂ ತು ಪ್ರೇತವದ್ವಿನಿಧಾಯ ವೈ ।
ಹೃದಯೇ ತಸ್ಯ ದೇವಸ್ಯ ಹ್ಯರ್ಧಪದ್ಮಾಸನಸ್ಥಿತಾಂ ॥ ೬೪ ॥

ರಕ್ತೋತ್ಪಲೈರ್ಮಿಶ್ರಿತಾಂ ತು ಮುಂಡಮಾಲಾಂ ಪದಾನುಗಾಂ ।
ಗ್ರೀವಾಯಾಂ ಧಾರಯಂತೀಂ ತು ಪೀನೋನ್ನತಪಯೋಧರಾಂ ॥ ೬೫ ॥

ಚತುರ್ಭುಜಾಂ ತಥಾ ನಗ್ನಾಂ ದಕ್ಷಿಣಾರ್ಧೇಽಕ್ಷಮಾಲಿನೀಂ ।
ವರದಾಂ ತದಧೋ ವಾಮೇ ಜಗನ್ಮಾಯಾಂ ತಥಾಭಯಾಂ ॥ ೬೬ ॥

ಅಧಸ್ತು ಪುಸ್ತಕಂ ಧತ್ತೇ ತ್ರಿನೇತ್ರಾಂ ಹಸಿತಾನನಾಂ ।
ಸ್ರವದ್ರುಧಿರಭೋಗಾರ್ತಾಂ ತಥಾ ಸರ್ವಾಂಗಸುಂದರೀಂ ॥ ೬೭ ॥

ಏವಂ ವಿಧಂ ತೃತೀಯಂ ತು ರೂಪಂ ಧ್ಯಾಯೇತ್ತು ಪೂಜಕಃ ॥ ೬೮ ॥

೬೩-೬೮. ಎಲೈ ವೇತಾಲಭೈರವನೇ, ಇನ್ನು ತ್ರಿಪುರಾದೇವಿಯ ಮೂರನೇ ರೂಪವನ್ನು ಹೇಳುವೆನು, ಕೇಳು. ಜಪಾಕುಸುಮ (ದಾಸವಾಳದ ಹೂವು) ದಂತೆ ಕೆಂಪಾದ ಶರೀರಕಾಂತಿ, ಕೆದರಿದ ಕೇಶಪಾಶಗಳು, ಸುಂದರವಾದ ಮುಖ ಇವುಗಳಿಂದ ಬೆಳಗುತ್ತಾ ಆ ದೇವಿಯು ನಗುತ್ತಿರುವ ಈಶ್ವರನನ್ನು ಶವಾಸನವನ್ನಾಗಿ ಮಾಡಿ ಅದರ ಎದೆಯ ಮೇಲೆ ಅರ್ಧಪದ್ಮಾಸನದಲ್ಲಿರುವಳು. ರಕ್ತಕಮಲಗಳಿಂದ ಅಲಂಕೃತಳಾಗಿರುವಳು. ಕಾಲಿನವರೆಗೂ ಬಂದಿರುವ ಮುಂಡಗಳ ಮಾಲೆಯನ್ನು ಕತ್ತಿನಲ್ಲಿ ಧರಿಸಿರುವಳು. ದುಂಡಾಗಿ ಉಬ್ಬಿರುವ ಸ್ತನಗಳು, ನಾಲ್ಕು ಭುಜಗಳು, ಬೆತ್ತಲೆಯ ಶರೀರ ಇವುಗಳಿಂದ ಶೋಭಿಸುತ್ತಿರುವಳು. ಬಲಗೈಗಳಲ್ಲಿ ಜಪಮಾಲೆ, ವರದಮುದ್ರೆ ಗಳನ್ನೂ, ಎಡಗೈಗಳಲ್ಲಿ ಅಭಯಮುದ್ರೆ ಮತ್ತು ಪುಸ್ತಕಗಳನ್ನೂ ಧರಿಸಿರುವಳು. ಜಗನ್ಮಾಯಾಸ್ವರೂಪಳಾದ ಈ ದೇವಿಯು, ಮೂರು ಕಣ್ಣುಗಳಿಂದಲೂ, ಮಂದಹಾಸ ಮುಖದಿಂದಲೂ ಶೋಭಿಸುತ್ತಾ, ರಕ್ತಪಾನದಲ್ಲಿ ಆಸಕ್ತಳಾಗಿ, ಸರ್ವಾಂಗ ಸುಂದರವಾದ ತನ್ನ ದಿವ್ಯ ಮೂರ್ತಿಯಿಂದ ಮನೋಹರವಾಗಿ ಒಪ್ಪುತ್ತಿರುವಳು. ಸಾಧಕನು ತ್ರಿಪುರಾದೇವಿಯ ಮೂರನೆಯ ರೂಪವನ್ನು ಈ ವಿಧವಾಗಿ ಧ್ಯಾನಿಸಬೇಕು.

ಆದ್ಯಂ ತು ವಾಗ್ಭವಂ ರೂಪಂ ದ್ವಿತೀಯಂ ಕಾಮರಾಜಕಂ ।
ಡಾಮರಂ ಮೋಹನಂ ಚಾಪಿ ತೃತೀಯಂ ಪರಿಕೀರ್ತಿತಂ ॥ ೬೯ ॥

ಏಕೈಕಂ ತು ತ್ರಿರೂಪಾಣಿ ಪ್ರಾಗ್ವಿಚಿಂತ್ಯಾರ್ಥಸಾಧಕಃ ।
ಮಂತ್ರದ್ವಯೇನ ಪ್ರತ್ಯೇಕಂ ಹೃದಿ ಷೋಡಶಕೈ ಸ್ತಥಾ ॥ ೭೦ ॥

ಪೂಜಯೇದುಪಚಾರೈಸ್ತು ಬಹಿರ್ಯದ್ವತ್ತಥೈವ ಚ ।
ಮಂತ್ರತ್ರಯಂ ತಥೈಕತ್ರ ಕೃತ್ವಾಚಮನಮೂರ್ತಯಃ ॥ ೭೧ ॥

ಕರ್ತವ್ಯಾ ಏಕತಸ್ತತ್ರ ಮಧ್ಯರೂಪೇ ನಿವೇಶಯೇತ್ ।
ಸಾಸಾಪುಟೇನ ನಿಸ್ಸಾರ್ಯ ದಕ್ಷಿಣೇನಾಥ ತಾಂ ಪುನಃ ॥ ೭೨ ॥

ಅವತಾರ್ಯ ಕರಾಭ್ಯಾಂ ತು ದೇವೀಮಾವಾಹಯೇತ್ತ್ರಿಧಾ ।
ಗಾಯತ್ರೀತ್ರಯಮುಚ್ಚಾರ್ಯ ಸ್ನಾಪಯೇ ತ್ಪ್ರಥಮಂ ತು ತಾಂ ॥ ೭೩ ॥

---

೬೯. ಮೊದಲನೆಯ ರೂಪಕ್ಕೆ ವಾಗ್ಭವವೆಂದು ಹೆಸರು. ಎರಡನೆಯದು ಕಾಮರಾಜವ್ರ. ಮೂರನೆಯರೂಪಕ್ಕೆ ಡಾಮರವೆಂಮೂ, ಮೋಹನವೆಂಮೂ ಹೇಳಲ್ಪ ಟ್ಟಿರುವುದು.

೭೦. ಈ ಮೂರು ರೂಪಗಳನ್ನೂ ಒಂದೊಂದಾಗಿ ಧ್ಯಾನಿಸಿ, ಸಾಧಕನು ಎರಡೆರಡು ಮಂತ್ರಗಳನ್ನು ಚ್ಚರಿಸಿ ಹೊರಗೆಮಾಡುವಂತೆ ಹೃದಯದಲ್ಲಿಯೇ ಹದಿನಾರು ಉಪಚಾರಗಳಿಂದ ಆ ರೂಪವನ್ನು ಪೂಜಿಸಬೇಕು.

೭೧. ಬಳಿಕ ಮೂರು ಮಂತ್ರಗಳನ್ನೂ ಒಟ್ಟಾಗಿ ಉಚ್ಚರಿಸಿ ದೇವಿಯಮೂರ್ತಿ ಗಳನ್ನು ಒಂದಾಗಿರುವಂತೆ ಧ್ಯಾನ ಮಾಡಿ ಮಧ್ಯ ರೂಪದಲ್ಲಿ ಸೇರಿಸಬೇಕು.

೭೨. ದಕ್ಷಿಣನಾಸಿಕಾದ್ವಾರದಿಂದ ಕೈಗಳಿಗೆ ವಾಯುವನ್ನು ಇಳಿಸಿ ದೇವಿ ಯನ್ನು ಮೂರು ಬಾರಿ ಆವಾಹನಮಾಡಬೇಕು.

೭೩. ಮುಂದೆ ಹೇಳುವ ಮೂರು ತ್ರಿಪುರಾಗಾಯತ್ರಿಗಳನ್ನು ಚ್ಚರಿಸಿ ಮೊದಲು ದೇವಿಗೆ ಸ್ನಾನಮಾಡಿಸಬೇಕು. ಆವಾಹನದಲ್ಲಿ ಮುಂದೆ ಹೇಳುವ ಈ ಮಂತ್ರವನ್ನು ಸಾಧಕರು ಹೇಳಬೇಕು.

ಆವಾಹನೇ ತು ಮಂತ್ರೋಽಯಂ ಪಠಿತವ್ಯಶ್ಚ ಸಾಧಕೈಃ ।
ಏಹಿ ದೇವಿ ಶುಭಾವರ್ತೇ ಯಜ್ಞೇಽಸ್ಮಿನ್ಮಮ ಸನ್ನಿಧೌ ॥ ೭೪ ॥

ಅವ್ಯುಚ್ಛಿನ್ನಾಂ ತತಃ ಶುಭ್ರಾಂ ವಾಚಂ ಕಂಠಸ್ಯ ದೇಹಿ ಮೇ ।
ಏಹ್ಯೇಹಿ ಭಗವತ್ಯಂಬ ತ್ರಿಪುರೇ ಕಾಮದಾಯಿನಿ ॥ ೭೫ ॥

ಇಮಂ ಭಾಗಬಲಿಂ ಗೃಹ್ಯ ಸಾನ್ನಿಧ್ಯಮಿಹ ಕಲ್ಪಯ ।
ನಾರಾಯಣ್ಯೈ ಚ ವಿದ್ಮಹೇ ವಾಗ್ವಾದಿನ್ಯೈ ಚ ಧೀಮಹಿ ॥ ೭೬ ॥

ಏವ ಮುಕ್ತ್ವಾ ತತಃಪಶ್ಚಾತ್ತನ್ನೋ ದೇವೀ ಪ್ರಚೋದಯಾತ್ ।
ನಾರಾಯಣ್ಯೈ ವಿದ್ಮಹೇ ತ್ವಾಂ ಚಂಡಿಕಾಯೈ ಚ ಧೀಮಹಿ ॥ ೭೭ ॥

ಶೇಷಭಾಗೇ ಪ್ರಯುಂಜೀತ ತನ್ನಃ ಕುಬ್ಜಿ ಪ್ರಚೋದಯಾತ್ ।
ಮಹಾಮಾಯಾಯೈ ವಿದ್ಮಹೇ ತ್ವಾಂ ಸಂಮೋಹಿನ್ಯೈ ಚ ಧೀಮಹಿ॥ ೭೮ ॥

---

೭೪. ಮಂಗಳರೂಪಿಣಿಯಾದ ಓ ದೇವಿಯೆ! ಈ ಯಜ್ಞದಲ್ಲಿ (ಪೂಜೆಯಲ್ಲಿ) ನೀನು ನನ್ನ ಸನ್ನಿಧಿಗೆ ಬಂದು ನನ್ನ ಕಂಠಕ್ಕೆ ನಿರರ್ಗಳವೂ, ಸ್ಪುಟವೂ ಆದಂತಹ ವಾಕ್ಯವನ್ನು ದಯಪಾಲಿಸು.

೭೫. ಭಗವತಿಯೂ, ಜಗನ್ಮಾತೆಯೂ ಇಷ್ಟಾರ್ಥಗಳನ್ನು ಕೊಡುವವಳೂ ಆದ ಓ ತ್ರಿಪುರಾದೇವಿಯೇ! ಇಲ್ಲಿಗೆ ಬಂದು ಈ ಭಾಗಬಲಿಯನ್ನು ಸ್ವೀಕರಿಸಿ, ನಿನ್ನ ಸಾನ್ನಿಧ್ಯವನ್ನು ಇಲ್ಲಿ ಕಲ್ಪಿಸುವವಳಾಗು.

೭೬. "ನಾರಾಯಣ್ಯೈ ಚ ವಿದ್ಮಹೇ ವಾಗ್ವಾದಿನ್ಯೈ ಚ ಧೀಮಹಿ ॥ ತನ್ನೋ ದೇವೀ ಪ್ರಚೋದಯಾತ್" ॥ ಇದು ತ್ರಿಪುರಾದೇವಿಯ ಮೂರು ಗಾಯತ್ರಿಗಳಲ್ಲಿ ಮೊದಲನೆಯದಾದ ವಾಗ್ವಾದಿನೀ ಗಾಯತ್ರಿಯು. ನಾರಾಯಣಸ್ವರೂಪಿಣಿಯಾದ ತ್ರಿಪುರೆಯನ್ನು ಉಪಾಸಿಸುವೆವು. ಅವಳು ನಮ್ಮನ್ನು ಸನ್ಮಾರ್ಗದಲ್ಲಿ ಪ್ರೇರಿಸಲಿ ಎಂದು ಇದರ ಅರ್ಥವು.

೭೭. ನಾರಾಯಣ್ಯೈ ವಿದ್ಮಹೇ ಚಂಡಿಕಾಯೈ ಚ ಧೀಮಹಿ॥ ತನ್ನಃ ಕುಬ್ಜಿಃ ಪ್ರಚೋದಯಾತ್ ॥ ಎಂದು ಎರಡನೆಯದಾದ ಚಂಡಿಕಾಗಾಯತ್ರಿಯು

೭೮. ಮಹಾಮಾಯಾಯೈ ವಿದ್ಮಹೇ ಸಂಮೋಹಿನ್ಯೈ ಚ ಧೀಮಹಿ ॥ ತನ್ನಶ್ಚಂಡಿ ಪ್ರಚೋದಯಾತ್ ॥ ಇದು ಮೂರನೆಯ ಮಹಾಮಾಯಾಗಾಯತ್ರಿಯು.

ಪಶ್ಚಾದೇವಂ ಪ್ರಯುಂಜೀತ ತನ್ನಿಬೋಧ ಪ್ರಚೋದಯಾತ್ ।
ಏತಾಸ್ತು ತ್ರಿಪುರಾದೇವ್ಯಾ ಗಾಯತ್ರ್ಯಃ ಪರಿಕೀರ್ತಿತಾಃ ॥ ೭೯ ॥

ಪ್ರತ್ಯೇಕಂ ಸ್ನಾಪನಂ ಕುರ್ಯಾತ್ತ್ರಿಪುರಾಣಾಂ ಚ ತಿಸೃಭಿಃ ।
ವಾಗ್ಭವೇನ ತು ಮಂತ್ರೇಣ ಪ್ರಥಮಂ ಪೂಜಯೇಚ್ಛಿವಾಂ ॥ ೮೦ ॥

ಕಾಮರಾಜೇನ ವೈ ಪಶ್ಚಾಡ್ಡಾಮರೇಣಾಪಿ ಪೂಜಯೇತ್ ।
ಶೇಷಂ ತು ಮೂಲಮಂತ್ರೇಣ ಚಾಷ್ಟಾಂಗಾನಾಂ ಪ್ರಪೂಜನಂ ॥ ೮೧ ॥

ಏಕೈಕಂ ಪ್ರಕ್ರಮಂ ಪೂಜ್ಯ ತ್ರಿಪುರಾಯೈ ಸಮಂತತಃ ।
ನವಧಾ ಪೂಜಯೇದ್ದೇವೀಂ ತ್ರಿಪುರಾಂ ಕಾಮರೂಪಿಣೀಂ ॥ ೮೨ ॥

ಉತ್ತರಾದಿಚತುಃಪತ್ರೇ ಪದ್ಮಸ್ಯೈತಾಃ ಪ್ರಪೂಜಯೇತ್ ।
ಬ್ರಹ್ಮಾಣಂ ಮಾಧವಂ ಶಂಭುಂ ಭಾಸ್ಕರಂ ಚ ತಥೈವ ಚ ॥ ೮೩ ॥

ಐಶಾನ್ಯಾದಿಷು ತೇಷ್ವೇವಂ ಕ್ರಮಾದ್ದೇವೀಃ ಪ್ರಪೂಜಯೇತ್ ।
ಜಯಂತೀಂ ಪ್ರಥಮಂ ಪಶ್ಚಾದ್ವಾಯವ್ಯಾಮಪರಾಜಿತಾಂ ॥ ೮೪ ॥

---

೭೯. ಇವುಗಳು ತ್ರಿಪುರಾದೇವಿಯ ಗಾಯತ್ರೀಮಂತ್ರಗಳು. ಇವುಗಳಿಂದ ಮೂರು ತ್ರಿಪುರೆಯರನ್ನು ಪ್ರತ್ಯೇಕವಾಗಿ ಸ್ನಾನಮಾಡಿಸಬೇಕು.

೮೦. ವಾಗ್ಭವಮಂತ್ರದಿಂದ ಮೊದಲು ದೇವಿಯನ್ನು ಪೂಜಿಸಬೇಕು. ಆ ಮೇಲೆ ಕಾಮರಾಜಮಂತ್ರದಿಂದಲೂ ಅನಂತರ ಡಾಮರಮಂತ್ರದಿಂದಲೂ ಪೂಜಿಸಬೇಕು.

೮೧-೮೨. ಮಿಕ್ಕ ಎಂಟುಮಂದಿ ಯೋಗಿನಿಯರನ್ನು ಮೂಲಮಂತ್ರದಿಂದಲೇ ಪ್ರತ್ಯೇಕವಾಗಿ ತ್ರಿಪುರಾದೇವಿಯ ಸುತ್ತಲೂ ಪೂಜಿಸುವುದು. ಕಾಮರೂಪಿಣಿಯಾದ ತ್ರಿಪುರಾದೇವಿಯನ್ನು ಒಂಭತ್ತುಬಾರಿ ಪೂಜಿಸಬೇಕು.

೮೩-೮೪. ಪದ್ಮದ ಉತ್ತರ ಮೊದಲುಗೊಂಡು ನಾಲ್ಕು ದಳಗಳಲ್ಲಿ ಬ್ರಹ್ಮ, ವಿಷ್ಣು, ಶಂಭು, ಭಾಸ್ಕರ, ಇವರನ್ನು ಕ್ರಮವಾಗಿ ಪೂಜಿಸಬೇಕು. ಈಶಾನ್ಯದಿಕ್ಕು ಮೊದಲುಗೊಂಡು ಸುತ್ತಲೂ ಇರುವ ದಳಗಳಲ್ಲಿ ಈ ದೇವಿಯರನ್ನು ಪೂಜಿಸಬೇಕು, ಎಂದರೆ ಈಶಾನ್ಯದಲ್ಲಿ ಜಯಂತೀ ದೇವಿಯನ್ನೂ, ವಾಯುವ್ಯದಳದಲ್ಲಿ ಅಪರಾಜಿತಾ ದೇವಿಯನ್ನೂ, ನೈರುತ್ಯದಲ್ಲಿ ವಿಜಯಾದೇವಿಯನ್ನೂ, ಆಗ್ನೇಯದಲ್ಲಿ ಜಯಾದೇವಿಯನ್ನೂ ಪೂಜಿಸಬೇಕು.

ನೈರ್ಋತ್ಯಾಂ ವಿಜಯಾಂ ಚೈವ ತಥಾಗ್ನೇಯ್ಯಾಂ ಜಯಾಹ್ವಯಾಂ ।
ತ್ರಿಕೋಣೇ ಕೇಸರಸ್ಯಾಂತೇ ಕಾಮಂ ಪ್ರೀತಿಂ ರತಿಂ ತಥಾ ॥ ೮೫ ॥

ಪೂಜಯೇತ್ಪಂಚಬಾಣಾಂಶ್ಚ ಪುಷ್ಪಚಾಪಂ ಚ ಪುಸ್ತಕಂ ।
ಅಕ್ಷಮಾಲಾಂ ಶುಭಂ ಸದ್ಮ ರತ್ನ ಪರ್ಯಂಕಮೇವ ಚ ॥ ೮೬ ॥

ಪ್ರೇತಸದ್ಮಶಿರಶ್ಚೈವ ಸಮ್ಯಕ್ತ್ರೈವ ಪೂಜಯೇತ್ ।
ಸಂಪೂಜ್ಯ ಪೂರ್ವವನ್ಮಾಲಾಂ ಸ್ಫಾಟಿಕಾಮೇವ ಭೈರವ ॥ ೮೭ ॥

ಆದಾಯಾಥೋತ್ತರೀಯೇಣ ತಾಮಾಚ್ಛಾದ್ಯ ಪ್ರಯತ್ನತಃ ।
ಪೂರ್ವೋದ್ಧೃತಂ ಜಪೇತ್ಸಮ್ಯಕ್ಸಾಧಕಸ್ತ್ರಿಪುರಾಮಪಿ ॥ ೮೮ ॥

ಜಪ್ತ್ವಾ ಸ್ತುತಿಂ ಪಠಿತ್ವಾ ತು ಪ್ರಣಮ್ಯ ಚ ಮುಹುರ್ಮುಹುಃ ।
ತ್ರಿಪುರಾಯೈ ಬಲಿಂ ದದ್ಯಾತ್ಸಂಭವಾತ್ತತ್ರಿಜಾತಿಕಂ ॥ ೮೯ ॥

ಸಫೇನೈಸ್ತೋಯಸಂಯುಕ್ತೈಃ ಶರ್ಕರಾಮಧುಸೈಂಧವೈಃ ।
ಅಭ್ಯುಕ್ಷ್ಯ ರುಧಿರಂ ದದ್ಯಾತ್ಕಾಮರಾಜೇನ ಭೈರವ ॥ ೯೦ ॥

೮೫-೮೬. ತ್ರಿಕೋಣ (ಮೂರುಮೂಲೆ) ಗಳಲ್ಲಿಯೂ, ಕೇಸರದ ಕೊನೆಯಲ್ಲಿಯೂ ಸಹ ಕಾಮ, ಪ್ರೀತಿ, ರತಿದೇವಿ, ಐದುಬಾಣಗಳು, ಪುಷ್ಪಧನಸ್ಸು, ಪುಸ್ತಕ, ಇವುಗಳನ್ನು ಪೂಜಿಸಿ, ಜಪಮಾಲೆ, ದೇವಿಯ ಮಂಗಳಗೃಹ, ರತ್ನಮಯಪರ್ಯಂಕ (ಸಿಂಹಾಸನ) ಪ್ರೇತ, ಗೃಹ, ನರಶಿರಸ್ಸು, ಇವುಗಳನ್ನೂ ಅಲ್ಲಿಯೇ ಪೂಜಿಸಬೇಕು.

೮೭ ೮೮. ಹಿಂದಿನಂತೆ ಸ್ಫಟಿಕಮಾಲೆಯನ್ನು ಪೂಜಿಸಿ ತೆಗೆದುಕೊಂಡು, ಅದನ್ನು ಹೊದೆದಿರುವ ವಸ್ತ್ರದಿಂದ ಮುಚ್ಚಿಕೊಂಡು, ಅದರಿಂದ ಹಿಂದೆ ಹೇಳಿದ ಕ್ರಮದಿಂದ ತ್ರಿಪುರಾದೇವಿಯ ನಾಮವನ್ನು ಜಪಿಸಬೇಕು.

೮೯. ಜಪವು ಮುಗಿದಮೇಲೆ ಸ್ತೋತ್ರಮಾಡಿ, ಪುನಃ ಪುನಃ ನಮಸ್ಕಾರಗಳನ್ನು ಮಾಡಬೇಕು. ಅನಂತರ ಯಥಾಯೋಗ್ಯವಾಗಿ ಮೂರುಜಾತಿಯ ಬಲಿಯನ್ನು ತ್ರಿಪುರಾದೇವಿಗೆ ಕೊಡಬೇಕು.

೯೦. ನೊರೆಯಾಗಿರುವ ನೀರು, ಸಕ್ಕರೆ, ಜೇನುತುಪ್ಪ, ಉಪ್ಪು ಇವುಗಳಿಂದ ಬಲಿಪ್ರಾಣಿಯ ರಕ್ತವನ್ನು ಪ್ರೋಕ್ಷಿಸಿ ಕಾಮರಾಜಮಂತ್ರದಿಂದ ದೇವಿಗೆ ಅರ್ಪಿಸಬೇಕು.

ಛೇದಯೇದ್ವಾಗ್ಭವೇನೈವ ಡಾಮರೇಣ ಶಿರೇಚ್ಛಿರಃ ।
ಯತ್ರ ಯತ್ರ ಬಲಿಂ ದದ್ಯಾತ್ತಾವಧಕೋ ದೇವತಾರ್ಚನೇ ॥ ೯೧ ॥

ವೈಷ್ಣವೀತಂತ್ರಕಲ್ಪೋಕ್ತಮಾದದ್ಯಾತ್ಪೂಜನೇ ಬಲಿಂ ।
ತತೋ ದೇವ್ಯೈ ಬಲೀಞ್ಚ ದದ್ಯಾದೇತದ್ವರ್ಣಕ್ರಮಾತ್ಪುನಃ ॥ ೯೨ ॥

ಗೋಕ್ಷೀರಂ ಬ್ರಾಹ್ಮಣೋ ದದ್ಯಾದ್ಘೃತಮಾಜ್ಯಂ ತು ರಾಜಜಃ ।
ವೈಶ್ಯಸ್ತು ಮಾಕ್ಷಿಕಂ ದದ್ಯಾಚ್ಛೂದ್ರಃ ಪುಷ್ಪಾಸವಾಟಿಕಾಂ ॥ ೯೩ ॥

ಘ್ರಾತ್ವಾ ಪುಷ್ಪಮಥೈಶಾನ್ಯಾಂ ನಿರ್ಮಾಲ್ಯಂ ತ್ರಿಃಕ್ಷಿಪೇದ್ಬುಧಃ ।
ನಿರ್ಮಾಲ್ಯಧಾರಿಣೀ ಚಾಸ್ಯಾ ದೇವೀ ತ್ರಿಪುರಚಂಡಿಕಾ ॥ ೯೪ ॥

ವಿಸೃಜ್ಯಾದೌ ಯೋನಿಮುದ್ರಾಂ ಪದ್ಮಮುದ್ರಾಂ ತಥೈವ ಚ ।
ಅರ್ಧಮುದ್ರಾಂ ತ್ರಿಮುದ್ರಾಂ ಚ ಪ್ರತ್ಯೇಕಮಪಿ ದರ್ಶಯೇತ್ ॥ ೯೫ ॥

---

೯೧. ವಾಗ್ಭವಮಂತ್ರದಿಂದ ಬಲಿಪಶುವನ್ನು ಛೇದಿಸಬೇಕು. ಡಾಮರ ಮಂತ್ರದಿಂದ ಶಿರಸ್ಸನ್ನು ಕತ್ತರಿಸಬೇಕು. ಪೂಜೆಯಲ್ಲಿ, ಎಲ್ಲೆಲ್ಲಿ ಬಲಿಯನ್ನು ಕೊಡಬೇಕೋ ಅಲ್ಲೆಲ್ಲಾ ಇದೇಕ್ರಮವನ್ನು ಸಾಧಕನು ಅನುಸರಿಸಬೇಕು.

೯೨. ವೈಷ್ಣವೀತಂತ್ರಕಲ್ಪದಲ್ಲಿ ಹೇಳಿದಂದೆ ಬಲಿಯನ್ನು ಕೊಡಬೇಕು. ಅನಂತರ ದೇವಿಗೆ ಮುಂದೆಹೇಳುವ ಜಾತಿಕ್ರಮದಂತೆ ಬಲಿಗಳನ್ನು ಕೊಡಬೇಕು.

೯೩. ಬ್ರಾಹ್ಮಣನು ಹಸುವಿನ ಹಾಲನ್ನು ಬಲಿಯಾಗಿ ಕೊಡಬೇಕು. ಕ್ಷತ್ರಿಯನು ಹಸುವಿನ ತುಪ್ಪವನ್ನೂ, ವೈಶ್ಯನು ಜೇನುತುಪ್ಪವನ್ನೂ, ಶೂದ್ರನು ಮದ್ಯವನ್ನೂ ಕೊಡಬೇಕು.

೯೪. ಅನಂತರ ಪುಷ್ಪವನ್ನು ಮೂರುಬಾರಿ ಆಘ್ರಾಣಿಸಿ ಆ ನಿರ್ಮಾಲ್ಯವನ್ನು ಈಶಾನ್ಯದಲ್ಲಿ ಎಸೆಯಬೇಕು. ಇಲ್ಲಿರುವ ತ್ರಿಪುರಚಂಡಿಕಾದೇವಿಯು ನಿರ್ಮಾಲ್ಯವನ್ನು ಧರಿಸುವಳು.

೯೫. ಮೊದಲು ಧರಿಸಿದ್ದ ಯೋನಿಮುದ್ರೆಯನ್ನು ವಿಸರ್ಜಿಸಿ, ಪದ್ಮಮುದ್ರೆ, ಅರ್ಧಮುದ್ರೆ, ತ್ರಿಮುದ್ರೆಗಳನ್ನು ಪ್ರತ್ಯೇಕವಾಗಿ ಪ್ರದರ್ಶಿಸಬೇಕು. ಆಮೇಲೆ ಕಾಮರಾಜಮಂತ್ರದಿಂದ ನಿರ್ಮಾಲ್ಯ (ಪ್ರಸಾದ)ವನ್ನು ಸ್ವೀಕರಿಸಬೇಕು.

ನಿರ್ಮಾಲ್ಯಮುಥ ಗೃಹ್ಣೀಯಾತ್ಮಾನುರಾಜಾಪ್ತಯೇನ ತು ।
ಏವಂ ಯಃ ಪೂಜಯೇದ್ದೇವೀಂ ತ್ರಿಪುರಾಂ ಕಾಮರೂಪಿಣೀಂ ॥ ೯೬ ॥

ಸ ಕಾಮಾನಖಿಲಾ ಪ್ರಾಪ್ಯ ದೇವೀಲೋಕಮುವಾಪ್ನುಯಾತ್ ।

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತಷಷ್ಟಿತಮೋಽಧ್ಯಾಯಃ ॥

---

೯೬. ಈರೀತಿಯಾಗಿ ಯಾವನು ಕಾಮರೂಪಿಣಿಯಾದ ತ್ರಿಪುರಾದೇವಿಯನ್ನು ಪೂಜಿಸುವನೋ, ಅವನು ಇಹದಲ್ಲಿ ಸಕಲ ಇಷ್ಟಾರ್ಥಗಳನ್ನೂ ಪಡೆದು ಪರದಲ್ಲಿ ದೇವಿಯ ಲೋಕವನ್ನು ಸೇರುವನು.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಆರವತ್ತೇಳನೆಯ
ಆಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ೭ಷ್ಟಷಷ್ಟಿತಮೋ೭ಧ್ಯಾಯಃ ॥

॥ ಈಶ್ವರ ಉವಾಚ ॥

ದೇವ್ಯಾಃ ಕಾಮೇಶ್ವರೀಮೂರ್ತಿಂ ಶೃಣು ವಕ್ಷ್ಯಾಮಿ ಭೈರವ ।
ಯಸ್ಯಾಶ್ಚಿಂತನಮಾತ್ರೇಣ ಸಾಧಕೋ ಲಭತೇ ಪ್ರಿಯಾ೯ ॥ ೧ ॥

ತಂತ್ರಂ ತಸ್ಯಾಃ ಪ್ರಥಮತಸ್ತತೋ೭ನು ಧ್ಯಾನಗೋಚರಂ ।
ತತಃ ಪೂಜಾಕ್ರಮಂ ವಕ್ಷ್ಯೇ ಕ್ರಮಾದ್ವೇತಾಲಭೈರವ ॥ ೨ ॥

ಪ್ರಜಾಪತಿಸ್ತತೋ ವಹ್ನಿರಿಂದ್ರಬೀಜಂ ತತಃಪರಂ ।
ಚೂಡಾಚಂದ್ರಾರ್ಧಸಹಿತಂ ಚತುರ್ಥಸ್ವರಸಂಯುತಂ ॥ ೩ ॥

ಅರವತ್ತೆಂಟನೆಯ ಅಧ್ಯಾಯವು.

೧. ಈಶ್ವರನು ಹೇಳಿದನು:-- ಎಲೈ ಭೈರವನೇ, ದೇವಿಯ ಕಾಮೇಶ್ವರೀ ಮೂರ್ತಿಯ ಸ್ವರೂಪವನ್ನು ಹೇಳುವೆನು ಕೇಳು. ಆಮೂರ್ತಿಯನ್ನು ಚಿಂತಿಸಿದ ಮಾತ್ರದಿಂದಲೇ ಸಾಧಕನು ಸಕಲ ಇಷ್ಟಾರ್ಥಗಳನ್ನು ಪಡೆಯುವನು.

೨. ಎಲೈ ವೇತಾಲಭೈರವರೇ! ಮೊದಲು ಕಾಮೇಶ್ವರಿಯ ತಂತ್ರವನ್ನೂ, ಆಮೇಲೆ ಧ್ಯಾನಕ್ರಮವನ್ನೂ, ಅನಂತರ ಪೂಜಾವಿಧಾನವನ್ನೂ, ಕ್ರಮವಾಗಿ ಹೇಳುವೆನು, ಕೇಳಿರಿ.

೩. ಮೊದಲು ಪ್ರಜಾಪತಿ (ಬ್ರಹ್ಮ) ಬೀಜಾಕ್ಷರವಾದ ಕಕಾರ, ಬಳಿಕ ವಹ್ನಿ ಬೀಜಾಕ್ಷರವಾದ ರಕಾರ ಆಮೇಲೆ ಇಂದ್ರಬೀಜಾಕ್ಷರವಾದ ಲಕಾರ ಇವುಗಳಿಗೆ ನಾಲ್ಕನೇ ಸ್ವರವಾದ ಈಕಾರವನ್ನೂ, ಬಿಂದುವನ್ನೂ, ಸೇರಿಸಿದರೆ ಕ್ಲೀಂ ಎಂದು ಕಾಮೇಶ್ವರೀ ಬೀಜಮಂತ್ರವಾಗುವುದು ಇದು ಸಕಲ ಇಷ್ಟಾರ್ಥಗಳನ್ನೂ ಸಾಧನೆಮಾಡಿ ಕೊಡುವುದು.

ಇದಂ ಕಾಮೇಶ್ವರೀಬೀಜಮಂತ್ರಂ ಸರ್ವಾರ್ಥಸಾಧಕಂ ।
ಸ್ಥಾನಾಭ್ಯುಕ್ಷಣಯಂತ್ರಾದಿ ಪಾತ್ರನ್ಯಾಸಾದಿಕಂ ತಥಾ ॥ ೪ ॥

ಭೂತಾಪಸಾರಣಾದೀಂಶ್ಚ ವೈಷ್ಣವೀತಂತ್ರಭಾಷಿತಾ ।
ತಥೋಕ್ತಾನುತ್ತರೇ ತಂತ್ರೇ ಗೃಹ್ಣೀಯಾತ್ಸಾಧಕೋತ್ತಮಃ ॥ ೫ ॥

ಪ್ರಾಣಾಯಾಮತ್ರಯಂ ಕುರ್ಯಾದ್ದಹನಂ ಪ್ಲವನಂ ತಥಾ ।
ವಿಶೇಷಮಂಡಲಂ ಚಾಸ್ಯಾಃ ಶೃಣು ವೇತಾಲ ಭೈರವ ॥ ೬ ॥

ಷಟ್ಕೋಣಂ ಮಂಡಲಂ ಕುರ್ಯಾದ್ರಕ್ತವರ್ಣಂ ತು ಚಿಂತಯೇತ್ ।
ವಿಭೇದ್ಯ ಶಕ್ತ್ಯಾ ಶಂಭುಂ ತು ತ್ರಿಪುರಾತಂತ್ರವದ್ಬುಧಃ ॥ ೭ ॥

ತತಃ ಶಕ್ತಿಂ ಶಂಭುನಾಪಿ ಭೇದಯೇತ್ಕ್ರಮತಃ ಸುಧೀಃ ।
ಐಶಾನ್ಯಾದಿನೈರ್ಋತಾಂತಾಂ ರೇಖಾಂ ಕೃತ್ವಾಥ ದಕ್ಷಿಣೇ ॥ ೮ ॥

೪-೫. ಪೂಜಾಸ್ಥಾನದ ಪ್ರೋಕ್ಷಣ, ಯಂತ್ರಲೇಖನ, ಪಾತ್ರಾಸಾದನ, ಭೂತಾಪಸರಣ ಮೊದಲಾದುವುಗಳನ್ನು ವೈಷ್ಣವೀತಂತ್ರದಲ್ಲಿಯೂ ಉತ್ತರತಂತ್ರದಲ್ಲಿಯೂ ಹೇಳಿರುವ ಕ್ರಮದಂತೆಯೇ ಸಾಧಕನು ಈ ಕಾಮೇಶ್ವರೀಪೂಜೆಯಲ್ಲಿಯೂ ಅನುಷ್ಠಾನ ಮಾಡಬೇಕು.

೬. ಮೂರುಬಾರಿ ಪ್ರಾಣಾಯಾಮವನ್ನು ಮಾಡಿ, ಬಳಿಕ ದಹನ ಮತ್ತು ಪ್ಲವನಗಳೆಂಬ ಭೂತಶುದ್ಧಿಯನ್ನೂ ಮಾಡಬೇಕು. ಎಲೈ ವೇತಾಲಭೈರವರೇ, ಈ ಕಾಮೇಶ್ವರಿಯ ವಿಶೇಷವಾದ ಮಂಡಲವನ್ನು ಕೇಳಿರಿ.

೭-೯ ಮೊದಲು ಆರುಕ್ಷೋಣ (ಮೂಲೆ)ಗಳುಳ್ಳ ಮಂಡಲವನ್ನು ರಚಿಸಬೇಕು ಅದನ್ನು ರಕ್ತವರ್ಣವಾಗಿರುವಂತೆ ಚಿಂತಿಸಬೇಕು, ತ್ರಿಪುರಾತಂತ್ರದಂತೆಯೇ, ರಕ್ತೆ ರೇಖೆಯಿಂದ ಶಂಭುರೇಖೆಯನ್ನೂ, ಆಮೇಲೆ ಶಂಭುರೇಖೆಯಿಂದ ಶಕ್ತಿರೇಖೆಯನ್ನೂ ಭೇದಿಸಬೇಕು. ಐಶಾನ್ಯ ಮೊದಲುಗೊಂಡು ನೈರ್ಋತ್ಯದವರೆಗೆ ಒಂದು ಗೆರೆಯನ್ನು ಬರೆಯಬೇಕು. ಆಮೇಲೆ ದಕ್ಷಿಣದಲ್ಲಿ ಪಶ್ಚಿಮದಿಂದ ಪೂರ್ವದವರೆಗೆ ಒಂದು ಗೆರೆಯನ್ನು ಬರೆಯಬೇಕು. ಪೂರ್ವದಿಂದ ಉತ್ತರಕ್ಕೆ ಒಂದು ರೇಖೆಯನ್ನು ಬರೆಯಬೇಕು

ಪಶ್ಚಿಮಾತ್ಪೂರ್ವಗಾಂ ರೇಖಾಂ ಪೂರ್ವಾದಪಿ ತಥೋತ್ತರಾಂ ।
ಉತ್ತರಾತ್ಪಶ್ಚಿಮಾಂತಾಂ ತು ಕೃತ್ವಾ ರೇಖಾಸ್ತು ಯೋಜಯೇತ್ ॥ ೯ ॥

ಧನುಸ್ತೋರಣಸಂಕಾಶಂ ದ್ವಾರೇ ಚೋತ್ತರಪಶ್ಚಿಮೇ ।
ದಕ್ಷಿಣಂ ತು ತ್ರಿಕೋಣಂ ಸ್ಯಾತ್ ಷಟ್ಕೋಣಂ ಪೂರ್ವಮುಚ್ಯತೇ ॥ ೧೦ ॥

ಜಾಲಂಧರಂ ಲಿಖೇತ್ಪೀಠಮುತ್ತರೇ ಪಶ್ಚಿಮೇ ಲಿಖೇತ್ ।
ಓಷ್ಯ ಪೀಠಂ ದಕ್ಷಿಣೇ ತು ಕಾಮರೂಪಂ ತು ಪೂರ್ವತಃ ॥ ೧೧ ॥

ದೇವ್ಯಾ ದ್ವಾದಶ ಗುಹ್ಯಾನಿ ಯಾನಿ ದ್ವಾದಶಭಿಃ ಕರೈಃ ।
ಲಿಖೇನ್ಮಂಡಲಕೋಣೇಷು ತಾನಿ ದಿಕ್ಷು ತ್ರಯಂ ತ್ರಯಂ ॥ ೧೨ ॥

ಷಡ್ಭಿಃ ಷಡ್ಭಿಸ್ತು ರೇಖಾಭಿಃ ಕರ್ತವ್ಯೋ ಮಂಡಲಕ್ರಮಃ ।
ಅನ್ಯದುತ್ತರತಂತ್ರೋಕ್ತಂ ವೈಷ್ಣವೀತಂತ್ರಭಾಷಿತಂ ॥ ೧೩ ॥

ಮತ್ತು ಉತ್ತರದಿಂದ ಪಶ್ಚಿಮಕ್ಕೆ ಒಂದು ರೇಖೆಯನ್ನು ಬರೆದು ಈ ರೇಖೆಗಳನ್ನೆಲ್ಲಾ ಸೇರಿಸಬೇಕು.

೧೦. ಉತ್ತರ ಮತ್ತು ಪಶ್ಚಿಮ ದಿಕ್ಕುಗಳಲ್ಲಿ ಧನಸ್ಸು ಮತ್ತು ತೋರಣಗಳ ಆಕಾರವಾದ ದ್ವಾರಗಳನ್ನೂ, ದಕ್ಷಿಣದಲ್ಲಿ ತ್ರಿಕೋಣ, ಪೂರ್ವದಲ್ಲಿ ಆರುಕೋಣಗಳುಳ್ಳ ದ್ವಾರಗಳನ್ನೂ ಬರೆಯಬೇಕು.

೧೧. ಜಾಲಂಧರವೆಂಬ ಪೀಠವನ್ನು ಉತ್ತರದಲ್ಲಿಯೂ, ಪಶ್ಚಿಮದಲ್ಲಿಯೂ ಬರೆಯಬೇಕು. ಓಷ್ಯ ಪೀಠವನ್ನು ದಕ್ಷಿಣದಲ್ಲಿಯೂ, ಕಾಮರೂಪವೆಂಬ ಪೀಠವನ್ನು ಪೂರ್ವದಲ್ಲಿಯೂ ಬರೆಯಬೇಕು.

೧೨. ದೇವಿಯ ಹನ್ನೆರಡು ರಹಸ್ಯಸ್ಥಾನಗಳನ್ನು ಹನ್ನೆರಡು ಕೈಗಳೊಡನೆ ಮಂಡಲದ ನಾಲ್ಕು ಮೂಲೆ ದಿಕ್ಕುಗಳಲ್ಲಿ ಮೂರು ಮೂರರಂತೆ ಬರೆಯಬೇಕು.

೧೩. ಆರಾರು ರೇಖೆಗಳನ್ನು ಸೇರಿಸಿ ಮಂಡಲವನ್ನು ರಚಿಸಬೇಕು. ಎಲೈ ವೇತಾಲ ಭೈರವರೇ ! ಉತ್ತರ ತಂತ್ರದಲ್ಲಿಯೂ ವೈಷ್ಣವೀ ತಂತ್ರದಲ್ಲಿಯೂ ಹೇಳಿರುವಂತೆಯೇ ಮಂಡಲದ ಮಿಕ್ಕ ಕ್ರಮಗಳನ್ನು ಇಲ್ಲಿಯೂ ಅನುಸರಿಸಬೇಕು.

ಮಂಡಲಸ್ಯ ಕ್ರಮಂ ಸರ್ವಂ ವಿದ್ಧಿ ವೇತಾಲಭೈರವ ।
ಓಂ ಕ್ಲೀಂ ಮಂಡಲತತ್ತ್ವಾಯ ನಮ ಇತ್ಯತ್ರ ಮಂಡಲಂ ॥ ೧೪ ॥

ಪೂಜಯೇತ್ಪ್ರಥಮಂ ಧ್ಯಾತ್ವಾ ಮಂಡಲಂ ಯೋಗಪೀಠಕಂ ।
ಪೀಠೇ ಶಿಲಾಯಾಂ ವಿಲಿಖೇನ್ಮಂಡಲಂ ಯೋನಿಮಂಡಲೇ ॥ ೧೫ ॥

ತ್ರಿಕೋಣಂ ವಿಲಿಖೇತ್ಪಶ್ಚಾದ್ವೇಷ್ಟಯೇತ್ಕಮಲೇನ ತು ।
ರೂಪಂ ತು ಚಿಂತಯೇದ್ದೇವ್ಯಾಃ ಕಾಮೇಶ್ವರ್ಯಾ ಮನೋಹರಂ ॥ ೧೬ ॥

ಪ್ರಭಿನ್ನಾಂಜನಸಂಕಾಶಾಂ ನೀಲಸ್ನಿಗ್ಧಶಿರೋರುಹಾಂ ।
ಷಡ್ವಕ್ತ್ರಾಂ ದ್ವಾದಶಭುಜಾಮಷ್ಟಾದಶವಿಲೋಚನಾಂ ॥ ೧೭ ॥

ಪ್ರತ್ಯೇಕಂ ಷಟ್ಸು ಶೀರ್ಷೇಷು ಚಂದ್ರಾರ್ಧಕೃತಶೇಖರಾಂ ।
ಮಣಿಮಾಣಿಕ್ಯಮುಕ್ತಾದಿಕೃತಮಾಲಾಮುರಃಸ್ಥಲೇ ॥ ೧೮ ॥

೧೪-೧೫. "ಓಂ ಕ್ಲೀಂ ಮಂಡಲತತ್ತ್ವಾಯ ನಮಃ" ಎಂಬ ಮಂತ್ರದಿಂದ ಮಂಡಲವನ್ನು ಮೊದಲು ಧ್ಯಾನಿಸಿ ಪೂಜಿಸಬೇಕು. ಅನಂತರ ಯೋಗಪೀಠವಾದ ಆ ಮಂಡಲವನ್ನು ಯೋನಿಮಂಡಲವೆಂಬ ಪೀಠಶಿಲೆಯಲ್ಲಿ ಬರೆಯಬೇಕು.

೧೬-೧೭. ಅನಂತರ ಕಾಮೇಶ್ವರೀದೇವಿಯ ಸುಂದರವಾದ ರೂಪವನ್ನು ಹೀಗೆ ಧ್ಯಾನಿಸಬೇಕು—ಕಾಡಿಗೆಯಂತೆ ಕಪ್ಪಾದ ಶರೀರಕಾಂತಿ, ಸೊಂಪಾಗಿ ಬೆಳೆದು ಹೊಳೆಯುತ್ತಿರುವ ನೀಳವಾದ ಕೇಶರಾಶಿ, ಆರು ಮುಖಗಳು, ಹನ್ನೆರಡು ಭುಜಗಳು, ಹದಿನೆಂಟು ಕಣ್ಣುಗಳು, ಇವುಗಳಿಂದ ಪ್ರಕಾಶಿಸುತ್ತಿರುವಳು. ಆ ದೇವಿಯ ಆರು ಶಿರಸ್ಸುಗಳಲ್ಲಿ ಪ್ರತಿಯೊಂದರಲ್ಲಿಯೂ ಅರ್ಧಚಂದ್ರಕಲೆಯನ್ನು ಧರಿಸಿರುವಳು. ಕಂಠದಲ್ಲಿ ರತ್ನ, ಮಾಣಿಕ್ಯ, ಮುತ್ತು ಮೊದಲಾದ ಶ್ರೇಷ್ಠಮಣಿಗಳಿಂದ ನಿರ್ಮಿತವಾದ ಹಾರವನ್ನು ಧರಿಸಿರುವಳು. ಸರ್ವಾವಯವಗಳಲ್ಲಿಯೂ ಉತ್ತಮವಾದ ಭೂಷಣಗಳನ್ನು ಧರಿಸಿ ಒಪ್ಪುತ್ತಿರುವಳು. ಬಲಭಾಗದ ಆರು ಕೈಗಳಲ್ಲಿ ಪುಸ್ತಕ, ಸಿದ್ಧಸೂತ್ರ, ಐದು ಬಾಣಗಳು, ಖಡ್ಗ, ಶಕ್ತ್ಯಾಯುಧ, ಶೂಲ, ಇವುಗಳನ್ನೂ, ಎಡಭಾಗದ ಆರು ಕೈಗಳಲ್ಲಿ ಜಪಮಾಲೆ, ಮಹಾಪದ್ಮ, ಬಿಲ್ಲು, ಅಭಯಮುದ್ರೆ, ಚರ್ಮ, ಪಿನಾಕವೆಂಬ ಧನಸ್ಸು ಇವುಗಳನ್ನೂ ಧರಿಸಿರುವಳು.

ಆ ದೇವಿಯ ಆರು ಶಿರಸ್ಸುಗಳೂ, ಬಿಳಪು, ಕೆಂಪು, ಹಳದಿ, ಹಸುರು, ನೀಲ, ವಿಚಿತ್ರ (ಮಿಶ್ರ) ಎಂಬ ಆರು ಬಣ್ಣಗಳುಳ್ಳವಾಗಿರುವವು, ಮತ್ತು ಈಶಾನ್ಯ, ಪೂರ್ವ,

ಕಂಠೇ ಚ ಬಿಭ್ರತೀಂ ನಿತ್ಯಂ ಸರ್ವಾಲಂಕಾರಮಂಡಿತಾಂ ।
ಪುಸ್ತಕಂ ಸಿದ್ಧಸೂತ್ರಂ ಚ ಪಂಜಬಾಣಾಂಸ್ತು ತಾಂಸ್ತಥಾ ॥ ೧೯ ॥
ಖಡ್ಗಂ ಶಕ್ತಿಂ ಚ ಶೂಲಂ ಚ ಬಿಭ್ರತೀಂ ದಕ್ಷಿಣೈಃ ಕರೈಃ ।
ಅಕ್ಷಮಾಲಾಂ ಮಹಾಪದ್ಮಂ ಕೋದಂಡಂ ಜಾಭಯಂ ತಥಾ ॥ ೨೦ ॥
ಚರ್ಮ ಪಶ್ಚಾತ್ಪಿನಾಕಂ ಚ ಬಿಭ್ರತೀಂ ವಾಮಪಾಣಿಭಿಃ ।
ಶುಕ್ಲಂ ರಕ್ತಂ ಚ ಪೀತಂ ಚ ಹರಿತಂ ಕೃಷ್ಣಮೇವ ಚ ॥ ೨೧ ॥
ವಿಚಿತ್ರಂ ಕ್ರಮತಃ ಶೀರ್ಷಮೈಶಾನ್ಯಾಂ ಪೂರ್ವಮೇವ ಚ ।
ದಕ್ಷಿಣಂ ಪಶ್ಚಿಮಂ ಚೈವ ತಥೈವೋತ್ತರಶೀರ್ಷಕಂ ॥ ೨೨ ॥
ಮಧ್ಯಂ ಚೇತಿ ಮಹಾಭಾಗ ಕ್ರಮಾಚ್ಛೀರ್ಷಾಣಿ ವರ್ಣತಃ ।
ಶುಕ್ಲಂ ಮಾಹೇಶ್ವರೀವಕ್ತ್ರಂ ಕಾಮಾಖ್ಯಾ ರಕ್ತಮುಚ್ಯತೇ ॥ ೨೩ ॥
ತ್ರಿಪುರಾ ಪೀತಸಂಕಾಶಾ ಶಾರದಾ ಹರಿತಾ ತಥಾ ।
ಕೃಷ್ಣಂ ಕಾಮೇಶ್ವರೀವಕ್ತ್ರಂ ಚಂಡಾಯಾಶ್ಚಿತ್ರಮುಚ್ಯತೇ ॥ ೨೪ ॥
ಧಮ್ಮಿಲ್ಲಸಂಯುತಕಚಂ ಪ್ರತಿಶೀರ್ಷಂ ಪ್ರಕೀರ್ತಿತಂ ।
ಸಿಂಹೋಪರಿ ಸ್ಥಿತಂ ಪ್ರೇತಂ ತಸ್ಮಿನ್ ಲೋಹಿತಪಂಕಜಂ ॥ ೨೫ ॥
ಕಾಮೇಶ್ವರೀ ಸ್ಥಿತಾ ತತ್ರ ಈಷತ್ಪ್ರಹಸಿತಾನನಾ ।
ವಿಚಿತ್ರಾಂಶುಕಸಂವೀತಾಂ ವ್ಯಾಘ್ರಚರ್ಮಾಂಬರಾಂ ತಥಾ ॥ ೨೬ ॥

ದಕ್ಷಿಣ, ಪಶ್ಚಿಮ, ಉತ್ತರ, ಮಧ್ಯ ಈ ದಿಕ್ಕುಗಳಿಗೆ ಅಭಿಮುಖವಾಗಿರುವುವು. ಆ ದೇವಿಯ ಆರು ಮುಖಗಳಲ್ಲಿ ಮಾಹೇಶ್ವರೀದೇವಿಯ ಮುಖವು ಬಿಳಿಯವರ್ಣದ್ದಾಗಿರುವುದು. ಕಾಮಾಖ್ಯಾದೇವಿಯ ಮುಖವು ಕೆಂಪಾಗಿಯೂ, ತ್ರಿಪುರೆಯದು ಹಳದಿಯಾಗಿಯೂ, ಶಾರದೆಯದು ಹಸುರಾಗಿಯೂ, ಕಾಮೇಶ್ವರಿಯದು ನೀಲವಾಗಿಯೂ, ಚಂಡಾದೇವಿಯ ಮುಖವು ವಿಚಿತ್ರವರ್ಣವುಳ್ಳದ್ದಾಗಿಯೂ ಇರುವುದು. ಪ್ರತಿ ಶಿರಸ್ಸಿನಲ್ಲಿಯೂ ಪ್ರತ್ಯೇಕವಾಗಿ ಜಡೆ ಹೆಣೆದಿರುವ ಕೇಶಪಾಶಗಳಿರುವುವು.

ಸಿಂಹದಮೇಲೆ ಶವವಿರುವುದು, ಅದರಮೇಲೆ ರಕ್ತಕಮಲವಿರುವುದು, ಆ ಕಮಲದ ಮೇಲೆ ನಾನಾವರ್ಣವಾದ ವಸ್ತ್ರಗಳನ್ನೂ, ವ್ಯಾಘ್ರಚರ್ಮವನ್ನೂ ಧರಿಸಿ ಮುಖದಲ್ಲಿ ಮಂದಹಾಸವನ್ನು ಸೂಸುತ್ತಾ ಆ ಕಾಮೇಶ್ವರೀದೇವಿಯು ಕುಳಿತಿರುವಳು. ಈರೀತಿಯಾಗಿ ಪ್ರಸನ್ನವದನೆಯಾಗಿರುವ ಕಾಮೇಶ್ವರೀದೇವಿಯನ್ನು ಧ್ಯಾನಮಾಡಬೇಕು. ಅದರಿಂದ ಧರ್ಮಕಾಮಾರ್ಥಗಳು ಸಿದ್ಧಿಸುವವು.

ಏವಂ ಕಾಮೇಶ್ವರೀಂ ಧ್ಯಾಯೇದ್ಧರ್ಮಕಾಮಾರ್ಥಸಿದ್ಧಯೇ ।
ಪೀಠೇಽನ್ಯತ್ರಾಥವಾ ದೇವ್ಯಾಃ ಪೂಜಯಾಂ ಕಥ್ಯತೇ ಕ್ರಮಃ ॥ ೨೭ ॥

ಪೀಠೇ ವಿಶೇಷೋ ವಕ್ತವ್ಯಃ ಸಾಮಾನ್ಯೇ ತ್ವನ್ಯದಿಷ್ಯತೇ ।
ಅಂಗುಷ್ಠಾದಿಕ್ರಮಾದೇವ ಸಂಯೋಜ್ಯಾಥ ಯುಗಂ ಯುಗಂ ॥ ೨೮ ॥

ಮೂಲಮಂತ್ರಸ್ಯಾಕ್ಷರೇಣ ಧೀರ್ಘಸ್ವರಯುತೇನ ಚ ।
ಷಡ್ಭಿರಾದ್ಯೈರ್ನ್ಯಸೇತ್ಪೂರ್ವಮಂಗುಲೀಯಕಮೇವ ಚ ॥ ೨೯ ॥

ಹೃಚ್ಛಿರಸ್ತು ಶಿಖಾವರ್ಮನೇತ್ರಾಸ್ತ್ರಾಣಿ ಪುನಸ್ತಥಾ ।
ನ್ಯಸೇದ್ದಕ್ಷಿಣಹಸ್ತೇನ ಷಡ್ಭಿರ್ಮಂತ್ರೈಸ್ತಥಾ ಕ್ರಮಾತ್ ॥ ೩೦ ॥

ಆಸ್ಯಂ ಬಾಹುಯುಗಂ ಕುಕ್ಷಿ ಗುಹ್ಯಂ ಜಾನುಯುಗಂ ತಥಾ ।
ಪಾದಯುಗ್ಮಂ ಕ್ರಮಾತ್ಕೃಸ್ತು ಷಡ್ಭಿರ್ಮಂತ್ರೈರ್ನ್ಯಸ್ತೇತ್ತಥಾ ॥ ೩೧ ॥

ಅಷ್ಟಧಾ ಮೂಲಮಂತ್ರಂ ತು ಜಪ್ತ್ವಾಥಾರ್ಘಾಹಿತೇ ಜಲೇ ।
ತೇನೋಪಕರಣಂ ದೇಯಂ ಚಾಭ್ಯುಕ್ಷ್ಯ ಕ್ರಮಮಾದಿಶೇತ್ ॥ ೩೨ ॥

---

೨೭. ಈ ಪೂಜಾಕ್ರಮವು ಎರಡು ವಿಧವಾಗಿರುವುದು. ಪೀಠದಲ್ಲಿ ಮಾಡುವ ಪೂಜಾವಿಧಾನದಲ್ಲಿ ಕೆಲವು ವಿಶೇಷಕ್ರಮಗಳಿರುವುವು. ಮಿಕ್ಕ ಕಡೆಗಳಲ್ಲಿ ಮಾಡುವ ಪೂಜೆಯು ಸಾಮಾನ್ಯವಾದುದು.

೨೮. ಅಂಗುಷ್ಠ (ಹೆಬ್ಬೆರಳು) ಮೊದಲುಗೊಂಡು ಎರಡೆರಡು ಬೆರಳುಗಳನ್ನು ಸೇರಿಸಿ ಮೂಲಮಂತ್ರದ ಅಕ್ಷರಗಳನ್ನು ದೀರ್ಘವಾಗಿ ಉಚ್ಚರಿಸಿ, ಮೊದಲನೆಯ ಆರು ಅಂಗನ್ಯಾಸಗಳನ್ನು ಮಾಡಬೇಕು.

೩೦-೩೧. ಬಳಿಕ ಹೃದಯ, ಶಿರಸ್ಸು, ಶಿಖೆ, ಕವಚ, ನೇತ್ರ, ಅಸ್ತ್ರ ಇವುಗಳ ನ್ಯಾಸವನ್ನೂ, ಮುಖ, ಕೈಗಳೆರಡು, ಉದರ, ಗುಹ್ಯ, ತೊಡೆಗಳೆರಡು, ಕಾಲುಗಳೆರಡು ಇವುಗಳ ನ್ಯಾಸವನ್ನೂ ಆರು ಮೂಲಮಂತ್ರಗಳಿಂದ ಕ್ರಮವಾಗಿ ಮಾಡಬೇಕು.

೩೨. ಎಂಟುಸಾರಿ ಮೂಲಮಂತ್ರವನ್ನು ಜಪಿಸಿ, ದೇವಿಗೆ ಅರ್ಘ್ಯವನ್ನು ಕೊಟ್ಟು, ಆ ಜಲದಿಂದ ಪೂಜಾಸಾಮಗ್ರಿಗಳನ್ನು ಪ್ರೋಕ್ಷಣೆ ಮಾಡಬೇಕು.

ದೈಶಿಕಃ ಪೂಜಯೇದ್ದೇವೀಂ ಪೀಠೇ ನಾದೈಶಿಕಃ ಕ್ವಚಿತ್ ।
ತಸ್ಯೈವ ಹಿ ಕರಸ್ಪರ್ಶಾದ್ದೇವೀ ನೋದ್ವಿಜತೇ ಶಿವಾ ॥ ೩೩ ॥

ಯದಿ ದೇಶಾಂತರಾದ್ಯಾತಂ ಪೀಠಂ ದೇಶಾಂತರಂ ಪ್ರತಿ ।
ತದ್ದೈಶಿಕೋಪದೇಶೇನ ತದಾ ಪೂಜಾಂ ಸಮಾರಭೇತ್ ॥ ೩೪ ॥

ಯದ್ಯನ್ಯತಃ ಸಮಾಯಾತಾ ಕಾಮರೂಪಾದ್ಯತೇ ನರಃ ।
ತದ್ದೇಶಜೋಪದೇಶೇನ ಸಂಪೂಜ್ಯ ಫಲಮಾಪ್ನುಯಾತ್ ॥ ೩೫ ॥

ಯಸ್ಮಿನ್ ದೇಶೇ ತು ಯಃ ಪೀಠ ಓಡ್ಡ್ರಪಾಂಚಾಲಕಾದಿಷು ।
ತದ್ದೇಶಜೋಪದೇಶೇನ ಪೂಜ್ಯಃ ಪೀಠೇ ಸುಧೀ ನರೈಃ ॥ ೩೬ ॥

ಇತೋಽನ್ಯಥಾ ಪೂಜನೇ ನ ಸಮ್ಯಕ್ಫಲಮವಾಪ್ನುಯಾತ್ ।
ಮಹಾವಿಭವಸಂಪೂರ್ಣೈರ್ವಿಹಿತೇನೈವ ಭೈರವ ॥ ೩೭ ॥

---

೩೩. ಪೀಠದಲ್ಲಿರುವ ದೇವಿಯನ್ನು ಆ ದೇಶದ ಅರ್ಚಕನೇ ಪೂಜಿಸಬೇಕು. ಇತರರು ಪೂಜಿಸಬಾರದು. ಇತರರ ಕರಸ್ಪರ್ಶದಿಂದ ಮಂಗಳರೂಪಳಾದ ದೇವಿಯು ಪ್ರಸನ್ನಳಾಗುವುದಿಲ್ಲ.

೩೪. ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಪೀಠವು ಬಂದುದೇ ಆದರೆ ಮೊದಲಿನ ದೇಶದ ಅರ್ಚಕನ ಉಪದೇಶದಿಂದಲೇ ಪೂಜೆಯನ್ನು ಆರಂಭಿಸಬೇಕು.

೩೫. ಕಾಮರೂಪದೇಶದಿಂದ ಬೇರೆ ದೇಶಕ್ಕೆ ಪೀಠವು ಬಂದುದಾದರೆ, ಆ ಕಾಮರೂಪದೇಶದಲ್ಲಿ ಜನಿಸಿದವನ ಉಪದೇಶದಿಂದಲೇ ಸಾಧಕನು ದೇವಿಯನ್ನು ಪೂಜಿಸಬೇಕು. ಹಾಗಾದರೆ ಮಾತ್ರ ಫಲವು ಸಿದ್ಧಿಸುವುದು.

೩೬. ಓಡ್ಡ್ರ, ಪಾಂಚಾಲ, ಮುಂತಾವ ಯಾವ ದೇಶದಲ್ಲಿ ದೇವಿಯ ಪೀಠ ವಿರುವುದೋ ಆ ದೇಶದಲ್ಲಿ ಜನಿಸಿವ ಅರ್ಚಕನ ಉಪದೇಶದಿಂದಲೇ ದೇವತೆಯನ್ನು ಪೂಜಿಸಬೇಕು.

೩೭. ಎಲೈ ಭೈರವನೆ, ಈ ಕ್ರಮಕ್ಕೆ ವಿರುದ್ಧವಾಗಿ ಮಹಾವೈಭವದಿಂದ ದೇವಿಯನ್ನು ಚನ್ನಾಗಿ ಪೂಜಿಸಿದರೂ ಫಲವು ಲಭಿಸಲಾರದು.

ಅನುಕ್ತೋ ಯಃ ಕ್ರಮಶ್ಚಾತ್ರ ವೈಷ್ಣವೀತಂತ್ರಗೋಚರೇ।
ತಥೈವೋತ್ತರತಂತ್ರೇಽಪಿ ಪ್ರೋಕ್ತೋ ಗ್ರಾಹ್ಯಸ್ತು ಸಾಧಕೈಃ ॥ ೩೮ ॥

ಪೂರ್ವದ್ವಾರೇ ಪ್ರಥಮತಃ ಕಾಮತತ್ತ್ವಂ ಪ್ರಪೂಜಯೇತ್।
ದಕ್ಷಿಣೇ ಪ್ರೀತಿತತ್ತ್ವಂ ತು ರತಿತತ್ತ್ವಂ ಚ ಪಶ್ಚಿಮೇ ॥ ೩೯ ॥

ಉತ್ತರೇ ಮೋಹನಂ ತತ್ತ್ವಂ ಕ್ರಮಾದೇತಾನಿ ಪೂಜಯೇತ್।
ಐಶಾನ್ಯಾಂ ಪೂಜಯೇ ದ್ದೇವ್ಯಾ ಗಣೇಶಂ ದ್ವಾರಪಾಲಕಂ ॥ ೪೦ ॥

ಅಗ್ನೌ ತು ಚಾಗ್ನಿವೇತಾಲಂ ನೈರ್ಋತ್ಯಾಂ ಕಾಲಮೇವ ಚ।
ವಾಯವ್ಯಾಂ ನಂದಿನಂ ಚಾಪಿ ಪೂಜಯೇತ್ಕ್ರಮತಸ್ತ್ವಮಾ ॥ ೪೧ ॥

ಚತುಷ್ಕಂ ಪಂಚಕಂ ಷಟ್ಕಂ ಚತುಷ್ಕಂ ಪಂಚಕಂ ಚತುಃ।
ಷಟ್ಕಾರಂ ಚೈವ ಯೋ ವೇದ ಸ ಯೋಗ್ಯಃ ಪೀಠಪೂಜನೇ ॥ ೪೨ ॥

---

೩೮. ಇಲ್ಲಿ ಹೇಳದೇ ಇರುವ ಯಾವ ಕ್ರಮವು ಇರುವುದೋ, ಅದನ್ನು ವೈಷ್ಣವೀತಂತ್ರದಲ್ಲಿಯೂ, ಉತ್ತರತಂತ್ರದಲ್ಲಿಯೂ ತಿಳಿದು ಅನುಷ್ಠಾನ ಮಾಡ ಬೇಕು.

೩೯-೪೧. ಪೂರ್ವದಿಕ್ಕಿನ ದ್ವಾರದಲ್ಲಿ ಮೊದಲು ಕಾಮಸ್ವರೂಪವನ್ನು ಪೂಜಿಸ ಬೇಕು, ದಕ್ಷಿಣದ್ವಾರದಲ್ಲಿ ಪ್ರೀತಿಸ್ವರೂಪವನ್ನೂ, ಪಶ್ಚಿಮದ್ವಾರದಲ್ಲಿ ರತೀದೇವಿಯ ತತ್ವ (ಸ್ವರೂಪ) ವನ್ನೂ, ಉತ್ತರದಲ್ಲಿ ಮೋಹನತತ್ವವನ್ನೂ, ಕ್ರಮವಾಗಿ ಪೂಜಿಸಬೇಕು. ಈಶಾನ್ಯದಲ್ಲಿ ದೇವಿಯ ದ್ವಾರಪಾಲಕನಾದ ಗಣೇಶನನ್ನು ಪೂಜಿಸಬೇಕು. ಆಗ್ನೇಯದಿಕ್ಕಿನ ದ್ವಾರದಲ್ಲಿ ಅಗ್ನಿವೇತಾಲನೆಂಬುವನನ್ನೂ, ನೈರ್ಋತ್ಯದಲ್ಲಿ ಕಾಲನನ್ನೂ, ವಾಯವ್ಯದಲ್ಲಿ ನಂದಿಕೇಶ್ವರನನ್ನೂ ಕ್ರಮವಾಗಿ ಪೂಜಿಸಬೇಕು.

೪೨. ಮೊದಲು ನಾಲ್ಕು ಮೂಲೆಗಳುಳ್ಳ ಚತುರಸ್ರಕೋಣ, ಅದರ ಸುತ್ತಲೂ ಐದು ಕೋಣಗಳು, ಅದರ ಸುತ್ತಲೂ ಆರು ಕೋಣಗಳು, ಬಳಿಕ ಅದರ ಸುತ್ತಲೂ ನಾಲ್ಕು ದಳಗಳು, ಆಮೇಲೆ ಐದು ದಳಗಳು, ಆಮೇಲೆ ಹತ್ತು ದಳಗಳು ಈರೀತಿ ಇರುವ ದೇವಿಯ ಪೀಠಕ್ರಮವನ್ನು (ಚಕ್ರ) ಯಾವ ಪುರುಷನು, ತಿಳಿದಿರುವನೋ ಅವನೇ ಈ ದೇವಿಯ ಪೀಠಪೂಜೆಯನ್ನು ಮಾಡಲು ಯೋಗ್ಯನು.

ಓಢ್ರಾಖ್ಯಂ ಪ್ರಥಮಂ ಪೀಠಂ ದ್ವಿತೀಯಂ ಜಾಲಶೈಲಕಂ ।
ತೃತೀಯಂ ಪೂರ್ಣಪೀಠಂ ತು ಕಾಮರೂಪಂ ಚತುರ್ಥಕಂ ॥ ೪೩ ॥

ಓಢ್ರಪೀಠಂ ಪಶ್ಚಿಮೇ ತು ತಥೈವೋಢ್ರೇಶ್ವರೀಂ ಶಿವಾಂ ।
ಕಾತ್ಯಾಯನೀಂ ಜಗನ್ನಾಥಂ ಓಢ್ರದೇಶಂ ಚ ಪೂಜಯೇತ್ ॥ ೪೪ ॥

ಉತ್ತರೇ ಪೂಜಯೇತ್ಪೀಠಂ ಪ್ರಶಸ್ತಂ ಜಾಲಶೈಲಕಂ ।
ಜಾಲೇಶ್ವರಂ ಮಹಾದೇವಂ ಚಂಡೀಂ ಜಾಲೇಶ್ವರೀಂ ತಥಾ ॥ ೪೫ ॥

ದೀರ್ಘಿಕಾಂ ಜೋಗ್ರದಂಡಾಂ ಚ ತತ್ರೈವ ಪರಿಪೂಜಯೇತ್ ।
ದಕ್ಷಿಣೇ ಪೂರ್ಣಶೈಲಂ ತು ತಥಾ ಪೂರ್ಣೇಶ್ವರೀಂ ಶಿವಾಂ ॥ ೪೬ ॥

ಪೂರ್ಣನಾಥಂ ಮಹಾನಾಥಂ ಸರೋಜಾಮಥ ಚಂಡಿಕಾಂ ।
ಪೂಜಯೇದ್ದಮನೀಂ ದೇವೀಂ ಶಾಂತಾಮಪಿ ತಥಾ ಶಿವಾಂ ॥ ೪೭ ॥

---

೪೩. ಓಢ್ರಪೀಠವು ಮೊವಲನೆಯದು, ಎರಡನೆಯದು ಜಾಲಶೈಲವೆಂಬ ಪೀಠವು, ಮೂರನೆಯದು ಪೂರ್ಣಪೀಠವು, ನಾಲ್ಕನೆಯದು ಕಾಮರೂಪಪೀಠವು.

೪೪. ಓಢ್ರಪೀಠವನ್ನು ಪೀಠದ ಪಶ್ಚಿಮ ದಿಕ್ಕಿನಲ್ಲಿ ಪೂಜಿಸಬೇಕು, ಮತ್ತು ಓಢ್ರೇಶ್ವರೀದೇವಿಯನ್ನೂ, ಕಾತ್ಯಾಯನೀ, ಜಗನ್ನಾಥ, ಓಢ್ರದೇಶವನ್ನೂ ಸಹ ಅಲ್ಲಿಯೇ ಪೂಜಿಸಬೇಕು.

೪೫. ಉತ್ತರವಲ್ಲಿ ಪ್ರಶಸ್ತವಾದ ಜಾಲಶೈಲವೆಂಬ ಪೀಠವನ್ನೂ, ಜಾಲೇಶ್ವರನಾದ ಮಹಾದೇವನನ್ನೂ, ಜಾಲೇಶ್ವರಿಯಾದ ಚಂಡಿಯನ್ನೂ, ದೀರ್ಘಿಕಾದೇವಿಯನ್ನೂ, ಉಗ್ರದಂಡಾದೇವಿಯನ್ನೂ ಪೂಜಿಸಬೇಕು.

೪೬-೪೭. ದಕ್ಷಿಣವಲ್ಲಿ ಪೂರ್ಣಶೈಲವೆಂಬ ಪೀಠವನ್ನೂ, ಆ ಪೀಠೇಶ್ವರಿಯಾದ ಪೂರ್ಣೇಶ್ವರೀ ದೇವಿಯನ್ನೂ, ಪೂರ್ಣನಾಥ, ಮಹಾನಾಥ, ಇವರನ್ನೂ, ಸರೋಜಾದೇವಿ ಮತ್ತು ಚಂಡಿಕಾದೇವಿಯರನ್ನೂ ಮಂಗಳಕರರಾದ ಶಾಂತಾದೇವಿಯನ್ನೂ, ಪೂಜಿಸಬೇಕು,

ಕಾಮರೂಪಂ ಮಹಾಪೀಠಂ ತಥಾ ಕಾಮೇಶ್ವರೀಂ ಶಿವಾಂ ।
ನೀಲಂ ಚ ಪರ್ವತಶ್ರೇಷ್ಠಂ ನಾಥಂ ಕಾಮೇಶ್ವರಂ ತಥಾ ॥ ೪೮ ॥

ಪೂಜಯೇದ್ದ್ವಾರಿ ಪೂರ್ವೇ ತು ಕ್ರಮಾದೇತಾಸ್ತು ಭೈರವ ।
ಓಢ್ರಾದೀನಾಂ ತು ಪೀಠಾನಾಂ ಕ್ಷೇತ್ರಪಾಲಾ೯ ಗುರೂಂಸ್ತಥಾ ॥ ೪೯ ॥

ಅನ್ಯಾಂಸ್ತು ದ್ವಾರಪಾಲಾದೀ೯ ಸ್ವೇ ಸ್ವೇ ಸ್ಥಾನೇ ಪ್ರಪೂಜಯೇತ್ ।
ವಿಶೇಷಾತ್ಕಾಮರೂಪಸ್ಯ ಕಾಮೇಶ್ವರೀಂ ಪ್ರಪೂಜಯ೯ ॥ ೫೦ ॥

ತಾನೇವ ನೀಲಶೈಲಸ್ಥಾ೯ ಶೃಣು ವೇತಾಲಭೈರವ ।
ನಾಥಃ ಕಾಮೇಶ್ವರೋ ದೇವೋ ದೇವೀ ಕಾಮೇಶ್ವರೀ ತಥಾ ॥ ೫೧ ॥

ಕರಾಲಃ ಕ್ಷೇತ್ರಪಾಲಶ್ಚ ಚಿಂಚಾವೃಕ್ಷಸ್ತಥೈವ ಚ ।
ತ್ರಿಕೋಟೋ ನೀಲಶೈಲಸ್ತು ಗುಹಾ ಚಾಪಿ ಮನೋಭವಾ ॥ ೫೨ ॥

ಬಟುಕಃ ಕಂಬಲೋ ನಾಮ ವಲ್ಲೀ ಚೈವಾಪರಾಜಿತಾ ।
ಭೈರವಃ ಪಾಂಡುನಾಥಶ್ಚ ಶ್ಮಶಾನಂ ಹೇರುಕಾಹ್ವಯಂ ॥ ೫೩ ॥

---

೪೮. ಎಲೈ ಭೈರವನೇ, ಕಾಮರೂಪವೆಂಬ ಮಹಾಪೀಠವನ್ನೂ, ಮಂಗಳ ಕರಳಾದ ಕಾಮೇಶ್ವರೀ ದೇವಿಯನ್ನೂ, ನೀಲಕೂಟಪರ್ವತವನ್ನೂ, ಕಾಮೇಶ್ವರನೆಂಬ ನಾಥನನ್ನೂ ಸಹ ಪೀಠದ ಪೂರ್ವದ್ವಾರದಲ್ಲಿ ಪೂಜಿಸಬೇಕು.

೪೯. ಓಢ್ರಾದಿಪೀಠಗಳ ಕ್ಷೇತ್ರಪಾಲಕರು, ಗುರುಗಳು ಮತ್ತೂ ದ್ವಾರಪಾಲ ಕಾದಿಗಳು, ಇವರನ್ನು ಆಯಾಯ ಸ್ಥಾನಗಳಲ್ಲಿ ಪೂಜಿಸಬೇಕು.

೫೦-೫೫. ಎಲೈವೇತಾಲ ಭೈರವರೇ! ಕಾಮೇಶ್ವರಿಯನ್ನು ಪೂಜಿಸುವವನು ನೀಲಶೈಲವಲ್ಲಿರುವ ಕಾಮರೂಪಪೀಠದ ವಿಶೇಷದೇವತೆಗಳನ್ನೂ ಪೂಜಿಸಬೇಕು. ಅವುಗಳನ್ನೂ ಹೇಳುವೆನು ಕೇಳು:—ಜಗದೊಡೆಯನಾದ ಕಾಮೇಶ್ವರದೇವ, ಕಾಮೇಶ್ವರೀದೇವಿ, ಕರಾಲನೆಂಬ ಕ್ಷೇತ್ರಪಾಲ, ಚಿಂಚಾವೃಕ್ಷ ಎಂಬ ಕಲ್ಪವೃಕ್ಷ ಮೂರು ಶಿಖರಗಳುಳ್ಳ ನೀಲಶೈಲ, ಮನೋಭವವೆಂಬ ಗುಹೆ, ಕಂಬಲನೆಂಬ ವಟು, ಅಪರಾಜಿತ ಎಂಬ ಕಲ್ಪವಲ್ಲೀ, ಪಾಂಡುನಾಥನೆಂಬ ಭೈರವ, ಹೇರುಕನೆಂಬ ಶ್ಮಶಾನ, "ಮಹೋಛ್ವಾಸ" ಎಂಬ ಯೋಗಿನಿ, "ಚಂದ್ರವತಿ" ಯೆಂಬ ದೇವಿಯ ನಗರ,

ಯೋಗಿನೀ ಚ ಮಹೋಭ್ಖಾಸಾ ತಥಾ ಚಂದ್ರವತೀ ಪುರೀ ।
ಲೌಹಿತ್ಯೋ ನದರಾಜಶ್ಚ ಸ್ಯಾಂತಾ ದಿಕ್ಕರವಾಸಿನೀ ॥ ೫೪ ॥

ಜಲ್ಪೀಶಾಖ್ಯಸ್ತು ವಾಯವ್ಯಾಂ ಕೇದಾರಾಖ್ಯೋಽಥ ರಾಕ್ಷಸೇ ।
ಏತಾ೯ ಸಂಪೂಜಯೇದ್ದ್ವಾರಿ ತಥಾ ದೇವ್ಯಾಸ್ತು ಮಂಡಲೇ ॥ ೫೫ ॥

ದ್ವಾರಪಾಲೋ ಯೋಗಿನೀ ಚ ವಟುಕಾದ್ಯಾ ಯಥಾ ತಥಾ ।
ಕಾಮರೂಪೇ ಪೀಠವರೇ ಓಢ್ರಾದಿಷ್ವಥ ತತ್ತಥಾ ॥ ೫೬ ॥

ಮಧ್ಯೇ ತು ಮಂಡಲಸ್ಯಾಥ ದ್ರಾವಣಂ ಶೋಷಣಂ ತಥಾ ।
ಬಂಧನಂ ಮೋಹನಂ ಚೈವ ತಥೈವಾಕರ್ಷಣಾಹ್ವಯಂ ॥ ೫೭ ॥

ಮನೋಭವಸ್ಯ ಬಾಣಾಂಸ್ತು ಪಂಚೈತಾ೯ ಪರಿಪೂಜಯೇತ್ ।
ಷಟ್ಕೋಣಾಗ್ರೇಷೂತ್ತರಾದೌ ಭಗಾದಿಷಟ್ಕಮೇವ ಚ ॥ ೫೮ ॥

ಶ್ರೇಷ್ಠವಾದ ಲೌಹಿತ್ಯನದಿ, ದೇಶದ ಕೊನೆಯಲ್ಲಿರುವ ದಿಕ್ಕರವಾಸಿನೀದೇವಿ, ವಾಯವ್ಯ ದಿಕ್ಕಿನಲ್ಲಿರುವ ಜಲ್ಪೀಶ, ನೈರುತ್ಯದಲ್ಲಿರುವ ಕೇದಾರನಾಥ, ಈ ದೇವತೆಗಳನ್ನು ಕಾಮೇಶ್ವರೀದೇವಿಯ ದ್ವಾರದಲ್ಲಿಯೂ, ಮಂಡಲದಲ್ಲಿಯೂ ಪೂಜಿಸಬೇಕು.

೫೬. ಕಾಮರೂಪಪೀಠದಲ್ಲಿ ಹೇಳಿರುವ ದ್ವಾರಪಾಲಕರು, ಯೋಗಿನಿ, ವಟು ಮುಂತಾದವರನ್ನೇ ಓಡ್ರಪೀಠಾದಿಗಳಲ್ಲಿಯೂ, ಪೂಜಿಸಬೇಕು.

೫೭. ದ್ರಾವಣ, ಶೋಷಣ, ಬಂಧನ, ಮೋಹನ, ಆಕರ್ಷಣ, ಎಂಬ ಐದು ಮನ್ಮಥಬಾಣಗಳನ್ನು ಮಂಡಲದ ಮಧ್ಯದಲ್ಲಿ ಪೂಜಿಸಬೇಕು.

೫೮. ಮಂಡಲದ ಆರು ಕೋಣಗಳ ಅಗ್ರಭಾಗಗಳಲ್ಲಿ ಉತ್ತರದಿಕ್ಕು ಮೊದಲು ಗೊಂಡು ಭಗನೇ ಮೊದಲಾದ ಆರು ದೇವತಾಗಣಗಳನ್ನು, ತ್ರಿಪುರಾತಂತ್ರಮಂತ್ರ ಗಳಲ್ಲಿ ಹೇಳಿದಂತೆ ಕ್ರಮವಾಗಿ ಸಾಧಕನು ಪೂಜಿಸಬೇಕು.

ತ್ರಿಪುರಾತಂತ್ರಮುಂತ್ರೋಕ್ತಂ ಪೂಜಯೇತ್ಕ್ರಮತಃ ಸುಧೀಃ ।
ಗಣಾ ಕ್ರೀಡಾದಿಕಂ ತದ್ವತ್ತಥಾ ವಿದ್ಯಾಕಲಾದಿಕಾ ॥ ೫೯ ॥

ಬಟುಕಾ ಸಿದ್ಧಪುತ್ರಾದೀ ಸಿದ್ಧಾದ್ಯಾಶ್ಚ ಕುಮಾರಿಕಾಃ ।
ಚತುಶ್ಚತುಷ್ಕಮಿತ್ಯೇತಚ್ಚತುಷ್ಕಮಿತಿ ಜ್ಞೋಚ್ಯತೇ ॥ ೬೦ ॥

ಕಾಮಂ ರತಿಂ ಚ ಪ್ರೀತಿಂ ಚ ಅನಂಗಮೇಖಲಾದಿಕೆಂ ।
ಸಪ್ತ ವೈ ತ್ರಿಪುರಘ್ನಾದ್ಯಾ ಅಸಿತಾಂಗಾದಯೋ ನವ ॥ ೬೧ ॥

ಮಾಹೇಶ್ವರ್ಯಾದಿಕಾ ದೇವ್ಯೋ ದಶಭಿಃ ಪಂಚಭಿ ರ್ಗಣೈಃ ।
ದ್ವಿತೀಯಂ ಪಂಚಕಂ ಪ್ರೋಕ್ತಂ ಪೀಠೇ ಕಾಮಫಲಪ್ರದಂ ॥ ೬೨ ॥

ಆಧಾರಶಕ್ತಿಮುಖ್ಯಾ ಯೇ ನಿತ್ಯಂ ತತ್ರ ಪ್ರತಿಷ್ಠಿತಾಃ ।
ಧರ್ಮಾದ್ಯಾಶ್ಚ ತಥೈವಾಷ್ಟೌ ತಥಾ ಸತ್ತ್ವಾದಿಕಾ ಗುಣಾಃ ॥ ೬೩ ॥

೫೯-೬೦. ಕ್ರೀಡಾದಿಗಳು, ಗಣಗಳು, ವಿದ್ಯಾಕಲೆ, ವಟುಕಗಣ, ಸಿದ್ಧ ಪುತ್ರರು, ಸಿದ್ಧರು, ಕುಮಾರಿಕೆಯರು, ಇವರೆಲ್ಲರೂ ನಾಲ್ಕು ನಾಲ್ಕು ಮಂದಿ ಸೇರಿ ಒಂದೊಂದು ಗುಂಪಿನಂತೆ ಇರುವರು. ಇವರನ್ನು ಅದೇರೀತಿ ಪೂಜಿಸಬೇಕು.

೬೧-೬೨. ಕಾಮ, ರತೀದೇವಿ, ಪ್ರೀತಿ ಈ ಮೂರು ಜನಗಳು, ಅನಂಗ ಮೇಖಲೆ ಮೊದಲಾದವರು, ತ್ರಿಪುರಘ್ನನೇ ಮೊದಲಾದ ಏಳು ಜನಗಳು, ಅಸಿತಾಂಗನೇ ಮೊದಲಾದ ಒಂಭತ್ತು ಜನ ನಾಯಕರು, ಮಾಹೇಶ್ವರಿಯೇ ಮೊದಲಾದ ಹತ್ತು ಜನ ದೇವಿಯರು, ಇವರೆಲ್ಲರನ್ನೂ ಪೀಠದ ಐದುಮೂಲೆಗಳುಳ್ಳ ಚಕ್ರದಲ್ಲಿ ಪೂಜಿಸಬೇಕು. ಐದು ಮೂಲೆಗಳ ಚಕ್ರವು ಪೀಠದ ಎರಡನೆಯ ಚಕ್ರವು, ಇದು ಇಷ್ಟಾರ್ಥಸಿದ್ಧಿಯನ್ನು ಕೊಡುವುದು.

೬೩. ಆಧಾರ ಶಕ್ತಿಯೇ ಮೊದಲಾದ ದೇವತೆಗಳು, ಧರ್ಮವೇ ಮೊದಲಾದ ಎಂಟು ದೇವತೆಗಳು, ಸತ್ತ್ವರಜಸ್ತಮೋಗುಣಗಳು, ಗ್ರಹಗಳು ಮತ್ತು ದಿಕ್ಪತಿಗಳು ಈ ನಾಲ್ಕುಗುಂಪುಗಳಿಗೆ ಮತ್ತೊಂದು ಚತುಷ್ಕವೆಂದು ಹೆಸರು, ಎಂದರೆ ಪೀಠದ ಚತುರಶ್ರಕೋಣವೆಂದು ಹೆಸರು. ಈ ಗುಂಪುಗಳಲ್ಲಿಯ ದೇವತೆಗಳನ್ನೂ ಪೂಜಿಸಬೇಕು.

ಏಕತ್ರ ಗ್ರಹದಿಕ್ಪಾಲಾಶ್ಚತುಷ್ಕಮಪರಂ ಸ್ಮೃತಂ ।
ದೇವ್ಯಾಸ್ತಥೋಗ್ರಚಂಡಾದ್ಯಾ ನಾಯಿಕಾಃ ಪರಿಪೂಜಯೇತ್ ॥ ೬೪ ॥

ಪೂರ್ವೋಕ್ತದೇಶೆ ಮಂತ್ರೇಣ ಭಕ್ತ್ಯಾ ವೇತಾಲಭೈರವ ।
ಆವಾಹನಂ ಷೋಡಶೋಪಚಾರಾಣಾಂ ಪ್ರತಿಪಾದನಂ ॥ ೬೫ ॥

ಜಪಂ ಚ ಬಲಿದಾನಂ ಚ ಅಂಗಾಸ್ತ್ರಾಣಾಂ ಪ್ರಪೂಜನಂ ।
ಮುದ್ರಾಪೂರ್ವಾ ವಿಸೃಷ್ಟಿಶ್ಚ ಷಟ್ಕಮೇತತ್ಪ್ರಕೀರ್ತಿತಂ ॥ ೬೬ ॥

ಏತಾಂಸ್ತು ಷಟ್ಚ ಯೋ ವೇದ ಪ್ರಕಾರಾನ್ ಪೂಜಕಃ ಸುಧೀಃ ।
ಸ ಏವೋಢ್ರಾದಿಪೀಠಾನಿ ಸಂಪೂಜಯಿತುಮರ್ಹತಿ ॥ ೬೭ ॥

ಯೋಽಜ್ಞಾತ್ವಾ ಸಮ್ಯಗೇತಾನಿ ಕುರುತೇ ಪೀಠಪೂಜನಂ ।
ನ ಸಮ್ಯಕ್ಫಲಮಾಪ್ನೋತಿ ಹೀನಾಯುರಪಿ ಜಾಯತೇ ॥ ೬೮ ॥

ತ್ರಿಪುರಾತಂತ್ರಮುಂಪ್ರೋಕ್ತಸ್ಥಾನೇಷ್ವೇತೇಷು ಭೈರವ ।
ಪೂಜಯಿತ್ವಾ ಪೃಥಮತಃ ಪೂಜಯೇತ್ಪರಮೇಶ್ವರೀಂ ॥ ೬೯ ॥

---

೬೪. ಎಲೈ ವೇತಾಲಭೈರವನೇ; ಮತ್ತು ಉಗ್ರಚಂಡಾ ಮೊದಲಾದ ದೇವಿಯ ನಾಯಿಕೆಯರನ್ನು ಹಿಂದೆ ಹೇಳಿದ ಪ್ರದೇಶದಲ್ಲಿ ಭಕ್ತಿಯಿಂದ ಪೂಜಿಸ ಬೇಕು.

೬೫-೬೬. ಆವಾಹನ, ಷೋಡಶೋಪಚಾರಗಳು ಜಪ, ಬಲಿದಾನ, ಅಂಗ ಪೂಜೆ ಮತ್ತೂ ಅಸ್ತ್ರಪೂಜೆ, ಮುದ್ರೆಗಳ ಪ್ರದರ್ಶನಮಾಡಿ ದೇವಿಯ ವಿಸರ್ಜನೆ, ಈ ಆರು ವಿಧಾನಗಳ ಗುಂಪಿಗೆ ಪೂಜಾಷಟ್ಕವೆಂದು ಹೆಸರು.

೬೭. ಈ ಆರು ಪ್ರಕಾರವಾದ ಪೂಜಾವಿಧಾನಗಳನ್ನು ಯಾವ ಬುದ್ಧಿವಂತನಾದ ಪೂಜಕನು ತಿಳಿದಿರುವನೋ ಅವನೇ ಓಢ್ರಾದಿ ಪೀಠಗಳನ್ನು ಪೂಜಿಸಲು ಯೋಗ್ಯನು.

೬೮. ಮೇಲಿನ ಕ್ರಮಗಳನ್ನು ತಿಳಿಯದೆ ಯಾವನು ಪೀಠ ಪೂಜೆಯನ್ನು ಮಾಡುವನೋ, ಅವನು ಸರಿಯಾದ ಫಲವನ್ನು ಪಡೆಯುವುದಿಲ್ಲ, ಅಲ್ಪಾಯುವೂ ಆಗುವನು.

೬೯. ಎಲೈ ಭೈರವನೇ, ತ್ರಿಪುರಾತಂತ್ರಮಂತ್ರಗಳಲ್ಲಿ ಹೇಳಿರುವಂತೆ ಆಯಾಯ ಸ್ಥಾನಗಳಲ್ಲಿ ಆಯಾಯದೇವತೆಗಳನ್ನು ಮೊದಲು ಪೂಜಿಸಿ, ಆಮೇಲೆ ಪರಮೇಶ್ವರಿಯಾದ ಕಾಮೇಶ್ವರಿಯನ್ನು ಪೂಜಿಸಬೇಕು.

ಕಾಮೇಶ್ವರಿ ಇಹಾಗಚ್ಛ ಸಂಮುಖೀ ಭವ ಚೇಶ್ವರಿ ।
ಚಿಂತಯಿತ್ವಾಥ ಮನಸಾಭ್ಯರ್ಚ್ಯ ಕಾಮೇಶ್ವರೀಂ ಹೃದಿ ॥ ೭೦ ॥

ಮಾನಸೈರ್ಗಂಧಪುಷ್ಪಾದ್ಯೈಸ್ತತೋ ದಕ್ಷಿಣನಾಸಯಾ ।
ನಿಸ್ಸಾರ್ಯ ವಾಯುಂ ತತ್ಪುಷ್ಪಮಾರೋಪ್ಯ ಮಂಡಲಾಂತರೇ ॥ ೭೧ ॥

ಆವಾಹಯೇನ್ಮಹಾದೇವೀಂ ಸರ್ವಕಾಮೇಶ್ವರೇಶ್ವರೀಂ ।
ಕಾಮೇಶ್ವರಿ ಇಹಾಗಚ್ಛ ಸಂಮುಖೀ ಭವ ಸಂನಿಧೌ ॥ ೭೨ ॥

ಕಾಮೇಶ್ವರಿ ವಿದ್ಮಹೇ ತ್ವಾಂ ಕಾಮಾಖ್ಯಾಯೈ ಚ ಧೀಮಹಿ ।
ತನ್ನಃ ಕುಬ್ಜಿ ಮಾಹಾಮಾಯೇ ತತಃ ಪಶ್ಚಾ ತ್ಪ್ರಚೋದಯಾತ್ ॥ ೭೩ ॥

ಏಹ್ಯೇಹಿ ಭಗವತ್ಯಂಬ ಲೋಕಾನುಗ್ರಹಕಾರಿಣಿ ।
ಕಾಮೇಶಿ ಕಾಮರೂಪೇ ತ್ವಂ ಕಾಮುಕಾಂತೇ ಪ್ರಸೀದ ಮೇ ॥ ೭೪ ॥

೭೦-೭೧ ಜಗದೊಡೆಯಳಾದ ಓ ಕಾಮೇಶ್ವರಿಯೇ ನನ್ನ ಸನ್ನಿಧಿಗೆ ಬಂದು, ಪೂಜಾಕಾಲದಲ್ಲಿ ನನಗೆ ಸಮ್ಮುಖಳಾಗು ಎಂದು ಮನಸ್ಸಿನಿಂದ ಧ್ಯಾನಿಸಿ, ಹೃದಯದಲ್ಲಿಯೇ ಮನಸ್ಸಿನಿಂದ ಕಲ್ಪಿತವಾದ ಗಂಧ, ಪುಷ್ಪ, ಮೊದಲಾದುವುಗಳಿಂದ ಪೂಜಿಸಬೇಕು. ಅನಂತರ ಬಲಗಡೆಯ ನಾಸಾಪುಟದಿಂದ ವಾಯುವನ್ನು ಹೊರಡಿಸಿ ಪುಷ್ಪವನ್ನು ಆಘ್ರಾಣಿಸಿ, ಆ ಪುಷ್ಪವನ್ನು ಮಂಡಲದ ಮಧ್ಯದಲ್ಲಿಟ್ಟು ಮಹಾದೇವಿಯಾದ ಕಾಮೇಶ್ವರಿಯನ್ನು ಮುಂದೆಹೇಳುವ ಮಂತ್ರದಿಂದ ಆವಾಹನೆಮಾಡಬೇಕು.

೭೨-೭೩. ಓ ಕಾಮೇಶ್ವರಿಯೇ! ಇಲ್ಲಿಗೆಬಂದು ನಿನ್ನ ಸನ್ನಿಧಿಯನ್ನುಂಟು ಮಾಡಿ, ನಾನು ಮಾಡುವ ಪೂಜೆಯನ್ನು ಸ್ವೀಕರಿಸು. "ಕಾಮೇಶ್ವರ್ಯೈ ಚ ವಿದ್ಮಹೇ ಕಾಮಾಖ್ಯಾಯೈ ಚ ಧೀಮಹಿ ॥ ತನ್ನಃ ಕುಬ್ಜಿ ಪ್ರಚೋದಯಾತ್" ॥ ಇದು ಕಾಮೇಶ್ವರೀ ಗಾಯತ್ರಿಯು. ಕಾಮೇಶ್ವರಿಯೇ! ನಿನ್ನನ್ನು ಉಪಾಸಿಸುವೆನು, ಕಾಮಾಖ್ಯಾರೂಪಳಾದ ನಿನ್ನನ್ನು ಸಂತೋಷಗೊಳಿಸುವೆನು, ಕುಬ್ಜಿಕಾರೂಪಳೂ, ಮಹಾಮಾಯಾರೂಪಳೂ ಆದ ಓ ದೇವಿಯೇ ನೀನು ನನಗೆ ಪ್ರಸನ್ನಳಾಗು.

೭೪. ಭಗವತಿಯಾದ ಓ ಮಾತೆಯೇ, ನೀನು ಲೋಕಕ್ಕೆ ಅನುಗ್ರಹವನ್ನು ಮಾಡುವ ದೇವಿಯು. ನನ್ನ ಸನ್ನಿಧಿಗೆ ಬೇಗನೆಬಾ, ಕಾಮೇಶ್ವರಿಯೂ, ಸುಂದರವಾದ ರೂಪವುಳ್ಳವಳೂ, ಮನ್ಮಥನಂತೆ ಸುಂದರಳೂ, ಆದ ಓ ದೇವಿ! ನನಗೆ ಪ್ರಸನ್ನಳಾಗು. ಮೇಲೆ ಹೇಳಿದ ಗಾಯತ್ರಿಯೂ, ಇದೂ, ಎರಡೂ ಆವಾಹನೆಮಂತ್ರಗಳು.

ತತಸ್ತು ಪ್ರಥಮಂ ಸ್ನಾನಂ ಜಲಂ ದತ್ವಾ ತು ಪೂಜಕಃ ।
ಮೂಲಮಂತ್ರೇಣ ವಿತರೇದುಪಚಾರಾಂಸ್ತು ಷೋಡಶ ॥ ೭೫ ॥

ಪೂಜಯೇನ್ಮಧ್ಯಭಾಗೇ ತು ಷಡಂಗಾನಿ ತತೋಽರ್ಚಯೇತ್ ।
ಅಂಗನ್ಯಾಸೇ ತು ಯೇ ಮಂತ್ರಾಃ ಕ್ರಮೇ ಪೂರ್ವಂ ತು ಭಾಷಿತಾಃ ॥ ೭೬ ॥

ತೈರೇವ ಮಂತ್ರೈರಂಗಾನಿ ದೇವ್ಯಾ ಅಪಿ ಚ ಪೂಜಯೇತ್ ।
ಪೂರ್ವಾದ್ಯಷ್ಟದಲೇಷ್ವೇತಾ ಯೋಗಿನೀಃ ಪರಿಪೂಜಯೇತ್ ॥ ೭೭ ॥

ಯಥಾಕ್ರಮೇಣ ಕಾಮಾನಾಂ ಸಿದ್ಧ್ಯರ್ಥಂ ಕಾಮದಾಯಿಕಾಃ ।
ಗುಪ್ತಕಾಮಾಂ ತು ಶ್ರೀಕಾಮಾಂ ತಥೈವ ವಿಂಧ್ಯವಾಸಿನೀಂ ॥ ೭೮ ॥

ಕೋಟೀಶ್ವರೀಂ ವನಸ್ಥಾಂ ತು ಯೋಗಿನೀಂ ಪಾದಚಂಡಿಕಾಂ ।
ದೀರ್ಘೇಶ್ವರೀಂ ತು ಪ್ರಕಟಾಂ ಭುವನೇಶೀಂ ಕ್ರಮಾದ್ಯಜೇತ್ ॥ ೭೯ ॥

ವೈಷ್ಣವೀತಂತ್ರಮಂತ್ರಸ್ಯ ಯಾನ್ಯಷ್ಟಾವಕ್ಷರಾಣಿ ತು ।
ತಾನಿ ಬಿಂದ್ವಿಂದುಯುಕ್ತಾನಿ ಮಂತ್ರಾಣ್ಯಾಸಾಂ ಪ್ರಚಕ್ಷತೇ ॥ ೮೦ ॥

---

೭೫. ಆಮೇಲೆ, ಮೊದಲು ದೇವಿಗೆ ಸ್ನಾನಮಾಡಿಸಿ, ಹಿಂದೆ ಹೇಳಿದ ಮೂಲ ಮಂತ್ರದಿಂದ ಧ್ಯಾನವೇ ಮೊದಲಾದ ಹದಿನಾರು ಉಪಚಾರಗಳಿಂದ ದೇವಿಯನ್ನು ಪೂಜಿಸಬೇಕು, ದೇವಿಯ ಆರು ಅಂಗಗಳನ್ನು ಮಧ್ಯಭಾಗದಲ್ಲಿ ಅರ್ಚಿಸಬೇಕು,

೭೬. ಹಿಂದೆ ದೇವಿಪೂಜಾಕ್ರಮದಲ್ಲಿ ಅಂಗನ್ಯಾಸಕ್ಕಾಗಿ ಯಾವ ಮಂತ್ರ ಗಳನ್ನು ಹೇಳಿರುವುದೋ ಅದೇ ಮಂತ್ರಗಳಿಂದ ಇಲ್ಲಿ ದೇವಿಯ ಅಂಗಗಳನ್ನು ಪೂಜಿಸ ಬೇಕು.

೭೭-೭೯. ಮಂಡಲದ ಪೂರ್ವದಿಕ್ಕು ಮೊದಲುಗೊಂಡು ಎಂಟು ದಲಗಳಲ್ಲಿ ಗುಪ್ತಕಾಮಾ, ಶ್ರೀಕಾಮಾ, ವಿಂಧ್ಯವಾಸಿನೀ, ಕೋಟೀಶ್ವರೀ, ಪಾದಚಂಡಿಕಾ, ದೀರ್ಘೇ ಶ್ವರೀ, ಪ್ರಕಟಾ, ಭುವನೇಶೀ, ಎಂಬ ಈ ಎಂಟುಮಂದಿ ಯೋಗಿನಿಯರನ್ನು ಕ್ರಮ ವಾಗಿ ಪೂಜಿಸಬೇಕು. ಇವರು ಇಷ್ಟಾರ್ಥಸಿದ್ಧಿಗಳನ್ನು ಕೊಡುವರು.

೮೦. ವೈಷ್ಣವೀ ತಂತ್ರದಲ್ಲಿ ಹೇಳಿರುವ ಅಷ್ಟಾಕ್ಷರೀ ಮಂತ್ರದ ಎಂಟು ಅಕ್ಷರ ಗಳಿಗೆ ಪ್ರತ್ಯೇಕವಾಗಿ ಬಿಂದುಗಳನ್ನು ಸೇರಿಸಿದರೆ ಈ ಎಂಟುಮಂದಿಯೋಗಿನಿಯರನ್ನು ಪೂಜಿಸುವ ಮಂತ್ರಗಳಾಗುವವು.

ಮುಂಶ್ರೇಷು ಷಣ್ಣಾಂ ಕೋಣಾನಾಂ ಷಡಿಮಾಃ ಪರಿಪೂಜಯೇತ್ ।
ಐಶಾನ್ಯಾದಿಕ್ರಮೇಣೈವ ಕಾಮಾಖ್ಯಾಂ ತ್ರಿಪುರಾಂ ತಥಾ ॥ ೮೧ ॥

ದೌರದಾಂ ಚ ಮಹೋಚ್ಛ್ವಾಸಾಂ ಪ್ರಕಟಾಂ ಭುವನೇಶ್ವರೀಂ ।
ಸಿದ್ಧಕಾಮೇಶ್ವರೀಂ ಚಾಪಿ ದೇವ್ಯಾ ರೂಪಾಣಿ ಭೈರವ ॥ ೮೨ ॥

ಅಷ್ಟಪುಷ್ಪಿಕಯಾ ದೇವೀಂ ಪುನಃ ಸಂಪೂಜ್ಯ ಚಾಷ್ಟಧಾ ।
ಜಪ್ತ್ವಾ ಸ್ತುತ್ವಾ ಬಲಿಂ ದತ್ತಾ ನತ್ವಾ ಮುದ್ರಾಂ ಪ್ರದರ್ಶ್ಯ ಚ ॥ ೮೩ ॥

ದೇವ್ಯಾಸ್ತು ಸಿದ್ಧಚಂಡ್ಯಾಂ ವೈ ನಿರ್ಮಾಲ್ಯಂ ಪ್ರತಿಪಾದ್ಯ ಚ ।
ವಿಸೃಜ್ಯ ಮಂಡಲಾದ್ದೇವೀಂ ಸ್ಥಾಪಯೇದ್ಯೋನಿಮಂಡಲೇ ॥ ೮೪ ॥

ಏತತ್ಕಾಮೇಶ್ವರೀತಂತ್ರಂ ಕಥಿತಂ ಯುವಯೋಃ ಸುತೌ ।
ಶಾರದಾಯಾ ಮಹಾತಂತ್ರಂ ಸಮಂತ್ರಂ ಶೃಣು ಭೈರವ ॥ ೮೫ ॥

॥ ಇತಿ ಶ್ರೀ ಕಾಲಿಕಾಪುರಾಣೇಽಷ್ಟಷಷ್ಟಿತಮೋಽಧ್ಯಾಯಃ ॥

೮೧-೮೩. ಎಲೈ ಭೈರವನೇ ಆ ಮಂತ್ರಗಳಲ್ಲಿ ಆರುಮಂತ್ರಗಳಿಂದ ಕಾಮಾಖ್ಯಾ ತ್ರಿಪುರಾ, ದೌರದಾ, ಮಹೋಚ್ಛ್ವಾಸಾ, ಪ್ರತ್ಯಕ್ಷಭುವನೇಶ್ವರೀ, ಸಿದ್ಧಕಾಮೇಶ್ವರಿ, ಎಂಬದೇವಿಯ ಆರುರೂಪಗಳನ್ನು ಮಂಡಲದ ಆರುಮೂಲೆಗಳಲ್ಲಿ ಈಶಾನ್ಯ ಮೊದಲು ಗೊಂಡು ಕ್ರಮವಾಗಿ ಪೂಜಿಸಬೇಕು.

೮೩-೮೪. ಎಂಟು ಪುಷ್ಪಗಳಿಂದ ದೇವಿಯನ್ನು ಪುನಃ ಎಂಟುಬಾರಿ ಪೂಜಿಸಿ ಮೂಲಮಂತ್ರದಿಂದ ಜಪವನ್ನು ಮಾಡಬೇಕು, ಬಳಿಕ, ಸ್ತೋತ್ರ, ಬಲಿಪ್ರದಾನ, ನಮಸ್ಕಾರ, ಮುದ್ರಾಪ್ರದರ್ಶನ ಈ ವಿಧಾನಗಳನ್ನು ಮಾಡಿ, ನಿರ್ಮಾಲ್ಯಪ್ರಸಾದವನ್ನು ಸಿದ್ಧಚಂಡೀಶ್ವರಿಯಲ್ಲಿ ಸಮರ್ಪಿಸಿ, ಮಂಡಲಕ್ರಮದಿಂದ ದೇವಿಯನ್ನು ವಿಸರ್ಜಿಸಿ ಯೋನಿಮಂಡಲದಲ್ಲಿ ಸ್ಥಾಪಿಸಬೇಕು.

೮೫. ಎಲೈ ವತ್ಸರೇ! ಇದೇ ಕಾಮೇಶ್ವರೀದೇವಿಯನ್ನು ಪೂಜೆಮಾಡುವ ವಿಧಾನವು. ಇದನ್ನು ನಿಮಗೆ ಈಗ ಹೇಳಿದುದಾಯಿತು. ಇನ್ನು ಶಾರದಾದೇವಿಯ ಮಹಾಮಂತ್ರವನ್ನೂ ತಂತ್ರವನ್ನೂ ಹೇಳುವೆನು, ಸಾವಧಾನವಾಗಿ ಕೇಳಿರಿ.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಅರವತ್ತೆಂಟನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ
ಶ್ರೀ ಕಾಲಿಕಾಪುರಾಣೇ ಏಕೋನಸಪ್ತತಿತಮೋऽಧ್ಯಾಯಃ

॥ ಶ್ರೀ ಭಗವಾನುವಾಚ ॥

ಶರತ್ಕಾಲೇ ಪುರಾ ಯಸ್ಮಾನ್ನವಮ್ಯಾಂ ಬೋಧಿತಾ ಸುರೈಃ ।
ಶಾರದಾ ಸಾ ಸಮಾಖ್ಯಾತಾ ಪೀಠೇ ಲೋಕೇ ಚ ಮಾನವ ॥ ೧ ॥

ತಸ್ಯಾಸ್ತು ನೇತ್ರಬೀಜಾಖ್ಯಂ ಮಂತ್ರಂ ಪ್ರಾಕ್ಪ್ರತಿಪಾದಿತಂ ।
ದುರ್ಗಾತಂತ್ರಂ ಚ ತನ್ಮಂತ್ರಮಂಗಮಂತ್ರಂ ಪುರೋದಿತಂ ॥ ೨ ॥

ತಾಭ್ಯಾಮೇವ ತು ಮಂತ್ರಾಭ್ಯಾಂ ಪೂಜಯೇತ್ತಾಂ ಜಗನ್ಮಯೀಂ ।
ತೃತೀಯಂ ಪೀಠಮಂತ್ರಂ ತು ಶಾರದಾಯಾ ಅನುತ್ತಮಂ ॥ ೩ ॥

ಅರವತ್ತೊಂಭತ್ತನೆಯ ಅಧ್ಯಾಯವು.

೧. ಭಗವಾನ್ ಶಂಕರನು ಹೇಳಿದನು:— ಎಲೈ ವೇತಾಲ ಭೈರವನೇ, ಕೇಳು, ಹಿಂದೆ ಶರದೃತುವಿನ ಶುಕ್ಲನವಮಿಯಲ್ಲಿ ದೇವತೆಗಳು ಈ ದೇವಿಯನ್ನು ಆವಾಹನೆ ಮಾಡಿ ಪೂಜೆಮಾಡಿದ್ದರಿಂದ ಈ ದೇವಿಗೆ ಶಾರದಾ ಎಂದು ಹೆಸರಾಯಿತು. ಈ ದೇವಿಯ ಪೀಠವು ಶಾರದಾ ಪೀಠವೆಂದೂ, ದೇವಿಯ ಹೆಸರು ಶಾರದಾ ದೇವಿಯೆಂದೂ ಲೋಕದಲ್ಲಿ ಪ್ರಸಿದ್ಧವಾಯಿತು.

೨. ಈ ಶಾರದಾದೇವಿಯ ನೇತ್ರಬೀಜಮಂತ್ರ, ಅಂಗಮಂತ್ರ, ದುರ್ಗಾತಂತ್ರ ವಿಧಾನ, ಅವುಗಳ ಮಂತ್ರ, ಇವೆಲ್ಲವನ್ನೂ ಹಿಂದೆಯೇ ವಿವರಿಸಿರುವುದು.

೩. ಆ ಎರಡು ಮಂತ್ರಗಳಿಂದ ಎಂದರೆ ನೇತ್ರಬೀಜ ಮತ್ತು ಅಂಗಮಂತ್ರ ಇವುಗಳಿಂದ ಜಗದ್ರೂಪಿಣಿಯಾದ ಶಾರದಾದೇವಿಯನ್ನು ಪೂಜಿಸಬೇಕು. ಮೂರನೆಯದಾದ ಶಾರದಾಪೀಠಮಂತ್ರವನ್ನು ಹೇಳುವೆನು. ಎಲೈ ವತ್ಸರೇ! ಅತ್ಯುತ್ತಮವೂ, ಚತುರ್ವಿಧಪುರುಷಾರ್ಥಗಳನ್ನು ಕೊಡುವುದೂ ಆದ ಆ ಮಂತ್ರವನ್ನು ಸಾವಧಾನವಾಗಿ ಕೇಳಿರಿ.

ಶೃಣುತಂ ಚೈಕಮನಸಾ ಚತುರ್ವರ್ಗಪ್ರದಾಯಕಂ ।
ಚತುರ್ಥಸ್ವರಸಂಯುಕ್ತಮುಪಾಂತೋ ವಹ್ನಿನಾ ಯುತಃ ॥ ೪ ॥

ಕಾಮರಾಜಂ ತಥಾ ನಾಂತಮುಪಾಂತಸ್ವರಸಂಯುತಂ ।
ವಹ್ನಿನಾ ಚಾಪಿ ಸಂದೀಪ್ತಃ ಸರ್ವಬಿಂದ್ವಿಂದುಸಂಯುತಃ ॥ ೫ ॥

ಹಾದಿಃ ಸಮಾಪ್ತಿಸಹಿತ ಏತದ್ಬೀಜಂ ಚತುರ್ಥಕಂ ।
ಚತುರ್ಭಿರೇಭಿಃ ಕಥಿತೋ ಮಂತ್ರೋಕ್ತೈಶ್ಚ ಷಡಕ್ಷರೈಃ ॥ ೬ ॥

ಅಯಂ ತೃತೀಯೋ ಮಂತ್ರಸ್ತು ಶಾರದಾಯಾಃ ಪ್ರಕೀರ್ತಿತಃ ।
ಅನೇನ ಪೂಜಯೇತ್ಪೀಠೇ ಸರ್ವಸಿದ್ಧಿಮವಾಪ್ನುಯಾತ್ ॥ ೭ ॥

ರೂಪಮಸ್ಯಾಃ ಪುರಾ ಪ್ರೋಕ್ತಂ ಸಿಂಹಸ್ಥಂ ದಶಭಾಹುಭಿಃ ।
ತತ್ರ ಪೂಜಾಕ್ರಮಂ ಸಮ್ಯಕ್ ಶೃಣು ವೇತಾಲ ಭೈರವ ॥ ೮ ॥

೪-೬. ಕಡೆಯ ಹಿಂದಿನವರ್ಣವಾದ ಹಕಾರ, ವಹ್ನಿಬೀಜಾಕ್ಷರವಾದ ರಕಾರ ಇವುಗಳಿಗೆ ನಾಲ್ಕನೇ ಸ್ವರವಾದ ಈಕಾರವನ್ನೂ, ಬಿಂದುವನ್ನೂ, ಸೇರಿಸಿದರೆ ಹ್ರೀಂ ಎಂದಾಗುವುದು ಇದು ಒಂದನೆಯ ಬೀಜಾಕ್ಷರವು, ಕಾಮರಾಜ ಮಂತ್ರವಾದ ಕ್ಲೀಂ ಎಂಬುವ ಎರಡನೆಯ ಬೀಜಾಕ್ಷರವು, ನಕಾರ ರಕಾರಗಳಿಗೆ ಅಂ ಸೇರಿಸಿದರೆ ಮೂರನೆಯ ಬೀಜಾಕ್ಷರವಾಗುವುದು. ಹಕಾರಕ್ಕೆ ಕಡೆಯ ಸ್ವರವನ್ನು ಸೇರಿಸಿದರೆ ನಾಲ್ಕನೆಯ ಬೀಜಾಕ್ಷರವಾಗುವುದು, ಈ ನಾಲ್ಕು ಬೀಜಾಕ್ಷರಗಳಿಂದ ಕೂಡಿರುವ ಆರು ಅಕ್ಷರದ ಈ ಮಂತ್ರಕ್ಕೆ ಶಾರದಾ ಮಂತ್ರವೆಂದು ಹೆಸರು.

೭. ಈ ಮಂತ್ರದಿಂದ ಪೀಠದಲ್ಲಿ ದೇವಿಯನ್ನು ಪೂಜಿಸಿದರೆ ಸಕಲ ಇಷ್ಟ ಸಿದ್ಧಿಯೂ ಆಗುವುದು. ಈ ದೇವಿಯ ರೂಪವು ಹಿಂದೆ ಹೇಳಿದಂತೆ ಹತ್ತು ಬಾಹುಗಳಿಂದಲೂ, ಸಿಂಹವಾಹನದಿಂದಲೂ ಶೋಭಿಸುತ್ತಿರುವುದು.

೮. ಎಲೈವೇತಾಲ ಭೈರವರೇ! ಆ ಶಾರದಾದೇವಿಯ ಪೂಜಾಕ್ರಮವನ್ನು ಹೇಳುವೆನು, ಕೇಳಿರಿ. ಮೊದಲು ನಾಲ್ಕು ದ್ವಾರಗಳುಳ್ಳ ಮಂಡಲವನ್ನು ರಚಿಸಬೇಕು. ಈ ಮಂಡಲವು ಐಶ್ವರ್ಯವನ್ನು ಕೊಡುವುದು.

ಚತುರ್ದ್ವಾರಂ ಮಂಡಲಂ ತು ಕುರ್ಯಾತ್ತತ್ರ ವಿಭೂತಯೇ ।
ಮಹಾಮಾಯಾ ಮಂಡಲಂ ತು ಶಾರದಾಯಾಶ್ಚ ಮಂಡಲಂ ॥ ೯ ॥

ವೈಷ್ಣವೀತಂತ್ರಕಲ್ಪೋಕ್ತೈಃ ಮಂತ್ರಸ್ಥಾನಾದಿಮಾರ್ಜನಂ ।
ಕೃತ್ವಾ ತು ನೇತ್ರಬೀಜೇನ ಮಂಡಲಂ ಪ್ರಸ್ತರೇ ಲಿಖೇತ್ ॥ ೧೦ ॥

ಯೋನಾವಷ್ಟದಲಂ ಕೃತ್ವಾ ತ್ರಿಕೋಣಂ ಮಧ್ಯತೋ ನ್ಯಸೇತ್ ।
ಅಯಂ ವಿಶೇಷಃ ಕಥಿತೋ ವೈಷ್ಣವೀಮಂಡಲಾತ್ಪುನಃ ॥ ೧೧ ॥

ಮಂಡಲೋಲ್ಲೇಖನಂ ಚೈವ ತಥಾ ಭೂತಾಪಸಾರಣಂ ।
ಪಾತ್ರಸ್ಯ ಪ್ರತಿಪತ್ತಿಸ್ತು ಅಮೃತೀಕರಣಂ ತಥಾ ॥ ೧೨ ॥

ಗಂಧಪುಷ್ಪಾಂಭಸಾಂ ಕ್ಷೇಪ ಆತ್ಮಾಸನಪ್ರಪೂಜನಂ ।
ಪ್ರಾಣಾಯಾಮಶ್ಚ ತ್ರಿವಿಧೋ ಭೂತಶುದ್ಧಿಃ ಪ್ರವೇಶನಂ ॥ ೧೩ ॥

ದಹನಪ್ಲವನೇ ಚೈವ ಪಾಣೇಶ್ಚಪಿಕಾ ತಥಾ ।
ಯೋಗಪೀಠಸ್ಯ ಚ ಧ್ಯಾನಂ ವೈಷ್ಣವೀತಂತ್ರಭಾಷಿತಂ ॥ ೧೪ ॥

೯-೧೦. ಮಹಾಮಾಯಾದೇವಿಯ ಮಂಡಲವೇ ಶಾರದಾದೇವಿಯ ಮಂಡಲವು. ವೈಷ್ಣವೀತಂತ್ರದ ಕಲ್ಪದಲ್ಲಿ ಹೇಳಿರುವಂತೆ ಮಂತ್ರ, ಸ್ಥಾನ, ಮಾರ್ಜನೆ ಮುಂತಾದುವುಗಳನ್ನು ಮಾಡಿನೇತ್ರ ಬೀಜದಿಂದ ಯೋನಿಶಿಲೆಯಲ್ಲಿ ಮಂಡಲವನ್ನು ಬರೆಯಬೇಕು.

೧೧. ಆ ಮಂಡಲದ ಸುತ್ತಲೂ ಎಂಟು ದಳಗಳನ್ನು ರಚಿಸಿ, ಮಧ್ಯದಲ್ಲಿ ತ್ರಿಕೋಣವನ್ನು ರಚಿಸಬೇಕು. ವೈಷ್ಣವೀಮಂಡಲದಲ್ಲಿಲ್ಲದ ಈ ವಿಶೇಷಕ್ರಮವು ಶಾರದಾಮಂಡಲಕ್ಕೆ ಇರುವುದು.

೧೨-೧೪. ಮಂಡಲರಚನೆ, ಭೂತಾಪಸರಣ, ಪಾತ್ರಾಸಾದನ, ಅಮೃತೀಕರಣ, ಗಂಧ, ಪುಷ್ಪ, ಜಲ ಇವುಗಳ ಸಮರ್ಪಣೆ, ಆಸನ, ಪೂಜೆ, ರೇಚಕ ಪೂರಕಕುಂಭಗಳೆಂಬ ಮೂರುವಿಧವಾದ ಪ್ರಾಣಾಯಾಮವಿಧಾನ, ಭೂತಶುದ್ಧಿ, ಮಂದಿರಪ್ರವೇಶ, ದಹನ ಪ್ಲವನ ಮೊದಲಾದ ಭೂತಶುದ್ಧಿ, ಕೂರ್ಮಮುದ್ರಾ ಪ್ರದರ್ಶನ, ಯೋಗಪೀಠದ ಧ್ಯಾನ, ಇವುಗಳೆಲ್ಲವನ್ನೂ ವೈಷ್ಣವೀತಂತ್ರದಲ್ಲಿ ಹೇಳಿರುವಂತೆ ಮಾಡಬೇಕು.

ತಥೈವೋತ್ತರತಂತ್ರೋಕ್ತಂ ಕುರ್ಯಾದ್ದೇವ್ಯಾಃ ಪ್ರಪೂಜನೇ ।
ಅಮೃತೀಕರಣಂ ಕುರ್ಯಾತ್ಸಲಿಲೇ ಧೇನುಮುದ್ರಯಾ ॥ ೧೫ ॥

ರೂಪಂ ತ್ವೇವಂ ದಶಭುಜಂ ಪೂರ್ವೋಕ್ತಂ ತು ವಿಚಿಂತಯೇತ್ ।
ಅಂಗನ್ಯಾಸಕರನ್ಯಾಸೌ ದುರ್ಗಾತಂತ್ರೇಣ ಭೈರವ ॥ ೧೬ ॥

ನವಾಕ್ಷರೇಣ ಮಂತ್ರೇಣ ಅಂಗುಷ್ಠಾದಿಕ್ರಮೇಣ ತು ।
ಹೃದಯಾದಿಕ್ರಮಾತ್ಪಶ್ಚಾದ್ವಕ್ತ್ರಾದಾವಪಿ ಪೂರ್ವವತ್ ॥ ೧೭ ॥

ಏತದೇವಾರ್ಘಪಾತ್ರೇ ಚಾಷ್ಟಧಾ ಮಂತ್ರಂ ಜಪೇತ್ಸುಧೀಃ ।
ತತ್ತೋಯೈಃ ಸೇಚಯೇಚ್ಛೀರ್ಷಂ ಪುಷ್ಪಗಂಧಾದಿಕಂ ತಥಾ ॥ ೧೮ ॥

ಏವಂ ಪೂಜಾಕ್ರಮಂ ತತ್ರ ಕುರ್ಯಾದ್ದೇವ್ಯಾಸ್ತು ಮಂಡಲೇ ।
ಆದಿತ್ಯಂ ಚಂಡಿಕಾರೂಪಂ ಧ್ಯಾತ್ವಾ ಪೂರ್ವಂ ಶಿಲಾತಲೇ ॥ ೧೯ ॥

---

೧೫. ಮತ್ತು ಉತ್ತರತಂತ್ರದಲ್ಲಿ ಹೇಳಿದ ಕ್ರಮದಂತೆ ದೇವಿಯನ್ನು ಪೂಜಿಸ ಬೇಕು. ಜಲದಲ್ಲಿ ಧೇನು ಮುದ್ರೆಯಿಂದ ಅಮೃತೀಕರಣವನ್ನು ಮಾಡಬೇಕು.

೧೬-೧೭. ಎಲೈ ಭೈರವನೇ, ಹಿಂದೆ ಹೇಳಿದಂತೆ ಹತ್ತು ಭುಜಗಳುಳ್ಳ ದೇವಿ ಯ ಸ್ವರೂಪವನ್ನು ಚಿಂತಿಸಬೇಕು. ದುರ್ಗಾತಂತ್ರದಲ್ಲಿ ಹೇಳಿದಂತೆ ನವಾಕ್ಷರ ಮಂತ್ರಗಳಿಂದ ಅಂಗನ್ಯಾಸ ಮತ್ತು ಕರನ್ಯಾಸಗಳನ್ನು ಅಂಗುಷ್ಠವೇಮೊದಲಾಕ್ರಮ ದಿಂದ ಮಾಡಬೇಕು. ಅನಂತರ ಹೃದಯಾದಿನ್ಯಾಸವನ್ನೂ, ಮುಖಾದಿನ್ಯಾಸ ವನ್ನೂ ಮೊದಲಿನಂತೆ ಮಾಡಬೇಕು.

೧೮. ಅದೇ ನವಾಕ್ಷರ ಮಂತ್ರದಿಂದ ಅರ್ಘ್ಯಪಾತ್ರೆಯಲ್ಲಿರುವ ನೀರನ್ನು ಸ್ಪರ್ಶಿ ಸಿ ಎಂಟುಬಾರಿ ಜಪವನ್ನು ಮಾಡಬೇಕು. ಆಜಲದಿಂದ ತನ್ನ ಶಿರಸ್ಸನ್ನೂ, ಗಂಧ, ಪುಷ್ಪ, ಮೊದಲಾದುವುಗಳನ್ನು ಪ್ರೋಕ್ಷಿಸಬೇಕು. ಈ ರೀತಿಯಾಗಿ ಮಂಡಲದಲ್ಲಿ ದೇವಿಯನ್ನು ಪೂಜಿಸಬೇಕು.

೧೯. ಮೊದಲು ಸೂರ್ಯನನ್ನು ಚಂಡಿಕಾ ಸ್ವರೂಪವಾಗಿರುವಂತೆ ಶಿಲಾತಲ ದಲ್ಲಿ ಧ್ಯಾನಿಸಿ, ಅವನಿಗೆ ಅಕ್ಷತೆ, ಪುಷ್ಪ ಜಲ ಮೊದಲಾದವುಗಳಿಂದ ಅರ್ಘ್ಯವನ್ನು ಕೊಡಬೇಕು.

ತಸ್ಮೈ ನಿವೇದಯೇದರ್ಘ್ಯಂ ಸಿದ್ಧಾರ್ಥಾಕ್ಷತಪುಷ್ಪಕೈಃ ।
ಆಧಾರಶಕ್ತಿಪ್ರಭೃತೀನ್ ಹ್ರೀಮಂತ್ರೇಣ ಚ ಸಾಧಕಃ ॥ ೨೦ ॥

ಪೂಜಯೇತ್ಪ್ರಥಮಂ ಮಧ್ಯೇ ಧರ್ಮಾದೀನಪಿ ಪೂಜಯೇತ್ ।
ಸತ್ತ್ವಾದೀನ್ ಗುರುಪಾದಾಂತಾನ್ ಪೂರ್ವತಂತ್ರೋದಿತಾನ್ ಬುಧಃ ॥ ೨೧ ॥

ಪೂಜಯೇನ್ಮಧ್ಯಪದ್ಮೇ ತು ಸುಮೇರುಮಪಿ ಮಧ್ಯತಃ ।
ಪೂರ್ವಭಾಗೇ ಮಂಡಲಸ್ಯ ದೇವ್ಯಾಃ ಶಕ್ತೀಃ ಪ್ರಪೂಜಯೇತ್ ॥ ೨೨ ॥

ನಾಥಕಾಮೇಶ್ವರಾದೀಂಸ್ತು ಲೌಹಿತ್ಯಾಂತಾನ್ ವಿಶೇಷತಃ ।
ಸರ್ವಾನ್ವೈ ಪೀಠದೇವಾಂಸ್ತು ಮಂಡಲಸ್ಯೋತ್ತರೇ ಯಜೇತ್ ॥ ೨೩ ॥

ಮಣಿಕೂರ್ಚಂ ಚಿತ್ರರಥಂ ಭಸ್ಮಕೂಟಂ ತಥೈವ ಚ ।
ಶ್ವೇತಂ ನೀಲಂ ಚ ಚಿತ್ರಂ ಚ ವಾರಾಹಂ ಗಂಧಮಾದನಂ ॥ ೨೪ ॥

ಮಣಿಕೂರ್ಚಂ ನಂದನಂ ಚ ಪಶ್ಚಿಮೇ ಪೂಜಯೇ ದಿಮಾನ್ ।
ಜಲ್ಪೀಶಮಥಕೇದಾರಂ ದೇವೀಂ ದಿಕ್ಕರವಾಸಿನೀಂ ॥ ೨೫ ॥

ಧಾತ್ರೀಂ ಸ್ವಧಾಂ ತಥಾ ಸ್ವಾಹಾಂ ಮಾನಸೋತ್ಕಾಪರಾಜಿತೇ ।
ದಕ್ಷಿಣೇ ಪೂಜಯೇದೇತಾಃ ಚತುಷ್ಷಷ್ಟಿಂ ಚ ಯೋಗಿನೀಃ ॥ ೨೬ ॥

---

೨೦. ಆಧಾರಶಕ್ತಿ ಮೊದಲಾದ ಪೀಠದೇವತೆಗಳನ್ನೂ, ಧರ್ಮಾದಿದೇವತೆಗಳನ್ನೂ ಮೊದಲಿನಂತಯೇ ಹ್ರೀಂ ಎಂಬ ಮಂತ್ರದಿಂದ ಪೂಜಿಸಬೇಕು.

೨೧-೨೨. ಸತ್ತ್ವಾದಿದೇವತೆಗಳನ್ನು ಗುರುಪಾದುಕಾಂ ಪೂಜಯಾಮಿ ತರ್ಪಯಾಮಿನಮಃ ಎಂದು ಉಚ್ಚರಿಸುತ್ತಾ ಹಿಂದಿನ ತಂತ್ರದಲ್ಲಿ ಹೇಳಿರುವ ಕ್ರಮದಂತೆ ಪೂಜೆಮಾಡಬೇಕು. ಪದ್ಮಮಧ್ಯದಲ್ಲಿ ಮೇರುಪರ್ವತವನ್ನೂ, ಮಂಡಲದ ಪೂರ್ವ ಭಾಗದಲ್ಲಿ ದೇವಿಯ ಶಕ್ತಿದೇವತೆಯರನ್ನೂ ಪೂಜಿಸಬೇಕು.

೨೩. ನಾಥಕಾಮೇಶ್ವರ ಮೊದಲುಗೊಂಡು ಲೌಹಿತ್ಯನವರೆಗೆ ಇರುವ ಎಲ್ಲಾ ಪೀಠದೇವತೆಗಳನ್ನು ಮಂಡಲದ ಉತ್ತರದಲ್ಲಿ ಪೂಜಿಸಬೇಕು.

೨೪. ಮಣಿಕೂರ್ಚ, ಚೈತ್ರರಥ, ಭಸ್ಮಕೂಟ, ಶ್ವೇತ, ನೀಲಶೈಲ, ಚಿತ್ರ ವಾರಾಹ ಗಂಧಮಾದನ, ನಂದನ ಈ ದೇವತೆಗಳನ್ನು ಪಶ್ಚಿಮದಿಕ್ಕಿನಲ್ಲಿ ಪೂಜಿಸಬೇಕು.

೨೫-೨೬. ಜಲ್ಪೀಶ, ಕೇದಾರ, ದಿಕ್ಕರವಾಸಿನೀದೇವಿ, ಧಾತ್ರೀ, ಸ್ವಾಹಾ ಸ್ವಧಾ, ಮಾನಸೋಕ್ತಾ, ಅಪರಾಜಿತಾ, ಈ ದೇವತೆಗಳನ್ನೂ ಅರವತ್ತುನಾಲ್ಕು (೬೪) ಯೋಗಿನಿಯರನ್ನೂ ಮಂಡಲದ ದಕ್ಷಿಣಭಾಗದಲ್ಲಿ ಪೂಜಿಸಬೇಕು.

ಗ್ರಹಾಂಶ್ಚ ದಶದಿಕ್ಪಾಲಾ ಪೂರ್ವಾದ್ಯುಕ್ತಕ್ರಮೇಣ ತು ।
ಪೂರ್ವವತ್ಪೂಜಯೇದ್ಧೀಮಾ ಭೈರವಂ ಭೈರವೀಮಪಿ ॥ ೨೭ ॥

ತತಃ ಕಚ್ಛಪಿಕಾಂ ಬಧ್ವಾ ಪುನರೇವ ತು ಪೂಜಕಃ ।
ಧ್ಯಾಯೇಚ್ಚ ಪೂರ್ವವದ್ದೇವೀಂ ಹೃದಿಸ್ಥಾಂ ಮನಸಾಪಿ ಚ ॥ ೨೮ ॥

ಮಾನಸೈಃ ಗಂಧಪುಷ್ಪಾದ್ಯೈಃ ಪೂಜಯಿತ್ವಾ ಹೃದಿ ಸ್ಥಿತಾಂ ।
ನಾಸಾಪುಟೇನ ನಿಸ್ಸಾರ್ಯ ದಕ್ಷಿಣೇನಾಥ ಮಂಡಲೇ ॥ ೨೯ ॥

ಪುಷ್ಪಮಾರೋಪ್ಯ ಕಾಮಾಖ್ಯಾಂ ಶಾರದಾಮಾಹ್ವಯೇನ್ಮುಹುಃ ।
ಏಹ್ಯೇಹಿ ಪರಮೇಶಾನಿ ಸಾನ್ನಿಧ್ಯಮಿಹ ಕಲ್ಪಯ ॥ ೩೦ ॥

ಪೂಜಾಭಾಗಂ ಗೃಹಾಣೇಮಂ ಮಮಿಂ ರಕ್ಷ ನನೋಽಸ್ತು ತೇ ।
ದುರ್ಗೇ ದುರ್ಗೇ ಇಹಾಗಚ್ಛ ಸರ್ವೈಃ ಪರಿಕರೈಃ ಸಹ ॥ ೩೧ ॥

---

೨೭. ನವಗ್ರಹ ದೇವತೆಗಳನ್ನೂ, ದಶದಿಕ್ಪಾಲಕರನ್ನೂ, ಸಹ ಹಿಂದೆ ಹೇಳಿದ ಕ್ರಮದಂತೆ ಪೂರ್ವಾದಿ ದಿಕ್ಕುಗಳಲ್ಲಿ ಪೂಜಿಸಬೇಕು. ಮತ್ತು ಭೈರವ, ಭೈರವಿ ಇವರನ್ನು ಮೊದಲಿನಂತೆ ಪೂಜಿಸಬೇಕು.

೨೮. ಬಳಿಕ ಸಾಧಕನು ಹಿಂದೆ ಮಾಡಿದಂತೆಯೇ ಕೂರ್ಮಮುದ್ರೆಯನ್ನು ಮಾಡಿ, ದೇವಿಯನ್ನು ತನ್ನ ಹೃದಯದಲ್ಲಿರುವಂತೆ ಮನಸ್ಸಿನಿಂದ ಧ್ಯಾನಮಾಡಬೇಕು. ಧ್ಯಾನಮಾಡಿದಮೇಲೆ ಹೃದಯದಲ್ಲಿರುವ ಆ ಶಾರದಾದೇವಿಯನ್ನು ಮನಃಪೂಜೆಯಿಂದ ಅರ್ಚಿಸಬೆಬೇಕು. ಗಂಧ ಪುಷ್ಪ ಮೊದಲಾದ ಪೂಜಾಸಾಮಗ್ರಿಗಳನ್ನು ಮನಸ್ಸಿನಲ್ಲಿಯೇ ಕಲ್ಪಿಸಿ ದೇವಿಗೆ ಅರ್ಪಿಸಬೇಕು.

೨೯. ದಕ್ಷಿಣನಾಸಾಪುಟದಿಂದ ವಾಯುವನ್ನು ನಿಸ್ಸಾರಮಾಡಿ ಕೈಯಲ್ಲಿ ಪುಷ್ಪವನ್ನು ತೆಗೆದುಕೊಂಡು ಹೃದಯದಿಂದ ದೇವಿಯು ಹೊರಹೊರಟು ಮಂಡಲದಲ್ಲಿ ಬಂದು ನೆಲಸಿದಂತೆ ಭಾವಿಸಿ ಕಾಮಾಖ್ಯಾರೂಪಳಾದ ಶಾರದಾ ದೇವಿಯನ್ನು ಆವಾಹನೆ ಮಾಡಬೇಕು. ಕೈಲಿರುವ ಪುಷ್ಪವನ್ನು ಪೀಠದ ಮೇಲೆ ಇರಿಸಬೇಕು.

೩೦-೩೧. ಎಲೌ ಪರಮೇಶ್ವರಿಯೆ, ನಾನು ರಚಿಸಿರುವ ಈ ಮಂಡಲದಲ್ಲಿ ನಿನ್ನ ಸಾನ್ನಿಧ್ಯವನ್ನು ಕಲ್ಪಿಸಿ, ನಾನು ಮಾಡುವ ಈ ಪೂಜಾಭಾಗವನ್ನು ಸ್ವೀಕರಿಸುವವಳಾಗು. ಈ ಪೂಜೆಯು ನಿರ್ವಿಘ್ನವಾಗಿ ನೆರವೇರುವಂತೆ ಅನುಗ್ರಹಿಸು. ಓ ದೇವಿ

ಪೂಜಾಭಾಗಂ ಗೃಹಾಣೇಮಂ ಮಖಂ ರಕ್ಷ ನಮೋಽಸ್ತು ತೇ ।
ನಾರಾಯಣ್ಯೈ ವಿದ್ಮಹೇ ತ್ವಾಂ ಚಂಡಿಕಾಯೈ ತು ಧೀಮಹಿ ॥ ೩೨ ॥
ಶೇಷಭಾಗೇ ತು ಗಾಯತ್ರ್ಯಾಸ್ತನ್ನಶ್ಚಂಡೀ ಪ್ರಚೋದಯಾತ್ ।
ದತ್ತ್ವಾ ಸ್ನಾನಮನೇನೈವ ದತ್ತ್ವಾ ಮಂತ್ರೇಣ ವೈ ಪುನಃ ॥ ೩೩ ॥
ನೇತ್ರಬೀಜೇನ ಚ ತಥಾ ಪೀಠಮಂತ್ರೇಣ ಚಾಂತರಂ ।
ಚತುರಕ್ಷರೇಣ ಶೇಷೇಣ ತ್ರಿಭಿರ್ಮಂತ್ರೈಃ ಪ್ರಪೂಜಯೇತ್ ॥ ೩೪ ॥
ಚತುರಕ್ಷರಮಂತ್ರೇಣ ಪಾದ್ಯಾದೀನಥ ಷೋಡಶ ।
ವಿತರೇದುಪಚಾರಾಂಸ್ತು ಪೂರ್ವೋಕ್ತಾಂಸ್ತಾಂಸ್ತು ಭೈರವ ॥ ೩೫ ॥
ದುರ್ಗಾತಂತ್ರೇಣ ಮಂತ್ರೇಣ ದೇವ್ಯಾಂಗಾನಿ ಪ್ರಪೂಜಯೇತ್ ।
ದುರ್ಗೇತ್ಯನೇನ ಹೃದಯಂ ಪುನರ್ದುರ್ಗೇತ್ಯನೇನ ಕಂ ॥ ೩೬ ॥

ನಿನಗೆ ನಮಸ್ಕರಿಸುವೆನು, ಓ ದುರ್ಗಾದೇವಿಯೇ, ನನ್ನ ಈ ಪೂಜಾಮಂಟಪಕ್ಕೆ ದಯಮಾಡಿಸಿ ನಿನ್ನ ಸಕಲ ಪರಿವಾರದೇವತೆಗಳೊಂದಿಗೆ ನನ್ನ ಪೂಜಾಭಾಗವನ್ನು ಸ್ವೀಕರಿಸಿ, ನನ್ನ ಪೂಜೆಯನ್ನು ಪೂರ್ಣಗೊಳಿಸು, ನಿನ್ನನ್ನು ಪುನಃ ನಮಸ್ಕರಿಸುವೆನು ಎಂದು ಪ್ರಾರ್ಥಿಸಿ, ಮುಂದೆ ಹೇಳುವ ಶಾರದಾಗಾಯತ್ರೀಮಂತ್ರದಿಂದ ಅವಾಹನೆ ಮಾಡಬೇಕು.

೩೨. "ನಾರಾಯಣ್ಯೈ ವಿದ್ಮಹೇ ಚಂಡಿಯೈ ಚ ಧೀಮಹಿ ॥ ತನ್ನಶ್ಚಂಡೀ ಪ್ರಚೋದಯಾತ್" ॥ ಇದು ಶಾರದಾಗಾಯತ್ರೀ ಮಂತ್ರವು. ಇದರರ್ಥವನ್ನು ಕಾಮೇಶ್ವರೀ ತಂತ್ರದಲ್ಲಿಯೇ ಹೇಳಿರುತ್ತದೆ.

೩೩-೩೪. ಈ ಮಂತ್ರದಿಂದ ದೇವಿಗೆ ಸ್ನಾನಮಾಡಿಸಿ, ನೇತ್ರಬೀಜಮಂತ್ರ, ಪೀಠಮಂತ್ರ, ನಾಲ್ಕು ಬೀಜಾಕ್ಷರಗಳುಳ್ಳ ಮಂತ್ರ, ಈ ಮೂರು ಮಂತ್ರಗಳಿಂದಲೂ ದೇವಿಯನ್ನು ಪೂಜಿಸಬೇಕು.

೩೫. ಎಲೈ ಭೈರವನೇ, ನಾಲ್ಕುಅಕ್ಷರಗಳ ಮಂತ್ರದಿಂದ ಪಾದ್ಯವೇ ಮೊದಲಾದ ಹಿಂದೆಹೇಳಿದ ಹದಿನಾರು ಉಪಚಾರಗಳನ್ನು ದೇವಿಗೆ ಅರ್ಪಿಸಬೇಕು.

೩೬-೩೭. ದುರ್ಗಾತಂತ್ರದಲ್ಲಿ ಹೇಳಿದ ಮಂತ್ರದಿಂದಲೂ, ಕ್ರಮದಿಂದಲೂ, ದೇವಿಯ ಅಂಗ ಪೂಜೆಗಳನ್ನು ಮಾಡಬೇಕು. "ದುರ್ಗಾಯೈ ನಮಃ ಹೃದಯಂ ಪೂಜಯಾಮಿ" ಎಂದು ಹೃದಯವನ್ನು ಪೂಜಿಸಬೇಕು. ಹೀಗೆಯೇ ದುರ್ಗಾ

ಶಿಖಾಕವಚನೇತ್ರಾಣಿ ಪಾದಪಾದಾಂಶ್ಚ ಪಂಚಭಿಃ ।
ವಾದಿಪಂಚಾಕ್ಷರೈಃ ಶೇಷೈಃ ಪೂಜಯೇತ್ಕ್ರಮತಃ ಸುಧೀಃ ॥ ೩೭ ॥

ಪೂರ್ವಾದ್ಯಷ್ಟದಲೇಷ್ವೇತಾಃ ಪೂಜಯೇನ್ನಾಧಿಕಕ್ರಮಾತ್ ।
ಜಯಂತೀಂ ಪೂರ್ವಪತ್ರೇ ತು ಆಗ್ನೇಯ್ಯಾದೌ ತು ಮಂಗಲಾಂ ॥ ೩೮ ॥

ಕಾಲೀಂ ಚ ಭದ್ರಕಾಲೀಂ ಚ ತಥಾ ಚೈವ ಕಪಾಲಿನೀಂ ।
ದುರ್ಗಾಂ ಶಿವಾಂ ಕ್ಷಮಾಂ ಚೈವ ಕ್ರಮಾದೇವ ತು ನಾಮತಃ ॥ ೩೯ ॥

ಕೇಸರಸ್ಯ ತು ಮಧ್ಯೇ ತು ಅಷ್ಟಾವೇತಾಸ್ತು ನಾಯಿಕಾಃ ।
ನೇತ್ರಬಿಜಸ್ಯ ಮಂತ್ರೇಣ ಬೀಜೇನ ಷಟ್ಸು ನಾಯಿಕಾಃ ॥ ೪೦ ॥

ಅಮಿಷಾಂ ಚ ತಥೈವಾಸೌ ಷಡ್ಭಿರೇತಾಂತರಾಹಿತೈಃ ।
ಹ್ರಾಂ ಹ್ರೀಂ ಶ್ರೀಮಿತ್ಯುಪಾಂತಾಂ ತು ಸ್ಯಾಂತಾಮಾದ್ಯಸ್ವರೇಣ ವೈ ॥ ೪೧ ॥

ಉಗ್ರಚಂಡಾಂ ಪ್ರಚಂಡಾಂ ಚ ಚಂಡೋಗ್ರಾಂ ಚಂಡನಾಯಿಕಾಂ ।
ಚಂಡಾಂ ಚಂಡವತೀಂ ಚೈವ ಚಂಡರೂಪಾಂ ಚ ಚಂಡಿಕಾಂ ॥ ೪೨ ॥

ನಾಮದಿಂದ ಶಿರಸ್ಸನ್ನೂ, ಶಿಖಾ, ಕವಚ, ನೇತ್ರ, ಪಾದ, ಇವುಗಳನ್ನು ವಕಾರವೇ ಮೊದಲಾದ ಐದು ಅಕ್ಷರ(ವ. ಶ. ಷ. ಸ. ಹ.)ಗಳಿಂದ ಕ್ರಮವಾಗಿ ಪೂಜಿಸಬೇಕು.

೩೮-೩೯. ಪೂರ್ವವೇ ಮೊದಲುಗೊಂಡು ಎಂಟು ದಲಗಳಲ್ಲಿ ಈ ದೇವತೆಯರನ್ನು ಕ್ರಮವಾಗಿ ಪೂಜಿಸಬೇಕು. ಪೂರ್ವದಲ್ಲಿ ಜಯಂತೀದೇವಿಯನ್ನೂ, ಆಗ್ನೇಯದಲ್ಲಿ ಮಂಗಲಾದೇವಿಯನ್ನೂ ಪೂಜಿಸಬೇಕು. ಅದರಂತೆಯೇ ದಕ್ಷಿಣದಲ್ಲಿ ಕಾಲಿ, ನೈರುತ್ಯದಲ್ಲಿ ಭದ್ರಕಾಳಿ, ಪಶ್ಚಿಮದಲ್ಲಿ ಕಪಾಲಿನಿ, ವಾಯವ್ಯದಲ್ಲಿ ದುರ್ಗೆ, ಉತ್ತರದಲ್ಲಿ ಶಿವಾ, ಈಶಾನ್ಯದಲ್ಲಿ ಕ್ಷಮಾದೇವಿ ಇವರನ್ನು ಅವರವರ ಹೆಸರುಗಳಿಂದ ಕ್ರಮವಾಗಿ ಪೂಜಿಸಬೇಕು.

೪೦-೪೨. ಪದ್ಮದಳಗಳ ಮಧ್ಯದಲ್ಲಿ, ಉಗ್ರಚಂಡಾ, ಪ್ರಚಂಡಾ, ಚಂಡೋಗ್ರಾ ಚಂಡನಾಯಿಕಾ, ಚಂಡಾ, ಚಂಡವತೀ, ಚಂಡರೂಪಾ, ಚಂಡಿಕಾ, ಎಂಬ ಎಂಟು ಮಂದಿ ನಾಯಿಕೆಯರನ್ನು ನೇತ್ರಬೀಜಾಕ್ಷರಗಳಿಂದಲೂ, ಹ್ರಾಂ ಹ್ರೀಂ ಶ್ರೀಂ ಈ ಅಕ್ಷರಗಳೊಡನೆ ಆರಾಧಿಸಿ ಮೊದಲು ಮತ್ತು ಕಡೆಯ ಸ್ವರಗಳನ್ನು ಸೇರಿಸಿ ಆ ಮಂತ್ರ

ತ್ರಿಕೋಣೇ ಕೇಸರಾಂತಂ ತು ಕಾಮಂ ಪ್ರೀತಿಂ ರತಿಂ ತಥಾ ।
ಪಂಚಬಾಣಾ ಪುಷ್ಪಧನುಃ ಪೂಜಯೇತ್ಕಾಮಮಂತ್ರಕೈಃ ॥ ೪೩ ॥

ಅಷ್ಟಪುಷ್ಪಿಕಯಾ ಪಶ್ಚಾ ತ್ಸಂಪೂಜ್ಯ ಪರಮೇಶ್ವರೀಂ ।
ದೇವ್ಯಾಸ್ತು ಕರಗೃಹ್ಯಾಣಿ ಶಸ್ತ್ರಾಣ್ಯಂಗಾನಿ ವಾಹನಂ ॥ ೪೪ ॥

ಪಂಚಾನನಂ ಕೇಸರಂ ಚ ದೇವ್ಯಗ್ರೇ ತು ಪ್ರಪೂಜಯೇತ್ ।
ಪೀಠದೇವೀಂ ಶಾರದಾಂ ತು ಕಾಮಾಖ್ಯಾಮಧಿದೇವತಾಂ ॥ ೪೫ ॥

ತ್ರಿಪುರಾಖ್ಯಾಂ ಮಹಾದೇವೀಂ ಪೀಠಪ್ರತ್ಯಧಿದೇವತಾಂ ।
ಕಾಮೇಶ್ವರೀಂ ಮಹೋತ್ಸಾಹಾಂ ಮಧ್ಯ ಏವ ಪ್ರಪೂಜಯೇತ್ ॥ ೪೬ ॥

ಗಳಿಂದಲೂ ಪೂಜೆಮಾಡಬೇಕು. ಹೇಗೆಂದರೆ ಹ್ರಾಂ ಹ್ರೀಂ ಶ್ರೀಂ ಅಂ ಆಂ ಉಗ್ರಚಂಡಾಯೈನಮಃ ॥ ಹ್ರಾಂ ಹ್ರೀಂ ಶ್ರೀಂ ಇಂ ಈಂ ಪ್ರಚಂಡಾಯೈನಮಃ ॥ ಹ್ರಾಂ ಹ್ರೀಂ ಶ್ರೀಂ ಉಂ ಊಂ ಚಂಡೋಗ್ರಾಯೈ ನಮಃ ॥ ಇತ್ಯಾದಿ.

೪೩. ತ್ರಿಕೋಣ ಮತ್ತು ಕೇಸರಗಳ ಕೊನೆಯಲ್ಲಿ ಮನ್ಮಥ, ಪ್ರೀತಿ, ರತಿ, ಐದುಪುಷ್ಪಬಾಣಗಳು, ಪುಷ್ಪಧನುಸ್ಸು ಇವುಗಳನ್ನು ಕಾಮಬೀಜಮಂತ್ರಗಳಿಂದ ಪೂಜಿಸಬೇಕು.

೪೪. ಎಂಟುಬಾರಿ ಮೂಲಮಂತ್ರವನ್ನುಚ್ಚರಿಸಿ ಪುಷ್ಪಗಳಿಂದ ಪರಮೇಶ್ವರಿಯಾದ ಶಾರದಾ ದೇವಿಯನ್ನು ಪೂಜಿಸಿ, ಆ ಬಳಿಕ ದೇವಿಯು ಕೈಯಲ್ಲಿ ಧರಿಸಿರುವ ಆಯುಧಗಳು, ದೇವಿಯ ಅಂಗಗಳು, ವಾಹನಗಳು ಇವುಗಳನ್ನು ಪೂಜಿಸಬೇಕು.

೪೫-೪೬. ದೇವಿಯ ವಾಹನವಾವ ಸಿಂಹವನ್ನು ದೇವಿಯ ಎದುರಿನಲ್ಲಿ ಪೂಜಿಸಬೇಕು, ಬಳಿಕ ಪೀಠದೇವತೆಯಾದ ಶಾರದೆಯನ್ನೂ, ಅಧಿದೇವತೆಯಾದ ಕಾಮಾಖ್ಯಾದೇವಿಯನ್ನೂ, ಪೀಠದ ಪ್ರತ್ಯಧಿದೇವತೆಯಾವ ತ್ರಿಪುರಾಮಹಾದೇವಿಯನ್ನೂ ಕಾಮೇಶ್ವರೀ, ಮಹೋತ್ಸಾಹಾದೇವೀ, ಇವರನ್ನೂ ಪೀಠದ ಮಧ್ಯದಲ್ಲಿಯೇ ಪೂಜಿಸಬೇಕು. ನಾಲ್ಕು ಅಕ್ಷರದ ಬೀಜಾಕ್ಷರಮಂತ್ರದಿಂದ ದೇವಿಗೆ ಮೂರು ಬಾರಿ ಪುಷ್ಪಾಂಜಲಿಗಳನ್ನು ಅರ್ಪಿಸಬೇಕು.

ಚತುರಕ್ಷರಮುಂಪ್ರೇಣ ದದ್ಯಾತ್ಪುಷ್ಪಾಂಜಲಿತ್ರಯಂ ।
ಜಪ್ತ್ವಾ ಸ್ತುತ್ವಾ ಬಲಿಂ ದತ್ತ್ವಾ ನಮುಸ್ಕೃತ್ಯಾsವಗುಣ್ಯ ಚ ॥ ೪೭ ॥

ಯೋನಿಮುದ್ರಾಂ ಪ್ರದರ್ಶ್ಯಾಥ ನಿರ್ಮಾಲ್ಯಂ ದಿಶಿ ಶೂಲಿನಃ ।
ಚಂಡೀಶ್ವರ್ಯೈ ನಮ ಇತಿ ನಿಕ್ಷಿಪ್ಯ ಚ ವಿಸರ್ಜಯೇತ್ ॥ ೪೮ ॥

ತತಸ್ತು ಭಾಸ್ಕರಾಯಾರ್ಘ್ಯಂ ದದ್ಯಾದಚ್ಛಿದ್ರಧಾರಣಾಂ ।
ದೇವೀಂ ಚ ಹೃದಯೇ ಸ್ಮಾಪ್ಯ ಸ್ಥಾಪಯೇದ್ಯೋನಿಮಂಡಲೇ ॥ ೪೯ ॥

ಏವಂ ದೇವೀಂ ತು ಕಾಮಾಖ್ಯಾಂ ಯೋನಿಮುದ್ರಾಂ ಜಗನ್ಮಯೀಂ ।
ಶಾರದಾಖ್ಯಾಂ ಮಹಾದೇವೀಂ ಯೋಗೇನ ವಿಧಿನಾ ಯಜೇತ್ ॥ ೫೦ ॥

ಸರ್ವಕಾಮಾ ಸುಸಂಪ್ರಾಪ್ಯ ಶಿವಲೋಕಮವಾಪ್ನುಯಾತ್ ।
ಯದಿ ಪೀಠಂ ವಿನಾನ್ಯತ್ರ ಪೂಜಯೇತ್ಕಾಮರೂಪಿಣೀಂ ॥ ೫೧ ॥

೪೭-೪೮. ಬಳಿಕ ಮೂಲಮಂತ್ರದಿಂದ ಜಪಮಾಡಬೇಕು. ಆಮೇಲೆ ಬಲಿ ಪ್ರದಾನ, ನಮಸ್ಕಾರ, ಇವುಗಳನ್ನು ಮಾಡಬೇಕು. ಇವೆಲ್ಲವೂ ಮುಗಿದಮೇಲೆ, ಚಂಡೀಶ್ವರ್ಯೈ ನಮಃ ಎಂದು ನಿರ್ಮಾಲ್ಯವನ್ನು ಈಶಾನ್ಯದಿಕ್ಕಿನಲ್ಲಿ ವಿಸರ್ಜಿಸಿ, ಯೋನಿಮುದ್ರೆಯಿಂದ ದೇವಿಯನ್ನು ವಿಸರ್ಜನೆಮಾಡಬೇಕು.

೪೯. ಭಾಸ್ಕರನಿಗೆ ಅರ್ಘ್ಯವನ್ನು ಕೊಡಬೇಕು. ಬಳಿಕ ನಿಶ್ಚಲ ಮನಸ್ಸಿನಿಂದ ದೇವಿಯನ್ನು ಹೃದಯದಲ್ಲಿ ಧ್ಯಾನಿಸುತ್ತಾ ಯೋನಿಮಂಡಲದಲ್ಲಿ ಸ್ಥಾಪಿಸಬೇಕು.

೫೦. ಈರೀತಿಯಾಗಿ ಕಾಮಾಖ್ಯಾಸ್ವರೂಪಳೂ, ಯೋನಿಮುದ್ರಾರೂಪಳೂ, ಜಗದ್ರೂಪಳೂ ಆದ ಶಾರದಾಮಹಾದೇವಿಯನ್ನು, ಯೋಗವಿಧಿಯಿಂದ ಪೂಜಿಸ ಬೇಕು.

೫೧. ಯಾವನು ಈ ರೀತಿಯಾಗಿ ದೇವಿಯನ್ನರ್ಚಿಸುವನೋ ಅವನು ಸಕಲ ಇಷ್ಟಾರ್ಥಗಳನ್ನೂ ಹೊಂದಿ, ಕೊನೆಗೆ ಶಿವಲೋಕವನ್ನು ಪಡೆಯುವನು. ನೀಲಕೂಟ ಪರ್ವತದಲ್ಲಿರುವ ಪೀಠದಲ್ಲಲ್ಲದೆ ಬೇರೆ ಸ್ಥಳಗಳಲ್ಲಿ ಕಾಮರೂಪಿಣಿಯಾದ ಈ ದೇವಿ ಯನ್ನು ಪೂಜಿಸಿದರೂ, ಆಗಲೂ ಈ ಎಲ್ಲ ಕ್ರಮಗಳನ್ನೂ ಆಚರಿಸಬೇಕು.

ನೀಲಕೋಟೇ ತದಾಪ್ಯೇತತ್ಸರ್ವಮೇವ ಸಮಾಚರೇತ್ ।
ಯದಾನ್ಯತ್ರ ಯಜೇದ್ದೇವೀಂ ಜಲೇ ವಾ ಸ್ಥಂಡಿಲೇಽಥವಾ ॥ ೫೨ ॥

ಶಿಲಾದಿಷು ಚ ವಹ್ನೌ ವಾ ದೇವಿಪೀಠೇ ಯಥೇಚ್ಛಯಾ ।
ಯಜೇದ್ವಾ ನ ಯಜೇದ್ವಾಪಿ ಪೀಠೇಽವಶ್ಯಂ ಪ್ರಪೂಜಯೇತ್ ॥ ೫೩ ॥

ಏವಂ ಯಃ ಪಂಚಭಿರ್ಮಂತ್ರೈಃ ಪಂಚಮೂರ್ತಿಧರಾಂ ಶಿವಾಂ ।
ಏಕೈಕೇನಾಥವಾ ತಸ್ಯ ಸ್ವಯಂ ಸ್ಯಾದ್ವರದಾಯಿಕಾ ॥ ೫೪ ॥

ವಿಘ್ನಾ ನ ತಸ್ಯ ಜಾಯಂತೇ ನಾಧಯೋ ವ್ಯಾಧಯಸ್ತಥಾ ।
ನ ತಸ್ಯ ಸದೃಶೋಽನ್ಯಃ ಸ್ಯಾದ್ಧನಧಾನ್ಯಸಮೃದ್ಧಿಭಿಃ ॥ ೫೫ ॥

ಗವಾಂ ಕೋಟಿಪ್ರದಾನಾತ್ತು ಯತ್ಫಲಂ ಜಾಯತೇ ನೃಣಾಂ ।
ತತ್ಫಲಂ ಸಮವಾಪ್ನೋತಿ ಕಾಮಾಖ್ಯಾಂ ಪೂಜಯನ್ನರಃ ॥ ೫೬ ॥

ದಶ ಪೂರ್ವಾ ದಶ ಪರಾ ವಂಶಾನುದ್ಧೃತ್ಯ ಪಾಪತಃ ।
ಸಕೃತ್ಸಂಪೂಜನೇನೈವ ಮಮ ಲೋಕಮವಾಪ್ನುಯಾತ್ ॥ ೫೭ ॥

೫೨-೫೩. ಪೀಠದಲ್ಲಲ್ಲದೆ, ನದೀತೀರ, ಮಂಡಲ, ಶಿಲಾದಿಗಳು, ಅಗ್ನಿ ಮೊದಲಾದ ಸ್ಥಳಗಳಲ್ಲಿಯೂ ದೇವಿಯನ್ನು ಕ್ರಮಗಳಿಂದ ಪೂಜಿಸಬಹುದು. ಸಾಧ್ಯವಲ್ಲದಿದ್ದರೆ ಬಿಡಬಹುದು, ಪೀಠದಲ್ಲಿ ಮಾತ್ರ ಅವಶ್ಯಕವಾಗಿ ಪೂಜಿಸಲೇಬೇಕು.

೫೪-೫೫. ಈ ರೀತಿಯಾಗಿ ಐದುಮೂರ್ತಿಗಳನ್ನು ಧರಿಸಿರುವ ದೇವಿಯನ್ನು ಯಾವನು ಪೂಜಿಸುವನೋ, ಅಥವಾ ಒಂದೊಂದೇ ಮಂತ್ರದಿಂದಲಾಗಲೀ ಪೂಜಿಸುವನೋ, ಅವನಿಗೆ ದೇವಿಯು ಸಾಕ್ಷಾತ್ತಾಗಿ ತಾನೇ ವರವನ್ನು ಅನುಗ್ರಹಿಸುವಳು. ಅವನಿಗೆ ವಿಘ್ನಗಳ ಭಯವೆಂಬುದೇ ಇಲ್ಲ. ಮನೋವ್ಯಥೆ, ರೋಗ ಇವುಗಳೂ ಉಂಟಾಗುವುದಿಲ್ಲ. ಧನ ಧಾನ್ಯ ಸಂಪತ್ತುಗಳಿಂದ ಎಲ್ಲರಿಗಿಂತಲೂ ಅತಿಶಯವಾಗಿ ಬಾಳುವನು.

೫೬-೫೭. ಕಾಮಾಖ್ಯಾದೇವಿಯನ್ನು ಪೂಜಿಸುವನೆ, ಕೋಟಿ ಪಸುಗಳನ್ನು ದಾನಮಾಡಿದ ಫಲವು ಬರುವುದು. ಕಾಮಾಖ್ಯಾದೇವಿಯನ್ನು ಒಮ್ಮಬಾರಿ ಪೂಜಿಸಿದವನು ತನ್ನ ವಂಶದ ಹಿಂದಿನ ಹತ್ತುಜನರನ್ನೂ, ಮುಂದಿನ ಹತ್ತುಜನರನ್ನೂ ಸಹ ಪಾಪದಿಂದ ಉದ್ಧರಿಸಿ, ಜನ್ಮಾಂತರದಲ್ಲಿ ನನ್ನ ಲೋಕವನ್ನು ಹೊಂದಿ ಸುಖದಿಂದ ಇರುವನು.

ದ್ವಿಃ ಸಂಪೂಜ್ಯ ಮಹಾದೇವೀಂ ಕಾಮಾಖ್ಯಾಂ ಯೋನಿಮಂಡಲೇ ।
ಶತಂ ವಂಶಾ ಸಮುದ್ಧೃತ್ಯ ದೇವೀಲೋಕಮವಾಪ್ನುಯಾತ್ ॥ ೫೮ ॥

ಯಸ್ತ್ರಿವಾರಾ ಪೂಜಯೇತ್ತು ವಿಧಿನಾನೇನ ಮಾನವಃ ।
ನೀಲಪರ್ವತಮಾರುಹ್ಯ ಕಾಮಾಖ್ಯಾಂ ಯೋನಿಮಂಡಲೇ ॥ ೫೯ ॥

ಸ ಸಹಸ್ರಂ ತು ವಂಶಾನಾಮುದ್ಧೃತ್ಯ ಪಾಪಕೂಪತಃ ।
ಇಹ ಲೋಕೇ ಸುಖೈಶ್ವರ್ಯಚಿರಾಯುಷ್ಯಮವಾಪ್ನುಯಾತ್ ॥ ೬೦ ॥

ದೇಹಾಂತೇ ಮದ್ಗೃಹಂ ಪ್ರಾಪ್ಯ ಗಣಾನಾಮಧಿಪೋ ಭವೇತ್ ।
ಯಸ್ಯಾಂ ಕಸ್ಯಾಮಥಾಷ್ಟಮ್ಯಾಂ ನವಮ್ಯಾಂ ವಾಪಿ ಸಾಧಕಃ ॥ ೬೧ ॥

ಪಂಚರೂಪಾಂ ತು ಕಾಮಾಖ್ಯಾಂ ಪಂಚಮಂತ್ರೈಃ ಸತಂತ್ರಕೈಃ ।
ಪೂಜಯೇದ್ವರದಾಂ ದೇವೀಂ ಮಂಡಲೈಶ್ಚ ಪೃಥಕ್ ಪೃಥಕ್ ॥ ೬೨ ॥

ಧ್ಯಾತ್ವಾ ತು ಪಂಚರೂಪಾಣಿ ಜಪ್ತ್ವಾ ಮಂತ್ರಾಂಸ್ತು ಪಂಚ ವೈ ।
ಸ ಕಲ್ಪಕೋಟಿಲಕ್ಷಾಣಿ ಮಮ ಲೋಕೇ ಚ ಮಾನವಃ ॥ ೬೩ ॥

---

೫೮. ಕಾಮಾಖ್ಯಾದೇವಿಯನ್ನು ಯೋನಿಮಂಡಲದಲ್ಲಿ ಎರಡುಬಾರಿ ಪೂಜಿಸಿದವನು, ತನ್ನ ವಂಶವ ನೂರು ಜನಗಳನ್ನು ಉದ್ಧರಿಸಿ, ಜನ್ಮಾಂತರದಲ್ಲಿ ದೇವಿಯ ಲೋಕವನ್ನು ಪಡೆಯುವನು.

೫೯-೬೦. ಮತ್ತು ಯಾವ ಮಾನವನು ನೀಲಶೈಲಕ್ಕೆ ಹೋಗಿ, ಅಲ್ಲಿ ಯೋನಿ ಶಿಲೆಯಲ್ಲಿ ಕಾಮಾಖ್ಯಾ ದೇವಿಯನ್ನು ಮೂರುಬಾರಿ ಪೂಜಿಸುವನೋ ಅವನು ತನ್ನ ವಂಶೀಯರಲ್ಲಿ ಸಾವಿರ ಜನರನ್ನು ಪಾಪದಿಂದ ಉದ್ಧರಿಸಿ, ಈ ಲೋಕದಲ್ಲಿ ಸುಖ, ಐಶ್ವರ್ಯ, ದೀರ್ಘಾಯುಸ್ಸುಗಳನ್ನು ಪಡೆಯುವನು. ದೇಹಾಂತ್ಯದಲ್ಲಿ ನನ್ನ ಲೋಕಕ್ಕೆ ಬಂದು ಗಣಗಳಿಗೆ ಅಧಿಪತಿಯಾಗುವನು.

೬೧-೬೨. ಯಾವುದಾದರೊಂದು ಅಷ್ಟಮಿಯಲ್ಲಾಗಲೀ ನವಮಿಯಲ್ಲಾಗಲಿ ಸಾಧಕನು ಐದುರೂಪಗಳುಳ್ಳವಳೂ ವರದಾಯಕಿಯೂ ಆದ ಕಾಮಾಖ್ಯಾ ದೇವಿಯನ್ನು ಹಿಂದೆ ಹೇಳಿದ ಐದು ಮಂತ್ರಗಳಿಂದ ತಂತ್ರ ಪೂರ್ವಕವಾಗಿ ಮಂಡಲಗಳಲ್ಲಿ ಬೇರೆ ಬೇರೆಯಾಗಿ ಅರ್ಚಿಸಬೇಕು.

೬೩. ದೇವಿಯು ಈ ಪಂಚರೂಪಗಳನ್ನೂ, ಐದು ಮಂತ್ರಗಳನ್ನೂ ಯಾವನು ಧ್ಯಾನಮಾಡುವನೋ ಅವನು ನನ್ನ (ಶಿವ) ಲೋಕದಲ್ಲಿ ಕೋಟಲಕ್ಷ ಕಲ್ಪಗಳವರೆಗೆ ಇದ್ದು, ಕೊನೆಗೆ ದೇವಿಯ ಅನುಗ್ರಹದಿಂದ ಪರಮಪದವನ್ನು ಹೊಂದುವನು.

ಸ್ಥಿತ್ವಾ ದೇವೀಪ್ರಸಾದೇನ ಪರೇ ನಿರ್ವಾಣಮಾಪ್ನುಯಾತ್ ।
ಇಹೇ ಲೋಕೇ ವಾಂಛಿತಾರ್ಥಂ ಸುಖಂ ಪ್ರಾಪ್ಯ ಯಶಸ್ತಥಾ ॥ ೬೪ ॥

ರಿಪೂ೯ ಜಿತ್ವಾ ಸ ಧರ್ಮಾತ್ಮಾ ಮಾತಂಗಾನಿವ ಕೇಸರೀ ।
ಚಿರಾಯುಃ ಪುತ್ರಪೌತ್ರೈಶ್ಚ ವಿಭವೈಶ್ಚ ಸಮನ್ವಿತಃ ॥ ೬೫ ॥

ಕ್ರೀಡಯಿತ್ವಾ ಹ್ಯಮರವದ್ಯುವತೀಭಿಶ್ಚ ಸಾದರಾತ್ ।
ಯಕ್ಷರಕ್ಷಃಪಿಶಾಚಾನಾಂ ನೇತಾ ಭವತಿ ನಿತ್ಯಶಃ ॥ ೬೬ ॥
ಸರ್ವಾ೯ ಕಾಮಾನವಾಪ್ಯೈವ ದ್ವಿಜರಾಜಸಮೋ ಭವೇತ್ ॥ ೬೭ ॥

॥ ಇತಿ ಶ್ರೀ ಕಾಲಿಕಾಪುರಾಣೇ ಏಕೋನಸಪ್ತತಿತಮೋಽಧ್ಯಾಯಃ ॥

---

೬೪. ಮತ್ತು ಅವನು, ಸಿಂಹವು ಆನೆಗಳನ್ನು ಸಂಹರಿಸುವಂತೆ, ಸಕಲ ಶತ್ರುಗಳನ್ನು ಜಯಿಸಿ, ಈ ಲೋಕದಲ್ಲಿ ಸಕಲೈಶ್ವರ್ಯಗಳನ್ನು ಅನುಭವಿಸಿ, ಕೀರ್ತಿ ಶಾಲಿಯಾಗಿಯೂ, ಧರ್ಮಾತ್ಮನಾಗಿಯೂ, ಬಾಳುವನು.

೬೫-೬೭. ಅಲ್ಲದೆ, ಆ ದೇವಿಯ ಭಕ್ತನು ದೀರ್ಘಾಯುವೂ, ಪುತ್ರಪೌತ್ರಧನ ಧಾನ್ಯಾದ್ಯೈಶ್ವರ್ಯಯುಕ್ತನೂ ಆಗಿ, ಬಹುಕಾಲ ಜೀವಿಸಿದ್ದು, ಈ ಲೋಕದ ಸಮಸ್ತ ಭೋಗಗಳನ್ನು ಅನುಭವಿಸುವನು. ಕಡೆಗೆ ಯಕ್ಷರಾಕ್ಷಸರೇ ಮೊದಲಾದ ದೇವಗಣಗಳಿಗೂ ಅಧಿಪತಿಯಾಗಿ, ದೇವಲೋಕದಲ್ಲಿ ದೇವಕನ್ಯೆಯರೊಡನೆ ವಿಹರಿಸುತ್ತಾ ಚಂದ್ರನಂತೆ ಪ್ರಕಾಶಿಸುವನು.

ಇಲ್ಲಿಗೆ ಶ್ರೀಕಾಳಿಕಾಪುರಾಣದಲ್ಲಿ ಅರವತ್ತೊಂಬತ್ತನೆಯ
ಅಧ್ಯಾಯವು ಮುಗಿದುದು

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಸಪ್ತತಿತಮೋऽಧ್ಯಾಯಃ ॥

॥ ಔರ್ವ ಉವಾಚ ॥

ಏತತ್ತಂತ್ರಂ ಸಮುಸ್ತಂ ತು ಶ್ರುತ್ವಾ ವೇತಾಲಭೈರವೌ ।
ಪಪ್ರಚ್ಛತುಸ್ತ್ರ್ಯಂಬಕಂ ಚ ಹರ್ಷೋತ್ಫುಲ್ಲವಿಲೋಚನೌ ॥ ೧ ॥

॥ ವೇತಾಲಭೈರವಾವೂಚತುಃ ॥

ಕಾಮಾಖ್ಯಾಯಾಃ ಶ್ರುತಂ ತಂತ್ರಂ ಸಾಂಗಂ ಯುಷ್ಮತ್ಪ್ರಸಾದತಃ ।
ನಮಸ್ಕಾರಂ ತಥಾ ಮುದ್ರಾಂ ಬಲಿದಾನಂ ತಥೈವ ಚ ॥ ೨ ॥

ತಥೈವ ಮಾತೃಕಾನ್ಯಾಸಂ ಪೂಜಾಯಾಂ ಚಾನ್ಯತಃ ಕ್ರಮಂ ।
ಏತತ್ಸರ್ವಂ ಸಮಾಚಕ್ಷ್ವ ವಿಸ್ತರೇಣ ಜಗತ್ಪ್ರಭೋ ॥ ೩ ॥

ಎಪ್ಪತ್ತನೆಯ ಅಧ್ಯಾಯವು.

೧. ಔರ್ವಮುನಿಯು ಹೇಳತೊಡಗಿದನು:—ಬಳಿಕ ವೇತಾಲಭೈರವರು ಪರಮೇಶ್ವರನು ಹೇಳಿದ ಎಲ್ಲ ತಂತ್ರಗಳನ್ನೂ ಕೇಳಿ, ಹರ್ಷದಿಂದ ಅರಳಿದ ಕಣ್ಣುಗಳುಳ್ಳವರಾಗಿ ಪುನಃ ಶಂಕರನ್ನ ಹೀಗೆ ಪ್ರಶ್ನೆಮಾಡಿದರು.

೨-೩. ವೇತಾಲ ಭೈರವರು ಹೀಗೆ ಕೇಳಿದರು:—ಎಲೈ ಶಂಕರನೇ, ನಿನ್ನ ಅನುಗ್ರಹದಿಂದ ಕಾಮಾಖ್ಯಾದೇವಿಯ ಪೂಜಾತಂತ್ರಕ್ರಮವನ್ನು ಸಾಂಗವಾಗಿ ಕೇಳಿದ್ದಾಯಿತು. ಈಗ ಎಲೈ ಜಗದೊಡೆಯನೇ, ನಮಗೆ ನಮಸ್ಕಾರಮಾಡುವ ಕ್ರಮವನ್ನೂ, ಮುದ್ರಾವಿಧಾನವನ್ನೂ, ಬಲಿದಾನ ಮಾಡುವ ರೀತಿಯನ್ನೂ, ಮಾತೃಕಾನ್ಯಾಸವನ್ನೂ, ಮತ್ತು ಪೂಜೆಯಲ್ಲಿ ಆಚರಿಸಬೇಕಾದ ಇತರ ಕ್ರಮಗಳನ್ನೂ, ವಿಸ್ತಾರವಾಗಿ ಹೇಳು. ಇವುಗಳನ್ನು ಎಷ್ಟು ಕೇಳಿದರೂ ನಮಗೆ ತೃಪ್ತಿಯೇ ಆಗುವುದಿಲ್ಲ. ಇದರ ಶ್ರವಣವು ನಮಗೆ ಬಹಳ ಸಂತೋಷವನ್ನುಂಟುಮಾಡುವುದು.

ಶೃಣ್ವತೋರ್ನ ಹಿ ನೌ ತೃಪ್ತಿರ್ಜಾಯತೇ ಮೋದಭೂಮಿಷು ।
॥ ಶ್ರೀ ಭಗವಾನುವಾಚ ॥
ವಕ್ಷ್ಯಾಮಿ ಯದಹಂ ಪೃಷ್ಟೋ ಭವದ್ಭ್ಯಾಂ ಪುತ್ರಕೋತ್ತಮೌ ॥ ೪ ॥

ಶೃಣುತಂ ನರಶಾರ್ದೂಲಾವೇಕಾಗ್ರಮನಸಾಽಧುನಾ ।
ತ್ರಿಕೋಣಮಥ ಷಟ್ಕೋಣಮರ್ಧಚಂದ್ರಂ ಪ್ರದಕ್ಷಿಣಂ ॥ ೫ ॥

ದಂಡಮಷ್ಟಾಂಗಮುಗ್ರಂ ಚ ಸಪ್ತಧಾ ನತಿಲಕ್ಷಣಂ ।
ಐಶಾನೀ ವಾಥ ಕೌಬೇರೀ ದಿಕ್ಸಾಮಾಖ್ಯಾ ಪ್ರಪೂಜನೇ ॥ ೬ ॥

ಪ್ರಶಸ್ತಾ ಸ್ಥಂಡಿಲಾದೌ ಚ ಸರ್ವಮೂರ್ತೇಶ್ಚ ಸರ್ವತಃ ।
ತ್ರಿಕೋಣಾದಿವ್ಯವಸ್ಥಾ ತು ಯದಿ ಪೂರ್ವಮುಖೋ ಯಜೇತ್ ॥ ೭ ॥

ಪಶ್ಚಿಮಾಚ್ಛಾಂಭವೀಂ ಗತ್ವಾ ವ್ಯವಸ್ಥಾಂ ನಿರ್ದಿಶೇತ್ತದಾ ।
ಯದೋತ್ತರಾಮುಖಃ ಕುರ್ಯಾತ್ತಾಸ್ಯಧಃಕೋ ದೇವಪೂಜನಂ ॥ ೮ ॥

---

೪. ಭಗವಾನ್ ಶಂಕರನು ಹೇಳಿದನು:—ಎಲೈ ಪುರುಷಶ್ರೇಷ್ಠರಾದ ಮಕ್ಕಳಿರಾ, ನೀವು ನನ್ನನ್ನು ಕೇಳಿದ ವಿಷಯಗಳನ್ನು ನಿಮಗೆ ಹೇಳುವೆನು. ಏಕಾಗ್ರಮನಸ್ಸಿನಿಂದ ಕೇಳಿರಿ.

೫. ತ್ರಿಕೋಣ, ಷಟ್ಕೋಣ, ಅರ್ಧಚಂದ್ರ, ಪ್ರದಕ್ಷಿಣ, ದಂಡ, ಅಷ್ಟಾಂಗ, ಉಗ್ರ ಎಂಬದಾಗಿ ನಮಸ್ಕಾರಕ್ರಮವು ಏಳು ವಿಧವಾಗಿರುವುದು.

೬. ದೇವಿಯ ಎಲ್ಲ ಮೂರ್ತಿಗಳ ಪೂಜೆಯಲ್ಲೂ, ಹೋಮಗಳಲ್ಲೂ ಈಶಾನ್ಯ ಮತ್ತು ಉತ್ತರ ದಿಕ್ಕುಗಳು ಯಾವಾಗಲೂ ಉತ್ತಮವೆಂದು ತೋರಿವೆ.

೭. ತ್ರಿಕೋಣಕ್ರಮದ ಪ್ರಕಾರ ಸಾಧಕನು ಪೂರ್ವಾಭಿಮುಖವಾಗಿ ಕುಳಿತುಕೊಂಡು ಪೂಜೆಮಾಡುವಾಗ, ನಮಸ್ಕಾರವನ್ನು ಪಶ್ಚಿಮದಿಕ್ಕಿನಿಂದ ಹೊರಟು. ಈಶಾನ್ಯದಿಕ್ಕಿನಕಡೆಗೆ ಹೋಗಿ ನಮಸ್ಕಾರವನ್ನು ಮಾಡಬೇಕು.

೮. ಸಾಧಕನು ಉತ್ತರಾಭಿಮುಖನಾಗಿ ಕುಳಿತುಕೊಂಡು ಪೂಜೆಮಾಡಿದಲ್ಲಿ ಆಗ, ದಕ್ಷಿಣದಿಕ್ಕಿನಿಂದ ವಾಯುವ್ಯದಿಕ್ಕಿನ ಕಡೆಗೆ ನಮಸ್ಕಾರಕ್ರಮವನ್ನು ನಡೆಸಬೇಕು. ಇದು ತ್ರಿಕೋಣವೆಂಬ ನಮಸ್ಕಾರ ಕ್ರಮವು.

ತದಾ ಯಾಮ್ಯಾತ್ತು ವಾಯವ್ಯಾಂ ಗತ್ವಾ ಕುರ್ಯಾತ್ತು ಸಂಸ್ಥಿತಿಂ ।
ದಕ್ಷಿಣಾದ್ವಾಯವೀಂ ಗತ್ವಾ ದಿಶಂ ತಸ್ಮಾಚ್ಚ ಶಾಂಭವೀಂ ॥ ೯ ॥

ತತೋಽಪಿ ದಕ್ಷಿಣಾಂ ಗತ್ವಾ ನಮಸ್ಕಾರಸ್ತ್ರಿಕೋಣವತ್ ।
ತ್ರಿಕೋಣಾಖ್ಯೋ ನಮಸ್ಕಾರಸ್ತ್ರಿಪುರಾಪ್ರೀತಿದಾಯಕಂ ॥ ೧೦ ॥

ದಕ್ಷಿಣಾದ್ವಾಯವೀಂ ಗತ್ವಾ ವಾಯವ್ಯಾಚ್ಛಾಂಭವೀಂ ತತಃ ।
ತತೋಽಪಿ ದಕ್ಷಿಣಾಂ ಗತ್ವಾ ತಾಂ ತ್ಯಕ್ತ್ವಾಗ್ನೌ ಪ್ರವಿಶ್ಯ ಚ ॥ ೧೧ ॥

ಆಗ್ನೇಯೋ ರಾಕ್ಷಸೀಂ ಗತ್ವಾ ತತ್ಪಶ್ಚಾದುತ್ತರಾಂ ದಿಶಂ ।
ಉತ್ತರಾಂ ಚ ತಥಾಗ್ನೇಯೀಂ ಭ್ರಮಣಂ ದ್ವಿತ್ರಿಕೋಣವತ್ ॥ ೧೨ ॥

ಷಟ್ಕೋಣೋಽಯಂನಮಸ್ಕಾರಃ ಪ್ರೀತಿದಃ ಶಿವಮುರ್ಗಯೋಃ ।
ದಕ್ಷಿಣಾದ್ವಾಯವೀಂ ಗತ್ವಾ ತಸ್ಮಾದಾವೃತ್ಯ ದಕ್ಷಿಣಂ ॥ ೧೩ ॥

೯-೧೦. ದಕ್ಷಿಣದಿಕ್ಕಿನಿಂದ ವಾಯವ್ಯದಿಕ್ಕಿಗೆ ಬಂದು ಅಲ್ಲಿಂದ ಈಶಾನ್ಯದಿಕ್ಕಿಗ ಬಂದು, ಅಲ್ಲಿಂದ ತಾನು ಮೊದಲು ಹೊರಟ ದಕ್ಷಿಣದಿಕ್ಕಿಗೆ ಬಂದುಸೇರಿ, ತ್ರಿಕೋಣಾ ಕಾರದಂತೆ ಮಾಡುವುದು ತ್ರಿಕೋಣನಮಸ್ಕಾರಕ್ರಮವು. ಈ ವಿಧವಾದ ನಮಸ್ಕಾರ ಕ್ರಮವು ತ್ರಿಪುರಾದೇವಿಗೆ ಪ್ರೀತಿಕರವಾದುದು.

೧೧-೧೨. ಸಾಧಕನು ದಕ್ಷಿಣದಿಕ್ಕಿನ ಕೋಣದಿಂದ ಹೊರಟು, ವಾಯವ್ಯ ಕೋಣವನ್ನು ಸೇರಿ, ಅಲ್ಲಿಂದ ಈಶಾನ್ಯಕ್ಕೆ ಬಂದು (ಇಲ್ಲಿಗೆ ಒಂದು ತ್ರಿಕೋಣ ವಾಯಿತು) ಪುನಃ ಅಲ್ಲಿಂದ ಹೊರಟು ಆಗ್ನೇಯದಿಕ್ಕಿಗೆ ಬಂದು, ಅಲ್ಲಿಂದ ನೈರುತ್ಯ ದಿಕ್ಕಿಗೆ ಬಂದು, ಅಲ್ಲಿಂದ ಉತ್ತರದಿಕ್ಕಿಗೆ ಬಂದು, ಅಲ್ಲಿಂದ ಪುನಃ ಆಗ್ನೇಯದಿಕ್ಕಿಗೆ ಬಂದು ಸೇರಬೇಕು (ಇದು ಎರಡನೆಯ ತ್ರಿಕೋಣವು) ಈ ಎರಡು ತ್ರಿಕೋಣದಿಂದ ಷಟ್ಕೋಣವು ಆಯಿತು. ಈಷಟ್ಕೋಣವನ್ನು ಪ್ರವರ್ತಿಸೆಮಾಡಿ ಬಂದು ನಮಸ್ಕಾರ ಮಾಡಿದರೆ, ಶಿವನಿಗೂ ದೇವಿಗೂ ಪ್ರೀತಿಯುಂಟಾಗುವುದು. ಇದು ಷಟ್ಕೋಣನಮ ಸ್ಕಾರಕ್ರಮವು.

೧೩. ಸಾಧಕನು ದಕ್ಷಿಣದಿಕ್ಕಿನಿಂದ ಹೊರಟು ವಾಯವ್ಯದಿಕ್ಕಿಗೆ ಹೋಗಿ, ಅಲ್ಲಿಂದ ಹಿಂತಿರುಗಿ ಪುನಃ ದಕ್ಷಿಣದಿಕ್ಕಿಗೆ ಬಂದು ಸೇರಿ, ನಮಸ್ಕಾರಮಾಡುವುದು ಅರ್ಧಚಂದ್ರನಮಸ್ಕಾರವೆನಿಸುವುದು.

ಗತ್ವಾ ಯೋಽಸೌ ನಮಸ್ಕಾರಃ ಸೋಽರ್ಧಚಂದ್ರಃ ಪ್ರಕೀರ್ತಿತಃ ।
ಸಕೃತ್ಪ್ರದಕ್ಷಿಣಂ ಕೃತ್ವಾ ವರ್ತುಲಾಕೃತಿ ಸಾಧಕಃ ॥ ೧೪ ॥

ನಮಸ್ಕಾರಃ ಕಥ್ಯತೇಽಸೌ ಪ್ರದಕ್ಷಿಣ ಇತಿ ದ್ವಿಜೈಃ ।
ತ್ಯಕ್ತ್ವಾ ಸ್ವಮಾಸನಸ್ಥಾನಂ ಪಶ್ಚಾದ್ದುರ್ಗಾನಮಸ್ಕೃತಿಃ ॥ ೧೫ ॥

ಪ್ರದಕ್ಷಿಣಂ ವಿನಾ ಯಾ ತು ನಿಪತ್ಯ ಭುವಿ ದಂಡವತ್ ।
ದಂಡ ಇತ್ಯುಚ್ಯತೇ ದೇವೈಃ ಸರ್ವದೇವೌಘಮೋದದಃ ॥ ೧೬ ॥

ಪೂರ್ವವದ್ದಂಡವದ್ಭೂಮೌ ನಿಪತ್ಯ ಹೃದಯೇನ ತು ।
ಚಿಬುಕೇನ ಮುಖೇನಾಥ ನಾಸಯಾ ಹನುಕೇನ ಚ ॥ ೧೭ ॥

ಬ್ರಹ್ಮರಂಧ್ರೇಣ ಕರ್ಣಾಭ್ಯಾಂ ಯದ್ಭೂಮಿಸ್ಪರ್ಶನಂ ಕ್ರಮಾತ್ ।
ಸ ಚಾಷ್ಟಾಂಗ ಇತಿ ಪ್ರೋಕ್ತೋ ನಮಸ್ಕಾರೋ ಮನೀಷಿಭಿಃ ॥ ೧೮ ॥

ಪ್ರದಕ್ಷಿಣತ್ರಯಂ ಕೃತ್ವಾ ಸಾಧಕೋ ವರ್ತುಲಾಕೃತಿಃ ।
ಬ್ರಹ್ಮರಂಧ್ರೇಣ ಸಂಸ್ಪರ್ಶಃ ಕ್ಷಿತೇರ್ಯಸ್ಯಾಂ ನಮಸ್ಕೃತೌ ॥ ೧೯ ॥

---

೧೪. ಸಾಧಕನು ಒಂದಾವರ್ತಿ ವರ್ತುಲಾಕಾರವಾಗಿ ಪ್ರದಕ್ಷಿಣೆ ಮಾಡಿ ನಮಸ್ಕಾರ ಮಾಡಿದಲ್ಲಿ ಆ ನಮಸ್ಕಾರವು ಪ್ರದಕ್ಷಿಣಕ್ರಮವೆಂದು ದ್ವಿಜರು ಹೇಳುವರು.

೧೫-೧೬. ಸಾಧಕನು ತಾನು ಕುಳಿತಿರುವ ಆಸನವನ್ನು ಬಿಟ್ಟಿದ್ದು, ದುರ್ಗಾದೇವಿಗೆ ಪ್ರದಕ್ಷಿಣೆಯನ್ನು ಮಾಡದೆ ಸುಮ್ಮನೆ ದಂಡದಂತೆ ಭೂಮಿಯಮೇಲೆ ಬಿದ್ದಲ್ಲಿ, ಆ ನಮಸ್ಕಾರವು ದಂಡವೆಂದು ದೇವತೆಗಳು ಹೇಳುವರು. ಇದು ದೇವತೆಗಳಿಗೆ ತುಂಬ ಸಂತೋಷವನ್ನುಂಟುಮಾಡುವುದು.

೧೭-೧೮. ಸಾಧಕನು ಪೂರ್ವವಂತೆ ಭೂಮಿಯಮೇಲೆ ಮಲಗಿ, ಹೃದಯ (ಎದೆ) ವನ್ನೂ, ಗಲ್ಲವನ್ನೂ, ಮುಖವನ್ನೂ, ಮೂಗನ್ನೂ, ಕೆಳತುಟಿಯನ್ನೂ ಭೂಮಿಗೆ ಸೋಕಿಸಿ, ಬಳಿಕ ಬ್ರಹ್ಮರಂಧ್ರವನ್ನೂ, ಎರಡು ಕಿವಿಗಳನ್ನೂ ಭೂಮಿಗೆ ಸ್ಪರ್ಶಮಾಡುವಂತೆ ಚಲಿಸದೆ ನಮಸ್ಕಾರಮಾಡಿದಲ್ಲಿ, ಅದು ಅಷ್ಟಾಂಗನಮಸ್ಕಾರವೆಂದು ಹೇಳಲ್ಪಡುವುದು.

೧೯. ಸಾಧಕನಾದವನು ವರ್ತುಲಾಕಾರವಾಗಿ ಮೂರು ಪ್ರದಕ್ಷಿಣೆಯನ್ನು ಮಾಡಿ, ಬಳಿಕ ಶಿರಸ್ಸನ್ನು ಭೂಮಿಯಮೇಲೆ ಬ್ರಹ್ಮರಂಧ್ರವು (ನೆತ್ತಿಯು) ತಗಲುವಂತೆ

ಸ ಉಗ್ರ ಇತಿ ದೇವೌಘೈರುಚ್ಯತೇ ವಿಷ್ಣು ತುಷ್ಟಿದಃ ।
ನವಾನಾಂ ಸಾಗರೋ ಯದ್ವದ್ದ್ವಿಪದಾಂ ಬ್ರಾಹ್ಮಣೋ ಯಥಾ ॥ ೨೦ ॥

ನದೀನಾಂ ಜಾಹ್ನವೀ ಯಾದೃಗ್ದೇವಾನಾಮಪಿ ಚಕ್ರಧೃಕ್ ।
ನಮಸ್ಕಾರೇಷು ಸರ್ವೇಷು ತಥೈವೋಗ್ರಃ ಪ್ರಶಸ್ಯತೇ ॥ ೨೧ ॥

ತ್ರಿಕೋಣಾದ್ಯೈರ್ನಮಸ್ಕಾರೈಃ ಕೃತೈರೇವ ತು ಭಕ್ತಿತಃ ।
ಚತುರ್ವರ್ಗಂ ಲಭೇದ್ಭಕ್ತೋ ನ ಚಿರಾದೇವ ಸಾಧಕಃ ॥ ೨೨ ॥

ನಮಸ್ಕಾರೋ ಮಹಾಯಜ್ಞಃ ಪ್ರೀತಿದಃ ಸರ್ವತಃ ಸದಾ ।
ಸರ್ವೇಷಾಮೇವ ದೇವಾನಾಮನ್ಯೇಷಾಮಪಿ ಭೈರವ ॥ ೨೩ ॥

ಯೋಽಸಾವುಗ್ರೋ ನಮಸ್ಕಾರಃ ಪ್ರೀತಿದಃ ಸತತಂ ಹರೇಃ ।
ಮಹಾಮಾಯಾಪ್ರೀತಿಕರಃ ಸ ನಮಸ್ಕರಣೋತ್ತಮಃ ॥ ೨೪ ॥

ದಂಡಾಕಾರವಾಗಿ ನಮಸ್ಕಾರಮಾಡಿದರೆ ಆ ನಮಸ್ಕಾರಕ್ಕೆ ಉಗ್ರನಮಸ್ಕಾರವೆಂದು ದೇವತೆಗಳು ಹೇಳುವರು. ಈ ವಿಧವಾದ ನಮಸ್ಕಾರವು ವಿಷ್ಣುವಿಗೆ ಸಂತೋಷವನ್ನುಂಟುಮಾಡುವುದು.

೨೦-೨೧. ನವಿಗಳಿಗೆ ಸಾಗರವೂ, ಮನುಷ್ಯರಲ್ಲಿ ಬ್ರಾಹ್ಮಣನೂ, ನದಿಗಳಲ್ಲಿ ಗಂಗಾನದಿಯೂ, ದೇವತೆಗಳಲ್ಲಿ ವಿಷ್ಣುವೂ ಹೇಗೆ ಶ್ರೇಷ್ಠರೋ, ಹಾಗೆ ಏಳುವಿಧವಾದ ನಮಸ್ಕಾರಗಳಲ್ಲಿ ಈ ಉಗ್ರವೆಂಬ ನಮಸ್ಕಾರವು ಅತ್ಯಂತ ಶ್ರೇಷ್ಠವೆಂದು ಹೇಳಲ್ಪಡುವುದು.

೨೨. ಮೇಲೆ ಹೇಳಿದ ತ್ರಿಕೋಣವೇ ಮೊದಲಾದ ಏಳುವಿಧ ನಮಸ್ಕಾರಗಳನ್ನು ಭಕ್ತಿಯಿಂದ ಮಾಡಿದರೆ, ಸಾಧಕನಾದವನು ಚತುರ್ವಿಧ ಪುರುಷಾರ್ಥಗಳನ್ನು ಶೀಘ್ರದಲ್ಲಿಯೇ ಹೊಂದುವನು.

೨೩. ಎಲೈ ಭೈರವನೇ, ಸಮಸ್ತ ದೇವತೆಗಳಿಗೂ ಇತರರಿಗೂ ಎಲ್ಲಾವಿಧದಿಂದಲೂ ಪ್ರೀತಿಯನ್ನುಂಟುಮಾಡುವ ಈ ನಮಸ್ಕಾರವು ಮಹಾಯಜ್ಞಸ್ವರೂಪವಾಗಿರುವುದು.

೨೪. ವಿಷ್ಣುವಿಗೂ, ಮಹಾಮಾಯಾಸ್ವರೂಪಳಾದ ದೇವಿಗೂ ಯಾವಾಗಲೂ ಪ್ರೀತಿಯನ್ನುಂಟುಮಾಡುವ ಉಗ್ರವೆಂಬ ನಮಸ್ಕಾರವು ನಮಸ್ಕಾರಗಳಲ್ಲೆಲ್ಲಾ ಅತ್ಯಂತ ಉತ್ತಮವಾದದ್ದು.

ಉಕ್ತಾಸ್ತತ್ರ ನಮಸ್ಕಾರಾಃ ಶೃಣುತಂ ಪರತೋ ಯುವಾಂ ।
ಮುದ್ರಾಣಾಂ ಪರಿಸಂಖ್ಯಾನಂ ಸ್ವರೂಪಂ ಚ ಯಥಾಕ್ರಮಂ ॥ ೨೫ ॥

ಧೇನುಶ್ಚ ಸಂಪುಟಶ್ಚೈವ ಪ್ರಾಂಜಲಿರ್ಬಿಲ್ವಪದ್ಮಕೌ ।
ನಾರಾಚೋ ಮುಂಡದಂಡೌ ಚ ಯೋನಿರರ್ಧಂ ತಥೈವ ಚ ॥ ೨೬ ॥

ವಂದನೀ ಚ ಮಹಾಮುದ್ರಾ ಮಹಾಯೋನಿಸ್ತಥೈವ ಚ ।
ಭಗಶ್ಚ ಪುಟಕಶ್ಚೈವ ನಿಃಸಂಗೋಽಥಾರ್ಧಚಂದ್ರಕಃ ॥ ೨೭ ॥

ಅಂಗಶ್ಚ ದ್ವಿಮುಖಂ ಚೈವ ಶಂಖಮುದ್ರಾ ಚ ಮುಷ್ಟಿಕಃ ।
ವಜ್ರಂ ಚೈವ ತಥಾ ಬದ್ಧಸಾಯೋನಿರ್ನಿಮಲಂ ತಥಾ ॥ ೨೮ ॥

ಘಟಃ ಶಿಖರಿಣೀ ತುಂಗಃ ಪುಂಡ್ರೋಽಥ ಹ್ಯರ್ಧಧೇನುಕಃ ।
ಸಂಮೀಲನೀ ಚ ಕುಂಡಶ್ಚ ಚಕ್ರಂ ಶೂಲಂ ತಥೈವ ಚ ॥ ೨೯ ॥

ಸಿಂಹವಕ್ತ್ರಂ ಗೋಮುಖಂ ಚ ಪ್ರೋಲ್ಲಾಸೋನ್ನಮನಂ ತಥಾ ।
ಬಿಂಬಂ ಪಾಶುಪತಂ ಶುದ್ಧಂ ತ್ಯಾಗೋಽಥೋ ಸಾರಿಣೀ ತಥಾ ॥ ೩೦ ॥

ಪ್ರಸಾರಿಣೀ ಚೋಗ್ರಮುದ್ರಾ ಕುಂಡಲೀ ವ್ಯೂಹ ಏವ ಚ ।
ತ್ರಿಮುಖಾ ಚಾಸಿವಲ್ಲೀ ಚ ಯೋಗೋ ಭೇದೋಽಥ ಮೋಹನಂ ॥ ೩೧ ॥

---

೨೫. ಎಲೈ ವೇತಾಲಭೈರವರೇ, ಈಗ ನಮಸ್ಕಾರಕ್ರಮವನ್ನು ನಿಮಗೆ ಹೇಳಿದ್ದಾಯಿತು. ಇನ್ನು ಮುಂದೆ ಮುದ್ರೆಗಳ ಸಂಖ್ಯೆಯನ್ನೂ, ಅವುಗಳ ಸ್ವರೂಪವನ್ನೂ ವಿಸ್ತಾರವಾಗಿ ವಿವರಿಸುವೆನು, ಕೇಳಿರಿ.

೨೬-೩೨. ಬ್ರಹ್ಮನು ಹೇಳಿರುವ ಶ್ರೇಷ್ಠವಾದ ೧೦೮ ಮುದ್ರೆಗಳಲ್ಲಿ ೫೫ ನ್ನು ಇಲ್ಲಿ ಹೇಳಿದೆ. ಅವುಗಳ ಹೆಸರುಗಳು ಈರೀತಿ ಇವೆ:—ಧೇನು, ಸಂಪುಟ, ಪ್ರಾಂಜಲಿ, ಬಿಲ್ವ, ಪದ್ಮಕ, ನಾರಾಚ, ಮುಂಡ, ದಂಡ, ಯೋನಿ, ಅರ್ಧಯೋನಿ, ವಂದನೀ, ಮಹಾಮುದ್ರಾ, ಮಹಾಯೋನಿ, ಭಗ, ಪುಟಕ, ನಿಸ್ಸಂಗ, ಅರ್ಧಚಂದ್ರ, ಅಂಗ, ದ್ವಿಮುಖ, ಶಂಖಮುದ್ರಾ, ಮುಷ್ಟಿಕ, ವಜ್ರ, ಆಬದ್ಧ, ಸಾಯೋನಿ, ನಿರ್ಮಲ, ಘಟ, ಶಿಖರಿಣೀ, ತುಂಗ, ಪುಂಡ್ರ, ಅರ್ಧಧೇನು, ಸಂಮೀಲನೀ, ಕುಂಡ, ಚಕ್ರ, ಶೂಲ, ಸಿಂಹವಕ್ತ್ರ, ಗೋಮುಖ, ಪ್ರೋಲ್ಲಾಸ, ಉನ್ನಮನ, ಬಿಂಬ, ಪಾಶುಪತ, ಶುದ್ಧ,

ಬಾಣೋ ಧನುಶ್ಚ ತೂಣೀರಂ ಮುದ್ರಾ ಏತಾಶ್ಚ ಸತ್ತಮಾಃ ।
ಅಷ್ಟೋತ್ತರಶತಂ ಮುದ್ರಾ ಬ್ರಹ್ಮಣಾ ಯಾಃ ಪ್ರಕೀರ್ತಿತಾಃ ॥ ೩೨ ॥

ತಾಸಾಂ ತು ಪಂಚಪಂಚಾಶದೇತಾ ಗ್ರಾಹ್ಯಾಸ್ತು ಪೂಜನೇ ।
ಶೇಷಾಸ್ತು ಯಾಸ್ತ್ರಿಪಂಚಾಶನ್ಮುದ್ರಾಸ್ತಾಃ ಸಮಯೇಷು ಚ ॥ ೩೩ ॥

ದ್ರವ್ಯಾನಯನಸಂಕೇತನಟನಾದಿಷು ತಾಃ ಸ್ಮೃತಾಃ ।
ದೇವಾನಾಂ ಚಿಂತನೇ ಯೋಗೇ ಧ್ಯಾನೇ ಜಪ್ಯೇ ವಿಸರ್ಜನೇ ॥ ೩೪ ॥

ಆದ್ಯಾಸ್ತು ಪಂಚಪಂಚಾಶನ್ಮುದ್ರಾ ಭೈರವ ಕೀರ್ತಿತಾಃ ।
ಮುದ್ರಾಂ ವಿನಾ ತು ಯಜ್ಜಪ್ಯಂ ಪ್ರಾಣಾಯಾಮಃ ಸುರಾರ್ಚನಂ ॥ ೩೫ ॥

ಯೋಗೋ ಧ್ಯಾನಾಸನೇ ಚಾಪಿ ನಿಷ್ಫಲಾನಿ ಚ ಭೈರವ ।
ಪ್ರತ್ಯೇಕಂ ಲಕ್ಷಣಂ ತೇಷಾಂ ಶೃಣುತಂ ತನಯೌ ಯುವಾಂ ॥ ೩೬ ॥

ತ್ಯಾಗ, ಸಾರಿಣೀ, ಪ್ರಸಾರಿಣೀ, ಉಗ್ರಮುದ್ರಾ, ಕುಂಡಲೀ, ವ್ಯೂಹ, ತ್ರಿಮುಖಾ, ಅಸಿವಲ್ಲೀ, ಯೋಗ, ಭೇದ, ಮೋಹನ, ಬಾಣ, ಧನು, ತೂಣೀರ ಎಂಬ ೫೫ ಮುದ್ರೆಗಳು.

೩೩. ಆ ೧೦೮ ಮುದ್ರೆಗಳ ಪೈಕಿ ೫೫ ಮುದ್ರೆಗಳು ಮಾತ್ರ ದೇವತಾಪೂಜೆಗಳಲ್ಲಿ ಉಪಯೋಗಿಸಲ್ಪಡುವುವು. ಉಳಿದ ೫೩ ಮುದ್ರೆಗಳು ಪದಾರ್ಥಗಳನ್ನು ತರುವುದೇ ಮೊದಲಾದ ಸಂಕೇತಗಳಲ್ಲಿಯೂ, ಸಂಜ್ಞೆಗಳಲ್ಲಿಯೂ, ನಾಟಕಾದ್ಯಭಿನಯಗಳಲ್ಲಿಯೂ ಇವೇ ಮೊದಲಾದ ಇತರ ಸಮಯಗಳಲ್ಲಿ ಉಪಯೋಗಿಸಲ್ಪಡುವುವು.

೩೪. ಮೊದಲು ಹೇಳಿದ ೫೫ ಮುದ್ರೆಗಳು ದೇವತೆಗಳ ಧ್ಯಾನಕಾಲದಲ್ಲಿಯೂ, ಯೋಗದಲ್ಲಿಯೂ, ಪೂಜೆಯಲ್ಲಿಯೂ, ಜಪದಲ್ಲಿಯೂ, ದೇವತಾವಿಸರ್ಜನಕಾಲದಲ್ಲಿಯೂ ಉಪಯೋಗಿಸಲ್ಪಡುವವು.

೩೫-೩೬. ಯೋಗಾಭ್ಯಾಸದಲ್ಲಿಯೂ, ದೇವತಾಧ್ಯಾನಾರ್ಚನಾದಿಗಳಲ್ಲಿಯೂ, ಮುದ್ರೆಗಳನ್ನು ಉಪಯೋಗಿಸದೆ ಮಾಡುವ ಪ್ರಾಣಾಯಾಮಧ್ಯಾನಾರ್ಚನೆಗಳು ನಿಷ್ಫಲವಾಗುವವು. ಎಲೈ ಕುಮಾರರಾದ ಭೈತಾಲಭೈರವರೇ, ಈಗ ಆ ಮುದ್ರೆಗಳ ಲಕ್ಷಣಗಳನ್ನು ಪ್ರತ್ಯೇಕವಾಗಿ ವಿವರಿಸುವೆನು ಕೇಳಿರಿ.

ದಕ್ಷಿಣಾಮಧ್ಯಮಾಗ್ರೇಣ ಸವ್ಯಹಸ್ತಸ್ಯ ತರ್ಜನೀಂ ।
ಯೋಜಯೇತ್ಸವ್ಯಮಧ್ಯಾಂ ತು ತರ್ಜನ್ಯಾ ದಕ್ಷಿಣೇನ ವೈ ॥ ೩೭ ॥

ತಥಾ ದಕ್ಷಾನಾಮಿಕಯಾ ವಾಮಹಸ್ತಕನಿಷ್ಠಿಕಾಂ ।
ಅನಾಮಿಕಾಂ ತು ವಾಮಸ್ಯ ದಕ್ಷಿಣಸ್ಯ ಕನಿಷ್ಠಯಾ ॥ ೩೮ ॥

ಯೋಜಯೇದ್ಭಕ್ತಿಮಾನ್ಸವ್ಯಗ್ರಥಕ್ಷಿಣಾವರ್ತನೇನ ತು ।
ಧೇನುಮುದ್ರಾ ಸಮಾಖ್ಯಾತಾ ಸರ್ವದೇವಸ್ಯ ತುಷ್ಟಿದಾ ॥ ೩೯ ॥

ಸಂಯೋಜ್ಯ ದ್ವೌ ತಲೌ ಸರ್ವಾಣ್ಯಂಗುಲ್ಯಗ್ರಾಣಿ ಹಸ್ತಯೋಃ ।
ಸಂಯೋಜ್ಯ ಪಾರ್ಶ್ವತೋಽಂಗುಷ್ಠೌ ಸಂಪುಟಃ ಪ್ರೋಚ್ಯತೇ ಸುರೈಃ ॥ ೪೦ ॥

ಸರ್ವೇಷಾಮಥ ದೇವಾನಾಂ ಸಂಪುಟಃ ಪ್ರೀತಿದಾಯಕಃ ।
ಧ್ಯಾನಚಿಂತನಯೋಗಾದೌ ಸಂಪುಟಃ ಶಸ್ಯತೇ ಸದಾ ॥ ೪೧ ॥

ನಿಕುಬ್ಜಯುಗಲಂ ಪಾಣ್ಯೋಸ್ತಂ ಸಂಯೋಜ್ಯಾರ್ಧ ಏವ ಚ ।
ಮಧ್ಯಶೂನ್ಯಃ ಪುಟಾಕಾರಃ ಫ್ರಾಂಜಲಿಃ ಪರಿಕೀರ್ತಿತಃ ॥ ೪೨ ॥

೩೭-೩೯. ಬಲಗೈ ಮಧ್ಯದ ಬೆರಳನ್ನು ಎಡಗೈಯ ತರ್ಜನೀ ಬೆರಳಿಗೂ, ಎಡಗೈಯ ಮಧ್ಯದ ಬೆರಳನ್ನು ಬಲಗೈ ತರ್ಜನೀ ಬೆರಳಿಗೂ ಸೇರಿಸುವುದು. ಪುನಃ ಬಲಗೈಯ್ಯ ಅನಾಮಿಕಾ ಬೆರಳನ್ನು ಎಡಗೈಯ್ಯ ಕಿರುಬೆರಳಿಗೂ, ಎಡಗೈಯ್ಯ ಅನಾಮಿಕಾ ಬೆರಳನ್ನು ಬಲಗೈಯ್ಯ ಕಿರುಬೆರಳಿಗೂ ಸೇರಿಸುವುದು. ಈರೀತಿ ಭಕ್ತನು ಬಲವಂತವಾಗಿ ಸೇರಿಸಿದರೆ ಅದು **ಧೇನುಮುದ್ರೆ** ಎನಿಸುವುದು. ಇದು ಸಮಸ್ತ ದೇವತೆಗಳಿಗೂ ಸಂತೋಷವನ್ನುಂಟುಮಾಡುವುದು.

೪೦-೪೧. ಎರಡು ಕೈಗಳ ಅಂಗೈಗಳನ್ನು ಸೇರಿಸಿ, ಕೈಗಳ ಬೆರಳುಗಳನ್ನು ಒಟ್ಟಾಗಿ ಒಂದಕ್ಕೊಂದು ತಗಲುವಂತೆ ಸೇರಿಸಿ, ಪಕ್ಕದಲ್ಲಿ ಹೆಬ್ಬೆರಳುಗಳನ್ನು ಸೇರಿಸಿದರೆ ಅದು **ಸಂಪುಟ** ಮುದ್ರೆಯೆಂದು ದೇವತೆಗಳು ಹೇಳುವರು. ಈ ಮುದ್ರೆಯು ಸಮಸ್ತ ದೇವತೆಗಳ ಧ್ಯಾನ ಪೂಜೆಗಳಲ್ಲಿಯೂ, ಯೋಗದಲ್ಲಿಯೂ ಶ್ರೇಷ್ಠವೆಂದು ಹೇಳಲ್ಪಡುವುದು.

೪೨. ಎರಡು ಕೈಗಳನ್ನೂ ಸ್ವಲ್ಪ ಬಗ್ಗುವಂತೆ ಜೋಡಿಸಿ, ಮಧ್ಯದಲ್ಲಿ ಟೊಳ್ಳಾಗಿ ಗುಂಡಾಗಿ ಪುಟಾಕಾರದಂತೆ ಸೇರಿಸಿದರೆ ಅದಕ್ಕೆ **ಫ್ರಾಂಜಲಿ** ಮುದ್ರೆಯೆಂದು ಹೆಸರು.

ಅಂಗುಷ್ಠಮಂತರಂ ಕೃತ್ವಾ ಪಾಣ್ಯೋರ್ಮುಷ್ಟಿಂ ವಿಧಾಯ ಚ ।
ಸಂಯೋಜ್ಯ ಬಿಲ್ವವಂತೇ ತು ಬಿಲ್ವಮುದ್ರಾ ಪ್ರಕೀರ್ತಿತಾ ॥ ೪೩ ॥

ಮಣಿಬಂಧಾದಾಕರಭಂ ಸಂಯೋಜ್ಯ ಕರಯೋರ್ದ್ವಯೋಃ ।
ಅಂಗುಷ್ಠೇ ಚಾಪಿ ಸಂಯೋಜ್ಯ ತಥೈವ ಚ ಕನಿಷ್ಠಿಕೇ ॥ ೪೪ ॥

ತಿಸ್ರಸ್ತಿಸ್ರೋಸ್ತಯೋಃ ಪಾಣ್ಯೋರಂಗಲೀರ್ವಿರಲಾಸ್ತಥಾ ।
ಪದ್ಮಮುದ್ರಾ ಸದಾಖ್ಯಾತಾ ಚತುರ್ವರ್ಗಫಲಾ ನೃಣಾಂ ॥ ೪೫ ॥

ಅಂಗುಷ್ಠಾಗ್ರೇಣ ತರ್ಜನ್ಯಾ ಸಂಯೋಜ್ಯಾಥೋರ್ಧ್ವರೇಖಯಾ ।
ಅನ್ಯಾಂಗುಲೀಸ್ತಥಾನಮ್ಯ ನಾರಾಚಃ ಸ್ಯಾತ್ಪ್ರಸಾರ್ಯತೇ ॥ ೪೬ ॥

ಮಮ ಚೈವ ಶಿವಾಯಾಶ್ಚ ಪ್ರೀತಿದೇಯಂ ಪ್ರಿಯಂಕರೀ ।
ನಾರಾಚಮುದ್ರಾ ಸತತಂ ಪ್ರೇತ್ಯೈ ವೇತಾಲಭೈರವ ॥ ೪೭ ॥

ಅಂತರಾಂಗುಷ್ಠಮುಷ್ಟಿಂ ಚ ಕೃತ್ವಾ ವಾಮಕರಸ್ಯ ತು ।
ಮಧ್ಯಮಾಯಾ ದಕ್ಷಿಣಸ್ಯ ತಥಾನಮ್ಯ ಪ್ರಯತ್ನತಃ ॥ ೪೮ ॥

---

೪೩. ಎರಡುಕೈಗಳ ಹೆಬ್ಬೆರಳುಗಳನ್ನೂ ಅಂಗೈಗಳಲ್ಲಿ ಒಳಕ್ಕೆ ಸೇರಿಸಿ, ಬಿಲ್ವ ಫಲದಂತೆ ದುಂಡಾಗಿ ಮುಷ್ಟಿಯನ್ನು ಸೇರಿಸಿದರೆ ಅದು **ಬಿಲ್ವಮುದ್ರೆ** ಯೆನಿಸುವುದು.

೪೪-೪೫. ಎರಡುಕೈಗಳ ಬೆರಳುಗಳಲ್ಲಿ ಗಿಣ್ಣುಗಳಿಂದ ಉಗುರಿನವರಿಗೆ ಹೆಬ್ಬೆರಳನ್ನೂ, ಕಿರುಬೆರಳನ್ನೂ, ಮುಚ್ಚಿ ಉಳಿದ ಮೂರು ಬೆರಳುಗಳನ್ನೂ ವಿರಳ ವಾಗಿ ನೀಡಿದರೆ ಅವಕ್ಕೆ **ಪದ್ಮಮುದ್ರೆ** ಯೆಂದು ಹೆಸರು. ಇದು ಮಾನವರಿಗೆ ಚತುರ್ವಿಧಪುರುಷಾರ್ಥವನ್ನು ಕೊಡುವುದು.

೪೬-೪೭. ಹೆಬ್ಬೆರಳಿನ ತುದಿಗೆ ತರ್ಜನೀಬೆರಳಿನ ಮೇಲಿನರೇಖೆಗೆ ಸೇರಿಸಿ, ಉಳಿದ ಬೆರಳುಗಳನ್ನು ಬಗ್ಗಿಸಿ ವಿರಳವಾಗಿ ಹಿಡಿದಲ್ಲಿ, ಅದು **ನಾರಾಚಮುದ್ರೆಯು.** ಎಲೈ ವೇತಾಲಭೈರವನೇ, ಈ ಮುದ್ರೆಯು ನನಗೂ ದೇವಿಗೂ ಅತ್ಯಂತ ಪ್ರೀತಿದಾಯಕವಾದುದು.

೪೮ ೫೦. ಎಡಗೈಯ ಮುಷ್ಟಿಯೆನ್ನುಮಾಡಿ, ಅದರಲ್ಲಿ ಹೆಬ್ಬೆರಳನ್ನು ಸೇರಿಸಿ, ಬಲಗೈಯ ಮಧ್ಯದ ಬೆರಳನ್ನು ಪ್ರಯತ್ನದಿಂದ ಬಗ್ಗಿಸಿ, ಬಳಿಕ ಆ ಮಧ್ಯದ ಬೆರಳನ್ನು

ಮಧ್ಯಮೇನಾಥ ತರ್ಜನ್ಯಾ ಅಂಗುಷ್ಠಾಗ್ರಾ ನಿಯೋಜ್ಯ ಚ ।
ದಕ್ಷಿಣಂ ಯೋಜಯೇತ್ಪಾಣೀಂ ವಾಮಮುಷ್ಠೌ ಚ ಸಾಧಕಃ ॥ ೪೯ ॥

ದರ್ಶಯೇದ್ದಕ್ಷಿಣೇ ಭಾಗೇ ಮುಂಡಮುದ್ರೇಯಮಿಷ್ಯತೇ ।
ಇಯಂ ತು ಗಣನಾಥಸ್ಯ ಪ್ರೀತಿದಾ ಮುದ್ರಿಕೋತ್ತಮಾ ॥ ೫೦ ॥

ಸರ್ವೇಷಾಮಪಿ ದೇವಾನಾಂ ತುಷ್ಟಿದಾ ಸರ್ವಕರ್ಮಸು ।
ಅಂಗುಷ್ಠಮಧ್ಯಮಾದೀಂಶ್ಚ ಸಮ್ಯಗಾನಮ್ಯ ತರ್ಜನೀಂ ॥ ೫೧ ॥

ಪ್ರಸಾರ್ಯ ದಂಡಮುದ್ರೇತಿ ದಕ್ಷಿಣೇಽಸ್ಯ ಕರಸ್ಯ ಚ ।
ಸರ್ವಾಂಗುಲೀಸ್ತು ಸಂಯೋಜ್ಯ ಕರಯೋರುಭಯೋರಪಿ ॥ ೫೨ ॥

ಸಂವೇಷ್ಟ್ಯ ರಜ್ಜುವದ್ವೇತಿ ಪಾಣ್ಯೋರಪಿ ಕನಿಷ್ಠಿಕೇ ।
ವಾಮಸ್ಯಾನಾಮಮೂಲೇ ವೈ ಉದಗ್ರಂ ವಿನಿಯೋಜಯೇತ್ ॥ ೫೩ ॥

ತರ್ಜನೀಬೆರಳಿನ ತುದಿಗೆ ಸೇರಿಸಿ, ಹೆಬ್ಬೆರಳನ್ನು ಮಧ್ಯದ ಬೆರಳಿಗೆ ಸೇರಿಸಿ, ಎಡಗೈಯ ಮುಷ್ಟಿಯಲ್ಲಿ ಬಲಗೈಯನ್ನು ಸೇರಿಸಬೇಕು. ಹೀಗೆ ಸೇರಿಸಿ ಬಲಭಾಗವನ್ನು ಮುಂದಕ್ಕೆ ಹಿಡಿದರೆ, ಅದು **ಮುಂಡಮುದ್ರೆ**ಯಾಗುವುದು. ಈ ಮುದ್ರಿಕೆಯು ಗಣಪತಿಗೆ ಪ್ರೀತಿಯನ್ನುಂಟುಮಾಡುವುದಲ್ಲದೆ, ದೇವತೆಗಳಿಗೂ ಎಲ್ಲಾ ಕರ್ಮಗಳಲ್ಲಿಯೂ ಸಂತೋಷವನ್ನುಂಟುಮಾಡುವುದು.

೫೧. ಬಲಗೈಯ ಹೆಬ್ಬೆರಳನ್ನೂ, ಮಧ್ಯದ ಬೆರಳು ಆದಿಯಾಗಿ ಮೂರು ಬೆರಳುಗಳನ್ನೂ ಚೆನ್ನಾಗಿ ಬಗ್ಗಿಸಿ, ತರ್ಜನೀ ಬೆರಳನ್ನು ಅಗಲಿಸಿದಲ್ಲಿ ಅದು **ದಂಡಮುದ್ರೆಯು.**

೫೨-೫೩. ಎರಡು ಕೈಗಳ ಬೆರಳುಗಳೆಲ್ಲವನ್ನೂ ಒಟ್ಟಾಗಿ ಸೇರಿಸಿ, ಅಂಗೈಗಳಲ್ಲಿ ಕಿರುಬೆರಳುಗಳನ್ನು ಹಗ್ಗದಂತೆ ಒಂದಕ್ಕೊಂದು ಸೇರಿಸಿ ಬಳಿಕ ಎಡಗೈಯ ಅನಾಮಿಕಾ ಬೆರಳಿನ ಮೂಲದಲ್ಲಿ ಬಲಗೈಯ ಮಧ್ಯದ ಬೆರಳಿನ ತುದಿಯನ್ನೂ, ಅದರಂತೆ ಬಲಗೈಯ ಅನಾಮಿಕಾ ಬೆರಳಿನ ಮೂಲದಲ್ಲಿ ಎಡಗೈಯ ಮಧ್ಯದ ಬೆರಳಿನ ತುದಿಯನ್ನೂ ಸೇರಿಸಿ, ಮಧ್ಯದಲ್ಲಿ ಯೋನಿಯ ಆಕಾರದಂತೆ ಹಳ್ಳವನ್ನು ಮಾಡಿದಲ್ಲಿ,

ದಕ್ಷಸ್ಯ ಮಧ್ಯಮಾನಾಮೂಲೇ ತಥಾಗ್ರಂ ವಾಮಮೇವ ಚ ।
ಯೋಜಯೇದ್ಯೋಜನಾತ್ಪಶ್ಚಾದಾವರ್ತ್ಯ ಕರಶಾಖಿಕಾಃ ॥ ೫೪ ॥

ಯೋನ್ಯಾಕಾರಂ ತು ತನ್ಮಧ್ಯಂ ಯೋನಿಮುದ್ರಾ ಪ್ರಕೀರ್ತಿತಾ ।
ಕಾಮಾಖ್ಯಾಯಾಃ ಪಂಚಮೂರ್ತೀದುರ್ಗಾಯಾ ಅಪಿ ಭೈರವ ॥ ೫೫ ॥

ಪ್ರೀತಿದಾ ಯೋನಿಮುದ್ರೇಯಂ ಮಮ ಕಾಮಸ್ಯ ಚ ಪ್ರಿಯಾ ।
ಸಂಸಕ್ತಾ ಅಂಗುಲೀಃ ಸರ್ವಾಃ ಪ್ರಸಾರ್ಯಾಂಗುಷ್ಠಪರ್ವಣಾ ॥ ೫೬ ॥

ಅಗ್ರೇಣ ಚ ಕನಿಷ್ಠಾಯಾ ಅಗ್ರೇಣಾಪಿ ಚ ಯೋಜಯೇತ್ ।
ಕರಸ್ಯ ದಕ್ಷಿಣಸ್ಯೈವಮರ್ಧಯೋನಿಃ ಪ್ರಕೀರ್ತಿತಾ ॥ ೫೭ ॥

ಮಹಾಯೋನಿಸ್ತು ಕಥಿತಾ ವೈಷ್ಣವೀತಂತ್ರಣೇ ವರೇ ।
ಸಂಪುಟಂ ಪ್ರಾಂಜಲಿಂ ವಾಪಿ ಯದಿ ಶೀರ್ಷೇ ಪ್ರದರ್ಶಯೇತ್ ॥ ೫೮ ॥

ವಂದನೀಯಾ ಸಮಾಖ್ಯಾತಾ ಮುದ್ರಾ ವಿಷ್ಣುಪ್ರಮೋದಿನೀ ।
ಸೈವ ಚೇಚ್ಛ್ರವಣಾಸಕ್ತಾ ಮಹಾಮುದ್ರಾ ಪ್ರಕೀರ್ತಿತಾ ॥ ೫೯ ॥

ಅದಕ್ಕೆ **ಯೋನಿಮುದ್ರೆ** ಎಂದು ಹೆಸರು. ಈ ಮುದ್ರೆಯು ಕಾಮಾಖ್ಯಾದೇವಿಯ ಐದು ಮೂರ್ತಿಗಳಿಗೂ, ದುರ್ಗಾದೇವಿಗೂ, ನನಗೂ, ಕಾಮನಿಗೂ ಬಹಳ ಪ್ರೀತಿದಾಯಕವಾದುದು.

೫೬-೫೭. ಎಲ್ಲಾ ಬೆರಳುಗಳನ್ನೂ ಒಟ್ಟಿಗೆ ಸೇರಿಸಿ, ಹೆಬ್ಬೆರಳಿನ ಗಿಣ್ಣನ್ನು ಅಗಲಿಸಿ ಬಲಗೈಯ ಕಿರುಬೆರಳಿನ ತುದಿಯನ್ನು ಅದರ ತುದಿಗೆ ಸೇರಿಸಬೇಕು. ಇದಕ್ಕೆ **ಅರ್ಧಯೋನಿಮುದ್ರೆ** ಎಂದು ಹೆಸರು.

ಮಹಾಯೋನಿಮುದ್ರೆಯ ಲಕ್ಷಣವು ಉತ್ತಮವಾದ ವೈಷ್ಣವೀತಂತ್ರದಲ್ಲಿ ಹೇಳಲ್ಪಟ್ಟಿರುವುದು.

೫೮-೫೯. ಸಂಪುಟಮುದ್ರೆಯನ್ನಾಗಲೀ, ಪ್ರಾಂಜಲಿಮುದ್ರೆಯನ್ನಾಗಲೀ ರಚಿಸಿ, ಅದನ್ನು ಶಿರಸ್ಸಿನಲ್ಲಿ ಸ್ಪರ್ಶಮಾಡಿ ತೋರಿಸಿದರೆ, ಅದು **ವಂದನೀಯಾ** ಎಂಬ ಮುದ್ರೆಯಾಗುವುದು. ಇದು ವಿಷ್ಣುವಿಗೆ ಸಂತೋಷವನ್ನುಂಟುಮಾಡುವುದು. ಮೇಲೆ ಹೇಳಿದ ಮುದ್ರೆಯನ್ನೇ ಕಿವಿಯನ್ನು ಸ್ಪರ್ಶಮಾಡಿದರೆ, ಅದು **ಮಹಾಮುದ್ರಾ** ಎನಿಸುವುದು.

ದಕ್ಷಿಣಾಂಗೇ ತು ಸಾ ಸಕ್ತಾ ವೈಷ್ಣವೀ ಪರಿಕೀರ್ತಿತಾ ।
ಮಹಾಯೋನಿಸ್ತು ಕಥಿತಾ ವೈಷ್ಣವೀತಂತ್ರಗೋಚರೇ ॥ ೬೦ ॥

ದ್ವಯೋಸ್ತು ಮೂಲೇಂಗುಷ್ಠಾಗ್ರಮಂಗುಲೀಂ ಚ ಕನಿಷ್ಠಯೋಃ ।
ನಿಯೋಜ್ಯ ಪ್ರಸೃತೀಕೃತ್ಯ ದ್ವೌ ಪಾಣೀ ಯೋಜಯೇತ್ಪುನಃ ॥ ೬೧ ॥

ಭಗಮುದ್ರಾ ಸಮಾಖ್ಯಾತಾ ಲಕ್ಷ್ಮೀವಾಣೀಶಿವಪ್ರಿಯಾ ।
ಸರ್ವಾಂಗುಲೀನಾಮಗ್ರೈಘಂ ದಕ್ಷಿಣಸ್ಯ ಕರಸ್ಯ ಚ ॥ ೬೨ ॥

ಸಂಯೋಜ್ಯೈಕತ್ರ ಪುರತೋ ನಿರ್ದೇಶಃ ಪುಟಕಃ ಸ್ಮೃತಃ ।
ಕನಿಷ್ಠಾನಾಮಿಕಾಂಗುಷ್ಠಾಂಗುಲೀನಾಂ ಯೋಜಯೇದ್ಬುಧಃ ॥ ೬೩ ॥

ಅಗ್ರಾಣ್ಯೇಕತ್ರ ಮಧ್ಯಾಂ ತು ತರ್ಜನೀಂ ಚ ಪ್ರಸಾರ್ಯ ವೈ ।
ಕುಬ್ಜೀಕೃತ್ಯ ಕರದ್ವಂದ್ವಂ ಪೃಥಗಗ್ರೇ ನಿದರ್ಶಯೇತ್ ॥ ೬೪ ॥

---

೬೦. ಆ ಮುದ್ರೆಯು ಅಂಗದ ಬಲಭಾಗದಲ್ಲಿ ಸೇರಿಸಲ್ಪಟ್ಟರೆ **ಮಹಾಯೋನಿ ಮುದ್ರೆ** ಎಂದು ವೈಷ್ಣವೀತಂತ್ರದಲ್ಲಿ ಹೇಳಲ್ಪಟ್ಟಿರುವುದು.

೬೧. ಎರಡು ಕೈಗಳ ಬುಡದಲ್ಲಿ ಹೆಬ್ಬೆರಳು ಮತ್ತು ಕಿರುಬೆರಳಿನ ತುದಿಗಳನ್ನು ಸೇರಿಸಿ ಅಗಲಿಸಿ, ಬಳಿಕ ಎರಡು ಕೈಗಳನ್ನೂ ಒಂದಕ್ಕೊಂದು ಸೇರಿಸಿದರೆ, ಅದು **ಭಗಮುದ್ರೆಯಾಗುವುದು.** ಈ ಮುದ್ರೆಯು ಲಕ್ಷ್ಮೀ, ಸರಸ್ವತೀ, ಶಿವ ಇವರುಗಳಿಗೆ ಪ್ರೀತಿದಾಯಕವು.

೬೨. ಬಲಗೈಯ ಎಲ್ಲ ಬೆರಳುಗಳ ತುದಿಗಳೆಲ್ಲವನ್ನೂ ಒಂದೆಡೆಯಲ್ಲಿ ಸೇರಿಸಿ ಮುಂದಕ್ಕೆ ಚಾಚಿ ನಿರ್ದೇಶಿಸಿದರೆ ಅದು **ಪುಟಕಮುದ್ರೆಯು.**

೬೩-೬೪. ಕಿರುಬೆರಳು, ಅನಾಮಿಕಾ, ಹೆಬ್ಬೆರಳು ಇವುಗಳ ತುದಿಗಳನ್ನು ಒಂದೆಡೆಯಲ್ಲಿ ಒಟ್ಟಾಗಿ ಸೇರಿಸಿ, ಮಧ್ಯದ ಬೆರಳನ್ನು ಅಗಲಿಸಿ, ಎರಡು ಕೈಗಳನ್ನೂ ಸಂಯೋಜಿಸಿ ಮುಂದಕ್ಕೆ ನಿರ್ದೇಶಿಸಿದರೆ, ಅದು **ನಿಃಸಂಗ**ವೆಂಬ ಮುದ್ರೆಯು. ಇದು ನರಸಿಂಹಪರಾಕ್ರಮೋರ್ಜಿತಗಳಿಗೆ ಪ್ರಿಯದಾಯಕವಾಗಿದೆ.

ನಿಃಸಂಗನಾಮು ಮುದ್ರೇಯಂ ನರಸಿಂಹವರಾಹಯೋಃ ।
ಕನಿಷ್ಠಾನಾಮಿಕಾಮಧ್ಯಮಾಕುಂಚನ್ ದಕ್ಷಿಣೇನ ತು ॥ ೬೫ ॥

ಕರಸ್ಯ ತರ್ಜನ್ಯಂಗುಷ್ಠೇ ಪ್ರಸಾರ್ಯ ಕ್ರಿಯತೇ ತು ಯಾ ।
ಸಾ ಮುದ್ರಾ ಹ್ಯರ್ಧಚಂದ್ರಾಖ್ಯಾ ಗ್ರಹಾಣಾಂ ಪ್ರೀತಿದಾಯನೀ ॥ ೬೬ ॥

ಊರ್ಧ್ವೀಕೃತ್ಯ ತಥಾಂಗುಷ್ಠಂ ಕರಸ್ಯ ದಕ್ಷಿಣಸ್ಯ ತು ।
ಕೃತ್ವಾ ಮಧ್ಯಾಂ ತದಂಗುಷ್ಠಂ ವಾಮಮುಷ್ಟಿಂ ತಥೋರ್ಧ್ವತಃ ॥ ೬೭ ॥

ಊರ್ಧ್ವಾಂಗುಷ್ಠಂ ತಥಾ ಕುರ್ಯಾದಂಗಮುದ್ರಾ ಪ್ರಕೀರ್ತಿತಾ ।
ಏತಸ್ಯಾ ಏವ ಮುದ್ರಾಯಾಃ ಕನಿಷ್ಠಾದಿನಿಯೋಗತಃ ॥ ೬೮ ॥

ಅಷ್ಟೌ ಮುದ್ರಾಃ ಸಮಾಖ್ಯಾತಾ ನಾಮು ತಾಸಾಂ ಪೃಥಕ್ ಶೃಣು ।
ದ್ವಿಮುಖಂ ಚೈವ ಮುಷ್ಟಿಂ ಚ ವಜ್ರಮಾಬದ್ಧಮೇವ ಚ ॥ ೬೯ ॥

ವಿಮಲಶ್ಚ ಘಟಶ್ಚೈವ ತುಂಗಃ ಪುಂಡ್ರಸ್ತಥೈವ ಚ ।
ನವಾನಾಂ ವಿಷ್ಣುಮೂರ್ತೀನಾಂ ಸಾರ್ಧಮಂಗೇನ ಮುದ್ರಿಕಾಃ ॥ ೭೦ ॥

೬೫-೬೬. ಬಲಗೈಯ ಕಿರುಬೆರಳು, ಅನಾಮಿಕಾ ಮತ್ತು ಮಧ್ಯದ ಕಿರುಬೆರಳುಗಳನ್ನು ಬಗ್ಗಿಸಿ, ತರ್ಜನೀ ಮತ್ತು ಹೆಬ್ಬೆರಳುಗಳನ್ನು ಅಗಲಿಸಿದರೆ ಅದು **ಅರ್ಧಚಂದ್ರ** ವೆಂಬ ಮುದ್ರೆಯು. ಇದು ನವಗ್ರಹಗಳಿಗೆ ಪ್ರೀತಿದಾಯಕವಾದುದು.

೬೭.ಬ ಎಡಗೈಯ ಹೆಬ್ಬೆರಳನ್ನು ಮೇಲಕ್ಕೆತ್ತಿ ಅದನ್ನು ಮಧ್ಯದಲ್ಲಿ ನಿಲ್ಲಿಸಿ, ಎಡಗೈ ಮುಷ್ಟಿಯನ್ನೂ ಅದರಂತೆ ಮಾಡಿ ಹೆಬ್ಬೆರಳನ್ನು ಮೇಲಕ್ಕೆತ್ತಿದರೆ ಅವಕ್ಕೆ **ಅಂಗಮುದ್ರೆ**ಯೆಂದು ಹೆಸರು.

೬೮-೬೯. ಈ ಮುದ್ರೆಯಲ್ಲಿ ಕಿರುಬೆರಳೇ ಮೊದಲಾದ ಒಂದೊಂದು ಬೆರಳನ್ನು ಒಂದೊಂದು ಮುದ್ರೆಯಲ್ಲಿ ಬೇರೆಬೇರೆಯಾಗಿ ಉಪಯೋಗಿಸಿದರೆ ಎಂಟು ಪ್ರಭೇದಗಳಾಗುವುವು. ಅವುಗಳಿಗೆ **ದ್ವಿಮುಖ, ಮುಷ್ಟಿ, ವಜ್ರ, ಆಬದ್ಧ, ವಿಮಲ, ಘಟ, ತುಂಗ, ಪುಂಡ್ರ** ಎಂದು ಹೆಸರು.

೭೦. ಒಂಭತ್ತು ವಿಷ್ಣು ಮೂರ್ತಿಗಳಿಗೂ, ಅವರ ಪತ್ನಿಯರಿಗೂ, **ಅಂಗಮುದ್ರೆ** ಮತ್ತು ಮೇಲೆ ಹೇಳಿದ ಎಂಟು ಮುದ್ರೆಗಳೂ ಸೇರಿ ಆಗುವ ಒಂಭತ್ತು ಮುದ್ರೆಗಳು ಕ್ರಮವಾಗಿ ಉಪಯೋಗಿಸಲ್ಪಡುವವು.

ಕ್ರಮಾನ್ನವ ಸಮಾಖ್ಯಾತಾ ನಾಯಿಕಾನಾಂ ತಥೈವ ಚ ।
ಸಂಯೋಜ್ಯ ಕರಯೋಃ ಪೃಷ್ಠೇ ತಥಾವರ್ತ್ಯ ತು ವೈ ಸಮುಂ ॥ ೭೧ ॥

ಪ್ರಸಾರ್ಯ ತರ್ಜನೀಯುಗ್ಮಂ ಸಂಯುಕ್ತಂ ಸರ್ವತಃ ಪುನಃ ।
ಅಂಗುಷ್ಠೌ ಚ ತಥಾಸಕ್ತೌ ಶಂಖಮುದ್ರಾ ಪ್ರಕೀರ್ತಿತಾ ॥ ೭೨ ॥

ಉತ್ತಾನಮಂಜಲಿಂ ಕೃತ್ವಾ ಅಂಗುಷ್ಠೇ ದ್ವೇ ಕನಿಷ್ಠಯೋಃ ।
ಮೂಲೇ ನಿಃಕ್ಷಿಪ್ಯ ತು ಕರೌ ಸಂಯೋಜ್ಯಾಥ ಪ್ರದರ್ಶಯೇತ್ ॥ ೭೩ ॥

ಸಾ ಯೋನಿರಿತಿ ವಿಖ್ಯಾತಾ ಮುದ್ರಾ ದೇವೌಘತುಷ್ಟಿದಾ ।
ಮುಷ್ಟಿರ್ದಕ್ಷಿಣಹಸ್ತಸ್ಯ ಯದೋರ್ಧ್ವಾಂಗುಷ್ಠಿಕಾ ಭವೇತ್ ॥ ೭೪ ॥

ಸಾ ಸ್ಯಾಚ್ಛಿಖರಿಣೀ ಮುದ್ರಾ ಬ್ರಹ್ಮಸೂರ್ಯಪ್ರಿಯಾ ಚ ಸಾ ।
ಅನಾಮಿಕೇ ಕನಿಷ್ಠೇ ಚ ಸಂಯೋಜ್ಯ ವಾಯುನಾ ಪುನಃ ॥ ೭೫ ॥

ಮಧ್ಯಮಾತರ್ಜನೀನಾಂ ತು ಧೇನುಮುದ್ರೇವ ಬಂಧನಂ ।
ಸಾರ್ಧಧೇನುರಿತಿ ಖ್ಯಾತಾ ಚಂದ್ರಪ್ರೀತಿವಿವರ್ಧಿನೀ ॥ ೭೬ ॥

೭೧-೭೨. ಎರಡು ಕೈಗಳನ್ನೂ ಒಂದಕ್ಕೊಂದು ದುಂಡಾಗಿ ಸೇರಿಸಿ, ತರ್ಜನೀ ಬೆರಳುಗಳನ್ನೂ ಒಟ್ಟಾಗಿ ತಗಲುವಂತೆ ಸೇರಿಸಿ, ಅನಂತರ ಹಾಗೆ ಒಟ್ಟಾಗಿ ಕೂಡಿರುವ ಬೆರಳುಗಳನ್ನು ಕೈಯಿಂದ ವಿರಳವಾಗಿ ಅಗಲಿಸಿ, ಅದರಂತೆ ಹೆಬ್ಬೆರಳುಗಳನ್ನೂ ಮಾಡಿದರೆ **ಶಂಖಮುದ್ರೆ**ಯಾಗುವುದು.

೭೩. ಅಂಜಲಿಯನ್ನು ಮಾಡಿ ಮೇಲಕ್ಕೆತ್ತಿ, ಹೆಬ್ಬೆರಳುಗಳನ್ನು ಕಿರುಬೆರಳುಗಳ ಬುಡದಲ್ಲಿ ಇಟ್ಟು, ಎರಡು ಕೈಗಳನ್ನೂ ಸೇರಿಸಿ ಪ್ರದರ್ಶಿಸಿದರೆ ಅದು **ಸಾಯೋನಿ** ಮುದ್ರೆಯೆಂದು ಹೆಸರು. ಅದು ದೇವತೆಗಳಿಗೆ ಪ್ರೀತಿದಾಯಕವು.

೭೪. ಬಲಗೈಯ ಮುಷ್ಟಿಯನ್ನು ಮಾಡಿ, ಅದರ ಹೆಬ್ಬೆರಳನ್ನು ಮೇಲಕ್ಕೆ ಎತ್ತಿದರೆ ಅದು **ಶಿಖರಣೀ** ಮುದ್ರೆಯಾಗುವುದು. ಆ ಮುದ್ರೆಯು ಬ್ರಹ್ಮನಿಗೂ ಸೂರ್ಯನಿಗೂ ಪ್ರಿಯವಾದುದು.

೭೫-೭೬. ಧೇನುಮುದ್ರೆಯಂತೆ, ಅನಾಮಿಕಾ ಮತ್ತು ಕಿರುಬೆರಳನ್ನೂ ಹಾಗೆಯೇ ಮಧ್ಯಮಾ ಮತ್ತು ತರ್ಜನೀ ಬೆರಳುಗಳನ್ನೂ ಬಂಧಿಸಿದರೆ ಆ ಮುದ್ರೆಗೆ **ಅರ್ಧಧೇನುಮುದ್ರೆ**ಯೆಂದು ಹೆಸರು. ಅದು ಚಂದ್ರನಿಗೆ ಪ್ರೀತಿಯನ್ನುಂಟು ಮಾಡುವುದು.

ಕರಯೋರಂಗುಲೀನಾಂ ತು ಸರ್ವಾಗ್ರಾಣ್ಯೇಕತಃ ಸ್ಥಿತಾ ।
ನಿಯೋಜ್ಯ ದ್ವೇ ತಲೇ ಚೈವ ತದಧೋಽಪಿ ನಿಯೋಜ್ಯ ಚ ॥ ೭೭ ॥

ಅಗ್ರೈರಗ್ರೈರ್ಯೋಜಯೇತ್ತು ಮುದ್ರಾ ಸಂಮಿಶ್ರಿಣೀ ತು ಸಾ ।
ಭೌಮಭೂಮಿಮುನೀಶಾನಾಮಿಯಂ ಪ್ರೀತಿವಿವರ್ಧಿನೀ ॥ ೭೮ ॥

ಸರ್ವಾಂಗುಲೀಸ್ತು ಸಂಯೋಜ್ಯ ದಕ್ಷಿಣಸ್ಯ ಕರಸ್ಯ ಚ ।
ಕಿಯದ್ಭಾಗಂ ತಥಾನಮ್ಯ ತಲಂ ಕುರ್ಯಾತ್ತು ಕುಂಡವತ್ ॥ ೭೯ ॥

ಸಮಾಖ್ಯಾತಾ ಕುಂಡಮುದ್ರಾ ಬುಧವಾಣೀಶಿವಪ್ರಿಯಾ ।
ಸರ್ವಾಂಗುಲೀನಾಂ ಮಧ್ಯಂ ತು ವಾಮಹಸ್ತಸ್ಯ ಚಾಂಗುಲೀಃ ॥ ೮೦ ॥

ಪ್ರಸಾರ್ಯಾಂಗುಷ್ಠಯುಗಲಂ ಸಂಯೋಜ್ಯಾಗ್ರೇಣ ಭೈರವ ।
ತದಂಗುಷ್ಠದ್ವಯಂ ಕಾರ್ಯಂ ಸಂಮುಖಂ ವಿತರೇತ್ತತಃ ॥ ೮೧ ॥

ಚಕ್ರಮುದ್ರಾ ಸಮಾಖ್ಯಾತಾ ಗುರುವಿಷ್ಣುಶಿವಪ್ರಿಯಾ ।
ಅಂಗುಷ್ಠಂ ಮಧ್ಯಮಾಂ ಚೈವ ನಾಮಯಿತ್ವಾ ಕರಸ್ಯ ತು ॥ ೮೨ ॥

೭೭-೭೮. ಎರಡು ಕೈಗಳ ಎಲ್ಲ ಬೆರಳುಗಳ ತುದಿಗಳನ್ನೂ ಒಟ್ಟಾಗಿ ಸೇರಿಸಿ, ಅಂಗೈಗಳನ್ನೂ ಒಂದಕ್ಕೊಂದು ಸ್ಪರ್ಶಮಾಡುವಂತೆ ಸೇರಿಸಿ ಬೆರಳುಗಳ ಒಂದರ ತುದಿಯು ಮತ್ತೊಂದು ಕೈಯ ಬೆರಳಿನ ತುದಿಗೆ ಸೇರಿಸಿದರೆ **ಸಂಮಿಶ್ರಿಣೀ** ಮುದ್ರೆಯಾಗುವುದು. ಇದು ಅಂಗಾರಕ, ಭೂಮಿ, ಬೃಹಸ್ಪತಿಗಳಿಗೆ ಪ್ರೀತಿದಾಯಕವು.

೭೯. ಬಲಗೈಯ ಬೆರಳುಗಳೆಲ್ಲವನ್ನೂ ಸೇರಿಸಿ ಅಂಗೈಯ ಸ್ವಲ್ಪಭಾಗವನ್ನು ಹಳ್ಳವಾಗುವಂತೆ ಕುಂಡಾಕಾರವಾಗಿ ಬಗ್ಗಿಸಿದರೆ ಅದು **ಕುಂಡಮುದ್ರೆ**ಯಾಗುವುದು. ಇದು ಬುಧನಿಗೂ, ಸರಸ್ವತಿಗೂ. ಶಿವನಿಗೂ ಪ್ರಿಯವಾದುದು.

೮೦-೮೧. ಎಲೈ ಭೈರವನೇ ಕೇಳು:—ಎರಡು ಕೈಗಳ ಬೆರಳುಗಳೆಲ್ಲವನ್ನೂ ಒಂದರಮಧ್ಯವಲ್ಲಿಂದಾಗಿ ಸೇರಿಸಿ, ವಿರಳಮಾಡಿ, ಹೆಬ್ಬೆರಳನ್ನೂ ತುದಿಯಲ್ಲಿ ಒಂದಕ್ಕೊಂದುಸೇರಿಸಿ ದೇವರ ಅಭಿಮುಖವಾಗಿ ಹಿಡಿದರೆ, **ಚಕ್ರಮುದ್ರೆ**ಯಾಗುವುದು. ಈ ಮುದ್ರೆಯು ಗುರು, ವಿಷ್ಣು, ಶಿವ ಇವರಿಗೆ ಪ್ರೀತಿಕರವು.

೮೨-೮೪. ಬಲಗೈಯ ಹೆಬ್ಬೆರಳು, ಮಧ್ಯದ ಬೆರಳು, ಅನಾಮಿಕೆ ಬೆರಳು ಇವುಗಳನ್ನು ಕ್ರಮವಾಗಿ ಎಡಗೈಯ ಅದೇವಿಧವಾದ ಬೆರಳುಗಳ ತುದಿಗೆ ಸೇರಿಸಿದರೆ

ದಕ್ಷಿಣಸ್ಯ ಪರಾಸ್ತಿಸ್ರೋ ಯೋಜಯೇದಗ್ರತಃ ಪುನಃ ।
ಶೂಲನಮುದ್ರಾ ಸಮಾಖ್ಯಾತಾ ಮನು ಶುಕ್ರಗುಹಪ್ರಿಯಾ ॥ ೮೩ ॥

ನಿಕುಬ್ಜೀಕೃತ್ಯ ತು ಕರೌ ವಾಮಾಂಗುಲಿಗಣಸ್ಯ ತು ।
ಅಗ್ರಾಣಿ ಯೋಜಯೇನ್ಮಧ್ಯೇ ತಲಸ್ಯಾಸವ್ಯಹಸ್ತತಃ ॥ ೮೪ ॥

ಅಧಃಕೃತ್ವಾ ವಾಮಹಸ್ತಂ ಮುದ್ರಾ ಸಿಂಹಮುಖೀ ಸ್ಮೃತಾ ।
ಇಯಂ ಪ್ರೀತ್ಯೈ ತು ದುರ್ಗಾಯಾಃ ಸೂರ್ಯಪುತ್ರಸ್ಯ ಚಕ್ರಿಣಃ ॥ ೮೫ ॥

ಭಗಮುದ್ರಾ ಕರ್ಣಮೂಲೇ ಗೋಮುಖಾಖ್ಯಾ ಪ್ರಕೀರ್ತಿತಾ ।
ಮನು ವಿಷ್ಣೋಸ್ತಥಾ ರಾಹೋಸ್ಸರ್ವದಾ ಪ್ರೀತಿದಾಯಿನೀ ॥ ೮೬ ॥

ಮುಷ್ಟಿದ್ವಯಮುಭೋತ್ತಾನಂ ಕೃತ್ವಾ ಸಂಯೋಜ್ಯ ಪಾರ್ಶ್ವತಃ ।
ದಕ್ಷಿಣಸ್ಯ ಕನಿಷ್ಠಾದೀನ್ ಪ್ರಸಾರ್ಯ ಕ್ರಮತಃ ಪುನಃ ॥ ೮೭ ॥

ತಥಾ ವಾಮಕನಿಷ್ಠಾಭ್ಯಾಮೇಕೈಕೇನ ಪ್ರಸಾರಯೇತ್ ।
ಅಷ್ಟೌ ಮುದ್ರಾಃ ಸಮಾಖ್ಯಾತಾ ನಾಮತಃ ಕ್ರಮತಃ ಶೃಣು ॥ ೮೮ ॥

ಶೂಲಮುದ್ರೆಯೆಂದು ಹೆಸರಾಗುವುದು. ಇದು ನನಗೂ, ಶುಕ್ರ ಗುಹ ಇವರುಗಳಿಗೂ ಪ್ರಿಯವಾದುದು.

೮೪ ೮೫. ಎಡಗೈಯ ಬೆರಳುಗಳ ತುದಿಗಳನ್ನು ಮಡಿಸಿ ಬಲ ಅಂಗೈಯ ಮಧ್ಯದಲ್ಲಿ ಸೇರಿಸಿ, ಎಡಗೈಯನ್ನು ಕೆಳಗಾಗುವಂತೆ ಮಾಡಿದರೆ **ಸಿಂಹಮುಖೀ** ಎಂಬ ಮುದ್ರೆಯಾಗುವುದು. ಇದು ದುರ್ಗಾದೇವಿಗೂ, ಬುಧನಿಗೂ ವಿಷ್ಣುವಿಗೂ ಪ್ರೀತಿಪಾತ್ರವಾದುದು.

೮೬. ಭಗಮುದ್ರೆಯನ್ನು ರಚಿಸಿ ಕಿವಿಯ ಬುಡದಲ್ಲಿ ಇಟ್ಟರೆ ಅದು **ಗೋಮುಖ** ಮುದ್ರೆಯು. ಇದು ನನಗೂ, ವಿಷ್ಣುವಿಗೂ, ರಾಹುವಿಗೂ ಯಾವಾಗಲೂ ಪ್ರೀತಿದಾಯಕವು.

೮೭-೮೮. ಎರಡು ಕೈಗಳ ಮುಷ್ಟಿಗಳನ್ನು ಮಾಡಿ ಮೇಲಕ್ಕೆತ್ತಿ ಮುಷ್ಟಿಗಳನ್ನು ಪಕ್ಕದಲ್ಲಿ ತಗಲುವಂತೆಸೇರಿಸಿ ಬಲಗೈಯ ಕಿರುಬೆರಳಿಂದ ಪ್ರಾರಂಭಮಾಡಿ ಒಂದೊಂದು

ಪ್ರೋಲ್ಲಾಸೋನ್ನಮನಂ ಚೈವ ಬಿಂಬಂ ಪಾಶುಪತಂ ತಥಾ ।
ಶುದ್ಧಂ ತ್ಯಾಗಃ ಸಾರಣೀ ಚ ತಥಾ ಚೈವ ಪ್ರಸಾರಿಣೀ ॥ ೮೯ ॥

ಆಕುಂಚ್ಯ ಕರಶಾಖಾಸ್ತು ದಕ್ಷಿಣಾ ಸಾ ತು ಮುದ್ರಿಕಾ ।
ಉಗ್ರಮುದ್ರಾ ಸಮಾಖ್ಯಾತಾ ಸ್ವಹಸ್ತಸ್ಯ ವಿಪರ್ಯಯಾತ್ ॥ ೯೦ ॥

ಇಂದ್ರಾದಿಲೋಕಪಾಲಾನಾಂ ದಶಮುದ್ರಾಃ ಪ್ರಕೀರ್ತಿತಾಃ ।
ಸರ್ವೇಷಾಮೇವ ದೇವಾನಾಂ ಪರಮಪ್ರೀತಿವರ್ಧನಾಃ ॥ ೯೧ ॥

ಅಂಗುಷ್ಠಾಗ್ರಂ ತು ತರ್ಜನ್ಯಾ ಅಗ್ರೇ ಭಾಗೇನ ಯೋಜಯೇತ್ ।
ಆಕುಂಚ್ಯ ಮಧ್ಯಮಾದ್ಯಾಸ್ತು ದಕ್ಷಹಸ್ತಸ್ಯ ಚಾಂಗುಲೀಃ ॥ ೯೨ ॥

ದರ್ಶಯೇತ್ಕುಂಡಲಾಕಾರಂ ಕುಂಡಲೀಶಕ್ತಿತುಷ್ಟಿದಂ ।
ಸರ್ವೇಷಾಮಪಿ ದೇವಾನಾಂ ಯಥಾ ತುಷ್ಟಿಕರಂ ಮಹತ್ ॥ ೯೩ ॥

ಬೆರಳನ್ನು ವಿರಳಮಾಡಿದರೆ ಈ ಕೆಳಗಿನ ಮುದ್ರೆಗಳಾಗುವವು. ಒಂದೊಂದು ಮುದ್ರೆಯಲ್ಲಿ ಒಂದೊಂದು ಬೆರಳಿನಂತೆ ತೆಗೆಯುತ್ತಾ (ಅಗಲಿಸುತ್ತಾ) ಹೋಗಬೇಕು. ಹೇಗೆಂದರೆ ಪ್ರೋಲ್ಲಾಸ, ಮುದ್ರೆಯಲ್ಲಿ ಕಿರುಬೆರಳನ್ನೂ, ಉನ್ನಮನ ಮುದ್ರೆಯಲ್ಲಿ ಕಿರುಬೆರಳು ಮತ್ತು ಅನಾಮಿಕೆಗಳನ್ನೂ, ಬಿಂಬದಲ್ಲಿ ಕಿರುಬೆರಳು, ಅನಾಮಿಕೆ, ಮಧ್ಯ ಬೆರಳುಗಳನ್ನೂ, ಪ್ರಸಾರಮಾಡಬೇಕು. ಹೀಗೆಯೇ ಒಂದೊಂದು ಬೆರಳಂತೆ ಹೆಚ್ಚಿಸುತ್ತಾ ಹೋಗಬೇಕು. ಇವರಿಂದಾಗುವ ಎಂಟು ಮುದ್ರೆಗಳಾವುವೆಂದರೆ:— **ಪ್ರೋಲ್ಲಾಸ, ಉನ್ನಮನ, ಬಿಂಬ, ಪಾಶುಪತ, ಶುದ್ಧ, ತ್ಯಾಗ, ಸಾರಣೀ,** ಮತ್ತು **ಪ್ರಸಾರಣೀ.**

೮೦-೮೧. ಎಡಗೈಗಳ ಹತ್ತು ಬೆರಳುಗಳಲ್ಲಿ ಒಂದೊಂದು ಮುದ್ರೆಯಲ್ಲಿ ಒಂದೊಂದು ಬೆರಳನ್ನು ಮಡಿಸುತ್ತಾ ಹೋದರೆ, ಒಟ್ಟು ಹತ್ತು ಮುದ್ರೆಗಳಾಗುವುವು. ಇವುಗಳಿಗೆ **ಉಗ್ರಮುದ್ರೆ**ಗಳೆಂದು ಹೆಸರು. ಇವು ಇಂದ್ರಾದಿಲೋಕಪಾಲಕರಿಗೂ, ಸಮಸ್ತ ದೇವತೆಗಳಿಗೂ ಪ್ರೀತಿಯನ್ನುಂಟುಮಾಡುವಂತಹವು.

೮೨-೮೩. ಹೆಬ್ಬೆರಳಿನ ತುದಿಯನ್ನು ತರ್ಜನೀ ಬೆರಳಿನತುದಿಗೆ ಸೇರಿಸಿ, ಬಲಗೈಯ ಮಧ್ಯದಬೆರಳು ಮೊದಲಾದ ಬೆರಳುಗಳನ್ನು ಕುಂಡಲಾಕಾರವಾಗಿ ಮಡಿಸಿದರೆ ಅದು **ಕುಂಡಲೀ** ಮುದ್ರೆಯಾಗುವುದು. ಈ ಮುದ್ರೆಯು ಶಕ್ತಿದೇವಿಗೂ, ದೇವತೆಗಳಿಗೂ ಪ್ರೀತಿಯನ್ನುಂಟುಮಾಡುವುದು.

ಅಂಗುಷ್ಠತರ್ಜನೀಮಧ್ಯಾ ಅಗ್ರಭಾಗೇ ನಿಯೋಜ್ಯ ಚ ।
ಮಧ್ಯಮಾಂ ಚ ಕನಿಷ್ಠಾಂ ಚ ಆಕುಂಚ್ಯ ದಕ್ಷಿಣೇ ಕರೇ ॥ ೯೪ ॥

ತ್ರಿಮುಖಾಖ್ಯಾ ಸಮಾಖ್ಯಾತಾ ವಿಶ್ವದೇವಪ್ರಿಯಾ ಸದಾ ।
ಕೇತೋಃ ಪ್ರಿಯೇಯಂ ಸತತಂ ಮಾತೃಣಾಮಪಿ ತುಷ್ಟಿದಾ ॥ ೯೫ ॥

ತರ್ಜನ್ಯಂಗುಷ್ಠಯೋರಗ್ರಭಾಗೌ ಸಂಯೋಜ್ಯ ಚಾಂಗುಲೀಃ ।
ಅನ್ಯಾ ಆಕುಂಚಯೇತ್ತಿಸ್ರಃ ಸಾಽಸಿವಲ್ಲೀ ಪ್ರಕೀರ್ತಿತಾ ॥ ೯೬ ॥

ಪಿತೃಣಾಮಥ ಸಾಧ್ಯಾನಾಂ ರುದ್ರಾಣಾಂ ವಿಶ್ವಕರ್ಮಣಃ ।
ಸರ್ವದಾ ಪ್ರೀತಿಜನನೀ ಸಾಸಿವಲ್ಲೀ ಪ್ರಕೀರ್ತಿತಾ ॥ ೯೭ ॥

ಪಾದೌ ತಲಾಭ್ಯಾಂ ಸಂಯೋಜ್ಯ ತದಂಗುಷ್ಠದ್ವಯಂ ತತಃ ।
ಊರ್ಧ್ವಂ ಸಂಯೋಜಯೇನ್ನಾಭೌ ತಸ್ಯೋಪರಿ ತಥಾಂಜಲಿಃ ॥ ೯೮ ॥

ಯೋಗಮುದ್ರಾ ಸಮಾಖ್ಯಾತಾ ಯೋಗಿನಾಂ ತತ್ತ್ವದಾಯಿನೀ ।
ಸರ್ವೇಷಾಮಪಿ ದೇವಾನಾಂ ಪೂಜನೇ ಚಿಂತನೇ ತಥಾ ॥ ೯೯ ॥

೯೪-೯೫. ಎಡಗೈಯ ಹೆಬ್ಬೆರಳು, ತರ್ಜನೀ, ಮಧ್ಯದ ಬೆರಳು ಮತ್ತು ಕಿರುಬೆರಳುಗಳನ್ನು ಬಗ್ಗಿಸಿದರೆ **ತ್ರಿಮುಖ** ಎಂಬ ಮುದ್ರೆಯಾಗುವುದು. ಈ ಮುದ್ರೆಯು ವಿಶ್ವೇದೇವತೆಗಳಿಗೂ, ಕೇತುವಿಗೂ, ಸಪ್ತಮಾತೃಗಳಿಗೂ ಪ್ರೀತಿಕರವಾದುದು.

೯೬-೯೭. ತರ್ಜನೀಬೆರಳು, ಹೆಬ್ಬೆರಳು ಇವುಗಳ ತುದಿಗಳನ್ನು ಸೇರಿಸಿ ಉಳಿದ ಮೂರು ಬೆರಳುಗಳನ್ನು ಬಗ್ಗಿಸಿದಲ್ಲಿ **ಅಸಿವಲ್ಲೀ** ಎಂಬ ಮುದ್ರೆಯಾಗುವುದು. ಇದು ಪಿತೃದೇವತೆಗಳಿಗೂ, ಸಾಧ್ಯರಿಗೂ, ರುದ್ರರಿಗೂ, ವಿಶ್ವಕರ್ಮನಿಗೂ ಪ್ರೀತಿದಾಯಕವು.

೯೮-೯೯. ಎರಡು ಅಂಗಾಲುಗಳನ್ನು ಒಂದಕ್ಕೊಂದು ಸೇರಿಸಿ, ಅವುಗಳ ಹೆಬ್ಬೆರಳುಗಳನ್ನು ಅದರಂತೆಯೇ ಸೇರಿಸಿ ಅವುಗಳು ಮೇಲ್ಮುಖವಾಗಿ ನಾಭಿಪ್ರದೇಶವನ್ನು ಸ್ಪರ್ಶಮಾಡುವಂತೆ ಮಾಡಿ ಬಳಿಕ ಎರಡು ಕೈಗಳಿಂದ ಅಂಜಲಿಯನ್ನು ರಚಿಸಿದರೆ ಅದು **ಯೋಗಮುದ್ರೆ** ಎನಿಸುವುದು. ಈ ಮುದ್ರೆಯು ಯೋಗಿಗಳಿಗೆ ತತ್ತ್ವಜ್ಞಾನವನ್ನುಂಟುಮಾಡುವುದು ಮತ್ತು ದೇವತೆಗಳೆಲ್ಲರ ಧ್ಯಾನಪೂಜೆಗಳಲ್ಲಿ ಉಪಯೋಗಿಸಲ್ಪಡುವುದು.

ಯೋಗಮುದ್ರಾ ಸಮಾಖ್ಯಾತಾ ತುಷ್ಟಿಪ್ರೀತಿಕರೀ ಸದಾ ।
ಪ್ರಾಂಜಲಿರ್ನಾಮ ಮುದ್ರಾ ತು ಊರ್ಧ್ವಾಧೋ ಭಾವಯೋಜಿತಾ ॥ ೧೦೦ ॥

ವಿಭಿದ್ಯ ದರ್ಶಯೇದ್ಧಸ್ತೌ ಊರ್ಧ್ವಾಧಃ ಪ್ರಸೃತೀಕೃತೌ ।
ಭೇದಮುದ್ರಾ ಸಮಾಖ್ಯಾತಾ ಮಮ ವಿಷ್ಣೋರ್ವಿಧೇಃ ಪ್ರಿಯಾ ॥ ೧೦೧ ॥

ಅಂಗುಷ್ಠೇ ದ್ವೇ ತು ನಿಃಕ್ಷಿಪ್ಯ ಕರಯೋರುಭಯೋರಪಿ ।
ಅಗ್ರೇಣ ಯೋಜಯೇತ್ಪಶ್ಚಾತ್ಕನಿಷ್ಠಾಯುಗಲಂ ತತಃ ॥ ೧೦೨ ॥

ಉಭಯೋರ್ಹಸ್ತಯೋಶ್ಚಾನ್ಯಾಸ್ತರ್ಜನ್ಯಾದ್ಯಾಶ್ಚ ಯೋಜಯೇತ್ ।
ಅಗ್ರಾಗ್ರೈಸ್ತು ಪೃಥಕ್ಕೃತ್ಯ ದರ್ಶಯೇತ್ತು ಕನಿಷ್ಠಿಕಾಂ ॥ ೧೦೩ ॥

ಮುದ್ರಾ ಸಂಮೋಹನಂ ನಾಮ ಕಾಮದುರ್ಗಾರಮಾಪ್ರಿಯಾ ।
ಸರ್ವೇಷಾಮಿಹ ದೇವಾನಾಂ ಮೋಹನಂ ಪ್ರೀತಿದಂ ಸ್ಮೃತಂ ॥ ೧೦೪ ॥

ಅನಮ್ಯಾಸವ್ಯಹಸ್ತಸ್ಯ ಮಧ್ಯಮಾನಾಮಿಕೇ ತಥಾ ।
ತಯೋಃ ಪೃಷ್ಠೇಷು ಸಂಯೋಜ್ಯ ಅಂಗುಷ್ಠಾಗ್ರಂ ತತಃಪರಂ ॥ ೧೦೫ ॥

೧೦೦-೧೦೧. ಹಿಂದೆ ಹೇಳಿದ ಪ್ರಾಂಜಲಿ ಎಂಬ ಹೆಸರಿನ ಮುದ್ರೆಯನ್ನು ಭಾವಗರ್ಭಿತವಾಗಿ ಮೇಲಕ್ಕೂ ಕೆಳಕ್ಕೂ ಪ್ರಸಾರಣೆ ಮಾಡಿ ತೋರಿಸಿದರೆ **ಭೇದಮುದ್ರೆ** ಯಾಗುವುದು. ಇದು ನನಗೂ, ವಿಷ್ಣುವಿಗೂ, ಬ್ರಹ್ಮನಿಗೂ ಪ್ರೀತಿ ಕರವಾದುದು.

೧೦೨-೧೦೪. ಎರಡು ಕೈಗಳ ಹೆಬ್ಬೆರಳುಗಳ ತುದಿಗಳನ್ನೂ ಅಂಗೈಯಲ್ಲಿಟ್ಟು ಕಿರುಬೆರಳುಗಳಿಗೆ ಸೇರಿಸಬೇಕು. ಬಳಿಕ ಎರಡು ಹಸ್ತಗಳ ತರ್ಜನಿಯೇ ಮೊದಲಾದ ಇತರ ಬೆರಳುಗಳ ತುದಿಯನ್ನು ಒಂದಕ್ಕೊಂದು ಸೇರಿಸಿ ಬಳಿಕ ಕಿರುಬೆರಳನ್ನು ದೂರವಾಗಿ (ವಿರಳವಾಗಿ) ತೋರಿಸಬೇಕು. ಇದು **ಸಂಮೋಹನಮುದ್ರೆಯು.** ಇದು ಕಾಮ, ದುರ್ಗಾ, ಲಕ್ಷ್ಮಿ ಮೊದಲಾದ ಎಲ್ಲ ದೇವತೆಗಳಿಗೂ ಪ್ರೀತಿಕರವಾದುದು.

೧೦೫-೧೦೬. ಎಡಗೈಯ ಮಧ್ಯಮ ಮತ್ತು ಅನಾಮಿಕಾ ಬೆರಳುಗಳನ್ನು ಬಗ್ಗಿಸಿ, ಅವುಗಳ ಬೊಂಬದಿಯಲ್ಲಿ ಹೆಬ್ಬೆರಳಿನ ತುದಿಯನ್ನು ಇಟ್ಟು, ಬಳಿಕ ಕಿರುಬೆರಳು,

ಕನಿಷ್ಠಾಂ ತರ್ಜನೀಂ ಚೈವ ಅಗ್ರೇಣಾಯೋಜಯೇತ್ತತಃ ।
ಬಾಣಮುದ್ರಾ ಸಮಾಖ್ಯಾತಾ ಸರ್ವದೇವಸ್ಯ ತುಷ್ಟಿದಾ ॥ ೧೦೬ ॥

ಸರ್ವಾಂಗುಲೀಸ್ತು ಸಂಕೋಚ್ಯ ಅಂಗುಷ್ಠಮಥ ತರ್ಜನೀಂ ।
ಪ್ರಸಾರ್ಯ ಕರಯೋಃ ಪಶ್ಚಾದಂಗುಷ್ಠಾಗ್ರಂ ತು ಯೋಜಯೇತ್ ॥ ೧೦೭ ॥

ಅಂಗುಷ್ಠಾಗ್ರೇಣ ತರ್ಜನ್ಯಾ ಅಗ್ರೇಣಾಪಿ ಚ ತರ್ಜನೀಂ ।
ಯಥಾಶಕ್ತಿ ಪ್ರಸಾರ್ಯಾಪಿ ಧೇನುಮುದ್ರಾ ಪ್ರಕೀರ್ತಿತಾ ॥ ೧೦೮ ॥

ಸರ್ವಾಂಗುಲೀನಾಮಗ್ರಾಣಿ ಬ್ರಾಹ್ಮೇ ತೀರ್ಥೇ ನಿಯೋಜಯೇತ್ ।
ಅನಾಮಿಕಾಯಾಃ ಪೃಷ್ಠೇ ತು ಅಂಗುಷ್ಠಾಗ್ರಂ ನಿಯೋಜ್ಯ ಚ ॥ ೧೦೯ ॥

ಶೂನ್ಯಂ ತೂಣೀರವತ್ಕೃತ್ವಾ ತೇಷಾಮಂತಸ್ತು ಭೈರವ ।
ತೂಣೀರಮುದ್ರಾ ಚಾಖ್ಯಾತಾ ಸರ್ವೇಷಾಂ ಪ್ರೀತಿವರ್ಧನೀ ॥ ೧೧೦ ॥

ಮುದ್ರಾಸು ಸಂಸ್ಥಿತಾ ಪೂಜಾ ಮುದ್ರಾಸು ಪರಿಚಿಂತನಂ ।
ಮುದ್ರಾಸು ಸಂಸ್ಥಿತಾ ಯೋಗಾ ಮುದ್ರಾ ಮೋದಕರಾಸ್ತತಃ ॥ ೧೧೧ ॥

ತರ್ಜನೀ ಈ ಬೆರಳುಗಳನ್ನು ಸೇರಿಸಬೇಕು. ಇದು **ಬಾಣಮುದ್ರೆಯು.** ಎಲ್ಲಾ ದೇವತೆಗಳಿಗೂ ಸಂತೋಷವನ್ನುಂಟುಮಾಡುವಂತಹುದು.

೧೦೭-೧೦೮. ಎಲ್ಲ ಬೆರಳುಗಳನ್ನೂ ಮಡಿಸಿ, ಬಳಿಕ ಹೆಬ್ಬೆರಳು ಮತ್ತು ತರ್ಜನಿ ಬೆರಳುಗಳನ್ನು ಅಗಲಿಸಿ, ಬಳಿಕ ಹೆಬ್ಬೆರಳಿನ ತುದಿಯಿಂದ ತರ್ಜನಿ ಬೆರಳನ್ನು ಸೇರಿಸಿ, ಎರಡು ಕೈಗಳನ್ನೂ ಶಕ್ತಿಯಿರುವಮಟ್ಟಿಗೆ ದೂರವಾಗಿ ಎಳೆದು ಪ್ರದರ್ಶಿಸಿದರೆ ಅದು **ಧನುಮುದ್ರೆ**ಯೆಂದು ಹೇಳಲ್ಪಡುವುದು.

೧೦೯-೧೧೦. ಎಲ್ಲ ಬೆರಳುಗಳ ತುದಿಗಳನ್ನೂ ಅಂಗೈ ಹೊರಭಾಗದಲ್ಲಿ ಸೇರಿಸಿ ಅನಾಮಿಕಾಬೆರಳಿನ ಹಿಂಬದಿಯಲ್ಲಿ ಹೆಬ್ಬೆರಳಿನ ತುದಿಯನ್ನು ಇರಿಸಿ ಬತ್ತಳಿಕೆಯಂತೆ ಒಳಗೆ ಟೊಳ್ಳನ್ನು ಮಾಡಿ ಪ್ರದರ್ಶಿಸಿದರೆ ಅದು **ತೂಣೀರಮುದ್ರೆ** ಎನಿಸುವುದು. ಇದು ಎಲ್ಲ ದೇವತೆಗಳಿಗೂ ಪ್ರೀತಿಕರವಾದುದು.

೧೧೧. ಈ ಮುದ್ರೆಗಳಲ್ಲಿಯೇ ಪೂಜೆಯೂ, ಧ್ಯಾನವೂ, ಯೋಗವೂ ಅಡಗಿರುವುದು. ಆದುದರಿಂದ ಮುದ್ರೆಗಳು ಎಲ್ಲರಿಗೂ ಸಂತೋಷವನ್ನುಂಟುಮಾಡುವವು.

ಯದಾ ಯದಾ ಪೂಜನೇಷು ಚಿಂತನೇ ಧ್ಯಾನಕರ್ಮಣಿ ।
ಯಜ್ಞಾದೌ ಸ್ತವನೇ ವಾಪಿ ಹಸ್ತಕೃಚ್ಛ್ರಂ ನ ವಿದ್ಯತೇ ॥ ೧೧೨ ॥

ತದಾ ಮುದ್ರಾನ್ವಿತಂ ಕುರ್ಯಾದಿಷ್ಟಾಪೂರ್ತೇ ಕರದ್ವಯಂ ।
ಯಜ್ಞಕೃತ್ಯೇಷು ಚೇಚ್ಛಕ್ತೋ ಹಸ್ತೋ ಮುದ್ರಾಸು ಚ ಕ್ಷಮಃ ॥ ೧೧೩ ॥

ತದಾ ಮುದ್ರಾಂ ವಿಧಾಯೈವ ತತ್ತತ್ಕೃತ್ಯಂ ಸಮಾಚರೇತ್ ।
ಮುದ್ರಾವಿಮುಕ್ತಹಸ್ತಂ ತು ಕ್ರಿಯತೇ ಕರ್ಮ ದೈವಿಕಂ ॥ ೧೧೪ ॥

ಕೃತ್ವಾ ಯನ್ನಿಷ್ಫಲಂ ಯಸ್ಮಾತ್ತಸ್ಮಾನ್ಮುದ್ರಾನ್ವಿತೋ ಭವೇತ್ ।
ವಿಸರ್ಜನೇ ತು ದೇವಾನಾಂ ಯಸ್ಯ ಯಾ ಪರಿಕೀರ್ತಿತಾ ॥ ೧೧೫ ॥

ಮುದ್ರಾಂ ತಾಂ ಪೂಜನಾದೌ ತು ತಸ್ಯ ಚೈವ ಪ್ರಯೋಜಯೇತ್ ।
ವಿಸೃಜ್ಯೋತ್ಕ್ರಾಮ್ಯತೇ ಮುದ್ರಾಂ ಮುದ್ರಾಯುಕ್ತೈಃ ಸಮಾಚರೇತ್ ॥

---

೧೧೨. ದೇವತೆಗಳನ್ನು ಪೂಜೆಮಾಡುವಾಗಲೂ, ಧ್ಯಾನಮಾಡುವಾಗಲೂ, ಯಜ್ಞಾದಿಕರ್ಮಗಳಲ್ಲಿಯೂ, ಸ್ತೋತ್ರಮಾಡುವಾಗಲೂ, ಹಸ್ತಶುದ್ಧಿಗೋಸ್ಕರ ಎರಡು ಕೈಗಳಿಂದಲೂ ಮುದ್ರಾಪ್ರದರ್ಶನವನ್ನು ಮಾಡಿದರೆ ಇಷ್ಟಾರ್ಥವು ಕೈಗೂಡುವುದು.

೧೧೩. ಯಜ್ಞಮಾಡುವುದರಲ್ಲಿ ಶಕ್ತನಾಗಿದ್ದು ಮುದ್ರೆಗಳನ್ನು ಸೇರಿಸುವುದರಲ್ಲಿಯೂ ಹಸ್ತಕೌಶಲ್ಯವಿದ್ದರೆ, ಆಗ ಅವಶ್ಯವಾಗಿ ಮುದ್ರೆಗಳನ್ನು ಪ್ರದರ್ಶಿಸಿ, ಆಯಾಯ ಕರ್ಮಗಳನ್ನು ನೆರವೇರಿಸಬೇಕು.

೧೧೪. ಹಸ್ತಗಳಿಂದ ಮುದ್ರಾಪ್ರದರ್ಶನವನ್ನು ಮಾಡದೆ ಆಚರಿಸುವ ದೇವತಾಕರ್ಮಗಳು ನಿಷ್ಫಲವಾಗುವುದರಿಂದ, ಮುದ್ರೆಗಳನ್ನು ಉಪಯೋಗಿಸಿಯೇ ಮಾಡಬೇಕು.

೧೧೫-೧೧೬. ದೇವತೆಗಳ ವಿಸರ್ಜನೆಕಾಲದಲ್ಲಿ ಯಾವ ಮುದ್ರೆಯನ್ನು ಉಪಯೋಗಿಸಬೇಕೆಂದು ಹೇಳಿರುವುದೋ, ಅದೇ ಮುದ್ರೆಯನ್ನು ಪೂಜಾಕಾಲದಲ್ಲಿಯೂ ಉಪಯೋಗಿಸಬೇಕು. ವಿಸರ್ಜನೆ ಕಾಲದಲ್ಲಿ ಆಯಾಯ ಕರ್ಮಗಳಿಗೆ ಹೇಳಿರುವ ಮುದ್ರೆಗಳನ್ನು ಉಪಯೋಗಿಸಿ ಕರ್ಮವನ್ನು ಆಚರಿಸಬೇಕು.

ಪೂಜನಾದಿಸಮಸ್ತಂ ತು ಕರ್ಮವೃದ್ಧ್ಯೈ ವಿಚಕ್ಷಣಃ ।
ಆತೋ ಮುದ್ರಾಪರಂ ನಾಮ ಮುದ್ರಾ ಪುಣ್ಯಪ್ರದಾಯಿನೀ ॥ ೧೧೭ ॥

ದೇವಾನಾಂ ಮೋದದಾ ಮುದ್ರಾ ತಸ್ಮಾತ್ತಾಂ ಯತ್ನತಶ್ಚರೇತ್ ।
ಅರ್ಧಯೋನಿರ್ಮಹಾಯೋನಿರ್ಯೋನಿರ್ಬ್ರಾಹ್ಮೀ ಚ ವೈಷ್ಣವೀ ॥೧೧೮॥

ಮುದ್ರಾ ವಿಸರ್ಜನೇ ಪ್ರೋಕ್ತಾ ಶಿವಾತ್ರಿಪುರಯೋಃ ಸದಾ ।
ದುರ್ಗಾಯಾಃ ಸರ್ವರೂಪೇಷು ಮುದ್ರಾ ಏತಾಃ ಪ್ರಕೀರ್ತಿತಾಃ ॥ ೧೧೯ ॥

ಯೋನಿಂ ಚ ಸಂಪುಟಂ ಚೈವ ಮಹಾಯೋನಿಂ ತಥೈವ ಚ ।
ವರ್ಜಯಿತ್ವಾ ವ್ಯಸ್ತಭಾವಾದುಕ್ತಾದನ್ಯತ್ರ ಯೋಜಯೇತ್ ॥ ೧೨೦ ॥

ಭವೇದ್ಯಸ್ತು ತ್ರಿಪಂಚಾಶದನ್ಯಾ ಮುದ್ರಾಃ ಸಮಂತತಃ ।
ತಾ ವ್ಯಸ್ತಭಾವಾದ್ಯಾಮಾಃ ಸ್ಯುರ್ಮುದ್ರಾ ಮೋದಕಾರಾಃ ಪರಾಃ ॥ ೧೨೧ ॥

---

೧೧೭. ಪೂಜೆಯೇ ಮೊದಲಾದ ಸಮಸ್ತ ಕರ್ಮಗಳಲ್ಲಿಯೂ ಆಯಾಯ ಕರ್ಮದ ಅಭಿವೃದ್ಧಿಗಾಗಿ ಬುದ್ಧಿವಂತನಾದವನು ಮುದ್ರೆಗಳನ್ನು ಉಪಯೋಗಿಸಬೇಕು. ಆದುದರಿಂದ ಮುದ್ರೆಗಿಂತ ಪುಣ್ಯಪ್ರದವಾದ ಮತ್ತೊಂದು ಶ್ರೇಷ್ಠ ಸಾಧನವಿಲ್ಲವು.

೧೧೮-೧೧೯. ಮುದ್ರಾಪ್ರದರ್ಶನಗಳು ದೇವತೆಗಳಿಗೆ ಸಂತೋಷವನ್ನುಂಟು ಮಾಡುವುದರಿಂದ ಅವುಗಳನ್ನು ಪೂಜಾಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಆಚರಿಸಬೇಕು. ಅರ್ಧಯೋನಿ, ಮಹಾಯೋನಿ, ಯೋನಿ, ಬ್ರಾಹ್ಮೀ, ವೈಷ್ಣವೀ ಎಂಬ ಮುದ್ರೆಗಳು ಶಿವಾ, ತ್ರಿಪುರಾ ದೇವಿಯರ ವಿಸರ್ಜನೆಕಾಲದಲ್ಲಿಯೂ, ದುರ್ಗಾ ದೇವತೆಯ ಎಲ್ಲ ವಿಧವಾದ ಮೂರ್ತಿಭೇದಗಳ ಪೂಜೆಗಳಲ್ಲಿಯೂ ಉಪಯೋಗಿಸ ಬೇಕೆಂದು ಹೇಳಲ್ಪಟ್ಟಿರುವುದು.

೧೨೦. ಯೋನಿ, ಸಂಪುಟ, ಮಹಾಯೋನಿ ಈ ಮುದ್ರೆಗಳನ್ನೂ, ಅವುಗಳಿಗೆ ಹೇಳಿರುವ ಭಾವವನ್ನೂ ವ್ಯತ್ಯಾಸಮಾಡಿ ಇತರ ಕಡೆಗಳಲ್ಲಿ ಉಪಯೋಗಿಸಬಹುದು.

೧೨೧. ಉಳಿದ ಐವತ್ತುಮೂರು ಮುದ್ರೆಗಳು, ಅವುಗಳ ಭಾವಗಳು ವ್ಯತ್ಯಸ್ತವಾಗಿರುವುದರಿಂದ ಪೂಜೆಗೆ ಪ್ರಶಸ್ತವಲ್ಲವು. ಹಿಂದೆ ಹೇಳಿದ ಐವತ್ತೈದು ಮುದ್ರೆಗಳೇ ಪೂಜಾಯೋಗ್ಯವಾಗಿ ಸಂತೋಷಪ್ರದವಾದವುಗಳು.

ಏವಂ ವಾಂ ಕಥಿತಾ ಮುದ್ರಾಃ ಪೂಜನೇ ಪೂಜ್ಯತುಷ್ಟಿದಾ ।
ಕ್ರಮಸ್ತು ಬಲಿದಾನಸ್ಯ ಶೃಣು ವೇತಾಲ ಭೈರವ ॥ ೧೨೨ ॥

॥ ಇತಿ ಶ್ರೀ ಕಾಲಿಕಾಪುರಾಣೇ ಸಪ್ತತಿತಮೋಽಧ್ಯಾಯಃ ॥

---

೧೨೨. ಎಲೈ ವೇತಾಲಭೈರವರೇ, ಪೂಜೆಮಾಡುವಾಗ ನಿರ್ದಿಷ್ಟದೇವತೆಗಳಿಗೆ ಸಂತೋಷವನ್ನುಂಟುಮಾಡುವ ಮುದ್ರಾದಿಗಳ ಸ್ವರೂಪವನ್ನು ನಿಮಗೆ ಈ ರೀತಿ ವಿವರಿಸಿದ್ದಾಯಿತು. ಬಲಿಪ್ರದಾನದ ಕ್ರಮವನ್ನು ಹೇಳುವೆನು, ಕೇಳಿ.

ಇಲ್ಲಿಗೆ ಶ್ರೀಕಾಲಿಕಾಪುರಾಣದಲ್ಲಿ ಎಪ್ಪತ್ತನೆಯ ಅಧ್ಯಾಯವು ಮುಗಿದುದು.

ಸೂಚನೆ:— ಈ ಅಧ್ಯಾಯದಲ್ಲಿ ಹೇಳಿರುವ ಮುದ್ರೆಗಳ ವಿವರಣೆಯನ್ನು ವಿಶದವಾಗಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಮುದ್ರಾಲಕ್ಷಣವೆಂಬ ಗ್ರಂಥವು ಪ್ರತ್ಯೇಕವಾಗಿ ಅಚ್ಚಾಗುತ್ತಿರುವುದು. ಇದರಲ್ಲಿ ಆಯಾದೇವತೆಗಳ ಪೂಜೆಗಳಲ್ಲಿ ಉಪಯೋಗಿಸುವ ಮುದ್ರೆಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ವಿವರಣೆಯನ್ನು ಕೊಟ್ಟಿರುವುದಲ್ಲದೆ, ಮುದ್ರೆಗಳ ಚಿತ್ರಗಳನ್ನೂ ಕೊಟ್ಟಿರುತ್ತೆ. ಈ ಚಿತ್ರಗಳ ಸಹಾಯದಿಂದ, ಸಾಧಕರು ಮುದ್ರಾಸ್ವರೂಪವನ್ನು ಸುಲಭವಾಗಿ ತಿಳಿಯಬಹುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ಏಕಸಪ್ತತಿತಮೋಽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ಕ್ರಮಸ್ತು ಬಲಿದಾನಸ್ಯ ಸ್ವರೂಪಂ ರುಧಿರಾದಿತಃ ।
ಯಥಾ ಸ್ಯಾತ್ಪ್ರೀತಯೇ ಸಮ್ಯಕ್ತತ್ತ್ವಂ ವಕ್ಷ್ಯಾಮಿ ಪುತ್ರಕೌ ॥ ೧ ॥

ವೈಷ್ಣವೀತಂತ್ರಕಲ್ಪೋಕ್ತಃ ಕ್ರಮಃ ಸರ್ವತ್ರ ಸರ್ವದಾ ।
ಸಾಧಕೈರ್ಬಲಿದಾನಸ್ಯ ಗ್ರಾಹ್ಯಃ ಸರ್ವಸುರಸ್ಯ ಚ ॥ ೨ ॥

ಪಕ್ಷಿಣಃ ಕಚ್ಛಪಾ ಗ್ರಾಹ್ಯಾ ಮತ್ಸ್ಯಾ ನವವಿಧಾ ಮೃಗಾಃ ।
ಮಹಿಷೋ ಗೋಧಿಕಾ ಗಾವಶ್ಛಾಗೋ ಬಭ್ರುಶ್ಚ ಸೂಕರಃ ॥ ೩ ॥

ಎಪ್ಪತ್ತೊಂದನೆಯ ಅಧ್ಯಾಯವು.

೧. ಭಗವಾನ್ ಶಂಕರನು ಹೇಳಲುಪಕ್ರಮಿಸಿದನು—ಎಲೈ ಪುತ್ರರೇ, ದೇವಿಗೆ ಪ್ರೀತಿಯನ್ನುಂಟುಮಾಡುವ ರಕ್ತವೇ ಮೊದಲಾದ ಬಲಿಪ್ರದಾನದ ಸ್ವರೂಪವನ್ನೂ, ಕ್ರಮವನ್ನೂ ಚನ್ನಾಗಿ ವಿವರಿಸುವೆನು.

೨. ಈ ಬಲಿಪ್ರದಾನವಿಚಾರದಲ್ಲಿ ವೈಷ್ಣವೀತಂತ್ರದಲ್ಲಿ ಹೇಳಿರುವ ಬಲಿಪ್ರದಾನಕ್ರಮವನ್ನು ಸಾಧಕರೂ, ದೇವತೆಗಳೂ, ಯಾವಾಗಲೂ ಎಲ್ಲೆಡೆಯಲ್ಲಿಯೂ ಆಚರಿಸಬೇಕು.

೩-೪. ಚಂಡಿಕಾ, ಭೈರವ ಮೊದಲಾದ ದೇವತೆಗಳಿಗೆ ಅರ್ಪಿಸುವ ಬಲಿದಾನಕ್ರಮಗಳಲ್ಲಿ ಪಕ್ಷಿಗಳು, ಆಮೆಗಳು, ಮೀನುಗಳು, ಒಂಭತ್ತುವಿಧವಾದ ಮೃಗಗಳು, ಎಮ್ಮೆಯ ಕೋಣವು, ಹೆಂಟಿಗೊವ್ವ, ಹಂದಿ, ಖಡ್ಗಮೃಗ, ಕೃಷ್ಣಸಾರಂಗ, ಚರಭ,

ಖಡ್ಗಶ್ಚ ಕೃಷ್ಣಸಾರಶ್ಚ ಗೋಧಿಕಾ ಶರಭೋ ಹರಿಃ ।
ಶಾರ್ದೂಲಶ್ಚ ನರಶ್ಚೈವ ಸ್ವಗಾತ್ರರುಧಿರಂ ತಥಾ ॥ ೪ ॥

ಚಂಡಿಕಾಭೈರವಾದೀನಾಂ ಬಲಯಃ ಪರಿಕೀರ್ತಿತಾಃ ।
ಬಲಿಭಿಃ ಸಾಧ್ಯತೇ ಮುಕ್ತಿರ್ಬಲಿಭಿಃ ಸಾಧ್ಯತೇ ದಿವಂ ॥ ೫ ॥

ಬಲಿದಾನೇನ ಸತತಂ ಜಯೇಚ್ಛತ್ರೂನ್ನೃಪಾನ್ನೃ ಪಃ ।
ಮತ್ಸ್ಯಾನಾಂ ಕಚ್ಛಪಾನಾಂ ತು ರುಧಿರೈಃ ಸತತಂ ಶಿವಾ ॥ ೬ ॥

ಮಾಸೈಕಂ ತೃಪ್ತಿಮಾಪ್ನೋತಿ ಗ್ರಾಹ್ಯೈರ್ಮಾಸಾಂಸ್ತು ತ್ರೀನಥ ।
ಮೃಗಾಣಾಂ ಶೋಣಿತೈರ್ದೇವೀ ನರಾಣಾಮಪಿ ಶೋಣಿತೈಃ ॥ ೭ ॥

ಅಷ್ಟೌ ಮಾಸಾನವಾಪ್ನೋತಿ ತೃಪ್ತಿಂ ಕೆಲ್ಯಾಣದಾ ಚ ಸಾ ।
ಗೋಧಿಕಾನಾಂ ಚ ರುಧಿರೈರ್ವಾರ್ಷಿಕೀಂ ತೃಪ್ತಿಮಾಪ್ನುಯಾತ್ ॥ ೮ ॥

ಕೃಷ್ಣಸಾರಸ್ಯ ರುಧಿರೈಃ ಸೂಕರಸ್ಯ ಚ ಶೋಣಿತೈಃ ।
ಪ್ರಾಪ್ನೋತಿ ಸತತಂ ದೇವೀ ತೃಪ್ತಿಂ ದ್ವಾದಶವಾರ್ಷಿಕೀಂ ॥ ೯ ॥

ಸಿಂಪ, ಹುಲಿ, ಮನುಷ್ಯ, ಮತ್ತು ತನ್ನ (ಸಾಧಕನ) ಶರೀರದ ರಕ್ತ ಇವುಗಳು ಬಲಿ ಪ್ರದಾನಗಳಿಗೆ ಪ್ರಶಸ್ತವಾದುವುಗಳೆಂದು ಪರಿಗಣಿಸಲ್ಪಟ್ಟಿವೆ.

೫. ಬಲಿದಾನದಿಂದ ಮುಕ್ತಿಯನ್ನೂ, ಸ್ವರ್ಗವನ್ನೂ ಸಾಧಿಸಬಹುದು. ಬಲಿ ದಾನದಿಂದ ರಾಜನು ತನ್ನ ಶತ್ರುರಾಜರನ್ನು ಜಯಿಸಲು ಶಕ್ತನಾಗುವನು.

೬. ಬಲಿದಾನವಿಧಿಯಲ್ಲಿ ಮೀನು ಮತ್ತು ಆಮೆಗಳ ರಕ್ತದಿಂದ ದೇವಿಯು ಒಂದು ಮಾಸಕಾಲ ತೃಪ್ತಿಯನ್ನು ಹೊಂದುವಳು. ಇತರ ಜಲಚರಪ್ರಾಣಿಗಳ ರಕ್ತ ದಿಂದ ಮೂರುತಿಂಗಳವರೆಗೆ ತೃಪ್ತಿಯನ್ನೈದುವಳು.

೭. ಮೃಗಗಳ ರಕ್ತದಿಂದಲೂ, ಮನುಷ್ಯರ ರಕ್ತದಿಂದಲೂ ದೇವಿಯು ಎಂಟು ತಿಂಗಳವರೆಗೆ ತೃಪ್ತಿಯನ್ನು ಹೊಂದುವಳು. ಮತ್ತು ಮಂಗಳವನ್ನುಂಟುಮಾಡುವಳು.

೮-೯. ಗೋಸುಂಬೆಯ ರಕ್ತದಿಂದ ದೇವಿಯು ಒಂದುವರ್ಷದವರೆಗೆ ತೃಪ್ತಿ ಯನ್ನೈದುವಳು. ಕೃಷ್ಣಸಾರಂಗ ರಕ್ತದಿಂದಲೂ, ಹಂದಿಯ ರಕ್ತದಿಂದಲೂ, ಹನ್ನೆರಡು ವರ್ಷಗಳವರೆಗೆ ತೃಪ್ತಿಯನ್ನು ಹೊಂದುವಳು.

ಅಜಾವಿಕಾನಾಂ ರುಧಿರೈಃ ಪಂಚವಿಂಶತಿವಾರ್ಷಿಕೀಂ ।
ಮಹಿಷಾಣಾಂ ಚ ಖಡ್ಗಾನಾಂ ರುಧಿರೈಃ ಶತವಾರ್ಷಿಕೀಂ ॥ ೧೦ ॥

ತೃಪ್ತಿಮಾಪ್ನೋತಿ ಪರಮಾಂ ಶಾರ್ದೂಲರುಧಿರೈಸ್ತಥಾ ;
ಸಿಂಹಸ್ಯ ಶರಭಸ್ಯಾಥ ಸ್ವಗಾತ್ರಸ್ಯ ಚ ಶೋಣಿತೈಃ ॥ ೧೧ ॥

ದೇವೀ ತೃಪ್ತಿಮವಾಪ್ನೋತಿ ಸಹಸ್ರಪರಿವತ್ಸರಾನ್ ।
ಮಾಂಸೈರಪಿ ತಥಾ ಪ್ರೀತೀ ರುಧಿರೈರ್ಯಸ್ಯ ಯಾವತೀ ॥ ೧೨ ॥

ಕೃಷ್ಣಸಾರಮೃಗಂ ಖಡ್ಗಂ ತಥಾ ಮತ್ಸ್ಯಂ ಚ ರೋಹಿತಂ ।
ವಾರ್ಧ್ರೀಣಸಯುಗಂ ಚಾಪಿ ಫಲಂ ತೇಷಾಂ ಪೃಥಕ್ ಪೃಥಕ್ ॥ ೧೩ ॥

ಕೃಷ್ಣಸಾರಸ್ಯ ಮಾಂಸೇನ ತಥಾ ಖಡ್ಗೀನ ಚಂಡಿಕಾ ।
ವರ್ಷಾಣಾಂ ಚ ಶತಾನ್ಯೇವ ತೃಪ್ತಿಮಾಪ್ನೋತಿ ಕೇವಲಂ ॥ ೧೪ ॥

ರೋಹಿತಸ್ಯ ತು ಮತ್ಸ್ಯಸ್ಯ ಮಾಂಸೈರ್ವಾರ್ಧ್ರೀಣಸಸ್ಯ ಚ ।
ತೃಪ್ತಿಮಾಪ್ನೋತಿ ವರ್ಷಾಣಾಂ ಶತಾನಿ ತ್ರೀಣಿ ಮತ್ಪ್ರಿಯಾ ॥ ೧೫ ॥

---

೧೦. ಆಡು, ಮೇಕೆ ಇವುಗಳ ರಕ್ತದಿಂದ ದೇವಿಯು ಇಪ್ಪತ್ತೈದು ವರ್ಷ ಪರ್ಯಂತರ ತೃಪ್ತಿಯನ್ನೈದುವಳು. ಕೋಣ ಮತ್ತು ಖಡ್ಗಮೃಗಗಳ ರಕ್ತದಿಂದ ದೇವಿಯು ನೂರು ವರ್ಷಗಳವರೆಗೆ ತೃಪ್ತಿಯನ್ನೈದುವಳು.

೧೧-೧೨. ಹುಲಿ, ಸಿಂಹ, ಶರಭ, ತನ್ನಸ್ವಂತ ಶರೀರ ಇವುಗಳ ರಕ್ತದಿಂದ ದೇವಿಯು ಸಹಸ್ರವರ್ಷಗಳ ವರೆಗೆ ಬಹಳವಾಗಿ ತೃಪ್ತಿಪಡುವಳು. ದೇವಿಗೆ ರಕ್ತವೆಂದ ಯಾವ ವಿಧವಾದ ಪ್ರೀತಿಯುಂಟಾಗುವುದೋ ಮಾಂಸದಿಂದಲೂ ಅಂತಹ ಪ್ರೀತಿಯೇ ಆಗುವುದು.

೧೩. ಕೃಷ್ಣಸಾರಂಗ, ಖಡ್ಗಮೃಗ, ಮೀನು, ಕೆಂಪುಮೀನು, ಜಿಂಕೆಗಳ ದಂಪತಿ ಇವುಗಳಮಾಂಸಗಳಿಂದ ದೇವಿಯು ಸಂತುಷ್ಟಳಾಗುವುದನ್ನು ಪ್ರತ್ಯೇಕವಾಗಿ ಹೇಳುತ್ತೇನೆ.

೧೪. ಕೃಷ್ಣಸಾರಂಗದ ಮತ್ತು ಖಡ್ಗಮೃಗದ ಮಾಂಸದಿಂದ ದೇವಿಯು ನೂರು ವರ್ಷಗಳ ವರೆಗೆ ಸಂತುಷ್ಟಳಾಗುವಳು.

೧೫. ಕೆಂಪುಮೀನು ಮತ್ತು ಖಡ್ಗಮೃಗಗಳ ಮಾಂಸದಿಂದ ನನ್ನ ಪ್ರಿಯಳಾದ ದೇವಿಯು ಮುನ್ನೂರು ವರ್ಷಗಳವರೆಗೆ ಸಂತುಷ್ಟಳಾಗುವಳು.

ತ್ರಿವಿಧಂ ತು ಪರಿಜ್ಞೇಯಂ ಶ್ವೇತಂ ಬದ್ಧಮಜಾಪತಿಂ ।
ವಾರ್ಧ್ರೀಣಸಃ ಪ್ರೋಚ್ಯತೇಽಸೌ ಹವ್ಯೇ ಕವ್ಯೇ ಚ ಸತ್ಕೃತಃ ॥ ೧೬ ॥
ನೀಲಗ್ರೀವೋ ರಕ್ತಶೀರ್ಷಃ ಕೃಷ್ಣಪಾದಃ ಸಿತಚ್ಛದಃ ।
ವಾರ್ಧ್ರೀಣಸಃ ಸ್ಯಾತ್ಪಕ್ಷೀ ಚ ಮಮ ವಿಷ್ಣೋರಪಿ ಪ್ರಿಯಃ ॥ ೧೭ ॥
ನರೇಣ ಬಲಿನಾ ದೇವೀ ಸಪಸ್ರಂ ಪರಿವತ್ಸರಾನ್ ।
ವಿಧಿದತ್ತೇನ ಚಾಪ್ನೋತಿ ತೃಪ್ತಿಂ ಲಕ್ಷಂ ತ್ರಿಭಿರ್ನರೈಃ ॥ ೧೮ ॥
ನಾರೇಣೈವಾಥ ಮಾಂಸೇನ ತ್ರಿಸಹಸ್ರಂ ಚ ವತ್ಸರಾನ್ ।
ತೃಪ್ತಿಮಾಪ್ನೋತಿ ಕಾಮಾಖ್ಯಾ ಭೈರವೀ ಮಮ ರೂಪಧೃಕ್ ॥ ೧೯ ॥
ಮಂತ್ರಪೂತಂ ಶೋಣಿತಂ ತು ಪೀಯೂಷಂ ಜಾಯತೇ ಸದಾ ।
ಮಸ್ತಕಂ ಚಾಪಿ ತಸ್ಯಾತ್ತಿ ಮಾಂಸಂ ಚಾಪಿ ತಥಾ ಶಿವಾ ॥ ೨೦ ॥

---

೧೬. ಜಿಂಕೆಗಳಲ್ಲಿ ಬಿಳಿಯದು, ಮಿಶ್ರಬಣ್ಣದ್ದು, ಕಾಲುಗೊರಸುಮಾತ್ರ ಬಿಳುಪಾಗಿರುವುದು, ಎಂಬ ಮೂರುಜಾತಿಗಳಿಗೆ ವಾರ್ಧ್ರಿಣಾಸವೆಂದು ಹೆಸರು. ಇವರ ಮಾಂಸವು ದೇವತಾರಾಧನೆಯಲ್ಲಿಯೂ, ಪಿತೃಶ್ರಾದ್ಧಾದಿಗಳಲ್ಲಿಯೂ ಪ್ರಶಸ್ತವಾದು ವೆಂದು ಪರಿಗಣಿಸಲ್ಪಟ್ಟಿದೆ.

೧೭. ಜಿಂಕೆಗಳಲ್ಲಿ ನೀಲಬಣ್ಣದ ಕತ್ತುಳ್ಳವು, ಕೆಂಪುತಲೆಯುಳ್ಳವು, ಕಪ್ಪಾದ ಕಾಲುಳ್ಳವು, ಬಿಸುಪಾದ ಕಾಲುಗೊರಸುಳ್ಳವು, ಹೆಣ್ಣು ಜಿಂಕೆಯು, ಪಕ್ಷಿಯು ಇವುಗಳ ಬಲಿಯು ನನಗೂ, ವಿಷ್ಣುವಿಗೂ ಪ್ರಿಯಕರವಾದುದು.

೧೮. ಒಬ್ಬ ಮನುಷ್ಯನನ್ನು ವಿಧಿಪೂರ್ವಕವಾಗಿ ಬಲಿಯಾಗಿ ಅರ್ಪಿಸುವುದರಿಂದ ದೇವಿಯು ಸಹಸ್ರವರ್ಷಗಳವರೆಗೆ ತೃಪ್ತಿಯನ್ನೈದುವಳು. ಮೂರು ಮನುಷ್ಯರನ್ನು ಬಲಿಯಾಗಿ ಅರ್ಪಿಸುವುದರಿಂದ ಒಂದು ಲಕ್ಷವರ್ಷಗಳವರೆಗೆ ಸಂತುಷ್ಟಳಾಗುವಳು.

೧೯. ನನ್ನ ರೂಪವನ್ನು ಧರಿಸಿರುವ ಭೈರವಿಯೆಂಬ ಕಾಮಾಖ್ಯಾದೇವಿಯು ನರಮಾಂಸದಿಂದ (ಮನುಷ್ಯರ ಮಾಂಸ) ಮೂರು ಸಹಸ್ರ ವರ್ಷಪರ್ಯಂತರ ಸಂತುಷ್ಟಿಯನ್ನು ಹೊಂದುವಳು.

೨೦. ಕಲ್ಪೋಕ್ತವಾದ ಮಂತ್ರಪಠನದಿಂದ ಪರಿಶುದ್ಧವಾದ ರಕ್ತವು ಅಮೃತಕ್ಕೆ ಸಮಾನವಾದುದು. ದೇವಿಯು, ಬಲಿಯಾಗಿ ಅರ್ಪಿಸಿರುವ ಮೃಗದ ತಲೆಯನ್ನೂ, ಮಾಂಸವನ್ನೂ ಭಕ್ಷಿಸುವಳು.

ತಸ್ಮಾತ್ತು ಪೂಜನೇ ದದ್ಯಾದ್ಬಲೇಃ ಶೀರ್ಷಂ ಚ ಲೋಹಿತಂ ।
ಭೋಜ್ಯೇ ಹೋಮೇ ಚ ಮಾಂಸಾನಿ ನಿಯುಂಜೀಯಾದ್ವಿಚಕ್ಷಣಃ ॥ ೨೧ ॥

ಪೂಜಾಸು ನಾಮ ಮಾಂಸಾನಿ ದದ್ಯಾದ್ವೈ ಸಾಧಕಃ ಕ್ವಚಿತ್ ।
ಋತೇ ತು ಲೋಹಿತಂ ಶೀರ್ಷಮಮೃತಂ ತತ್ತು ಜಾಯತೇ ॥ ೨೨ ॥

ಕೂಷ್ಮಾಂಡಮಿಕ್ಷುದಂಡಂ ಚ ಮದ್ಯಮಾಸವಮೇವ ಚ ।
ಏತೇ ಬಲಿಸಮಾಃ ಪ್ರೋಕ್ತಾಸ್ತೃಪ್ತಾ ಭಾಗಸಮಾಃ ಸದಾ ॥ ೨೩ ॥

ಚಂದ್ರಹಾಸೇನ ಕರ್ತ್ರ್ಯಾ ವಾ ಛೇದನಂ ಮುಖ್ಯಮಿಷ್ಯತೇ ।
ದಾತ್ರಾಸಿಛೇನುಕ್ರಕಚಶಂಕುಲಾಭಿಸ್ತು ಮಧ್ಯಮಂ ॥ ೨೪ ॥

ಕ್ಷುರಕ್ಷುರಪ್ರಭಲ್ಲ್ಯಶ್ಚ ವಾಧಮಂ ಪರಿಕೀರ್ತಿತಂ ।
ಏಭ್ಯೋಽನ್ಯೈಃ ಶಕ್ತಿಬಾಣಾದ್ಯೈರ್ಬಲಿಶ್ಛೇದ್ಯಃ ಕದಾಪಿ ನ ॥ ೨೫ ॥

---

೨೧. ಆದುದರಿಂದ ಬಲಿಸಮರ್ಪಣೆ ಮಾಡುವಾಗ ಶಿರಸ್ಸನ್ನೂ, ರಕ್ತವನ್ನೂ ದೇವಿಗೆ ಅರ್ಪಿಸಬೇಕು. ನೈವೇದ್ಯಮಾಡುವಾಗಲೂ, ಹೋಮಮಾಡುವಾಗಲೂ, ಶಾಸ್ತ್ರಜ್ಞನಾದವನು ಮಾಂಸವನ್ನು ಉಪಯೋಗಿಸಬೇಕು.

೨೨. ಸಾಧಕನಾದವನು ಪೂಜಾಕಾಲದಲ್ಲಿ ವಿಧ್ಯುಕ್ತವಾಗಿರುವ ಮಾಂಸ ಗಳನ್ನು ನಿವೇದನಮಾಡಬೇಕು. ಬಲಿಗಾಗಿ ಕೊಡುವ ಮೃಗದ ರಕ್ತವೂ ಶಿರಸ್ಸೂ ಅಮೃತವೆಂದು ಪರಿಗಣಿಸಲ್ಪಡುವುದು.

೨೩. ಕುಂಬಳಕಾಯಿಯೂ, ಕಬ್ಬೂ, ಮದ್ಯವೂ, ಮಧುರಸವೂ (ಮದ್ಯ ವಿಶೇಷ) ಸಹ ಬಲಿಪ್ರದಾನವಿಚಾರದಲ್ಲಿ, ಆಡನ್ನು ಬಲಿಯಾಗಿ ಅರ್ಪಿಸಿದರೆ ಆಗುವ ತೃಪ್ತಿಯಂತೆ, ದೇವಿಗೆ ಸದಾ ತೃಪ್ತಿಯನ್ನುಂಟುಮಾಡುವವು.

೨೪-೨೫. ಚಂದ್ರಹಾಸವೆಂಬ ಉತ್ತಮವಾದ ಖಡ್ಗವಿಶೇಷವು ಬಲಿಕೊಡು ವುದಕ್ಕೆ ಪ್ರಶಸ್ತವಾದುದು. ಕುಡುಗೋಲು, ಕತ್ತಿ, ಮಚ್ಚು, ಮುಂತಾದವು ಮಧ್ಯಮವು, ಕ್ಷೌರದ ಕತ್ತಿ, ಚಾಕು ಮೊದಲ್ಗೊಂಡು ಇವುಗಳು ಅಧಮಗಳು. ಈ ಆಯುಧ ಗಳನ್ನು ಬಿಟ್ಟು ಶಕ್ತ್ಯಾಯುಧ, ಬಾಣ ಮೊದಲಾದುವುಗಳಿಂದ ಬಲಿಯನ್ನು ಯಾವಾ ಗಲೂ ಕೊಲ್ಲಬಾರದು. ಹಾಗೆ ಮಾಡಿದರೆ ದೇವಿಯು ಬಲಿಯನ್ನು ತಿನ್ನುವುದಿಲ್ಲ. ಬಲಿಯನ್ನು ಕೊಟ್ಟ ಸಾಧಕನು ಮರಣವನ್ನು ಹೊಂದುವನು.

ನಾತ್ತಿ ದೇವೀ ಬಲಿಂ ತಂ ತು ದಾತಾ ಮೃತ್ಯುಮವಾಪ್ನುಯಾತ್ ।
ಹಸ್ತೇನ ಛೇದಯೇದ್ಯಸ್ತು ಪ್ರೋಕ್ಷಿತಂ ಸಾಧಕಃ ಪಶುಂ ॥ ೨೬ ॥

ಕ್ಷೀಣಂ ವಾ ಬ್ರಹ್ಮವಧ್ಯಾಮವಾಪ್ನೋತಿ ದುರುದುಃಸಹಾಂ ।
ನಾಮಂತ್ರ್ಯ ಖಡ್ಗಂ ತು ಬಲಿಂ ನಿಯುಂಜೀತ ವಿಚಕ್ಷಣಃ ॥ ೨೭ ॥

ಖಡ್ಗಸ್ಯಾಮಂತ್ರಣೇ ಮಂತ್ರಾ ಯಾವಂತಃ ಕಥಿತಾಃ ಪುರಾ ।
ಮಹಾಮಾಯಾಬಲೌ ಪೇ ವೈ ಯೋಜ್ಯಾಸ್ತತ್ರೋದಿತಾ ಬುಧೈಃ ॥ ೨೮ ॥

ತೈಃ ಸಾರ್ಧಮೇತೇ ಮಂತ್ರಾಸ್ತು ಯೋಜ್ಯಾಃ ಖಡ್ಗಾದಿಮಂತ್ರಣೇ ।
ಪೂಜನೇ ಶಾರದಾದೀನಾಂ ಕಾಮಾಖ್ಯಾಯಾ ವಿಶೇಷತಃ ॥ ೨೯ ॥

ದ್ವಿಃ ಕಾಲೀತಿ ತತೋ ದೇವ್ಯಾ ವಜ್ರೇಶ್ವರಿಪದಂ ತತಃ ।
ತತೋಽನು ಲೋಹದಂಡಾಯೈ ನಮಃ ಶೇಷೇ ತು ಯೋಜಯೇತ್ ॥ ೩೦ ॥

ಸಂಪೂಜ್ಯಾನೇನ ಮಂತ್ರೇಣ ಖಡ್ಗಮಾದಾಯ ಪಾಣಿನಾ ।
ಕಾಲರಾತ್ರ್ಯಾಸ್ತು ಮಂತ್ರೇಣ ತಂ ಖಡ್ಗಮಭಿಮಂತ್ರಯೇತ್ ॥ ೩೧ ॥

---

೨೬. ಸಾಧಕನಾದವನು ಮಂತ್ರದಿಂದ ಪ್ರೋಕ್ಷಿಸಲ್ಪಟ್ಟ ಬಲಿಪಶುವನ್ನು ಬರೀಕೈಯಿಂದ ವಧಿಸಿದರೆ ಆಯುಃಕ್ಷೀಣವನ್ನಾಗಲೀ, ದುಸ್ಸಹವಾದ ಬ್ರಹ್ಮಹತ್ಯಾ ದೋಷವನ್ನಾಗಲೀ ಹೊಂದುವನು.

೨೭-೨೯. ವಿವೇಕಿಯಾದವನು ಖಡ್ಗವನ್ನು ಮಂತ್ರಗಳಿಂದ ಅಭಿಮಂತ್ರಿಸದೆ ಬಲಿಯನ್ನು ಕೊಡಬಾರದು. ಮಹಾಮಾಯಾಸ್ವರೂಪಳಾದ ದೇವಿಗೆ ಅರ್ಪಿಸಿದ ಬಲಿಪ್ರದಾನದಲ್ಲಿ ಖಡ್ಗವನ್ನು ಅಭಿಮಂತ್ರಿಸಲು ಯಾವ ಮಂತ್ರಗಳು ಹೇಳಲ್ಪಟ್ಟಿರುವವೋ ಆ ಮಂತ್ರವನ್ನೇ ಪ್ರಾಜ್ಞರಾದವರು ಉಪಯೋಗಿಸಬೇಕು.

೨೯. ಶಾರದಾ ಮೊದಲಾದವರ, ಅದರಲ್ಲೂ ಕಾಮಾಖ್ಯಾದೇವಿಯ ಪೂಜೆಯಲ್ಲಿ ವಿಶೇಷವಾಗಿ, ಕಲ್ಪೋಕ್ತಮಂತ್ರಗಳ ಜತೆಗೆ ಈ ಕೆಳಗೆ ಹೇಳುವ ಮಂತ್ರಗಳನ್ನೂ, ಖಡ್ಗವನ್ನು ಅಭಿಮಂತ್ರಿಸಲು ಉಪಯೋಗಿಸಬೇಕು.

೩೦-೩೧. ಎರಡಾವರ್ತಿ ಕಾಲಿ ಕಾಲಿ ಎಂದೂ, ಬಳಿಕ ವಜ್ರೇಶ್ವರಿ ಎಂದೂ, ಬಳಿಕ ಲೋಹದಂಡಾಯೈ ನಮಃ ಎಂದು ಹೇಳಬೇಕು---ಕಾಲಿ ಕಾಲಿ ವಜ್ರೇಶ್ವರಿ

ನೇತ್ರಬೀಜಸ್ಯ ಮಧ್ಯಂ ತು ದ್ವಿರಾವರ್ತ್ಯ ಪ್ರಯೋಜಯೇತ್ ।
ತತೋಽನು ಕಾಲಿ ಕಾಲೀತಿ ಕರಾಲೋಷ್ಮೀ ತತಃ ಪರಂ ॥ ೩೨ ॥

ಹಾಂತಾದೀಂಶ್ಚ ತೃತೀಯೇನ ಸ್ವರೇಣೈಕಾದಶೇನ ವೈ ।
ಯೋಜಿತೋ ನಾದಬಿಂದುಭ್ಯಾಂ ದ್ವೌ ತತ್ಪಶ್ಚಾನ್ನಿಯೋಜಯೇತ್ ॥ ೩೩ ॥

ಫೇತ್ಕಾರಿಣಿಪದಂ ತಸ್ಮಾತ್ಪಾದಯ ಫೇದಯೇತ್ಯತಃ ।
ಸರ್ವಾನ್ದುಷ್ಟಾನಿತಿ ತತೋ ದ್ವಿಃಸ್ಮಾರ್ಯ ಲುಲಾಯಕಂ ॥ ೩೪ ॥

ಖಡ್ಗೇನ ಛಿಂಧಿ ಛಿಂಧೀತಿ ತತಃ ಕಿಲ ಕಿಲೇತಿ ವೈ ।
ತತಃ ಕಿಚಿ ಕಿಚೇತ್ಯೇವಂ ತತಃ ಪಿಬ ಪಿಬೇತಿ ಚ ॥ ೩೫ ॥

ತತೋಽನುರುಧಿರಂ ಚೇತಿ ಸ್ಫೌಂ ಸ್ಫೌಂ ಕುರಿಕುರೀತಿ ಚ ।
ಕಾಲಿಕಾಯೈ ನಮು ಇತಿ ಕಾಲರಾತ್ರ್ಯಸ್ತು ಮಂತ್ರಕಂ ॥ ೩೬ ॥

ಲೋಹದಂಡಾಯೈ ನಮಃ—ಈ ಮಂತ್ರದಿಂದ ಖಡ್ಗವನ್ನು ಪೂಜೆಮಾಡಿ, ಅದನ್ನು ತೆಗೆದುಕೊಂಡು, ಕೆಳಗೆ ಹೇಳುವ ಕಾಲರಾತ್ರಿಯ ಮಂತ್ರದಿಂದ ಅಭಿಮಂತ್ರಿಸಬೇಕು.

೩೨-೩೬. ಕಾಲರಾತ್ರಿ ಮಂತ್ರವು ಈ ರೀತಿ ಇರುವುದು—ನೇತ್ರಬೀಜದ ಮಧ್ಯಾಕ್ಷರವನ್ನು ಎರಡಾವರ್ತಿಯೂ, ಬಳಿಕ ಕಾಲಿ ಕಾಲಿ ಕರಾಲೋಷ್ಮಿ ಎಂತಲೂ, ಪಕಾರವನ್ನು ಮೂರನೇ ಮತ್ತು ಹನ್ನೊಂದನೇ ಸ್ವರಗಳನ್ನೂ ಅನುಸ್ವಾರವನ್ನು ಸೇರಿಸಿಯೂ, ಬಳಿಕ ಫೇತ್ಕಾರಿಣಿ ಪದವನ್ನೂ, ಬಳಿಕ ಖಾದಯ ಫೇದಯ ಸರ್ವಾನ್ದುಷ್ಟಾನ್ ಎಂಬ ಪದಗಳನ್ನು ಎರಡಾವರ್ತಿಯೂ, ಲುಲಾಯಕಂ ಖಡ್ಗೇನ ಛಿಂಧಿ ಛಿಂಧಿ ಎಂತಲೂ, ಕಿಲ ಕಿಲವೆಂತಲೂ, ಕಿಚಿ ಕಿಚಿ ಎಂತಲೂ ಪಿಬ ಪಿಬ ರುಧಿರಂ ಎಂತಲೂ, ಸ್ಫೌಂಸ್ಫೌಂ ಕುರಿ ಕುರಿ ಕಾಲಿಕಾಯೈ ನಮ ಎಂತಲೂ ಹೇಳಿದರೆ ಅದು ಕಾಲರಾತ್ರಿಯ ಮಂತ್ರವಾಗುವುದು. ಹೇಗೆಂದರೆ—ಓಂ ಓಂ ಕಾಲಿ ಕಾಲಿ ಕರಾಲೋಷ್ಮಿ ಹುಂ ಹ್ಫೈಂ ಫೇತ್ಕಾರಿಣಿ ಖಾದಯ ಖಾದಯ, ಫೇದಯ ಫೇದಯ ಸರ್ವಾನ್ದುಷ್ಟಾನ್ ಲುಲಾಯಕಂ ಖಡ್ಗೇನ ಛಿಂಧಿ ಛಿಂದಿ ಕಿಲ ಕಿಲ ಕಿಚಿ ಕಿಚಿ ಪಿಬ ಪಿಬ ರುಧಿರಂ ಸ್ಫೌಂ ಸ್ಫೌಂ ಕುರಿ ಕುರಿ ಕಾಲಿಕಾಯೈ ನಮಃ ॥ ಇದು ಕಾಲರಾತ್ರಿಯ ಮಂತ್ರವು.

ಇತ್ಯನೇನ ತು ಮಂತ್ರೇಣ ಕರವಾಲೇಽಭಿಮಂತ್ರಿತೇ ।
ಕಾಲರಾತ್ರೀ ಸ್ವಯಂ ತತ್ರ ಪ್ರಸೀದತ್ಯರಿಹಾನಯೇ ॥ ೩೭ ॥

ಬಲೇಃ ಪೂರ್ವೋದಿತಾ ಮಂತ್ರಾ ನಿತ್ಯಂ ಗುಹ್ಯಾಸ್ತು ಸಾಧಕೈಃ ।
ಅಯಂ ಮಂತ್ರಸ್ತು ವಕ್ತವ್ಯಸ್ತಸ್ಯ ಹತ್ಯಾವಿಹಾನಯೇ ॥ ೩೮ ॥

ಯಜ್ಞಾರ್ಥೇ ಪಶವಃ ಸೃಷ್ಟಾಃ ಸ್ವಯಮೇವ ಸ್ವಯಂಭುವಾ ।
ಅತಸ್ತ್ವಾಂ ಘಾತಯಿಷ್ಯಾಮಿ ತಸ್ಮಾದ್ಯಜ್ಞೇ ವಧೋಽವಧಃ ॥ ೩೯ ॥

ತತೋ ದೈವತಮುದ್ದಿಶ್ಯ ಕಾಮಮುದ್ದಿಶ್ಯ ಚಾತ್ಮನಃ ।
ಛೇದಯೇತ್ತೇನ ಖಡ್ಗೇನ ಬಲಿಂ ಪೂರ್ವಾನನಂ ತು ತಂ ॥ ೪೦ ॥

ಅಥವೋತ್ತರವಕ್ತ್ರಂ ತಂ ಸ್ವಯಂ ಪೂರ್ವಮುಖಸ್ತಥಾ ।
ಪೂರ್ವೋಕ್ತಾನ್ ಸೈಂಧವಾದೀಂಸ್ತು ವಕ್ತ್ರೇಽ ವಶ್ಯಂ ನಿಯೋಜಯೇತ್ ॥

---

೩೭. ಈ ಕಾಲರಾತ್ರೀಮಂತ್ರದಿಂದ ಕತ್ತಿಯನ್ನು ಅಭಿಮಂತ್ರಿಸಿದರೆ, ಕಾಲರಾತ್ರಿದೇವಿಯು ಶತ್ರುನಾಶಕ್ಕಾಗಿ ಅಲ್ಲಿ ಸ್ವಯಂ ಪ್ರಸನ್ನಳಾಗುವಳು.

೩೮. ಬಲಿಪ್ರದಾನಕ್ಕಾಗಿ ಮೇಲೆ ಹೇಳಿದ ಈ ಮಂತ್ರವನ್ನು ಸಾಧಕರು ರಹಸ್ಯವಾಗಿ ಕಾಪಾಡಬೇಕು. ಅಲ್ಲದೆ ಪ್ರಾಣಿವಧೆಯಿಂದುಂಟಾಗುವ ಪಾಪದ ನಾಶಕ್ಕಾಗಿ ಈ ಕೆಳಗೆ ಹೇಳುವ ಮಂತ್ರವನ್ನೂ ಪಠಿಸಬೇಕು.

೩೯. ಯಜ್ಞಾನುಷ್ಠಾನಕ್ಕಾಗಿ ಸ್ವಯಂ ಬ್ರಹ್ಮನೇ ಪಶುಗಳನ್ನು ಸೃಷ್ಟಿಸಿರುವನು, ಆದುದರಿಂದ ಪಶುವಾದ ನಿನ್ನನ್ನು ಈಗ ಕೊಲ್ಲುವೆನು ಯಜ್ಞದಲ್ಲಿ ಮಾಡುವ ಪ್ರಾಣವಧೆಯು ಹಿಂಸೆಯಲ್ಲವು.

೪೦. ಹೀಗೆ ಮಂತ್ರವನ್ನು ಹೇಳಿ, ಬಳಿಕ ಇಷ್ಟದೇವತೆಯನ್ನೂ, ತನ್ನ ಇಷ್ಟಸಿದ್ಧಿಯನ್ನೂ ಉದ್ದೇಶಿಸಿ, ಸಾಧಕನಾದವನು ಆ ಮಂತ್ರಪೂತಖಡ್ಗದಿಂದ ಪೂರ್ವಾಭಿಮುಖವಾಗಿ ನಿಂತಿರುವ ಪಶುವನ್ನು ಕತ್ತರಿಸಬೇಕು.

೪೧. ಅಥವಾ ಪಶುವನ್ನು ಉತ್ತರಾಭಿಮುಖವಾಗಿ ನಿಲ್ಲಿಸಿ, ತಾನು ಪೂರ್ವಾಭಿಮುಖನಾಗಿ ನಿಂತು ಕತ್ತರಿಸಬೇಕು, ಮತ್ತು ಹಿಂದೆ ಹೇಳಿದ ಉಪ್ಪು ಮೊದಲಾದ ವುಗಳನ್ನು ಪಶುವಿನ ಮುಖದಲ್ಲಿ ಇರಿಸಬೇಕು.

ಸೌವರ್ಣಂ ರಾಜತಂ ತಾಮ್ರಂ ದೈತ್ಯಂ ಪತ್ರಪುಟಂ ಚ ವಾ।
ಮಾಹೇಯಕಾಂಸ್ಯಮಥವಾ ಯಜ್ಞಕಾಷ್ಠಮಯಂ ಚ ವಾ ॥ ೪೨ ॥

ಪಾತ್ರಂ ರುಧಿರದಾನಾಯ ಕರ್ತವ್ಯಂ ವಿಭವಾವಧಿ।
ನ ಲೋಹೇ ವಲ್ಕಲೇ ವಾಪಿ ವೈಕ್ರೇ ರಾಂಗೇಽಥ ಸೈಕತೇ ॥ ೪೩ ॥

ದದ್ಯಾದ್ರಕ್ತಂ ಬಲೀನಾಂ ತು ಭೂಮೌ ಶುಚಿಶ್ರವೇ ತಥಾ।
ನ ಘಟೇ ಭೂತಲೇ ವಾಪಿ ದೇಯಂ ಕ್ಷುದ್ರೇಣ ಭಾಜನೇ ॥ ೪೪ ॥

ರುಧಿರಾಣಿ ಪ್ರದದ್ಯಾತ್ತು ಭೂತಿಕಾಮೋ ನರೋತ್ತಮಃ।
ನರಸ್ಯ ತು ಸವಾ ರಕ್ತಂ ಮಾಹೇಯೇ ತೈಜಸೇಽಥವಾ ॥ ೪೫ ॥

ದದ್ಯಾನ್ನರಪತಿಸ್ತತ್ತು ನ ಪಟೌ ಕದಾಚನ।
ಜಯಮೇಧಮೃತೇ ದದ್ಯಾನ್ನ ಕದಾಚಿದ್ಧಯಂ ಬಲಿಂ ॥ ೪೬ ॥

---

೪೨. ಚಿನ್ನದಪಾತ್ರೆ, ಬೆಳ್ಳಿಯಪಾತ್ರೆ, ತಾಮ್ರದಪಾತ್ರೆ, ದೈವ್ಯವೃಕ್ಷದಎಲೆ (ಮೊನ್ನೆ)ಕಂಚಿನಪಾತ್ರೆ, ಯಜ್ಞವೃಕ್ಷದಿಂದ ನಿರ್ಮಿಸಿದ ಮರದಪಾತ್ರೆ ಇವುಗಳಲ್ಲಿಂದನ್ನು ತನ್ನ ಐಶ್ವರ್ಯಕ್ಕನುಗುಣವಾಗಿ ಪಶುವಿನ ರಕ್ತವನ್ನು ದೇವಿಗೆ ಅರ್ಪಿಸುವುದಕ್ಕೆ ಸಿದ್ಧಪಡಿಸಿಕೊಳ್ಳಬೇಕು.

೪೩-೪೪. ಲೋಹಸಂಬಂಧವಿಲ್ಲದ ನಾರುಬಟ್ಟೆ, ಬೆತ್ತದಪಾತ್ರೆ, ಬಣ್ಣದ ಪಾತ್ರೆ, ಮರಳುಮಿಶ್ರವಾದ ಮಣ್ಣಿನಗಡಿಗೆ, ಮಡಿಕೆ, ಬರೀನೆಲ, ಅಶುಚಿಯಾದಪಾತ್ರೆ, ಒಡಕು ಪಾತ್ರೆ, ಇವುಗಳಲ್ಲಿ ಬಲಿಪಶುವಿನ ರಕ್ತವನ್ನು ದೇವಿಗೆ ಅರ್ಪಿಸಬಾರದು. ಐಶ್ವರ್ಯವನ್ನಪೇಕ್ಷಿಸುವ ಸಾಧಕನು ಇಂತಹ ಅಯೋಗ್ಯವಾದ ಪಾತ್ರೆಗಳನ್ನು ತ್ಯಜಿಸಬೇಕು.

೪೫-೪೬. ಮಣ್ಣಿನಮಡಕೆ, ಭೂತಲ, ಒಡಕುಪಾತ್ರೆ ಇವುಗಳಲ್ಲಿ ರಕ್ತವನ್ನು ಐಶ್ವರ್ಯವನ್ನಪೇಕ್ಷಿಸುವ ಸಾಧಕನು ಕೊಡಬಾರದು. ಮನುಷ್ಯನ, ಪಶುವಿನ ರಕ್ತವನ್ನು ಕಂಚಿನಪಾತ್ರೆ ಅಥವಾ ಚಿನ್ನದ ಮತ್ತು ಬೆಳ್ಳಿಯ ಪಾತ್ರೆಯಲ್ಲಿ ಕೊಡಬೇಕು. ಆದರೆ ರಾಜನು ಬಟ್ಟೆಯಲ್ಲಿ ರಕ್ತವನ್ನು ಕೊಡಲೇ ಕೂಡದು.

ತಥಾ ದಿಕ್ಪಾಲಮೇಧೇ ತು ಗಜಂ ದದ್ಯಾನ್ನರಾಧಿಪಃ ।
ನ ಕದಾಚಿತ್ತದಾ ದೇವ್ಯೈ ಪ್ರದದ್ಯಾದ್ಧಯಹಸ್ತಿನೌ ॥ ೪೭ ॥

ಹಯಾಕರ್ಷೇ ಚಾನುರಂ ತು ಬಲಿಂ ದದ್ಯಾನ್ನರಾಧಿಪಃ ।
ಸಿಂಹಂ ವ್ಯಾಘ್ರಂ ನರಂ ಚಾಪಿ ಸ್ವಗಾತ್ರರುಧಿರಂ ತಥಾ ॥ ೪೮ ॥

ನ ದದ್ಯಾದ್ಬ್ರಾಹ್ಮಣೋ ಮದ್ಯಂ ಮಹಾದೇವ್ಯೈ ಕದಾಚನ ।
ಸಿಂಹಂ ವ್ಯಾಘ್ರಂ ನರಂ ದತ್ವಾ ಬ್ರಾಹ್ಮಣೋ ನರಕಂ ವ್ರಜೇತ್ ॥ ೪೯ ॥

ಇಹಾಪಿ ಸ್ಯಾತ್ಸ ಹೀನಾಯುಃ ಸುಖಸೌಭಾಗ್ಯವರ್ಜಿತಃ ।
ಸ್ವಗಾತ್ರರುಧಿರಂ ದದ್ಯಾಚ್ಚಾತ್ಮವಧ್ಯಾಮವಾಪ್ನುಯಾತ್ ॥ ೫೦ ॥

ಮದ್ಯಂ ದತ್ವಾ ಬ್ರಾಹ್ಮಣಸ್ತು ಬ್ರಾಹ್ಮಣ್ಯಾದೇವ ಹೀಯತೇ ।
ನ ಕೃಷ್ಣಸಾರಂ ವಿತರೇದ್ಬಲಿಂ ತು ಕ್ಷತ್ರಿಯಾದಿಕಃ ॥ ೫೧ ॥

---

೪೭. ಅಶ್ವಮೇಧಯಾಗದಲ್ಲಿ ಹೊರತು ಇನ್ನೆಲ್ಲಿಯೂ ಕುದುರೆಯನ್ನು ಬಲಿಯಾಗಿ ಕೊಡಕೂಡದು. ಹಾಗೆಯೇ ದಿಕ್ಪಾಲಕರ ಯಾಗದಲ್ಲಿ ಮಾತ್ರ ಆನೆಯನ್ನು ಬಲಿಯಾಗಿ ಕೊಡಬೇಕು.

೪೮. ಆದಕಾರಣ ದೇವಿಗೆ ಆನೆ ಕುದುರೆಗಳನ್ನು ಬಲಿಯಾಗಿ ಯಾವಾಗಲೂ ಕೊಡಕೂಡದು. ಹಯಾಕರ್ಷಯಾಗದಲ್ಲಿ ಚಮರೀ ಮೃಗವನ್ನು ಬಲಿಯಾಗಿ ಕೊಡಬೇಕು.

೪೯. ಸಿಂಹ. ಹುಲಿ, ಮನುಷ್ಯ, ತನ್ನಶರೀರದ ರಕ್ತ ಮದ್ಯ ಇವುಗಳನ್ನು ಬಾಹ್ಮಣನು ಮಹಾದೇವಿಗೆ ಬಲಿಯಾಗಿ ಯಾವಾಗಲೂ ಕೊಡಕೂಡದು.

೫೦. ಸಿಂಹ ಹುಲಿ ಮನುಷ್ಯರನ್ನು ಬ್ರಾಹ್ಮಣನು ಬಲಿಯಾಗಿ ಕೊಟ್ಟರೆ, ಅವನಿಗೆ ನರಕವೇ ಪ್ರಾಪ್ತವಾಗುವುದು. ಈಲೋಕದಲ್ಲಿಯೂ ಸುಖ ಸೌಭಾಗ್ಯಗಳಿಲ್ಲದವನಾಗಿ ಅಲ್ಪಾಯುವಾಗುವನು.

೫೧. ತನ್ನ ಶರೀರದ ರಕ್ತವನ್ನು ಕೊಟ್ಟರೆ ಆತ್ಮಹತ್ಯೆಯ ದೋಷವನ್ನು ಹೊಂದುವನು. ಮದ್ಯವನ್ನು ಕೊಟ್ಟರೆ ಅವನ ಬ್ರಾಹ್ಮಣತ್ವವೇ ನಷ್ಟವಾಗುವುದು.

ದದತಃ ಕೃಷ್ಣಸಾರಂ ತು ಬ್ರಹ್ಮಹತ್ಯಾ ಭವೇದ್ಧ್ರುವಂ ।
ಯತ್ರ ಸಿಂಹಸ್ಯ ವಾಘ್ರಸ್ಯ ನರಸ್ಯ ವಿಹಿತೋ ವಧಃ ॥ ೫೨ ॥

ಬ್ರಹ್ಮಣೋಕ್ತೌ ತು ಬಲ್ಯಾದೌ ತತ್ರಾಯಂ ವಿಹಿತಃ ಕ್ರಮಃ ।
ಕೃತ್ವಾ ಘೃತಮಯಂ ವ್ಯಾಘ್ರಂ ನರಂ ಸಿಂಹಂ ಚ ಭೈರವ ॥ ೫೩ ॥

ಅಥವಾಽ ಪೂಪವಿಕೃತಂ ಯವಕ್ಷೋದಮಯಂ ತಥಾ ।
ಘಾತಯೇಚ್ಚಂದ್ರಹಾಸೇನ ತೇನ ಮಂತ್ರೇಣ ಸಂಸ್ಕೃತಂ ॥ ೫೪ ॥

ಪ್ರಭೂತಬಲಿದಾನೇ ತು ದ್ವೌ ವಾ ತ್ರೀಣ್ವಾಗ್ರತಃ ಕೃತ್ವಾ ।
ಪೂಜಯೇತ್ಪ್ರಮುಖಾ ಕೃತ್ವಾ ಸರ್ವಾನ್ಮಂತ್ರೇಣ ಸಾಧಕಃ ॥ ೫೫ ॥

ಸಾಮಾನ್ಯಪೂಜಾ ಕಥಿತಾ ಬಲೀನಾಂ ಪೂರ್ವತೋ ಮಯಾ ।
ವಿಶೇಷೋ ಯತ್ರ ಯತ್ರಾಸ್ತಿ ತನ್ಮತ್ತಃ ಶೃಣು ಭೈರವ ॥ ೫೬ ॥

---

೫೨. ಕ್ಷತ್ರಿಯ ಮೊದಲಾದ ಕೆಳಗಿನ ಜಾತಿಯವರು ಹರಿಣವನ್ನು (ಜಿಂಕೆಯನ್ನು) ಬಲಿಯಾಗಿ ಕೊಡಕೂಡದು. ಹರಿಣವನ್ನು ಕೊಟ್ಟರೆ ಬ್ರಹ್ಮಹತ್ಯೆಯನ್ನು ಮಾಡಿದ ಪಾಪವು ಬರುವುದು.

೫೩. ಸಿಂಹ ಹುಲಿ ಮನುಷ್ಯ ಇವರನ್ನು ಬಲಿಯಾಗಿ ಕೊಲ್ಲಬೇಕೆಂದು ಎಲ್ಲೆಲ್ಲಿ ಹೇಳಿರುವುದೋ ಅಲ್ಲೆಲ್ಲಾ ಬ್ರಾಹ್ಮಣನು ಈ ಕ್ರಮವನ್ನು ಆಚರಿಸಬೇಕು.

೫೪. ತುಪ್ಪದಿಂದಾಗಲೀ ಅಕ್ಕಿ ಹಿಟ್ಟಿನಿಂದಾಗಲೀ ಹುಲಿ, ಮನುಷ್ಯ, ಸಿಂಹ ಇವುಗಳ ಪ್ರತಿಮೆ (ಬೊಂಬೆ) ಯನ್ನು ಮಾಡಬೇಕು. ಅಥವಾ ಹಿಟ್ಟಿನಿಂದ ಅವುಗಳ ಪ್ರತಿಮೆಗಳನ್ನು ಮಾಡಿ ತುಪ್ಪದಲ್ಲಿ ಕರಿದು ಉಪಯೋಗಿಸಬಹುದು. ಹೀಗೆ ಮಾಡಿದ ಬಲಿರೂಪಗಳನ್ನು ಬಲಿಮಂತ್ರಗಳಿಂದ ಸಂಸ್ಕರಿಸಿ ಕತ್ತಿಯನ್ನು ತೆಗೆದು ಕೊಂಡು ವಿಧ್ಯುಕ್ತವಾಗಿ ಕತ್ತರಿಸಬೇಕು.

೫೫. ಹೆಚ್ಚಾಗಿ ಬಲಿಗಳನ್ನು ಕೊಡಬೇಕಾಗಿದ್ದಲ್ಲಿ ಎರಡೋ ಮೂರೋ ಪಶುಗಳನ್ನು ಎಮರಿಗಿಟ್ಟುಕೊಂಡು ಎಲ್ಲ ಪಶುಗಳನ್ನೂ ಮಂತ್ರವಿಂದ ಸಾಧಕನು ಪೂಜಿಸಬೇಕು.

೫೬. ಎಲೈ ಭೈರವ, ಈಗ ನಾನು ಹೇಳಿದುದು ಬಲಿಗಳ ಸಾಮಾನ್ಯ ಪೂಜೆಯು. ವಿಶೇಷಕ್ರಮವು ಎಲ್ಲೆಲ್ಲಿ ಇರುವುದೋ ಅದನ್ನು ಹೇಳುವೆನು ಕೇಳು.

ಮಹಿಷಂ ಪ್ರಪದೇದ್ದೇವ್ಯೈ ಭೈರವ್ಯೈ ಭೈರವಾಯ ಚ ।
ಅನೇನೈವ ತು ಮಂತ್ರೇಣ ತದಾ ತಂ ಪೂಜಯೇದ್ಬಲಿಂ ॥ ೫೭ ॥

ಯಥಾ ವಾಹಂ ಭವಾ ದ್ವೇಷ್ಟಿ ಯಥಾ ವಹಸಿ ಚಂಡಿಕಾಂ ।
ತಥಾ ಮಮರಿಪೂ ಹಿಂಸ ಶುಭಾಂ ವಹ ಲುಲಾಯಕ ॥ ೫೮ ॥

ಯಮಸ್ಯ ವಾಹನಸ್ತ್ವಂ ತು ವರರೂಪಧರಾವ್ಯಯ ।
ಆಯುರ್ವಿತ್ತಂ ಯಶೋ ದೇಹಿ ಕಾಸರಾಯ ನಮೋಽಸ್ತು ತೇ ॥ ೫೯ ॥

ಖಡ್ಗಸ್ಯ ತು ಯದಾದಾನಂ ಕ್ರಿಯತೇ ತಂತ್ರಮಂತ್ರಕಂ ।
ಜಲೇನಾಭ್ಯುಕ್ಷ್ಯ ಕುರ್ವೀತ ಗುಹಾಜಾತೇತಿ ಭಾಷಯೇತ್ ॥ ೬೦ ॥

ದೈವೇ ಪೈತ್ರೇ ಚ ಶುಭಗಃ ಖಡ್ಗಸ್ತ್ವಂ ಖಡ್ಗಸನ್ನಿಭಃ ।
ಛಿಂಧಿ ವಿಘ್ನಾನ್ ಮಹಾಭಾಗ ಗುಹಾಜಾತ ನಮೋಽಸ್ತು ತೇ ॥ ೬೧ ॥

---

೫೭. ಭೈರವೀದೇವಿಗೂ ಭೈರವನಿಗೂ ಕೋಣವನ್ನು ಬಲಿಯಾಗಿ ಕೊಡ ಬೇಕು. ಆಗಲೂ ಈ ಮುಂದೆ ಹೇಳುವ ಮಂತ್ರದಿಂದ ಬಲಿಪಶುವನ್ನು ಪೂಜಿಸ ಬೇಕು.

೫೮-೫೯. ಎಲೈ ಕೋಣವೆ! ನೀನು ಕುದುರೆಯನ್ನು ದ್ವೇಷಿಸುವಂತೆ ನನ್ನ ಶತ್ರುವನ್ನು ದ್ವೇಷಿಸಿ ಹಿಂಸಿಸು. ಮತ್ತು ನೀನು ಚಂಡಿಕೆಯನ್ನು ವಹಿಸುವಂತೆ ನನ್ನ ವಿಷಯದಲ್ಲಿ ಕಲ್ಯಾಣವನ್ನು ವಹಿಸಿ ಮಂಗಳವನ್ನುಂಟುಮಾಡು. ಶ್ರೇಷ್ಠವಾದ ರೂಪವುಳ್ಳ ಎಲೈ ಕೋಣನೇ ನೀನು ಯಮನ ವಾಹನವು. ಇಂತಹ ನೀನು ನನಗೆ ಆಯುಸ್ಸು, ಯಶಸ್ಸು, ಧನ ಇವುಗಳನ್ನು ಕೊಡು. ನಿನಗೆ ನಮಸ್ಕಾರಮಾಡ-ವೆನು ಎಂದು ಬಲಿಕೋಣವನ್ನು ಪೂಜಿಸಿ ಪ್ರಾರ್ಥಿಸಬೇಕು.

೬೦. ತಂತ್ರಮಂತ್ರಪೂರ್ವಕವಾಗಿ ಖಡ್ಗವನ್ನು (ಬಲಿವಧಕ್ಕಾಗಿ) ತೆಗೆದು ಕೊಳ್ಳುವಾಗ "ಗುಹಾ ಜಾತಾ" ಎಂದು ಹೇಳುತ್ತಾ ನೀರನ್ನು ಆ ಖಡ್ಗಕ್ಕೆ ಪ್ರೋಕ್ಷಿಸಿ ತೆಗೆದುಕೊಳ್ಳಬೇಕು.

೬೧. ಎಲೈ ಖಡ್ಗವೇ! ದೇವಕರ್ಮ ಮತ್ತು ಪಿತೃಕರ್ಮ ಇವುಗಳಲ್ಲಿ ನೀನು ಮಂಗಳಕರನಾದ ಖಡ್ಗರೂಪನಾಗಿರುವೆ. ನಿನ್ನಂತಿರುವವರು ಯಾರೂ ಇಲ್ಲವು. ಎಲೈಮಹಾಭಾಗನೇ! ನನ್ನ ವಿಘ್ನಗಳನ್ನು ಕತ್ತರಿಸು. ಎಲೈ ಗುಹಾಜಾತಾ! ನಿನಗೆ ನಮಸ್ಕಾರವು, ಎಂದು ಖಡ್ಗವನ್ನು ಪ್ರಾರ್ಥಿಸಬೇಕು.

ಪ್ರದಾನೇ ಕೃಷ್ಣಸಾರಸ್ಯ ಮಂತ್ರೋಽಯಂ ಪರಿಕೀರ್ತಿತಃ ।
ಕೃಷ್ಣಸಾರ ಬ್ರಹ್ಮಮೂರ್ತೇ ಬ್ರಹ್ಮತೇಜೋವಿವರ್ಧನ ॥ ೬೨ ॥

ಚತುರ್ವೇದಮಯೀಂ ಪ್ರಾಜ್ಞಾಂ ಪ್ರಜ್ಞಾಂ ದೇಹಿ ಯಶೋ ಮಹತ್ ।
ತಥಾ ಶರಭಪೂಜಾಯಾಂ ಮಂತ್ರಮೇತತ್ಪ್ರಕೀರ್ತಿತಂ ॥ ೬೩ ॥

ತ್ವಮಷ್ಟಪಾದೋ ಬಿಭ್ರಂಶ್ಚ ಚಂದ್ರಭಾಗಸಮುದ್ಭವ ।
ಅಷ್ಟಮೂರ್ತೇ ಮಹಾಬಾಹೋ ಭೈರವಾಖ್ಯ ನಮೋಽಸ್ತುತೇ ॥ ೬೪ ॥

ಯಥಾ ಭೈರವರೂಪೇಣ ವರಾಹೋ ನಿಹತಸ್ತ್ವಯಾ ।
ತಥಾ ಶರಭರೂಪೇಣ ರಿಪೂ೯ ವಿಘ್ನಾ೯ ನಿಷೂದಯ ॥ ೬೫ ॥

ಹರಿಸ್ತ್ವಂ ಹರರೂಪೇಣ ಯಥಾ ವಹಸಿ ಚಂಡಿಕಾಂ ।
ತಥಾಽ ಶುಭಾನಿ ಮೇ ನಿತ್ಯಂ ಬಹುವಿಘ್ನಾಂಶ್ಚ ಸೂದಯ ॥ ೬೬ ॥

---

೬೨. ಕೃಷ್ಣಸಾರ (ಹರಿಣ) ಮೃಗವನ್ನು ಬಲಿಕೊಡುವಾಗ ಈ ಮಂತ್ರವನ್ನು ಹೇಳಬೇಕು. ಬ್ರಹ್ಮಸ್ವರೂಪವೂ, ಬ್ರಹ್ಮತೇಜಸ್ಸನ್ನು ಹೆಚ್ಚಿಸುವವನೂ, ಪ್ರಾಜ್ಞನೂ ಆದ ಎಲೈ ! ಕೃಷ್ಣಸಾರಮೃಗವೇ ! ನಾಲ್ಕು ವೇದಗಳ ಸ್ವರೂಪವಾದ ಪ್ರಜ್ಞೆ (ಜ್ಞಾನ) ಯನ್ನೂ, ಯಶಸ್ಸನ್ನೂ ನನಗೆ ಕೊಡುವವನಾಗು.

೬೩-೬೫. ಶರಭಮೃಗವನ್ನು (ಬಲಿಯಲ್ಲಿ) ಪೂಜಿಸುವಾಗ ಈ ಮಂತ್ರವನ್ನು ಹೇಳಬೇಕು. ಎಂಟು ಕಾಲುಗಳುಳ್ಳದುದೂ, ಚಂದ್ರಭಾಗಾನದಿಯಲ್ಲಿ ಜನಿಸಿದುದೂ, ಈಶ್ವರಸ್ವರೂಪವಾದುದೂ. ಬಲಶಾಲಿಯಾದುದೂ, ಭೈರವನೆಂದು ಹೆಸರುಳ್ಳದುದೂ ಆದ ಶರಭಮೃಗವೇ ! ನಿನಗೆ ನಮಸ್ಕಾರವು. ಹಿಂದೆ ನೀನು ಭೈರವರೂಪದಿಂದ ಆದಿವರಾಹನನ್ನು ಸಂಹರಿಸಿರುವೆ. ಅದರಂತೆ ಈಗಲೂ ಈ ಶರಭರೂಪದಿಂದ ನನ್ನ ಶತ್ರುಗಳನ್ನು ನಾಶಮಾಡುವವನಾಗು. ಇದು ಶರಭಮೃಗದ ಪ್ರಾರ್ಥನಾಮಂತ್ರವು.

೬೬-೬೭. ಎಲೈ ಸಿಂಹವೇ, ನೀನು ಶಂಕರನ ಸ್ವರೂಪವು. ನೀನು ದೇವಿಯಾದ ಚಂಡಿಕೆಯನ್ನು ಯಾವಾಗಲೂ ವಹಿಸುತ್ತಿರುವೆ. ನನ್ನ ವಿಘ್ನಗಳನ್ನೂ ಅಮಂಗಳಗಳನ್ನೂ ಹೋಗಲಾಡಿಸು. ವಿಷ್ಣುರೂಪಿಯಾದ ನೀನು ಹಿಂದೆ ಜಗತ್ತಿಗೇ ವಿಘ್ನರೂಪಿಯಾಗಿದ್ದ ಹಿರಣ್ಯಕಶಿಪುವೆಂಬ ದೈತ್ಯನನ್ನು ಸಿಂಹರೂಪವನ್ನು ಧರಿಸಿ

ತ್ವಂ ಹರಿಃ ಸಿಂಹರೂಪೇಣ ಜಗತ್ಪ್ರತ್ಯೂಹರೂಪಿಣಂ ।
ಜಘಾನ ಯೇನ ಸತ್ಯೇನ ಹಿರಣ್ಯಕಶಿಪುಂ ಪುರಾ ॥ ೬೭ ॥

ಇತ್ಯೇವಂ ಸಿಂಹಪೂಜಾಯಾಂ ಕ್ರಮ ಉಕ್ತೋ ಮಯಾऽನಘೇ ।
ನರೇ ಸ್ವಗಾತ್ರರುಧಿರೇ ಪರ್ಯಾಯಂ ಶೃಣು ಭೈರವ ॥ ೬೮ ॥

ಪಿಠೇ ಚೇದ್ದೀಯತೇ ಮರ್ತ್ಯೋ ಬಲಿಂ ದದ್ಯಾಚ್ಛ್ಮಶಾನಕೇ ।
ಶ್ಮಶಾನಂ ಹೇರುಕಾಖ್ಯಂ ತು ತತ್ಪೂರ್ವಂ ಪ್ರತಿಪಾದಿತಂ ॥ ೬೯ ॥

ಕಾಮಾಖ್ಯಾನಿಲಯೇ ಶೈಲೇ ಔಡ್ರಾದೌ ವಿದ್ಧಿ ತತ್ಕ್ರಮಂ ।
ಮಮ ರೂಪಂ ಶ್ಮಶಾನಂ ತದ್ಭೈರವಾಖ್ಯಂ ಚ ಕಥ್ಯತೇ ॥ ೭೦ ॥

ತತ್ರಾಂಗತ್ವಂ ತಪಃಸಿದ್ಧೌ ತ್ರಿಭಾಗಂ ತು ಭವಿಷ್ಯತಿ ।
ಪೂರ್ವಾಂಗೇ ಭೈರವಾಖ್ಯೇ ತು ಸಮುತ್ಸೃಷ್ಟಿರ್ನರಸ್ಯ ತು ॥ ೭೧ ॥

ದಕ್ಷಿಣಾಂಗೇ ಶಿರೋ ದದ್ಯಾದ್ಭೈರವ್ಯಾ ಮುಂಡಮಾಲಯಾ ।
ರುಧಿರಂ ಪಶ್ಚಿಮಾಂಗೇ ತು ಹೇರುಕಾಖ್ಯೇ ನಿಯೋಜಯೇತ್ ॥ ೭೨ ॥

ಯಾವ ಸತ್ಯದಿಂದ ಸಂಹರಿಸಿರುವೆಯೋ, ಅದೇ ಸತ್ಯದಿಂದ ನನ್ನ ವಿಘ್ನ ಮತ್ತು ಅಮಂಗಳಗಳನ್ನು ಸಂಹರಿಸು. ಇದು ಸಿಂಹಪೂಜೆಯ ಮಂತ್ರವು.

೬೮. ಎಲೈ ಪುಣ್ಯವಂತನೇ, ಈ ರೀತಿಯಾಗಿ ಸಿಂಹಪೂಜೆಯ ಕ್ರಮವನ್ನು ಹೇಳಿರುವೆನು, ಇನ್ನು ತನ್ನ ಶರೀರದ ರಕ್ತವನ್ನೂ ಮತ್ತು ಮನುಷ್ಯನನ್ನು ಬಲಿ ಕೊಡುವ ಕ್ರಮವನ್ನೂ ಹೇಳುವೆನು ಕೇಳುವವನಾಗು.

೬೯. ದೇವೀಪೀಠದಲ್ಲಿ ಮನುಷ್ಯನನ್ನು ಬಲಿಕೊಡುವುದಾದರೆ, ಸ್ಮಶಾನವಲ್ಲಿ ಬಲಿಯನ್ನು ಕೊಡಬೇಕು. ಹೇರುಕವೆಂಬ ಸ್ಮಶಾನವನ್ನು ಹಿಂದೆಯೇ ಹೇಳಿರುವೆನು,

೭೦. ಕಾಮಾಖ್ಯಾದೇವಿಯು ನೆಲಸಿರುವ ನೀಲಶೈಲದಲ್ಲಿಯೂ, ಓಡ್ರಪೀಠ ದಲ್ಲಿಯೂ ಅನುಸರಿಸಬೇಕಾದ ಕ್ರಮವೂ ಅದೇ ಆಗಿರುವುದು, ಭೈರವವೆಂಬ ಸ್ಮಶಾನವು ನನ್ನ ರೂಪವಾದುದು.

೭೧-೭೨. ಆ ಸ್ಮಶಾನದಲ್ಲಿ ತಪಸ್ಸಿದ್ಧಿ (ಪೂಜಾಸಿದ್ಧಿ) ಯಾಗಬೇಕಾದರೆ ಮೂರು ಕ್ರಮವನ್ನು ಅನುಸರಿಸಬೇಕು. ಆ ಸ್ಮಶಾನದ ಭೈರವವೆಂಬ ಪೂರ್ವಪ್ರದೇಶ ದಲ್ಲಿ ಮೃತನಾದ ನರನನ್ನು ವಿಸರ್ಜಿಸಬೇಕು, ದಕ್ಷಿಣಪ್ರದೇಶದಲ್ಲಿ ಭೈರವಿಯ

ದತ್ವಾ ಸಂಪೂಜ್ಯ ತು ನರಂ ವಿಸೃಜ್ಯಾಗಮನಕ್ರಮೇ ।
ಪೀಠಶ್ಮಶಾನೇಷು ಬಲಿಂ ನೇಕ್ಷೇತ್ತು ಬಲಿದಾಯಕಃ ॥ ೭೩ ॥

ಅನ್ಯತ್ರಾಪಿ ಯತೋ ಯತ್ರ ದೀಯತೇ ಯನ್ಮಹಾಬಲಿಃ ।
ತತ್ರಾಪ್ಯನ್ಯತ್ರ ಚೋತ್ಸೃಜ್ಯ ಛಿತ್ವಾನ್ಯತ್ರ ಶಿರೋ ಮೃತಂ ॥ ೭೪ ॥

ನಿಯೋಜಯೇತ್ಸಾಧಕಸ್ತು ವಿಸೃಜ್ಯ ನ ವಿಲೋಕಯೇತ್ ।
ಸುಸ್ನಾತಂ ಮನುಜಂ ದೀಪ್ತಂ ಪೂರ್ವಾಹ್ಣೇ ನಿಯತಾಶನಂ ॥ ೭೫ ॥

ಮಾಂಸಮೈಥುನಭೋಗ್ಯೇನ ಹೀನಂ ಸ್ರಕ್ಚಂದನೋಕ್ಷಿತಂ ।
ಕೃತ್ವೋತ್ತರಾಮುಖಂ ತಂ ತು ತದಂಗೇಷ್ವಂಗದೇವತಾಃ ॥ ೭೬ ॥

ಮುಂಡಮಾಲೆಗೆ ಆ ಮನುಷ್ಯನ ಶಿರಸ್ಸನ್ನು ಅರ್ಪಿಸಬೇಕು. ರಕ್ತವನ್ನು ಹೇರುಕ ಎಂಬ ಸ್ಮಶಾನದ ಪಶ್ಚಿಮ ಪ್ರದೇಶದಲ್ಲಿ ಕೊಡಬೇಕು.

೭೩. ಬಲಿಮನುಷ್ಯನನ್ನು ಪೂಜಿಸಿ, ಬಲಿಕೊಟ್ಟು ವಿಸರ್ಜಿಸಿ ತಾನು ಹಿಂತಿರುಗ ಬೇಕು. ಪೀಠಸ್ಮಶಾನಗಳಲ್ಲಿ ಬಲಿಯನ್ನು ಬಲಿ ಕೊಡುವವನು ಹಿಂತಿರುಗಿ ನೋಡಬಾರದು.

೭೪. ಮಿಕ್ಕಸ್ಥಳಗಳಲ್ಲಿಯೂ ಸಹ ಎಲ್ಲೆಲ್ಲಿ ಮಹಾಬಲಿಯು ಕೊಡಲ್ಪಡು ವುದೋ ಅಲ್ಲಲ್ಲಿ ಸಾಧಕನು ಹಿಂದೆ ಹೇಳಿದ ಕ್ರಮದಂತೆ ಬಲಿಯ ಶಿರಸ್ಸನ್ನು ಕತ್ತರಿಸಿ ರಕ್ತವನ್ನರ್ಪಿಸಿ ಮೃತಪಶುವನ್ನು ವಿಸರ್ಜಿಸಬೇಕು. ವಿಸರ್ಜಿಸಿದ ಮೇಲೆ ಹಿಂತಿರುಗಿ ನೋಡಬಾರದು.

೭೫. ನರಬಲಿಯನ್ನು ಕೊಡುವ ಕ್ರಮವು ಈ ರೀತಿಯಾಗಿರುವುದು. ಬಲಿ ಯಾಗುವ ಮನುಷ್ಯನು ಶುದ್ಧವಾಗಿ ಸ್ನಾನಮಾಡಬೇಕು. ಪೂರ್ವಾಹ್ಣದಲ್ಲಿ ಉಪ ವಾಸವಿರಬೇಕು. ಮಾಂಸಭೋಜನ, ಸ್ತ್ರೀಮೈಥುನ ಇವುಗಳನ್ನು ಮಾಡಿರಬಾರದು. ಪುಷ್ಪಹಾರ ಚಂದನಗಳಿಂದ ಅವನನ್ನು ಅಲಂಕರಿಸಬೇಕು.

೭೬. ಆ ಬಲಿಪುರುಷನನ್ನು ಉತ್ತರಾಭಿಮುಖವಾಗಿ ನಿಲ್ಲಿಸಿ ಅವನ ಅಂಗ ಗಳಲ್ಲಿ ಅಂಗದೇವತೆಗಳನ್ನು ಪೂಜಿಸಬೇಕು. ಮತ್ತು ದೇವತಾನಾಮದಿಂದ ಆ ಮನು ಷ್ಯನನ್ನು ಪೂಜಿಸಬೇಕು.

ಪೂಜಯೇತ್ತಂತು ನಾಮ್ನಾ ತು ದೈವತೇನ ಚ ಮಾನುಷಂ ।
ತದ್ಬ್ರಹ್ಮರಂಧ್ರೇ ಬ್ರಹ್ಮಾಣಂ ನಾಸಾಯಾಂ ಚಾಪಿ ಮೇದಿನೀಂ ॥ ೭೭ ॥

ಕರ್ಣಯೋಸ್ತು ತಥಾಕಾಶಂ ಜಿಹ್ವಾಯಾಂ ಸರ್ವತೋಮುಖಂ ।
ಜ್ಯೋತೀಂಷಿ ನೇತ್ರಯೋರ್ವಿಷ್ಣುಂ ವದನೇ ಪರಿಪೂಜಯೇತ್ ॥ ೭೮ ॥

ಲಲಾಟೇ ಪೂಜಯೇಚ್ಚಂದ್ರಂ ಶುಕ್ರಂ ದಕ್ಷಿಣದಂಡತಃ ।
ವಾಮಗಂಡೇ ತಥಾ ವಹ್ನಿಂ ಗ್ರೀವಾಯಾಂ ಸಮವರ್ತಿನಂ ॥ ೭೯ ॥

ಕೇಶಾಗ್ರೇ ನಿರ್ಋತಿಂ ಮಧ್ಯೇ ಭ್ರುವೋಶ್ಚಾಪಿ ಪ್ರಚೇತಸಂ ।
ನಾಸಾಮೂಲೇ ತು ಶ್ವಸನಂ ಸ್ಕಂಧೇ ಚಾಪಿ ಧನೇಶ್ವರಂ ॥ ೮೦ ॥

ಹೃದಯೇ ಸರ್ಪರಾಜಂ ತು ಪೂಜಯಿತ್ವಾ ಪಠೇದಿದಂ ।
ನರವರ್ಯ ಮಹಾಭಾಗ ಸರ್ವದೇವನಮಸ್ಕೃತ ॥ ೮೧ ॥

ರಕ್ಷ ಮಾಂ ಶರಣಾಪನ್ನಂ ಸಪುತ್ರಪಶುಬಾಂಧವಂ ।
ಸರಾಜ್ಯಂ ಮಾಂ ಸಹಾಮಾತ್ಯಂ ಚತುರಂಗಸಮನ್ವಿತಂ ॥ ೮೨ ॥

೭೭-೮೦. ಆ ಪುರುಷನ ಬ್ರಂಹರಂಧ್ರವಲ್ಲಿ ಬ್ರಹ್ಮನನ್ನೂ. ಮೂಗಿನಲ್ಲಿ ಭೂಮಿಯನ್ನೂ, ಕಿವಿಗಳಲ್ಲಿ ಆಕಾಶವನ್ನೂ, ನಾಲಗೆಯಲ್ಲಿ ವಾಯುವನ್ನೂ, ಕಣ್ಣುಗಳಲ್ಲಿ ಜ್ಯೋತಿಸ್ಸುಗಳನ್ನೂ, ಮುಖದಲ್ಲಿ ವಿಷ್ಣುವನ್ನೂ, ಲಲಾಟದಲ್ಲಿ(ಹುಬ್ಬು ನಡು) ಚಂದ್ರನನ್ನೂ, ಬಲಕಪೋಲದಲ್ಲಿ ಇಂದ್ರನನ್ನೂ, ಎಡಕಪೋಲದಲ್ಲಿ ಅಗ್ನಿಯನ್ನೂ, ಕಪ್ತಿನಲ್ಲಿ ಯಮನನ್ನೂ, ತಲೆಗೂದಲು ಮೇಲುಭಾಗದಲ್ಲಿ ನಿರ್ಋತಿಯನ್ನೂ, ಹುಬ್ಬುಗಳಮಧ್ಯದಲ್ಲಿ ವರುಣನನ್ನೂ, ಮೂಗಿನ ಮೂಲದಲ್ಲಿ ವಾಯುವನ್ನೂ, ಭುಜ ಶಿರಸ್ಸಿನಲ್ಲಿ ಕುಬೇರನನ್ನೂ, ಹೃದಯದಲ್ಲಿ ವಾಸುಕಿಯನ್ನೂ (ಆದಿಶೇಷ) ಪೂಜಿಸಿ, ಈ ಮಂತ್ರವನ್ನು ಪೇಳಬೇಕು.

೮೧-೮೩. ಪುಣ್ಯವಂತನಾದ ಎಲೈ ನರೋತ್ತಮನೆ! ಸಕಲದೇವತಾಸ್ತುತನೆ! ಶರಣಾಗತನಾದ ನನ್ನನ್ನು ಪುತ್ರ, ಪಶು, ಬಂಧುಗಳೊಡನೆ ರಕ್ಷಿಸು, ನನ್ನ ರಾಜ್ಯ, ಮಂತ್ರಿ, ಚತುರಂಗ ಸೈನ್ಯ ಇವುಗಳನ್ನೂ ಸಲಹು, ನಿನಗೆ ಮರಣವು

ರಕ್ಷ ಪರಿತ್ಯಜ ಪ್ರಾಣಾನ್ಮರಣೇ ನಿಯತೇ ಸತೀ ।
ಮಹಾತಪೋಭಿರ್ಜ್ಞಾನೈಶ್ಚ ಯಜ್ಞೈರ್ಯತ್ಸಾಧ್ಯತೇ ಫಲಂ ॥ ೬೩ ॥

ತನ್ಮೇ ದೇಹಿ ಮಹಾಭಾಗ ತ್ವಂ ಚಾಪಿ ಪ್ರಾಪ್ನುಹಿ ಶ್ರಿಯಂ ।
ರಾಕ್ಷಸಾಶ್ಚ ಪಿಶಾಚಾಶ್ಚ ವೇತಾಲಾದ್ಯಾಃ ಸರೀಸೃಪಾಃ ॥ ೬೪ ॥

ನೃಪಾಶ್ಚ ರಿಪವಶ್ಚಾನ್ಯೇ ನ ಮಾಂ ತೇ ಘ್ನಂತು ತ್ವತ್ಕೃತೇ ।
ತ್ವತ್ಕಂಠನಾಳಗಳಿತೈಃ ಶೋಣಿತೈರಂಗಸಂಯುತೈಃ ॥ ೬೫ ॥

ಆಪ್ಯಾಯಯು ಸ್ವಾತ್ಮವ ನ್ಮೃತ್ವಾ ಮರಣೇ ನಿಯತೇ ಸತಿ ।
ಏವಂ ಸಂಪೂಜ್ಯ ವಿಧಿವತ್ಪೂರ್ವತಂತ್ರೈಶ್ಚ ಪೂಜಯೇತ್ ॥ ೬೬ ॥

ಪೂಜಿತೋ ಮತ್ಸ್ವರೂಪೋಽಯಂ ದಿಕ್ಪಾಲಾಧಿಷ್ಠಿತೋ ಭವೇತ್ ।
ಅಧಿಷ್ಠಿತಸ್ತಥಾ ಚಾನ್ಯೈರ್ಬ್ರಹ್ಮಾದ್ಯೈಃ ಸಕಲೈಃ ಸುರೈಃ ॥ ೬೭ ॥

ಸಿದ್ಧವಾಗಿರುವುದರಿಂದ ನಿಶ್ಚಲಚಿತ್ತದಿಂದ ಪ್ರಾಣವನ್ನು ಬಿಡು. ಮಹಾತಪಸ್ಸು, ಜ್ಞಾನ, ಯಜ್ಞ ಇವುಗಳಿಂದ ಯಾವ ಫಲವು ಲಭಿಸುವುದೋ ಆ ಫಲವು ನನಗೆ ಬರುವಂತೆ ಮಾಡು. ನೀನೂ ಲಕ್ಷ್ಮ್ಯಯನ್ನು ಪಡೆಯುವಿ. ರಾಕ್ಷಸರು, ಪಿಶಾಚಿಗಳು, ವೇತಾಲ ಮೊದಲಾದುವುಗಳು, ಹಾವುಗಳು, ಮತ್ತು ಶತ್ರುರಾಜರುಗಳು ಇವರು ನಿನ್ನ ಬಲಿಯಿಂದ ನನ್ನನ್ನು ಹಿಂಸೆಪಡಿಸದಿರಲಿ. ನಿನ್ನ ಬಲಿಯಿಂದ ಅವನ ತೊಂದರೆಯು ನನಗೆ ತಪ್ಪಲಿ. ನಿನಗೆ ಮರಣವು ಸಿದ್ಧವಾಗಿರುವುದು, ಆದಕಾರಣ ನೀನು ಮರಣ ಹೊಂದಿ ನಿನ್ನ ಕಂಠನಾಳದಿಂದಲೂ ಮಿಕ್ಕ ಅಂಗದಿಂದಲೂ ಹೊರಟ ರಕ್ತಗಳಿಂದ ದೇವಿಯನ್ನು ತೃಪ್ತಿಗೊಳಿಸು.

೬೬-೬೭. ಈ ಮಂತ್ರಗಳಿಂದ ಬಲಿಪುರುಷನನ್ನು ಪೂಜಿಸಿ, ಪೂರ್ವತಂತ್ರಗಳಿಂದಲೂ ಪೂಜಿಸಬೇಕು. ಹೀಗೆ ಪೂಜಿತನಾದ ಬಲಿಪುರುಷನು ನನ್ನ ಎಂದರೆ ಶಂಕರನ ಸ್ವರೂಪವೇ ಆಗಿರುವನು. ದಿಕ್ಪಾಲಕರು, ಬ್ರಹ್ಮನೇ ಮೊದಲಾದ ದೇವತೆಗಳು ಇವರೆಲ್ಲರೂ ಆ ನರದಲ್ಲಿ ನೆಲಸಿರುವರು.

ಕೃತಪಾಪೋಽಪಿ ಮನುಜೋ ನಿಷ್ಪಾಪಃ ಸ ತು ಜಾಯತೇ ।
ತಸ್ಯ ನಿಷ್ಕಲುಷಸ್ಯಾಸು ಪೀಯೂಷಂ ಶೋಣಿತಂ ಭವೇತ್ ॥ ೮೮ ॥

ಪ್ರೀಣಾತಿ ಚ ಮಹಾದೇವೀ ಜಗನ್ಮಾತಾ ಜಗನ್ಮಯೀ ।
ಸೋಽಪಿ ಕಾಯಂ ಪರಿತ್ಯಜ್ಯ ಮಾನುಷಂ ನ ಚಿರಾನ್ಮೃತಃ ॥ ೮೯ ॥

ಭವೇದ್ಗಣಾನಾಮಧಿಪೋ ಮಯಾಪಿ ಬಹುಸತ್ಕೃತಃ ।
ಇತೋಽನ್ಯಥಾ ಪಾಪಯುಕ್ತಂ ಮಲಮೂತ್ರವಶಾಯುತಂ ॥ ೯೦ ॥

ತಂ ಬಲಿಂ ನ ಹಿ ಗೃಹ್ಣಾತಿ ಕಾಮಾಖ್ಯಾನ್ಯಾಪಿ ನಾಮತಃ ।
ಅನ್ಯೇಷಾಂ ಮಹಿಷಾದೀನಾಂ ಬಲೀನಾಮಥಪೂಜನಾತ್ ॥ ೯೧ ॥

ಕಾಯೋ ಮೇಧ್ಯತ್ವಮಾಯಾತಿ ರಕ್ತಂ ಗೃಹ್ಣಾತಿ ವೈ ಶಿವಾ ।
ಅನ್ಯೇಭ್ಯೋಽಪಿ ಚ ದೇವೇಭ್ಯೋ ಯದಾ ಯತ್ತು ಪ್ರದೀಯತೆ ॥ ೯೨ ॥

---

೮೮. ಆ ಬಲಿಪುರುಷನು ಪಾಪಿಯಾಗಿದ್ದರೂ ಪೂಜಾನಂತರ ಬಲಿಕಾಲವಲ್ಲಿ ಪಾಪವಿಲ್ಲದವನಾಗುವನು, ಮುಂದೆ ಪಾಪಶೂನ್ಯವಾದ ಅವನ ರಕ್ತವು ಅಮೃತಸಮಯ ವಾಗುವುದು. ಜಗನ್ಮಾತೆಯೂ ಜಗದ್ರೂಪಳೂ ಆದ ಮಹಾದೇವಿಯು ಆ ಅಮೃತ ವನ್ನು ಪಾನಮಾಡಿ ಪ್ರೀತಳಾಗುವಳು.

೮೯. ಆ ಬಲಿಪುರುಷನು ಮೃತನಾದಮೇಲೆ ಆ ಮನುಷ್ಯಶರೀರವನ್ನು ಬಿಟ್ಟು ಆ ಕೂಡಲೇ ನನ್ನ ಪ್ರಮಥಗಣಗಳಿಗೆ ನಾಯಕನಾಗಿ ನನ್ನಿಂದಲೂ ಗೌರವಿ ಸಲ್ಪಡುವನು.

೯೦. ಈ ಕ್ರಮಕ್ಕೆ ವಿರುದ್ಧವಾಗಿ ಮಲ,ಮೂತ್ರ, ವಸ್ತ್ರ ಮೊದಲಾದ ಅಶುಚಿ ಗಳಿಂದ ಕೂಡಿ ಪಾಪಿಯಾಗಿರುವ ಬಲಿಪುರುಷನನ್ನು ಕಾಮಾಖ್ಯಾದೇವಿಯಾಗಲೀ, ಇನ್ನಾವ ದೇವಿಯಾಗಲೀ ಸ್ವೀಕರಿಸುವುದಿಲ್ಲವು.

೯೧. ಇದೇರೀತಿಯಾಗಿ ಮಿಕ್ಕ ಕೋಣ ಮುಂತಾದ ಬಲಿಪಶುಗಳನ್ನು ಸೃಜಿಸಿದರೆ ಅವುಗಳ ಶರೀರವು ಪವಿತ್ರವಾಗುವುದು. ಆಗ ದೇವಿಯು ಅವುಗಳ ರಕ್ತ ವನ್ನು ಸ್ವೀಕರಿಸುವಳು.

೯೨. ಹೀಗೆ ಮಿಕ್ಕ ದೇವತೆಗಳಿಗೆ ಬಲಿಯನ್ನು ಕೊಡುವಾಗಲೂ, ಆ ಪಶು ಗಳನ್ನು ಈ ಕ್ರಮದಂತೆ ಪೂಜಿಸಿಯೇ ಪೂಜಿತವಾದ ದೇವತೆಗೆ ಅರ್ಪಿಸಬೇಕು.

ತದರ್ಚಿತಂ ಪ್ರದದ್ಯಾತ್ತು ಪೂಜಿತಾಯ ಸುರಾಯ ವೈ ।
ಕಾಣಂ ಪಂಗುಂ ಚಾತಿವೃದ್ಧಂ ರೋಗಿಣಂ ಚ ಗಲದ್ವ್ರಣಂ ॥ ೯೩ ॥

ಕ್ಲೀಬಂ ಹೀನಾಂಗಮಥವಾ ವೃದ್ಧಲಿಂಗಂ ಕುಲಕ್ಷಣಂ ।
ಶ್ವಿತ್ರಿಣಂ ಚಾತಿಹ್ರಸ್ವಂ ಚ ಮಹಾಪಾತಕಿನಂ ತಥಾ ॥ ೯೪ ॥

ಅದ್ವಾದಶಕವರ್ಷೀಯಂ ಶಿಶುಸೂತಕಸಂಯುತಂ ।
ಊರ್ಧ್ವಂ ಸಂವತ್ಸರಾಚ್ಚಾಪಿ ಮಹಾಗುರುನಿಪಾತಿನಂ ॥ ೯೫ ॥

ಬಲಿಕರ್ಮಣಿ ಚೈತಾಂಸ್ತು ವರ್ಜಯೇತ್ಪೂಜಿತಾನಪಿ ।
ಪಶೂನಾಂ ಪಕ್ಷಿಣಾಂ ವಾಪಿ ನಾರಾಣಾಂ ಚ ವಿಶೇಷತಃ ॥ ೯೬ ॥

ಸ್ತ್ರಿಯಂ ನ ದದ್ಯಾತ್ತು ಬಲಿಂ ದತ್ತ್ವಾ ನರಕಮಾಪ್ನುಯಾತ್ ।
ಸಂಘಾತಬಲಿದಾನೇ ತು ಯೋಷಿತಂ ಪಶುಪಕ್ಷಿಣಃ ॥ ೯೭ ॥

೯೩-೯೫. ಕುರುಡ, ಕುಂಟ, ತುಂಬಾವಯಸ್ಸಾದ ಮುದುಕ, ರೋಗಿ,ಕೊಳೆತು ಸುರಿಯುತ್ತಿರುವ ವ್ರಣ(ಘಾಯ)ವುಳ್ಳವನು, ನಂಪುಸಕ ಅಂಗನಿಲ್ಲದವನು, ವಯಸ್ಸಾಗದಿದ್ದರೂ ಮುದುಕನಂತಿರುವನನು, ಕೆಟ್ಟಲಕ್ಷಣಗಳುಳ್ಳವನು, ಕುಷ್ಠರೋಗವುಳ್ಳವನು, ಕುಳ್ಳನು, ಬ್ರಹ್ಮಹತ್ಯೆಯೇ ಮೊದಲಾದ ಮಹಾಪಾಪಗಳನ್ನು ಮಾಡಿದವನು, ಹನ್ನೆರಡು ವರ್ಷದವಳಗೆ ಇರುವವನು, ಶಿಶುಜನನ, ಸೂತಕ ಮೊದಲಾದವುಗಳಿಂದ ಅಶುಚಿಯಾಗಿರುವವನು, ಒಂದುವರ್ಷದಹಿಂದೆ ಮಹಾಗುರುವನ್ನು ಕೊಂದವನು ಇಂಥವರನ್ನು ಬಲಿಕೊಡಕೂಡದು. ಇಂತಹವರು ಪೂಜಿತರಾದರೂ ಬಲಿಗೆ ಯೋಗ್ಯರಲ್ಲವು.

೯೬. ಪಶುಗಳು, ಪಕ್ಷಿಗಳು, ಇವುಗಳಲ್ಲಿಯೂ, ಮುಖ್ಯವಾಗಿ ಮನುಷ್ಯರಲ್ಲಿಯೂ ಸ್ತ್ರೀಯನ್ನು ಬಲಿಯಾಗಿ ಕೊಡಕೂಡದು. ಹಾಗೆ ಕೊಟ್ಟರೆ ನರಕವು ಲಭಿಸುವುದು.

೯೭. ಸಮೂಹವಾಗಿ ಬಲಿಯನ್ನು ಕೊಡುವಾಗ ಪಶುಪಕ್ಷಿಗಳಲ್ಲಿ ಸ್ತ್ರೀಜಾತಿಯನ್ನು ಬಲಿಕೊಡಬಹುದು. ಆದರೆ ಮನುಷ್ಯಸ್ತ್ರೀಯನ್ನು ಆಸಂಘಾತಬಲಿದಾನದಲ್ಲಿಯೂ ಬಲಿಯಾಗಿ ಕೊಡಕೂಡದು.

ಬಲಿಂ ದದ್ಯಾನ್ನಾನುಷೀಂ ತು ತ್ಯಕ್ತ್ವಾ ಸಂಘಾತಪೂಜಿತಂ ।
ನ ತ್ರಿಮಾಸೀಯಕಾನ್ಯೂನಂ ಪಶುಂ ದದ್ಯಾಚ್ಛಿವಾಬಲಿಂ ॥ ೯೮ ॥

ನ ಚ ತ್ರೈಪಕ್ಷಕಾನ್ಯೂನಂ ಪ್ರದದ್ಯಾದ್ವೈ ಪತತ್ರಿಣಂ ।
ಕಾಣವ್ಯಂಗಾದಿದುಷ್ಟಂ ತು ನ ಪಶುಂ ಪಕ್ಷಿಣಂ ತಥಾ ॥ ೯೯ ॥

ದೇವ್ಯೈ ದದ್ಯಾತ್ತಥಾಮರ್ತ್ಯಂ ತಥೈವ ಪಶುಪಕ್ಷಿಣೌ ।
ಛಿನ್ನಲಾಂಗೂಲಕರ್ಣಾದೀ ಭಗ್ನದಂತಾಂಸ್ತಥೈವ ಚ ॥ ೧೦೦ ॥

ಭಗ್ನಶೃಂಗಾದಿಕಂ ವಾಪಿ ನ ದದ್ಯಾತ್ತು ಕದಾಚನ ।
ನ ಬ್ರಾಹ್ಮಣಂ ಬಲಿಂ ದದ್ಯಾಚ್ಚಂಡಾಲಮಪಿ ಪಾರ್ಥಿವ ॥ ೧೦೧ ॥

ನೋತ್ಸೃಷ್ಟಂ ದ್ವಿಜದೇವೇಭ್ಯೋ ಭೂಪತೇಸ್ತನಯಂ ತಥಾ ।
ರಣೇನ ವಿಜಿತಂ ದದ್ಯಾತ್ತನಯಂ ರಿಪುಭೂಭೃತಃ ॥ ೧೦೨ ॥

---

೯೮. ಜನಿಸಿ ಮೂರುತಿಂಗಳೂ ಆಗದಿರುವ ಪಶುವನ್ನು ಬಲಿಕೊಡಬಾರದು. ಹಾಗೆಯೇ, ಜನಿಸಿ ಮೂರು ಪಕ್ಷಗಳೂ ಆಗದಿರುವ ಪಕ್ಷಿಯನ್ನೂ ಬಲಿಕೊಡಬಾರದು.

೯೯. ಕುರುಡು ಮತ್ತು ಅಂಗಹೀನವಾಗಿರುವ ಪಶುವನ್ನೂ ಪಕ್ಷಿಯನ್ನೂ ಕೊಡಕೂಡದು. ಅವರಂತೆ ಕುರುಡ ಕುಂಟ ಮುಂತಾದ ಅಂಗವೈಕಲ್ಯವಿರುವ ಮನುಷ್ಯನನ್ನು ಬಲಿಯಾಗಿ ಕೊಡಬಾರದು.

೧೦೦. ಮತ್ತು ಬಾಲವಿಲ್ಲದುದೂ ಕಿವಿಗಳಿಲ್ಲದುದೂ ಹಲ್ಲುಮುರಿದುದೂ ಕೋಡುಮುರಿದಿರುವುದೂ ಆದಂತಹ ಪಶುವನ್ನೂ ಬಲಿಯಾಗಿ ಕೊಡಬಾರದು.

೧೦೧. ಬ್ರಾಹ್ಮಣನನ್ನೂ ಪೊಲೆಯನನ್ನೂ ಬಲಿಕೊಡಬಾರದು. ಬ್ರಾಹ್ಮಣ ಮತ್ತು ದೇವತೆಗಳಿಂದ ಪರಿತ್ಯಕ್ತನಾದವನನ್ನೂ ರಾಜಕುಮಾರನನ್ನೂ ಬಲಿಕೊಡ ಬಾರದು.

೧೦೨. ಆದರೆ ಯುದ್ಧದಲ್ಲಿ ಸೆರೆಹಿಡಿದ ಶತ್ರು ರಾಜಕುಮಾರನನ್ನು ಬಲಿ ಕೊಡಬಹುದು. ಮತ್ತು ತನಗೆ ವಿರೋಧಿಗಳಲ್ಲದಿರುವ ಪುತ್ರ, ಸೋದರ, ತಂದೆ, ಇವರ ನ್ನೂ ಬಲಿಕೊಡಬಾರದು, ಹಾಗೆಯೇ ವೈಶ್ಯರಲ್ಲಿ ಯಜಮಾನನಾದವನನ್ನೂ, ಸೋದ ರಳಿಯನನ್ನೂ, ಸೋದರಮಾವನನ್ನೂ ಬಲಿಕೊಡಬಾರದು.

ಸ್ವಪುತ್ರಂ ಭ್ರಾತರಂ ವಾಪಿ ಪಿತರಂ ಚಾವಿರೋಧಿನಂ ।
ವಿಪ್ಪೆತಿಂ ಚ ನ ದದ್ಯಾತ್ತು ಭಾಗಿನೇಯಂ ಚ ಮಾತುಲಂ ॥ ೧೦೩ ॥

ಅನುಕ್ತಾ ನಾಪಿ ದದ್ಯಾತ್ತು ತಥಾಽಜ್ಞಾತಾ ಮೃಗದ್ವಿಜಾಃ ।
ಉಕ್ತಾಲಾಭೇ ಪ್ರದದ್ಯಾತ್ತು ಗರ್ದಭಂ ಚೋಷ್ಟ್ರಮೇವ ಚ ॥ ೧೦೪ ॥

ಲಾಭೇಽನ್ಯೇಷಾಂ ನ ವಿತರೇದ್ವ್ಯಾಘ್ರಮುಷ್ಟ್ರಂ ಖರಂ ತಥಾ ।
ಸಂಪೂಜ್ಯ ವಿಧಿವನ್ಮರ್ತ್ಯಂ ಪಶುಂ ಪಕ್ಷಿಣಮೇವ ವಾ ॥ ೧೦೫ ॥

ಸಂಛಿನ್ನಂ ಚಾಪಿ ಮಂತ್ರೇಣ ಮಂತ್ರೇಣೈವ ನಿವೇದಯೇತ್ ।
ನಾರಂ ಮರ್ತ್ಯಶಿರೋ ರಕ್ತಂ ದೇವ್ಯಾಃ ಸಮ್ಯಙ್ನಿವೇದಯೇತ್ ॥ ೧೦೬ ॥

ಭಾಗಂ ತು ವಾಮತೋ ದದ್ಯಾನ್ಮಾಹಿಷಂ ವಿತರೇತ್ಪುರಃ ।
ಪಕ್ಷಿಣಂ ವಾಮತೋ ದದ್ಯಾದಗ್ರತೋ ದೇಹಶೋಣಿತಂ ॥ ೧೦೭ ॥

ಕ್ರವ್ಯಾದಾನಾಂ ಪಶೂನಾಂ ತು ಪಕ್ಷಿಣಾಂ ತು ಶಿರೋಽಸೃಜಂ ।
ವಾಮೇ ನಿವೇದಯೇತ್ಪಾರ್ಶ್ವೇ ಜಲಜಾನಾಂ ಚ ಸರ್ವಶಃ ॥ ೧೦೮ ॥

೧೦೪-೧೦೫. ಈ ತಂತ್ರದಲ್ಲಿ ಹೇಳದೆ ಇರುವ ಪಶುಗಳನ್ನೂ, ತಿಳಿಯದಿರುವ ಪಶುಗಳನ್ನೂ ಬಲಿಯಾಗಿ ಕೊಡಬಾರದು. ಆದರೆ ಬಲಿಗೆ ಹೇಳಿರುವ ಪಶುಗಳು ಸಿಕ್ಕದಿದ್ದರೆ ಕತ್ತೆ, ಒಂಟೆಗಳನ್ನು ಬಲಿಯಾಗಿ ಕೊಡಬಹುದು. ಹೇಳಿರುವ ಮಿಕ್ಕ ಪಶುಗಳು ಲಭಿಸಿದರೆ ಹುಲಿ, ಒಂಟೆ, ಕತ್ತೆ ಇವುಗಳನ್ನು ಬಲಿಯಾಗಿ ಕೊಡಕೂಡದು. ಪಶುವಾಗಲೀ, ಪಕ್ಷಿಯಾಗಲೀ, ಮನುಷ್ಯನಾಗಲೀ ಅವರನ್ನು ವಿಧಿವತ್ತಾಗಿ ಪೂಜಿಸಿ, ಮಂತ್ರದಿಂದಲೇ ಕತ್ತರಿಸಬೇಕು. ಮಂತ್ರದಿಂದಲೇ ದೇವಿಗೆ ಅರ್ಪಿಸಬೇಕು.

೧೦೬. ಮನುಷ್ಯನ ಶಿರಸ್ಸನ್ನೂ, ರಕ್ತವನ್ನೂ ದೇವಿಗೆ ನಿವೇದಿಸಬೇಕು. ಆಡನ್ನು ದೇವಿಯ ಎಡಭಾಗವಲ್ಲಿಯೂ, ಕೋಣವನ್ನು ಮುಂಭಾಗವಲ್ಲಿಯೂ ಬಲಿ ಕೊಡಬೇಕು.

೧೦೭-೧೦೮. ಪಕ್ಷಿಯನ್ನು ದೇವಿಯ ಎಡಭಾಗದಲ್ಲಿ ಬಲಿಕೊಡಬೇಕು. ಅದರ ಶರೀರದ ರಕ್ತವನ್ನು ಮುಂಭಾಗದಲ್ಲಿ ಅರ್ಪಿಸಬೇಕು. ಮಾಂಸವನ್ನು ತಿನ್ನುವ ಪಶುಗಳು, ಪಕ್ಷಿಗಳು ಮತ್ತು ಜಲದಲ್ಲಿ ಜನಿಸಿದ ಪ್ರಾಣಿಗಳು, ಇವುಗಳ ಶಿರಸ್ಸು, ರಕ್ತ ಗಳನ್ನು ದೇವಿಯ ಎಡಭಾಗದಲ್ಲಿ ನಿವೇದಿಸಬೇಕು.

ಕೃಷ್ಣಸಾರಸ್ಯ ಕೂರ್ಮಸ್ಯ ಖಡ್ಗಸ್ಯ ಶಶಕಸ್ಯ ಚ ।
ಗ್ರಾಹಾಣಾಮಥ ಮತ್ಸ್ಯಾನಾಮಗ್ರ ಏವ ನಿವೇದಯೇತ್ ॥ ೧೦೯ ॥

ಸಿಂಹಸ್ಯ ದಕ್ಷಿಣೇ ದದ್ಯಾತ್ಖಡ್ಗಿನೋಽಪಿ ಚ ದಕ್ಷಿಣೇ ।
ಪೃಷ್ಠದೇಶೇ ನ ದದ್ಯಾತ್ತು ಶಿರೋ ವಾ ರುಧಿರಂ ಬಲೇಃ ॥ ೧೧೦ ॥

ನೈವೇದ್ಯಂ ದಕ್ಷಿಣೇ ವಾಮೇ ಪುರತೋ ನ ತು ಪೃಷ್ಠತಃ ।
ದೀಪಂ ದಕ್ಷಿಣತೋ ದದ್ಯಾತ್ಪುರತೋ ವಾ ನ ವಾಮತಃ ॥ ೧೧೧ ॥

ವಾಮತಸ್ತು ತಥಾ ಧೂಪಮಗ್ರೇ ವಾ ನ ತು ದಕ್ಷಿಣೇ ।
ನಿವೇದಯೇತ್ಪುರುಭಾಗೇ ಗಂಧಂ ಪುಷ್ಪಂ ಚ ಭೂಷಣಂ ॥ ೧೧೨ ॥

ಮಂಡಲೇ ಚೇನ್ಮಧ್ಯಭಾಗೇ ವಾಮದಕ್ಷಾದಿಪೂರ್ವವತ್ ।
ಮದಿರಾಂ ಪೃಷ್ಠತೋ ದದ್ಯಾದನ್ಯತ್ಪಾನಂ ತು ವಾಮತಃ ।
ಅವಶ್ಯಂ ವಿಹಿತಂ ಯತ್ರ ಮದ್ಯಂ ತತ್ರ ದ್ವಿಜಃ ಪುನಃ ॥ ೧೧೩ ॥

---

೧೦೯. ಕೃಷ್ಣಸಾರ (ಹರಿಣ) ಮೃಗ, ಆಮೆ, ಖಡ್ಗಮೃಗ, ಮೊಲ, ಮೊಸಳೆ, ಮೀನು ಇವುಗಳ ರಕ್ತವನ್ನು ದೇವಿಯ ಮುಂಭಾಗದಲ್ಲಿ ನಿವೇದಿಸಬೇಕು.

೧೧೦. ಸಿಂಹ, ಮತ್ತು ಖಡ್ಗಮೃಗಗಳ ಶಿರಸ್ಸು ಮತ್ತು ರಕ್ತಗಳನ್ನು ದೇವಿಯ ಬಲಭಾಗದಲ್ಲಿ ಅರ್ಪಿಸಬೇಕು. ಆದರೆ ದೇವಿಯ ಹಿಂಭಾಗದಲ್ಲಿ ಬಲಿಪಶುವಿನ ಶಿರಸ್ಸನ್ನಾಗಲೀ, ರಕ್ತವನ್ನಾಗಲೀ ಯಾವಾಗಲೂ ಅರ್ಪಿಸಕೂಡದು.

೧೧೧. ನಿವೇದನೆಯನ್ನು ಬಲಭಾಗ, ಎಡಭಾಗ, ಮುಂಭಾಗ ಇವುಗಳಲ್ಲಿಯೇ ಮಾಡಬೇಕು. ಹಿಂಭಾಗದಲ್ಲಿ ಎಂದಿಗೂ ಮಾಡಬಾರದು. ದೀಪವನ್ನು ಬಲಭಾಗದಲ್ಲಿ ಅಥವಾ ಮುಂಭಾಗದಲ್ಲಿ ಇರಿಸಬೇಕು. ಎಡಭಾಗದಲ್ಲಿ ಇರಿಸಕೂಡದು. ಧೂಪವನ್ನು ಎಡಭಾಗದಲ್ಲಿಯೂ ಮುಂಭಾಗದಲ್ಲಿಯೂ ಅರ್ಪಿಸಬೇಕು. ಬಲಭಾಗದಲ್ಲಿ ಧೂಪವನ್ನರ್ಪಿಸಬಾರದು.

೧೧೨. ಗಂಧ, ಪುಷ್ಪ, ಅಲಂಕಾರಗಳನ್ನು ಮುಂಭಾಗದಲ್ಲಿ ಅರ್ಪಿಸಬೇಕು. ಮಂಡಲದಲ್ಲಿಯಾದರೆ, ಮಧ್ಯಭಾಗದಲ್ಲಿ ಅವುಗಳನ್ನರ್ಪಿಸಬೇಕು. ಮಿಕ್ಕ ಎಡಭಾಗ ಬಲಭಾಗಗಳಲ್ಲಿ ಹಿಂದೆ ಹೇಳಿದಂತೆಯೇ ವಸ್ತುಗಳನ್ನು ಅರ್ಪಿಸಬೇಕು.

೧೧೩-೧೧೪. ಮದ್ಯವನ್ನು ದೇವಿಯ ಹಿಂಭಾಗದಲ್ಲಿ ಕೊಡಬೇಕು, ಮಿಕ್ಕ ಪಾನಗಳನ್ನು ಎಡಭಾಗದಲ್ಲಿ ಅರ್ಪಿಸಬೇಕು. ಅವಶ್ಯಕವಾಗಿ ಮದ್ಯವನ್ನು ಕೊಡಬೇ

ನಾರಿಕೇಲಜಲಂ ಕಾಂಸ್ಯೇ ತಾಮ್ರೇ ವಾ ವಿಸೃಜೇನ್ಮಧು ।
ನಾಪದ್ಯಪಿ ದ್ವಿಜೋ ಮದ್ಯಂ ಕದಾಚಿದ್ವಿಸೃಜೇದಪಿ ॥ ೧೧೪ ॥

ಋತೇ ಪುಷ್ಪಾಸವಾದುಕ್ತಾದ್ಗೃಂಜನಾದ್ವಾ ವಿಶೇಷತಃ ।
ರಾಜಪುತ್ರಸ್ತಥಾಮಾತ್ಯಃ ಸಚಿವಃ ಸೈನಿಕಾದಯಃ ॥ ೧೧೫ ॥

ದದ್ಯುರ್ನರಬಲಿಂ ಭೂಪ ಸಂಪತ್ತ್ಯೈ ವಿಭವಾಯ ಚ ।
ನೃಪಾನನುಮತೇ ಮರ್ತ್ಯಂ ದತ್ತ್ವಾ ಪಾಪಮವಾಪ್ನುಯಾತ್ ॥ ೧೧೬ ॥

ಉಪಪ್ಲವೇ ರಣೇ ವಾಪಿ ಯಥೇಚ್ಛಂ ವಿತರೇನ್ನರಃ ।
ಯಃ ಕಶ್ಚಿದ್ರಾಜಪುರುಷೋ ನಾನ್ಯಸ್ತ್ವಪಿ ಕದಾಚನ ॥ ೧೧೭ ॥

ಬಲಿದಾನದಿನಾತ್ಪೂರ್ವದಿವಸೇ ತು ಬಲಿಂ ನರಂ ।
ಮಾನಸ್ತೋಕೇತಿ ಮಂತ್ರೇಣ ದೇವೀಸೂಕ್ತೇನ ಯೇನ ಚ ॥ ೧೧೮ ॥

ಕೆಂದು ವಿಧಿಸಿರುವ ಸ್ಥಳದಲ್ಲಿ ಬ್ರಾಹ್ಮಣನು ಅದಕ್ಕೆ ಬದಲಾಗಿ ಕಂಚಿನ ಪಾತ್ರೆಯಲ್ಲಿ ತೆಂಗಿನಕಾಯಿನೀರನ್ನಾಗಲೀ, ತಾಮ್ರದಪಾತ್ರೆಯಲ್ಲಿ ಜೇನುತುಪ್ಪವನ್ನಾಗಲೀ, ದೇವಿಗೆ ಅರ್ಪಿಸಬೇಕು. ಆಪತ್ತಿನಲ್ಲಿಯೂ ಸಹ ಬ್ರಾಹ್ಮಣನು ಹಿಂದೆ ಹೇಳಿದ ಪುಷ್ಪರಸ, ಬೆಳ್ಳುಳ್ಳಿರಸ ಮುಂತಾದುವುಗಳ ಹೊರತು ಮದ್ಯವನ್ನು ದೇವಿಗೆ ಕೊಡಲೇಕೂಡದು.

೧೧೫. ರಾಜಕುಮಾರ, ಪ್ರಧಾನಮಂತ್ರಿ, ಸಚಿವರು, ಸೇನಾಧಿಪತಿ, ಇವರೂ ಸಹ ಸಂಪತ್ತಿಗಾಗಿಯೂ, ಐಶ್ವರ್ಯಕ್ಕಾಗಿಯೂ, ನರಬಲಿಯನ್ನು ದೇವಿಗೆ ಅರ್ಪಿಸ ಬೇಕು.

೧೧೬-೧೧೭. ಆದರೆ ರಾಜನ ಅನುಮತಿಯಿಲ್ಲದೆ, ಮಂತ್ರಿ ಮೊದಲಾದವರು ನರಬಲಿಯನ್ನು ಕೊಟ್ಟರೆ ಪಾಪವು ಬರುವುದು. ಮಹಾಸಂಕಟ ಮತ್ತು ಯುದ್ಧಸನ್ನಿವೇಶಗಳಲ್ಲಿ ರಾಜಪುರುಷನಾಗಲೀ, ಇತರರಾಗಲೀ ಯಥೇಚ್ಛವಾಗಿ ನರಬಲಿಯನ್ನು ಕೊಡಬಹುದು.

೧೧೮-೧೧೯. ಬಲಿಯನ್ನು ಕೊಡುವ ಹಿಂದಿನ ದಿವಸ ಬಲಿಪುರುಷನನ್ನು "ಮಾನಸ್ತೋಕೇ" ಎಂಬ ಮಂತ್ರದಿಂದಲೂ ದೇವೀಸೂಕ್ತದಿಂದಲೂ ಸ್ತುತಿಸಬೇಕು.

ಗಂಧದ್ವಾರೇತ್ಯನೇನಾಪಿ ಖಡ್ಗಂ ಶೀರ್ಷೇ ನಿಧಾಯ ಚ ।
ತಸ್ಮಿನ್ ಖಡ್ಗೇ ಸುಗಂಧಾದಿ ದತ್ತ್ವಾ ತೇನಾಧಿವಾಸಯೇತ್ ॥ ೧೧೯ ॥

ಗಂಧಾದಿಕಂ ತು ಖಡ್ಗಸ್ಥಂ ಗಲೇ ತಸ್ಯ ಪ್ರದಾಪಯೇತ್ ।
ಅಂಬೇಂಬಿಕೇತಿ ಮಂತ್ರೇಣ ರೌದ್ರೇಣ ಭೈರವಸ್ಯ ಚ ॥ ೧೨೦ ॥

ಏವಂ ತು ಸಂಸ್ಕೃತೇ ಮರ್ತ್ಯೇ ದೇವೀ ರಕ್ಷತಿ ತಂ ಬಲಿಂ ।
ನ ತಸ್ಯ ವ್ಯಾಧಯಶ್ಚಾಪಿ ಕ್ಷುನ್ನ ತಾರಜನೌ ನ ಚ ॥ ೧೨೧ ॥

ನ ಸೂತಕಂ ದೂಷಯೇತ್ತಜ್ಜ್ಞಾತ್ಯುತ್ಪತ್ತಿಮೃತಾದಿಕಂ ।
ಛಿನ್ನಂ ನರಸ್ಯ ಶೀರ್ಷಂ ತು ಪತಿತಂ ಯತ್ರ ಯತ್ರ ಚ ॥ ೧೨೨ ॥

ಯಚ್ಛುಭಂ ಚಾಶುಭಂ ವಾಪಿ ಪಶ್ವಾದೀನಾಂ ಚ ತಚ್ಛೃಣು ।
ಛಿನ್ನಂ ಶಿರಸ್ತಥೈಶಾನ್ಯಂ ನಾರಂ ದಿಶ್ಯಥ ರಾಕ್ಷಸೇ ॥ ೧೨೩ ॥

ಗಂಧದ್ವಾರಾ ಎಂಬ ಮಂತ್ರದಿಂದ ಖಡ್ಗದ ಶಿರಸ್ಸಿನಲ್ಲಿ ಸುಗಂಧಾದಿಗಳನ್ನು ಲೇಪಿಸಿ ಅದನ್ನು ಅಧಿವಾಸ ಮಾಡಬೇಕು.

೧೨೦. ಖಡ್ಗದಲ್ಲಿರುವ ಗಂಧ ಮೊದಲಾದುದನ್ನು ಬಲಿಮನುಷ್ಯನ ಕತ್ತಿನಲ್ಲಿ ಅಂಬೇ ಅಂಬಾಲ್ಯಂಬಿಕೇ (ಯಜುರ್ವೇದ. ತೈ. ಸಂ. ಕಾಂ. ೨) ಎಂಬ ಮಂತ್ರ ದಿಂದಲೂ ಭೈರವನ ರೌದ್ರಮಂತ್ರದಿಂದಲೂ ಲೇಪಿಸಬೇಕು.

೧೨೧. ಈರೀತಿಯಾಗಿ ಆ ಬಲಿಪುರುಷನನ್ನು ಸಂಸ್ಕರಿಸಿದರೆ ಅವನನ್ನು ದೇವಿಯು ರಕ್ಷಿಸುವಳು. ಅವನಿಗೆ ರೋಗ, ಹಸಿವು, ರಾತ್ರಿಯಲ್ಲಿ ಭಯ, ಇದಾವುದೂ ಉಂಟಾಗುವುದಿಲ್ಲ. ಮತ್ತು ಆ ನರನಿಗೆ ಅವನ ಜ್ಞಾತಿಗಳು ಹುಟ್ಟಿದರೂ ಸತ್ತರೂ ತನ್ನ ಮಿತ್ತವಾದ ಅಶೌಚವೂ ಇಲ್ಲವು.

೧೨೨. ಕತ್ತರಿಸಿದ ಮನುಷ್ಯನ ಮತ್ತು ಪಶು ಮುಂತಾದುವುಗಳ ಶಿರಸ್ಸು ಎಲ್ಲೆಲ್ಲಿ ಬಿದ್ದರೆ ಯಾವ ಶುಭ ಮತ್ತು ಅಶುಭಫಲಗಳು ಆಗುವವೆಂಬುದನ್ನು ಹೇಳುವೆನು ಕೇಳು.

೧೨೩-೧೨೫. ನರಶಿರಸ್ಸು ಈಶಾನ್ಯದಲ್ಲಿ ಕತ್ತರಿಸಲ್ಪಟ್ಟುದಾಗಿ ನೈಋತ್ಯದಿಕ್ಕಿನಲ್ಲಿ ಬಿದ್ದುದೇ ಆದರೆ ರಾಜ್ಯನಾಶವೂ ರಾಜನಿಗೆ ನಾಶವೂ ಆಗುವುದು. ಎಲ್ಲಿ ಭೈರವನೇ.

ಪತಿತಂ ರಾಜ್ಯಹಾನಿಂ ಚ ವಿನಾಶಂ ಚ ವಿನಿರ್ದಿಶೇತ್ ।
ಪೂರ್ವಾಗ್ನಿಯಾಮ್ಯವಾರುಣ್ಯವಾಯವ್ಯಾದಿಗತಂ ಕ್ರಮಾತ್ ॥ ೧೨೪ ॥

ಶ್ರಿಯಂ ಪುಷ್ಟಿಂ ಭಯಂ ಲಾಭಂ ಪುತ್ರಲಾಭಧನಂ ತಥಾ ।
ಕ್ರಮಾದ್ವಿನಿರ್ದಿಶೇನ್ನಾರಂ ಛಿನ್ನಶೀರ್ಷಂ ತು ಭೈರವ ॥ ೧೨೫ ॥

ಉತ್ತರಾದಿಕ್ರಮಾದೇವ ಮಹಿಷಸ್ಯಾಪಿ ಮಸ್ತಕಃ ।
ಪತಿತೋ ವಾಯುಕಾಷ್ಠಾಂತೇ ಸೂಚಯೇದ್ಯಚ್ಛುಣುಷ್ವ ತತ್ ॥ ೧೨೬ ॥

ಭಾಗ್ಯಹಾನಿಸ್ತಥೈಶ್ವರ್ಯಂ ವಿತ್ತಂ ರಿಪುಜಯಂ ಭಯಂ ।
ರಾಜ್ಯಲಾಭಃ ಶ್ರಿಯಂ ಚಾಪಿ ಕ್ರಮಾದ್ವಿದ್ಧಿ ತು ಭೈರವ ॥ ೧೨೭ ॥

ಪಶೂನಾಂ ಚೈವ ಸರ್ವೇಷಾಂ ಭಾಗಾದೀನಾಮಶೇಷತಃ ।
ಏವಂ ಫಲಂ ಕ್ರಮಾದ್ವಿದ್ಯಾದೃತೇ ಜಲಭವಾಂಡಜೌ ॥ ೧೨೮ ॥

ಜಲಜಾನಾಂ ಪಕ್ಷಿಣಾಂ ತು ಯಾಮ್ಯನೈರ್ಋತ್ಯಯೋರ್ಭಯಂ ।
ಅನ್ಯತ್ರ ತು ಶ್ರಿಯಂ ದದ್ಯಾತ್ಪತಿತಂ ಶಾತಿತಂ ಶಿರಃ ॥ ೧೨೯ ॥

ಕತ್ತರಿಸಿದ ನರಶಿರಸ್ಸು ಕ್ರಮವಾಗಿ ಪೂರ್ವದಲ್ಲಿ ಬಿದ್ದರೆ ಲಕ್ಷ್ಮಿಯೂ, ಆಗ್ನೇಯದಲ್ಲಿ ಬಿದ್ದರೆ ಪುಷ್ಟಿಯೂ, ದಕ್ಷಿಣದಲ್ಲಿ ಬಿದ್ದರೆ ಭಯವೂ, ಪಶ್ಚಿಮದಲ್ಲಿ ಲಾಭವೂ, ವಾಯವ್ಯದಲ್ಲಿ ಪುತ್ರಲಾಭವೂ, ಉತ್ತರದಲ್ಲಿ ಧನವೂ ಲಭಿಸುವುವು.

೧೨೬-೧೨೭. ಉತ್ತರಾದಿ ದಿಕ್ಕು ಮೊದಲುಗೊಂಡು ವಾಯವ್ಯ ದಿಕ್ಕಿನ ವರೆಗೆ ಕೋಣದ ಶಿರಸ್ಸು ಬಿದ್ದರೆ ಯಾವ ಫಲವಾಗುವುದೆಂಬುದನ್ನು ಕೇಳು. ಉತ್ತರದಲ್ಲಿ ಬಿದ್ದರೆ ಭಾಗ್ಯಹಾನಿ, ಈಶಾನ್ಯದಲ್ಲಿ ಬಿದ್ದರೆ ಐಶ್ವರ್ಯ, ಪೂರ್ವದಲ್ಲಿ ಧನ, ಆಗ್ನೇಯ ದಿಕ್ಕಿನಲ್ಲಿ ಶತ್ರುಜಯ, ದಕ್ಷಿಣದಲ್ಲಿ ಭಯ, ಪಶ್ಚಿಮದಲ್ಲಿ ರಾಜ್ಯಲಾಭ, ವಾಯವ್ಯದಲ್ಲಿ ಸಂಪತ್ತು ಈ ರೀತಿ ಕ್ರಮವಾಗಿ ಲಭಿಸುವವು.

೧೨೮-೧೨೯. ಪಕ್ಷಿಗಳು, ಜಲಚರಪ್ರಾಣಿಗಳು, ಹೊರತು ಮಿಕ್ಕ ಅವು ಮೊದಲಾದ ಎಲ್ಲಾ ಪಶುಪ್ರಾಣಿಗಳ ಬಲಿಯಲ್ಲಿಯೂ, ಈ ರೀತಿಯಾದ ಫಲಗಳು ಆಗುವುವು ಜಲಪ್ರಾಣಿಗಳ ಮತ್ತು ಪಕ್ಷಿಗಳ ಶಿರಸ್ಸು ಕತ್ತರಿಸಲ್ಪಟ್ಟು ದಕ್ಷಿಣ ಮತ್ತು ನೈರುತ್ಯಗಳಲ್ಲಿ ಬಿದ್ದರೆ ಭಯವುಂಟಾಗುವುದು ಮಿಕ್ಕ ದಿಕ್ಕುಗಳಲ್ಲಿ ಬಿದ್ದರೆ ಐಶ್ವರ್ಯಪ್ರಾಪ್ತಿಯಾಗುವುದು.

ಯಃ ಸ್ಯಾತ್ಕಟಕಟಾಶಬ್ದೋ ದಂತಾನಾಂ ಛಿನ್ನಮುಸ್ತಕೇ ।
ನರಾಣಾಂ ಪಶುಪ ಕ್ಷ್ಯಾದಿಗ್ರಾಹಾದೀನಾಂ ಚ ರೋಗದಃ ॥ ೧೩೦ ॥

ಲೋತಕಂ ಚಕ್ಷುಷೋರ್ಜಾತಂ ಯದಿ ಸ್ರವತಿ ಮುಸ್ತಕೇ ।
ಛಿನ್ನೇ ನರಸ್ಯ ರಾಜ್ಯಸ್ಯ ತದಾ ಹಾನಿಂ ವಿನಿರ್ದಿಶೇತ್ ॥ ೧೩೧ ॥

ಮಾಹಿಷೇ ಮುಸ್ತಕೇ ನೇತ್ರಾಭ್ಯದಿ ಸ್ರವತಿ ಲೋತಕಂ ।
ಛಿನ್ನೇ ನಿವೇದಿತಂ ವೈರಿಭೂಪಮೃತ್ಯುಂ ತದಾದಿಶೇತ್ ॥ ೧೩೨ ॥

ಅನ್ಯೇಷಾಮಥ ಪಶ್ವಾದಿಬಲೀನಾಂ ಶಿರಸೋದ್ಗಿತಾತ್ ।
ನಿರ್ಗತಂ ಲೋತಕಂ ಧತ್ತೇ ಪರಾಭ್ಭೀತಿಂ ಗದಂ ತಥಾ ॥ ೧೩೩ ॥

ಹಸತಿ ಛಿನ್ನಶೀರ್ಷಂ ಚೇನ್ನಾರಂ ಸ್ಯಾತ್ತು ರಿಪುಕ್ಷಯಃ ।
ಶ್ರೀವೃದ್ಧಿರಾಯುಷೋ ವೃದ್ಧಿಃ ಸದಾ ದಾತುರಸಂಶಯಃ ॥ ೧೩೪ ॥

ಯದ್ವಾಕ್ಯಂ ನಿಗದತಿ ತದಾ ತಥಾ ಭವತಿ ಚಾಚಿರಾತ್ ।
ಹಂಕಾರಾದ್ರಾಜ್ಯಹಾನಿಃ ಸ್ಯಾತ್ ಶ್ಲೇಷ್ಮಸ್ರವಾಚ್ಚ ಪಂಚತಾ ॥ ೧೩೫ ॥

---

೧೩೦. ಮನುಷ್ಯ, ಪಶುಪಕ್ಷಿ, ಜಲಚರಪ್ರಾಣಿ, ಇವುಗಳನ್ನು ಕತ್ತರಿಸಿದಮೇಲೆ ಅವುಗಳು ಶಿರಸ್ಸಿನಲ್ಲಿ ಹಲ್ಲುಗಳಿಂದ ಕಟ ಕಟ ಶಬ್ದವನ್ನು ಮಾಡಿದರೆ ರೋಗವುಂಟಾಗುವುದು.

೧೩೧. ಮನುಷ್ಯನ ಶಿರಸ್ಸನ್ನು ಕತ್ತರಿಸಿದಮೇಲೆ ಆ ಶಿರಸ್ಸಿನಲ್ಲಿ ಅವರ ಕಣ್ಣಿನಲ್ಲಿ ನೀರು ಸುರಿಯುತ್ತಿದ್ದರೆ ರಾಜ್ಯಹಾನಿಯಾಗುವುದೆಂದು ತಿಳಿಯತಕ್ಕದ್ದು.

೧೩೨. ಕೋಣನ ಶಿರಸ್ಸಿನಲ್ಲಿ ಅದನ್ನು ಕತ್ತರಿಸಿದಮೇಲೆ ಕಣ್ಣೀರು ಸುರಿಯುತ್ತಿದ್ದರೆ ಆಗ ಶತ್ರುರಾಜನು ಮೃತನಾಗುವನೆಂದು ತಿಳಿಯಬೇಕು.

೧೩೩. ಮಿಕ್ಕ ಪಶು ಮುಂತಾದ ಬಲಿಗಳ ಕತ್ತರಿಸಿದ ಶಿರಸ್ಸಿನಲ್ಲಿ ಕಣ್ಣೀರು ಸುರಿಯುತ್ತಿದ್ದರೆ ಶತ್ರುಭಯವೂ ರೋಗವೂ ಉಂಟಾಗುವುವು.

೧೩೪. ಕತ್ತರಿಸಿದ ನರಶಿರಸ್ಸು ನಗುತ್ತಲಿದ್ದರೆ ಶತ್ರುನಾಶವೂ ಸಂಪತ್ತು ವೃದ್ಧಿಯೂ ಆಯುರ್ವೃದ್ಧಿಯೂ ಆಗುವುದು. ಇದರಲ್ಲಿ ಸಂಶಯವಿಲ್ಲ.

೧೩೫. ಮತ್ತು ಆಗ ಬಲಿನರನು ಹಂ ಎಂಬ ವಾಕ್ಯವನ್ನುಚ್ಚರಿಸಿದರೆ ರಾಜ್ಯನಾಶವಾಗುವುದು. ಶ್ಲೇಷ್ಮನು ಅವನ ಮುಖದಿಂದ ಸುರಿದರೆ ದಾತನಿಗೆ ಮರಣವು ಸಂಭವಿಸುವುದು.

ದೇವಾನಾಂ ಯದಿ ನಾಮಾನಿ ಭಾಷತೇ ಛಿನ್ನಮಸ್ತಕಃ ।
ವಿಭೂತಿಮತುಲಾಂ ವಿದ್ಯಾತ್ ಷಣ್ಮಾಸಾಭ್ಯಂತರೇ ತದಾ ॥ ೧೩೬ ॥

ರುಧಿರಾದಾನಕಾಲೇ ತು ಸಕೃನ್ಮೂತ್ರೇ ಯದಿ ಸ್ರವೇತ್ ।
ಕಾಯಂ ತದಾಧಶ್ಚೋರ್ಧ್ವಂ ವಾ ದಾತುಃ ಸ್ಯಾನ್ಮರಣಂ ತದಾ ॥ ೧೩೭ ॥

ಆಕ್ಷೇಪಾದ್ವಾಮಪಾದಸ್ಯ ಮಹಾರೋಗಃ ಪ್ರಜಾಯತೇ ।
ಅನ್ಯದಾಕ್ಷೇಪಚಲನೈಃ ಕಲ್ಯಾಣಮುಪಜಾಯತೇ ॥ ೧೩೮ ॥

ಮಾಹಿಷಸ್ಯ ಚ ರಕ್ತಸ್ಯ ಮಾನುಷಸ್ಯ ಚ ಸಾಧಕಃ ।
ಅಂಗುಷ್ಠಾನಾಮಿಕಾಭ್ಯಾಂ ತು ಕಿಂಚಿದುದ್ಧೃತ್ಯ ಭೂತಲೇ ॥ ೧೩೯ ॥

ಮಹಾಕೌಶಿಕಮಂತ್ರೇಣ ನಿಃಕ್ಷಿಪೇದ್ಬಲಿಮುತ್ತಮಂ ।
ದೇವೇಭ್ಯಃ ಪೂತನಾದಿಭ್ಯೋ ನೈರ್ಋತ್ಯಾಂ ದಿಶಿ ಪೂರ್ವತಃ ॥ ೧೪೦ ॥

ಮಹಿಷಃ ಪಂಚವರ್ಷೀಯಃ ಪಂಚವಿಶಂತಿವಾರ್ಷಿಕಃ ।
ಬಲಿರ್ದೇಯೋ ನರೋ ದೇವ್ಯೈ ತಸ್ಯ ರಕ್ತಂ ತು ಭೂತಯೇ ॥ ೧೪೧ ॥

---

೧೩೬. ಕತ್ತರಿಸಿದ ನರಶಿರಸ್ಸು ದೇವತೆಗಳ ಹೆಸರನ್ನು ಚ್ಚರಿಸಿದರೆ ಆಗ ಆರು ತಿಂಗಳೊಳಗೆ ಹೆಚ್ಚಾದ ಐಶ್ವರ್ಯವು ಲಭಿಸುವುದು.

೧೩೭. ರಕ್ತವನ್ನು ತೆಗೆಯುವ ಕಾಲದಲ್ಲಿ ಬಲಿಪಶುವು ಮಲಮೂತ್ರಗಳನ್ನು ವಿಸರ್ಜಿಸಿದರೆ ಮತ್ತು ಆಗ ಪಶುವಿನ ಶರೀರವು ಮೇಲೂ ಕೆಳಗೂ ಆದರೆ ಬಲಿಯನ್ನು ಕೊಡುವವನಿಗೆ ಮರಣವು ಉಂಟಾಗುವುದು.

೧೩೮. ಮತ್ತು ರಕ್ತವನ್ನು ತೆಗೆಯುವಾಗ ಎಡಗಾಲನ್ನು ಪಶುವು ಚಲಿಸಿದರೆ ಮಹಾರೋಗವುಂಟಾಗುವುದು, ಮಿಕ್ಕಅಂಗಗಳು ಚಲಿಸಿದರೆ ಮಂಗಳವುಂಟಾಗುವುದು.

೧೩೯-೧೪೦. ಸಾಧಕನು ಕೋಣದ ಮತ್ತು ಮನುಷ್ಯನ ರಕ್ತವನ್ನು ಹೆಬ್ಬೆರಳು ಮತ್ತು ಅನಾಮಿಕೆ (ನಾಲ್ಕನೆಯ ಬೆರಳು) ಗಳಿಂದ ಸ್ವಲ್ಪ ಮೇಲಕ್ಕೆ ತೆಗೆದು ಬಳಿಕ ಮಹಾಕೌಶಿಕಮಂತ್ರದಿಂದ ಭೂಮಿಯಲ್ಲಿ ಬಲಿಯನ್ನು ಇರಿಸಬೇಕು. ಪೂತನಾದಿ ಗಳಿಗೂ ಮಿಕ್ಕ ದೇವತೆಗಳಿಗೂ ನೈರ್ಋತ್ಯ ಮತ್ತು ಪೂರ್ವದಿಕ್ಕುಗಳಲ್ಲಿ ಬಲಿಯನ್ನರ್ಪಿಸಬೇಕು.

೧೪೧. ಐದುವರ್ಷದ ಕೋಣವನ್ನೂ ಇಪ್ಪತ್ತೈದುವರ್ಷದ ಮನುಷ್ಯನನ್ನೂ ಬಲಿಕೊಡಬೇಕು. ಇಂತಪ ಬಲಿಯ ರಕ್ತದಿಂದ ಐಶ್ವರ್ಯಾಭಿವೃದ್ಧಿಯಾಗುವುದು.

ನೇತ್ರಬೀಜತ್ರಯಂ ಕಾಮಬೀಜಂ ಹಂತಾ ಪ್ರಜಾಪತಿಃ ।
ವಹ್ನಿಬೀಜಂ ಷಟ್ಸ್ವರಾಭ್ಯಾಂ ಸಂಪೃಕ್ತಶ್ಚ ತಥಾ ಪರಃ ॥ ೧೪೨ ॥

ಸ ಏವೈತಾಸ್ತಥೈತಾವದಾದಿವರ್ಗಾಂತಸಂಯುತಃ ।
ಷಷ್ಠಸ್ವರಶಿಖಾಬಿಂದುಶ್ಚಂದ್ರಯುಕ್ತೆಸ್ತಥಾಪರಃ ॥ ೧೪೩ ॥

ದ್ವಿರ್ಮಾತ್ರಕಾಬೀಜಕಾಂತಃ ಕೌಶಿಕೀತ್ಯಭಿಮಂತ್ರಣಂ ।
ಏಷ ಬಲಿಃ ಸ್ವಾಹೇತಿ ಮಂತ್ರೋಽಯಂ ಕೌಶಿಕೀ ಸ್ಮೃತಃ ॥ ೧೪೪ ॥

ನೃಪೋ ವೈರಿಬಲಿಂ ದದ್ಯಾತ್ಪಡ್ಗಮಾಮಂತ್ರ್ಯ ಪೂರ್ವತಃ ।
ಮಹಿಷಂ ಚಾಪಿ ಛಾಗಂ ವಾ ವೈರಿನಾಮ್ನಾಭಿಮಂತ್ರ್ಯ ಚ ॥ ೧೪೫ ॥

ಸೂತ್ರೇಣ ವದನೇ ಬದ್ಧಂ ತ್ರಿಧಾ ತಸ್ಯ ತು ಮಂತ್ರಕೈಃ ।
ಛಿತ್ವಾ ತಸ್ಯೋತ್ತಮಾಂಗಂ ತು ದೇವ್ಯೈ ದದ್ಯಾತ್ಪ್ರಯತ್ನತಃ ॥ ೧೪೬ ॥

---

೧೪೨. ಮೂರು ನೇತ್ರಬೀಜಗಳು, ಕಾಮಬೀಜ, ಬ್ರಹ್ಮಬೀಜ, ಈ ಅಕ್ಷರಗಳು ಸೇರಿದರೆ ಬಲಿದಾನಮಂತ್ರವಾಗುವುದು. ಅಗ್ನಿಬೀಜಾಕ್ಷರವು ಆರನೆಯಸ್ವರಗಳೆರಡರಿಂದ ಕೂಡಿದರೆ ಮತ್ತೊಂದು ಬಲಿಮಂತ್ರವಾಗುವುದು.

೧೪೩. ಅದೇ ಹಿಂದಿನ ಬಲಿಮಂತ್ರವು, ಮೊದಲನೆಯ (ಕ) ವರ್ಗದ ಕೊನೆಯ ವರ್ಣದಿಂದಲೂ ಆರನೆಯಸ್ವರದಿಂದಲೂ, ಬಿಂದುವಿನಿಂದಲೂ ಕೂಡಿದುದೇ ಆದರೆ ಇನ್ನೊಂದು ಬಲಿಮಂತ್ರವಾಗುವುದು.

೧೪೪. ಎರಡು ಮಾತ್ರೆಗಳಿಂದ ಕೂಡಿ, ದೀರ್ಘವಾಗಿ ಉಚ್ಚರಿಸಲ್ಪಟ್ಟು, "ಕೌಶಿಕೀ ಏಷ ಬಲಿಃ ಸ್ವಾಹಾ" ಎಂದರೆ ಎಲೈ ಕೌಶಿಕಿಯೇ, ಈ ಬಲಿಯನ್ನು ನಿನಗೆ ಅರ್ಪಿಸುವೆನು, ಎಂಬ ಕೌಶಿಕೀ ದೇವಿಗೆ ಬಲಿಯನ್ನು ಕೊಡುವ ಮಂತ್ರವಾಗುವುದು.

೧೪೫. ರಾಜನು ಕೋಣವನ್ನಾಗಲೀ ಆಡನ್ನಾಗಲೀ ತನ್ನ ಶತ್ರುವಿನ ಹೆಸರಿನಿಂದ ಅಭಿಮಂತ್ರಿಸಿ, ಬಳಿಕ ಕತ್ತಿಯನ್ನಭಿಮಂತ್ರಿಸಿ, ಬಲಿಯನ್ನು ಕೊಡಬೇಕು.

೧೪೬. ಹಗ್ಗದಿಂದ ಪಶುವಿನ ಮುಖವನ್ನು ಕಟ್ಟಬೇಕು, ಬಳಿಕ ಮಂತ್ರವನ್ನು ಮೂರುಬಾರಿ ಉಚ್ಚರಿಸಿ, ಖಡ್ಗದಿಂದ ಅದನ್ನು ಕತ್ತರಿಸಿ, ಕತ್ತರಿಸಿದ ಶಿರಸ್ಸನ್ನು ದೇವಿಗೆ ಭಕ್ತಿಯಿಂದ ಅರ್ಪಿಸಬೇಕು.

ಯದಾ ಯದಾ ರಿಪೋರ್ವೃದ್ಧಿರ್ಬಲಿದಾನಂ ತದಾ ಪರಂ ।
ದದ್ಯಾತ್ತದಾ ಶಿರಶ್ಛಿತ್ವಾ ರಿಪೋಸ್ತಸ್ಯ ಕ್ಷಯಾಯ ಚ ॥ ೧೪೭ ॥
ಪ್ರಾಣಪ್ರತಿಷ್ಠಾಂ ಚ ರಿಪೋಃ ಕುರ್ಯಾತ್ತಸ್ಮಿ ಪಶಾವಥ ।
ತಸ್ಮಿ ಕ್ಷೀಣೇ ರಿಪೋಃ ಪ್ರಾಣಾಃ ಕ್ಷೀಯಂತೆ ವಿಪದಾ ಯುತಾಃ ॥ ೧೪೮ ॥
ಆದೌ ವಿರುದ್ಧರೂಪಾಣಿ ಚಂಡಿಕೇ ಚ ತತಃ ಪರಂ ।
ವೈರಿಣಂ ತ್ವಮುಕಂ ಚೇತಿ ಯಾಹೀತ್ಯಾಮ್ರೇಡಿತಂ ಪುನಃ ॥ ೧೪೯ ॥
ವಹ್ನಿಭಾರ್ಯಾ ತತಃ ಪಶ್ಚಾತ್ಪಡ್ಗಮಂತ್ರಂ ಪ್ರಕೀರ್ತಿತಂ ;
ಸ್ವಯಂ ಸ ವೈರೀ ಯೋ ದ್ವೇಷ್ಟಿ ತಮಿಮಂ ಪಶುರೂಪಿಣಂ ॥ ೧೫೦ ॥
ವಿನಾಶಯ ಮಹಾಮಾರಿ ಸ್ಫೋಂ ಸ್ಫೋಂ ಖಾದಯ ಖಾದಯ ।
ಇತ್ಯನೇನ ತು ಮಂತ್ರೇಣ ಬಲೇಃ ಶಿರಸಿ ಪುಷ್ಪಕಂ ॥ ೧೫೧ ॥

---

೧೪೭. ಶತ್ರುವು ಅಭಿವೃದ್ಧಿಸ್ಥಿತಿಯಲ್ಲಿರುವಾಗ ಎಂದರೆ ಶತ್ರುವಿನಿಂದ ತನಗೆ ಭಯವುಂಟಾದಾಗ ಶತ್ರುವು ನಾಶವಾಗುವುದಕ್ಕಾಗಿ ಪಶುವಿನ ಶಿರಸ್ಸನ್ನು ಅವನ ಹೆಸರಿನಿಂದ ಅಭಿಮಂತ್ರಿಸಿ ಕತ್ತಿಯಿಂದ ಕತ್ತರಿಸಿ, ಶಿರಸ್ಸನ್ನು ದೇವಿಗೆ ಅರ್ಪಿಸಬೇಕು.

೧೪೮. ಮತ್ತು ಬಲಿಯನ್ನು ಕೊಡುವುದಕ್ಕೆ ಮುಂಚೆ ಆ ಪಶುವಿನಲ್ಲಿ ಶತ್ರುವಿನ ಹೆಸರು ಹೇಳಿ ಪ್ರಾಣಪ್ರತಿಷ್ಠಾಪನೆಯನ್ನು ಮಾಡಬೇಕು. ಅದರಿಂದ ಆಕ್ಷಣದಲ್ಲಿಯೇ ಶತ್ರುವಿನ ಪ್ರಾಣಗಳು ವಿಪತ್ತಿನಿಂದ ಕೂಡಿ ನಾಶವನ್ನೈದುವವು.

೧೪೯-೧೫೦. ಮೊದಲು ಶತ್ರುವಿನ ರೂಪಗಳನ್ನೂ, ಬಳಿಕ ಚಂಡಿಕೆ ಎಂಬ ಶಬ್ದವನ್ನೂ, ತಿಮೇಲೆ ಅಮುಕಂ ವೈರಿಣಂ ಎಂದೆ ಈ ಶತ್ರುವನ್ನು ಎಂಬ ಶಬ್ದವನ್ನೂ ಬಳಿಕ ಯಾಹಿ ಯಾಹಿ ಎಂದು ಎರಡಾವರ್ತಿಯೂ, ಕೊನೆಯಲ್ಲಿ ಸ್ವಾಹಾ ಎಂತಲೂ ಉಚ್ಚರಿಸಿದರೆ "ಚಂಡಿಕೇ ಅಮುಕಂ ವೈರಿಣಂ ಯಾಹಿ ಯಾಹಿ ಸ್ವಾಹಾ" ಎಂಬ ಮಂತ್ರವಾಗುವುದು. ಇವಲ್ಲದೆ "ಅಮುಕಂ ವೈರಿಣಂ ವಿನಾಶಯ ಮಹಾಮಾರಿ ಸ್ಫೋಂ ಸ್ಫೋಂ ಖಾದಯ ಖಾದಯ" ಎಂದು ಇನ್ನೊಂದು ಮಂತ್ರವೂ ಇರುವುದು. ನನ್ನನ್ನು ದ್ವೇಷಿಸುವ ಶತ್ರುವು ಇಲ್ಲಿ ಪಶುರೂಪಿಯಾಗಿರುವನು. ಇವನನ್ನು ನಾಶಮಾಡಿ, ಅವನ ಮಾಂಸವನ್ನು, ಓ ದೇವಿಯೇ, ಭಕ್ಷಿಸು ಎಂದು ಈ ಮಂತ್ರದ ಅರ್ಥವು.

೧೫೧. ಈ ಮೇಲಿನ ಮಂತ್ರದಿಂದ ಬಲಿಪಶುವಿನ ಶಿರಸ್ಸಿನಲ್ಲಿ ಪುಷ್ಪವನ್ನಿರಿಸಬೇಕು. ಬಳಿಕ ಅವರ ರಕ್ತವನ್ನು ಸ್ಫೋಂ ಸ್ಫೋಂ ಎಂಬ ಎರಡು ಅಕ್ಷರಗಳಿಂದ ದೇವಿಗೆ ನಿವೇದಿಸಬೇಕು.

ದದ್ಯಾತ್ತತಸ್ತದ್ರುಧಿರಂ ದ್ವ್ಯಕ್ಷರಾಭ್ಯಾಂ ನಿವೇದಯೇತ್ ।
ಮಹಾನವಮ್ಯಾಂ ಶರದಿ ಯದ್ಯೇವಂ ದೀಯತೆ ಬಲಿಃ ॥ ೧೫೨ ॥

ತದಾ ತದಷ್ಟಾಂಗಭವೈರ್ಮಾಂಸೈರ್ಹೋಮಂ ಸಮಾಚರೇತ್ ।
ದುರ್ಗಾತಂತ್ರೇಣ ಮಂತ್ರೇಣ ಪ್ರಣೀತೇ ದಹನೇ ಶುಚೌ ॥ ೧೫೩ ॥

ಏವಂ ದತ್ವಾ ಬಲಿಂ ಮರ್ತ್ಯೋ ರಿಪುಕ್ಷಯಮವಾಪ್ನುಯಾತ್ ।
ನಾಭೇರಧಸ್ತಾದ್ರುಧಿರಂ ಪೃಷ್ಠಭಾಗಸ್ಯ ಚ ಶ್ರಿಯೇ ॥ ೧೫೪ ॥

ಸ್ವಗಾತ್ರರುಧಿರಂ ದದ್ಯಾನ್ನ ಕದಾಚನ ಸಾಧಕಃ ।
ನೋಷ್ಠಸ್ಯ ಚಿಬುಕಸ್ಯಾಪಿ ನೇಂದ್ರಿಯಾಣಾಂ ಚ ಮಾನವಃ ॥ ೧೫೫ ॥

ಕಂಠಾಧೋ ನಾಭಿತಶ್ಚೋರ್ಧ್ವಂ ಬಾಹ್ವೋಃ ಪಾಣಿಮೃತೇ ತಥಾ ।
ಪ್ರದದ್ಯಾದ್ರುಧಿರಂ ಘಾತಂ ನಾತಿಕುರ್ಯಾಚ್ಚ ಸಾಧಕಃ ॥ ೧೫೬ ॥

೧೫೨-೧೫೩. ಶರದೃತುವಿನ ಮಹಾನವಮಿಯಲ್ಲಿ ಈರೀತಿಯಾಗಿ ಬಲಿಯನ್ನರ್ಪಿಸಿದರೆ ಆಗ ಆ ಬಲಿಪಶುವಿನ ಎಂಟು ಅಂಗಗಳ ಮಾಂಸಗಳಿಂದ ದುರ್ಗಾತಂತ್ರದಲ್ಲಿ ಹೇಳಿರುವ ಕ್ರಮದಂತೆ ಸಂಸ್ಕಾರಮಾಡಿರುವ ಅಗ್ನಿಯಲ್ಲಿ ಮಂತ್ರದಿಂದ ಹೋಮ ಮಾಡಬೇಕು.

೧೫೪-೧೫೫. ಈ ರೀತಿಯಾಗಿ ಬಲಿಯನ್ನು ಕೊಟ್ಟರೆ ಶತ್ರುಕ್ಷಯವು ಆಗುವುದು. ಸಾಧಕನು ಯಾವಾಗಲೂ ತನ್ನ ಶರೀರದ ರಕ್ತವನ್ನು ದೇವಿಗೆ ಅರ್ಪಿಸುವಾಗ ನಾಭಿಯಿಂದ ಕೆಳಗೆ ಇರುವ ಅಂಗಗಳ ರಕ್ತವನ್ನೂ, ಬೆನ್ನು ಮೊದಲಾದ ಶರೀರದ ಹಿಂಭಾಗದ ರಕ್ತವನ್ನೂ, ತುಟಿ, ಗಲ್ಲ, ಕಣ್ಣು ಮೊದಲಾದ ಇಂದ್ರಿಯಗಳ ರಕ್ತವನ್ನೂ ದೇವಿಗೆ ಅರ್ಪಿಸಬಾರದು.

೧೫೬. ಕತ್ತಿನ ಕೆಳಗೆ ನಾಭಿಯ ಮೇಲಿನ ಅಂಗಗಳ ರಕ್ತವನ್ನೇ ಅರ್ಪಿಸಬೇಕು. ಆದರೆ ಕೈಕಾಲುಗಳ ರಕ್ತವನ್ನು ಅರ್ಪಿಸಬಾರದು. ಬಲಿಯನ್ನು ಕೊಡುವಾಗ ಹೆಚ್ಚು ಘಾಯಗಳನ್ನು ಪಶುವಿಗೆ ಮಾಡಬಾರದು.

ಗಂಡಯೋಶ್ಚ ಲಲಾಟಸ್ಯ ಭ್ರುವೋರ್ಮಧ್ಯಸ್ಯ ಶೋಣಿತಂ ।
ಕರ್ಣಾಗ್ರಸ್ಯ ಚ ಬಾಹ್ವೋಶ್ಚ ತಲಯೋರುದರಸ್ಯ ಚ ॥ ೧೫೭ ॥
ಕಂಠತೋ ನಾಭಿತಶ್ಚೋರ್ಧ್ವಂ ಹೃದ್ಭಾಗಸ್ಯ ಯತಸ್ತತಃ ।
ಪಾರ್ಶ್ವಯೋಶ್ಚಾಪಿ ರುಧಿರಂ ದುರ್ಗಾಯೈ ವಿನಿವೇದಯೇತ್ ॥ ೧೫೮ ॥
ನ ಗುಲ್ಫತೋಽಸೃಕ್ಪ್ರದದ್ಯಾತ್ತು ನ ಜಠ್ರೋನಾರ್ಪಿ ವಕ್ಷತಃ ।
ನ ಚ ರೋಗಬಿಲಾದಂಗಾನ್ನಾನ್ಯಘಾತಾಚ್ಚ ಭೈರವ ॥ ೧೫೯ ॥
ತದರ್ಥೇ ಚ ಕೃತಾಘಾತಃ ಸಕ್ರದ್ದೋಽಪ್ಯುಬ್ಭಮಾನಸಃ ।
ಶ್ರುತೇ ರಕ್ತಂ ಪ್ರದದ್ಯಾತ್ತು ಪದ್ಮಪುಷ್ಪಸ್ಯ ಪತ್ರಕೇ ॥ ೧೬೦ ॥
ಸೌವರ್ಣೇ ರಾಜತೇ ಕಾಂಸ್ಯೇ ಲೌಹೇ ಘಾಲೇ ಚ ವಾ ನರಃ ।
ನಿಧಾಯ ದೇವ್ಯೈ ದದ್ಯಾತ್ತು ತದ್ರಕ್ತಂ ಮಂತ್ರಪೂರ್ವಕಂ ॥ ೧೬೧ ॥
ಖನನಂ ಕ್ಷುರಿಕಾಖಡ್ಗ ಸಂಕುಲಾದಿ ಯದಸ್ರಕಂ ।
ಘಾತೇನ ಬೃಹದಸ್ರಸ್ಯ ಮಹಾಫಲಮವಾಪ್ನುಯಾತ್ ॥ ೧೬೨ ॥

೧೫೭-೧೫೮. ಕಪೋಲ, ಲಲಾಟ, ಹುಬ್ಬುಗಳ ಮಧ್ಯ, ಕಿವಿಗಳ ಮೇಲ್ಭಾಗ, ಬಾಹು, ಕೈಗಳು, ಹೊಟ್ಟೆ, ಕತ್ತಿನಕೆಳಭಾಗದ ಮತ್ತು ನಾಭಿಯ ಮೇಲ್ಭಾಗದ ಅವಯವಗಳು, ಹೃದಯದ ಎರಡು ಪಕ್ಕಗಳು ಇವುಗಳ ರಕ್ತವನ್ನು ದೇವಿಗೆ ಅರ್ಪಿಸಬೇಕು.

೧೫೯. ಎಲೈ ಭೈರವ! ಕಾಲುಗಂಟುಗಳು, ಭುಜಸಂಧಿಗಳು, ರೋಗವುಂಟಾಗಿರುವ ಅಂಗಗಳು, ಬೇರೇವ್ರಣದಿಂದ ಕೂಡಿರುವ ಅಂಗಗಳು ಇವುಗಳ ರಕ್ತವನ್ನು ದೇವಿಗೆ ಅರ್ಪಿಸಬಾರದು.

೧೬೦. ರಕ್ತಕ್ಕಾಗಿ ಪಶುವಿಗೆ ವಿಶೇಷವಾಗಿ ಘಾಯವನ್ನು ಮಾಡದೆ, ಧೈರ್ಯದಿಂದಲೂ, ಶ್ರದ್ಧೆಯಿಂದಲೂ ರಕ್ತವನ್ನು ಕಮಲಪತ್ರದಲ್ಲಿಟ್ಟು ದೇವಿಗೆ ಅರ್ಪಿಸಬೇಕು

೧೬೧. ಅಥವಾ ಚಿನ್ನದಪಾತ್ರೆ, ಬೆಳ್ಳಿಯಪಾತ್ರೆ, ಕಂಚಿನದು, ಲೋಹಪಾತ್ರೆ, ಮರದ ಪಾತ್ರೆ ಇವುಗಳಲ್ಲಿ ರಕ್ತವನ್ನು ತುಂಬಿ, ಮಂತ್ರಪೂರ್ವಕವಾಗಿ ದೇವಿಗೆ ಅರ್ಪಿಸಬೇಕು.

೧೬೨. ಚಾಕು, ಕತ್ತಿ, ಮುಂತಾದುವುಗಳಿಂದ ರಕ್ತವನ್ನು ಹೊರಡಿಸುವುದಕ್ಕಿಂತಲೂ ದೊಡ್ಡ ಆಯುಧದ ಹೊಡೆತದಿಂದ ರಕ್ತವನ್ನು ಪಶುಶರೀರದಿಂದ ಹೊರಡಿಸಿದರೆ ಮಹಾಫಲವು ಲಭಿಸುವುದು.

ಪದ್ಮಪುಷ್ಪಸ್ಯ ಪತ್ರಂ ತು ಯಾವದ್ಗೃಹ್ಣಾತಿ ಶೋಣಿತಂ ।
ತತ್ಪ್ರಮಾಣೇ ಚತುರ್ಭಾಗಾಧಿಕಂ ರಕ್ತಂ ತು ಸಾಧಕಃ ॥ ೧೬೩ ॥

ನ ಕದಾಚಿತ್ಪ್ರದದ್ಯಾತ್ತು ನಾಂಗಚ್ಛೇದಮುಪಾಚರೇತ್ ।
ಯಃ ಸ್ವಹೃದಯಸಂಜಾತಮಾಂಸಂ ಮಾಷಪ್ರಮಾಣತಃ ॥ ೧೬೪ ॥

ತಿಲಮುದ್ಗಪ್ರಮಾಣಾದ್ವಾ ದೇವ್ಯೈ ದದ್ಯಾತ್ತು ಭಕ್ತಿತಃ ।
ಷಣ್ಮಾಸಾಭ್ಯಂತರೇ ತಸ್ಮಾತ್ಸಾಮಮಿಷ್ಟಮವಾಪ್ನುಯಾತ್ ॥ ೧೬೫ ॥

ಬಾಹ್ವೋಸ್ತು ಸ್ಕಂಧಯೋರ್ವಾಪಿ ಯೋ ದದ್ಯಾದ್ದೀಪವರ್ತಿಕಾಂ ।
ಹೃದಯೇ ವಾ ಸ್ನೇಹಪಾತ್ರಂ ವಿನಾ ಭಕ್ತ್ಯಾ ತು ಸಾಧಕಃ ॥ ೧೬೬ ॥

ಕ್ಷಣಮಾತ್ರೇಣ ತದ್ದೀಪಪ್ರದಾನಸ್ಯ ಫಲಂ ಶೃಣು ।
ಭುಕ್ತ್ವಾ ಚ ವಿಪುಲಾ ಭೋಗಾ ದೇವೀಗೇಹೇ ಯದೃಚ್ಛಯಾ ॥ ೧೬೭ ॥

---

೧೬೩. ಕಮಲಪತ್ರದಲ್ಲಿ ಎಷ್ಟುರಕ್ತವು ಹಿಡಿಸುವುದೋ ಅದರ ನಾಲ್ಕುಭಾಗ ಕ್ಕಿಂತಲೂ ಹೆಚ್ಚಾಗಿ ರಕ್ತವನ್ನು ಸಾಧಕನು ದೇವಿಗೆ ಅರ್ಪಿಸಬಾರದು. ರಕ್ತವನ್ನು ತೆಗೆಯುವಾಗ ಪಶುವಿನ ಒಂದು ಅಂಗವನ್ನೇ ಕತ್ತರಿಸಬಾರದು.

೧೬೪-೧೬೫. ಯಾವನು ತನ್ನ ಹೃದಯಪ್ರದೇಶದಿಂದ ಉದ್ದು, ಅಥವಾ ಎಳ್ಳು, ಹೆಸರು ಇವುಗಳ ಪ್ರಮಾಣದಷ್ಟು ಮಾಂಸವನ್ನು ತೆಗೆದು, ದೇವಿಗೆ ಅರ್ಪಿಸುವನೋ ಅವನು ಆರುತಿಂಗಳೊಳಗೆ ಸಕಲ ಇಷ್ಟಾರ್ಥಗಳನ್ನೂ ಪಡೆವನು.

೧೬೬. ಬಾಹುಗಳು, ಭುಜ, ಶಿರಸ್ಸು, ಹೃದಯ ಇವುಗಳಲ್ಲಿ ಪಾತ್ರೆಯನ್ನಿಡದೆ ಹಾಗೆಯೇ ಬತ್ತಿಯನ್ನೂ, ಎಣ್ಣೆಯನ್ನೂ, ಪಾಕ ಒಂದು ಕ್ಷಣಕಾಲ ಮಾತ್ರವಾದರೂ ಯಾವ ಸಾಧಕನು ದೀಪವನ್ನು ಹತ್ತಿಸಿ ಭಕ್ತಿಯಿಂದ ದೇವಿಗೆ ಅರ್ಪಿಸುವನೋ ಅವನಿಗೆ ಲಭ್ಯವಾಗುವ ಫಲವನ್ನು ಹೇಳುವೆನು. ಕೇಳು.

೧೬೭. ಅವನು ಇಹಲೋಕದಲ್ಲಿ ಬೇಕಾದಂತಹ ಭೋಗಗಳನ್ನು ಅನುಭವಿಸಿ ಕೊನೆಗೆ ದೇವೀಲೋಕವನ್ನು ಪಡೆವನು. ಅಲ್ಲಿ ಮೂರುಕಲ್ಪಗಳವರೆಗೆ ಸುಖದಿಂದಿದ್ದು ಮುಂದೆ ಚಕ್ರವರ್ತಿಯಾಗಿ ಭೂಮಿಯಲ್ಲಿ ಜನಿಸುವನು.

ಕೆಲ್ಪತ್ರಯಂ ತು ಸಂಸ್ಥಾಯ ಸೌರ್ವಭೌಮೋ ನೃಪೋ ಭವೇತ್ ।
ಮಹಿಷಸ್ಯ ಶಿರಚ್ಛಿನ್ನಂ ಸಪ್ರದೀಪಂ ಶಿವಾಪುರಃ ॥ ೧೬೮ ॥

ಹಸ್ತಾಭ್ಯಾಂ ಯಃ ಸಮಾದಾಯ ಅಹೋರಾತ್ರಂ ತು ತಿಷ್ಠತಿ ।
ಸ ಚಿರಾಯುಃ ಪೂತಮೂರ್ತಿರಿಹ ಭುಕ್ತ್ವಾ ಮನೋರಮಾನ್ ॥ ೧೬೯ ॥

ಭೋಗಾನಂತೆ ಮದ್ಗೃಹೇ ಗೋ ಗಣಾನಾಮಧಿಪೋ ಭವೇತ್ ।
ನರಸ್ಯ ಶೀರ್ಷಮಾದಾಯ ಸಾಧಕೋ ದಕ್ಷಿಣೇ ಕರೇ ॥ ೧೭೦ ॥

ವಾಮೇನ ರುಧಿರಂ ಪಾತ್ರಂ ಗೃಹೀತ್ವಾ ನಿಶಿ ಜಾಗ್ರತಃ ।
ಯಾವದ್ರಾತ್ರಂ ಸ್ಥಿತೋ ಮರ್ತ್ಯೋ ರಾಜಾ ಭವತಿ ಚೇಹ ವೈ ॥ ೧೭೧ ॥

ಮೃತೇ ಮಮ ಗೃಹಂ ಪ್ರಾಪ್ಯ ಗಣಾನಾಮಧಿಪೋ ಭವೇತ್ ।
ಕ್ಷಣಮಾತ್ರಂ ಬಲೀನಾಂ ತು ಶಿರೋರಕ್ತಂ ಕರದ್ವಯೇ ॥ ೧೭೨ ॥

ಗೃಹೀತ್ವಾ ಚಿಂತಯೇದ್ದೇವೀಂ ಪುರಸ್ತಿಷ್ಠತಿ ಮಾನವಃ ।
ಸ ಕಾಮಾನಿಹ ಸಂಪ್ರಾಪ್ಯ ದೇವೀಲೋಕೇ ಮಹೀಯತೆ ॥ ೧೭೩ ॥

೧೬೮-೧೬೯. ಕತ್ತರಿಸಿದ ಕೋಣದ ಶಿರಸ್ಸಿನಲ್ಲಿ ದೀಪವನ್ನು ಹತ್ತಿಸಿ ಅದನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು ಯಾವನು ಒಂದುರಾತ್ರಿ ಹಗಲು ದೇವಿಯ ಎದುರಿನಲ್ಲಿ ನಿಲ್ಲುವನೋ ಅವನು ಪರಿಶುದ್ಧನಾಗಿ ಬಹಳಕಾಲ ಬಮಕೆದ್ದು, ಕೊನೆಗೆ ನನ್ನ (ಶಂಕರನ) ಲೋಕಕ್ಕೆ ಬಂದು ಪ್ರಮಥಗಣಗಳಿಗೆ ನಾಯಕನಾಗುವನು.

೧೭೦-೧೭೧. ಕತ್ತರಿಸಿದ ಮನುಷ್ಯಶಿರಸ್ಸನ್ನು ಯಾವ ಸಾಧಕನು ಬಲಗೈನಲ್ಲಿ ಹಿಡಿದುಕೊಂಡು, ಎಡಗೈನಲ್ಲಿ ರಕ್ತತುಂಬಿದ ಪಾತ್ರೆಯನ್ನು ಹಿಡಿದುಕೊಂಡು, ರಾತ್ರೆಯಲ್ಲಿ ಎಚ್ಚರವಾಗಿ ದೇವಿಯ ಎದುರಿನಲ್ಲಿ ನಿಲ್ಲುವನೋ ಅವನು ರಾಜನಾಗುವನು. ಮೃತನಾದಮೇಲೆ ನನ್ನ ಲೋಕವನ್ನು ಹೊಂದಿ ಗಣಗಳಿಗೆ ಅಧಿಪತಿಯಾಗಿರುವನು.

೧೭೨-೧೭೩. ಸ್ವಲ್ಪಹೊತ್ತು ಮಾತ್ರವಾದರೂ ಬಲಿಪಶುಗಳ ಶಿರಸ್ಸಿನ ರಕ್ತವನ್ನು ಕೈಗಳಲ್ಲಿ ಹಿಡಿದು, ದೇವಿಯನ್ನು ಚಿಂತಿಸುತ್ತಾ, ಎದುರಿಗೆ ಯಾವನು ನಿಲ್ಲುವನೋ, ಅವನು ಇಹಲೋಕದಲ್ಲಿ ಸಕಲ ಇಷ್ಟಾರ್ಥಗಳನ್ನೂ ಪಡೆದು ಕೊನೆಯಲ್ಲಿ ದೇವಿಯ ಲೋಕವನ್ನು ಪಡೆಯುವನು.

ಮಹಾಮಾಯೇ ಜಗನ್ಮಾಥೇ ಸರ್ವಕಾಮಪ್ರದಾಯಿನಿ !
ದದಾಮಿ ದೇಹರುಧಿರಂ ಪ್ರಸೀದ ವರದಾ ಭವ ॥ ೧೭೪ ॥

ಇತ್ಯುಕ್ತ್ವಾ ಮೂಲಮಂತ್ರೇಣ ನತಿಪೂರ್ವಂ ವಿಚಕ್ಷಣಃ ।
ಸ್ವಗಾತ್ರರುಧಿರಂ ದದ್ಯಾನ್ಮಾನವಃ ಸಿದ್ಧಸನ್ನಿಭಃ ॥ ೧೭೫ ॥

ಯೇನಾತ್ಮಮಾಂಸಂ ಸತ್ಯೇನ ದದಾಮೀಶ್ವರಿ ಭೂತಯೇ ।
ನಿರ್ವಾಣಂ ತೇನ ಸತ್ಯೇನ ದೇಹಿ ಹಂ ಪಂ ನಮೋ ನಮಃ ॥ ೧೭೬ ॥

ಇತ್ಯನೇನ ತು ಮಂತ್ರೇಣ ಸ್ವಮಾಂಸಂ ವಿತರೇದ್ಬುಧಃ ।
ಸೌಭಾಗ್ಯಂ ಸುಖಸಂಪನ್ನಂ ಪ್ರದೀಪಂ ಪರಮಂ ರುಚಿಃ ॥ ೧೭೭ ॥

ದೀಪಯೇನ್ಮಾಂಸಮಿಹಜಂ ದೀಪಂ ಹ್ರೌಂ ಹ್ರೌಂ ನಮೋ ನಮಃ ।
ಇತ್ಯನೇನ ತು ಮಂತ್ರೇಣ ದೀಪಂ ದದ್ಯಾದ್ವಿಚಕ್ಷಣಃ ॥ ೧೭೮ ॥

---

೧೭೪. ಜಗತ್ತಿಗೊಡೆಯಳೂ, ಸಕಲ ಇಷ್ಟಾರ್ಥಗಳನ್ನು ಕೊಡುವವಳೂ ಆದ ಓ ಮಹಾಮಾಯೆಯೇ! ನಿನಗೆ ಶರೀರದ ರಕ್ತವನ್ನು ಕೊಡುವೆನು. ಪ್ರಸನ್ನಳಾಗು. ನನಗೆ ವರವನ್ನು ಕೊಡುವವಳಾಗು. ಎಂದು ಪ್ರಾರ್ಥಿಸಬೇಕು. ಇದು, ದೇವಿಗೆ ಸಾಧಕನು ತನ್ನ ರಕ್ತವನ್ನು ಅರ್ಪಿಸುವ ಮಂತ್ರವು.

೧೭೫. ಹೀಗೆ ಹೇಳಿ ನಮಸ್ಕಾರಪೂರ್ವಕವಾಗಿ ಮೂಲಮಂತ್ರದಿಂದ ತನ್ನ ಶರೀರದ ರಕ್ತವನ್ನು ಸಾಧಕನು ದೇವಿಗೆ ಅರ್ಪಿಸಬೇಕು.

೧೭೬. ಓ ಈಶ್ವರಿಯೆ! ನಾನು ಯಾವ ಸತ್ಯದಿಂದ ಐಶ್ವರ್ಯಕ್ಕಾಗಿ ನಿನಗೆ ನನ್ನ ಶರೀರಮಾಂಸವನ್ನು ಕೊಡುತ್ತಲಿರುವೆನೋ, ಆ ಸತ್ಯದಿಂದ ನನಗೆ ಮುಕ್ತಿಯನ್ನು ಅನುಗ್ರಹಿಸು. ಹಂ ಪಂ ಓದೇವಿ ನಿನಗೆ ನಮಸ್ಕಾರವು. ಇದು ಸಾಧಕನು ದೇವಿಗೆ ತನ್ನಶರೀರ ಮಾಂಸವನ್ನು ಅರ್ಪಿಸುವ ಮಂತ್ರವು. ಈ ಮಂತ್ರದಿಂದ ಸಾಧಕನು ತನ್ನ ಶರೀರದ ಮಾಂಸವನ್ನು ದೇವಿಗೆ ಅರ್ಪಿಸಬೇಕು.

೧೭೭-೧೭೮. ಪುಣ್ಯಪ್ರದವೂ, ಸುಖದಾಯಕವೂ, ತುಂಬಾ ಪ್ರಕಾಶವೂ ಆದಂತಹ ದೀಪವನ್ನು ಮಾಂಸದಿಂದ ಹೊರಡುವ ಸ್ನೇಹದಿಂದ ಹೊತ್ತಿಸಿ "ಹ್ರೌಂ ಹ್ರೌಂ" ಎಂಬಮಂತ್ರದಿಂದ ಸಾಧಕನು ದೇವಿಗೆ ಅರ್ಪಿಸಬೇಕು. ಇದು ದೀಪವನ್ನು ಅರ್ಪಿಸುವ ಮಂತ್ರವು.

ಮಹಾನವಮ್ಯಾಂ ಶರದಿ ರಾತ್ರೌ ಸ್ಕಂಧವಿಶಾಖಯೋಃ ।
ಯವಚೂರ್ಣಮಯಂ ಕೃತ್ವಾ ರಿಪುಂ ಮೃಣ್ಮಯಮೇವ ವಾ ॥ ೧೭೯ ॥

ಶಿರಶ್ಛಿತ್ವಾ ಬಲಿಂ ದದ್ಯಾತ್ಕೃತ್ವಾ ತಸ್ಯ ತು ಮಂತ್ರತಃ ।
ಅನೇನೈವ ತು ಮಂತ್ರೇಣ ಖಡ್ಗಮಾಮಂತ್ರ್ಯ ಯತ್ನತಃ । ॥ ೧೮೦ ॥

ರಕ್ತಂ ಕಿಲಿ ಕಿಲೀ ಘೋರ ಘೋರಾಧಾರ ವಿಹಿಂಸಕ ।
ಬ್ರಹ್ಮಶಿಷ್ಯಾಂಬಿಕಾಶಿಷ್ಯ ಹ್ಯಮುಕಂ ಚಾರಿಸತ್ತಮಂ ॥೧೮೧ ॥

ಮಾಂಸೋ ವಿಸರ್ಗಸಹಿತಃ ಸ ಚ ಬಿಂದುಯುತೋ ಪರಃ ।
ಶಿರಶ್ಛಿತ್ವಾ ಬಲಿಂ ದದ್ಯಾತ್ಕೃತ್ವಾ ತಸ್ಯ ತು ಮಂತ್ರತಃ ॥ ೧೮೨ ॥

ಅನೇನೈವ ತು ಮಂತ್ರೇಣ ಬಿಂದುನಾ ಚ ಸಮನ್ವಿತಃ ।
ಬ್ರಹ್ಮಾಗ್ನಿಯೋಗಚಂದ್ರೇಣ ಬಿಂದುನಾ ಚ ಸಮನ್ವಿತಃ ॥ ೧೮೩ ॥

ಷಂಡತೋ ಬಲಿಷು ಪ್ರೋಕ್ತಃ ಖಡ್ಗಸ್ಕಂಧವಿಶಾಖಯೋಃ ।
ರಕ್ತೇದ್ರವೈಃ ಶೋಚಯಿತ್ವಾ ಕೃತ್ರಿಮಂ ತಂ ಬಲಿಂ ರಿಪುಂ ॥ ೧೮೪ ॥

೧೭೯-೧೮೧. ಶರದೃತುವಿನ ಮಹಾನವಮಿಯಲ್ಲಿ ಹಿಟ್ಟಿನಿಂದಲಾಗಲಿ, ಮಣ್ಣಿನಿಂದಲಾಗಲಿ, ಶತ್ರುವಿನ ಪ್ರತಿಮೆಯನ್ನು ಮಾಡಿ, ಅದನ್ನು ರಾತ್ರಿಯ ಕಾಲದಲ್ಲಿ ಸ್ಕಂದ ವಿಶಾಖ ಮಂತ್ರಗಳಿಂದ ಇರಿಸಿ, ಅದರ ಶಿರಸ್ಸನ್ನು ಮಂತ್ರಪೂರ್ವಕವಾಗಿ ಕತ್ತರಿಸಿ ಬಲಿಯನ್ನು ಕೊಡಬೇಕು. ಬಲಿಕೊಡುವಾಗ ಈ ಕೆಳಗೆ ಹೇಳುವ ಮಂತ್ರವನ್ನು ಉಚ್ಚರಿಸಬೇಕು. "ರಕ್ತಂ ಕಿಲಿ ಕಿಲಿ ಘೋರ ಘೋರ ಆಧಾರವಿಹಿಂಸಕ ಬ್ರಹ್ಮಶಿಷ್ಯ ಅಂಬಿಕಾಶಿಷ್ಯ ಅಮುಕಂ ಶತ್ರುಂ ಮಃ ಮಂ" ಎಂಬ ಮಂತ್ರವನ್ನು ಹೇಳಿ ಕತ್ತಿಯನ್ನು ಅಭಿಮಂತ್ರಿಸಬೇಕು.

೧೮೨-೧೮೩. ಬಳಿಕ ಮೇಲಿಹೇಳಿದ ರಕ್ತಂ ಕಿಲಿ ಕಿಲಿ ಎಂಬಮಂತ್ರದಿಂದಲೂ, ಬ್ರಹ್ಮಬೀಜ ಅಗ್ನಿಬೀಜ ಇವುಗಳಿಗೆ ಓಕಾರ ಮತ್ತು ಬಿಂದುವನ್ನೂ ಕಡೆಯಲ್ಲಿ ಫಟ್ ಎಂಬ ಶಬ್ದವನ್ನೂ ಸೇರಿಸಿದರೆ, ಬಲಿಯನ್ನು ಛೇದಿಸುವ ಮಂತ್ರವಾಗುವುದು. "ರಕ್ತಂ ಕಿಲಿ ಕಿಲಿ ಘೋರ ಘೋರ ಆಧಾರ ವಿಹಿಂಸಕ ಬ್ರಹ್ಮಶಿಷ್ಯ ಅಂಬಿಕಾಶಿಷ್ಯ ಅಮುಕಂ ಶತ್ರುಂ ಮಃ ಮಂ ಕ್ರೋಂ ಫಟ್" ಎಂಬ ಈ ಮಂತ್ರದಿಂದಲೂ, ಸ್ಕಂಧ ವಿಶಾಖಮಂತ್ರಗಳಿಂದಲೂ, ಬಲಿಪಶುವಿನ ಶಿರಸ್ಸನ್ನು ಕತ್ತರಿಸಿ ದೇವಿಗೆ ಅರ್ಪಿಸಬೇಕು.

೧೮೪-೧೮೬. ಬಲಿಯನ್ನು ಕೊಡುವುದಕ್ಕೆ ಮೊದಲು ಕೃತ್ರಿಮಬಲಿಯಾದ ಆ ಶತ್ರುವಿಗ್ರಹವನ್ನು ರಕ್ತದಿಂದ ತೋಯಿಸಿ, ಅಪರ ಬಲಾಟವಲ್ಲಿ ಕೆಟ್ಟಗುಣಗಳಿಂದ

ಕುಚಂದನಸ್ಯ ತಿಲಕಂ ಲಲಾಟೇ ವಿನಿವೇಶ್ಯ ಚ ।
ರಕ್ತಮಾಲ್ಯಾಂಬರಂ ಕೃತ್ವಾ ರಕ್ತವಸ್ತ್ರಧರಂ ತಥಾ ॥ ೧೮೫ ॥

ಕಂಠೇ ಬಧ್ವಾ ರಕ್ತಸೂತ್ರೈರ್ನಾಭೌ ಶಲ್ಯಂ ಚ ಕೃತ್ರಿಮಂ ।
ದತ್ತ್ವೋತ್ತರಶಿರಸ್ಕಂ ತಂ ಕೃತ್ವಾ ಖಡ್ಗೇನ ಛೇದಯೇತ್ ॥ ೧೮೬ ॥

ಶಿರಸ್ತಸ್ಯ ತತೋ ದದ್ಯಾತ್ಸ್ಕಂಧಮಂತ್ರೇಣ ಮಂತ್ರಿತಂ ।
ಚತುರ್ದಶಸ್ವರಾಗ್ನಿಭ್ಯಾಂ ಸಂಪೃಕ್ತಃ ಸ್ಯಾತ್ಪರಃಸರಂ ॥ ೧೮೭ ॥

ಪರತಃ ಪರತಃ ಪೂರ್ವಂ ಚಂದ್ರಬಿಂದುಸಮನ್ವಿತಂ ।
ಸ್ಕಂಧಸ್ಯ ಮೂಲಮಂತ್ರೋಽಯಂ ತೇನ ತಸ್ಮೈ ಬಲಿಂ ಸೃಜೇತ್॥ ೧೮೮ ॥

ಚತುರ್ದಶಸ್ವರಾಗ್ನಿಭ್ಯಾಂ ಪತೃತೀಯಂ ತು ಪೂರ್ವವತ್ ।
ಫ್ರೌಕ್ರೌಂ ವಿಶಾಖಮಂತ್ರೋಽಯಂ ತೇನ ತಸ್ಮೈ ಬಲಿಂ ಸೃಜೇತ್ ॥

ಕುಟಿಲಾಕ್ಷೌ ಕೃಷ್ಣಪಿಂಗವರ್ಣೌ ರಕ್ತಾಂಗಧಾರಿಣೌ ।
ತ್ರಿಶೂಲಂ ಕರವಾಲಂ ಚ ಪಾಣಿಭ್ಯಾಂ ದಕ್ಷಿಣೇ ತಥಾ ॥ ೧೯೦ ॥

ತಿಲಕವನ್ನಿರಿಸಬೇಕು. ಮತ್ತು ಆ ವಿಗ್ರಹಕ್ಕೆ ಕೆಂಪುಹೂವಿನಹಾರ ಮತ್ತು ಕೆಂಪುಬಟ್ಟೆಗಳನ್ನು ತೊಡಿಸಬೇಕು. ಕತ್ತನ್ನು ಕೆಂಪುಹಗ್ಗದಿಂದ ಕಟ್ಟಬೇಕು. ನಾಭಿಯಲ್ಲಿ ಕೃತ್ರಿಮವಾದ ಶಲ್ಯದಿಂದ ಇರಿಯಬೇಕು. ಬಳಿಕ ಆ ವಿಗ್ರಹವನ್ನು ಉತ್ತರಾಭಿಮುಖವಾಗಿ ನಿಲ್ಲಿಸಿ ಕತ್ತಿಯಿಂದ ಶಿರಸ್ಸನ್ನು ಕತ್ತರಿಸಬೇಕು. ಆ ಮೇಲೆ ಸ್ಕಂಧಮಂತ್ರದಿಂದ ಅದರ ಶಿರಸ್ಸನ್ನು ದೇವಿಗೆ ಅರ್ಪಿಸಬೇಕು.

೧೮೭-೧೮೮. ಹದಿನಾಲ್ಕನೆಯ ಸ್ವರವಾದ ಔಕಾರ ಅಗ್ನಿಬೀಜಾಕ್ಷರವಾದ ರಕಾರ ಅವುಗಳಿಗೆ ಬಿಂದುವನ್ನು ಸೇರಿಸಿದರೆ ರೌಂ ಎಂದು ಸ್ಕಂಧ ಮೂಲಮಂತ್ರವಾಗುವುದು. ಈ ಮಂತ್ರದಿಂದ ಬಲಿಯನ್ನು ಕೊಡಬೇಕು.

೧೮೯. ಪಕಾರದಿಂದ ಮೂರನೆಯ ವರ್ಣವಾದ ಭಕಾರ, ಅಗ್ನಿಬೀಜಾಕ್ಷರವಾದ ರಕಾರ, ಹದಿನಾಲ್ಕನೆಯ ಸ್ವರವಾದ ಔಕಾರ ಮತ್ತು ಸೊನ್ನೆ ಇವುಗಳು ಸೇರಿದರೆ ಭ್ರೌಂ ಎಂದು ವಿಶಾಖಮಂತ್ರವಾಗುವುದು. ಇದರಿಂದಲೂ ಬಲಿಯನ್ನು ಕೊಡಬೇಕು.

೧೯೦-೧೯೨. ದೇವಿಗೆ ಈರ್ವರು ದ್ವಾರಪಾಲಕರು ಇರುವರು. ಅವರ ಕಣ್ಣುಗಳು ವಕ್ರವಾಗಿರುವವು ಪರಿಧಿರವು ಕಪ್ಪಗೂ, ಕಪಿಲವರ್ಣವಾಗಿಯೂ ಇರುವುದು.

ಬಿಭ್ರತೌ ನೃಕಪಾಲಂ ಚ ಕರ್ತ್ರಿಕಂ ಚಾಪಿ ವಾಮತಃ ।
ತ್ರಿನೇತ್ರೌ ನರಮುಂಡಾನಾಂ ಮಾಲಾಮುರಸಿ ಬಿಭ್ರತೌ ॥ ೧೯೧ ॥

ವಿಕಟೌ ದಶನೈರ್ಭೀಮೈರ್ಗಣೇಶೌ ದ್ವಾರಪಾಲಕೌ ।
ಧ್ಯಾನೇನ ಚಿಂತಯೇದ್ದೇವ್ಯಾಃ ಪುರತಃ ಸಂಸ್ಥಿತೌ ಸದಾ ॥ ೧೯೨ ॥

ಚೈತ್ರೇ ಮಾಸಿ ಸಿತೇ ಪಕ್ಷೇ ಚತುರ್ದಶ್ಯಾಂ ವಿಶೇಷತಃ ।
ಬಲಿಭಿರ್ಮಹಿಷೈಶ್ಛಾಗೈರ್ಮಾಂ ಚ ಭೈರವರೂಪಿಣಂ ॥ ೧೯೩ ॥

ತೋಷಯೇನ್ಮಧುಭಿರ್ಮಾಂಸೈಸ್ತೇನ ತುಷ್ಯಾಮ್ಯಹಂ ಸುತ ।
ಚಂಡಿಕಾಬಲಿದಾನೇ ತು ಬಲಿಶೀರ್ಷಂ ಜಲೇನ ಚ ॥ ೧೯೪ ॥

ಅಭಿಷಿಚ್ಯ ತು ಮಂತ್ರೇಣ ಮೂಲೇನೈವ ನಿವೇದಯೇತ್ ।
ಈಷತ್ಪ್ರಾಣಂ ತು ಬಹುಧಾ ಚಲಿತಂ ಪೂರ್ವಮರ್ಚಿತಂ ॥ ೧೯೫ ॥

ಕೆಂಪಾದ ವಸ್ತ್ರಗಳನ್ನುಟ್ಟಿರುವರು. ಬಲಗಡೆಯ ಕೈಗಳಲ್ಲಿ ತ್ರಿಶೂಲಖಡ್ಗಗಳನ್ನು ಹಿಡಿದಿರುವರು. ಎಡಗೈಗಳಲ್ಲಿ ಮನುಷ್ಯಕಪಾಲ, ಕತ್ತಿಗಳನ್ನು ಧರಿಸಿರುವರು. ಮೂರು ಕಣ್ಣುಗಳುಳ್ಳವರು. ನರಮುಂಡಗಳ ಮಾಲೆಯನ್ನು ಎದೆಯಲ್ಲಿ ಧರಿಸಿರುವರು. ಅವರಿಗೆ ವಿಕಾರವೂ, ಭಯಂಕರವೂ ಆದ ಹಲ್ಲುಗಳಿರುವವು. ಅವರು ಪ್ರಮಥಗಣಾನಾಯಕರು, ಮತ್ತು ದೇವಿಯ ದ್ವಾರಪಾಲಕರು. ಇಂತಹ ದ್ವಾರಪಾಲಕರನ್ನು ಸದಾ ದೇವಿಯ ಎದುರಿನಲ್ಲಿರುವಂತೆ ಧ್ಯಾನಿಸಬೇಕು.

೧೯೩. ಚೈತ್ರಶುಕ್ಲ ಚತುರ್ದಶಿಯಲ್ಲಿ ಕೋಣ, ಆಡು, ಕುರಿ, ಇವುಗಳನ್ನು ಬಲಿಕೊಟ್ಟು ಮಧ್ಯಮಾಂಸಗಳಿಂದ ಭೈರವರೂಪಿಯಾದ ನನ್ನನ್ನು ತೃಪ್ತಿಗೊಳಿಸಬೇಕು. ಎಲೈ ಪುತ್ರನೇ, ಅದರಿಂದ ನಾನು (ಶಂಕರನು) ತೃಪ್ತನಾಗುವೆನು.

೧೯೪. ಚಂಡಿಕೆಗೆ ಬಲಿಯನ್ನು ಕೊಡುವಾಗ, ಬಲಿಪಶುವಿನ ಶಿರಸ್ಸನ್ನು ಜಲದಿಂದ ಅಭಿಷೇಕಮಾಡಿ, ಮೂಲಮಂತ್ರದಿಂದ ಆ ಶಿರಸ್ಸನ್ನು ದೇವಿಗೆ ಅರ್ಪಿಸಬೇಕು.

೧೯೫. ಹಿಂದೆ ಪೂಜಿಸಲ್ಪಟ್ಟ ಬಳಿಕ ಬಲಿಕೊಟ್ಟಮೇಲೆ ಪಶುವು ಸ್ವಲ್ಪ ಪ್ರಾಣವುಳ್ಳದ್ದಾಗಿ, ಅನೇಕಬಾರಿ ಅತ್ತಿತ್ತ ಚಲಿಸಿದರೆ, ಆಗ ಸಾಧಕನು ತನ್ನ ಇಷ್ಟಾರ್ಥವು ಸಿದ್ಧಿಸುವುದೆಂದು ತಿಳಿಯಬೇಕು.

ವೀಕ್ಷೇತ್ತಾವುಸಮೃದ್ಧಿಂ ತು ಸಿದ್ಧಭಾವಂ ಚ ಸಾಧಕಃ ।
ಸಿತಪ್ರೇತೋ ರಥಸ್ತೇಽಯಂ ಯೋಗಪೀತಸ್ಯ ಸಂನಿಭಃ ॥ ೧೯೬ ॥

ಧ್ಯಾಯಾವ್ಯಸ್ಮಿ ನ್ಮಹಾಮಾಯೇ ಸಿದ್ಧಿಂ ಬೋಧಯ ತೇ ನಮಃ ।
ಅನೇನಾಮಂತ್ರಿತಂ ಶೀರ್ಷಂ ನ ಚಿರಾದ್ಯದಿ ವೇಪತೇ ॥ ೧೯೭ ॥

ತತ್ಕಾರ್ಯಸ್ಯ ತದಾ ಸಿದ್ಧಿರಸಿದ್ಧಿಸ್ತು ವಿಪರ್ಯಯಾತ್ ।
ಏವಂ ದದದ್ಬಲಿಂ ವೀರೋ ಯಥೋಕ್ತವಿಧಿನಾಮುನಾ ॥ ೧೯೮ ॥

ಬಲಿದಾನಾದೇವ ಚತುರ್ವರ್ಗಮಾಪ್ನೋತ್ಯಸಂಶಯಂ ।
ಏವಂ ಬಲಿಪ್ರದಾನಸ್ಯ ಕ್ರಮೋ ರೂಪಂ ತಥೈವ ಚ ॥ ೧೯೯ ॥
ಕಥಿತೋ ರುಧಿರಾಧ್ಯಾಯ ಉಪಚಾರಾ ಶೃಣುಷ್ವಮೇ ।

ಇತಿ ಶ್ರೀ ಕಾಲಿಕಾಪುರಾಣೇ ಬಲಿದಾನವಿವರಣಂ ನಾಮ
ಏಕಸಪ್ತತಿತಮೋಽಧ್ಯಾಯಃ

---

೧೯೬. ಓ ಮಹಾಮಾಯೇ! ಶುಭ್ರವಾದ ಈ ಪ್ರೇತ (ಶವ) ವು ಯೋಗ ಪೀಠದಂತೆ ನಿನಗೆ ರಥವಾಗಲಿ. ಈ ಶವದಲ್ಲಿ ಕುಳಿತಿರುವಂತೆ ನಿನ್ನನ್ನು ಧ್ಯಾನಿಸುವೆನು ಓ ದೇವೀ! ನನಗೆ ಸಿದ್ಧಿಯನ್ನು ಅನುಗ್ರಹಿಸು.

೧೯೭. ಈ ಮಂತ್ರವಿಂದ ಬಲಿಶಿರಸ್ಸನ್ನು ಅಭಿಮಂತ್ರಿಸಲು, ಆಗ ಅದು ನಡುಗಿದರೆ, ಆ ಕೂಡಲೇ ತನ್ನ ಕಾರ್ಯವು ಸಿದ್ಧಿಸುವುದೆಂದು ತಿಳಿಯಬೇಕು. ಇದಕ್ಕೆ ವಿಪರೀತವಾದರೆ ಕಾರ್ಯಸಿದ್ಧಿಯಾಗುವುದಿಲ್ಲ.

೧೯೮. ಹೀಗೆ ವಿಧಿವತ್ತಾಗಿ ವೀರನಾದ ರಾಜನು ಬಲಿಯನ್ನು ದೇವಿಗೆ ಅರ್ಪಿಸಿದರೆ, ಚತುರ್ವಿಧ ಪುರುಷಾರ್ಥಗಳನ್ನೂ ನಿಸ್ಸಂಶಯವಾಗಿ ಪಡೆಯುವನು.

೧೯೯. ಎಲೈ ಭೈರವ, ಹೀಗೆ ಬಲಿದಾನಸ್ವರೂಪ ಮತ್ತು ಕ್ರಮಗಳನ್ನು ಈ ರುಧಿರಾಧ್ಯಾಯದಲ್ಲಿ ಹೇಳಿರುವೆನು. ಈಗ ಪೂಜೆಯಲ್ಲಿ ಆಚರಿಸಬೇಕಾದ ಷೋಡಶೋಪಚಾರಕ್ರಮಗಳನ್ನು ಹೇಳುವೆನು, ಕೇಳುವವನಾಗು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೊಂದನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ದ್ವಿಸಪ್ತತಿತಮೋऽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ಉಪಚಾರಾ೯ ಪ್ರವಕ್ಷ್ಯಾಮಿ ಶೃಣು ಷೋಡಶ ಭೈರವ ।
ಯೈಃ ಸಮ್ಯಕ್ತುಷ್ಯತೇ ದೇವೀ ದೇವೋऽಪ್ಯನ್ಯೋ ಹಿ ಭಕ್ತಿತಃ ॥ ೧ ॥

ಆಸನಂ ಪ್ರಥಮಂ ದದ್ಯಾತ್ಪುಷ್ಪಂ ದಾರವಮೇವ ನಾ ।
ವಾಸ್ತ್ರಂ ವಾ ಚಾರ್ಮಣಂ ಕೌಶಂ ಮಂಡಲಸ್ಯೋತ್ತರೇ ಸೃಜೇತ್ ॥ ೨ ॥

ಯದ್ಯೈವ ದೀಯತೆ ಪದ್ಮೇ ಮಂಡಲಸ್ಯ ತದುತ್ಸೃಜೇತ್ ।
ವಾಕ್ಪುಷ್ಪತೋಯೈಃ ಕುಸುಮಂ ವಿನಾ ಯಚ್ಛಾದಕಂ ಭವೇತ್ ॥ ೩ ॥

ಎಪ್ಪತ್ತೆರಡನೆಯ ಅಧ್ಯಾಯವು

೧. ಭಗವಾ೯ ಶಂಕರನು ಹೇಳಿದನು:—ಎಲೈ ಭೈರವ, ದೇವೀಪೂಜೆಯಲ್ಲಿ ಮಾಡಬೇಕಾದ ಪದಿನಾರು ಉಪಚಾರಗಳನ್ನು ಹೇಳುವೆನು, ಕೇಳು. ಭಕ್ತಿಯಿಂದ ಮಾಡುವ ಆ ಉಪಚಾರಗಳಿಂದ ದೇವಿಯು ತುಂಬಾ ಸಂತುಷ್ಟಳಾಗುವಳು. ಮಿಕ್ಕ ದೇವತೆಗಳೂ ಈ ಉಪಚಾರಗಳಿಂದಲೇ ಸಂತುಷ್ಟರಾಗುವರು.

೨. ಈ ಷೋಡಶೋಪಚಾರಗಳಲ್ಲಿ ಆಸನಪ್ರದಾನವು ಮೊದಲನೆಯದು. ದೇವಿಗೆ ಅರ್ಪಿಸುವ ಆಸನಗಳು ಅನೇಕ ವಿಧವಾಗಿರುವವು. ಅವುಗಳಲ್ಲಿ ಹೂವಿನದು ಮರದ್ದು, ವಸ್ತ್ರನಿರ್ಮಿತವಾದುದು, ಚರ್ಮ (ಕೃಷ್ಣಾಜಿನ) ದಿಂದ ಮಾಡಿರುವುದು, ದರ್ಭೆಯಿಂದ ನಿರ್ಮಿತವಾದುದು. ಇವುಗಳಲ್ಲಿ ಯಾವುದನ್ನಾದರೂ ಮಂಡಲದ ಉತ್ತರಭಾಗದಲ್ಲಿ ದೇವಿಗೆ ಅರ್ಪಿಸಬೇಕು.

೩. ದೇವಿಯನ್ನು ಪೂಜೆಮಾಡುವಾಗ, ಬರೆದಿರುವ ಚಕ್ರದ ಸುತ್ತಲೂ ಇರುವ ಕರ್ಣಿಕೆಗಳಲ್ಲಿ ಉಪಚಾರಗಳನ್ನು ಮಾಡಿದನಂತರ, ಆಸನಗಳನ್ನು ಮಂಡಲದಲ್ಲಿ ಬಿಡಬೇಕು.

ಪದ್ಮಸ್ಯ ತದ್ಬಹಿರ್ದೇಶೇ ದ್ವಾರಾದೌ ವಿನಿವೇದಯೇತ್ ।
ಅರ್ಘ್ಯಂ ಪಾದ್ಯಂ ಚಾಚಮನಂ ಸ್ನಾನೀಯಂ ನೇತ್ರರಂಜನಂ ॥ ೪ ॥

ಮಧುಪರ್ಕಂ ಚ ಗಂಧಂ ಚ ಪುಷ್ಪಂ ಪದ್ಮಂ ನಿವೇದಯೇತ್ ।
ಪ್ರತಿಮಾಸು ಚ ಯದ್ಯೋಗ್ಯಂ ಗಾತ್ರೇ ದಾತುಂ ಚ ತತ್ತನೌ ॥ ೫ ॥

ದದ್ಯಾದಯೋಗ್ಯಂ ಪುರತೋ ನೈವೇದ್ಯಂ ಭೋಜನಾದಿಕಂ ।
ಪೌಷ್ಪಾಸವಂ ಯದ್ವಿಹಿತಂ ಯಸ್ಯ ತದ್ಯದಿ ಗರ್ಭಕಂ ॥ ೬ ॥

ನಿವೇದಯೇತ್ತದಾ ಪದ್ಮೇ ವಿಪುಲಂ ದ್ವಾರಿ ಚೋತ್ಸೃಜೇತ್ ।
ಪೌಷ್ಪಂ ಪುಷ್ಪೌಘರಚಿತಂ ಕುಶಸೂತ್ರಾದಿಸಂಯುತಂ ॥ ೭ ॥

ಆದುವರಿಂದ ಪದ್ಮದಳಗಳ ಹೊರಗೆ ದ್ವಾರಾದಿಗಳಲ್ಲಿ ಆವಾಹನ, ಸ್ನಾನ, ಪುಷ್ಪಗಳು ಇವೆಲ್ಲವನ್ನೂ ಅರ್ಪಿಸಬೇಕು. ವಸ್ತ್ರಾರ್ಥವಾಗಿ ಪುಷ್ಪವನ್ನು ಉಪಯೋಗಿಸಿದರೆ, ಅದನ್ನು ಮಾತ್ರ ಪದ್ಮದ ಹೊರಗೆ ಸಮರ್ಪಿಸದೆ ಒಳಗಡೆಯೇ ಸಮರ್ಪಿಸಬೇಕು.

೪. ಹೀಗೆಯೇ ಪದ್ಮದ ಹೊರಭಾಗದಲ್ಲಿ ಅರ್ಘ್ಯ, ಪಾದ್ಯ, ಆಚಮನ, ಸ್ನಾನ, ನೇತ್ರಾಂಜನ, ಮಧುಪರ್ಕ, ಗಂಧ, ಪದ್ಮಪುಷ್ಪ ಇವುಗಳನ್ನು ದೇವಿಗೆ ಅರ್ಪಿಸಬೇಕು.

೫. ಶರೀರಕ್ಕೆ ಸಮರ್ಪಿಸಬಹುದಾದ ಗಂಧಾದ್ಯುಪಚಾರಗಳನ್ನು ದೇವಿಯ ಪ್ರತಿಮೆಗೆ, ದೇಹಕ್ಕೆ ಉಗಯೋಗಿಸುವಂತೆಯೇ ಸಮರ್ಪಿಸಬೇಕು. ಎಂದರೆ ವಸ್ತ್ರ, ಸ್ನಾನ, ಗಂಧ, ಆಭರಣ, ಪುಷ್ಪ, ಧೂಪ, ಮೊದಲಾದ ಉಪಚಾರಗಳನ್ನು ಪ್ರತಿಮೆಯ, ಆಯಾ ಅಂಗಾದಿಗಳಿಗೆ ಸಮರ್ಪಿಸಬೇಕು. ಆದರೆ ಅಯೋಗ್ಯವಾದ ಪದಾರ್ಥಗಳು ಎಂದರೆ ಮದ್ಯಮಾಂಸಾದಿಗಳು, ರಕ್ತ, ನೈವೇದ್ಯ ಮೊದಲಾದುದನ್ನು ಅರ್ಪಿಸುವಾಗ ಅವುಗಳನ್ನು ದೇವಿಯ ಮುಂದುಗಡೆ ಇಟ್ಟು ನಿವೇದಿಸಬೇಕು.

೬. ಪುಷ್ಪರಸವನ್ನು ನಿವೇದಿಸಬೇಕಾಗಿದ್ದರೆ ಅದನ್ನು ಪದ್ಮದಲ್ಲಿ ನಿವೇದಿಸ ಬೇಕು. ಹೆಚ್ಚಾಗಿದ್ದರೆ, ಅದನ್ನು ದ್ವಾರದಲ್ಲಿಯೇ ಅರ್ಪಿಸಬೇಕು.

೭. ಎಲೈ ಭೈರವನೇ! ದರ್ಭೆ ಮತ್ತು ದಾರಗಳಿಂದ ಹೂವುಗಳನ್ನು ಪೋಣಿಸಿ ಮಾಡಿರುವ ಪುಷ್ಪಾಸನವು ದೇವಿಗೂ, ನನಗೂ, ಮಿಕ್ಕದೇವತೆಗಳಿಗೂ, ತುಂಬಾ ಇಷ್ಟ ವಾದುದು.

ಅತಿಪ್ರೀತಿಕರಂ ದೇವ್ಯಾ ಮುನೀಪ್ಯನ್ಯಸ್ಯ ಭೈರವ ।
ಯಜ್ಞಕಾಷ್ಠಸಮುದ್ಭೂತಮಾಸನಂ ಮುನಿಣಂ ಶುಭಂ ॥ ೮ ॥

ನೋಚ್ಚ್ರಾಯಂ ನಾತಿನಿಸ್ತೀರ್ಣಮಾಸನಂ ವಿನಿಯೋಜಯೇತ್ ।
ಅನ್ಯದ್ದಾರುಭವಂ ಚಾಪಿ ದದ್ಯಾದಾಸನಮುತ್ತಮಂ ॥ ೯ ॥

ಸಕಂಟಕಂ ಕ್ಷೀರಯುತಂ ದಾರುಸಾರವಿವರ್ಜಿತಂ ।
ಚೈತ್ಯಶ್ಮಶಾನಸಂಭೂತಂ ವರ್ಜಯಿತ್ವಾ ವಿಭೀತಕಂ ॥ ೧೦ ॥

ವಲ್ಕಲಂ ಕೋಷಜಂ ಫಾಲಂ ವಸ್ತ್ರಮೇತತ್ತ್ರಯಂ ಮತಂ ।
ರೋಮಜಂ ಕಂಬಲಂ ಚೈತದನೇನ ತು ಚತುಷ್ಟಯಂ ॥ ೧೧ ॥

ಅನೇನ ರಚಿತಂ ದದ್ಯಾದಾಸನಂ ಚೇಷ್ಟಭೂತಯೇ ।
ವಸ್ತ್ರೇಷು ಕಂಬಲಂ ಶಸ್ತಮಾಸನಂ ದೇವತುಷ್ಟಯೇ ॥ ೧೨ ॥

---

೮. ಯಜ್ಞವೃಕ್ಷದಿಂದ ನಿರ್ಮಿಸಿದ ನಯವಾದ ಆಸನವು ಉತ್ತಮವಾದುದು. ಅದು ಹೆಚ್ಚು ಎತ್ತರವೂ, ಹೆಚ್ಚು ಅಗಲವೂ ಆಗಿರಬಾರದು.

೯-೧೦. ಮಿಕ್ಕ ಉತ್ತಮ ಮರಗಳ ಆಸನವನ್ನೂ ಅರ್ಪಿಸಬಹುದು, ಆದರೆ ಮುಳ್ಳಿರುವಮರ, ಹಾಲುಮರ, ನಿಸ್ಸಾರವಾದುದೂ, ಕೊಂಬೆಯಿಲ್ಲದುದೂ ಆದ ಮುಂಡುಮರ, ಸಮಾಧಿ, ಶ್ಮಶಾನ ಇವುಗಳಲ್ಲಿ ಬೆಳೆದಿರುವಮರ, ತಾಳೀಮರ, ಇವುಗಳನ್ನು ಬಿಟ್ಟು, ಮಿಕ್ಕ ಮರಗಳ ಆಸನವು ಉತ್ತಮವು.

೧೧. ನಾರುಬಟ್ಟೆ, ರೇಷ್ಮೆಬಟ್ಟೆ, ಹತ್ತಿಬಟ್ಟೆ, ರೋಮದಿಂದಾದ ಕಂಬಳಿ, ಈ ನಾಲ್ಕು ಬಗೆಯ ವಸ್ತ್ರಗಳು ದೇವಿಗೆ ಪ್ರಿಯವಾಮುವುಗಳು.

೧೨. ನಾರು, ರೇಷ್ಮೆ, ಹತ್ತಿ, ರೋಮ, ಇವುಗಳಿಂದ ನಿರ್ಮಿಸಿದ ಆಸನವೂ ದೇವತೆಗಳಿಗೆ ಪ್ರಿಯವಾದುದು. ವಸ್ತ್ರಗಳಲ್ಲಿ ಕಂಬಳಿಯು ದೇವರಿಗೆ ಪ್ರೀತಿಯನ್ನುಂಟು ಮಾಡುವುದರಿಂದ ಉತ್ತಮವಾದುದು.

ರಾಂಕವಂ ಚಾರ್ಮಣಂ ಶ್ರೇಷ್ಠಂ ದಾರವಂ ಚಂದನೋದ್ಭವಂ ।
ಯಚ್ಚಾಸನಂ ಕುಶಮಯಂ ತದಾಸನಮನುತ್ತಮಂ ॥ ೧೩ ॥

ಸರ್ವೇಷಾಮಪಿ ದೇವಾನಾಮೃಷೀಣಾಂ ಚ ಯತಾತ್ಮನಾಂ ।
ಯೋಗಪೀಠಸ್ಯ ಸದೃಶಮಾಸನಂ ಸ್ಥಾನಮುಚ್ಯತೇ ॥ ೧೪ ॥

ಆಸನಸ್ಯ ಪ್ರದಾನೇನ ಸೌಭಾಗ್ಯಂ ಮುಕ್ತಿಮಾಪ್ನುಯಾತ್ ।
ಶಂಬರೋ ರೋಹಿತೋ ರಾಮೋ ನ್ಯಂಕುರಂ ಕುಶಶೋ ರುರುಃ ॥ ೧೫ ॥

ಏಣಶ್ಚ ಹರಿಣಶ್ಚೇತಿ ಮೃಗಾ ನವವಿಧಾ ಮತಾಃ ।
ಹರಿಣಶ್ಚಾಪಿ ವಿಜ್ಞೇಯೋ ಯಶ್ಚ ಭೇದೋಽತ್ರ ಭೈರವ ॥ ೧೬ ॥

ಋಷ್ಯಃ ಖಡ್ಗೋ ರುರುಶ್ಚೈವ ಪೃಷತಶ್ಚ ಮೃಗಸ್ತಥಾ ।
ಏತೇ ಬಲಿಪ್ರದಾನೇಷು ಚರ್ಮದಾನೇಷು ಕೀರ್ತಿತಾಃ ॥ ೧೭ ॥

---

೧೩. ಚರ್ಮದ ಆಸನಗಳಲ್ಲಿ, ಹರಿಣದ ಚರ್ಮದ ಆಸನ (ಕೃಷ್ಣಾಜಿನ) ವು ಉತ್ತಮವಾದುದು. ಮರದ ಆಸನಗಳಲ್ಲಿ, ಚಂದನದ ಎಂದರೆ ಗಂಧದ ಮರದ ಆಸನವು ಉತ್ತಮವು. ದರ್ಭಾಸನವೂ ಸಹ ಶ್ರೇಷ್ಠವಾದುದು.

೧೪. ಎಲ್ಲಾ ದೇವತೆಗಳು, ಜಿತೇಂದ್ರಿಯರಾದ ಋಷಿಗಳು, ಇವರಿಗೆ ಸಮರ್ಪಿಸುವ ಆಸನವು, ಯೋಗಪೀಠಕ್ಕೆ ಸಮಾನವಾದ ಸ್ಥಾನವೆಂದು ಹೇಳಲ್ಪಡುವುದು.

೧೫. ಶಂಬರ, ರೋಹಿತ, ರಾಮ, ನ್ಯಂಕುರ, ಕುಶಶ, ರುರು, ಏಣ, ಹರಿಣ ಎಂದು ಮೃಗ (ಜಿಂಕೆ) ಗಳು ಒಂಭತ್ತು ವಿಧವಾಗಿರುವುವು.

೧೬-೧೭. ಎಲೈ ಭೈರವನೇ, ಆ ಹರಿಣದಲ್ಲಿಯೂ, ಋಷ್ಯ, ಖಡ್ಗ, ರುರು, ಪೃಷತ, ಮೃಗ ಎಂದು ಐದು ಭೇದಗಳಿರುವುವು. ಒಲಿಪ್ರದಾನಗಳಲ್ಲಿ ಈ ಮೃಗಗಳು ಶ್ರೇಷ್ಠವಾದವುಗಳು ಮತ್ತು ಇವುಗಳಚರ್ಮವು, ದೇವಿಗೆ ಅರ್ಪಿಸುವ ಆಸನಗಳಲ್ಲಿಯೂ ಉತ್ತಮವೆಂದು ಹೇಳಲ್ಪಟ್ಟಿರುವುದು. ಚರ್ಮಾಸನಗಳಲ್ಲೆಲ್ಲಾ ಈ ಮೃಗಗಳ ಚರ್ಮವು ಅತ್ಯಂತ ಶ್ರೇಷ್ಠವಾದ ಆಸನವೆಂದು ಪರಿಗಣಿಸಲ್ಪಟ್ಟಿದೆ.

ಸರ್ವೇಷಾಂ ತೈಜಸಾನಾಂ ಚ ಆಸನಂ ಶ್ರೇಷ್ಠಮುಚ್ಯತೇ ।
ಆಯಸಂ ವರ್ಜಯಿತ್ವಾ ತು ಕಾಂಸ್ಯಸೀಸಕಮೇವ ವಾ ॥ ೧೮ ॥

ಶಿಲಾಮಯಂ ಮಣಿಮಯಂ ತಥಾ ರತ್ನಮಯಂ ಮತಂ ।
ಆಸನಂ ದೇವತಾಭ್ಯಸ್ತು ಭುಕ್ತ್ಯೈ ಮುಕ್ತ್ಯೈ ಸಮುತ್ಸೃಜೇತ್ ॥ ೧೯ ॥

ಅತ್ರೈವ ಸಾಧಕಾನಾಂ ಚ ಆಸನಂ ಶೃಣು ಭೈರವ ।
ಯತ್ರಾಸೀನಃ ಪೂಜಯಂಸ್ತು ಸರ್ವಸಿದ್ಧಿಮವಾಪ್ನುಯಾತ್ ॥ ೨೦ ॥

ಐಂಧಸಂ ಚಾರ್ಮಣಂ ವಾಸ್ತ್ರಂ ತೈಜಸಂ ಚ ಚತುಷ್ಟಯಂ ।
ಆಸನಂ ಸಾಧಕಾನಾಂ ಚ ಸತತಂ ಪರಿಕೀರ್ತಿತಂ ॥ ೨೧ ॥

ತತ್ಸರ್ವಮಾಸನಂ ಶಸ್ತಂ ಪೂಜಾಕರ್ಮಣಿ ಸಾಧಕೇ ।
ನ ಯಥೇಷ್ಟಾಸನೋ ಭೂಯಾತ್ಪೂಜಾಕರ್ಮಣಿ ಸಾಧಕಃ ॥ ೨೨ ॥

ಕಾಷ್ಠಾದಿಕಾಸನಂ ಕುರ್ಯಾತ್ಸ್ಥಿತಮೇವ ಸದಾ ಬುಧಃ ।
ಚತುರ್ವಿಂಶತ್ಯಂಗುಲೇನ ದೀರ್ಘಂ ಕಾಷ್ಠಾಸನಂ ಮತಂ ॥ ೨೩ ॥

೧೮-೧೯. ಕಬ್ಬಿಣ, ಕಂಚು, ಸೀಸ ಇವುಗಳ ಆಸನವನ್ನು ಅರ್ಪಿಸಬಾರದು. ಶಿಲಾಮಯವೂ, ಮಣಿಮಯವೂ, ರತ್ನಮಯವೂ ಆದಂತಹ ಆಸನವನ್ನು ಅರ್ಪಿಸಬೇಕು. ಇವು ಭೋಗ ಮುಕ್ತಿ ಇವುಗಳನ್ನು ಕೊಡುವವು.

೨೦. ಎಲೈ ಭೈರವ! ಈ ಸಂದರ್ಭದಲ್ಲಿಯೇ ಸಾಧಕನು ಯಾವ ಆಸನದಲ್ಲಿ ಕುಳಿತು ಪೂಜಿಸಿದರೆ ಸಕಲ ಇಷ್ಟಾರ್ಥಸಿದ್ಧಿಯು ಆಗುವುದೋ, ಅಂತಹ ಆಸನವನ್ನು ಹೇಳುವೆನು ಕೇಳು.

೨೧. ಮರದ ಆಸನ, ಚರ್ಮದ ಆಸನ, ಬಟ್ಟೆಯ ಆಸನ, ತೈಜಸ್ಸಿನ ಆಸನ, ಇವುಗಳು ಸಾಧಕರಿಗೆ ಉತ್ತಮವಾದ ಆಸನಗಳು.

೨೨. ಮೇಲೆ ಹೇಳಿದ ಈ ಎಲ್ಲಾ ಆಸನಗಳೂ ಸಾಧಕನಿಗೆ ಪೂಜೆಯಲ್ಲಿ ಶ್ರೇಷ್ಠವಾದವುಗಳು. ಆದಕಾರಣ ಸಾಧಕನು ಪೂಜೆಗೆ ತನ್ನಿಚ್ಛೆಯಂತೆ ಯಾವುದಾದರೊಂದು ಆಸನದಲ್ಲಿ ಕುಳಿತು ಪೂಜೆಮಾಡಬೇಕು.

೨೩-೨೫. ಪವಿತ್ರವಾದ ಮರದ ಆಸನವನ್ನೇ ಸಾಧಕನು ಹೆಚ್ಚಾಗಿ ಉಪಯೋಗಿಸಬೇಕು. ಆ ಆಸನವು ಇಪ್ಪತ್ತನಾಲ್ಕು ಅಂಗುಲ ವಿಸ್ತಾರವಾಗಿರಬೇಕು.

ಷೋಡಶಾಂಗುಲವಿಸ್ತೀರ್ಣಮುಚ್ಛ್ರಾಯಂ ಚತುರಂಗುಲಂ ।
ಷಡಂಗುಲಂ ವಾ ಕುರ್ಯಾತ್ತು ನೋಚ್ಛ್ರಿತಂ ಚಾತ ಆಚರೇತ್ ॥ ೨೪ ॥

ಪೂರ್ವೋಕ್ತಂ ವರ್ಜಯೇದ್ವ್ಯಜ್ಯಮಾಸನಂ ಪೂಜನೇಷ್ವಪಿ ।
ವಸ್ತ್ರಂ ದ್ವಿಹಸ್ತಾನ್ನೋ ದೀರ್ಘಂ ಸಾರ್ಧಹಸ್ತಾನ್ನ ವಿಸ್ತೃತಂ ॥ ೨೫ ॥

ನ ತ್ರ್ಯಂಗುಲಾತ್ಕಥೋಚ್ಛ್ರಾಯಂ ಪೂಜಾಕರ್ಮಣಿ ಸಂಶ್ರಯೇತ್ ।
ಯಥೇಷ್ಟಂ ಚಾರ್ಮಣಂ ಕುರ್ಯಾತ್ಪೂರ್ವೋಕ್ತಂ ಸಿದ್ಧಿದಾಯಕಂ ॥

ಷಡಂಗುಲಾಧಿಕಂ ಕುರ್ಯಾನ್ನೋಚ್ಛ್ರಿತಂ ಚ ಕದಾಚನ ।
ಕಂಬಲಂ ಚಾರ್ಮಣಂ ಶೈಲಂ ಮಹಾಮಾಯಾಪ್ರಪೂಜನೇ ॥ ೨೭ ॥

ಪ್ರಶಸ್ತಮಾಸನಂ ಪ್ರೋಕ್ತಂ ಕಾಮಾಖ್ಯಾಯಾಸ್ತಥೈವ ಚ ।
ತ್ರಿಪುರಾಯಾಶ್ಚ ಸತತಂ ವಿಷ್ಣೋಶ್ಚಾಪಿ ಕುಶಾಸನಂ ॥ ೨೮ ॥

ಅಥವಾ ಹದಿನಾರು ಅಂಗುಲ ವಿಸ್ತಾರವಾಗಿಯೂ, ನಾಲ್ಕು ಅಂಗುಲ ಎತ್ತರವಾಗಿಯೂ ಇರಬೇಕು. ಅಥವಾ ಆರಂಗುಲ ಎತ್ತರವಾಗಿರಬಹುದು. ಇದಕ್ಕಿಂತಲೂ ಎತ್ತರವಾಗಿರ ಕೂಡದು. ಹಿಂದೆ ನಿಷೇಧ ಮಾಡಿರುವ ಆಸನಗಳನ್ನು ಪೂಜೆಗಳಲ್ಲಿ ತ್ಯಜಿಸಬೇಕು.

೨೬. ವಸ್ತ್ರಾಸನವಿಚಾರದಲ್ಲಿ, ವಸ್ತ್ರವು ಎರಡು ಮೊಳಕ್ಕಿಂತ ಉದ್ದವಾಗಿಯೂ ಒಂದೂವರೆ ಮೊಳಕ್ಕಿಂತ ಅಗಲವಾಗಿಯೂ, ಮೂರು ಅಂಗುಲಕ್ಕಿಂತ ಎತ್ತರವಾಗಿಯೂ ಇರಬಾರದು. ಹಿಂದೆ ಹೇಳಿದ ಚರ್ಮಾಸನದ ವಿಚಾರದಲ್ಲಿ , ಕೃಷ್ಣಾಜಿನಾದಿಗಳು ತನ್ನ ಇಷ್ಟಬಂದ ಪ್ರಮಾಣದಲ್ಲಿ ಇರಬಹುದು.

೨೭. ದೇವಿಗೆ ಆಸನಾರ್ಥವಾಗಿ ಅರ್ಪಿಸುವ ಕಂಬಳಿ, ಚರ್ಮ, ವಸ್ತ್ರ, ಇವು ಗಳು ಆರಂಗುಲಕ್ಕಿಂತಲೂ ದೊಡ್ಡದಾಗಿರಬಾರದು. ಇಂತಹದನ್ನು ಪೂಜೆಯಲ್ಲಿ ಮಹಾಮಾಯೆಗೆ ಅರ್ಪಿಸಬೇಕು.

೨೮. ಕಾಮಾಖ್ಯಾದೇವಿ, ತ್ರಿಪುರಾ, ವಿಷ್ಣು ಇವರಿಗೆ ಸದಾ ದರ್ಭಾಸನವು ಶ್ರೇಷ್ಠವಾದುದು.

ಬಹುಧೀರ್ಘಂ ಬಹೂಚ್ಛ್ರಾಯಂ ತಥೈವ ಬಹುವಿಸ್ತೃತಂ ।
ದಾರುಭೂಮಿಸಮಂ ಪ್ರೋಕ್ತಮುಶ್ಮಾಪಿ ಸರ್ವಕರ್ಮಣಿ ॥ ೨೯ ॥

ಪೃಥಕ್ಪೃಥಕ್ಕಲ್ಪಯೇತ್ತು ಬಹಿರ್ದ್ವಾರಿ ತಥಾಸನಂ ।
ನ ಪತ್ರಮಾಸನಂ ಕುರ್ಯಾತ್ಕದಾಚಿದಪಿ ಪೂಜನೇ ॥ ೩೦ ॥

ನ ಪ್ರಾಣ್ಯಂಗಸಮುದ್ಭೂತಮುಷ್ಟಿಜಂ ದ್ವಿರದಾದೃತೆ ।
ಮಾತಂಗದಂತಸಂಜಾತಂ ಕಾಮ್ಯಕೇಷ್ವಾಸನಂ ಚರೇತ್ ॥ ೩೧ ॥

ಚಾರ್ಮಂ ಪೂರ್ವೋದಿತಂ ಗೃಹ್ಯಂ ತಥಾ ಗಂಧಮೃಗಸ್ಯ ಚ ।
ಸಲಿಲೇ ಯದಿ ಕುರ್ವೀತ ದೇವತಾನಾಂ ಪ್ರಪೂಜನಂ ॥ ೩೨ ॥

ತತ್ರಾಪ್ಯಾಸನ ಆಸೀನೋ ನೋತ್ಥಿತಸ್ತು ಕದಾಚನ ।
ತೋಯೇ ಶಿಲಾಮಯಂ ಕುರ್ಯಾದಾಸನಂ ಕೌಶಮೇವ ವಾ ॥ ೩೩ ॥

---

೨೯. ತುಂಬಾ ದೀರ್ಘವಾದುದೂ, ಉನ್ನತ(ಎತ್ತರ)ವಾದುದೂ, ವಿಸ್ತಾರವಾದುದೂ, ಆದ ಶಿಲಾಸನವೂ ಸಹ ಮರದ ಆಸನದಂತೆ ಸರ್ವಕರ್ಮಗಳಲ್ಲಿಯೂ ಉತ್ತಮವಾದುದು.

೩೦. ದ್ವಾರದ ಹೊರಪ್ರದೇಶದಲ್ಲಿ ದೇವತೆಗಳಿಗೆ ಬೇರೆ ಬೇರೆಯಾಗಿ ಆಸನಗಳನ್ನು ಕಲ್ಪಿಸಬೇಕು. ಆದರೆ ಪತ್ರೆ ಎಲೆಗಳನ್ನು ಪೂಜೆಯಲ್ಲಿ ಆಸನವನ್ನಾಗಿ ಉಪಯೋಗಿಸಕೂಡದು.

೩೧. ಆನೆಯ ಹೊರತು ಮಿಕ್ಕ ಪ್ರಾಣಿಗಳ ಎಲುಬಿನಿಂದ ನಿರ್ಮಿಸಿದ ಆಸನವನ್ನು ಉಪಯೋಗಿಸಬಾರದು. ಆದರೆ ಆನೆಯದಂತದಿಂದ ಮಾಡಿದ ಆಸನವನ್ನು ಕಾಮ್ಯಕರ್ಮಗಳಲ್ಲಿ ಉಪಯೋಗಿಸಬಹುದು.

೩೨. ಹಿಂದೆಹೇಳಿದ ಚರ್ಮದ ಆಸನ (ಕೃಷ್ಣಾಸನ)ವನ್ನೂ ಮತ್ತು ಕಸ್ತೂರಿ ಮೃಗಚರ್ಮದ ಆಸನವನ್ನೂ ಉಪಯೋಗಿಸಬಹುದು. ಜಲದಲ್ಲಿ ದೇವತೆಗಳನ್ನು ಪೂಜಿಸುವಾಗಲೂ ಆಸನದಲ್ಲಿ ಕುಳಿತೇ ಸಾಧಕನು ಪೂಜಿಸಬೇಕು. ನಿಂತುಕೊಂಡು ಪೂಜಿಸಬಾರದು.

೩೩. ಜಲದಲ್ಲಿ ಪೂಜಿಸುವಾಗ ಶಿಲಾಮಯವಾದ ಆಸನ ಅಥವ ದರ್ಭಾಸನ, ಮರದ ಆಸನ, ತೈಜಸ ಆಸನ, ಇವುಗಳನ್ನು ಉಪಯೋಗಿಸಬೇಕು. ಇನ್ನಾವ ಆಸನಗಳನ್ನೂ ಉಪಯೋಗಿಸಬಾರದು.

ಪಾರವಂ ತೈಜಸಂ ವಾಪಿ ನಾನ್ಯದಾಸನಮಾಚರೇತ್ ।
ಆಸನಾರೋಪಸಂಸ್ಥಾನಂ ಸ್ಥಾನಾಭಾವೇ ತು ಪೂಜಕಃ ॥ ೩೪ ॥

ಆಸನಂ ಕಲ್ಪಯಿತ್ವಾ ತು ಮನಸಾ ಪೂಜಯೇಜ್ಜಲೆ ।
ಯದ್ಯಾಸಿತುಂ ನ ಸಂಸ್ಥಾನಂ ವಿದ್ಯತೇ ತೋಯಮಧ್ಯತಃ ॥ ೩೫ ॥

ಅನ್ಯತ್ರ ವಾ ತದಾ ಸ್ಥಿತ್ವಾ ದೇವಪೂಜಾಂ ಸಮಾಚರೇತ್ ।
ಇತ್ಯೇತತ್ಕಥಿತಂ ಪುತ್ರ ಪೂಜ್ಯಪೂಜಕಸಂಗತಂ ॥ ೩೬ ॥

ಆಸನಂ ಪಾದ್ಯಮಧುನಾ ಶೃಣು ವೇತಾಲ ಭೈರವ ।
ಪಾದ್ಯಾರ್ಥಮುದಕಂ ಪಾದ್ಯಂ ಕೇವಲಂ ತೋಯಮೇವ ತತ್ ॥ ೩೭ ॥

ತತ್ತೈಜಸೇನ ಪಾತ್ರೇಣ ಶಂಖೇನಾಪಿ ಪ್ರದಾಪಯೇತ್ ।
ಧರ್ಮಾರ್ಥಕಾಮಮೋಕ್ಷಾಣಾಂ ಸಂಸ್ಥಾನಂ ಪಾದ್ಯಮಿಷ್ಯತೇ ॥ ೩೮ ॥

---

೩೪. ಜಲಪೂಜೆಯಲ್ಲಿ ಆಸನವನ್ನು ಕಲ್ಪಿಸಲು ಸ್ಥಾನವಿಲ್ಲದಿದ್ದರೆ, ಮನಸ್ಸಿನಿಂದಲೇ ಆಸನವನ್ನು ಕಲ್ಪಿಸಿಕೊಂಡು ಪೂಜಿಸಬೇಕು.

೩೫. ಅಥವಾ ಜಲಮಧ್ಯದಲ್ಲಿ ಕುಳಿತುಕೊಳ್ಳಲು ಸ್ಥಾನವು ಇಲ್ಲದಿದ್ದರೆ, ಆಗ ಬೇರೆಸ್ಥಳದಲ್ಲಿ ನಿಂತುಕೊಂಡು ದೇವಪೂಜೆಯನ್ನು ಮಾಡಬಹುದು.

೩೬. ಎಲೈ ಪುತ್ರರಾದ ವೇತಾಲ ಭೈರವರೇ, ದೇವಿಗೆ ಅರ್ಪಿಸಬೇಕಾದ ಆಸನಗಳ ವಿವರ, ಮತ್ತು ಸಾಧಕನು ತಾನು ಉಪಯೋಗಿಸಬೇಕಾದ ಆಸನಗಳ ವಿವರಣೆ ಇವುಗಳನ್ನು ಹೇಳಿರುವೆನು. ಈಗ ಪಾದ್ಯಕ್ರಮವನ್ನು ಹೇಳುವೆನು, ಕೇಳಿ.

೩೭-೩೮. ಕಾಲುತೊಳೆಯುವುದಕ್ಕಾಗಿ ಕೊಡುವ ಜಲಕ್ಕೆ ಪಾದ್ಯವೆಂದು ಪೆಸರು. ಅದಕ್ಕಾಗಿ ಕೇವಲಜಲವನ್ನು ಮಾತ್ರ ಉಪಯೋಗಿಸಬೇಕು. ಆಪಾದ್ಯವನ್ನು ತೈಜಸ (ಚಿನ್ನ, ಬೆಳ್ಳಿ, ಕಂಚಿನ) ಪಾತ್ರೆಯಿಂದಲೂ, ಶಂಖದಿಂದಲೂ, ದೇವಿಗೆ ಅರ್ಪಿಸಬೇಕು. ಈ ಪಾದ್ಯವು ಧರ್ಮ, ಅರ್ಥ, ಕಾಮ, ಮೋಕ್ಷ ಇವುಗಳಿಗೆ ಸಾಧಕವು. ಈ ಪಾದ್ಯವನ್ನು ಎಲ್ಲೆಡೆಯಲ್ಲಿಯೂ ಆಸನವನ್ನು ಕೊಟ್ಟಮೇಲೆ ಮೂಲಮಂತ್ರದಿಂದ ಅರ್ಪಿಸಬೇಕು.

ತದಾಸನೋತ್ತರಂ ದದ್ಯಾನ್ಮೂಲಪುಂಶ್ಚೀಣ ಸರ್ಪತಃ ।
ಕುಶಪುಷ್ಪಾಕ್ಷತೈಶ್ಚೈವ ಸಿದ್ಧಾರ್ಥೈಶ್ಚಂದನೈಸ್ತಥಾ ॥ ೩೯ ॥

ತೋಯೈರ್ಗಂಧೈರ್ಯಥಾಲಬ್ಧೈರರ್ಘ್ಯಂ ದದ್ಯಾತ್ತು ಸಿದ್ಧಯೇ ।
ಅರ್ಘ್ಯೇಣ ಲಭತೇ ಕಾಮಾನರ್ಘ್ಯೇಣ ಲಭತೇ ಧನಂ ॥ ೪೦ ॥

ಪುತ್ರಾಯುಃಸುಖಮೋಕ್ಷಾಣಿ ದಾನಾದರ್ಘ್ಯಸ್ಯ ವೈ ಲಭೇತ್ ।
ನ ದದ್ಯಾದ್ಭಾಸ್ಕರಾಯಾರ್ಘ್ಯಂ ಶಂಖತೋಯೈರ್ವಿಚಕ್ಷಣಃ ॥ ೪೧ ॥

ತಥಾ ನಾಶುಕ್ತಿಪಾತ್ರೇಣ ವಿಷ್ಣವೇಽರ್ಘ್ಯಂ ನಿವೇದಯೇತ್ ।
ದದ್ಯಾದಾಚಮನೀಯಂ ತು ಸುಗಂಧಿಸಲಿಲೈಃ ಶುಭೈಃ ॥ ೪೨ ॥

ಕರ್ಪೂರವಾಸಿತೈರ್ವಾಪಿ ಕೃಷ್ಣಾಗರುವಿಧೂಪಿತೈಃ ।
ಯಥಾ ತಥಾ ಸುಗಂಧೈರ್ವಾ ಪ್ರಸನ್ನೈಃ ಫೇನವರ್ಜಿತೈಃ ॥ ೪೩ ॥

ತತ್ತೈಜಸೇನ ಪಾತ್ರೇಣ ಶಂಖೇನಾಪಿ ಪ್ರದಾಪಯೇತ್ ।
ಉದಕಂ ದೀಯತೇ ಯತ್ತು ಪ್ರಸನ್ನಂ ಫೇನವರ್ಜಿತಂ ॥ ೪೪ ॥

೩೯-೪೧. ಧರ್ಭೆ, ಪುಷ್ಪ, ಅಕ್ಷತೆ, ಬಿಳಿಸಾಸುವೆ, ಚಂದನ, ಜಲ, ಗಂಧ, ಇವುಗಳಲ್ಲಿ ಯಾವುವು ಸಿಕ್ಕುವುವೊ, ಅವುಗಳಿಂದ ಸಹಿತವಾಗಿ ಅರ್ಘ್ಯವನ್ನು ದೇವಿಗೆ ಅರ್ಪಿಸಬೇಕು. ಸಾಧಕನು ಅರ್ಘ್ಯದಿಂದ ಇಷ್ಟಾರ್ಥವನ್ನೂ, ಧನವನ್ನೂ, ಪಡೆಯುವನು. ಅರ್ಘ್ಯವನ್ನು ಕೊಟ್ಟರೆ, ಪುತ್ರರು, ಆಯಸ್ಸು, ಸುಖ, ಮೋಕ್ಷ, ಇವುಗಳೂ ಲಭಿಸುವುವು. ಶಂಖದಿಂದ ಸೂರ್ಯನಿಗೆ ಅರ್ಘ್ಯವನ್ನು ಕೊಡಬಾರದು. ಹಾಗೆಯೇ ಶಂಖವಿಲ್ಲದೆ ಬರೀಪಾತ್ರೆಯಿಂದ ವಿಷ್ಣುವಿಗೆ ಅರ್ಘ್ಯವನ್ನು ಕೊಡಕೂಡದು.

೪೨-೪೬. ದೇವತೆಗಳಿಗೆ ಅರ್ಪಿಸುವ, ನೊರೆಯಿಲ್ಲದ ನಿರ್ಮಲವಾದ ಜಲಕ್ಕೆ ಆಚಮನವೆಂದು ಹೆಸರು. ಕರ್ಪೂರ, ಕೃಷ್ಣಾಗರು ಮೊದಲಾದ ಸುಗಂಧದ್ರವ್ಯಗಳಿಂದ ಮಿಶ್ರಿತವಾಗಿ ಸುವಾಸನೆಯುಳ್ಳದೂ, ನೊರೆಯಿಲ್ಲದೆ ನಿರ್ಮಲವಾದುದೂ, ಆದ ಜಲದಿಂದ ಆಚಮನವನ್ನು ಕೊಡಬೇಕು. ಅಥವಾ ನಿರ್ಮಲವಾದ ಬರೀ ಜಲದಿಂದಲೇ ಆಚಮನವನ್ನು ಕೊಡಬಹುದು. ಇದನ್ನು ತೈಜಸಪಾತ್ರ ಎಂದರೆ ಚಿನ್ನ, ಬೆಳ್ಳಿ,

ಆಚಮನಾಯ ದೇವೇಭ್ಯಸ್ತದಾಚಮನಮುಚ್ಯತೇ ।
ಕೇವಲಂ ತೋಯಮಾತ್ರೇಣ ತಪ್ತಾ ದದ್ಯಾನ್ನ ಮಿಶ್ರಿತಂ ॥ ೪೫ ॥

ವಾಸಿತಂ ತು ಸುಗಂಧಾದ್ಯೈಃ ಕರ್ತವ್ಯಂ ಯದಿ ಲಭ್ಯತೇ ।
ಆಯುರ್ಬಲಂ ಯಶೋವೃದ್ಧಿಂ ಪ್ರದಾಯಾಚಮನೀಯಕಂ ॥ ೪೬ ॥

ಲಭತೇ ಸಾಧಕೋ ನಿತ್ಯಂ ಕಾಮಾಂಶ್ಚೈವ ಯಥೋತ್ಥಿತಾನ್ ।
ದಧಿ ಸರ್ಪಿರ್ಜಲಂ ಕ್ಷೌದ್ರಂ ಸಿತಾ ತಾಭಿಶ್ಚ ಪಂಚಭಿಃ ॥ ೪೭ ॥

ಪ್ರೋಚ್ಯತೇ ಮಧುಪರ್ಕಸ್ತು ಸರ್ವದೇವೌಘತುಷ್ಟಯೇ ।
ಜಲಂ ತು ಸರ್ವತಃ ಸ್ವಲ್ಪಂ ಸಿತಾದಧಿಘೃತಂ ಸಮಂ ॥ ೪೮ ॥

ಸರ್ವೇಭ್ಯಶ್ಚಾಧಿಕಂ ಕ್ಷೌದ್ರಂ ಮಧುಪರ್ಕೇ ಪ್ರಯೋಜಯೇತ್ ।
ತದ್ದದ್ಯಾತ್ಕಾಂಸ್ಯಪಾತ್ರೇಣ ರೌಕ್ಮೈಶ್ವೇತಮಯೇನ ವಾ ॥ ೪೯ ॥

ಜ್ಯೋತಿಷ್ಟೋಮಾಶ್ವಮೇಧಾದೌ ಪೂರ್ವೇ ಚೇಷ್ಟೇ ಚ ಪೂಜನೇ ।
ಮಧುಪರ್ಕಃ ಪ್ರದಿಷ್ಟೋಽಯಂ ಸರ್ವದೇವೌಘತುಷ್ಟಿದಃ ॥ ೫೦ ॥

ಶಂಖ ಈ ಪಾತ್ರೆಗಳಿಂದ ಕೊಡಬಹುದು. ಸುಗಂಧದ್ರವ್ಯಗಳು ಸಿಕ್ಕಿದರೆ ಅವುಗಳಿಂದ ಮಿಶ್ರಿತವಾದ ಜಲವನ್ನು ಕೊಡಬಹುದು. ಇಲ್ಲದಿದ್ದರೆ ಬರೀ ಜಲವನ್ನೇ ಕೊಡಬೇಕು. ಇತರಪದಾರ್ಥಗಳನ್ನು ಮಿಶ್ರಮಾಡಬಾರದು. ಈ ರೀತಿಯಾಗಿ ದೇವಿಗೆ ಆಚಮನವನ್ನು ಅರ್ಪಿಸಿದರೆ ಸಾಧಕನು, ಆಯಸ್ಸು, ಬಲ, ಕೀರ್ತಿ, ವೃದ್ಧಿ, ಇಷ್ಟಾರ್ಥ, ಇವುಗಳನ್ನು ಯಾವಾಗಲೂ ಪಡೆಯುವನು.

೪೭-೫೧. ಮೊಸರು, ತುಪ್ಪ, ಜಲ, ಜೇನುತುಪ್ಪ, ಸಕ್ಕರೆ, ಈ ಐದುಪದಾರ್ಥಗಳಿಗೆ ಮಧುಪರ್ಕವೆಂದು ಹೆಸರು. ಅದನ್ನು ಕೊಟ್ಟರೆ ಸಕಲದೇವತೆಗಳೂ ಸಂತುಷ್ಟರಾಗುವರು. ಮಧುಪರ್ಕದಲ್ಲಿ ಜಲವನ್ನು ಎಲ್ಲಕ್ಕಿಂತಲೂ ಸ್ವಲ್ಪವೇ ಸೇರಿಸಬೇಕು. ಸಕ್ಕರೆ, ಮೊಸರು, ತುಪ್ಪ, ಇವುಗಳನ್ನು ಸಮವಾಗಿ ಸೇರಿಸಬೇಕು. ಜೇನುತುಪ್ಪವನ್ನು ಎಲ್ಲಕ್ಕಿಂತಲೂ ಜಾಸ್ತಿಯಾಗಿ ಹಾಕಬೇಕು. ಮಧುಪರ್ಕವನ್ನು ಕಂಚಿನಪಾತ್ರೆ ಅಥವಾ ಚಿನ್ನ, ಬೆಳ್ಳಿಯ ಪಾತ್ರೆಗಳು ಇವುಗಳಲ್ಲಿ ಕೊಡಬೇಕು. ಜ್ಯೋತಿಷ್ಟೋಮಯಾಗ, ಅಶ್ವಮೇಧ, ಮತ್ತು ಇಷ್ಟದೇವತಾಪೂಜೆ ಇವುಗಳಲ್ಲಿ ಈ ಮಧುಪರ್ಕವನ್ನು

ಧರ್ಮಾರ್ಥಕಾಮಮೋಕ್ಷಾಣಾಂ ಸಾಧಕಃ ಪರಿಕೀರ್ತಿತಃ ।
ಮಧುಪರ್ಕಃ ಸೌಖ್ಯಭೋಗ್ಯತುಷ್ಟಿಪುಷ್ಟಿಪ್ರದಾಯಕಃ ॥ ೫೧ ॥

ಪಿಷ್ಟಾತಕೋಽಥ ಕಸ್ತೂರೀ ರೋಚನಂ ಕುಂಕುಮಂ ತಥಾ ।
ಗುಡಃ ಕ್ಷೌದ್ರಂ ಪಂಚಗವ್ಯಂ ಸರ್ವೌಷಧಿಗಣಸ್ತಥಾ ॥ ೫೨ ॥

ಸಿತಾ ನಿರ್ದೋಜನಂ ತೈಲಂ ಸ್ನಿಗ್ಧಸ್ನೇಹೇನ ತತ್ತಿಲಾಃ ।
ಪ್ರಾಂತೇ ತೋಯಮಿತಿ ಪ್ರೋಕ್ತಂ ಸ್ನಾನೀಯಂ ಕಲ್ಪಕೋವಿದೈಃ ॥ ೫೩ ॥

ಸ್ವರ್ಣರತ್ನೋದಕಂ ಚೈವ ಕರ್ಪೂರಾದ್ಯಧಿವಾಸಿತಂ ।
ತೈಜಸೈಃ ಕಾಂಸ್ಯಪಾತ್ರೈರ್ವಾ ಶಂಖೈರ್ವಾ ತನ್ನಿವೇದಯೇತ್ ॥ ೫೪ ॥

ಮಂಡಲೇ ಕೇಸರೇ ದೇಯಮಾದಿತ್ಯಪ್ರತಿಮಾಸು ಚ ।
ಶಿವಲಿಂಗೇ ತಥಾ ಭೋಗೇ ಪೀಠೇ ದೇವತನೌ ತಥಾ ॥ ೫೫ ॥

ಸದ್ಯಃ ಸ್ನಿಗ್ಧೇ ಮೃಣ್ಮಯೇ ವಾ ಸರ್ಪಿಃಸಿಂದೂರಜೇಽಥವಾ ।
ಶ್ರೀಚಂದನಪ್ರತಿಷ್ಠೇ ವಾ ಲೇಪಯೇತ್ಪ್ರತಿಮಾತನೌ ॥ ೫೬ ॥

ಕೊಡಬೇಕು. ಇದರಿಂದ ಸಮಸ್ತದೇವತೆಗಳೂ ಸಂತುಷ್ಟರಾಗುವರು. ಮತ್ತು ಮಧುಪರ್ಕವು, ಸಾಧಕನಿಗೆ ಧರ್ಮ, ಅರ್ಥ, ಕಾಮ, ಮೋಕ್ಷ, ಸೌಖ್ಯ, ಭೋಗ, ಸಂತೋಷ ಪುಷ್ಟಿ, ಇವುಗಳನ್ನುಂಟುಮಾಡುವುದು.

೫೨-೫೪. ಪಿಷ್ಟಾತಕ ಎಂಬ ಪರಿಮಳದ್ರವ್ಯವಿಶೇಷ, ಕಸ್ತೂರಿ, ಗೋರೋಚನ, ಕುಂಕುಮ, ಬೆಲ್ಲ, ಜೇನುತುಪ್ಪ, ಪಂಚಗವ್ಯಗಳು ಸಕಲ ಔಷಧಿಗಳು, ಸಕ್ಕರೆ, ವಿಗ್ರಹಕ್ಕೆ ಲೇಪಿಸುವ ತಿಲದಿಂದಲೇ ತೆಗೆದ ಎಣ್ಣೆ, ಅಥವಾ ಇತರ ಒಳ್ಳೆಯದಾದ ಎಣ್ಣೆ ಇವುಗಳೂ, ಕಡೆಯಲ್ಲಿ ನಿರ್ಮಲವಾದ ಜಲವೂ ಸೇರಿ ಸ್ನಾನದ್ರವ್ಯಗಳೆಂದು ಪೂಜಾಕಲ್ಪವನ್ನು ಬಲ್ಲವರು ಹೇಳಿರುವರು. ಕರ್ಪೂರ ಮೊದಲಾದುವುಗಳಿಂದ ಸುವಾಸಿತವಾದ ಸುವರ್ಣೋದಕ ರತ್ನೋದಕಗಳನ್ನು ಚಿನ್ನ ಬೆಳ್ಳಿಯಪಾತ್ರೆಗಳು ಶಂಖ ಇವುಗಳಲ್ಲಿ ತುಂಬಿ, ಸ್ನಾನವನ್ನು ದೇವತೆಗೆ ಅರ್ಪಿಸಬೇಕು. ಮಂಡಲ, ಕೇಸರ, ಆದಿತ್ಯ ವಿಗ್ರಹ, ಶಿವಲಿಂಗ, ದೊಡ್ಡಪೀಠ, ದೇವತಾವಿಗ್ರಹ ಸಯವಾದ ಮಣ್ಣಿನವಿಗ್ರಹ ತುಪ್ಪ ಕುಂಕುಮಗಳಿಂದ ನಿರ್ಮಿಸಿದ ದೇವವಿಗ್ರಹ ಚಂದನದಿಂದ ನಿರ್ಮಿಸಿದ ವಿಗ್ರಹ

ಅಂಶಿಕೇಸ್ಥಾಪಿತೇ ಖಡ್ಗೇ ಸ್ನಾಪಯೇದ್ಪರ್ಣತೋಽಥವಾ ।
ಏವಂ ದದ್ಯಾತ್ತು ಸ್ನಾನೀಯಂ ಮಹಾದೇವ್ಯೈ ವಿಶೇಷತಃ ॥ ೫೭ ॥

ರವಿವಿಷ್ಣುಶಿವೇಭ್ಯೋ ವಾ ಯತ್ರ ತತ್ರ ಪ್ರಪೂಜನೇ ।
ಪೂಜಕಃ ಸ್ನಾನದಾನಾತ್ತು ಚಿರಾಯುರುಪಜಾಯತೇ ॥ ೫೮ ॥

ಸಮ್ಯಕ್ಸ್ನಾನಪ್ರದಾನಾತ್ತು ಕಲ್ಪಾಂತಂ ಸ್ವರ್ಗಭಾಗ್ಭವೇತ್ ।
ಯದೇವ ದೀಯತೇ ಪಾದ್ಯಂ ಗಂಧಂ ಪುಷ್ಪಾದಿಕಂ ತಥಾ ॥ ೫೯ ॥

ಉಪಚಾರಾಂಸ್ತಥಾ ಸರ್ವಾನರ್ಘ್ಯಪಾತ್ರಾಹಿತೈರ್ಜಲೈಃ ।
ಅಮೃತೀಕರಣಾದ್ಯೈಸ್ತು ಸಂಸ್ಕೃತೈಸ್ತ್ವಭಿಷಿಚ್ಯ ತೈಃ ॥ ೬೦ ॥

ಪ್ರದದ್ಯಾದಿಷ್ಟದೇವೇಭ್ಯೋ ಗೃಹ್ಣಾತಿ ಚ ತತಃ ಸ್ವಯಂ ।
ಅರ್ಘ್ಯಪಾತ್ರಾಣಿ ತೈಸ್ತೈಸ್ತೈರ್ವಿನಾ ಯದ್ವಿನಿವೇದನಂ ॥ ೬೧ ॥

ದೀಯತೇ ಚೇಷ್ಟದೇವೇಭ್ಯಃ ಸರ್ವಂ ತನ್ನಿಷ್ಫಲಂ ಭವೇತ್ ।
ರಾಗಾಲ್ಲೋಭಾತ್ಪ್ರಮಾದಾದ್ವಾ ಹ್ಯರ್ಘ್ಯಪಾತ್ರಾಮೃತೀಕೃತಂ ॥ ೬೨ ॥

ಇವುಗಳಿಗೆ ಹಿಂದೆ ಹೇಳಿದ ದ್ರವ್ಯಗಳಿಂದ ಸ್ನಾನವನ್ನು ಮಾಡಿಸಬೇಕು. ಅಥವಾ ಸಮೀಪದಲ್ಲಿ ಸ್ಥಾಪಿಸಿರುವ ಕತ್ತಿಯಲ್ಲಾಗಲೀ ಕನ್ನಡಿಯಲ್ಲಾಗಲೀ ಸ್ನಾನವನ್ನರ್ಪಿಸಬೇಕು. ಈ ಕ್ರಮದಂತೆ ಮಹಾದೇವಿಗೆ ಸ್ನಾನವನ್ನು ಅರ್ಪಿಸಬೇಕು. ಹೀಗೆಯೇ ಸೂರ್ಯ, ವಿಷ್ಣು, ಶಂಕರ ಮುಂತಾದ ದೇವತೆಗಳಿಗೆ ವಿಧಿವತ್ತಾಗಿ ಸ್ನಾನವನ್ನು ಮಾಡಿಸಿದ ಸಾಧಕನು, ಈ ಲೋಕದಲ್ಲಿ ಬಹಳಕಾಲ ಒಮ್ಮುಕುವುದಲ್ಲದೆ ಸ್ವರ್ಗದಲ್ಲಿ ಒಂದು ಕಲ್ಪಪರ್ಯಂತರ ಸುಖದಿಂದಿರುವನು.

೫೯-೬೦. ಇಷ್ಟದೇವತೆಗೆ ಅರ್ಪಿಸುವ ಪಾದ್ಯ, ಗಂಧ, ಪುಷ್ಪ ಮೊದಲಾದ ಪೂಜಾಸಾಮಗ್ರಿಗಳನ್ನೂ ಮತ್ತು ಎಲ್ಲಾ ಉಪಚಾರಗಳನ್ನೂ ಅರ್ಘ್ಯಪಾತ್ರೆಯಲ್ಲಿರುವ ಅಮೃತೀಕರಣದಿಂದ ಸಂಸ್ಕೃತವಾದ ಜಲಗಳಿಂದ ಪ್ರೋಕ್ಷಿಸಿ, ಅನಂತರ ಅರ್ಪಿಸಬೇಕು. ಆಗಲೆ ಇಷ್ಟದೇವತೆಯು ಅದನ್ನು ಸ್ವೀಕರಿಸುವಳು.

೬೧-೬೨. ಅರ್ಘ್ಯಪಾತ್ರವಿಲ್ಲದೆಯೇ ಜಲವನ್ನು ಇಷ್ಟದೇವತೆಗೆ ಅರ್ಪಿಸಿದರೆ ಅದು ನಿಷ್ಫಲವಾಗುವುದು. ರಾಗ, ಲೋಭ ಅಥವಾ ಪ್ರಮಾದಗಳಿಂದ ಪಾತ್ರೆಯಲ್ಲಿ ಅಮೃತೀಕರಣಮಾಡಿರುವ ಅರ್ಘ್ಯಜಲವು ಪಾತ್ರೆಯಿಂದ ಚೆಲ್ಲಿಹೋದರೆ, ಉಳಿದ ಜಲ

ತೋಯಂ ಚ್ಯುತಂ ಸ್ಯಾತ್ತಾತ್ತ್ರಾತ್ತು ಪುನಃ ಕುರ್ಯಾತ್ತದಾಮೃತಂ ।
ಸ್ವಲ್ಪಾವಶೇಷೇ ತು ತೋಯೇ ತು ಪಾತ್ರಸ್ಥೇ ಹ್ಯಮೃತೀಕೃತೇ ॥ ೬೩ ॥

ತತ್ರಾನ್ಯದುದಕಂ ದದ್ಯಾತ್ತತ್ತೇನೈವಾಮೃತಂ ಭವೇತ್ ।
ಬಹೂನಿ ಯದಿ ಪುಷ್ಪಾಣಿ ಮಾಲಾ ವಾ ಪ್ರಚುರಾ ಯದಿ ॥ ೬೪ ॥

ದೀಯಂತೇ ಚಾರ್ಘ್ಯಪಾತ್ರಸ್ಥೈರ್ಜಲೈಃ ಸಂಸಿಚ್ಯ ತೋತ್ಸೃಜೇತ್ ।
ಅನ್ಯತೋಯೈರ್ಯದುತ್ಸೃಷ್ಟಮರ್ಘ್ಯಪಾತ್ರಸ್ಥಿತೇತರೈಃ ॥ ೬೫ ॥

ತನ್ನ ಗೃಹ್ಣಾತೀಷ್ಟದೇವೋ ದತ್ತಂ ವಿಧಿಶತೈರಪಿ ।
ಸಂಸ್ಕೃತೇ ತ್ವರ್ಘ್ಯಪಾತ್ರೇ ತು ನವಭಿಃ ಪ್ರತಿಪತ್ತಿಭಿಃ ॥ ೬೬ ॥

ತಿಷ್ಠಂತಿ ಸರ್ವತೀರ್ಥಾನಿ ಪೀಯೂಷಾಣಿ ಚ ಸರ್ವತಃ ।
ತಸ್ಮಾತ್ತತ್ರ ಸ್ಥಿತೈಸ್ತೋಯೈರಭ್ಯುಕ್ಷ್ಯೋಪಚಾರಾರ್ತ್ಸೃಜೇತ್ ॥ ೬೭ ॥

ವನ್ನು ತಿರುಗಿ ಅಮೃತೀಕರಣ ಮಾಡಬೇಕು. ಸ್ವಲ್ಪ ಉಳಿದ ಆ ಜಲವನ್ನು ಅಮೃತೀಕರಣ ಮಾಡಿದಮೇಲೆ, ಅದರೊಡನೆ ಇನ್ನಷ್ಟು ಬೇರೆ ಜಲವನ್ನು ಸೇರಿಸಬೇಕು. ಆಗ ಆ ಜಲವೂ ಅದರೊಡನೆ ಅಮೃತವಾಗುವುದು.

೬೪. ಪುಷ್ಪಗಳನ್ನೂ, ಹಾರಗಳನ್ನೂ, ಸಮರ್ಪಿಸಬೇಕಾದರೆ, ಅರ್ಘ್ಯಪಾತ್ರೆಯಲ್ಲಿರುವ ಜಲದಿಂದ ಆ ಹಾರಪುಷ್ಪಗಳನ್ನು ಪ್ರೋಕ್ಷಿಸಿ, ದೇವಿಗಾಗಿ ಅವುಗಳನ್ನು ಅರ್ಪಿಸಬೇಕು.

೬೫. ಅರ್ಘ್ಯಪಾತ್ರದಲ್ಲಿರುವ ಜಲವಲ್ಲದೆ ಬೇರೆ ಜಲದಿಂದ ಪ್ರೋಕ್ಷಿಸಿ ಹೂವು ಹಾರಗಳನ್ನು ಇಷ್ಟದೇವತೆಗೆ ಅರ್ಪಿಸಿದರೆ, ಆ ದೇವತೆಯು ಅದನ್ನು ನೂರಾರು ವಿಧಿಯನ್ನನುಷ್ಠಾನ ಮಾಡಿದರೂ ಸ್ವೀಕರಿಸುವುದಿಲ್ಲ.

೬೬-೬೭. ಒಂಭತ್ತು ವಿಧವಾದ ಪ್ರತಿಪತ್ತಿ ಅನುಷ್ಠಾನಗಳಿಂದ ಅರ್ಘ್ಯಪಾತ್ರೆಯನ್ನು ಸಂಸ್ಕರಿಸಿದರೆ, ಅದರಲ್ಲಿ ಎಲ್ಲಾ ತೀರ್ಥಗಳೂ, ಅಮೃತಗಳೂ, ಬಂದು ನೆಲಸುವುವು. ಆದಕಾರಣ ಅರ್ಘ್ಯಪಾತ್ರೆಯಲ್ಲಿರುವ ಜಲಗಳಿಂದ ಪ್ರೋಕ್ಷಿಸಿ, ಸಕಲ ಉಪಚಾರಗಳನ್ನೂ ಮಾಡಬೇಕು. ಅಯೋಗ್ಯವಾದುದನ್ನು ಅರ್ಘ್ಯಪಾತ್ರೆಯಲ್ಲಿಟ್ಟು ನಿವೇದಿಸಬಾರದು.

ನ ಯೋಗ್ಯಮರ್ಘ್ಯಪಾತ್ರೇಷು ನಿಧಾಯ ವಿನಿವೇದಯೇತ್ ।
ಇದಂ ತೇ ಭೈರವ ಪ್ರೋಕ್ತಂ ಷಟ್ಕಂ ಚೈವಾಸನಾದಿಕಂ ॥ ೬೮ ॥
ವಸ್ತ್ರಾದಿ ದಶ ವಕ್ಷ್ಯಾಮಿ ಶೃಣು ವಿಜ್ಞಾನವೃದ್ಧಯೇ ।

॥ ಇತಿ ಶ್ರೀ ಕಾಲಿಕಾಪುರಾಣೇ ದ್ವಿಸಪ್ತತಿತಮೋಽಧ್ಯಾಯಃ ॥

---

೬೮. ಎಲೈ ಭೈರವ, ಹೀಗೆ ಆಸನವೇ ಮೊದಲಾದ ಆರು ಉಪಚಾರಗಳನ್ನು ನಿನಗೆ ಹೇಳಿರುವೆನು. ಇನ್ನು ವಸ್ತ್ರವೇ ಮೊದಲಾದ ಹತ್ತು ಉಪಚಾರಗಳನ್ನು ಹೇಳುವೆನು. ಅವುಗಳನ್ನು ಕೇಳುವುದರಿಂದ, ಪೂಜಾಕ್ರಮಗಳ ವಿಷಯದಲ್ಲಿ ತಿಳಿವಳಿಕೆಯು ಹೆಚ್ಚಾಗುವುದು. ಅವುಗಳನ್ನು ಸಾವಧಾನವಾಗಿ ಕೇಳು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೆರಡನೆಯ
ಅಧ್ಯಾಯವು ಮುಗಿದುದು.

॥ ಶ್ರೀ ॥

ಅಥ

॥ ಶ್ರೀ ಕಾಲಿಕಾಪುರಾಣೇ ತ್ರಿಸಪ್ತತಿತಮೋऽಧ್ಯಾಯಃ ॥

॥ ಶ್ರೀ ಭಗವಾನುವಾಚ ॥

ಕಾರ್ಪಾಸಂ ಕಂಬಲಂ ವಾಲ್ಕಂ ಕೋಶಜಂ ವಸ್ತ್ರಮಿಷ್ಯತೇ ।
ತತ್ಪೂರ್ವಂ ಪೂಜಯಿತ್ವೈವ ಮುಂತ್ರೈರ್ದೇವಾಯ ಚೋತ್ಸೃಜೇತ್ ॥ ೧ ॥

ನಿರ್ದಶಂ ಮಲಿನಂ ಜೀರ್ಣಂ ಛಿನ್ನಂ ಗಾತ್ರಾವಲಿಂಗಿತಂ ।
ಪರಕೀಯಂ ಹ್ಯಾಖುದಷ್ಟಂ ಸೂಚಿವಿದ್ಧಂ ತಥೋಷಿತಂ ॥ ೨ ॥

ಉಪ್ತಕೇಶಂ ವಿಧೌತಂ ಚ ಶ್ಲೇಷ್ಮಮೂತ್ರಾದಿದೂಷಿತಂ ।
ಪ್ರದಾನೇ ದೇವತಾಭ್ಯಶ್ಚ ದೈವೇ ಪಿತ್ರ್ಯೇ ಚ ಕರ್ಮಣಿ ॥ ೩ ॥

ಎಪ್ಪತ್ತಮೂರನೆಯ ಅಧ್ಯಾಯವು.

೧. ಹಿಂದಿನ ಅಧ್ಯಾಯದಲ್ಲಿ ಆಸನ, ಪಾದ್ಯ, ಅರ್ಘ್ಯ, ಆಚಮನ, ಮಧುಪರ್ಕ ಸ್ನಾನ ಎಂಬ ಆರು ಉಪಚಾರಕ್ರಮಗಳನ್ನು ವಿವರಿಸಿ, ಈ ಅಧ್ಯಾಯದಲ್ಲಿ ವಸ್ತ್ರದಿಂದ ಧೂಪದವರೆಗೂ ಇರುವ ಉಪಚಾರಗಳನ್ನು ವಿವರಿಸಲಾಗುವುದು. ವಸ್ತ್ರಗಳಲ್ಲಿ ಹತ್ತಿಯದು, ಉಣ್ಣೆಯದು, ನಾರಿನದು, ಕ್ರಿಮಿಯ ಗೂಡಿನಿಂದ ಹುಟ್ಟಿದ ರೇಷ್ಮೆ ಎಂಬದಾಗಿ ನಾಲ್ಕುವಿಧವಾಗಿರುವುದು. ದೇವರಿಗೆ ವಸ್ತ್ರವನ್ನು ಅರ್ಪಿಸುವುದಕ್ಕೆ ಮುಂಚೆ ಅದನ್ನು ಪೂಜಿಸಿ, ಮಂತ್ರಪೂರ್ವಕವಾಗಿ ದೇವರಿಗೆ ಸಮರ್ಪಿಸಬೇಕು.

೨-೩. ಅಂಚು ಸೆರಗು ಇಲ್ಲದಿರುವುದು, ಕೊಳೆಯಾಗಿರುವುದು, ಸರಿಯದು, ಕತ್ತರಿಸಿರುವುದು, ಶರೀರದಮೇಲೆ ಸೋಕಿದ್ದು, ಮತ್ತೊಬ್ಬರದು, ಇಲಿಯು ಕಡಿದಿರುವುದು, ಸೂಜಿಯಿಂದ ತೂತು ಮಾಡಿರುವುದು, ಹೊದ್ದಿರುವುದು, ಕೂದಲುಸೇರಿನೆಯ್ದಿರುವುದು, ಧೂಳಿನಿಂದ ತುಂಬಿರುವುದು, ಶ್ಲೇಷ್ಮ, ಮೂತ್ರ ಇವುಗಳಿಂದ ನಿಂದಾ

ವರ್ಜಯೇತ್ ಸ್ವೋಪಯೋಗೇನ ಯಜ್ಞಾದಾವುಪಯೋಜನೇ ।
ಉತ್ತರೀಯೋತ್ತರಾಸಂಗೈರ್ನಿಚೋಲೋ ಮೋದಚೇಲಕಃ ॥ ೪ ॥

ಪರಿಧಾನಂ ಚ ಪಂಚೈತಾನ್ಯಸ್ಯೂತಾನಿ ಪ್ರಯೋಜಯೇತ್ ।
ಶಾಣವಸ್ತ್ರಂ ನಿಶಾರಂ ಚ ತಥೈವಾತಪವಾರಣಂ ॥ ೫ ॥

ಚಂಡಾತಕಂ ತಥಾ ದೃಶ್ಯಂ ಪಂಚಸ್ಯೂತಾನ್ಯದುಷ್ಟಯೇ ।
ಪತಾಕಾಧ್ವಜಕುಂಡಾದೌ ಸ್ಯೂತಂ ವಸ್ತ್ರಂ ಪ್ರಯೋಜಯೇತ್ ॥ ೬ ॥

ಅನ್ಯತ್ರಾವರಣಾದೌ ಚ ತದ್ವಿನಾ ಶಸ್ಯತೇ ನ ತತ್ ।
ರಕ್ತಂ ಕೌಶೇಯವಸ್ತ್ರಂ ಚ ಮಹಾದೇವ್ಯೈ ಪ್ರಶಸ್ಯತೇ ॥ ೭ ॥

ಸ್ಪದವಾಗಿರುವುದು, ಹೀಗೆ ಇರುವ ಬಟ್ಟೆಗಳನ್ನು ದೇವಕಾರ್ಯದಲ್ಲಿಯೂ, ಪಿತೃಕಾರ್ಯದಲ್ಲಿಯೂ, ದೇವರುಗಳಿಗೆ ವಸ್ತ್ರಗಳನ್ನು ಅರ್ಪಿಸುವಾಗಲೂ ಸಹ ತ್ಯಜಿಸಬೇಕು. ಯಜ್ಞವೇ ಮೊದಲಾದವುಗಳಲ್ಲಿ ಯಜಮಾನನಾದ ತಾನೂ ಸಹ ಅಂತಹ ವಸ್ತ್ರಗಳನ್ನು ಉಪಯೋಗಿಸಬಾರದು.

೪. ಹೊದಿಯುವ ಪಂಚೆ, ಬಹಿರ್ವಾಸ ಎಂದರೆ ಅದರ ಮೇಲೆ ಹೊದಿಯುವ ಧೋತ್ರ, ಛಳಿ ಗಾಳಿ ಇವುಗಳ ಬಾಧೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಹೊದೆಯುವ ಶಾಲು ಮುಂತಾದ ಬಟ್ಟೆ, ಕರವಸ್ತ್ರ, ಉಡುವಪಂಚೆ, ಎಂದು ವಸ್ತ್ರಗಳಲ್ಲಿ ಐದುವಿಧವು. ಈ ಐದುವಿಧ ಬಟ್ಟೆಗಳಲ್ಲಿಯೂ, ಹರಿಯದೆ ಇರುವುದನ್ನು ಮಾತ್ರ ಉಪಯೋಗಿಸಬೇಕು.

೫-೬. ನಾರಿನವಸ್ತ್ರ, ಛತ್ರಿಯಬಟ್ಟೆ, ಚಡ್ಡಿ ಮೊದಲಾದ ವ್ಯಾಯಾಮವಸ್ತ್ರಗಳು, ನೋಟಕ್ಕಾಗಿ ಸಿದ್ಧಪಡಿಸಿರುವ ವಸ್ತ್ರ ಕಸೂತಿಯವಸ್ತ್ರ ಈ ಐದುಬಟ್ಟೆಗಳೂ ಚೂರಾಗಿದ್ದರೂ ದೋಷವಿಲ್ಲವು. ಬಾವುಟ, ತೇರಿಗೆ ಕಟ್ಟುವ ಧ್ವಜ, ಯಜ್ಞಕುಂಡಕ್ಕೆ ಉಪಯೋಗಿಸುವ ಬಟ್ಟೆ ಇವುಗಳು ಹರಿದವುಗಳಾಗಿಯೇ ಇರಬೇಕು. ಚಪ್ಪರ ಮುಂತಾದುವುಗಳನ್ನು ರಚಿಸುವಾಗ, ಮೇಲುಗಡೆಯಲ್ಲಿ ಮರೆಯಾಗಿರುವುದಕ್ಕಾಗಿ ಕಟ್ಟಲು, ಚೂರು ಬಟ್ಟೆಗಳು ಇಲ್ಲದೆ ಇದ್ದರೆ ಅದು ಚೆನ್ನಾಗಿ ಕಾಣುವುದಿಲ್ಲ.

೭-೮. ಕೆಂಪಾದ ರೇಷ್ಮೆಬಟ್ಟೆಯು ಮಹಾದೇವಿಗೆ ಅರ್ಪಿಸಲು ಉತ್ತಮವಾಗಿ

ಪೀತಂ ತಥೈವ ಕೌಶೇಯಂ ವಾಸುದೇವಾಯ ಚೋತ್ಸೃಜೇತ್ ;
ರಕ್ತಂ ತು ಕಂಬಳಂ ದದ್ಯಾಚ್ಛಿವಾಯ ಪರಮಾತ್ಮನೇ ॥ ೮ ॥

ವಿಚಿತ್ರಂ ಸರ್ವದೇವೇಭ್ಯೋ ದೇವೇಭ್ಯೋಂಶುಂ ನಿವೇದಯೇತ್ ।
ಕಾರ್ಪಾಸಂ ಸರ್ವತೋ ಭದ್ರಂ ದದ್ಯಾತ್ಸರ್ವೇಭ್ಯ ಏವ ಚ ॥ ೯ ॥

ನೈಕಾಂತರಕ್ತಂ ದದ್ಯಾತ್ತು ವಾಸುದೇವಾಯ ಚೈಲಕಂ ।
ತಥಾ ನೈಕಾಂತರಕ್ತಂ ತು ಶಿವಾಯ ವಿನಿವೇದಯೇತ್ ॥ ೧೦ ॥

ನೀಲರಕ್ತಂ ತು ಯದ್ವಸ್ತ್ರಂ ತತ್ಸರ್ವತ್ರ ವಿವರ್ಜಿತಂ ।
ದೈವೇ ಪಿತ್ರ್ಯೇ ತ್ವೋಪಯೋಗೇ ವರ್ಜಯೇತ್ತು ವಿಚಕ್ಷಣಃ ॥ ೧೧ ॥

ನಿಲೀರಕ್ತಂ ಪ್ರಮಾದಾತ್ತು ಯೋ ದದ್ಯಾದ್ವಿಷ್ಣವೇ ಬುಧಃ ।
ನಿಷ್ಫಲಾ ತಸ್ಯ ತತ್ಪೂಜಾ ತದಾ ಭವತಿ ಭೈರವ ॥ ೧೨ ॥

ರುವುದು. ಹಳದಿಯ ಬಣ್ಣದ ರೇಷ್ಮೆಯ ಬಟ್ಟೆಯನ್ನು ಎಂದರೆ ಪೀತಾಂಬರವನ್ನು ವಿಷ್ಣುವಿಗೂ, ಕೆಂಪಿನ ಕಂಬಳಿಯನ್ನು ಪರಮಾತ್ಮನಾದ ಶಿವನಿಗೂ ಅರ್ಪಿಸಬೇಕು.

೯-೧೦. ದೇವತೆಗಳಿಗೆ ಒಪ್ಪಿಸುವ ಬಟ್ಟೆಗಿಂತಲೂ ದೇವತಾಸ್ತ್ರೀಯರುಗಳಿಗೆ ಚಿತ್ರ ವಿಚಿತ್ರ ಬಣ್ಣವಿರುವ ವಸ್ತ್ರಗಳನ್ನು ಒಪ್ಪಿಸಬೇಕು. ಹತ್ತಿಯ ಬಟ್ಟೆವಿಚಾರದಲ್ಲಿ ಯಾವ ಬಣ್ಣದ್ದಾದರೂ ಅದನ್ನು ಎಲ್ಲರಿಗೂ ಒಪ್ಪಿಸಬಹುದು, ಆದರೆ ಸಂಪೂರ್ಣವಾಗಿ ಕೆಂಪುಬಣ್ಣದಿಂದಲೇ ಕೂಡಿರುವ ವಸ್ತ್ರವನ್ನು ವಿಷ್ಣುವಿಗೆ ಒಪ್ಪಿಸಕೂಡದು. ಹಾಗೆಯೇ ಶಿವನಿಗೂ ಅಂತಹ ಕೆಂಪಿನ ವಸ್ತ್ರವನ್ನು ಒಪ್ಪಿಸಬಾರದು.

೧೧. ನೀಲದ ಬಣ್ಣ ಮತ್ತು ಕೆಂಪುಬಣ್ಣ ಇವುಗಳಿಂದ ಕೂಡಿದ ವಸ್ತ್ರವು ಸಮಸ್ತ ಕಾರ್ಯಗಳಲ್ಲಿಯೂ ನಿಷಿದ್ಧವಾದುದು. ಬುದ್ಧಿವಂತನಾದವನು ದೈವ ಪಿತೃಕಾರ್ಯಗಳಲ್ಲಿ ಇವುಗಳನ್ನು ಉಪಯೋಗಿಸಬಾರದು.

೧೨. ತಿಳುವಳಿಕೆಯಿಲ್ಲದೆ ನೀಲ ಮತ್ತು ಕೆಂಪು ಬಣ್ಣಗಳ ವಸ್ತ್ರವನ್ನು ವಿಷ್ಣುವಿಗೆ ಪ್ರಮಾದದಿಂದ ಅರ್ಪಿಸಿದರೆ ಆ ಪೂಜೆಯು ನಿಷ್ಫಲವಾಗುವುದು.

ವಿಚಿತ್ರೇ ವಾಸಸಿ ಪುನರ್ಲಗ್ನಂ ನೀಲೀವಿರಂಜಿತಂ ।
ವಸ್ತ್ರಂ ದದ್ಯಾನ್ಮಹಾದೇವ್ಯೈ ನಾನ್ಯಸ್ಮೈ ತು ಕದಾಚನ ॥ ೧೩ ॥

ದ್ವಿಪದಾಂ ಬ್ರಾಹ್ಮಣೋ ಯದ್ವದ್ದೇವಾನಾಂ ವಾಸವೋ ಯಥಾ ।
ತಥಾ ಭೂಷಣವರ್ಗೇಷು ವಸ್ತ್ರಮುತ್ತಮಮುಚ್ಯತೇ ॥ ೧೪ ॥

ವಸ್ತ್ರೇಣ ಜೀಯತೇ ಲಜ್ಜಾ ವಸ್ತ್ರೇಣ ಹೀಯತೇ ತ್ವಘಂ ।
ವಸ್ತ್ರಾತ್ಸ್ಯಾತ್ಸರ್ವತಸ್ಸಿದ್ಧಿಶ್ಚತುರ್ವರ್ಗಪ್ರದಂ ಚ ತತ್ ॥ ೧೫ ॥

ವಸ್ತ್ರಂ ತೇ ಕಥಿತಂ ಪುತ್ರ ಸರ್ವಪ್ರೀತಿಪ್ರದಾಯಕಂ ।
ಭೋಗ್ಯಂ ಭೂಷೋತ್ತಮಂ ನಿತ್ಯಂ ಭೂಷಣಾನಿ ಶೃಣುಷ್ವ ಮೇ ॥ ೧೬ ॥

ಕಿರೀಟಂ ಚ ಶಿರೋರತ್ನಂ ಕುಂಡಲಂ ಚ ಲಲಾಟಿಕಾ ।
ತಾಲಪತ್ರಂ ಚ ಹಾರಂ ಚ ಗ್ರೈವೇಯಕಮಥೋರ್ಮಿಕಾ ॥ ೧೭ ॥

---

೧೩. ಅನೇಕ ಬಣ್ಣವುಳ್ಳ ಬಟ್ಟೆಯ ವಿಷಯದಲ್ಲಿ ನೀಲಿಬಣ್ಣವೇ ಹೆಚ್ಚಾಗಿ ತುಂಬಿರುವ ವಸ್ತ್ರವನ್ನು ಮಹಾದೇವಿಗಾಗಿ ಅರ್ಪಿಸಬೇಕು. ಇನ್ನು ಯಾರಿಗೂ ಈ ತರಹದ ವಸ್ತ್ರವನ್ನು ಅರ್ಪಿಸಬಾರದು.

೧೪. ಎರಡು ಕಾಲುಗಳು ಇರುವ ಪ್ರಾಣಿಗಳಲ್ಲಿ ಎಂದರೆ, ಮನುಷ್ಯರಲ್ಲಿ ಬ್ರಾಹ್ಮಣನು ಹೇಗೆ ಶ್ರೇಷ್ಠನೋ, ದೇವತೆಗಳಲ್ಲಿ ಇಂದ್ರನು ಹೇಗೆ ಶ್ರೇಷ್ಠನೋ, ಹಾಗೆಯೇ ಅಲಂಕಾರಗಳಲ್ಲಿ ವಸ್ತ್ರವು ಉತ್ತಮಾಲಂಕಾರವಾಗಿರುವುದು.

೧೫. ಬಟ್ಟೆಯಿಂದ ನಾಚಿಕೆಯನ್ನು ಜಯಿಸುವೆವು. ಬಟ್ಟೆಯಿಂದ ಪಾಪವು ಕಡಿಮೆಯಾಗುವುದು. ಬಟ್ಟೆಯಿಂದ ಸರ್ವಸಿದ್ಧಿಯೂ ಉಂಟಾಗುವುದು. ವಸ್ತ್ರವು ಧರ್ಮಾರ್ಥಕಾಮಮೋಕ್ಷಗಳನ್ನುಂಟುಮಾಡುವುದು.

೧೬. ಎಲೈ ಪುತ್ರನಾದ ಭೈರವನೇ ಕೇಳು:—ಎಲ್ಲರಿಗೂ ಪ್ರೀತಿಯನ್ನುಂಟು ಮಾಡುವುದಾಗಿಯೂ ಉತ್ತಮವಾದ ಆಭರಣಪ್ರಾಯವಾಗಿಯೂ, ಭೋಗಕ್ಕೆ ಅರ್ಹವಾಗಿಯೂ ಇರುವ ವಸ್ತ್ರದ ವಿಷಯವನ್ನು ನಿನಗೆ ಹೇಳಿದ್ದಾಯಿತು. ಇನ್ನು ಇತರ ಆಭರಣಗಳ ವಿಷಯವನ್ನು ಹೇಳುವೆನು ಕೇಳು.

೧೭-೨೨. ದೇವಿಗೆ ಅರ್ಪಿಸಲು ಈ ಆಭರಣಗಳು ಶ್ರೇಷ್ಠವಾದುವು:—ಕಿರೀಟ ಚೂಡಾಮಣಿ, ಕುಂಡಲ, ಬೈತಲೆಬೊಟ್ಟು, ಓಲೆ, ಹಾರ, ಅಡ್ಡಿಕೆ, ಉಂಗುರ,

ಪ್ರಾಲಂಬಿಕಾ ರತ್ನಸೂತ್ರಮುತ್ತಂಸೋತ್ಪಲಮಾಲಿಕಾ ।
ಪಾರ್ಶ್ವದ್ಯೋತೋ ನಖದ್ಯೋತೋ ಹ್ಯಂಗುಲೀಚ್ಛಾದಕಸ್ತಥಾ ॥ ೧೮ ॥
ಜಟಾಲಕಂ ಮಾಣವಕೋ ಮೂರ್ಧತಾರಾ ಲಲಂತಿಕಾ ।
ಅಂಗದೋ ಬಾಹುವಲಯಃ ಶಿಖಾಭೂಷಣಲಿಂಗಿನಃ ॥ ೧೯ ॥
ಪ್ರಾಗಂಡಬಂಧಮುಚ್ಛ್ವಾಸನಾಭಿಪೂರೋಽಥ ಮಾಲಿಕಾ ।
ಸಪ್ತಕೀ ಶೃಂಖಲಂ ಚೈವ ದಂತಪತ್ರಂ ಚ ಕರ್ಣಕಃ ॥ ೨೦ ॥
ಊರುಸೂಚಂ ಚ ನೀವೀಂ ಚ ಮುಷ್ಟಿವರ್ಧಂ ಪ್ರಕೀರ್ಣಕಂ ।
ಪಾದಾಂಗದಂ ಹಂಸಕಶ್ಚ ನೂಪುರಂ ಕ್ಷುದ್ರಘಂಟಿಕಾ ॥ ೨೧ ॥
ಸುಖಪಂಟಮಿತಿ ಪ್ರೋಕ್ತಾ ಅಲಂಕಾರಾಸ್ತ್ರಿಶೋಭನಾಃ ।
ಚತ್ವಾರಿಂಶದಮೀ ಪ್ರೋಕ್ತಾ ಲೋಕೇ ವೇದೇ ತು ಸೌಖ್ಯದಾಃ ॥ ೨೨ ॥
ಅಲಂಕಾರಪ್ರದಾನೇನ ಚತುರ್ವರ್ಗಪ್ರಸಾಧನಂ ।
ಏತೇಷಾಂ ಪೂಜನಂ ಕೃತ್ವಾ ಪ್ರದದ್ಯಾದಿಷ್ಟಸಿದ್ಧಯೇ ॥ ೨೩ ॥

ಜೋಮಾಲೆಸರ, ಕಂಠೀಸರ, ಉದ್ದವಾದ ಮಣಿಸರ, ನಕ್ಷತ್ರಮಾಲಿಕೆ, ಪಕ್ಕಗಳಲ್ಲಿ ಧರಿಸುವ ಆಭರಣ, ಹುಲಿಯುಗುರಿನ ಆಭರಣ, ಬೆರಳಲ್ಲಿ ಧರಿಸುವ ಆಭರಣ, ಜಡೆಬಿಲ್ಲೆ, ಚಂದ್ರಹಾರ, ಬೈತಲೆಯಲ್ಲಿ ಧರಿಸುವ ನಕ್ಷತ್ರದಂತಿರುವ ಆಭರಣ, ಜೋಮಾಲೆ, ಭುಜಕೀರ್ತಿ, ತೋಳುಕಡಗ, ಚೌರಿಕಟ್ಟು, ಜಡೆಯಲ್ಲಿ ಧರಿಸುವ ಗೊಂಡ್ಯ, ಕೆನ್ನೆಸರ, ಉದ್ಭಾಸ, ಡಾಬು, ಸರಪಣಿಯಂತಿರುವ ಡಾಬು, ಗೆಜ್ಜೆಯ ಉಡಿದಾರ (ಡಾಬು), ಬೆಂಡೋಲೆ, ಹತ್ತಕಡಕು (ವಂಟೆ), ಊರುಸೂಚ, ನೀವೀ, ಮುಷ್ಟಿವರ್ಧ, ಪ್ರಕೀರ್ಣಕ, ಕಾಲಂದಿಗೆ, ಕಾಲುಕಡಗ, ಕಾಲುಸರಪಣಿ, ಕಿರುಗೆಜ್ಜೆಯಿಂದ ಕೂಡಿದ ನೂಪುರ, ಕಾಲುಂಗುರ, ಈ ಆಭರಣಗಳು ದೇವಿಗೆ ಅರ್ಪಿಸುವ ಉತ್ತಮವಾದ ಅಲಂಕಾರಗಳು. ಈ ನಲವತ್ತು ಆಭರಣಗಳು ದೇವಿಗೆ ಸಂತೋಷವನ್ನುಂಟುಮಾಡುವವು. ಅಲಂಕಾರದ ಒಡವೆಗಳೆಂದು ಪ್ರಸಿದ್ಧವಾಗಿರುವ ಈ ಆಭರಣಗಳು ಸುಖವನ್ನುಂಟುಮಾಡತಕ್ಕವುಗಳೆಂದು ಹೇಳಲ್ಪಟ್ಟಿರುವುದು.

೨೩. ಅಲಂಕಾರಕ್ಕಾಗಿ ಉಪಯೋಗಿಸುವ ಈ ಭೂಷಣಗಳನ್ನು ದೇವಿಗೆ ಅರ್ಪಿಸುವುದರಿಂದ, ಚತುರ್ವರ್ಗ ಪುರುಷಾರ್ಥಗಳು ಸಿದ್ಧಿಸುವುವು. ಈ ಆಭರಣಗಳನ್ನು ಪುಷ್ಪಾದಿಗಳಿಂದ ಪೂಜಿಸಿದ ಬಳಿಕ ದೇವಿಗೆ ಅರ್ಪಿಸಬೇಕು. ಅದರಿಂದ ಇಷ್ಟಸಿದ್ಧಿಯಾಗುವುದು.

ತೇಷಾಂ ದೈವತಮುಚ್ಚಾರ್ಯ ಪೂಜಯೇತ್ತು ವಿಚಕ್ಷಣಃ।
ಶಿರೋಗತಾನಿ ವಾ ದದ್ಯಾತ್ಸೌವರ್ಣಾನಿ ತು ಸರ್ವದಾ ॥ ೨೪ ॥

ಚೂಡಾರತ್ನಾದಿಕಾನೀಹ ಭೂಷಣಾನಿ ತು ಭೈರವ।
ಗ್ರೈವೇಯಕಾದಿಹಂಸಾಂತಂ ಸೌವರ್ಣಂ ರಾಜತಂ ಚ ವಾ ॥ ೨೫ ॥

ನಿವೇದಯೇತ್ತು ದೇವೇಭ್ಯೋ ನಾನ್ಯತ್ತ್ರೈಜಸಸಂಭವಂ।
ರೀತಿರಂಗಾದಿಸಂಜಾತಂ ಪಾತ್ರೋಪಕರಣಾದಿಕಂ ॥ ೨೬ ॥

ದದ್ಯಾದಾಯುಸಮುದ್ಭವಂ ತು ಭೂಷಣಂ ನ ಕದಾಚನ।
ಘಂಟಾ ಚಾಪರಕುಂಭಾದಿಪಾತ್ರೋಪಕರಣಾದಿಕಂ ॥ ೨೭ ॥

ತದ್ಭೂಷಣಾಂತರೇ ದದ್ಯಾದನ್ಯತ್ತದುಪಭೂಷಣಂ।
ಸರ್ವಂ ತಾಮ್ರಮಯಂ ದದ್ಯಾದ್ಯತ್ಕಿಂಚಿದ್ಭೂಷಣಾದಿಕಂ ॥ ೨೮ ॥

---

೨೪. ಆಯಾಯ ಆಭರಣಗಳ ದೇವತೆಯನ್ನು ಉಚ್ಚರಿಸಿ ಅವುಗಳನ್ನು ಪೂಜೆಮಾಡಬೇಕು. ಯಾವಾಗಲೂ ತಲೆಯಲ್ಲಿ ಧರಿಸುವ ಆಭರಣವು ಚಿನ್ನದ್ದಾಗಿಯೇ ಇರಬೇಕು. ಎಲೈ ಭೈರವನೇ ಕೇಳು, ಚೂಡಾರತ್ನವೇ ಮೊದಲಾದ ಆಭರಣಗಳನ್ನು ಚಿನ್ನದಿಂದಲೇ ಮಾಡಿ ಅರ್ಪಿಸಬೇಕು.

೨೫. ಗ್ರೈವೇಯಕವೇ ಮೊದಲಾಗಿ ಹಂಸಕದವರೆಗೂ ಇರುವ ಆಭರಣಗಳು ಚಿನ್ನದ್ದಾಗಲೀ, ಅಥವಾ ಬೆಳ್ಳಿಯಿಂದ ಮಾಡಿದ್ದಾಗಲೀ ಆಗಬಹುದು. ಅದನ್ನು ದೇವತೆಗಳಿಗೆ ಒಪ್ಪಿಸಬಹುದು. ಹಿತ್ತಾಳೆ, ಕಂಚು ಇವುಗಳಿಂದ ಮಾಡಿದ ಆಭರಣಗಳನ್ನು ದೇವರಿಗೆ ಒಪ್ಪಿಸಬಾರದು.

೨೬. ಬೆಳ್ಳಿಯಂತೆಯೂ, ಚಿನ್ನದಂತೆಯೂ ಹೊಳೆಯುವ ಕಾಗೇಬಂಗಾರ ಮೊದಲಾದವುಗಳಿಂದ ಮಾಡಿದ ಆಭರಣಗಳನ್ನೂ, ಪೂಜಾಪಾತ್ರೆಗಳನ್ನೂ, ಕಬ್ಬಿಣದಿಂದ ಮಾಡಿರುವುದನ್ನೂ ಯಾವಾಗಲೂ ಅರ್ಪಿಸಬಾರದು.

೨೭. ಈ ಭೂಷಣಗಳೆಲ್ಲವನ್ನೂ ಅರ್ಪಿಸಿದನಂತರ ಘಂಟೆ, ಇತರ ಕಲಶ ಪಾತ್ರೆಗಳು ಮೊದಲಾದ ಪೂಜಾಸಾಮಗ್ರಿಗಳೆಲ್ಲವೂ ಉಪಭೂಷಣಗಳಾದುದರಿಂದ, ಅನುಗಳ ವಿಷಯದಲ್ಲಿಯೂ ಹಿಂದೆ ಹೇಳಿದ ಕ್ರಮವನ್ನೇ ಅನುಸರಿಸಬೇಕು.

೨೮. ಚಿನ್ನದ್ದಲ್ಲದ ಆಭರಣಗಳನ್ನು ಅರ್ಪಿಸುವ ಸಂದರ್ಭದಲ್ಲಿ ಎಲ್ಲವೂ ತಾಮ್ರಮಯವಾಗಿ ಇರಬಹುದು. ಚಿನ್ನದಂತೆಯೇ ತಾಮ್ರನಿರ್ಮಿತವಾದ ಸಾಮಗ್ರಿ

ಸರ್ವತ್ರ ಸ್ವರ್ಣವತ್ತಾಮ್ರಮರ್ಘ್ಯಪಾತ್ರೇ ತತೋಽಧಿಕಂ ।
ಪೂಜಾರ್ಘ್ಯಪಾತ್ರಂ ನೈವೇದ್ಯಾಧಾರಪಾತ್ರಂ ಚ ಪಾನಕಂ ॥ ೨೯ ॥

ಔದುಂಬರಂ ಸದಾ ವಿಷ್ಣೋಃ ಪ್ರೀತಿದಂ ತೋಷದಂ ತಥಾ ।
ತಾಮ್ರೋ ದೇವಾಃ ಪ್ರಮೋದಂತೇ ತಾಮ್ರೋ ದೇವಾಃ ಸ್ಥಿತಾಸ್ಸದಾ ॥ ೩೦ ॥

ಸರ್ವಪ್ರೀತಿಕರಂ ತಾಮ್ರಂ ತಸ್ಮಾತ್ತಾಮ್ರಂ ಪ್ರಯೋಜಯೇತ್ ।
ಸ್ವೋಪಯೋಗೇ ನರಃ ಕುರ್ಯಾದ್ದೇವಾನಾಮಪಿ ಭೈರವ ॥ ೩೧ ॥

ಗ್ರೀವೋರ್ಧ್ವದೇಶೇ ರೌಪ್ಯಂ ತು ನ ಕದಾಚಿಚ್ಚ ಭೂಷಣಂ ।
ಪ್ರಾವಾರಃ ಪಾನಪಾತ್ರಂ ಚ ಗಂಡಕೋ ಗೃಹಮೇವ ಚ ॥ ೩೨ ॥

ಗಳೂ ಹೆಚ್ಚಾದ ಫಲವನ್ನೇ ಕೊಡುವವು. ಅದರಲ್ಲೂ ಅರ್ಘ್ಯಪಾತ್ರೆಯು ತಾಮ್ರದ್ದಾದರೆ ಎಲ್ಲಕ್ಕಿಂತಲೂ ಅತಿಶಯವಾದ ಫಲವನ್ನು ಕೊಡುವುದು.

೨೯. ಅತ್ತಿಯ ಮರದಿಂದ ಮಾಡಿದ ಪೂಜಾಪಾತ್ರೆ, ಅರ್ಘ್ಯಪಾತ್ರೆ, ನೈವೇದ್ಯವನ್ನು ಇಡುವ ಪಾತ್ರೆ, ಇವೆಲ್ಲವನ್ನೂ ಇರಿಸುವ ಆಧಾರ ಪೀಠ, ಮತ್ತು ಪಾನಪಾತ್ರೆ, ಇವುಗಳು ಯಾವಾಗಲೂ ವಿಷ್ಣುವಿಗೆ ಪ್ರೀತಿಯನ್ನೂ, ಸಂತೋಷವನ್ನೂ ಉಂಟುಮಾಡುವವು.

೩೦. ತಾಮ್ರದಿಂದ ಮಾಡಿದ ಪಾತ್ರೆಯು ವಿಷಯದಲ್ಲಿ ದೇವತೆಗಳು ಸಂತೋಷಪಡುವರು, ತಾಮ್ರಲೋಹದಲ್ಲಿ ದೇವತೆಗಳು ಯಾವಾಗಲೂ ವಾಸಮಾಡುವರು, ಎಲ್ಲರಿಗೂ ತಾಮ್ರವು ಪ್ರೀತಿಯನ್ನುಂಟುಮಾಡುವ ಕಾರಣದಿಂದ, ದೇವರ ಪೂಜೋಪಕರಣಗಳ ವಿಷಯದಲ್ಲಿ ತಾಮ್ರವು ಸರ್ವಶ್ರೇಷ್ಠವೆಂದು ತಿಳಿದು, ಅದನ್ನು ಹೆಚ್ಚಾಗಿ ಉಪಯೋಗಿಸಬೇಕು.

೩೧. ಎಲೈ ಭೈರವನೇ ಕೇಳು:—ಮನುಷ್ಯನು ತಾಮ್ರವನ್ನು ದೇವರ ವಿಷಯದಲ್ಲಿ ಉಪಯೋಗಿಸುವಂತೆಯೇ ತನ್ನ ಸ್ವಂತ ಕಾರ್ಯಗಳಲ್ಲಿಯೂ ಉಪಯೋಗಿಸಬಹುದು. ಕಂಠದಿಂದ ಮೇಲೆ ಇರುವ ಶಿರಸ್ಸೇ ಮೊದಲಾದ ಅವಯವಗಳಿಗೆ ಬೆಳ್ಳಿಯ ಆಭರಣಗಳು ಯಾವಾಗಲೂ ಚೆನ್ನಾಗಿ ಶೋಭಿಸುವುದಿಲ್ಲ.

೩೨. ದೇವರ ಮಂಟಪ, ಪಾನಪಾತ್ರೆ, ಗಂಡಕ, ದೇವರ ಮನೆಯಲ್ಲಿರುವ ಉಪಕರಣಪಾತ್ರೆಗಳು, ಮಂಚವೇ ಮೊದಲಾದ ಆಸನಗಳು, ಪೀಠಗಳು, ಇವೆಲ್ಲವೂ ಉಪಭೂಷಣವೆನಿಸುತ್ತವೆ.

ಪರ್ಯಂಕಾದಿ ಯದನ್ಯಚ್ಚ ಸರ್ವಂ ತದುಪಭೂಷಣಂ ।
ಅಯೋಮಯಮೃತಂ ಕಾಂಸ್ಯಪೃತೇ ಯದ್ಭೂಷಣಂ ಭವೇತ್ ॥ ೩೫ ॥

ಸ್ವರ್ಣರೌಪ್ಯಸ್ಯ ಚಾಭಾವೇ ತ್ವಧಃ ಕಾಯೇ ನಿಯೋಜಯೇತ್ ।
ಏತೇಷಾಂ ಭೂಷಣಾದೀನಾಂ ಯದ್ದಾತುಂ ಶಕ್ಯತೇ ನರೈಃ ॥ ೩೬ ॥

ತತ್ತದ್ದದ್ಯಾತ್ಸಂಭವೇ ತು ಸರ್ವಮೇವ ಪ್ರಬಾಪಯೇತ್ ।
ಚತುರ್ವರ್ಗಪ್ರದಂ ಚೇತ್ಥಂ ಭೂಷಣಂ ಸರ್ವಸೌಖ್ಯದಂ ॥ ೩೭ ॥

ತುಷ್ಟಿಪುಷ್ಟಿಪ್ರೀತಿಕರಂ ಯಥಾ ಶಕ್ತ್ಯೇವ ಯೋ ಸೃಜೇತ್ ।
ಇದಂ ವಾಂ ಭೂಷಣಂ ಪ್ರೋಕ್ತಂ ಸರ್ವದೇವಸ್ಯ ತುಷ್ಟಿದಂ ॥ ೩೮ ॥

ಗಂಧಂ ಚ ಸಮ್ಯಕ್ ಶೃಣುತಂ ಪುತ್ರೌ ವೇತಾಲಭೈರವೌ ।
ಚೂರ್ಣೀಕೃತೋ ವಾ ಘೃಷ್ಟೋ ವಾ ದಾಹಾಕರ್ಷಿತ ಏವ ವಾ ॥ ೩೯ ॥

ರಸಃ ಸಂಮರ್ದಜೋ ವಾಪಿ ಪ್ರಾಣ್ಯಂಗೋದ್ಭವ ಏವ ವಾ ।
ಗಂಧಃ ಪಂಚವಿಧಃ ಪ್ರೋಕ್ತೋ ದೇವಾನಾಂ ಪ್ರೀತಿದಾಯಕಃ ॥೪೦॥

---

೩೫. ಚಿನ್ನ, ಮತ್ತು ಬೆಳ್ಳಿಯ ಆಭರಣಗಳು ದೊರೆಯದಿರುವಾಗ, ಕಬ್ಬಿಣದ ಮತ್ತು ಕಂಚಿನ ಆಭರಣಗಳನ್ನೂ ಬಿಟ್ಟು, ಮಿಕ್ಕ ಲೋಹದ ಆಭರಣಗಳನ್ನು, ದೇವರ ಶರೀರದ ಕೆಳಭಾಗದ ಅಂಗಗಳಲ್ಲಿ ಧರಿಸಬೇಕು.

೩೬. ಈ ಆಭರಣಗಳ ಪೈಕಿ ಯಾವುದನ್ನು ಅರ್ಪಿಸಲು ಸಾಧ್ಯವೋ ಅದನ್ನು ದೇವರಿಗೆ ಒಪ್ಪಿಸಬೇಕು. ಎಲ್ಲವೂ ಸಿಕ್ಕುವ ಭಾಗದಲ್ಲಿ, ಎಲ್ಲಾ ಆಭರಣಗಳನ್ನೂ ಅರ್ಪಿಸಬೇಕು.

೩೭-೩೮. ಆಭರಣಸಮರ್ಪಣವು ಸೌಖ್ಯವನ್ನು ಉಂಟುಮಾಡುವುದು. ಧರ್ಮ, ಅರ್ಥ, ಕಾಮ, ಮೋಕ್ಷ, ಎಂಬ ನಾಲ್ಕು ವಿಧವಾದ ಪುರುಷಾರ್ಥವನ್ನು ಸಾಧಿಸುವುದು. ಆದುದರಿಂದ ಆಭರಣವನ್ನು ತನ್ನ ಶಕ್ತಿಗನುಸಾರವಾಗಿ ದೇವರಿಗೆ ಒಪ್ಪಿಸಬೇಕು. ಇದರಿಂದ ಸಂತೋಷವೂ, ಪುಷ್ಟಿಯೂ, ಉಂಟಾಗುವುದು. ಎಲ್ಲ ದೇವರಿಗೂ ತುಷ್ಟಿಯನ್ನುಂಟುಮಾಡುವ ಆಭರಣದ ವಿಷಯವನ್ನು ನಿಮಗೆ ಹೇಳಿರುವೆನು.

೩೯-೪೦. ಪುತ್ರರಾದ ವೇತಾಲಭೈರವರೇ ಕೇಳಿರಿ:—ಇನ್ನು ಗಂಧದ ವಿಷಯವನ್ನು ಚೆನ್ನಾಗಿ ಹೇಳುವೆನು. ಚೆನ್ನಾಗಿ ಪುಡಿಮಾಡಿರುವುದು, ಸಣ್ಣಗೆ ಅರೆದಿರುವುದು,

ಗಂಧಚೂರ್ಣಂ ಗಂಧಪತ್ರಂ ಚೂರ್ಣಂ ಸುಮನಸಸ್ತಥಾ ।
ಪ್ರಶಸ್ತಗಂಧಯುಕ್ತಾನಾಂ ಪತ್ರಚೂರ್ಣಾನಿ ಯಾನಿ ತು ॥ ೬೯ ॥

ತಾನಿ ಗಂಧವಹಾನಿ ಸ್ಯುಃ ಸ ಗಂಧಃ ಪ್ರಥಮಃ ಸ್ಮೃತಃ ।
ಘೃಷ್ಟೋ ಮಲಯಜೋ ಗಂಧಃ ಸಚೂರ್ಣೇಕೃತಮೇರುಣಾ ॥ ೪೦ ॥

ಅಗರುಪ್ರಭೃತಿಶ್ಚಾಪಿ ಯಸ್ಯ ಪಂಕಃ ಪ್ರದೀಯತೇ ।
ಗಂಧೋ ಘೃಷ್ಟ್ವಾಮಘೃಷ್ಟೋಽಯಂ ದ್ವಿತೀಯಃ ಪರಿಕೀರ್ತಿತಃ ॥ ೪೧ ॥

ದೇವದಾರ್ವಗರುಬ್ರಹ್ಮಶಾಲಸಾರಾಂತಚಂದನಾಃ ।
ಪ್ರಿಯಾದೀನಾಂ ಚ ಯೋ ದಗ್ಧ್ವಾ ಗೃಹ್ಯತೇ ದಾಹಜೋ ರಸಃ ॥ ೪೨ ॥

ಸ ದಾಹಾಕರ್ಷಿತೋ ಗಂಧಸ್ತೃತೀಯಃ ಪರಿಕೀರ್ತಿತಃ ।
ಸುಗಂಧಕರವೀಬಿಲ್ವಗಂಧೀನಿ ತಿಲಕಂ ತಥಾ ॥ ೪೩ ॥

ಅಗ್ನಿಯಲ್ಲಿಧೂಪವಂತೆ ಉಪಯೋಗಿಸುವುದು, ವಾಸನೆಯ ಪದಾರ್ಥಗಳನ್ನು ಹಿಂಡಿ ತೆಗೆದರಸವು, ಪ್ರಾಣಿಯ ಅವಯವದಿಂದ ಹುಟ್ಟಿದ ಪದಾರ್ಥವು ಎಂದು ಗಂಧವು ಐದು ವಿಧವಾಗಿರುವುದು. ಈ ಗಂಧಲೇಪನವು ದೇವರಿಗೆ ಪ್ರೀತಿಯನ್ನುಂಟುಮಾಡುವುದು.

೩೯. ಗಂಧದ ಹುಡಿ, ವಾಸನೆಯನ್ನು ಕೊಡುವ ಎಲೆಗಳ ಹುಡಿ, ಹೂವುಗಳು, ಸುವಾಸನೆಯಿಂದ ಕೂಡಿದ ಎಲೆಗಳಹುಡಿ, ಇವುಗಳು ಮೊದಲನೆಯ ತರಹದ ಉತ್ತಮಗಂಧವೆನಿಸುವುದು.

೪೦-೪೧. ಶ್ರೀಗಂಧದ ಚಕ್ಕೆಯನ್ನು ತಂದು ಚೆನ್ನಾಗಿ ಅರೆದು ಅದರ ಜೊತೆಗೆ ಪುಡಿಮಾಡಿದ ಸುವಾಸನೆಪುಡಿಯನ್ನೂ, (ಅಗರು) ಅಗಿಲನ ಪುಡಿಯನ್ನೂ ಸೇರಿಸಿ ಆದರಲ್ಲಿ ಆಗುವ ಹಸಿಯ ಗಂಧವು ಎರಡನೆಯದೆನಿಸುವುದು.

೪೨. ದೇವದಾರುಚಕ್ಕೆ, ಅಗರು, ಬ್ರಹ್ಮಸಾಲಮರದ ಹಾಲು, ಗಂಧದಮರ, ಪ್ರಿಯಾಳವೃಕ್ಷದ ಚಕ್ಕೆ, ಇವುಗಳೆಲ್ಲವನ್ನೂ ಸೇರಿಸಿ, ಆವಿಯ ಮೂಲಕ ಸಾರವನ್ನು ತೆಗೆದು ಸಿದ್ಧಪಡಿಸಿರುವ ರಸವು, ಅಗ್ನಿಯಿಂದ ಸುಡಲ್ಪಟ್ಟು ತೆಗೆವಿರುವ ಕಾರಣ ದಾಹಾಕರ್ಷಿತವೆನಿಸಿಕೊಳ್ಳುವುದು. ಇದು ಮೂರನೆಯ ವಿಧವಾದ ಗಂಧವೆಂದು ತಿಳಿಯಬೇಕು.

೪೩-೪೪. ಶ್ರೀಗಂಧದ ಚಕ್ಕೆ, ಕರವೀರ, ಬಿಲ್ವಪತ್ರೆ, ತಿಲಕಮರದ ಚಕ್ಕೆ, ಇವೇ ಮೊದಲಾದ ಮರಗಳ ಚಕ್ಕೆಯನ್ನು ತೆಗೆದುಕೊಂಡು ಅವುಗಳನ್ನು ಕುಟ್ಟಿ,

ಪೃಥ್ವೀನಾಂ ರಸೋ ಯೋಽಸೌ ನಃಪೀಡ್ಯ ಪರಿಗೃಹ್ಯತೇ ।
ಸ ಸಮ್ಮರ್ದೋದ್ಭವೋ ಗಂಧಃ ಸಮ್ಮರ್ದಜ ಇತೀಷ್ಯತೇ ॥ ೪೪ ॥

ಮೃಗನಾಭಿಸಮುದ್ಭೂತಂ ತತ್ಕೋಶೋದ್ಭವ ಏವ ವಾ ।
ಗಂಧಃ ಪ್ರಾಣ್ಯಂಗಜಃ ಪ್ರೋಕ್ತೋ ಮೋದದಃ ಸ್ವರ್ಗವಾಸಿನಾಂ ॥ ೪೫ ॥

ಕರ್ಪೂರಗಂಧಸಾರಾದ್ಯಾಃ ಕ್ಷೋದೇ ಘೃಷ್ಟೇ ಚ ಸಂಸ್ಥಿತಾಃ ।
ಚಂದ್ರಭಾಗಾದಯಶ್ಚಾಪಿ ರಸೇ ಪಂಕೇ ಚ ಸಂಗತಾಃ ॥ ೪೬ ॥

ಗಂಧಸಾರಂ ಸರ್ವರಸಂ ಗಂಧಾಢ್ಯೌ ಚ ಪ್ರಯುಜ್ಯತೇ ।
ಮೃಗನಾಭಿರ್ಭವೇತ್ ಘೃಷ್ಟಶ್ಚೋಲೇನೋರ್ಽನ್ಯಸ್ಯ ಯೋಗತಃ ॥ ೪೭ ॥

ಏವಂ ಸರ್ವಂ ತು ಸರ್ವತ್ರ ಗಂಧೋ ಭವತಿ ಪಂಚಧಾ ।
ಘೃಷ್ಟಾದಿಭಾವಾದನ್ಯೋನ್ಯಂ ಗಂಧಃ ಪ್ರೀತಿಕರಃ ಪರಃ ॥ ೪೮ ॥

ರಸವನ್ನು ತೆಗೆದುಕೊಂಡು ಸಿದ್ಧಮಾಡುವ ಗಂಧವು ಸಮ್ಮರ್ದಜವೆನಿಸಿಕೊಳ್ಳುವದು. ಇದು ನಾಲ್ಕನೆಯ ತರಹದ ಗಂಧವು.

೪೫. ಕಸ್ತೂರೀ ಮೃಗದ ನಾಭಿಯಲ್ಲಿ ಹುಟ್ಟಿದ, ಮತ್ತು ಕಸ್ತೂರೀ ಇರುವ ಚೀಲದಿಂದ ಹುಟ್ಟಿದ ಗಂಧದ್ರವ್ಯವು, ಪ್ರಾಣಿಯ ಅಂಗದಿಂದ ಹುಟ್ಟಿದ ಗಂಧವೆನಿಸುವುದು. ಅದು ಸ್ವರ್ಗವಾಸಿಗಳಾದ ದೇವತೆಗಳಿಗೆ ಸಂತೋಷವನ್ನುಂಟುಮಾಡುವುದು.

೪೬-೪೭. ಪಚ್ಚಕರ್ಪೂರ. ಗಂಧದ ರಸ, ಇವೇ ಮೊದಲಾದವುಗಳು, ಹುಡಿಯ ಜೊತೆಯಲ್ಲಿಯಾಗಲಿ, ಅರೆಯುವ ಪದಾರ್ಥಗಳ ಜೊತೆಯಲ್ಲಿಯಾಗಲಿ ಸೇರಿ ಉಪಯೋಗಿಸಲ್ಪಡುವುವು. ಚಂದ್ರಭಾಗವೇ ಮೊದಲಾದವುಗಳು ರಸದಲ್ಲಿಯಾಗಲಿ, ಅರೆದ ಹಸಿಯ ಗಂಧದ ಜೊತೆಯಲ್ಲಿಯಾಗಲಿ, ಸೇರುವುವು. ತೆಯಿದ ಗಂಧ ಮತ್ತು ಸುಗಂಧದ್ರವ್ಯಗಳ ರಸ, ಇವುಗಳನ್ನು ಯಾವ ಪದಾರ್ಥಗಳ ಮಿಶ್ರವೂ ಇಲ್ಲದೆ ಹಾಗೆಯೇ ಉಪಯೋಗಿಸಬಹುದು. ಕಸ್ತೂರಿಯು ಮಾತ್ರ ಅರೆದು ಪುಡಿಮಾಡಿ, ಇನ್ನೊಂದು ಪದಾರ್ಥದ ಜೊತೆಯಲ್ಲಿಯೇ ಉಪಯೋಗಿಸಲು ಯೋಗ್ಯವಾದುದು.

೪೮-೪೯. ಹೀಗೆ ಗಂಧವು ಯಾವಾಗಲೂ ಐದು ವಿಧಗಳೆಂದು ನಿರ್ಣಯವು. ಅರೆದು ಮಾಡುವ ಗಂಧವು ಮಿಶ್ರವಸ್ತುಗಳಿಂದ ಕೂಡಿ, ಸುವಾಸನೆಯಿಂದ ಪ್ರೀತಿಯನ್ನುಂಟುಮಾಡುವುದು. ಗಂಧಗಳಲ್ಲಿ ಅನೇಕ ಭೇದಪ್ರಭೇದಗಳಿದ್ದರೂ ಎಲ್ಲವೂ

ಗಂಧಸ್ಯ ವಿಸ್ತರೋ ಭೇದಃ ಪ್ರೋಕ್ತಃ ಕಾಲೀಯಕಾದಯಃ ।
ಸರ್ವಃ ಪಂಚವಿಧೇಷ್ವೇವ ಪ್ರವಿಷ್ಟೋ ಭವತಿ ಕ್ಷಣಾತ್ ॥ ೪೯ ॥

ಗಂಧೋ ಮಲಯಜೋ ಯಸ್ತು ದೈವೇ ಪ್ರೈತ್ರ್ಯೇ ಚ ಸಂಮತಃ ।
ತಸ್ಯ ಪಂಕೋ ರಸೋ ವಾಪಿ ಚೂರ್ಣೋ ವಾ ವಿಷ್ಣುತುಷ್ಟಿದಃ । ॥ ೫೦ ॥

ಸರ್ವೇಷು ಗಂಧಜಾತೇಷು ಪ್ರಶಸ್ತೋ ಮಲಯೋದ್ಭವಃ ।
ತಸ್ಮಾತ್ಸರ್ವಪ್ರಯತ್ನೇನ ದದ್ಯಾನ್ಮಲಯಜಂ ಸದಾ ॥ ೫೧ ॥

ಶೈಷ್ಣಾಗರುಃ ಸಕರ್ಪೂರಃ ಸಹಿತೋ ಮಲಯೋದ್ಭವೈಃ ।
ವೈಷ್ಣವೀಪ್ರೀತಿದೋ ಗಂಧಃ ಕಾಮಾಖ್ಯಾಯಾಶ್ಚ ಭೈರವ ॥ ೫೨ ॥

ಕುಂಕುಮಾಗರುಕಸ್ತೂರೀಚಂದ್ರಭಾಗೈಃ ಸಮೀಕೃತೈಃ ।
ತ್ರಿಪುರಾಪ್ರೀತಿದೋ ಗಂಧಸ್ತಥಾ ಚಂಡ್ಯಾಶ್ಚ ಶಸ್ಯತೇ ॥ ೫೩ ॥

ಈ ಐದು ವಿಧವಾದ ಗಂಧಭೇದಗಳಲ್ಲಿಯೇ ಅಡಕವಾಗಿರುವವು. ಈ ವಿಷಯವು ಕಾಲೀಯಕವೇ ಮೊದಲಾದ ಕಲ್ಪದಲ್ಲಿ ವಿಸ್ತಾರವಾಗಿ ಹೇಳಲ್ಪಟ್ಟಿರುವುದು.

೫೦. ದೇವರ ಪೂಜೆಯಲ್ಲಿಯೂ, ಪಿತೃಗಳ ಕರ್ಮದಲ್ಲಿಯೂ ಸಹ ಉಪಯೋಗಿಸುವ ಶ್ರೀಗಂಧವೂ, ಗಂಧರಸವೂ ಅಥವಾ ಗಂಧದ ಹುಡಿಯೂ ವಿಷ್ಣುವಿಗೆ ಸಂತೋಷವನ್ನುಂಟುಮಾಡುವುದು.

೫೧. ಎಲ್ಲಾವಿಧವಾದ ಸುಗಂಧದ್ರವ್ಯಗಳಲ್ಲಿಯೂ ಶ್ರೀಗಂಧವೇ ಉತ್ತಮವಾದುದು. ಆದುದರಿಂದ ವಿಶೇಷಪ್ರಯತ್ನದಿಂದ ಶ್ರೀಗಂಧವನ್ನೇ ಯಾವಾಗಲೂ ಧರಿಸಬೇಕು.

೫೨. ಎಲೈ ಭೈರವನೇ ಕೇಳು:— ಶ್ರೀಗಂಧ, ಪಚ್ಚಕರ್ಪೂರ, ಇವುಗಳಿಂದ ಕೂಡಿದ ಗಂಧವು ವೈಷ್ಣವೀದೇವಿ, ಕಾಮಾಖ್ಯಾದೇವಿ ಇವರುಗಳಿಗೆ ಪ್ರೀತಿಯನ್ನುಂಟುಮಾಡುವುದು.

೫೩. ಕುಂಕುಮ, ಕೇಸರಿ, ಅಗರು, ಕಸ್ತೂರಿ, ಪಚ್ಚಕರ್ಪೂರ ಇವುಗಳನ್ನು ಸಮವಾಗಿ ಸೇರಿಸಿ ಸಿದ್ಧಮಾಡಿದ ಗಂಧವು ತ್ರಿಪುರಾದೇವಿಗೂ, ಮತ್ತು ಚಂಡಿಕಾದೇವಿಗೂ ಸಹ ಪ್ರೀತಿಯನ್ನುಂಟುಮಾಡುವುದು.

ದೈವತೋದ್ದೇಶಪೂರ್ವೇಣ ಗಂಧಂ ಸಂಪೂಜ್ಯ ಸಾಧಕಃ ।
ದೇವಾಯೇಷ್ಟಾಯ ನಿತರೇತ್ಸರ್ವಸಿದ್ಧಿಪ್ರದಂ ಸದಾ ॥ ೫೪ ॥

ಗಂಧೇನ ಲಭತೇ ಕಾಮಾನ್ ಗಂಧೋ ಧರ್ಮಪ್ರದಃ ಸದಾ ।
ಅರ್ಥಾನಾಂ ಸಾಧಕೋ ಗಂಧೋ ಗಂಧೇ ಮೋಕ್ಷಃ ಪ್ರತಿಷ್ಠಿತಃ ॥ ೫೫ ॥

ಅಯಂ ವಾಂ ಕಥಿತೋ ಗಂಧಃ ಪುತ್ರೌ ವೇತಾಲಭೈರವೌ ।
ಪುಷ್ಪಾಣಿ ದೇವ್ಯಾ ವೈಷ್ಣವ್ಯಾಃ ಪ್ರಿಯಾಣಿ ಶೃಣು ಸಂಪ್ರತಿ ॥ ೫೬ ॥

ವಕುಲೈಶ್ಚೈವ ಮಂದಾರೈಃ ಕುಂದಪುಷ್ಪೈಃ ಕುರುಂಟಕೈಃ ।
ಕರವೀರಾರ್ಕಪುಷ್ಪೈಶ್ಚ ಶಾಲ್ಮಲೈಶ್ಚಾಪರಾಜಿತೈಃ ॥ ೫೭ ॥

ದಮನೈಃ ಸಿಂಧುವಾರೈಶ್ಚ ಸುರಭೀಕುರುವಕೈಸ್ತಥಾ ।
ಲತಾಭಿರ್ಬ್ರಹ್ಮವೃಕ್ಷಸ್ಯ ದೂರ್ವಾಂಕುರೈಶ್ಚ ಕೋಮಲೈಃ ॥ ೫೮ ॥

ಮಂಜರೀಭಿಃ ಕುಶಾನಾಂ ಚ ಬಿಲ್ವಪತ್ರೈಃ ಸುಶೋಭನೈಃ ।
ಪೂಜಯೇದ್ವೈಷ್ಣವೀಂ ದೇವೀಂ ಕಾಮಾಖ್ಯಾಂ ತ್ರಿಪುರಾಂ ತಥಾ ॥ ೫೯ ॥

---

೫೪. ಸಾಧಕನಾದವನು ದೇವತೆಗೆ ಅರ್ಪಿಸುವ ಉದ್ದೇಶದಿಂದ ಮೊದಲು ಗಂಧವನ್ನು ಪೂಜಿಸಿ, ಅದನ್ನು ತನ್ನ ಇಷ್ಟದೇವತೆಗೆ ಅರ್ಪಿಸಬೇಕು. ಹೀಗೆ ಮಾಡಿದರೆ ಸರ್ವ ಸಿದ್ಧಿಯೂ ಲಭಿಸುವುದು.

೫೫. ತನ್ನ ಇಷ್ಟದೇವತೆಗೆ ಗಂಧವನ್ನು ಸಮರ್ಪಿಸುವುದರಿಂದ ಸಾಧಕನು ತನ್ನ ಇಷ್ಟಾರ್ಥಗಳೆಲ್ಲವನ್ನೂ ಪಡೆಯುವನು. ಅಲ್ಲದೆ ಇದು ಧರ್ಮ, ಅರ್ಥ, ಕಾಮ ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನೂ ಸಾಧಿಸಿಕೊಡುವುದು.

೫೬. ಎಲೈ ಪುತ್ರರೇ ಕೇಳಿ, ಗಂಧಸಮರ್ಪಣಕ್ರಮವನ್ನು ನಿಮಗೆ ವಿಸ್ತಾರವಾಗಿ ತಿಳಿಸಿದುದಾಯಿತು. ಇನ್ನು ವೈಷ್ಣವೀದೇವಿಗೆ ಅರ್ಪಿಸುವ ಪುಷ್ಪಗಳ ವಿವರವನ್ನು ತಿಳಿಸುವೆನು.

೫೭-೫೯. ವಕುಳದ ಹೂವು, ಮಂದಾರಪುಷ್ಪ, ಮಲ್ಲಿಗೆಹೂವು, ಕೊರಟೆಗೆ ಹೂವು, ಕಣಗಲೆಹೂವು, ಎಕ್ಕದಹೂವು, ಬೂರಗದಹೂವು, ಅಪರಾಜಿತಾಹೂವು, ದವನ, ಕಂಚುವಾಳದಹೂವು, ಜಾಜೀಹೂವು, ಗೋರಂಟಿಯಹೂವು, ಬ್ರಹ್ಮವೃಕ್ಷದ ಬಳ್ಳಿ, ಎಳೆಯದಾದ ಗರುಕೆಯ ಮೊಳಕೆಗಳು, ದರ್ಭೆಯ ಗೊಂಚಲುಗಳು, ಮಂಗಳಕರವಾದ ಬಿಲ್ವಪತ್ರೆ, ಇವುಗಳಿಂದ ವೈಷ್ಣವೀದೇವಿಯನ್ನೂ, ಕಾಮಾಖ್ಯಾದೇವಿಯನ್ನೂ ತ್ರಿಪುರಾದೇವಿಯನ್ನೂ ಸಹ ಪೂಜಿಸಬೇಕು.

ಅನ್ಯಾಶ್ಚ ಯಾಃ ಶಿವಾಪ್ರೀತ್ಯೈ ಜಾಯಂತೇ ಪುಷ್ಪಜಾತಯಃ ।
ತಾ ಇಮಾಃ ಶೃಣು ಕಥ್ಯಂತೇ ಮಯಾ ವೇತಾಲಭೈರವ ॥ ೬೦ ॥

ಮಾಲತೀ ಮಲ್ಲಿಕಾ ಜಾತೀ ಯೂಥಿಕಾ ಮಾಧವೀ ತಥಾ ।
ಪಾಟಲಾ ಕರವೀರಶ್ಚ ಯವಾನರ್ಕಾರಿಕಾ ತಥಾ ॥ ೬೧ ॥

ಕುಬ್ಜಕಸ್ತಗರಶ್ಚೈವ ಕರ್ಣಿಕಾರೋಽಥ ರೋಚನಾ ।
ಚಂಪಕಾಮ್ರಾತಕೌ ಬಾಣೋ ವರ್ವರಾ ಮಲ್ಲಿಕಾ ತಥಾ ॥ ೬೨ ॥

ಅಶೋಕೋ ಲೋಧ್ರತಿಲವಾಟರೂಷವೀರುಷಕೌ ।
ಶಮೀಪುಷ್ಪಂ ಚ ದ್ರೋಣಶ್ಚ ಪದ್ಮೋತ್ಪಲಬಕಾರುಣಾಃ ॥ ೬೩ ॥

ಶ್ವೇತಾರುಣೈಸ್ತ್ರಿಸಂಧ್ಯೇ ಚ ಪಲಾಶಃ ಖದಿರಸ್ತಥಾ ।
ವನಮಾಲಾಥ ಸೇವಂತೀ ಕುಮುದೋಽಥ ಕದಂಬಕಃ ॥ ೬೪ ॥

ಚಕ್ರಂ ಕೋಕನದಂ ಚೈವ ಭಂಡಿಲೋ ಗಿರಿಕರ್ಣಿಕಾ ।
ನಾಗಕೇಸರಪುನ್ನಾಗೌ ಕೇತಕ್ಯಾಂಜಲಿಕಾ ತಥಾ ॥ ೬೫ ॥

---

೬೦. ಮೇಲೆ ಹೇಳಿದ ಹೂವುಗಳಲ್ಲದೆ ದೇವಿಗೆ ಪ್ರೀತಿಯನ್ನುಂಟುಮಾಡುವ ಬೇರೆ ಪುಷ್ಪಗಳಿರುವವು. ಅವುಗಳನ್ನು ಹೇಳುವೆನು ಕೇಳು. ಅವುಗಳಿಂದ ದೇವಿಯನ್ನು ಅವಶ್ಯವಾಗಿ ಅರ್ಚಿಸು.

೬೧-೬೩. ಜಾಜೀ, ಮಲ್ಲಿಗೆ, ಜಾತೀ, ಸೇವಂತಿಗೆ, ಮಾಧವೀ, ಪಾದರೀ, ಕಣಿಗಲೆ, ಯವ, ನರ್ಕಾರಿಕಾ, ಕುಬ್ಜಕ, ತಗರ, ಕರ್ಣಿಕಾರ, ರೋಚನಾ, ಸಂಪಿಗೆ, ಆಮ್ರಾತಕ, ಬಾಣ, ವರ್ವರಾ, ಮಲ್ಲಿಗೆ, ಅಶೋಕ, ಜಾಲಿ, ತಿಲಕ, ಆಟರೂಷ, ಬಾಗೆ, ಬನ್ನಿ, ತುಂಬೆ, ತಾವರೆ, ನೈದಿಲೆ, ಬಕಪುಷ್ಪ, ಅರುಣಪುಷ್ಪ ಈ ಪುಷ್ಪಗಳು ದೇವೀಪೂಜೆಗೆ ಯೋಗ್ಯವಾದವುಗಳು.

೬೪-೬೬. ಇವಲ್ಲದೆ, ಬಿಳೀ ಅರುಣಪುಷ್ಪದಿಂದ ಮೂರು ಸಂಧ್ಯಾಕಾಲಗಳಲ್ಲಿಯೂ ದೇವಿಯನ್ನು ಪೂಜಿಸಬೇಕು. ಮತ್ತುಗದಹೂವು, ಕಗ್ಗಲೀಹೂವು, ವನಮಾಲೆ, ಶಾವಂತಿಗೇಹೂವು, ಕುಮುದಹೂವು, ಕದಂಬಪುಷ್ಪ, ಚಕ್ರಪುಷ್ಪ, ಕೆಂಪು ನೈದಿಲೆಹೂವು, ಭಂಡಿಲಪುಷ್ಪ, ಗಿರಿಕರ್ಣಿಕಾಪುಷ್ಪ, ನಾಗಕೇಸರದಹೂವು, ಪುನ್ನಾಗ

ದೋಹದಾ ಬೀಜಪೂರಶ್ಚ ನಮೇರುಃ ಶಾಲ ಏವ ಚ ।
ತ್ರಪುಷೀ ಚಂಡಬಿಲ್ವಶ್ಚ ಘಂಟೇ ಪಂಚವಿಧಾಸ್ತಥಾ ॥ ೬೬ ॥

ಏವಮಾದ್ಯುಕ್ತಕುಸುಮೈಃ ಪೂಜಯೇದ್ವರದಾಂ ಶಿವಾಂ ।
ಅಪಾಮಾರ್ಗಸ್ಯ ಪತ್ರಂ ತು ತತೋ ಭೃಂಗಾರಪತ್ರಕಂ ॥ ೬೭ ॥

ತತೋಽಪಿ ಗಂಧಿನೀಪತ್ರಂ ಬಲಾಹಕಮತಃ ಪರಂ ।
ತಸ್ಮಾತ್ಪದಿರಪತ್ರಂ ತು ವಂಜುಲಸ್ತಬಕಸ್ತಥಾ ।
ಆಮ್ರಂ ತು ಬಕಗುಚ್ಛಂ ತು ಜಂಬೂಪತ್ರಂ ತತಃ ಪರಂ ॥ ೬೮ ॥

ಬೀಜಪೂರಸ್ಯ ಪತ್ರಂ ತು ತತೋಽಪಿ ಕುಶಪತ್ರಕಂ ।
ದೂರ್ವಾಂಕುರಂ ತತಃ ಪ್ರೋಕ್ತಂ ಶಮೀಪತ್ರಮತಃ ಪರಂ ॥ ೬೯ ॥

ಪತ್ರಮಾಮಲಕಂ ತಸ್ಮಾದ್ದಾಮನಂ ಪತ್ರಮುಂತತಃ ।
ಸರ್ವತೋ ಬಿಲ್ವಪತ್ರಂ ತು ದೇವ್ಯಾಃ ಪ್ರೀತಿಕರಂ ಮತಂ ॥ ೭೦ ॥

ಪುಷ್ಪಂ ಕೋಕನದಂ ಪದ್ಮಂ ಯವಾ ಬಂಧೂಕ ಏವ ಚ ।
ಪತ್ರಂ ಬಿಲ್ವಸ್ಯ ಸರ್ವೇಭ್ಯೋ ವೈಷ್ಣವೀತುಷ್ಟಿದಂ ಮತಂ ॥ ೭೧ ॥

ಪುಷ್ಪ, ತಾಳೆಯಹೂವು, ಅಂಜಲಿಕಾ ಎಂಬ ಹೂವು, ದೋಹದಪುಷ್ಪ, ಬೀಜಪೂರ ಪುಷ್ಪ, ನಮೇರುಪುಷ್ಪ, ಮತ್ತಿಯಹೂವು, ತ್ರಪುಷೀಪುಷ್ಪ, ಚಂಡುಹೂವು, ಬಿಲ್ವಪತ್ರೆ ಐದುವಿಧದ ಘಂಟೆಯ ಆಕಾರದ ಹೂವು, ಇವೇ ಮೊದಲಾದ ಶಾಸ್ತ್ರೋಕ್ತವಾದ ಹೂವುಗಳಿಂದ ವರಪ್ರದಾಯಿನಿಯಾದ ದೇವಿಯನ್ನು ಪೂಜಿಸಬೇಕು.

೬೭-೬೯. ಇನ್ನು ದೇವಿಗೆ ಪ್ರೀತಿಕರವಾದ ಪತ್ರಗಳನ್ನು ಹೇಳುವೆನು:— ಉತ್ತರಣೆಯಪತ್ರ, ಗರಗದಪತ್ರ, ಗಂಧಿನೀಪತ್ರ, ಬಲಾಹಕಪತ್ರ, ಕಗ್ಗಲಿಯಪತ್ರ, ವಂಜುಲದ ಗೊಂಚಲು, ಮಾವಿನಸೊಪ್ಪು, ಬಕಪತ್ರ, ನೇರಳೆಯಪತ್ರ, ಬೀಜಪೂರ ಪತ್ರ, (ಮಾದಳೆಯಪತ್ರ) ದರ್ಭಪತ್ರ, ನೆಲ್ಲಿಯಪತ್ರ, ಗರಿಕೆಯಚಿಗುರು, ಬನ್ನಿಯ ಪತ್ರ, ದವನದಪತ್ರ, ಇವುಗಳು ದೇವಿಗೆ ಪ್ರೀತಿಕರಗಳು.

೭೦-೭೧. ಎಲ್ಲಕ್ಕಿಂತಲೂ ಬಿಲ್ವಪತ್ರೆಯು ದೇವಿಗೆ ಪ್ರೀತಿಕರವಾಗಿರುವುದು. ಕೆಂಪುನೈದಲೆಯಹೂವು, ತಾವರೆಹೂವು, ಮಂತ್ರಾಕ್ಷತೆ, ಬಿಂದಿಗೆಯಹೂವು, ಬಿಲ್ವಪತ್ರೆ ಇವುಗಳು ವೈಷ್ಣವೀದೇವಿಗೆ ಪ್ರೀತಿಯನ್ನುಂಟುಮಾಡುವುವುಗಳೆಂದು ನಿಶ್ಚಯಿಸಲ್ಪಟ್ಟಿರುತ್ತದೆ.

ಸರ್ವೇಷಾಂ ಪುಷ್ಪಜಾತೀನಾಂ ರಕ್ತಪದ್ಮಮಿಹೋತ್ತಮಂ ।
ರಕ್ತಪದ್ಮಸಹಸ್ರೇಣಾಂ ಯೋ ಮಾಲಾಂ ಸಂಪ್ರಯಚ್ಛತಿ ॥ ೭೨ ॥

ಭಕ್ತ್ಯಾಯುಕ್ತೋ ಮಹಾದೇವ್ಯೈ ತಸ್ಯ ಪುಣ್ಯಫಲಂ ಶೃಣು ।
ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ॥ ೭೩ ॥

ಸ್ಥಿತ್ವಾ ಮಮ ಪುರೇ ಶ್ರೀಮಾನ್ ತತೋ ರಾಜಾ ಕ್ಷಿತೌ ಭವೇತ್ ।
ಪತ್ರೇಷು ಬಿಲ್ವಪತ್ರಂ ತು ದೇವೀಪ್ರೀತಕರಂ ಮತಂ ॥ ೭೪ ॥

ತತ್ಸಹಸ್ರಕೃತಾ ಮಾಲಾ ಪೂರ್ವವತ್ಫಲದಾ ಭವೇತ್ ।
ಕಿಂಚಾತ್ರ ಬಹುನೋಕ್ತೇನ ಸಾಮಾನ್ಯೇನೇದಮುಚ್ಯತೇ ॥ ೭೫ ॥

ಉಕ್ತಾನುಕ್ತೈಸ್ತಥಾ ಪುಷ್ಪೈರ್ಜಲಜೈಃ ಸ್ಥಲಸಂಭವೈಃ ।
ಪತ್ರೈಃ ಸರ್ವೈರ್ಯಥಾಲಾಭಂ ಸರ್ವೌಷಧಿಗಣೈರಪಿ ॥ ೭೬ ॥

೭೨-೭೩. ಎಲ್ಲಾ ಹೂವುಗಳಿಗಿಂತಲೂ, ಕೆಂಪುತಾವರೆಯ ಹೂವು ಈ ಪೂಜಾ ವಿಷಯದಲ್ಲಿ ಉತ್ತಮವಾದದ್ದು. ಕೆಂಪುತಾವರೆಯ ಒಂದುಸಾವಿರ ಹೂವಿನ ಮಾಲೆಯನ್ನು, ಯಾವನು ಭಕ್ತಿಯಿಂದ ಮಹಾದೇವಿಗೆ ಆರ್ಪಿಸುವನೋ, ಅವನ ಪುಣ್ಯಫಲವನ್ನು ಹೇಳುವೆನು, ಕೇಳು. ನೂರುಸಾವಿರಕೋಟಿ ಕಲ್ಪಗಳವರೆಗೂ ಸಹ ನನ್ನ ಪಟ್ಟಣದಲ್ಲಿ ಸುಖದಿಂದಿದ್ದು, ಅನಂತರ ಭೂಮಿಯಲ್ಲಿ ರಾಜನಾಗುವನು.

೭೪-೭೫. ಪತ್ರೆಗಳಲ್ಲಿ ಬಿಲ್ವಪತ್ರೆಯು ದೇವಿಗೆ ಪ್ರೀತಿಕರವಾದುದೆಂದು ನಿಶ್ಚಯಿಸಲ್ಪಟ್ಟಿರುವುದು. ಅಂತಹ ಸಹಸ್ರ ಬಿಲ್ವಪತ್ರೆಗಳಿಂದ ಮಾಡಲ್ಪಟ್ಟ ಮಾಲಿಕೆಯು ಹಿಂದಿನಂತೆಯೇ ಫಲವನ್ನು ಕೊಡುವುದು. ಮತ್ತು ಬಹಳ ಹೇಳಿದ್ದರಿಂದೇನು? ಸಾಮಾನ್ಯವಾಗಿ ಇದನ್ನು ಹೇಳಿರುವೆನು.

೭೬. ಈಗ ಹೇಳಿರುವ, ಮತ್ತು ಹೇಳದೆ ಇರುವ, ನೀರಿನಲ್ಲಿಯೇ ಹುಟ್ಟಿ ಬೆಳೆದು ಅಥವಾ ನೆಲದಲ್ಲಿಯೇ ಹುಟ್ಟಿಬೆಳೆದು ಇರುವ ಹೂವುಗಳಿಂದಲೂ, ಎಷ್ಟು ಸಾಧ್ಯವೋ ಅಥವಾ ಎಷ್ಟು ದೊರಕುವುದೋ ಅಷ್ಟುವಿಧವಾದ ಮಾಲಿಕೆಗಳಿಂದಲೂ, ಕಾಡಿನಲ್ಲಿ ಬೆಳೆಯುವ ಎಲ್ಲಾವಿಧವಾದ ಹೂವುಗಳಿಂದಲೂ, ಪತ್ರಗಳಿಂದಲೂ ದೇವಿಯನ್ನು ಪೂಜಿಸಬೇಕು.

ವನಜೈಃ ಸರ್ವಪುಷ್ಪೈಶ್ಚ ಪತ್ರೈರಪಿ ಶಿವಾಂ ಯಜೇತ್ ।
ಪೂಜಯೇತ್ಪರಮೇಶಾನೀಂ ಪುಷ್ಪಾಭಾವೇಽಪಿ ಪತ್ರಕೈಃ ॥ ೭೭ ॥

ಪತ್ರಾಣಾಮಪ್ಯಭಾವೇ ತು ತೃಣಗುಲ್ಮೌಷಧಾದಿಭಿಃ ।
ಔಷಧೀನಾಮಭಾವೇ ತು ತತ್ಫಲೈರಪಿ ಪೂಜಯೇತ್ ॥ ೭೮ ॥

ಅಕ್ಷತೈರ್ವಾ ಜಲೈರ್ವಾಪಿ ತದಭಾವೇ ತು ಸರ್ಷಪೈಃ ।
ಸಿತೈಸ್ತಸ್ಯಾಪ್ಯಲಾಭೇ ತು ಮಾನಸೀಂ ಭಕ್ತಿಮಾಚರೇತ್ ॥ ೭೯ ॥

ರಾಜಿದಂತಕಪತ್ರೈಶ್ಚ ಪುಷ್ಪೈಃಪುಷ್ಪೈರಪಿ ಪೂಜಯೇತ್ ।
ತುಲಸೀಕುಸುಮೈಃ ಪತ್ರೈರರ್ಚಯೇತ್ ಶ್ರಿವಿವೃದ್ಧಯೇ ॥ ೮೦ ॥

ಪುರಶ್ಚರಣಕಾರ್ಯೇಷು ಬಿಲ್ವಪತ್ರಯುತೈಸ್ತಿಲೈಃ ।
ಸಾಕ್ಷತೈಃ ಸಘೃತೈರ್ವಾಪಿ ಶಿವಾಮುದ್ದಿಶ್ಯ ಯತ್ನತಃ ।
ಜುಹುಯಾದನಲಂ ವೃದ್ಧಂ ಸಂಸ್ಕೃತಂ ಕಾಮವೃದ್ಧಯೇ ॥ ೮೧ ॥

೭೭-೭೮. ಶ್ರೇಷ್ಠ ದೇವತೆಯಾದ ಪರಮೇಶ್ವರೀದೇವಿಯನ್ನು, ಹೂವಿಲ್ಲದಿದ್ದರೆ ಗರಿಕೆ, ಪೊದೆಯಾಗಿ ಬೆಳೆಯುವ ಮಾಲಿಕೆಯೇ ಮೊದಲಾದವುಗಳಿಂದಲೂ, ಅವುಗಳೂ ಇಲ್ಲದಿದ್ದರೆ ಕೇವಲ ಹಣ್ಣುಕಾಯಿಗಳಿಂದಲೂ ಪೂಜಿಸಬೇಕು.

೭೯. ಅವುಗಳೂ ದೊರಕದಿದ್ದರೆ ಮಂತ್ರಾಕ್ಷತೆಗಳಿಂದಾಗಲಿ, ನೀರಿನಿಂದಾಗಲಿ, ಅಮೂ ಸಿಕ್ಕದಿದ್ದರೆ ಬಿಳಿಯ ಸಾಸುವೆಯಿಂದಾಗಲಿ ಪೂಜಿಸಬೇಕು. ಅದೂ ಸಿಕ್ಕದಿದ್ದರೆ ಮನಃಪೂರ್ವಕವಾದ ಭಕ್ತಿಯಿಂದಲೇ ಪೂಜಿಸಬೇಕು.

೮೦. ಮುತ್ತಿನಚಿಪ್ಪಿನ ಅಥವಾ ದಂತಕಪತ್ರಗಳು, ಪುಷ್ಪಗಳು, ತುಲಸಿಯ ಪತ್ರ ಇವುಗಳಿಂದಲೂ ಪೂಜಿಸಬಹುದು. ಹೀಗೆ ಪೂಜಿಸುವುದರಿಂದ ಐಶ್ವರ್ಯಾಭಿವೃದ್ಧಿಯಾಗುವುದು.

೮೧. ಪುರಶ್ಚರಣ ಮಾಡುವಾಗ ಎಳ್ಳು, ಬಿಲ್ವಪತ್ರೆ, ಮಂತ್ರಾಕ್ಷತೆ, ತುಪ್ಪ, ಇವುಗಳಿಂದ, ಸಂಸ್ಕೃತವಾದ ಪ್ರಜ್ವಲಿಸುವ ಅಗ್ನಿಯಲ್ಲಿ ದೇವಿಯನ್ನುದ್ದೇಶಿಸಿ ಹೋಮವನ್ನು ಮಾಡಬೇಕು. ಇದರಿಂದ ಇಷ್ಟಸಿದ್ಧಿಯಾಗುವುದು.

ಸಂಕಲ್ಪಿತಃ ಕಾಮಸಿದ್ಧ್ಯೈ ಸಂಖ್ಯಯಾ ಯಃ ಕೃತೋ ಜಪಃ ।
ತದಂತೇ ಪೂಜನಂ ಯತ್ತು ವಿಹಿತಂ ಕ್ರಿಯತೇ ದ್ವಿಜೈಃ ॥ ೮೨ ॥

ಪುರಶ್ಚರಣಸಂಜ್ಞಂ ತು ಕೀರ್ತಿತಂ ದ್ವಿಜಸಪ್ತಮೈಃ ।
ತಸ್ಮಿನ್ ಪುರಾಣಕೇ ಪೂರ್ವಂ ಪೂರ್ವೋಕ್ತೈರ್ವಿಸ್ತರೋದಿತೈಃ ॥ ೮೩ ॥

ವಿಧಾನೈಃ ಪೂಜಯೇದ್ದೇವೀಂ ಕಾಮಾಖ್ಯಾಂ ವೈಷ್ಣವೀಮಪಿ ।
ಯಥಾ ಸಂಭವಮೇವಾತ್ರ ದದ್ಯಾತ್ ಹೋಡಶ ಸಾಧಕಃ ॥ ೮೪ ॥

ಉಪಚಾರಾಂಸ್ತಥೈವೋಕ್ತಾನ್ ವಿಧಿಕೃತ್ಯಾನ್ ನ ಲಂಘಯೇತ್ ।
ಸಂಪೂರ್ಣಂ ಪೂಜನಂ ಕೃತ್ವಾ ಕಲ್ಪೋಕ್ತಂ ಶತಧಾ ಜಪೇತ್ ॥ ೮೫ ॥

ಜಪಾಂತೇ ಜುಹುಯಾದಗ್ನೌ ಹೋಮಾಂತೇ ತು ಬಲಿತ್ರಯಂ ।
ತ್ರಿಜಾತೀಯಂ ತು ವಿತರೇತ್ತೌರ್ಯತ್ರಿಕಮುತಃ ಪರಂ ॥ ೮೬ ॥

---

೮೨. ಪುರಶ್ಚರಣೆಯನ್ನು ಮಾಡುವಾಗ ಇಷ್ಟೇಸಂಖ್ಯೆಯ ಜಪವನ್ನು ಮಾಡುವೆನೆಂದು ನಿಶ್ಚಯಿಸಿ, ಅದರಂತೆ ಸಂಕಲ್ಪಮಾಡಿ ಜಪಮಾಡಬೇಕು. ಕ್ಲೃಪ್ತಸಂಖ್ಯೆಯಿಲ್ಲದೆ ಮಾಡುವ ಜಪವು ನಿರರ್ಥಕವು. ಆದುದರಿಂದ ಆರೀತಿ ಜಪಮಾಡಿ, ಕಡೆಯಲ್ಲಿ ವಿಧ್ಯುಕ್ತವಾಗಿ ಪೂಜೆ, ಹೋಮ, ತರ್ಪಣ, ಇವುಗಳನ್ನು ಮಾಡಬೇಕು. ಈ ವಿಧವಾವ ಜಪಕ್ರಮಕ್ಕೆ ಪುರಶ್ಚರಣವೆಂದು ದ್ವಿಜರು ಹೇಳುವರು.

೮೩. ಮೊದಲು ಈ ಪುರಾಣದಲ್ಲಿ ಹಿಂದೆ ಹೇಳಿದ ವಿಸ್ತಾರವಾದ ಕ್ರಮದಿಂದ ಕಾಮಾಖ್ಯಾ ದೇವಿಯನ್ನೂ, ವೈಷ್ಣವೀ ದೇವಿಯನ್ನೂ ಸಹ ಪೂಜಿಸಬೇಕು.

೮೪-೮೫. ಸಾಧಕನಾದವನು ಸಾಧ್ಯವಾದಮಟ್ಟಿಗೂ ಹದಿನಾರು ಉಪಚಾರಗಳನ್ನು ವಿಧ್ಯುಕ್ತವಾಗಿ ನಡೆಸಬೇಕು. ಈ ಗ್ರಂಥವಲ್ಲಿ ಹೇಳಿರುವ ಉಪಚಾರಗಳಲ್ಲಿ ಯಾವುದನ್ನೂ ಮೀರಬಾರದು. ಕಲ್ಪೋಕ್ತವಾದ ಕ್ರಮದಿಂದ ಪೂಜೆಯನ್ನು ಪೂರ್ತಿಮಾಡಿದನಂತರ ಒಂದುನೂರು ಜಪವನ್ನು ಮಾಡಬೇಕು.

೮೬. ಜಪ ಮುಗಿದಮೇಲೆ ಅಗ್ನಿಯಲ್ಲಿ ಹೋಮವನ್ನು ಮಾಡಬೇಕು. ಬೇರೆ ಬೇರೆ ತರಹದ ಮೂರು ಬಲಿಗಳನ್ನು ಕೊಟ್ಟನಂತರ, ವಾದ್ಯ, ನಾಟ್ಯ, ಸಂಗೀತ, ಗಳಿಂದ ದೇವಿಯನ್ನು ತೃಪ್ತಿಪಡಿಸಬೇಕು. ಇಲ್ಲಿ ಬೇರೆ ಬೇರೆ ತರಹದ ಮೂರು ಬಲಿಗಳು ಎಂದರೆ ಒಂದೇ ಜಾತಿಯ ಪ್ರಾಣಿಗಳಲ್ಲಿ ಮೂರನ್ನು ಬಲಿಕೊಡಬಾರದು,

ಪತ್ನೀ ಸ್ವಯಂ ವಾ ಭ್ರಾತಾ ವಾ ಗುರುರ್ವಾ ವಿನಿಯೋಜಯೇತ್ ।
ನೈವೇದ್ಯಾದೀನಿ ಸರ್ವಾಣಿ ಸುಪುತ್ರಃ ಶಿಷ್ಯ ಏವ ವಾ ॥ ೮೭ ॥

ಯಜ್ಞಾವಸಾನೇ ದದ್ಯಾತ್ತು ಗುರವೇ ದಕ್ಷಿಣಾಂ ಶುಭಾಂ ।
ಚಾಮೀಕರಂ ತಿಲಾ ಗಾಂ ಚ ತದಶಕ್ತೌ ತು ಚೇಲಕಂ ॥ ೮೮ ॥

ಅಷ್ಟಮ್ಯಾಂ ಶುಕ್ಲಪಕ್ಷಸ್ಯ ಬ್ರಹ್ಮಚಾರೀ ಜಿತೇಂದ್ರಿಯಃ ।
ನವಮ್ಯಾಂ ವಾ ಚತುರ್ದಶ್ಯಾಂ ಮಹಾದೇವ್ಯಾಃ ಪುರಶ್ಚರೇತ್ ॥ ೮೯ ॥

ಆದದ್ಯಾದ್ಗುರುವಕ್ತ್ರಾತ್ತು ವಿಧಿನಾ ವಿಸ್ತರೇಣ ತು ।
ಕಲ್ಪೋದಿತೇನ ಸಂಪೂಜ್ಯ ತಿಥಿಷ್ವೇತಾಸು ಭೈರವ ॥ ೯೦ ॥

ಸಂಪೂರ್ಣಪೂಜಾಂ ನೋ ಕೃತ್ವಾ ನ ದದ್ಯಾನ್ಮಂತ್ರಮಿಪ್ಸಿತಂ ।
ನ ಪುರಶ್ಚರಣಂ ವಾಪಿ ಕುರ್ಯಾತ್ಕೃತ್ವಾವಸೀದತಿ ॥ ೯೧ ॥

ಮೂರುಪ್ರಾಣಿಗಳು ಒಂದೂಂದೂ ಬೇರೆ ಬೇರೆ ಜಾತಿಯಾಗಿರಬೇಕು.—ಉದಾ ಮೂರು ಕೋಣಗಳನ್ನು ಕೊಡಬಾರದು. ಒಂದುಕೋಣ, ಒಂದುಜಿಂಕೆ, ಒಂದು ಆಡು ಈ ರೀತಿ ಮೂರು ವಿಧವಾದ ಪ್ರಾಣಿಗಳನ್ನು ಬಲಿಕೊಡಬೇಕು ಎಂದು ಅಭಿಪ್ರಾಯವು.

೮೭. ಹೆಂಡತಿ, ತಾನು, ಸಹೋದರ, ಗುರು, ಸತ್ಪುತ್ರ, ಶಿಷ್ಯ ಇವರಲ್ಲಿ ಯಾರಾದರೂ ನೈವೇದ್ಯ ಮೊದಲಾದ ಎಲ್ಲಾ ಪೂಜೆಯನ್ನೂ ಮಾಡಬಹುದು.

೮೮. ಪೂಜೆಯು ಮುಗಿದಮೇಲೆ ಗುರುವಿಗೆ ಉತ್ತಮವಾದ ದಕ್ಷಿಣೆಯನ್ನು ಕೊಡಬೇಕು. ಈ ದಕ್ಷಿಣೆಯು, ಚಿನ್ನ, ಎಳ್ಳು, ಹಸು, ಇವುಗಳಲ್ಲಿ ಯಾವುದಾದರೂ ಆಗಬಹುದು. ಇದು ಯಾವುದೂ ಇಲ್ಲದಿದ್ದರೆ, ವಸ್ತ್ರವನ್ನು ದಕ್ಷಿಣೆಯನ್ನಾಗಿ ಕೊಡಬೇಕು.

೮೯. ಶುಕ್ಲಪಕ್ಷದ ಅಷ್ಟಮಿಯಲ್ಲಿಯಾಗಲಿ, ಅಥವಾ ಚತುರ್ದಶಿಯಲ್ಲಿಯಾಗಲಿ ಬ್ರಹ್ಮಚರ್ಯವ್ರತದಿಂದ ಜಿತೇಂದ್ರಿಯನಾಗಿ, ಮಹಾದೇವಿಯ ಪುರಶ್ಚರಣೆಯನ್ನು ನಡೆಸಬೇಕು.

೯೦-೯೧. ಎಲೈ ಭೈರವನೇ ಕೇಳು:—ಗುರುವಾದವನು, ಕಲ್ಪದಲ್ಲಿ ಹೇಳಿದ ಕ್ರಮದಿಂದ ವಿಸ್ತಾರವಾಗಿ ಈ ತಿಥಿಗಳಲ್ಲಿ ಪೂಜೆಯನ್ನು ಮಾಡಿ, ಮಂತ್ರವನ್ನು ಉಪ

ನಿತ್ಯಪೂಜಾ ಸಾ ತು ಪುನಃ ಸಂಪೂರ್ಣಾ ಯದಿ ಶಕ್ಯತೇ ।
ಕಲ್ಪೋದಿತಂ ಪೂಜಯಿತುಂ ತದಾ ಕುರ್ಯಾದತಂದ್ರಿತಃ ॥ ೯೨ ॥

ನ ಚೇದ್ವಿಸ್ತರತಃ ಕರ್ತುಂ ದೇವ್ಯಾಃ ಪೂಜಾಂ ತು ಭೈರವ ।
ಕಲ್ಪೋಕ್ತಂ ವಾನ್ಯದೇವಸ್ಯ ತತ್ಕ್ರಮಂ ವಿಧಿರುಚ್ಯತೇ ॥ ೯೩ ॥

ಮಾರ್ಜನಾದ್ಯೈಸ್ತು ಸಂಸ್ಕೃತ್ಯ ಸ್ಥಂಡಿಲೇ ಮಂಡಲಂ ಲಿಖೇತ್ ।
ಪಾತ್ರಸ್ಯ ಪ್ರತಿಪತ್ತಿಂ ತು ಕೃತ್ವಾ ದಾಹಂ ಪ್ಲವಂ ತಥಾ ॥ ೯೪ ॥

ಧ್ಯಾಯೇದಾತ್ಮಾನಮಥ ಚ ಸಂಸ್ಕೃತ್ಯಾಂಗಸ್ವರೂಪತಃ ।
ಅಂಗುಷ್ಠಾದ್ಯಸ್ತ್ರಪರ್ಯಂತಂ ದ್ವಾದಶಾಂಗಸ್ಯ ಶುದ್ಧಯೇ ॥ ೯೫ ॥

ಅರ್ಘ್ಯಪಾತ್ರೇಷ್ವಧಾ ಜಪ್ತ್ವಾ ಉಪಚಾರಾಶ್ಚ ಪ್ರಸೇಚಯೇತ್ ।
ಆಧಾರಶಕ್ತಿಪ್ರಮುಖಂ ಮೂಲಪರ್ಣಾನಿ ಸ್ರಯುಜ್ಯ ಚ ॥ ೯೬ ॥

ದೇಶ ಮಾಡಬೇಕು. ಪೂಜೆಯನ್ನು ಪೂರ್ತಿಯಾಗಿ ಮಾಡದೆ ಇಷ್ಟವಾದ ಮಂತ್ರೋಪದೇಶವನ್ನು ಮಾಡಬಾರದು. ಪುರಶ್ಚರಣವನ್ನೂ ಮಾಡಬಾರದು. ಹೀಗೆ ಮಾಡದೆ ಇದ್ದರೆ ಹೀನಸ್ಥಿತಿಗೆ ಬರುವನು.

೯೨-೯೩. ಕಲ್ಪದಲ್ಲಿ ಹೇಳಿರುವ ಕ್ರಮಪ್ರಕಾರವಾಗಿ ದೇವಿಯ ಪೂಜೆಯನ್ನು ವಿಸ್ತಾರವಾಗಿ ಮಾಡಲು ಸಾಧ್ಯವಿಲ್ಲದಿದ್ದರೆ, ಸೋಮಾವಿತನವನ್ನು ಬಿಟ್ಟು, ತನ್ನ ಕೈಲಾದಮಟ್ಟಿಗೂ ನಿತ್ಯಪೂಜೆಯನ್ನೇ ಸಂಪೂರ್ಣವಾಗಿ ಮಾಡಿ, ಪುರಶ್ಚರಣೆಯನ್ನು ಮಾಡಬೇಕು. ಇತರ ದೇವತೆಗಳ ಪೂಜಾದಿಗಳಲ್ಲಿಯೂ ಇವೇ ಕ್ರಮವನ್ನೇ ಅನುಸರಿಸಬೇಕು.

೯೪. ಈಗ ಅದರ ವಿಧಿಯನ್ನು ಹೇಳುವೆನು ಕೇಳು:—ಶುದ್ಧವಾದ ಪ್ರದೇಶದಲ್ಲಿ ಮಾರ್ಜನೆಯೇ ಮೊದಲಾದ ಕರ್ಮಗಳಿಂದ ಸ್ಥಳಸಂಸ್ಕಾರವನ್ನು ಮಾಡಿ, ಪಾತ್ರ ಪ್ರತಿಪತ್ತಿ, ದಾಹ, ಪ್ಲವ, ಈ ಸಂಸ್ಕಾರಗಳನ್ನು ಮಾಡಿದನಂತರ, ಆತ್ಮಸಂಸ್ಕಾರವನ್ನು ಮಾಡಿಕೊಂಡು, ತನ್ನನ್ನು ಅಂಗನ್ಯಾಸರೂಪವಿಂದ ಧ್ಯಾನಮಾಡಬೇಕು.

೯೫-೯೬. ಪುರಶ್ಚರಣಮಾಡುವ ಮೂಲಮಂತ್ರದ ಅಕ್ಷರಗಳಿಂದ ಅಂಗುಷ್ಠಾಭ್ಯಾಂ ನಮಃ ಎಂದು ಪ್ರಾರಂಭಿಸಿ ಅಸ್ತ್ರಾಯ ಫಟ್ ಎನ್ನುವವರೆಗೆ ಆಗುವ ಹನ್ನೆರಡು ಅಂಗನ್ಯಾಸಕರನ್ಯಾಸಮಂತ್ರಗಳನ್ನು ಅಂಗಶುದ್ಧಿಸೋಸ್ಕಾರವಾಗಿ ಮಾಡಬೇಕು.

ಹೃದಿಸ್ಥಾಂ ದೇವತಾಂ ಧ್ಯಾತ್ವಾ ಬಹಿಃಕೃತ್ಯಂ ಚ ವಾಯುನಾ ।
ಆರೋಪ್ಯ ಮಂಡಲೇ ದದ್ಯಾದುಪಚಾರಾ ಯಥಾವಿಧಿ ॥ ೯೭ ॥

ಪೂಜಯಿತ್ವಾ ಷಡಂಗಾನಿ ತಥಾಷ್ಟೌ ದಲದೇವತಾಃ ।
ಪುಷ್ಪಾಂಜಲಿತ್ರಯಂ ದತ್ವಾ ಜಪ್ತ್ವಾ ಸ್ತುತ್ವಾ ಪ್ರಣಮ್ಯ ಚ ॥ ೯೮ ॥

ಮುದ್ರಾಮಗ್ರೇ ಪ್ರದರ್ಶ್ಯಾಥ ತತಃ ಪಶ್ಚಾದ್ವಿಸರ್ಜಯೇತ್ ।
ಸರ್ವೇಷಾಮೇವ ದೇವಾನಾಮೇಷ ಏವ ವಿಧಿಸ್ಮೃತಃ ॥ ೯೯ ॥

ಸಮ್ಯಕ್ಕಲ್ಪೋದಿತಾಂ ಪೂಜಾಂ ಯದಿ ಕರ್ತುಂ ನ ಶಕ್ಯತೇ ।
ಉಪಚಾರಾ ತಥಾ ದಾತುಂ ಪಂಚೈರ್ತಾ ವಿತರೇತ್ತದಾ ॥ ೧೦೦ ॥

ಗಂಧಂ ಪುಷ್ಪಂ ಚ ಧೂಪಂ ಚ ದೀಪಂ ನೈವೇದ್ಯಮೇವ ಚ ।
ಅಭಾವೇ ಪುಷ್ಪತೋಯಾಭ್ಯಾಂ ತದಭಾವೇ ತು ಭಕ್ತಿತಃ ॥ ೧೦೧ ॥

ಬಳಿಕ ಅರ್ಘ್ಯಪಾತ್ರೆಯ ಜಲವನ್ನು ಸ್ಪರ್ಶಿಸಿ, ಮೂಲಮಂತ್ರದಿಂದ ಎಂಟುಸಲ ಜಪ ಮಾಡಿ, ಆ ಜಲದಿಂದ ಪೂಜಾಸಾಮಗ್ರಿಗಳನ್ನು ಪ್ರೋಕ್ಷಿಸಬೇಕು. ಆಮೇಲೆ ಮೂಲ ಮಂತ್ರಾಕ್ಷರಗಳಿಂದ ಆಧಾರಶಕ್ತಿಯೇ ಮೊದಲಾದ ಪೀಠಪೂಜೆಯನ್ನು ಮಾಡಿ, ಹೃದಯದಲ್ಲಿ ಇಷ್ಟದೇವತೆಯನ್ನು ಧ್ಯಾನಿಸುತ್ತಾ ವಾಯುವನ್ನು ಹೊರಗೆ ಆಕರ್ಷಿಸಿ, ಮಂಡಲದಲ್ಲಿ ಪ್ರಾಣಪ್ರತಿಷ್ಠೆ ಮಾಡಬೇಕು. ಅನಂತರ ಯಥಾವಿಧಿಯಾಗಿ ಷೋಡಶೋಪಚಾರಗಳಿಂದ ಪೂಜೆಯನ್ನು ಮಾಡಬೇಕು. ಆರುಜನ ಅಂಗದೇವತೆಗಳನ್ನೂ, ಎಂಟುಜನ ಪದ್ಮದಲದೇವತೆಗಳನ್ನೂ ಪೂಜಿಸಿ, ಪುಷ್ಪಾಂಜಲಿಯನ್ನು ಸಮರ್ಪಿಸಬೇಕು. ಬಳಿಕ ಸ್ತೋತ್ರನಮಸ್ಕಾರಾದಿಗಳನ್ನು ಯಥಾವಿಧಿಯಾಗಿ ಮಾಡಿ, ಕಡೆಯಲ್ಲಿ ಮುದ್ರೆಯನ್ನು ಪ್ರದರ್ಶಿಸಿ ದೇವತೆಯನ್ನು ವಿಸರ್ಜನೆ ಮಾಡಬೇಕು. ಸಮಸ್ತ ದೇವತೆಗಳ ಪೂಜೆ ಮತ್ತು ಪುರಶ್ಚರಣೆಗಳಲ್ಲಿಯೂ ಇದೇ ಕ್ರಮವನ್ನೇ ಅನುಸರಿಸಬೇಕು.

೧೦೦-೧೦೧. ಕಲ್ಪದಲ್ಲಿ ಹೇಳಿರುವ ಕ್ರಮದಿಂದ ಪೂಜೆಯನ್ನು ವಿಸ್ತಾರವಾಗಿ ಮಾಡಲು ಶಕ್ತಿಇಲ್ಲದಿದ್ದರೆ, ಗಂಧ, ಹೂವು, ಧೂಪ, ದೀಪ, ನೈವೇದ್ಯ, ಎಂಬ ಈ ಐದು ಉಪಚಾರಗಳನ್ನಾದರೂ, ಮಾಡಬೇಕು. ಅದನ್ನೂ ಮಾಡಲು ಅಶಕ್ತನಾದರೆ, ನೀರು, ಹೂವುಗಳಿಂದಲಾದರೂ, ನಡೆಸಬೇಕು. ಅದಕ್ಕೂ ಅಶಕ್ತನಾದಾಗ ಭಕ್ತಿಮಾತ್ರದಿಂದಲಾದರೂ ಮಾಡಬೇಕು.

ಸಂಕ್ಷೇಪಪೂಜಾ ಕಥಿತಾ ತಥಾ ವಸ್ತ್ರಾದಿಕಂ ಪುನಃ ।
ಪುರಶ್ಚರಣಕೃತ್ಯೇ ಚ ಪ್ರದೀಪಂ ಶೃಣು ಭೈರವ ॥ ೧೦೨ ॥

ದೀಪೇನ ಲೋಕಾ ಜಯತಿ ದೀಪಸ್ತೇಜೋಭವಃ ಸ್ಮೃತಃ ।
ಚತುರ್ವರ್ಗಪ್ರದೋ ದೀಪಸ್ತಸ್ಮಾದ್ದೀಪೈರ್ಯಜೇಚ್ಛಿವಾಂ ॥ ೧೦೩ ॥

ಸತತಂ ಪುಷ್ಪದೀಪಾಭ್ಯಾಂ ಪೂಜಯೇದ್ಯಸ್ತು ದೇವತಾಂ ।
ತಾಭ್ಯಾಮೇವ ಚತುರ್ವರ್ಗಃ ಕಥಿತೋ ನಾತ್ರ ಸಂಶಯಃ ॥ ೧೦೪ ॥

ಪುಷ್ಪೈರ್ದೇವಾಃ ಪ್ರಸೀದಂತಿ ಪುಷ್ಪೇ ದೇವಾಶ್ಚ ಸಂಸ್ಥಿತಾಃ ।
ಚರಾಚರಾಶ್ಚ ಸಕಲಾಃ ಸದಾ ಪುಷ್ಪರಸಾಃ ಸ್ಮೃತಾಃ ॥ ೧೦೫ ॥

ಕಿಂಚಾತಿಬಹುನೋಕ್ತೇನ ಪುಷ್ಪಸ್ಯೋಕ್ತಿರ್ಮತಲ್ಲಿಕಾ ।
ಪರಂಜ್ಯೋತಿಃ ಪುಷ್ಪಗತಂ ಪುಷ್ಪೇನೈವ ಪ್ರಸೀದತಿ ॥ ೧೦೬ ॥

---

೧೦೨. ಸಂಕ್ಷೇಪವಾದ ಪೂಜಾಕ್ರಮವೂ ವಸ್ತ್ರವೇ ಮೊದಲಾದ ಉಪಚಾರವೂ ಸಹ ಹೇಳಲ್ಪಟ್ಟಿತು. ಎಲೈ ಭೈರವನೇ, ಈಗ ಪುರಶ್ಚರಣ ಕರ್ಮದ ವಿಷಯದಲ್ಲಿ ದೀಪದ ಕ್ರಮವನ್ನು ಹೇಳುವೆನು, ಕೇಳು.

೧೦೩. ಸಾಧಕನು ದೀಪಪ್ರದಾನದಿಂದ ಲೋಕಗಳನ್ನು ಜಯಿಸುವನು. ದೀಪವು ತೇಜೋಮಯವೆನಿಸಿರುವುದು. ದೀಪವು ಚತುರ್ವರ್ಗಪುರುಷಾರ್ಥಗಳನ್ನೂ, ಕೊಡುವುದು. ಆದುದರಿಂದ ದೀಪಗಳಿಂದ ದೇವಿಯನ್ನು ಪೂಜಿಸಬೇಕು.

೧೦೪. ಹೂವು, ದೀಪ, ಇವುಗಳಿಂದ ದೇವರನ್ನು ಪೂಜೆಮಾಡುವವನಿಗೆ, ಅವೆರಡರಿಂದಲೇ ಚತುರ್ವರ್ಗಪುರುಷಾರ್ಥವು ಉಂಟಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಿರುವುದು.

೧೦೫. ಪುಷ್ಪಗಳಿಂದ ದೇವತೆಗಳು ಪ್ರಸನ್ನರಾಗುವರು. ಹೂವುಗಳಲ್ಲಿ ದೇವತೆಗಳು ನೆಲಸಿರುವರು. ಚರಾಚರಾತ್ಮಕವಾದ ಪ್ರಪಂಚವೆಲ್ಲವೂ ಪುಷ್ಪರಸಮಯವೆಂಬುದಾಗಿ ತಿಳಿಯಲ್ಪಟ್ಟಿದೆ.

೧೦೬. ಮತ್ತು ಬಹಳ ಹೇಳಿದ್ದರಿಂದೇನು? ಪರಬ್ರಹ್ಮಸ್ವರೂಪವಾದ ಜ್ಯೋತಿಸ್ಸು ಪುಷ್ಪದಲ್ಲಿದ್ದುಕೊಂಡು ಪುಷ್ಪದಿಂದಲೇ ಪ್ರಸನ್ನವಾಗುವುದರಿಂದ ಪುಷ್ಪದ ಪೂಜೆಯು ಶ್ರೇಷ್ಠವಾದುದು.

ತ್ರಿವರ್ಗಸಾಧನಂ ಪುಷ್ಪಂ ತುಷ್ಟಿಶ್ರೀಪುಷ್ಟಿಮೋಕ್ಷದಂ ।
ಪುಷ್ಪಮೂಲೇ ವಸೇದ್ಬ್ರಹ್ಮಾ ಪುಷ್ಪಮಧ್ಯೇ ತು ಕೇಶವಃ ॥ ೧೦೭ ॥

ಪುಷ್ಪಾಗ್ರೇ ತು ಮಹಾದೇವಃ ಸರ್ವದೇವಾಃ ಸ್ಥಿತಾ ದಲೇ ।
ತಸ್ಮಾತ್ಪುಷ್ಪೈರ್ಯಜೇದ್ದೇವಾನ್ನಿತ್ಯಂ ಭಕ್ತಿಯುತೋ ನರಃ ॥ ೧೦೮ ॥

ಉಚ್ಚಾರಿತಂ ನಾಮಮಾತ್ರಂ ಜಾಯತೇ ಸರ್ವಭೂತಯೇ ।
ಘೃತಪ್ರದೀಪಃ ಪ್ರಥಮಸ್ತಿಲತೈಲೋದ್ಭವಸ್ತತಃ ॥ ೧೦೯ ॥

ಸಾರ್ಷಪಃ ಫಲನಿರ್ಯಾಸಜಾತೋ ವಾ ರಾಜಿಕೋದ್ಭವಃ ।
ದಧಿಜಶ್ಚಾಣುಜಶ್ಚೈವ ದೀಪಾಃ ಸಪ್ತ ಪ್ರಕೀರ್ತಿತಾಃ ॥ ೧೧೦ ॥

ಪದ್ಮಸೂತ್ರಭವಾ ದರ್ಭಗರ್ಭಸೂತ್ರಭವಾಥವಾ ।
ಶಣಜಾ ಬಾದರೀ ವಾಪಿ ಫಲಕೋಶೋದ್ಭವಾ ತಥಾ ॥ ೧೧೧ ॥

೧೦೭-೧೦೮. ಪುಷ್ಪವು ಧರ್ಮ ಅರ್ಥ ಕಾಮ ರೂಪವಾದ ತ್ರಿವರ್ಗಕ್ಕೆ ಸಾಧಕವು. ತುಷ್ಟಿ, ಐಶ್ವರ್ಯ, ಪುಷ್ಟಿ, ಸಂತೋಷ, ಇವನ್ನೂ ಕೊಡುವುದು. ಪುಷ್ಪದ ಮೂಲದಲ್ಲಿ ಬ್ರಹ್ಮನೂ, ಮಧ್ಯದಲ್ಲಿ ವಿಷ್ಣುವೂ, ತುದಿಯಲ್ಲಿ ಈಶ್ವರನೂ, ದಳಗಳಲ್ಲಿ ಸರ್ವ ದೇವತೆಗಳೂ, ವಾಸಮಾಡುವುದರಿಂದ ಮನುಷ್ಯನು ಭಕ್ತಿಯಿಂದ ಕೂಡಿದವನಾಗಿ ದೇವರನ್ನು ಹೂವುಗಳಿಂದ ಪೂಜಿಸಬೇಕು. ಪುಷ್ಪ ಎಂದು ಹೇಳಿದಮಾತ್ರದಿಂದಲೇ ಎಲ್ಲಾ ವಿಧವಾದ ಐಶ್ವರ್ಯವನ್ನು ಹೊಂದಲು ಯೋಗ್ಯನಾಗುವನು.

೧೦೯-೧೧೦. ಇನ್ನು ದೀಪದ ವಿಷಯವನ್ನು ಹೇಳುವೆನು:-- ತುಪ್ಪದ ದೀಪವು ಮೊದಲನೆಯದು, ಬಳಿಕ ಎಣ್ಣೆಯ ದೀಪವು, ಆ ಮೇಲೆ ಸಾಸುವೆ ಎಣ್ಣೆಯದೀಪ, ಫಲದಿಂದ ತೆಗೆದ ಎಂದರೆ ಕೊಬ್ಬರಿ ಎಣ್ಣೆಯದೀಪ, ಇತರ ಧಾನ್ಯ (ಕಡಲೇಕಾಯಿ ಮೊದಲಾದುವು) ಗಳಿಂದ ತೆಗೆದ ಎಣ್ಣೆಯದೀಪ, ಮೊಸರಿನ ದೀಪ, ಕೊಬ್ಬಿನಿಂದ ಹತ್ತಿಸಿದ ದೀಪ ಎಂದು ದೀಪಗಳು ಏಳು ವಿಧವಾಗಿರುವವು.

೧೧೧. ತಾವರೆಯ ದಂಟಿನದಾರ, ದರ್ಭೆಯಮಧ್ಯದಿಂದ ಮಾಡಿದದಾರ, ಶಣಬು, ಯಗಚೀಮರದಿಂದ ಮಾಡಿದಬತ್ತಿ, ಫಲಕೋಶದಲ್ಲಿ ಇರುವ ವಸ್ತುವಿನಿಂದ (ಹತ್ತಿ) ಮಾಡಿದ ದಾರ ಎಂದು ದೀಪಗಳಿಗೆ ಉಪಯೋಗಿಸುವ ಬತ್ತಿಯು ಯಾವಾಗಲೂ ಐದುವಿಧವಾಗಿರುವುದು.

ವರ್ತಿಕಾ ದೀಪಕೃತ್ಯೇಷು ಸದಾ ಪಂಚವಿಧಾಃ ಸ್ಮೃತಾಃ ।
ತೈಜಸಂ ದಾರವಂ ಲೌಹಂ ಮಾರ್ತಿಕ್ಯಂ ನಾರಿಕೇಳಜಂ ॥ ೧೧೨ ॥

ತೃಣಧ್ವಜೋದ್ಭವಂ ವಾಪಿ ದೀಪಪಾತ್ರಂ ಪ್ರಶಸ್ಯತೇ ।
ದೀಪವೃಕ್ಷಾಶ್ಚ ಕರ್ತವ್ಯಾಸ್ತೈಜಸಾದ್ಯೈಸ್ತು ಭೈರವ ॥ ೧೧೩ ॥

ವೃಷ್ಟೇಷು ದೀಪ್ತೋ ದಾತವ್ಯೋ ನ ತು ಭೂಮೌ ಕದಾಚನ ।
ಸರ್ವಂಸಹಾ ವಸುಮತೀ ಸಹತೇ ನ ತ್ವಿದಂ ದ್ವಯಂ ॥ ೧೧೪ ॥

ಅಕಾರ್ಯಸಾದಘಾತಂ ಚ ದೀಪತಾಪಂ ತಥೈವ ಚ ।
ತಸ್ಮಾದ್ಯಥಾ ತು ಪೃಥಿವೀ ತಾಪಂ ನಾಪ್ನೋತಿ ವೈ ತಥಾ ॥ ೧೧೫ ॥

ದೀಪಂ ದದ್ಯಾನ್ಮಹಾದೇವ್ಯೈ ಅನ್ಯೇಭ್ಯೋಽಪಿ ಚ ಭೈರವ ।
ಕುರ್ವಂತಂ ಪೃಥಿವೀತಾಪಂ ಯೋ ದೀಪಮುತ್ಸೃಜೇನ್ನರಃ ॥ ೧೧೬ ॥

---

೧೧೨. ದೀಪದ ಪಾತ್ರೆಗಳಲ್ಲಿ ಚಿನ್ನದ್ದು, ಮಣ್ಣಿನದು, ಮರದ್ದು, ಲೋಹದ್ದು, ತೆಂಗಿನಕಾಯಿನಿಂದ ಮಾಡಿದ್ದು, ಪುಲ್ಲಿನಿಂದ ಮಾಡಿದ್ದು, ಬಿದುರಿನದು, ಎಂದು ದೀಪದಪಾತ್ರೆಗಳಲ್ಲಿ ಶ್ರೇಷ್ಠವಾದವುಗಳನ್ನು ಹೇಳಿರುವೆನು.

೧೧೩-೧೧೬. ಇನ್ನು ದೀಪಸ್ತಂಭಗಳ ವಿಷಯವನ್ನು ಹೇಳುವೆನು. ಸ್ತಂಭಗಳನ್ನು ಚಿನ್ನದಿಂದಲಾಗಲಿ, ಕಂಚು ಮೊದಲಾದ ಲೋಹಗಳಿಂದಾಗಲೀ ಮಾಡಬೇಕು. ಸ್ತಂಭಗಳಲ್ಲಿಯೇ ದೀಪಗಳನ್ನು ಇರಿಸಬೇಕು. ಭೂಮಿಯಲ್ಲಿ ಇಡಬಾರದು. ಕೆಟ್ಟ ಕೆಲಸ ಮಾಡುವವನ ಪಾದಘಾತವನ್ನೂ, ದೀಪದ ಶಾಖವನ್ನೂ ಭೂಮಿಯು ಸಹಿಸುವುದಿಲ್ಲ. ಸರ್ವಂಸಹಾ ಎಂದರೆ ಸಮಸ್ತವನ್ನೂ ಸಹನೆಯಿಂದ ಸಹಿಸುವಳೆಂದು ಭೂಮಿಯು ಪ್ರಸಿದ್ಧಳಾಗಿದ್ದರೂ, ಇವೆರಡನ್ನು ಮಾತ್ರ ಸಹಿಸುವುದಿಲ್ಲ. ಆದುದರಿಂದ ಭೂಮಿದೇವಿಗೆ ತಾಪವುಂಟಾಗದ ರೀತಿಯಲ್ಲಿ ದೀಪವನ್ನು ಸ್ತಂಭಗಳ ಮೇಲಿಟ್ಟು ದೇವತೆಗೂ ಇತರ ದೇವತೆಗಳಿಗೂ, ಅರ್ಪಿಸಬೇಕು. ಏಕೆಂದರೆ, ಭೂಮಿಗೆ ತಾಪವನ್ನುಂಟು ಮಾಡುವ ರೀತಿಯಲ್ಲಿ ಯಾವ ಮನುಷ್ಯನು ದೀಪವನ್ನು ಅರ್ಪಿಸುವನೋ, ಅವನು ತಾಮ್ರತಾಪವೆಂಬ ನರಕದಲ್ಲಿ ನೂರುವರ್ಷಗಳವರೆಗೆ ದುಃಖಿಸುತ್ತಿರುವನು. ಇದರಲ್ಲಿ ಸಂಶಯವಿಲ್ಲ.

ಸ ತಾಮ್ರತಾಪಂ ನರಕಂ ಪ್ರಾಪ್ನೋತ್ಯೇವ ಶತಂ ಸಮಾಃ ।
ಸುವೃತ್ತವರ್ತಿಃ ಸುಸ್ನೇಹಃ ಪಾತ್ರಮುಗ್ನಃ ಸುದರ್ಶನಃ ॥ ೧೧೭ ॥

ಸೂಚ್ಛ್ರಾಯೇ ವೃಕ್ಷಕೋಟೌ ತು ದೀಪಂ ದದ್ಯಾತ್ಪ್ರಯತ್ನತಃ ।
ಲಭ್ಯತೇ ಯಸ್ಯ ತಾಪಸ್ತು ದೀಪಸ್ಯ ಚತುರಂಗುಲಾತ್ ॥ ೧೧೮ ॥

ನ ಸ ದೀಪ ಇತಿ ಖ್ಯಾತೋ ಹ್ಯೋಘವಹ್ನಿಸ್ತು ಸ ಶ್ರುತಃ ।
ನೇತ್ರಾಹ್ಲಾದಕರಃ ಸ್ವರ್ಚಿರ್ದೂರತಾಪವಿವರ್ಜಿತಃ ॥ ೧೧೯ ॥

ಸುಶಿಖಃ ಶಬ್ದರಹಿತೋ ನಿರ್ಧೂಮೋ ನಾತಿಹ್ರಸ್ವಕಃ ।
ದಕ್ಷಿಣಾವರ್ತವರ್ತಿಸ್ತು ಪ್ರದೀಪಃ ಶ್ರೀವಿವೃದ್ಧಯೇ ॥ ೧೨೦ ॥

ದೀಪವೃಕ್ಷಸ್ಥಿತೇ ಪಾತ್ರೇ ಶುದ್ಧಸ್ನೇಹಪ್ರಪೂರಿತೇ ।
ದಕ್ಷಿಣಾವರ್ತವರ್ತ್ಯಾ ತು ಚಾರುದೀಪ್ತಃ ಪ್ರದೀಪಕಃ ॥ ೧೨೧ ॥

---

೧೧೭. ಎತ್ತರವಾಗಿ ಚೆನ್ನಾಗಿರುವ ದೀಪಸ್ತಂಭದಮೇಲೆ ಸುಂದರವಾದ ದೀಪ ಪಾತ್ರೆಯನ್ನಿರಿಸಿ, ಅದರಲ್ಲಿ ಬತ್ತಿಯು ಚೆನ್ನಾಗಿ ಮುಳುಗುವಂತೆ ತುಪ್ಪ, ಮೊದಲಾದು ವನ್ನು ಹಾಕಬೇಕು. ಬತ್ತಿಯು ದುಂಡಾಗಿರಬೇಕು. ಇಂತಹ ಶ್ರೇಷ್ಠವಾದ ರೀತಿಯಲ್ಲಿ ದೀಪವನ್ನು ಅರ್ಪಿಸಬೇಕು.

೧೧೮. ಯಾವ ದೀಪದ ತಾಪವು (ಶಿಖೆಯು) ನಾಲ್ಕು ಅಂಗುಲಕ್ಕಿಂತಲೂ ಹೆಚ್ಚಾಗಿ ಕಂಡುಬರುವುದೋ, ಅದು ದೀಪವೆನಿಸಿಕೊಳ್ಳುವುದಿಲ್ಲ. ಅದಕ್ಕೆ ಬೆಂಕಿಯ ಕಕ್ಕಡ, ಎಂದು ಪೆಸರು.

೧೧೯-೧೨೦. ದೀಪವು ಕಣ್ಣಿಗೆ ಆನಂದವನ್ನುಂಟುಮಾಡುವುದಾಗಿರಬೇಕು. ಸದ್ದು, ಹೊಗೆ, ಇಲ್ಲದಿರಬೇಕು. ಬಹಳ ಸಣ್ಣನಾಗಿರಕೂಡದು. ಬತ್ತಿಯು ಬಲಗಡೆಗೆ ಸುತ್ತಿಕೊಂಡಿರಬೇಕು. ಈ ಗುಣಗಳಿಂದ ಕೂಡಿರುವ ದೀಪವು ಐಶ್ವರ್ಯವನ್ನುಂಟು ಮಾಡುವುದು.

೧೨೧-೧೨೨. ದೀಪದ ಕಂಬದಮೇಲೆ ಬಟ್ಟಲಿನಲ್ಲಿ ಶುದ್ಧವಾದ ತುಪ್ಪ, ಅಥವಾ ಎಣ್ಣೆಯನ್ನು ತುಂಬಿ, ಬಲಗಡೆಗೆ ಪ್ರದಕ್ಷಿಣೆಯಾಗಿರುವ ಬತ್ತಿಯಿಂದ ಹತ್ತಿಸಲ್ಪಟ್ಟು ಚೆನ್ನಾಗಿ ಉರಿಯುತ್ತಿರುವ ದೀಪವು ಉತ್ತಮದೀಪವೆನಿಸಿಕೊಳ್ಳುವುದು. ಇದು ಎಲ್ಲಾ

ಉತ್ತಮಃ ಪ್ರೋಚ್ಯತೇ ಪುತ್ರ ಸರ್ವತುಷ್ಟಿಪ್ರದಾಯಕಃ ।
ವೃಷ್ಟೇಣ ವರ್ಜಿತೋ ದೀಪೋ ಮಧ್ಯಮಃ ಪರಿಕೀರ್ತಿತಃ ।
ವಿಹೀನಃ ಪಾತ್ರತೈಲಾಭ್ಯಾಮಧಮಃ ಪರಿಕೀರ್ತಿತಃ ॥ ೧೨೨ ॥

ಶಾಣಂ ವಾ ದಾರವಂ ವಾಸ್ತ್ರಂ ಜೀರ್ಣಂ ಮಲಿನಮೇವ ವಾ ।
ಉಪಯುಕ್ತಂ ಚ ನಾದದ್ಯಾದ್ವರ್ತಿಕಾರ್ಥಂ ತು ಸಾಧಕಃ ॥ ೧೨೩ ॥

ಉಪಾಪದ್ಯಾನ್ನವನೀತಮೇವ ಸತತಂ ಶ್ರೀವಿವೃದ್ಧಯೇ ।
ಕೋಶಜಂ ರೋಮಜಂ ವಸ್ತ್ರಂ ವರ್ತಿಕಾರ್ಥಂ ನ ಚಾದದೇತ್ ॥ ೧೨೪ ॥

ನ ಮಿಶ್ರೀಕೃತ್ಯಂ ದದ್ಯಾತ್ತು ದೀಪೇ ಸ್ನೇಹಪೃತಾದಿಕಂ ।
ಕೃತ್ವಾ ಮಿಶ್ರೀಕೃತಂ ಸ್ನೇಹಂ ತಾಮಿಸ್ರಂ ನರಕಂ ವ್ರಜೇತ್ ॥ ೧೨೫ ॥

ವಸಾಮಜ್ಜಾಸ್ಥಿನಿರ್ಯಾಸೈಃ ಸ್ನೇಹೈಃ ಪ್ರಾಣ್ಯಂಗಸಂಭವೈಃ ।
ಪ್ರದೀಪಂ ನೈವ ಕುರ್ಯಾತ್ತು ಕೃತ್ವಾ ಪಂಕೇಽವಸೀದತಿ ॥ ೧೨೬ ॥

ದೇವತೆಗಳಿಗೂ ಸಂತೋಷವನ್ನುಂಟುಮಾಡುವುದು. ದೀಪಸ್ತಂಭವಿಲ್ಲದಿರುವ ದೀಪವು ಮಧ್ಯಮವೆನಿಸುವುದು. ತೈಲವೂ, ಪಾತ್ರೆಯೂ, ಎರಡೂ ಇಲ್ಲದಿರುವಾಗ ದೀಪವು ಅಧಮವೆನಿಸಿಕೊಳ್ಳುವುದು.

೧೨೩. ಸಾಧಕನಾದವನು, ಶಣಬು, ಮರದ ನಾರು, ಪರಿದು ಹೋಗಿರುವ ಕೊಳೆಯಾದ ಬಟ್ಟೆ, ಒಂದುಸಾರಿ ಉಪಯೋಗಿಸಿದ್ದು, ಇವುಗಳನ್ನು ಬತ್ತಿಗೋಸ್ಕರವಾಗಿ ಉಪಯೋಗಿಸಬಾರದು.

೧೨೪. ಯಾವಾಗಲೂ ಹೊಸದನ್ನೇ ಉಪಯೋಗಿಸಬೇಕು. ಇದರಿಂದ ಐಶ್ವರ್ಯವು ಹೆಚ್ಚಾಗುವುದು. ಕ್ರಿಮಿಯ ಕೋಶ (ಗೂಡು) ದಿಂದ ಹುಟ್ಟಿದ, ಎಂದರೆ ರೇಷ್ಮೆ, ರೋಮ (ಕೂದಲು) ದಿಂದ ಮಾಡಿದ ಮತ್ತು ವಸ್ತ್ರದಿಂದ ಮಾಡಿದ ಬತ್ತಿಯನ್ನು ಉಪಯೋಗಿಸಬಾರದು.

೧೨೫. ದೇವರ ದೀಪಕ್ಕಾಗಿ ಎಣ್ಣೆಯನ್ನೂ, ತುಪ್ಪವೇ ಮೊದಲಾದವನ್ನೂ ಬೆರಸಿ ಉಪಯೋಗಿಸಬಾರದು. ಬೆರಸಿ ಉಪಯೋಗಿಸಿದರೆ, ತಾಮಿಸ್ರವೆಂಬ ನರಕವನ್ನು ಹೊಂದುವನು.

೧೨೬. ಪ್ರಾಣಿಗಳ ಶರೀರದಲ್ಲಿ ಹುಟ್ಟಿದ ವಸಾ, ಮಜ್ಜಾ, ಕೊಬ್ಬು ಮೂಳೆಯ ಜಿಡ್ಡು ಇವುಗಳಿಂದ ದೀಪವನ್ನು ಹತ್ತಿಸಬಾರದು. ಹಾಗೆ ಅದರಿಂದ ದೀಪವನ್ನು ದೇವರಿಗೆ ಹತ್ತಿಸಿದರೆ ಸಾಧಕನು ನರಕಕ್ಕೆ ಹೋಗುವನು.

ಅಸ್ಥಿಪಾತ್ರೇಽಥವಾ ಪಚ್ಯೇದ್ದುರ್ಗಂಧಾಸ್ಥಿಪ್ರವಾಸಿನಿ ।
ನೈವ ದೀಪಃ ಪ್ರದಾತವ್ಯಃ ವಿಬುಧಃ ಶ್ರೀನಿವೃದ್ದಯೇ ॥ ೧೨೭ ॥

ನೈವ ನಿರ್ವಾಪಯೇದ್ದೀಪಂ ಕದಾಚಿದಪಿ ಯತ್ನತಃ ।
ಸತತಂ ಲಕ್ಷಣೋಪೇತಂ ದೇವಾರ್ಥಮುಪಕಲ್ಪಿತಂ ॥ ೧೨೮ ॥

ನ ಪಶ್ಯೇತ್ ಸ್ನಾನತೋ ದೀಪಂ ತಥಾ ಲೋಭಾದಿನಾ ನರಃ ।
ದೀಪಪರ್ತಾ ಭವೇದಂಧಃ ಕಾಣೋ ನಿರ್ವಾಪಕೋ ಭವೇತ್ ॥ ೧೨೯ ॥

ಉದ್ದೀಪ್ತದೀಪ್ತಸ್ರುತಿಮಃ ಕಾಷ್ಠಕಾಂಡಸಮುದ್ಭವಃ ।
ಬಿಲ್ವೋತ್ಥೋದ್ಭವಮೇವಾಥ ದೀಪಾಲಾಭೇ ನಿವೇದಯೇತ್ ॥ ೧೩೦ ॥

ಉಲ್ಮುಕಂ ನೈವ ದೀಪಾರ್ಥೇ ಕದಾಚಿದಪಿ ಚೋತ್ಸೃಜೇತ್ ।
ಪ್ರಸನ್ನಾರ್ಥಂ ತು ತಂ ದದ್ಯಾದುಪಚಾರಾದ್ಬಹಿಷ್ಕೃತಂ ॥ ೧೩೧ ॥

---

೧೨೭. ತಿಳಿವಳಿಕೆಯುಳ್ಳ ಸಾಧಕನು, ಮೂಳೆಯ ಪಾತ್ರೆಯಲ್ಲಿ ಯಾಗಲೀ, ಸುಡದಿರುವ ದುರ್ಗಂಧವನ್ನುಂಟುಮಾಡುವ ಮೂಳೆಯೇ ಮೊದಲಾದದ್ದರಲ್ಲಿ ಮಾಡಿದ ಪಾತ್ರೆಯಲ್ಲಾಗಲೀ ದೀಪವನ್ನು ಹತ್ತಿಸಿ ದೇವರಿಗೆ ಇಡಬಾರದು. ಹಾಗೆ ಹತ್ತಿಸಿ ಇಟ್ಟರೆ, ಐಶ್ವರ್ಯನಾಶವಾಗುವುದು.

೧೨೮. ದೇವರಿಗೋಸ್ಕರ ಸಿದ್ಧಮಾಡಿದ ಒಳ್ಳೆಯಲಕ್ಷಣಗಳಿಂದ ಕೂಡಿದ ದೀಪವನ್ನು ಪ್ರಯತ್ನ ಪೂರ್ವಕವಾಗಿ ಯಾವಾಗಲೂ ಆರಿಸಬಾರದು.

೧೨೯. ತಿಳಿದಾಗಲಿ, ತಿಳಿಯದೆ ಆಗಲಿ, ಅತ್ಯಾಸೆಯಿಂದಾಗಲೀ ದೇವರ ದೀಪವನ್ನು ಅಪಹರಿಸುವವನು, ಅಥವಾ ದೇವರ ಸಮೀಪದಿಂದ ಬೇರೆಕಡೆಗೆ ತೆಗೆದು ಕೊಂಡು ಹೋಗುವವನು, ಹುಟ್ಟು ಕುರುಡನಾಗುವನು. ದೀಪವನ್ನು ಆರಿಸುವವನು, ಕಣ್ಣನ್ನು ಕಳೆದುಕೊಂಡು ಕುರುಡನಾಗುವನು.

೧೩೦. ದೀಪವನ್ನು ಉರಿಸಲು ಅಶಕ್ತನಾದರೆ, ಉರಿಯುತ್ತಿರುವ ದೀಪಕ್ಕೆ ಸಮನಾಗಿರುವ ಬಿಲ್ವಫಲತ್ರೆಯ ಕಾಷ್ಠವೇ ಮೊದಲಾದ ಸೌದೆಯ ಕಟ್ಟಿಗೆಯಿಂದ ಹುಟ್ಟಿದ ಬೆಂಕಿಯ ಉರಿಯನ್ನು ದೇವರಿಗೆ ದೀಪಕ್ಕೆ ಬದಲಾಗಿ ಉಪಯೋಗಿಸಬೇಕು.

೧೩೧. ದೀಪಕ್ಕೋಸ್ಕರವಾಗಿ ಯಾವಾಗಲೂ ಕೊಳ್ಳಿಯನ್ನು ಉಪಯೋಗಿಸ ಬಾರದು. ಅದು ಉಪಚಾರವೆನಿಸುವುದಿಲ್ಲ. ದೇವತೆಯೂ ಪ್ರಸನ್ನವಾಗುವುದಿಲ್ಲ ಆದುದರಿಂದ ಕೊಳ್ಳಿಯನ್ನು ಯಾವಾಗಲೂ ಉಪಯೋಗಿಸಬಾರದು.

ಏವಂ ವಾಂ ಕಥಿತೋ ದೀಪೋ ಧೂಪಂ ಚ ಶೃಣುತಂ ಸುತೌ ।
ನಾಸಾಕ್ಷಿರಂಧ್ರಸುಖದಃ ಸುಗಂಧೋಽತಿಮನೋಹರಃ ॥ ೧೩೨ ॥

ದಹ್ಯಮಾನಸ್ಯ ಕಾಷ್ಠಸ್ಯ ಪ್ರಯತಸ್ಯೇತರಸ್ಯ ಚ ।
ಪರಾಗಸ್ಯಾಥವಾ ಧೂಮೋ ನಿಸ್ತಾಪೋ ಯಸ್ಯ ಜಾಯತೇ ॥ ೧೩೩ ॥

ಸ ಧೂಪ ಇತಿ ವಿಜ್ಞೇಯೋ ದೇವಾನಾಂ ತುಷ್ಟಿದಾಯಕಃ ।
ರಾಶೀಕೃತೈರ್ನಚೈಕತ್ರ ತೈರ್ದ್ರವ್ಯೈಃ ಪರಿಪೂಜಯೇತ್ ॥ ೧೩೪ ॥

ಓಘಾಗ್ನಿವತ್ತತ್ತಾಂ ಕೃತ್ವಾ ನ ತತ್ಫಲಮವಾಪ್ನುಯಾತ್ ।
ಶ್ರೀಚಂದನಂ ಚ ಸರಲಃ ಸಾಲಃ ಕೃಷ್ಣಾಗರುಸ್ತಥಾ ॥ ೧೩೫ ॥

ಉದಯಃ ಸುರಥಸ್ಕಂದೋ ರಕ್ತೇವಿದ್ರುಮ ಏವ ಚ ।
ಪೀತಶಾಲಃ ಪರಿಮಲೋ ವಿಮರ್ದಿ ಕಾಶಲಸ್ತಥಾ ॥ ೧೩೬ ॥

---

೧೩೨. ಎಲೈ ಪುತ್ರರಿರಾ ಕೇಳಿರಿ:— ಹೀಗೆ ದೀಪದ ವಿಷಯವನ್ನು ನಿವಗೆ ಹೇಳಿದುದಾಯಿತು. ಈಗ ಧೂಪದ ವಿಷಯವನ್ನು ಹೇಳುವೆನು, ಕೇಳಿರಿ. ಧೂಪವು ಮೂಗು, ಕಣ್ಣು, ಇವುಗಳಿಗೆ ಸುಖಕರವಾಗಿರುವುದು. ಒಳ್ಳೆಯ ವಾಸನೆಯನ್ನುಂಟುಮಾಡುವುದು, ಮನಸ್ಸಿಗೆ ಹಿತಕರವಾಗಿರುವುದು.

೧೩೩. ಧೂಪದ್ರವ್ಯವನ್ನು ಬಳಿದು ಸಿದ್ಧಪಡಿಸಿದ ಯಾವಕಡ್ಡಿಯು ಉರಿಯುವಾಗ, ಹೊಗೆ, ಸೆಕೆ, ಇವುಗಳಿಲ್ಲದಿರುವಂತೆ ಕೇವಲವಾಸನೆಯುಂ ಮಾತ್ರ ಉಂಟಾಗುವುದೋ ಅದು ಧೂಪವೆನಿಸುವುದು. ಅದು ದೇವತೆಗಳಿಗೆ ಸಂತೋಷವನ್ನುಂಟುಮಾಡುವುದು.

೧೩೪. ವಾಸನೆಯ ದ್ರವ್ಯಗಳನ್ನು ಒಂದುಕಡೆಯಲ್ಲಿ ಗುಡ್ಡೆಮಾಡಿ ಅವಕ್ಕೆ ಬೆಂಕಿಯನ್ನು ಹತ್ತಿಸಿ ಅವುಗಳಿಂದ ಪೂಜೆಯನ್ನು ಮಾಡಬಾರದು. ಎಲ್ಲವನ್ನೂ ರಾಶಿಮಾಡಿ ದೊಡ್ಡದಾಗಿ ಹತ್ತಿಸಿದರೆ ಅದರ ಫಲವನ್ನು ಹೊಂದಲಾರನು.

೧೩೫-೧೩೬. ಶ್ರೀಗಂಧ, ಸಕಲವೃಕ್ಷ, ಮತ್ತಿಯಮರ, ಕರಿಯಅಗಿಲು, ಉದಯವೃಕ್ಷ, ಸುರತಸ್ಕಂಧವೃಕ್ಷ, ಕೆಂಪುಹವಳವಮರ, ಹಳದಿಮತ್ತಿ, ಪರಿಮಳವೃಕ್ಷ, ವಿಮರ್ದಿ, ಕಾಶಲ, ನಮೇರು, ದೇವದಾರುಮರ, ಬಿಲ್ವಪತ್ರೆಯರಸ, ಕಗ್ಗಲಿಯಮತ

ನಮೇರುರ್ದೇವದಾರುಶ್ಚ ಬಿಲ್ವಸಾಲೋಽಥ ಖಾದಿರಃ ।
ಸಂತಾನಃ ಪಾರಿಜಾತಶ್ಚ ಹರಿಚಂದನವಲ್ಲಭೌ ॥ ೧೬೭ ॥

ವೃಕ್ಷೇಷು ಧೂಪಾಃ ಸರ್ವೇಷಾಂ ಪ್ರೀತಿದಾಃ ಪರಿಕೀರ್ತಿತಾಃ ।
ಅರಾಲಃ ಸಪ ಸೂಪ್ರೇಣ ಶ್ರೀವಾಸಃ ಪಟ್ಟಿವಾಸಕಃ ॥ ೧೬೮ ॥

ಕರ್ಪೂರಃ ಶ್ರೀಕರಶ್ಚೈವ ಪರಾಗಃ ಶ್ರೀಹರಾಮಲೌ ।
ಸರ್ವೌಷಧೀವ ಚ್ಛಾತೀವ ವರಾಹಶ್ಚೂರ್ಣ ಉತ್ಕಲಃ ॥ ೧೬೯ ॥

ಜಾತೀಕೋಶಸ್ಯ ಚೂರ್ಣಂ ಚ ಗಂಧಃ ಕಸ್ತೂರಿಕಾ ತಥಾ ।
ಷ್ಟೋದೇ ವೃಕ್ಷೇ ಚ ಗದಿತಾ ಧೂಪಾ ಏತೇ ಉದಾಹೃತಾಃ ॥ ೧೭೦ ॥

ಯಕ್ಷಧೂಪೋ ವೃಕ್ಷಧೂಪಃ ಶ್ರೀಪಿಷ್ಟೋಽಗುರುಪಟ್ಟುರ್ಧೂರಃ ।
ಪತ್ರಿವಾಹಃ ಪಿಂಡಧೂಪಃ ಸುಗೋಲಃ ಕಂಠ ಏವ ಚ ॥ ೧೭೧ ॥

ಅನ್ಯೋನ್ಯಯೋಗಾನ್ನಿರ್ಯಾಸಾ ಧೂಪಾ ಏತೇ ಪ್ರಕೀರ್ತಿತಾಃ ।
ಏತೈರ್ವಿಧೂಪಯೇದ್ದೇವಾನ್ ಧೂಮಿಭಿಃ ಕೃಷ್ಣವರ್ತ್ಮನಾ ॥ ೧೭೨ ॥

ಸಂತಾನವೃಕ್ಷ, ಪಾರಿಜಾತದಗಿಡ, ಹರಿಚಂದನವೃಕ್ಷ, ವಲ್ಲಭ, ಈ ಮರಗಳಿಂದ ಸಿದ್ಧಪಡಿಸಿದ ಧೂಪವು ಎಲ್ಲಾದೇವತೆಗಳಿಗೂ, ಪ್ರೀತಿಯನ್ನುಂಟುಮಾಡುವುದೆಂದು ಹೇಳಲ್ಪಟ್ಟಿರುವುದು.

೧೬೯-೧೭೦. ಅರಗು, ಶ್ರೀಗಂಧ, ಪಚ್ಚಕರ್ಪೂರ, ಶ್ರೀಕರ, ತುಂತುರಿ, ಪರಾಗ, ಶ್ರೀಹರ, ಅಮಲ, ವರಾಹಚೂರ್ಣ ಉತ್ಕಲ, ಜಾಜಿಕಾಯಿಚೂರ್ಣ, ಕಸ್ತೂರಿ, ಇವುಗಳನ್ನು ಸಣ್ಣಗೆ ಹುಡಿಮಾಡಿದನಂತರ ಅದನ್ನು ಧೂಪಕ್ಕೆ ಉಪಯೋಗಿಸಬೇಕು.

೧೭೧-೧೭೨. ಯಕ್ಷಧೂಪ, ವೃಕ್ಷಧೂಪ, ಶ್ರೀಪಿಷ್ಟ, ಅರಗು, ಪಟಿಕ, ಪತ್ರಿವಾಹ, ಪಿಂಡಧೂಪ, ಸುಗೋಲ, ಕಂಠ ಎಂಬುವುಗಳು ಧೂಪಪ್ರಭೇದಗಳು. ಇವು ಪರಸ್ಪರವಾಗಿ ಸುಗಂಧದ್ರವ್ಯಗಳ ಮಿಶ್ರದಿಂದ ಉಂಟಾಗುವದ್ರವ್ಯವು ಅಗ್ನಿಯ ಜೊತೆಯಲ್ಲಿ ಸೇರಿದಾಗ ಧೂಮರೂಪದಿಂದ ಧೂಮವೆನಿಸಿಕೊಳ್ಳುವವು. ಈ ಧೂಪದ್ರವ್ಯಗಳನ್ನು ಅಗ್ನಿಯಲ್ಲಿ ಹಾಕಿದಾಗ ಉಂಟಾದ ಧೂಮದಿಂದ ದೇವತೆಗಳನ್ನು ಸಂತೋಷಪಡಿಸಬೇಕು. ಈ ಧೂಪಗಳ ವಾಸನೆಯಿಂದ ಪ್ರಾಣಿಗಳು ಸಂತೋಷವನ್ನು ಹೊಂದುತ್ತವೆ.

ಯೇಷಾಂ ಧೂಮೋದ್ಭವೈಃ ಘ್ರಾಣೈಸ್ತುಷ್ಟಿಂ ಗಚ್ಛಂತಿ ಜಂತವಃ ।
ನಿರ್ಯಾಸಶ್ಚ ಪರಾಗಶ್ಚ ಕಾಷ್ಠಂ ಗಂಧಂ ತಥೈವ ಚ ॥ ೧೪೩ ॥

ಕೃತ್ರಿಮಶ್ಚೇತಿ ಪಂಚೈತೇ ಧೂಪಾಃ ಪ್ರೀತಿಕರಾಃ ಪರಾಃ ।
ನ ಯಕ್ಷಧೂಪಂ ವಿತರೇನ್ನಾಧವಾಯ ಕದಾಚನ ॥ ೧೪೪ ॥

ನ ರಕ್ತಂ ವಿದ್ರುಮಂ ಮಹ್ಯಂ ಸುರಭಂ ಕದ್ರಿಲಂ ತಥಾ ।
ಯಕ್ಷಧೂಪಃ ಪತ್ರಿವಾಹಃ ಪಿಂಡಧೂಪಃ ಸುಗೋಲಕಃ ॥ ೧೪೫ ॥

ಕೃಷ್ಣಾಗರುಃ ಸಕರ್ಪೂರೋ ಮಹಾಮಾಯಾಪ್ರಿಯಃಸ್ಮೃತಃ ।
ವೃಕ್ಷಧೂಪೇನ ವಾ ದೇವೀಂ ಮಹಾಮಾಯಾಂ ಪ್ರಪೂಜಯೇತ್ ॥ ೧೪೬ ॥

ಮೇದೋಮಜ್ಜಾಸಮಾಯುಕ್ತಾನ್ನ ಧೂಪಾನ್ವಿಯೋಜಯೇತ್ ।
ಪರಕೀಯಾಂಸ್ತಥಾ ಘ್ರಾತಾಂಸ್ತೇಽಪಿ ಕೃತ್ಯಾಭಿಸಂದ್ಧಿತಾನ್ ॥ ೧೪೭ ॥

ಪುಷ್ಪಂ ಧೂಪಂ ಚ ಗಂಧಂ ಚ ಉಪಚಾರಾಂಸ್ತಥಾ ಪರಾನ್ ।
ಘ್ರಾತ್ವಾ ನಿವೇದ್ಯ ದೇವೇಭ್ಯೋ ನರೋ ನರಕಮಾಪ್ನುಯಾತ್ ॥ ೧೪೮ ॥

---

೧೪೩. ನಿರ್ಯಾಸ, ಪರಾಗ, ಕಾಷ್ಠ, ಗಂಧ, ಕೃತ್ರಿಮ ಎಂದು ಧೂಪಗಳು ಐದು ವಿಧವಾಗಿರುವವು ಇವು ದೇವರಿಗೆ ಹೆಚ್ಚಾದ ಪ್ರೀತಿಯನ್ನುಂಟುಮಾಡುವವುಗಳು.

೧೪೪-೧೪೬. ವಿಷ್ಣುವಿಗೆ ಯಾವಾಗಲೂ ಯಕ್ಷಧೂಪವನ್ನು ಉಪಯೋಗಿಸಬಾರದು. ಕೆಂಪು, ಹವಳ, ಸುರಭಿ, ಕದ್ರಿಲ, ಎಂಬುವುಗಳು ನನಗೆ (ಈಶ್ವರ) ಉಪಯೋಗಿಸತಕ್ಕವುಗಳಲ್ಲವು. ಯಕ್ಷಧೂಪ, ಪತ್ರಿವಾತ, ಪಿಂಡಧೂಪ, ಸುಗೋಲಕ ಕೃಷ್ಣಾಗರು, ಇವುಗಳು ಪಚ್ಚಕರ್ಪೂರದೊಡನೆ ಸೇರಿ ಮಹಾಮಾಯಾ ದೇವಿಯ ಪೂಜೆಯಲ್ಲಿ ದೇವಿಗೆ ಪ್ರೀತಿಯನ್ನುಂಟುಮಾಡುವವು. ವೃಕ್ಷಧೂಪದಿಂದಲಾದರೂ ಮಹಾಮಾಯಾದೇವಿಯನ್ನು ಪೂಜಿಸಬಹುದು.

೧೪೭. ಮೇದಸ್ಸು, ಮಜ್ಜಾ, ಇವುಗಳಿಂದ ಕೂಡಿರುವ ಧೂಪಗಳನ್ನು, ಇನ್ನೊಬ್ಬರು ತಂದಿರುವುದನ್ನೂ, ಇತರರು ವಾಸನೆನೋಡಿರುವುದನ್ನೂ, ಅಭಿಚಾರಿಕ ಕಾರ್ಯಕ್ಕಾಗಿ ಸಿದ್ಧಪಡಿಸಿರುವುದನ್ನೂ ದೇವರಿಗೆ ಉಪಯೋಗಿಸಬಾರದು.

೧೪೮. ಹೂವು, ಧೂಪ, ಗಂಧ, ಇತರ ಉಪಚಾರವಸ್ತು, ಇವುಗಳನ್ನು ತಾನು ಮೊದಲು ಉಪಯೋಗಿಸಿ ಅಥವಾ ಮೂಸಿನೋಡಿ, ಬಳಿಕ ದೇವರಿಗೆ ಅರ್ಪಿಸಿದರೆ ಅಂಥವನು ನರಕವನ್ನು ಹೊಂದುವನು.

ನ ಭೂಮೌ ವಿತರೇದ್ಧೂಪಂ ನಾಸನೇ ನ ಘಟೇ ತಥಾ ।
ಯಥಾ ತಥಾಧಾರಗತಂ ಕೃತ್ವಾ ತದ್ವಿನಿವೇದಯೇತ್ ॥ ೧೪೯ ॥

ರಕ್ತವಿದ್ರುಮಶಾಲೌ ಚ ಸುರಭಃ ಸೂರಲಸ್ತಥಾ ।
ಸಂತಾನಕೋ ನಮೇರುಶ್ಚ ಕಾಲಾಗರುಸಮನ್ವಿತಃ ॥ ೧೫೦ ॥

ಜಾತೀಕೋಶಾಕ್ಷಸಂಯುಕ್ತೋ ಧೂಪಃ ಕಾಮೇಶ್ವರೀಪ್ರಿಯಃ ।
ತ್ರಿಪುರ್ಯಾಯಾಸ್ತಥೈವಾಯಂ ಮಾತೃಣಾಮಪಿ ನಿತ್ಯತಃ ॥ ೧೫೧ ॥

ಸರ್ವೇಷಾಂ ಪೀಠದೇವಾನಾಂ ರುದ್ರಾದೀನಾಂ ಚ ಪುತ್ರಕ ।
ಏಷ ವಾಂ ಕಥಿತೋ ಧೂಪಃ ಶೃಣುತಂ ನೇತ್ರರಂಜನಂ ॥ ೧೫೨ ॥

ಯೇನ ತುಷ್ಯತಿ ಕಾಮಾಖ್ಯಾ ತ್ರಿಪುರಾ ವೈಷ್ಣವೀ ತಥಾ ।
ಸೌವೀರಂ ಜಾಂಬಲಂ ತುತ್ಥಂ ಮಯೂರಗ್ರೀವಕಂ ತಥಾ ॥ ೧೫೩ ॥

---

೧೪೯. ಧೂಪವನ್ನು ಭೂಮಿಯಲ್ಲಿ ಇಟ್ಟು ಒಪ್ಪಿಸಬಾರದು. ಪೀಠದಲ್ಲಿಯಾಗಲಿ, ಘಟದಲ್ಲಿಯಾಗಲಿ, ಒಪ್ಪಿಸಬಾರದು. ಅದಕ್ಕಾಗಿ ನಿರ್ಮಿತವಾದ ಉಪಕರಣದಲ್ಲಿಟ್ಟು ಉಪಯೋಗಿಸಬೇಕು.

೧೫೦-೧೫೨. ರಕ್ತವಿದ್ರುಮ, ಶಾಲ, ಸುರಭ, ಸೂರಲ, ಸಂತಾನಕ, ನಮೇರು, ಕಾಲಾಗರು ಜಾತಿಕೋಶ, ಅಕ್ಷ, ಇವುಗಳಿಂದ ಕೂಡಿದ ಧೂಪವು ಕಾಮೇಶ್ವರೀ ದೇವಿಗೆ ಪ್ರೀತಿಯನ್ನುಂಟುಮಾಡುವುದು. ಅಲ್ಲದೆ ಈ ಧೂಪವು ತ್ರಿಪುರಾದೇವಿ, ಮಾತೃಗಳು, ರುದ್ರನೇಮೊದಲಾದವರು, ಇವರೆಲ್ಲರಿಗೂ ಸಂತೋಷವನ್ನುಂಟುಮಾಡುವುದು, ಎಲೈ ಪುತ್ರರೇ ಕೇಳಿ, ನಿಮಗೆ ಧೂಪದ ವಿಷಯವನ್ನು ಹೇಳಿದೆನು. ಇನ್ನು ಮುಂದೆ ಕಾಮಾಖ್ಯಾದೇವಿ, ತ್ರಿಪುರಾದೇವಿ, ವೈಷ್ಣವೀದೇವಿ ಇವರಿಗೆ ಸಂತೋಷವನ್ನುಂಟುಮಾಡುವ ಅಂಜನದ ವಿಷಯವನ್ನು ಹೇಳುವೆನು.

೧೫೩. ಸೌವೀರಾಂಜನ, ಜಾಂಬಲಾಂಜನ, ತುತ್ಥಾಂಜನ, ಮಯೂರಗ್ರೀವಾಂಜನ, ವರ್ವಿಕಾಂಜನ, ಮೇಘನೀಲಾಂಜನ, ಎಂಬುದಾಗಿ ಆರು ಅಂಜನಗಳು ಇರುವವು.

ದರ್ವಿಕಾ ಮೇಘನೀಲಶ್ಚ ಅಂಜನಾನಿ ಭವಂತಿ ಷಟ್ ।
ಸ್ರವದ್ಧ್ರುವಶ್ಚ ಸೌವೀರಂ ಯಾಂಬಲಂ ಪ್ರಸ್ತರಂ ತಥಾ ॥ ೧೫೪ ॥
ಮಯೂರಗ್ರೀವಕಂ ರತ್ನಂ ಮೇಘನೀಲಸ್ತು ತೈಜಸಂ ।
ಘೃಷ್ಟಾನಿ ಗ್ರಾಹ್ಯ ಚೈತಾನಿ ಶಿಲಾಯಾಂ ತೇಜಸಾಥವಾ ॥ ೧೫೫ ॥
ಪ್ರದದ್ಯಾತ್ಸರ್ವದೇವೇಭ್ಯೋ ದೇವೀಭ್ಯಶ್ಚಾಪಿ ಪುತ್ರಕ ।
ಘೃತತೈಲಾದಿಯೋಗೇನ ತಾಮ್ರಾದೌ ದೀಪವಹ್ನಿನಾ ॥ ೧೫೬ ॥
ಯದಂಜನಂ ಜಾಯತೇ ತು ದರ್ವಿಕಾ ಪರಿಕೀರ್ತಿತಾ ।
ಸರ್ವಾಭಾವೇ ತು ತದ್ದದ್ಯಾದ್ದೇವೀಭ್ಯೋ ಬಾಹುಜಾಂಜನಂ ॥ ೧೫೭ ॥
ಮಹಾಮಾಯಾ ಜಗದ್ಧಾತ್ರೀ ಕಾಮಾಖ್ಯಾ ತ್ರಿಪುರಾ ತಥಾ ।
ಆಪ್ನುವಂತಿ ತಥಾ ಕೋಷಂ ಷಡ್ಭಿರೇಭಿಃ ಸದಾಂಜನೈಃ ॥ ೧೫೮ ॥
ವಿಧವಾ ನಾಂಜನಂ ಕುರ್ಯಾನ್ಮಹಾಮಾಯಾರ್ಥಮುತ್ತಮಂ ।
ನಾದತ್ತೇ ತ್ವಂಜನಂ ದೇವೀ ವೈಷ್ಣವೀ ವಿಧವಾಕೃತಂ ॥ ೧೫೯ ॥

೧೫೪-೧೫೫. ಎಲೈ ಪುತ್ರನೇ ಕೇಳು. ಸೌವೀರಾಂಜನವೆಂಬುದು, ನೀರಾಗಿರುವುದು. ಯಂಬಲವೆಂಬುದು ಹುಡಿಹುಡಿಯಾಗಿರುವುದು. ಮಯೂರಗ್ರೀವ, ತುತ್ಥ, ಮೇಘನೀಲ, ಎಂಬುವುಗಳು ತೇಜಸ್ಸಸಂಬದವಾದವುಗಳು. ಎಂದರೆ ಜಿಡ್ಡಾಗಿರುವವು. ಇವುಗಳನ್ನು ಕಲ್ಲಿನಮೇಲಾಗಲಿ, ಅಗ್ನಿಯಿಂದಾಗಲಿ, ಸಣ್ಣಗಾಗುವಂತೆ ಮಾಡಿ, ದೇವರಿಗೂ, ದೇವಿಯರಿಗೂ, ಅರ್ಪಿಸಬೇಕು.

೧೫೬. ತುಪ್ಪ, ಎಣ್ಣೆ, ಇವುಗಳನ್ನು ತಾಮ್ರದ ಪಾತ್ರೆಯಲ್ಲಿಟ್ಟು, ದೀಪದ ಶಿಖೆಯಲ್ಲಿ ಯಾವ ಅಂಜನವನ್ನು ಮಾಡುವರೋ ಅದು "ದರ್ವಿಕಾ" ಎನ್ನಿಸಿಕೊಳ್ಳುವುದು.

೧೫೭-೧೫೮. ಬೆಂಕಿಯ ಸೆಕೆಯಿಂದ ಸಿದ್ದಮಾಡಿದ ಆ ಅಂಜನವನ್ನು ಇತರ ಯಾವ ಅಂಜನವೂ ಸಿಕ್ಕದಿದ್ದರೆ ದೇವಿಯರ ಪೂಜೆಗೆ ಅರ್ಪಿಸಬೇಕು. ಜಗನ್ಮಾತೆಯಾದ ಮಹಾಮಾಯಾದೇವಿಯು, ಕಾಮೇಶ್ವರೀದೇವಿಯು, ತ್ರಿಪುರಾದೇವಿಯು, ಸಹ ಈ ಆರು ಅಂಜನಗಳನ್ನು ಒಪ್ಪಿಸುವುದರಿಂದ ಸಂತೋಷವನ್ನು ಹೊಂದುವರು.

೧೫೯. ಪತಿ ಇಲ್ಲದ ಹೆಂಗಸು, ಎಂದರೆ ವಿಧವೆಯಾದವಳು, ಮಹಾಮಾಯಾದೇವಿಯ ಪೂಜೆಗಾಗಿ ಉತ್ತಮವಾದ ಅಂಜನವನ್ನು ಮಾಡಕೂಡದು. ವಿಧವೆಯು ಮಾಡಿದ ಅಂಜನವನ್ನು ವೈಷ್ಣವೀದೇವಿಯು ಸ್ವೀಕರಿಸುವುದಿಲ್ಲ.

ನ ಮೃತ್ಪಾತ್ರೇ ಯೋಜಯೇತ್ತು ಸಾಧಕೋ ನೇತ್ರರಂಜನಂ ।
ನ ಪೂಜಾಫಲಮಾಪ್ನೋತಿ ಮೃತ್ಪಾತ್ರವಿಹಿತಾಂಜನೈಃ ॥ ೧೬೦ ॥

ಚತುರ್ವರ್ಗಪ್ರದೋ ಧೂಪಃ ಕಾಮುದಂ ನೇತ್ರರಂಜನಂ ।
ತಸ್ಮಾದ್ದ್ವಯಮಿದಂ ದದ್ಯಾದ್ದೇವೇಭ್ಯೋ ಭಕ್ತಿತೋ ನರಃ ॥ ೧೬೧ ॥

ಇತಿ ವಾಂ ಕಥಿತೋ ಧೂಪಃ ತಥೋಕ್ತಂ ನೇತ್ರರಂಜನಂ ।
ನೈವೇದ್ಯಂ ತು ಮಹಾದೇವ್ಯಾಃ ಶೃಣ್ವೈಕಾಗ್ರಮನಾಃ ಪುನಃ ॥ ೧೬೨ ॥

॥ ಇತಿ ಶ್ರೀಕಾಲಿಕಾಪುರಾಣೇ ತ್ರಿಸಪ್ತತಿತಮೋಽಧ್ಯಾಯಃ ॥

---

೧೬೦. ಸಾಧಕನಾದವನು ನೇತ್ರಾಂಜನವನ್ನು ಮಣ್ಣಿನ ಪಾತ್ರೆಯಲ್ಲಿ ಇರಿಸ ಬಾರದು. ಮಣ್ಣಿನಪಾತ್ರೆಯಲ್ಲಿ ಮಾಡಿದ ಅಂಜನದಿಂದ ಪೂಜೆಯ ಫಲವು ಲಭಿಸು ವುದಿಲ್ಲ.

೧೬೧. ಧೂಪವು ಚತುರ್ವರ್ಗ ಪುರುಷಾರ್ಥವನ್ನು ಕೊಡುವುದು. ಅಂಜನವು ಕಣ್ಣಿಗೆ ಹಿತಕರವಾದದ್ದು, ಮತ್ತು ಇಷ್ಟಾರ್ಥವನ್ನು ಕೊಡುವುದಾಗಿರುವುದು. ಆದು ದರಿಂದ ಮನುಷ್ಯನು ದೇವರಿಗಾಗಿ ಇವೆರಡನ್ನೂ ಭಕ್ತಿಯಿಂದ ಅರ್ಪಿಸಬೇಕು.

೧೬೨. ನಿಮಗಾಗಿ ಧೂಪದ ವಿಷಯವನ್ನೂ, ನೇತ್ರಾಂಜನದ ವಿಷಯವನ್ನೂ ವಿವರಿಸಿರುವೆನು. ಈಗ ಮಹಾದೇವಿಯ ಪ್ರೀತಿಗಾಗಿ ಸಿದ್ಧಪಡಿಸಬೇಕಾದ ನೈವೇದ್ಯದ ವಿಷಯವನ್ನು ಹೇಳುವೆನು. ಒಂದೇಮನಸ್ಸಿನಿಂದ ಕೇಳಿ.

ಇಲ್ಲಿಗೆ ಕಾಲಿಕಾಪುರಾಣದಲ್ಲಿ ಎಪ್ಪತ್ತಮೂರನೆಯ
ಅಧ್ಯಾಯವು ಮುಗಿದುದು,

॥ ಶ್ರೀ ॥

ಅಥ

॥ಶ್ರೀ ಕಾಲಿಕಾಪುರಾಣೇ ಚತುಃಸಪ್ತತಿತಮೋಽಧ್ಯಾಯಃ॥

॥ ಶ್ರೀ ಭಗವಾನುವಾಚ ॥

ನಿವೇದನೀಯಂ ಯದ್ದ್ರವ್ಯಂ ಪ್ರಶಸ್ತಂ ಪ್ರಯತಂ ತಥಾ ।
ತದ್ಭಕ್ಷ್ಯಾದ್ಯಂ ಪಂಚವಿಧಂ ನೈವೇದ್ಯಮಿತಿ ಗದ್ಯತೇ ॥ ೧ ॥

ಭಕ್ಷ್ಯಂ ಭೋಜ್ಯಂ ಚ ಲೇಹ್ಯಂ ಚ ಪೇಯಂ ಚೋಷ್ಯಂ ಚ ಪಂಚಮಂ ।
ಸರ್ವತ್ರ ಚೈತನ್ನೈವೇದ್ಯಮಾರಾಧ್ಯೇಷ್ಟೇ ನಿವೇದಯೇತ್ ॥ ೨ ॥

ತೇಷು ಪ್ರಿಯತರಂ ದೇವ್ಯಾಃ ಕಥಯೇ ಶೃಣುತಂ ತು ವಾಂ ।
ಭಕ್ಷ್ಯಾದಿಪಂಚಕೈ ರ್ದೇವೀ ದತ್ತೈರೇವಾಭಿತುಷ್ಯತಿ ॥ ೩ ॥

ಎಪ್ಪತ್ತನಾಲ್ಕನೆಯ ಅಧ್ಯಾಯವು.

೧. ಪ್ರಯತ್ನ ಪೂರ್ವಕವಾಗಿ ಪಾಕಮಾಡಿರುವುದಾಗಿಯೂ, ಉತ್ತಮವಾಗಿಯೂ, ಇರುವ ಯಾವ ಪದಾರ್ಥವು ತಿನ್ನಲು ಅರ್ಹವಾಗಿರುವುದೋ ಅದು ನೈವೇದ್ಯವೆನಿಸಿಕೊಳ್ಳುವುದು. ನೈವೇದ್ಯದಲ್ಲಿ ಭಕ್ಷ್ಯವೇ ಮೊದಲಾದ ಐದು ವಿಧಗಳಿರುವವು.

೨. ಭಕ್ಷ್ಯ, ಭೋಜ್ಯ, ಲೇಹ್ಯ, ಪೇಯ, ಚೋಷ್ಯ ಎಂಬುದಾಗಿ ನೈವೇದ್ಯವು ಐದು ವಿಧವಾಗಿರುವುದು. ಇದನ್ನು ಇಷ್ಟದೇವತೆಗೆ ಪೂಜಾಕಾಲದಲ್ಲಿ, ಸಮರ್ಪಿಸಬೇಕು.

೩. ಅವುಗಳಲ್ಲಿ ದೇವಿಗೆ ಇಷ್ಟವಾದದ್ದನ್ನು ಹೇಳುವೆನು, ಕೇಳಿ. ದೇವಿಯು, ಭಕ್ತನು ಒಪ್ಪಿಸಿದ ಭಕ್ಷ್ಯವೇ ಮೊದಲಾದ ಐದು ವಿಧವಾದ ನೈವೇದ್ಯಗಳಿಂದ ದೇವಿಯು ಸಂತುಷ್ಟಳಾಗುವಳು. ವಿಧಿಪೂರ್ವಕವಾಗಿ ಸಮರ್ಪಿಸದೆ ಇರುವ ಯಾವ ನೈವೇದ್ಯವನ್ನೂ ದೇವಿಯು ಸ್ವೀಕರಿಸುವುದಿಲ್ಲ.

ನಾದತ್ತೈ ವಿಧಿವತ್ಕಶ್ಚಿದ್ಪತ್ತ್ರಂ ಚೈತನ್ನ ವಿದ್ಯತೇ ।
ಲಾಂಗಲಂ ಚ ಕಪಿತ್ಥಂ ಚ ದ್ರಾಕ್ಷಾಂ ಕ್ರಮುಕಮೇವ ಚ ॥ ೪ ॥

ಕರಕಂ ಬದರಂ ಕೋಲಂ ಕೂಷ್ಮಾಂಡಂ ಪನಸಂ ತಥಾ ।
ವಕುಲಂ ಚ ಮಧೂಕಂ ಚ ರಸಾಲಾಮ್ರಾತಕೋದ್ಭವಂ ॥ ೫ ॥

ಅಕ್ಷೋಡಂ ಪಿಂಡಖರ್ಜೂರಂ ಕರುಣಂ ಶ್ರೀಫಲಂ ತಥಾ ।
ಔದುಂಬರಂ ಚ ಪುನ್ನಾಗಂ ಮಾಧವಂ ಕರ್ಕಟೀಫಲಂ ॥ ೬ ॥

ಜಾಂಬವಂ ಪಿಂಡಖರ್ಜೂರಂ ಬೀಜಪೂರಂ ಚ ಜಾಂಭವಂ ।
ಪರೀತಕೀಮಾಮಲಕಂ ಷಡ್ವಿಧಂ ನಾಗರಂಗಕಂ ॥ ೭ ॥

ದೇವಕಂ ಮಧುಕಂ ಶೀತಂ ಪಟೋಲಂ ಕ್ಷೀರವೃಕ್ಷಕಂ ।
ಪಾಟಲಂ ಶಾಲಕೇಕುಂಭಮಗ್ನಿಜಂ ಕದಲೀಫಲಂ ॥ ೮ ॥

ತಿಂದುಕಂ ಕುಸುಮಂ ಪೀತಂ ಕಾರವಿಂದಂ ಕರೂಷಕಂ ।
ಗರ್ಭಾವರ್ತಂ ಚ ತತ್ಪುಷ್ಪಂ ಕ್ಷೀರಸ್ರಾವ್ಯಮನಂಗಜಂ ॥ ೯ ॥

೪-೧೦. ತೆಂಗಿನಕಾಯಿ, ಬೇಲದಹಣ್ಣು, ದ್ರಾಕ್ಷಿ, ಅಡಿಕೆ, ದಾಳಿಂಬೆ, ಯಗಚೀಹಣ್ಣು, ಗೆಡ್ಡೆ, ಕುಂಬಳಕಾಯಿ, ಹಲಸಿನಹಣ್ಣು, ವಕುಲದಕಾಯಿ, ಹಿಪ್ಪೆಯಕಾಯಿ, ಕಪಿಯಮಾವು, ಹುಳಿಮಾವು, ಬೆಟ್ಟಗೋಣಿ, ಉಂಡೆಖರ್ಜೂರ, ಕರುಣ, ತೆಂಗಿನಕಾಯಿ, ಅತ್ತಿಯಹಣ್ಣು, ಪುನ್ನಾಗಫಲ, ಮಾಧವ, ಕರ್ಕಟೀಫಲ, ನೇರಿಲಹಣ್ಣು, ಖರ್ಜೂರ, ದಾಳಿಂಬಿ, ಮಾದಲ, ಜಂಭಲ, ನೆಲ್ಲಿಯಕಾಯಿ, ಅಳಲೀಕಾಯಿ, ಆರು ವಿಧವಾದ ಶುಂಠಿ ದೇವತುಂಬೆ, ಅತಿಮಧುರ, ಮತ್ತಿ, ಪಸವಲ, ಕ್ಷೀರವೃಕ್ಷ, ಪಾದರಿ, ಮತ್ತಿ, ಕೇಕುಂಭ, ಅಗ್ನಿಜ, ಬಾಳೇಹಣ್ಣು, ತಿಂದುಕ, ಕುಸುಮ, ಪೀತ, ಕಳ್ಳೀಕಾಯಿ, ಕರೂಷಕ, ಗರ್ಭಾವರ್ತ, ಮತ್ತು ಅದರಹೂವು, ಕ್ಷೀರಸ್ರಾವ್ಯ, ಅನಂಗಜ, ಕೆಸರಿನಲ್ಲಿ ಬೆಳೆದಿರುವ ಕೆಲವು ಮರಗಳ ಹಣ್ಣು, ಕಾಡಿನಲ್ಲಿ ಯಥೇಚ್ಛವಾಗಿ ಬೆಳೆಯುವ ಇತರ ಹಣ್ಣುಗಳು, ಕನ್ನೈದಿಲೆ,

ಕುಮುದಾನಾಂ ಸಂಕಜಾನಾಂ ಫಲಾನಿ ವಿವಿಧಾನಿ ಚ ।
ವನ್ಯಾನಾಂ ಸಕಲೈರ್ದ್ದೇವೀಂ ಫಲೈಃ ಪುಷ್ಪೈಃ ಪ್ರಪೂಜಯೇತ್ ॥ ೧೦ ॥

ಋತೇ ಶ್ಲೇಷ್ಮಾತಕಂ ಬಿಂಬಶೈಲಕಂ ವೈಷ್ಣವೀಂ ತಥಾ ।
ಸರ್ವೇಷಾಂ ಫಲಜಾತೀನಾಂ ಮಧ್ಯೇ ದೇವೀಪ್ರಿಯಂ ಫಲಂ ॥ ೧೧ ॥

ಲಾಂಗಲಂ ಮಾತುಲುಂಗಂ ಚ ಕರಮರ್ದಂ ರಸಾಲಕಂ ।
ಏವಂ ಫಲಾನಿ ದೇಯಾನಿ ಕಾಮಾಖ್ಯಾಯೈ ಚ ಭೈರವ ॥ ೧೨ ॥

ತ್ರಿಪುರಾಯೈ ತಥಾ ಸಮ್ಯಕ್ಪೀಠದೇವೇಭ್ಯ ಏವ ಚ ।
ಶೃಂಗಾಟಕಂ ಕಶೇರುಂ ಚ ಶಾಲೂಕಂ ಚ ಮೃಡಾಲಕಂ ॥ ೧೩ ॥

ಶೃಂಗಾರಕಂ ಕಾಂಚನಂ ಚ ಸ್ಥೂಲಂ ಕಂದಂ ಬಕೂಲಕಂ ।
ಏವಮಾದೀನಿ ಕಂದಾನಿ ದೇವ್ಯೈ ಸರ್ವಾಣಿ ಚೋತ್ಸೃಜೇತ್ ॥ ೧೪ ॥

ಪರಮಾನ್ನಂ ಪಿಷ್ಟಕಂ ಚ ಯಾವಕಂ ಕೃಸರಂ ತಥಾ ।
ಮೋದಕಂ ಪೃಥುಕಾದೀನಿ ಕಂದಪಕ್ವಾನಿ ಚೋತ್ಸೃಜೇತ್ ॥ ೧೫ ॥

ಕಮಲದ ಹೂವು, ಕಾಡಿನಲ್ಲಿ ಬೆಳೆಯುವ ಅನೇಕ ವಿಧವಾದ ಹಣ್ಣುಗಳು, ಹೂವು, ಇವೆಲ್ಲದರಿಂದಲೂ ದೇವಿಯನ್ನು ಪೂಜಿಸಬೇಕು.

೧೧-೧೨. ವೈಷ್ಣವೀಪೂಜೆಯಲ್ಲಿ ಶ್ಲೇಷ್ಮಾತಕ, ಬಿಂಬ, ಶೈಲಕ, ಇವುಗಳನ್ನು ವರ್ಜಿಸಬೇಕು. ಈಗ ಹೇಳಿರುವವುಗಳಲ್ಲಿ ಹಣ್ಣು ಬಿಡುವ ಜಾತಿಯಲ್ಲಿ ಲಾಂಗಲ, ಮಾದಲದಹಣ್ಣು, ಕಮರಿಕೆಹಣ್ಣು, ಇವುಗಳು ಕಾಮೇಶ್ವರೀ ದೇವಿಗೂ, ತ್ರಿಪುರಾ ದೇವಿಗೂ, ಪೀಠದೇವಿಯರಿಗೂ ಪ್ರೀತಿದಾಯಕವು.

೧೩-೧೪. ತಾವರೇಗೆಡ್ಡೆ, ಬೇಲ ನೇದಿಲೇಗೆಡ್ಡೆ, ಮೃಡಾಲಕ. ಅಡಿಕೆ, ಕಾಂಚನ, ಸ್ಥೂಲಕಂದ, ಬಕೂಲಕ, ಇವೇ ಮೊದಲಾದ ಗೆಡ್ಡೆಗಳನ್ನು ದೇವಿಗೆ ಸಮರ್ಪಿಸಬೇಕು.

೧೫-೧೭. ಪರಮಾನ್ನ, ತಂಬಿಟ್ಟು, ಗಂಜಿ, ಜಿಗಳಿ, ಕಡಬು, ಅವಲಕ್ಕಿ, ಬೇಯಿಸಿದ ಗೆಡ್ಡೆಗೆಣಸು, ಹವಿಸ್ಸು, ಉತ್ತಮವಾದ ಅಕ್ಕಿಯ ಅನ್ನ, ಇವುಗಳಿಗೆ

ಪನಿಃ ಶಾಲ್ಯೋದನಂ ದಿವ್ಯಮಾಜ್ಯಯುಕ್ತಂ ಸ ಶರ್ಕರಂ ।
ನಿವೇದಯೇನ್ಮಹಾದೇವ್ಯೈ ಸರ್ವಾಣಿ ವ್ಯಂಜನಾನಿ ಚ ॥ ೧೬ ॥

ಕ್ಷೀರಾದೀನ್ಯಥ ಗವ್ಯಾನಿ ಮಾಹಿಷ್ಯಾದೀನಿ ಸರ್ವಶಃ ।
ಅಜಾವಿಕಾನ್ಮೃಗಾಣಾಂ ಚ ಕ್ಷೀರಾದೀನಿ ನಿವೇದಯೇತ್ ॥ ೧೭ ॥

ಮಧ್ವಾದೀನಿ ಚ ಸರ್ವಾಣಿ ಗುಡಧಾನಾಃ ಸಿತಾ ತಥಾ ।
ಅನ್ನಾನಿ ಚೈವ ಪಾನಾನಿ ಸರ್ವಾಣಿ ವಿನಿವೇದಯೇತ್ ॥ ೧೮ ॥

ಸರ್ವಂ ಸುರಭಿಗಂಧಾಢ್ಯಂ ವ್ಯಂಜನಂ ಸುಮನೋಹರಂ ।
ಶಾಕಮಾಂಸಾದಿಸಂಭೂತಂ ಮಹಾದೇವ್ಯೈ ನಿವೇದಯೇತ್ ॥ ೧೯ ॥

ಆಮಿಷಂ ಪರಮಾನ್ನಂ ಚ ದಧಿಸರ್ಪಿಸ್ಸಶರ್ಕರಂ ।
ಮಹಾದೇವ್ಯೈ ನಿವೇದ್ಯಾಥ ವಾಜಿಮೇಧಫಲಂ ಲಭೇತ್ ॥ ೨೦ ॥

ಸಿತಾಸಮ್ಮಿಶ್ರಿತಾಂ ದತ್ತ್ವಾ ಸುರಾಂ ಮಧುಸಮನ್ವಿತಾಂ ।
ದೇವಿಲೋಕೇ ಚಿರಂ ಸ್ಥಿತ್ವಾ ರಾಜಾ ಕ್ಷಿತಿತಲೇ ಭವೇತ್ ॥ ೨೧ ॥

ತುಪ್ಪ, ಸಕ್ಕರೆ ಸೇರಿಸಿ ಎಲ್ಲಾ ನೈವೇದ್ಯವನ್ನೂ, ವ್ಯಂಜನಗಳ ಜೊತೆಯಲ್ಲಿ ಮಹಾ ದೇವಿಗೆ ಸಮರ್ಪಿಸಬೇಕು.

೧೮-೨೦. ಅನೇಕ ವಿಧವಾದ ಮದ್ಯಗಳು, ಅವಲಕ್ಕಿ, ಬೆಲ್ಲ ಮೊದಲಾದ ತಿಂಡಿಗಳು, ವಿಧ ವಿಧವಾದ ಅನ್ನಗಳು, ಕುಡಿಯಲು ಯೋಗ್ಯವಾದ ಪಾನೀಯಗಳು, ಸುವಾಸನೆಯುಳ್ಳ ಉತ್ತಮವಾದ ವ್ಯಂಜನಗಳು, ಮನಸ್ಸಿಗೆ ಹಿತಕರವಾದ ತರಕಾರಿ, ಮಾಂಸ ಇವುಗಳಿಂದ ಮಾಡಿದ ಪದಾರ್ಥಗಳು, ಮಾಂಸ, ಪಾಯಸ, ಇವುಗಳನ್ನೂ, ಮೊಸರು, ತುಪ್ಪ, ಸಕ್ಕರೆ, ಇವುಗಳನ್ನೂ ಮಹಾದೇವಿಗೆ ಒಪ್ಪಿಸಿದನೆ ಅಶ್ವಮೇಧ ಯಜ್ಞಮಾಡಿದ ಫಲವು ಬರುವುದು.

೨೧. ಮದ್ಯ, ಮಧು, ಇವುಗಳಿಗೆ, ಸಕ್ಕರೆಯನ್ನು ಸೇರಿಸಿ ದೇವಿಗೆ ಒಪ್ಪಿಸಿ ದನೆ ದೇವಿಯ ಲೋಕದಲ್ಲಿ ಬಹಳ ಕಾಲ ಇದ್ದು ಭೂಮಿಯಲ್ಲಿ ರಾಜನಾಗುವನು.

ಲಾಂಗಲಂ ಕ್ರಮುಕಂ ದತ್ತ್ವಾ ರುಚಕಂ ಕರಮರ್ದಕಂ ।
ಸೌಭಾಗ್ಯಮತುಲಂ ಪ್ರಾಪ್ಯ ದೇವಿಲೋಕೇ ಮಹೀಯತೇ ॥ ೨೨ ॥

ಮಾಷಾ ಮುದ್ಗಾ ಮಸೂರಾಂಶ್ಚ ತಿಲಾ ಭಂಗಾಂಸ್ತಥೈವ ಚ ।
ಯವಾದೀನ್ಯಥ ಸರ್ವಾಣಿ ಯಥಾಯೋಗ್ಯಂ ನಿವೇದಯೇತ್ ॥ ೨೩ ॥

ಯಥಾ ಯಥಾ ಭವೇದ್ಭಕ್ಷ್ಯಂ ಯಥಾ ದ್ರವ್ಯಂ ತಥಾ ತಥಾ ।
ಸಂಸ್ಕೃತ್ಯ ವೇಶವಾರಾದ್ಯೈರ್ಮಹಾದೇವ್ಯೈ ನಿವೇದಯೇತ್ ॥ ೨೪ ॥

ಮಹಾವೀರೋ ಮುನಿರ್ವಾಪಿ ಬ್ರಾಹ್ಮಣಶ್ಚೇತರೋಽಥವಾ ।
ಯದ್ಯದ್ಭಕ್ಷ್ಯಂ ಸ್ವಮರ್ಥಂ ತು ಪ್ರಕಲ್ಪ್ಯಂ ಸ್ಯಾದ್ಯಥಾ ಯಥಾ ॥ ೨೫ ॥

ತಥಾ ತಥಾ ಮಹಾದೇವ್ಯೈ ಭಕ್ತ್ಯಾಯುಕ್ತೋ ನಿವೇದಯೇತ್ ।
ಸಂಸ್ಕಾರ್ಯಾಣ್ಯಥ ಸಂಸ್ಕೃತ್ಯ ಯಥಾ ಸಂಸ್ಕಾರಕಂ ಭವೇತ್ ॥ ೨೬ ॥

---

೨೨. ಲವಂಗ, ಅಡಿಕೆ, ಪಚ್ಚಕರ್ಪೂರ, ಕರಮರ್ದಕ, ಇವುಗಳನ್ನು ದೇವಿಗಾಗಿ ಅರ್ಪಿಸಿದಲ್ಲಿ, ಅಸದೃಶವಾದ ಸೌಂದರ್ಯವನ್ನು ಹೊಂದಿ ದೇವಿಯ ಲೋಕದಲ್ಲಿ ಗೌರವಿಸಲ್ಪಡುವನು.

೨೩. ಉದ್ದು, ಹೆಸರು, ತಡಗಣಿ, ಎಳ್ಳು, ಅಕ್ಕಿ, ಭಂಗ ಇವೆಲ್ಲವನ್ನೂ ಯಥಾಯೋಗ್ಯವಾಗಿ ಸಿದ್ಧಪಡಿಸಿ ದೇವಿಗೆ ನಿವೇದಿಸಬೇಕು.

೨೪. ಯಾವ ದ್ರವ್ಯಕ್ಕೆ ಅನುರೂಪವಾದ ಭಕ್ಷ್ಯವು ಹೇಗೆ ಹೇಗೆ ಮಾಡಿದರೆ ಸರಿಹೋಗುವುದೋ, ಆ ರೀತಿಯಾಗಿ ಅತಿನಿಪುಣರಿಂದ ಸಂಸ್ಕಾರಮಾಡಿಸಿ ಮಹಾದೇವಿಗೆ ನೈವೇದ್ಯಮಾಡಬೇಕು.

೨೫. ಬಹಳ ಶೂರನಾದ ರಾಜನಾಗಲಿ, ಮುನಿಯಾಗಲಿ, ಬೇರೆಯವರಾಗಲಿ, ಬ್ರಾಹ್ಮಣನೇ ಆಗಲಿ, ಯಾರೇ ಆದಾಗ್ಯೂ ಯಾವ ಯಾವ ಭಕ್ಷ್ಯವನ್ನು ಮಾಡಲು ಹೇಗೆ ಹೇಗೆ ಎಷ್ಟರಮಟ್ಟಿಗೆ ಅನುಕೂಲವಾಗುವುದೋ, ಹಾಗೆ ಹಾಗೆ ಅವುಗಳನ್ನು ಸಿದ್ಧಪಡಿಸಿ ಭಕ್ತಿಯಿಂದ ಆವುಗಳನ್ನು ಮಹಾದೇವಿಗೆ ಒಪ್ಪಿಸಬೇಕು.

೨೬. ಸಂಸ್ಕಾರಮಾಡಲು ಯೋಗ್ಯವಾದ ಪದಾರ್ಥಗಳನ್ನು ಕ್ರಮವಾದ ರೀತಿಯಲ್ಲಿ ಸಂಸ್ಕಾರಮಾಡಿ, ದೇವಿಗೆ ಸಮರ್ಪಿಸಬೇಕು.

ಸಂಸ್ಕಾರ್ಯಶ್ಚ ಯಥಾ ತಸ್ಯಾಸ್ತತ್ತದ್ದದ್ಯಾತ್ತಥಾ ತಥಾ ।
ಯತ್ಪೂತಿಗಂಧಸಂಯುಕ್ತಂ ದಗ್ಧಂ ಭೋಜ್ಯವಿವರ್ಜಿತಂ ॥ ೨೭ ॥

ತದುಕ್ತಮಪಿ ನೋದದ್ಯಾನ್ಮಹಾದೇವ್ಯೈ ಕದಾಚನ ।
ತಾಂಬೂಲಂ ಗಂಧಸಂಯುಕ್ತಂ ಕರ್ಪೂರಾದ್ಯಧಿವಾಸಿತಂ ॥ ೨೮ ॥

ಸಂಚೂರ್ಣ್ಯೈರ್ಜಲಜಾನಾಂ ಚ ಸಂಸ್ಕೃತಂ ವಿನಿವೇದಯೇತ್ ।
ಬಲಿದಾನೇಷು ವಿಹಿತಾ ಯ ಏವ ಮೃಗಪಕ್ಷಿಣಃ ॥ ೨೯ ॥

ತೇಷಾಂ ಮಾಂಸಾನಿ ಮತ್ಸ್ಯಾನಾಂ ಮಾಂಸಾನಿ ಚ ನಿವೇದಯೇತ್ ।
ಖಡ್ಗವಾಧ್ರೀಣಸಚ್ಛಾಗಮಾಂಸೈರ್ಮಿಶ್ರೀಕೃತೈಃ ಕೃತಂ ॥ ೩೦ ॥

ವ್ಯಂಜನಂ ಸ್ವಾದುಗಂಧಾಢ್ಯಂ ವಾಸಿತಂ ಸುಮನೋಹರಂ ।
ಸಕೃದ್ದತ್ತ್ವಾ ಮಹಾದೇವ್ಯೈ ಸಾರ್ವಭೌಮೋ ನೃಪೋ ಭವೇತ್ ॥ ೩೧ ॥

---

೨೭. ಯಾವ ಪದಾರ್ಥವು ದುರ್ಗಂಧವುಳ್ಳದ್ದಾಗಿಯೂ ಸುಟ್ಟುಹೋಗಿಯೂ ತಿನ್ನುವುದಕ್ಕೆ ಅನರ್ಹವಾಗಿಯೂ ಇರುವುದೋ ಆ ಪದಾರ್ಥವು ದೇವಿಗೆ ಕೊಡತಕ್ಕ ವಸ್ತುಗಳಲ್ಲಿ ಸೇರಿದ್ದಾಗ್ಯೂ, ಆದನ್ನು ಯಾವಾಗಲೂ ಮಹಾದೇವಿಗೆ ಒಪ್ಪಿಸಬಾರದು.

೨೮. ತಾಂಬೂಲವನ್ನು ಕರ್ಪೂರದಿಂದಲೂ, ಸುಗಂಧದ್ರವ್ಯಗಳಿಂದಲೂ, ವಾಸನೆಯನ್ನು ಕಟ್ಟಿ, ಚೆನ್ನಾಗಿ ತೊಳೆದು ಸಂಸ್ಕಾರಮಾಡಿ ದೇವಿಗೆ ನೈವೇದ್ಯಮಾಡ ಬೇಕು.

೨೯. ಬಲಿಯನ್ನು ಕೊಡುವುದಕ್ಕೆ ಯಾವ ಮೃಗಗಳೂ, ಪಕ್ಷಿಗಳೂ ಯೋಗ್ಯ ವೆಂದು ಹೇಳಿರುವುದೋ, ಅವುಗಳ ಮತ್ತು ಮೀನುಗಳ ಮಾಂಸವನ್ನು ದೇವಿಗೆ ನೈವೇದ್ಯಮಾಡಬೇಕು.

೩೦-೩೧. ಖಡ್ಗಮೃಗ, ಜಿಂಕೆ, ಆಡು, ಇವುಗಳ ಮಾಂಸಕ್ಕೆ, ಸಿದ್ಧಪಡಿಸಿ ರುಚಿ ಕರವಾಗಿಯೂ, ಮನೋಹರವಾಗಿಯೂ, ಒಳ್ಳೆಯ ವಾಸನೆಯಿಂದಕೂಡಿಯೂ ಇರುವ ವ್ಯಂಜನವನ್ನು ಮಿಶ್ರಮಾಡಿ, ಮಹಾದೇವಿಗೆ ಒಂದುಸಾರಿ ಅರ್ಪಿಸಿದಮಾತ್ರದಿಂದಲೇ ಅವನು ಚಕ್ರವರ್ತಿಯಾಗುವನು.

ಮೂಲಕೈರೇಣಮಾಂಸೇನ ಲೋಹಪಾತ್ರೇ ಸುಸಂಸ್ಕೃತಂ ।
ವ್ಯಂಜನಂ ಗಂಧಿನಂ ದತ್ವಾ ದೇವೀಲೋಕಮಾವಾಪ್ನುಯಾತ್ ॥ ೩೨ ॥

ಖರ್ಜೂರಪಿಂಡಖರ್ಜೂರಂ ಯವಚೂರ್ಣಂ ಚ ಸಾಜ್ಯಕಂ ।
ವೈಷ್ಣವ್ಯೈ ವಿನಿವೇದ್ಯೈವ ರಾಜಸೂಯಫಲಂ ಲಭೇತ್ ॥ ೩೩ ॥

ಕೃಸರಾನ್ನಪ್ರದಾನೇನ ಸೌಭಾಗ್ಯಮತುಲಂ ಭವೇತ್ ।
ದತ್ತ್ವೈವ ನಾರಿಕೇಳಾಂಬು ವಹ್ನಿಷ್ಟೋಮಫಲಂ ಲಭೇತ್ ॥ ೩೪ ॥

ಜಾಂಬವಂ ಲವಲೀಧಾತ್ರೀಶ್ರೀಫಲಾನಿ ನಿವೇದ್ಯ ಚ ।
ವಹ್ನಿಷ್ಟೋಮಫಲಂ ಲಬ್ಧ್ವಾ ದೇವೀಲೋಕಮಾವಾಪ್ನುಯಾತ್ ॥ ೩೫ ॥

ದ್ರಾಕ್ಷಾಂ ಸಿತಾಸಮಾಯುಕ್ತಾಂ ನಾಗರಂಗಕಸಂಯುತಾಂ ।
ವಿನಿವೇದ್ಯ ಮಹಾದೇವ್ಯೈ ಲಕ್ಷ್ಮೀವಾನ್ ರೂಪವಾನ್ ಭವೇತ್ ॥ ೩೬ ॥

---

೩೨. ಮೂಲಕ, ಸಾರಗ ಈ ಮೃಗಗಳ ಮಾಂಸಗಳನ್ನು ಲೋಹಪಾತ್ರೆಯಲ್ಲಿ ಸಿದ್ಧಪಡಿಸಿ, ವಾಸನೆಗಟ್ಟಿದ ವ್ಯಂಜನವನ್ನು ಸೇರಿಸಿ, ದೇವಿಗೆ ಅರ್ಪಿಸಿದಲ್ಲಿ ದೇವಿಯಲೋಕವನ್ನು ಹೊಂದುವನು.

೩೩. ಖರ್ಜೂರ, ಪಿಂಡಖರ್ಜೂರ, ಗೋಧಿಹಿಟ್ಟು, ಇವನ್ನೂ, ತುಪ್ಪವನ್ನೂ ಸಹ ವೈಷ್ಣವೀದೇವಿಗೆ ಅರ್ಪಿಸಿದಲ್ಲಿ, ಅಷ್ಟುಮಾತ್ರದಿಂದಲೇ ರಾಜಸೂಯಯಾಗ ಮಾಡಿದ ಫಲವು ಬರುವುದು.

೩೪. ತಿಲಾನ್ನವನ್ನು ದೇವಿಗೆ ಅರ್ಪಿಸಿದಲ್ಲಿ ಅನುಪಮವಾದ ಸೌಂದರ್ಯವು ಉಂಟಾಗುವುದು. ತೆಂಗಿನಕಾಯಿನ ನೀರನ್ನು ದೇವಿಗೆ ಅರ್ಪಿಸಿದರೆ ಅಗ್ನಿಷ್ಟೋಮದ ಫಲವನ್ನು ಹೊಂದಿ ದೇವೀಲೋಕವನ್ನು ಹೊಂದುವನು.

೩೫. ನೇರಳೆಹಣ್ಣು, ಲವಲೀ, ನೆಲ್ಲಿಕಾಯಿ, ತೆಂಗಿನಕಾಯಿ ಇವುಗಳನ್ನು ದೇವಿಗೆ ನೈವೇದ್ಯ ಮಾಡಿದರೆ ಅಗ್ನಿಷ್ಟೋಮದ ಫಲವನ್ನು ಹೊಂದಿ ದೇವೀಲೋಕವನ್ನು ಹೊಂದುವನು.

೩೬. ಸಕ್ಕರೆಯನ್ನೂ, ದ್ರಾಕ್ಷೆಯನ್ನೂ ನಾಗರಂಗಕಫಲಸಹಿತ ಮಹಾದೇವಿಗೆ ಒಪ್ಪಿಸಿದರೆ ಐಶ್ವರ್ಯವಂತನೂ, ರೂಪವಂತನೂ ಸಹ ಆಗುವನು.

ಧಾನ್ಯಂ ಚ ವೃಧುಕಂ ದೇವ್ಯೈ ದತ್ವಾ ಶ್ರಿಯಮವಾಪ್ನುಯಾತ್ ।
ಇಕ್ಷುದಂಡಂ ಮುದ್ಗದಂಡಂ ನವನೀತಂ ನಿವೇದ್ಯ ಚ ॥ ೩೭ ॥

ಸೌಭಾಗ್ಯಮತುಲಂ ಪ್ರಾಪ್ಯ ದೇವಿಲೋಕೇ ಮಹೀಯತೇ ।
ನವನೀತಸಮಾಯುಕ್ತಂ ತಿಲಂ ದೇವ್ಯೈ ನಿವೇದ್ಯ ಚ ॥ ೩೮ ॥

ಇಹ ಕಾಮಾನವಾಪ್ಯೈವ ಮೃತೋ ಮೋಕ್ಷಮವಾಪ್ನುಯಾತ್ ।
ಅಭಕ್ಷ್ಯವರ್ಜ್ಯಂ ಸರ್ವಾನ್ನಂ ವ್ಯಂಜನೇನ ಸಮನ್ವಿತಂ ॥ ೩೯ ॥

ಭೋಜ್ಯವತ್ಪರಿಕಲ್ಪ್ಯಾಥ ಮಹಾದೇವ್ಯೈ ನಿವೇದಯೇತ್ ।
ರತ್ನತೋಯಸಮಾಯುಕ್ತಂ ಸಲಿಲಂ ನಾರಿಕೇಳಜಂ ॥ ೪೦ ॥

ಕ್ಷೀರಾಜ್ಯಮಧುಭಿರ್ಮಿಶ್ರಂ ಸಿತಾದಧಿಸಮನ್ವಿತಂ ।
ಯಸ್ತೈಜಸೇನ ಪಾತ್ರೇಣ ಪೇಯಂ ದೇವ್ಯೈ ನಿವೇದಯೇತ್ ॥ ೪೧ ॥

---

೩೭. ಅವಲಕ್ಕಿಯನ್ನೂ, ಹುರಿದ ಅಕ್ಕಿಯನ್ನೂ ದೇವಿಗೆ ಅರ್ಪಿಸಿದರೆ ಐಶ್ವರ್ಯವನ್ನು ಹೊಂದುವನು. ಕಬ್ಬಿನಜಲ್ಲೆಯನ್ನೂ, ಹೆಸರು, ಬೆಣ್ಣೆ ಇವುಗಳನ್ನೂ ನಿವೇದನ ಮಾಡುವುದರಿಂದ ಹೆಚ್ಚಾದ ಸೌಂದರ್ಯವನ್ನು ಹೊಂದಿ ದೇವಿಯಲೋಕದಲ್ಲಿ ಪೂಜಿಸಲ್ಪಡುವುದು.

೩೮. ಬೆಣ್ಣೆಯಿಂದ ಕೂಡಿದ ಎಳ್ಳನ್ನು ದೇವಿಗೆ ನೈವೇದ್ಯ ಮಾಡುವುದರಿಂದ ಈ ಲೋಕದಲ್ಲಿ ಕಾಮಗಳನ್ನು ಅನುಭವಿಸಿ, ಅನಂತರ ಮೋಕ್ಷವನ್ನು ಹೊಂದುವನು.

೩೯. ಭಕ್ಷಣೆಗೆ ಅರ್ಹವಾಗದಿರುವುದನ್ನು ಬಿಟ್ಟು, ಎಲ್ಲಾ ವಿಧವಾದ ಅನ್ನವನ್ನೂ ವ್ಯಂಜನದಸಂಗಡ ತಿಂಡಿಯಂತೆ ಮಾಡಿ ಮಹಾದೇವಿಗೆ ನೈವೇದ್ಯ ಮಾಡಬೇಕು.

೪೦-೪೧. ಎಳನೀರಿಗೆ ಹಾಲು, ತುಪ್ಪ, ಜೇನು, ಸಕ್ಕರೆ ಇವುಗಳನ್ನು ಹಾಕಿ ರತ್ನದ ಅಥವಾ ಚಿನ್ನದ ಪಾತ್ರೆಯಲ್ಲಿಟ್ಟು, ಭಕ್ತಿಯಿಂದ ದೇವಿಗೆ ನಿವೇದನ ಮಾಡಿದವನ ಪುಣ್ಯಫಲವನ್ನು ಹೇಳುವೆನು ಕೇಳು.—

ಭಕ್ತಿಪ್ರವಣಚಿತ್ತೇನ ತಸ್ಯ ಪುಣ್ಯಫಲಂ ಶೃಣು ।
ಕಲ್ಪಕೋಟಿಸಹಸ್ರಾಣಿ ಕಲ್ಪಕೋಟಿಶತಾನಿ ಚ ॥ ೪೨ ॥

ಸ್ಥಿತ್ವಾ ದೇವೀಪುರೇ ಧೀರಃ ಸಾರ್ವಭೌಮೋ ಭವೇತ್ ಕ್ಷಿತೌ ।
ತತಃ ಪರಂ ತು ಕೈವಲ್ಯಮಾಪ್ನೋತಿ ಚ ಯಥೇಚ್ಛಯಾ ॥ ೪೩ ॥

ಕಲಾಯಂ ಚ ಸನೀವಾರಂ ಕ್ವಥಿತಂ ದಧಿಸಂಯುತಂ ।
ಮಹಾದೇವ್ಯೈ ನಿವೇದ್ಯೈವ ಕಾಮಮಿಷ್ಟಮವಾಪ್ನುಯಾತ್ ॥ ೪೪ ॥

ಮರೀಚಂ ಪಿಪ್ಪಲೀಕೋಲಂ ಜೀರಕಂ ತಂತುಭಂ ತಥಾ ।
ಸಂಸ್ಕಾರೇ ಚ ಸಮುಕ್ಷೇ ಚ ಮಹಾದೇವ್ಯೈ ನಿವೇದಯೇತ್ ॥ ೪೫ ॥

ತಿಂತಿಡೀಂ ಖಂಡಸಂಯುಕ್ತಾಂ ಭಕ್ತ್ಯಾ ಯುಕ್ತೋ ನಿವೇದ್ಯ ಚ ।
ಜ್ಯೋತಿಷ್ಟೋಮಫಲಂ ಲಬ್ಧ್ವಾ ದೇವೀಲೋಕಮವಾಪ್ನುಯಾತ್ ॥ ೪೬ ॥

ರಾಜಮಾಷಂ ಮಸೂರಂ ಚ ಪಾಲಕಂ ಚಾಥ ಪೋತಿಕಾಂ ।
ಕಾಲಶಾಕಂ ಕಲಾಪಂ ಚ ಬ್ರಾಹ್ಮೀಮೂಲಕಮೇವ ಚ ॥ ೪೭ ॥

೪೨-೪೩. ನೂರುಸಹಸ್ರಕೋಟಿ ಕಲ್ಪಗಳವರೆಗೂ ದೇವಿಯ ಪಟ್ಟಣವಲ್ಲಿ ಸುಖದಿಂದಿದ್ದು ಅನಂತರ ಭೂಮಿಯಲ್ಲಿ ಚಕ್ರವರ್ತಿಯಾಗಿದ್ದು ನಂತರ ಪರಲೋಕದಲ್ಲಿ ತನ್ನ ಇಚ್ಛಾನುಸಾರವಾಗಿ ಮೋಕ್ಷವನ್ನು ಹೊಂದುವನು.

೪೪. ನೆಲಗಡಲೆಯಜೊತೆಗೆ ನವಣೆಯನ್ನು ಸೇರಿಸಿ ಕುದಿಸಿ, ಮೊಸರನ್ನು ಸೇರಿಸಿ ಮಹಾದೇವಿಗೆ ನೈವೇದ್ಯವನ್ನು ಮಾಡಿದರೆ ಬೇಕಾದ ಇಷ್ಟವನ್ನು ಹೊಂದುವನು.

೪೫. ಮೆಣಸು, ಹಿಪ್ಪಲಿ, ಬಿಕ್ಕೆಮೆಣಸು, ಜೀರಿಗೆ, ಸಾಸುವೆ ಇವುಗಳನ್ನು ಸಮವಾಗಿ ಸೇರಿಸಿ, ಸಿದ್ಧಪಡಿಸಿ ಮಹಾದೇವಿಗೆ ನೈವೇದ್ಯವನ್ನು ಮಾಡಬೇಕು.

೪೬. ತಿಂತಿಡಿಯನ್ನು ಕಲ್ಲುಸಕ್ಕರೆಯೊಡನೆ ಸಂಸ್ಕಾರಮಾಡಿ ಭಕ್ತಿಯಿಂದ ದೇವಿಗೆ ನೈವೇದ್ಯ ಮಾಡಿದರೆ, ಅಗ್ನಿಷ್ಟೋಮದ ಫಲವನ್ನು ಹೊಂದಿ ದೇವೀಲೋಕವನ್ನು ಹೊಂದುವನು.

೪೭-೪೯. ಅಲಸಂದೆಕಾಳು, ಮಸೂರಧಾನ್ಯ, ಪಾಲಕ, ಪೋತಿಕಾ, ಕರಬೇವು ನೆಲಗಡಲೆ, ಹೊನಗೊನೆಸೊಪ್ಪು, ಚಕವರ್ತೀಸೊಪ್ಪು, ಬಚ್ಚಲುಸೊಪ್ಪು, ಕಂಚುಕ, ಹಾಮಚೀಬಳ್ಳಿ, ತಗಚೀಸೊಪ್ಪು, ವಿದ್ರುಮಪತ್ರ, ಪುನರ್ನವಾ (ಮಳ್ಳವರೆ ಮುಸಿ) ಇವುಗಳನ್ನು ತರಕಾರಿಯಂತೆ ಸಂಸ್ಕಾರ ಮಾಡಿ ದೇವಿಗೆ ಭಕ್ತಿಯಿಂದ ಅರ್ಪಿಸಬೇಕು.

ನಾಸ್ಯೂಕಂ ಚ ಕಲಂಬೀಂ ಚ ಕಂಚುಕಂ ಹಿಲಮೋಚಿಕಾಂ ।
ಚಕ್ರಂ ವಿದ್ರುಮಪತ್ರಂ ಚ ತಥೈವ ಚ ಪುನರ್ನವಾಂ ॥ ೪೮ ॥

ಶಾಕಾನೇತಾ ಮಹಾದೇವ್ಯೈ ಯೋಜಯೇದ್ಭಕ್ತಿಸಂಯುತಃ ।
ಸೋಽತುಲಾಂ ಶ್ರಿಯಮಾಪ್ನೋತಿ ಮಮ ಲೋಕೇ ಮಹೀಯತೆ ॥ ೪೯ ॥

ಶ್ರದ್ಧಾ ಪರೀಷ್ಟಿಸಂಸ್ಕಾರಭಕ್ತಿದ್ರವ್ಯಾಭಿಸಂಭ್ರಮಂ ।
ರಾಗಾಧಿಕ್ಯಾತ್ ಫಲಾಧಿಕ್ಯಂ ಹೀನಾದ್ಭೈ ಹೀನತಾಂ ವ್ರಜೇತ್ ॥ ೫೦ ॥

ಮಂತ್ರಕಾಲವಿರುದ್ಧಾನಿ ನೈವೇದ್ಯಾನಿ ಕದಾಚನ ।
ದೇವೇಭ್ಯೋ ನೋಪಯುಂಜೀತ ಗುರುತಾವಿಹಿತಾನಿ ಚ ॥ ೫೧ ॥

ರಾಜತೇ ವಾಽಥ ಸೌವರ್ಣೇ ತಾಮ್ರೇ ವಾ ಪ್ರಸ್ತರೇಽಪಿ ಚ ।
ಪದ್ಮಪತ್ರೇಽಥವಾ ದದ್ಯಾನ್ನೈವೇದ್ಯಂ ಮತ್ಪ್ರಿಯಾಪ್ರಿಯಂ ॥ ೫೨ ॥

ತೈಜಸೇಷು ಚ ಪಾತ್ರೇಷು ಸೌವರ್ಣಂ ತಾಮ್ರಮೇವ ವಾ ।
ಪ್ರಾಶನಾರ್ಥಮುಪಾದದ್ಯಾದರ್ಘ್ಯಪಾತ್ರಾರ್ಥಮೇವ ವಾ ॥ ೫೩ ॥

ಹಾಗೆ ಒಪ್ಪಿಸಿದವನು ಬಹಳ ಐಶ್ವರ್ಯವನ್ನು ಹೊಂದಿ ನನ್ನ ಲೋಕದಲ್ಲಿ ಪೂಜೆಯನ್ನು ಹೊಂದುವನು.

೫೦. ಆಸ್ತಿಕ್ಯಬುದ್ಧಿ, ಉತ್ಕಟವಾದ ಇಚ್ಛೆ, ಸಂಸ್ಕಾರ, ಭಕ್ತಿ, ದ್ರವ್ಯಾನುಕೂಲತೆ, ಸಂಭ್ರಮ ಇವುಗಳು ಪೂಜೆಗೆ ಮುಖ್ಯವಾದವುಗಳು. ಪೂಜೆಯ ವಿಷಯದಲ್ಲಿ ಶ್ರದ್ಧೆಯೂ, ಭಕ್ತಿಯೂ, ಆದರವೂ ಹೆಚ್ಚಿದರೆ ಫಲವೂ ಹೆಚ್ಚುವುದು. ಕಡಿಮೆಯಾದಲ್ಲಿ ಫಲವು ಕಡಿಮೆಯಾಗುವುದು.

೫೧. ತನ್ನ ಗುರುವು, ತನ್ನ ತಂದೆಯು ಹೇಳಿದರೆಂಬುದಾಗಿ, ಮಂತ್ರ, ಕಾಲ ಇವುಗಳಿಗೆ ವಿರುದ್ಧವಾದ ರೀತಿಯಿಂದ ಯಾವಾಗಲೂ ನೈವೇದ್ಯವನ್ನು ಸಮರ್ಪಿಸಬಾರದು.

೫೨. ಚಿನ್ನ, ಬೆಳ್ಳಿ, ತಾಮ್ರ, ಕಲ್ಲು ಇವುಗಳಿಂದ ನಿರ್ಮಿತವಾದ ಪಾತ್ರೆಯಲ್ಲಾಗಲಿ, ತಾವರೆಯ ಎಲೆಯಲ್ಲಾಗಲಿ, ನನ್ನ ಪ್ರೀತಿಪಾತ್ರಳಾದ ದೇವಿಗೆ ನೈವೇದ್ಯವನ್ನು ಒಪ್ಪಿಸಬೇಕು.

೫೩. ಲೋಹಪಾತ್ರೆಗಳಲ್ಲಿ, ಚಿನ್ನ ಅಥವಾ ತಾಮ್ರದ ಪಾತ್ರೆಯೇ ಶ್ರೇಷ್ಠವು. ಇಂತಹ ಪಾತ್ರೆಯನ್ನು ಪ್ರಾಶನೆಪಾತ್ರೆಗಾಗಲಿ, ಅರ್ಘ್ಯಪಾತ್ರೆಗಾಗಲಿ ತೆಗೆದುಕೊಳ್ಳಬೇಕು.

ಯಜ್ಞದಾರುಮಯಂ ವಾಪಿ ಪಾತ್ರಂ ಮಧ್ಯಮಮಿಷ್ಯತೆ ।
ಸರ್ವಾಲಾಭೇ ತು ಮಾಹೇಯಂ ಸ್ವಹಸ್ತಘಟಿತಂ ಯದಿ ॥ ೫೪ ॥

ಏತದ್ವಾಂ ಕಥಿತಂ ಪುತ್ರೌ ನೈವೇದ್ಯಂ ವೈಷ್ಣವೀಪ್ರಿಯಂ ।
ಕಾಮಾಖ್ಯಾಯಾಸ್ತಥಾ ದೇವ್ಯಾಸ್ತ್ರಿಪುರಾಯಾ ವಿಶೇಷತಃ ।
ಪ್ರದಕ್ಷಿಣನಮಸ್ಕಾರೌ ಸಾಂಪ್ರತಂ ಶೃಣುತಂ ಯುವಾಂ ॥ ೫೫ ॥

॥ ಇತಿ ಶ್ರೀ ಕಾಲಿಕಾಪುರಾಣೇ ಚತುಸ್ಸಪ್ತತಿತಮೋಧ್ಯಾಯಃ ॥

---

೫೪. ಯಜ್ಞಮರದ ಸಾಮಾನುಗಳು ದೇವಿಯ ಪೂಜೆಯಲ್ಲಿ ಮಧ್ಯಮ ವೆನಿಸಿಕೊಳ್ಳುವುದು. ಯಾವುದೂ ಸಿಕ್ಕದಿದ್ದರೆ, ತನ್ನ ಕೈಯಿಂದ ಮಾಡಿದ ಮಣ್ಣಿನ ಪಾತ್ರೆಯು ಉತ್ತಮವಾದದ್ದು.

೫೫. ಎಲೈ ಪುತ್ರರೇ, ವೈಷ್ಣವೀದೇವಿಗೂ, ವಿಶೇಷವಾಗಿ ಕಾಮಾಖ್ಯಾ ತ್ರಿಪುರಾದೇವಿಯರಿಗೂ ಪ್ರೀತಿಕರವಾದ ನೈವೇದ್ಯಕ್ರಮವು ವಿವರಿಸಲ್ಪಟ್ಟಿತು. ಇನ್ನು ಮುಂದೆ ಪ್ರದಕ್ಷಿಣನಮಸ್ಕಾರಕ್ರಮವನ್ನು ಹೇಳುವೆನು, ಕೇಳಿ.

ಇಲ್ಲಿಗೆ ಕಾಲಿಕಾಪುರಾಣದಲ್ಲಿ ಎಪ್ಪತ್ತನಾಲ್ಕನೆಯ
ಅಧ್ಯಾಯವು ಮುಗಿದುದು,

॥ ಶ್ರೀ ॥

ಅಥ

ಶ್ರೀ ಕಾಲಿಕಾಪುರಾಣೇ ಪಂಚಸಪ್ತತಿತಮೋಧ್ಯಾಯಃ

॥ ಶ್ರೀ ಭಗವಾನುವಾಚ ॥

ಪ್ರಸಾರ್ಯ ದಕ್ಷಿಣಂ ಹಸ್ತಂ ಸ್ವಯಂ ನಮ್ರಶಿರಾಃ ಪುನಃ ।
ದರ್ಶಯೇ ದಕ್ಷಿಣಂ ಪಾರ್ಶ್ವಂ ಮನಸಾಪಿ ಚ ದಕ್ಷಿಣಃ ॥ ೧ ॥

ಸಕೃತ್ತ್ರಿರ್ವಾ ವೇಷ್ಟಯೇಯುರ್ದೇವ್ಯಾಃ ಪ್ರೀತಿಃ ಪ್ರಜಾಯತೇ ।
ಸ ಚ ಪ್ರದಕ್ಷಿಣೋ ಜ್ಞೇಯಃ ಸರ್ವದೇವೌಘತುಷ್ಟಿದಃ ॥ ೨ ॥

ಅಷ್ಟೋತ್ತರಶತಂ ಯಸ್ತು ದೇವ್ಯಾಃ ಕುರ್ಯಾತ್ಪ್ರದಕ್ಷಿಣಂ ।
ಸ ಸರ್ವಕಾಮಮಾಸಾದ್ಯ ಪಶ್ಚಾನ್ಮೋಕ್ಷಮವಾಪ್ನುಯಾತ್ ॥ ೩ ॥

ಮನಸಾಪಿ ಚ ಯೋ ದದ್ಯಾದ್ದೇವ್ಯೈ ಭಕ್ತ್ಯಾ ಪ್ರದಕ್ಷಿಣಂ ।
ಪ್ರದಕ್ಷಿಣಾದ್ಯಮಗೃಹೇ ನರಕಾಣಿ ನ ಪಶ್ಯತಿ ॥ ೪ ॥

ಎಪ್ಪತ್ತೈದನೆಯ ಅಧ್ಯಾಯವು.

೧-೨. ಪರಮೇಶ್ವರನು ಹೇಳಿದನು:–ಶುದ್ಧವಾದ ಮನಸ್ಸಿನಿಂದ ದೇವಿಯನ್ನು ಧ್ಯಾನಿಸುತ್ತಾ ಬಲಗಡೆಯ ಕೈಯನ್ನು ನೀಡಿ, ತನ್ನ ತಲೆಯನ್ನು ಬಗ್ಗಿಸಿಕೊಂಡು, ಬಲಗಡೆಯೆ ಪಕ್ಕಕ್ಕೆ ತಿರುಗಿಕೊಂಡು ಒಂದುಸಾರಿಯಾಗಲಿ, ಅಥವಾ ಮೂರುಸಾರಿಯೇ ಆಗಲಿ ಸುತ್ತಿದರೆ ಅದು ಪ್ರದಕ್ಷಿಣೆಯೆನಿಸುವುದು. ಹೀಗೆ ಮಾಡಿದ ಪ್ರದಕ್ಷಿಣೆಯಿಂದ ದೇವಿಯು ಸಂತೋಷವನ್ನು ಹೊಂದುವಳು. ಈ ಪ್ರದಕ್ಷಿಣಕ್ರಮವು ಸರ್ವದೇವತೆಗಳಿಗೂ ಸಂತೋಷವನ್ನುಂಟುಮಾಡುವುದು.

೩. ಯಾವನು ದೇವಿಗೆ ನೂರೆಂಟು ಪ್ರದಕ್ಷಿಣೆಯನ್ನು ಮಾಡುವನೋ ಅವನು ಎಲ್ಲಾ ವಿಧವಾದ ಇಷ್ಟವನ್ನೂ ಹೊಂದಿ ಅನಂತರ ಮೋಕ್ಷವನ್ನು ಪಡೆಯುವನು.

೪. ಯಾವನು ಭಕ್ತಿಯಿಂದ ಕೂಡಿದ ಶುದ್ಧವಾದ ಮನಸ್ಸಿನಿಂದ ದೇವಿಗೆ ಪ್ರದಕ್ಷಿಣೆಯನ್ನು ಮಾಡುವನೋ ಆವನಿಗೆ ಯಮನ ಮನೆಯಲ್ಲಿ ನರಕದರ್ಶನವೆಂಬುದೇ ಇಲ್ಲ.

ಕಾಯಿಕೋ ವಾಗ್ಭವಶ್ಚೈವ ಮಾನಸಸ್ತ್ರಿವಿಧಃ ಸ್ಮೃತಃ ।
ನಮಸ್ಕಾರಃ ಶ್ರುತಸ್ತಜ್ಞೈರುತ್ತಮಾಧಮಮಧ್ಯಮಃ ॥ ೫ ॥

ಪ್ರಸಾರ್ಯ ಪಾದೌ ಪಸ್ತೌ ಚ ಪತಿತ್ವಾ ದಂಡವತ್ ಕ್ಷಿತೌ ।
ಜಾನುಭ್ಯಾಮವನಿಂ ಗತ್ವಾ ಶಿರಸಾ ಸ್ಪೃಶ್ಯ ಮೇದಿನೀಂ ॥ ೬ ॥

ಕ್ರಿಯತೇ ಯೋ ನಮಸ್ಕಾರಃ ಉತ್ತಮಃ ಕಾಯಿಕಃ ಸ್ಮೃತಃ ।
ಜಾನುಭ್ಯಾಂ ಸಕ್ಷಿತಿಂ ಸ್ಪೃಷ್ಟ್ವಾ ಶಿರಸಾ ಸ್ಪೃಶ್ಯ ಮೇದಿನೀಂ ॥ ೭ ॥

ಕ್ರೀಯತೇ ಯೋ ನಮಸ್ಕಾರೋ ಮಧ್ಯಮಃ ಕಾಯಿಕಃ ಸ್ಮೃತಃ ।
ಪುಟೀಕೃತ್ಯ ಕರೌ ಶೀರ್ಷೇ ದೀಯತೇ ಯದ್ಯಥಾ ತಥಾ ॥ ೮ ॥

ಅಸ್ಪೃಷ್ಟ್ವಾ ಜಾನುಶೀರ್ಷಾಭ್ಯಾಂ ಕ್ಷಿತಿಂ ಸೋಽಧಮ ಉಚ್ಯತೆ ।
ಯಾ ಸ್ವಯಂ ಗದ್ಯಪಾದ್ಯಾಭ್ಯಾಂ ಘಟಿತಾಭ್ಯಾಂ ನಮಸ್ಕೃತಿಃ ॥ ೯ ॥

---

೫. ನಮಸ್ಕಾರಕ್ರಮವನ್ನು ಬಲ್ಲವರು ನಮಸ್ಕಾರವನ್ನು ಉತ್ತಮ, ಮಧ್ಯಮ, ಅಧಮ ಎಂದು ಮೂರುವಿಧವಾಗಿ ವಿಂಗಡಿಸಿರುವರು. ನಮಸ್ಕಾರವು ಕಾಯಿಕ, ವಾಗ್ಭವ, ಮಾನಸ ವೆಂದು ಮೂರುವಿಧವಾಗಿ ತಿಳಿಯಲ್ಪಟ್ಟಿರುವುದು.

೬-೮. ಎರಡು ಕಾಲುಗಳನ್ನೂ, ಎರಡು ಕೈಗಳನ್ನೂ ನೀಡಿ ಭೂಮಿಯಲ್ಲಿ ದಂಡಾಕಾರವಾಗಿ ಬಿದ್ದು, ಮಂಡಿಯು ಎರಡೂ ಭೂಮಿಯನ್ನು ಮುಟ್ಟುವಂತೆಯೂ, ಮತ್ತು ತಲೆಯು ಭೂಮಿಯನ್ನು ಮುಟ್ಟುವಂತೆಯೂ ನಮಸ್ಕಾರ ಮಾಡುವುದು ಉತ್ತಮವಾದ ನಮಸ್ಕಾರವೆನಿಸುವುದು. ಇದು "ಕಾಯಿಕ" ನಮಸ್ಕಾರವು. ಎರಡು ಮಂಡಿಗಳೂ, ಮತ್ತು ತಲೆಯೂ ಭೂಮಿಯನ್ನು ಮುಟ್ಟುವಂತೆ ಮಾಡುವ ನಮಸ್ಕಾರವು ಕಾಯಿಕ ನಮಸ್ಕಾರದಲ್ಲಿ ಮಧ್ಯಮವೆನಿಸುವುದು. ಎರಡು ಕೈಗಳನ್ನೂ ತಲೆಯಮೇಲೆ ಸಂಪುಟವಾಗಿ ಇರಿಸಿಕೊಂಡು ತನಗೆ ಹೇಗೆ ತೋರುವುದೋ ಹಾಗೆ ತನ್ನ ಮಂಡಿಯೂ, ತಲೆಯೂ ಭೂಮಿಯನ್ನು ಸ್ಪರ್ಶಮಾಡದಂತೆ ಮಾಡುವ ನಮಸ್ಕಾರವು ಕಾಯಿಕ ನಮಸ್ಕಾರದಲ್ಲಿ ಅಧಮವೆನಿಸುವುದು.

೯-೧೧. ನಮಸ್ಕಾರವನ್ನು ಮಾಡುವಾಗ ತಾನಾಗಿಯೇ ರಚಿಸಿದ ದೇವತಾ ಸ್ತುತಿರೂಪವಾದ ಗದ್ಯಪದ್ಯಗಳನ್ನು ಹೇಳಿಕೊಂಡು ಭಕ್ತಿಯಿಂದ ನಮಸ್ಕಾರವನ್ನು

ಕ್ರೀಯತೇ ಭಕ್ತಿಯುಕ್ತೇನ ವಾಚಿಕೇಸ್ತೋತ್ತಮಸ್ತು ಸಃ ।
ಪೌರಾಣೈಕೈರ್ವೈದಿಕೈರ್ವಾ ಮಂತ್ರೈರ್ವಾ ಕ್ರೀಯತೇ ನತಿಃ ॥ ೧೦ ॥

ಸ ಮಧ್ಯಮೋ ನಮಸ್ಕಾರೋ ಭವೇದ್ವಾಚನಿಕಃ ಸದಾ ।
ಯತ್ತು ಮಾನುಷವಾಕ್ಯೇನ ನಮನಂ ಕ್ರಿಯತೇ ಸದಾ ।
ಸ ವಾಚಿಕೋ ಽಧಮೋ ಜ್ಞೇಯೋ ನಮಸ್ಕಾರೇಷು ಪುತ್ರಕೌ ॥ ೧೧ ॥

ಇಷ್ಟಮಧ್ಯಾನಿಷ್ಟಗತೈಃ ಮನೋಭಿಸ್ತ್ರಿವಿಧಂ ಪುನಃ ।
ನಮನಂ ಮಾನಸಂ ಪ್ರೋಕ್ತಂ ಉತ್ತಮಾಧಮಮಧ್ಯಮಂ । ॥ ೧೨ ॥

ತ್ರಿವಿಧೇ ಚ ನಮಸ್ಕಾರೇ ಕಾಯಿಕಶ್ಚೋತ್ತಮಃ ಸ್ಮೃತಃ ।
ಕಾಯಿಕೈಸ್ತು ನಮಸ್ಕಾರೈರ್ದೇವಾಸ್ತುಷ್ಯಂತಿ ನಿತ್ಯಶಃ ॥ ೧೩ ॥

ಅಯಮೇವ ನಮಸ್ಕಾರೋ ದಂಡಾದಿಪ್ರತಿನಾಮಭಿಃ ।
ಪ್ರಣಾಮ ಇತಿ ವಿಜ್ಞೇಯಃ ಸ ಪೂರ್ವಂ ಪ್ರತಿಪಾದಿತಃ ॥ ೧೪ ॥

ಮಾಡುವುದು, ವಾಚಿಕನಮಸ್ಕಾರದಲ್ಲಿ ಉತ್ತಮವೆನಿಸುವುದು. ಪುರಾಣದಲ್ಲಿನ ಶ್ಲೋಕಗಳನ್ನು ಮತ್ತು ವೇದ ಮಂತ್ರಗಳನ್ನೂ ಹೇಳಿಕೊಂಡು ಮಾಡತಕ್ಕ ನಮಸ್ಕಾರವು ವಾಚಿಕನಮಸ್ಕಾರದಲ್ಲಿ ಮಧ್ಯಮವೆನಿಸುವುದು. ಮನುಷ್ಯರು ದಿನಂಪ್ರತಿಯಲ್ಲಿಯೂ ಅವರವರು ಮಾತನಾಡುವುದಕ್ಕೆ ಉಪಯೋಗಿಸುವ ಭಾಷೆಯವಾಕ್ಯಗಳಿಂದ ಸ್ತೋತ್ರಮಾಡಿ ಮಾಡುವನಮಸ್ಕಾರವು ವಾಚಿಕನಮಸ್ಕಾರದಲ್ಲಿ ಅಧಮವೆನಿಸುವುದು.

೧೨. ಭಕ್ತಿಯಿಂದಕೂಡಿ ಇಷ್ಟವಾದ ಮನಸ್ಸಿನಿಂದ ಮಾಡುವ ನಮಸ್ಕಾರವು ಇಷ್ಟವಿಲ್ಲದೆ, ದ್ವೇಷ ಬುದ್ಧಿಯಿಲ್ಲದೆ, ಉದಾಸೀನ ಭಾವದಿಂದ ಮಾಡುವ ನಮಸ್ಕಾರವು ಮಾನಸಿಕ ನಮಸ್ಕಾರದಲ್ಲಿ ಮಧ್ಯಮವೆನಿಸುವುದು. ಮನೋಭಿಪ್ರಾಯವಿಲ್ಲದೆ ಬಲವಂತಕ್ಕಾಗಿ ಮಾಡುವನಮಸ್ಕಾರವು ಮಾನಸಿಕನಮಸ್ಕಾರದಲ್ಲಿ ಅಧಮವೆನಿಸುವುದು.

೧೩. ಈಗ ಹೇಳಿದ ಮೂರುವಿಧವಾದ ನಮಸ್ಕಾರಗಳಲ್ಲಿ ಕಾಯಿಕವೆಂಬುದು ಉತ್ತಮವೆನಿಸಿಕೊಳ್ಳುವುದು. ದೇವತೆಗಳು ಪ್ರತಿನಿತ್ಯವೂ ಕಾಯಿಕನಮಸ್ಕಾರಗಳಿಂದ ಸಂತೋಷವನ್ನು ಹೊಂದುವರು.

೧೪. ಈ ನಮಸ್ಕಾರವೇ ದಂಡಪ್ರಣಾಮ ಎಂಬ ಬೇರೆಯಹೆಸರಿನಿಂದ ಹೇಳಲ್ಪಟ್ಟಿರುವುದು. ಅದೆಲ್ಲವನ್ನೂ ನಾನು ಮೊದಲೇ ಹೇಳಿರುವೆನು.

ಮನಸಾಪಿ ಚ ಯೋ ದದ್ಯಾದ್ದೇವ್ಯೈ ಭಕ್ತ್ಯಾ ಪ್ರದಕ್ಷಿಣಂ ।
ಸ ದಕ್ಷಿಣೇ ಯಮುಗೃಹೇ ನರಕಾಣಿ ನ ಪಶ್ಯತಿ ॥ ೧೫ ॥

ದೇವಮಾನುಷಗಂಧರ್ವಾ ಯಕ್ಷರಾಕ್ಷಸಪನ್ನಗಾಃ ।
ನಮುಸ್ಕಾರೇಣ ತುಷ್ಯಂತಿ ಮಹಾತ್ಮಾನಃ ಸಮಂತತಃ ॥ ೧೬ ॥

ನಮುಸ್ಕಾರೇಣ ಲಭತೇ ಚತುರ್ವರ್ಗಂ ಮಹಾಮತಿಃ ।
ಸರ್ವತ್ರ ಸರ್ವಸಿದ್ಧ್ಯರ್ಥಂ ನತಿರೇವ ಪ್ರಶಸ್ಯತೇ ॥ ೧೭ ॥

ನತ್ಯಾ ವಿಜಯತೇ ಲೋಕಾ ನತ್ಯಾಯುರಪಿ ವರ್ಧತೇ ।
ನಮುಸ್ಕಾರೇಣ ದೀರ್ಘಾಯುರಚ್ಛಿನ್ನಾ ಲಭತೇ ಪ್ರಜಾಃ ॥ ೧೮ ॥

ನಮುಸ್ಕುರು ಮಹಾದೇವ್ಯೈ ಪ್ರದಕ್ಷಿಣಮಥೋ ಕುರು ।
ನೈವೇದ್ಯಂ ದೇಹಿ ನಿತರಾಮಿತಿ ಯೋ ಭಾಷತೇ ಮುಹುಃ ॥ ೧೯ ॥

---

೧೫. ಯಾವನು ಮನಸ್ಸಿನಿಂದಲೇ ಭಕ್ತಿಯಿಂದ ದೇವಿಗೆ ನಮಸ್ಕಾರವನ್ನು ಮಾಡುವನೋ ಅವನು ದಕ್ಷಿಣದಿಕ್ಕಿನಲ್ಲಿರುವ ಯಮಲೋಕದಲ್ಲಿ ನರಕ ದರ್ಶನ ಮಾಡುವುದಿಲ್ಲ.

೧೬. ಮಹಾತ್ಮರಾದ ದೇವತೆಗಳೂ, ಮನುಷ್ಯರೂ, ಗಂಧರ್ವರೂ, ಯಕ್ಷರೂ, ರಾಕ್ಷಸರೂ, ಕಿನ್ನರರೂ, ಸಹ ಎಲ್ಲಾ ಕಡೆಯಲ್ಲಿಯೂ, ನಮಸ್ಕಾರಗಳಿಂದಲೇ ಸಂತೋಷವನ್ನು ಹೊಂದುವರು.

೧೭. ಬಹಳ ಬುದ್ಧಿಶಾಲಿಯಾದವನು ನಮಸ್ಕಾರದಿಂದಲೇ ಚತುರ್ವರ್ಗ ಪುರುಷಾರ್ಥವನ್ನೂ ಹೊಂದುವನು. ಎಲ್ಲಾ ಕಡೆಯಲ್ಲಿಯೂ, ಎಲ್ಲಾ ಕಾರ್ಯವನ್ನು ಸಾಧಿಸುವುದಕ್ಕೆ ನಮಸ್ಕಾರವೇ ಉತ್ತಮವಾದ ಉಪಾಯವಾಗಿರುವುದು.

೧೮. ನಮಸ್ಕಾರಗಳಿಂದಲೇ ಲೋಕಗಳನ್ನು ಜಯಿಸಬಹುದು. ನಮಸ್ಕಾರದಿಂದ ಆಯುಸ್ಸು ಹೆಚ್ಚುವುದು. ನಮಸ್ಕಾರಗಳಿಂದ ಆಯುಷ್ಯವಂತರಾಗಿರುವ ಮಕ್ಕಳನ್ನೂ ಪಡೆಯಬಹುದು.

೧೯. ಮಹಾದೇವಿಗಾಗಿ ನಮಸ್ಕಾರವನ್ನು ಮಾಡು, ಪ್ರದಕ್ಷಿಣೆಯನ್ನು ಮಾಡು, ಹೆಚ್ಚಾಗಿ ನೈವೇದ್ಯವನ್ನು ಅರ್ಪಿಸು ಎಂದು ಯಾವಾಗಲೂ ಯಾವನು ಹೇಳುವನೋ ಅವನು ತನ್ನ ಇಷ್ಟಾರ್ಥಗಳಿಲ್ಲವನ್ನೂ ಹೊಂದಿ ನನ್ನ ಲೋಕದಲ್ಲಿ ಪೂಜಿಸಲ್ಪಡುವನು.

ಸೋಽಪಿ ಕಾಮಾನವಾಪ್ನೋಇಹ ಮಮ ಲೋಕೇ ಮಹೀಯತೇ ।
ವಿದಧಾತಿ ಚ ನೈವೇದ್ಯಂ ಮಹಾದೇವ್ಯೈ ಸುಭಕ್ತಿಮಾನ್ ॥ ೨೦ ॥

ದಾತುಂ ಪ್ರತಿ ನರಃ ಸೋಽಪಿ ದೇವೀಲೋಕಮವಾಪ್ನುಯಾತ್ ।
ಇತಿ ವಾಂ ಕಥಿತಾಃ ಸಮ್ಯಗುಪಚಾರಾಸ್ತು ಷೋಡಶ
ಕಮನ್ಯದ್ರುಚಿತಂ ವಾಂ ತತ್ಕಥಯಿಷ್ಯಾಮಿ ಪೃಚ್ಛತೋಃ । ॥ ೨೧ ॥

॥ ಇತಿ ಶ್ರೀ ಕಾಲಿಕಾಪುರಾಣೇ ಪಂಚಸಪ್ತತಿತಮೋಽಧ್ಯಾಯಃ ॥

---

೨೦. ಯಾವನು ದೇವಿಗೆ ಅರ್ಪಿಸುವ ನೈವೇದ್ಯವನ್ನು ಭಕ್ತಿಯಿಂದ ಸಿದ್ಧಪಡಿಸುವನೋ ಅವನು ದೇವಿಯಲೋಕವನ್ನು ಹೊಂದುವನು.

೨೧. ಎಲೈ ಪುತ್ರರೇ, ಈರೀತಿಯಾಗಿ ಷೋಡಶೋಪಚಾರವಿಧಾನಗಳನ್ನು ವಿಸ್ತಾರವಾಗಿ ವಿವರಿಸಿ ನಿಮಗೆ ಹೇಳಿರುವೆನು. ನೀವು ಮತ್ತೇನನ್ನು ಕೇಳಬೇಕೆಂದಿರುವಿರೋ ಅದನ್ನು ನಿಮಗೆ ಹೇಳುವೆನು.

ಇಲ್ಲಿಗೆ ಶ್ರೀ ಕಾಲಿಕಾಪುರಾಣದಲ್ಲಿ ಎಪ್ಪತ್ತೈದನೆಯ
ಅಧ್ಯಾಯವು ಮುಗಿದುದು.